ಇತಿಹಾಸ ದರ್ಪಣ

ಸಂಪುಟ ೫/೧೯೯೦

KARNATAKA ITIHASA ACADEMY

कर्नाटक इतिहास अकादमि

ಕರ್ನಾಟಕ ಇತಿಹಾಸ ಅಕಾದೆಮಿ (ರಿ) ಬೆಂಗಳೂರು

ಇತಿಹಾಸ ದರ್ಶನ

ಸಂಪುಟ ೫/೧೯೯೦

೧೯೮೯ರಲ್ಲಿ ಗದಗಿನಲ್ಲಿ ಸಮಾವೇಶಗೊಂಡ ಅಕಾದೆಮಿಯ
ತೃತೀಯ ವಾರ್ಷಿಕ ಸಮ್ಮೇಳನದಲ್ಲಿ ಸಾದರಪಡಿಸಿದ ಪ್ರಬಂಧಗಳ ಸಂಪುಟ

ಸಂಪಾದಕರು
ಡಾ॥ ಸೂರ್ಯನಾಥ ಕಾಮತ್
ಲಕ್ಷ್ಮಣ್ ತೆಲಗಾವಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ) ಬೆಂಗಳೂರು

ITIHASA DARSHANA
Proceedings of the Third Annual
Conference of the Karnataka Itihasa
Academy (Regd.) held at Gadag
on 10th & 11th June 1989

Volume 5, 1990

Edited by Dr. Suryanath Kamath
& Laxman Telagavi

Published by Karnataka Itihasa Academy (Regd.)
'Ranganatha Nilaya', No. 13 (Old No. 4)
15th Cross, New Temple Road
Malleshwaram, Bangalore 560 003

ರೂ. ೭೫-೦೦

ಲಕ್ಷ್ಮೀ ಮುದ್ರಣಾಲಯ
ಸಂಖ್ಯೆ ೧೬೬, ೪ನೇ ಮುಖ್ಯರಸ್ತೆ, ೭ನೇ ತಿರುವು
ಚಾಮರಾಜಪೇಟೆ, ಬೆಂಗಳೂರು ೫೬೦ ೦೧೮
ದೂರವಾಣಿ : ೬೨೬೬೪೫

ಸಂಪಾದಕೀಯ


ಕರ್ನಾಟಕ ಇತಿಹಾಸ ಅಕಾದೆಮಿಯು ಆರು ವರ್ಷಗಳ ಹಿಂದೆ ಸ್ಥಾಪನೆಯಾದ ಸಂಸ್ಥೆಯಾದರೂ ಸಾರ್ಥಕ ಸೇವೆಯನ್ನು ಸಲ್ಲಿಸುತ್ತಿದೆಯೆಂಬ ಬಗ್ಗೆ ವಿವಾದವಿರಲಾರದು. ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಅಕಾದೆಮಿಗೆ ಸದಸ್ಯರಿದ್ದಾರೆ. ಅದು ತನ್ನ ಐದನೆಯ ವಾರ್ಷಿಕ ಸಮ್ಮೇಳನವನ್ನು ನಡೆಸುತ್ತಿದೆ. ಇತಿಹಾಸ, ಸಂಸ್ಕೃತಿಗಳ ಹಿರಿಯ ಕಿರಿಯ ನೂರಕ್ಕೂ ಮೇಲ್ಪಟ್ಟು ವಿದ್ವಾಂಸರು ಈ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಿ ಈ ನಾಡಿನ ಇತಿಹಾಸಕ್ಕೆ ಸಂಬಂಧಿಸಿ ತಮ್ಮ ಆಸ್ಥೆಯನ್ನು ಪ್ರದರ್ಶಿಸಿದ್ದಾರೆ. ನಾಡ ಬಗೆಗಿನ ಜ್ಞಾನರಾಶಿಗೆ ತಮ್ಮದೇ ಕೊಡುಗೆ ನೀಡಿದ್ದಾರೆ. ಅಕಾದೆಮಿಯ ಸದಸ್ಯಬಲ ೪೦೦ನ್ನೂ ದಾಟಿದೆ. ಜೊತೆಗೆ ಅಕಾದೆಮಿ ನಾಲ್ಕು ವರ್ಷಗಳಿಂದ ನಡೆಸಿಕೊಂಡು ಬಂದ ಕರ್ನಾಟಕ ಇತಿಹಾಸ ಪ್ರಶಸ್ತಿ ಪರೀಕ್ಷೆ ವ್ಯಾಪಕ ಜನಪ್ರಿಯತೆಯನ್ನು ಪಡೆಯುವುದರ ಜೊತೆ ಹೊಸದಾಗಿ ಆರಂಭಿಸಿದ ಇತಿಹಾಸ ಪರಿಣತಿ ಪರೀಕ್ಷೆಯೂ ಸಾರ್ವಜನಿಕರ ಕುತೂಹಲ ಕೆರಳಿಸಿದೆ. ಹೋದವರ್ಷ ದಾವಣಗೆರೆ ಸಮ್ಮೇಳನದ ಕಾಲದಲ್ಲಿ ಪ್ರಕಟಿಸಿದ್ದ 'ಐತಿಹಾಸಿಕ ಪರಂಪರೆ ಉಳಿಸಿ' ಕಾರ್ಯಕ್ರಮದ ಸಂಬಂಧವಾಗಿ ಆ ಬಗ್ಗೆ ಕೈಗೊಂಡ 'ಇತಿಹಾಸ ಪರಂಪರೆ ಉಳಿಸಿ ದಿನಾಚರಣೆ' ಸುಮಾರು ೧೦೦ ಊರುಗಳಲ್ಲಿ ಆಚರಿಸಲ್ಪಟ್ಟು ಉದ್ದೇಶಿತ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆ ಇಟ್ಟಿದ್ದು ಹೆಮ್ಮೆಯ ವಿಷಯ.

ಕರ್ನಾಟಕ ಇತಿಹಾಸ ಅಧ್ಯಯನ ಒಂದು ಚಳವಳಿಯಾಗಬೇಕು. ನಮ್ಮ ನಾಡಿನ ಇತಿಹಾಸ ಜ್ಞಾನ ಜನರಲ್ಲಿ ವ್ಯಾಪಕವಾಗಬೇಕು. ನಾಡಿನ ಬಗ್ಗೆ ಅಭಿಮಾನ, ಅದರ ಸಂಪತ್ತು, ಸಮೃದ್ಧಿಗಳ ವರ್ಧನೆಗೆ ದುಡಿಯುವ ಹುಮ್ಮಸ್ಸು ನಮ್ಮಲ್ಲಿ ಮೂಡಿಬರಬೇಕು. ನಮ್ಮ ಸಾಮಾಜಿಕ ದೋಷಗಳ, ದೌರ್ಬಲ್ಯಗಳ ಹಿನ್ನೆಲೆ ಅರಿತು ಅವುಗಳ ನಿವಾರಣೆಗೆ ಪ್ರಯತ್ನವಾಗಬೇಕು. ಇತಿಹಾಸವು ನಮಗೆ ಕಲಿಸುವ ಪಾಠಗಳನ್ನು ಜನರಿಗೆ ನಾವು ಮನವರಿಕೆ ಮಾಡಿಕೊಡಬೇಕು. ನಮ್ಮ ಆರ್ಥಿಕ ಸಮಸ್ಯೆಗಳ ಹಿನ್ನೆಲೆಯೂ ನಮಗೆ ತಿಳಿಯುವಂತಾಗಬೇಕು.ಇದಕ್ಕೆ ಐತಿಹಾಸಿಕ ಜ್ಞಾನ ಅವಶ್ಯ, ಅನಿವಾರ್ಯ. ಈ ಜ್ಞಾನದ ಮಂಥನ, ಚಿಂತನಗಳಿಗಾಗಿ ಸಮ್ಮೇಳನಗಳು ನಡೆಯುತ್ತವೆ. ಇಂಥ ಸಮ್ಮೇಳನಗಳಲ್ಲಿ ಒಂದರ–ಗದಗಿನಲ್ಲಿ ನಡೆದ ಮೂರನೆಯ ಸಮ್ಮೇಳನದ–ನಡವಳಿಕೆ, ಎಂದರೆ ಅಲ್ಲಿ ಮಂಡಿಸಿದ್ದ ಪ್ರಬಂಧಗಳ ಗುಚ್ಛ ಈ ಸಂಚಿಕೆ. ಇಂಥ ಆಕರ್ಷಕವಾದ,ವರ್ಣರಂಜಿತ ಗುಚ್ಛವನ್ನು ಸಂತಸದಿಂದ ನಿಮ್ಮ ಕೈಗಿಡುತ್ತಿದ್ದೇವೆ. ಎಂದಿನಂತೆ ಇದನ್ನು ಸುಂದರವಾಗಿ ಮುದ್ರಿಸಿಕೊಟ್ಟ ಲಕ್ಷ್ಮಿ ಮುದ್ರಣಾಲಯದ ಮಾಲಿಕರಾದ ಶ್ರೀ ಅಶೋಕ್ ಕುಮಾರ್ ಹಾಗೂ ಮುದ್ರಣಾಲಯದ ಸಿಬ್ಬಂದಿಗೆ, ಕರಡು ತಿದ್ದಲು ತಮ್ಮ ಸಂಪೂರ್ಣ ಸಹಕಾರ ನೀಡಿದ ಶ್ರೀ ಕೆ. ಎಲ್. ರಾಜಶೇಖರ್ ಹಾಗೂ ಅವರಿಗೆ ನೆರವಾದ ಶ್ರೀ ಎಸ್.ಎ. ಜಗನ್ನಾಥ್ ಮತ್ತು ಶ್ರೀ ಶಿ. ವ್ಹಿ. ಮನ್ನಾಚಾರ್ ಅವರುಗಳಿಗೆ ನಮ್ಮ ಕೃತಜ್ಞತೆಗಳು. ಈ ಸಂಪುಟ ಸಂಪಾದನೆಗೆ ನಮಗೆ ಅವಕಾಶ ಒದಗಿಸಿದ ಅಕಾದೆಮಿಯ ಪದಾಧಿಕಾರಿಗಳಿಗೆ ನಮ್ಮ ವಂದನೆಗಳು.

೧೨.೭.೯೧ — ಸೂರ್ಯನಾಥ ಕಾಮತ್
ಬೆಂಗಳೂರು — ಲಕ್ಷ್ಮಣ್ ತೆಲಗಾವಿ

ಕರ್ನಾಟಕ ಇತಿಹಾಸ ಅಕಾದೆಮಿ (ರಿ)

ಬೆಂಗಳೂರು



ಡಾ॥ ಶ್ರೀನಿವಾಸ ರಿತ್ತಿ ಅವರು

ಕರ್ನಾಟಕ ಇತಿಹಾಸ ಅಕಾದೆಮಿಯ ತೃತೀಯ ವಾರ್ಷಿಕ ಅಧಿವೇಶನದ ಅಧ್ಯಕ್ಷರು

(ಚಿತ್ರ/ಕೆ. ಎಲ್. ರಾಜಶೇಖರ್)

ಪರಿವಿಡಿ

ಕರ್ನಾಟಕ ಇತಿಹಾಸ ಅಕಾದೆಮಿ

ಇತಿಹಾಸ ಪ್ರೇಮಿಗಳಿಗೆ ಕರೆ

'ಐತಿಹಾಸಿಕ ಪರಂಪರೆ ಉಳಿಸಿ'

ಕರ್ನಾಟಕದಲ್ಲಿ 'ಐತಿಹಾಸಿಕ ಪರಂಪರೆ ಉಳಿಸಿ' ಎಂಬ ಜನಜಾಗೃತಿ ಚಳವಳಿ ನಡೆಸಲು ಕರ್ನಾಟಕ ಇತಿಹಾಸ ಅಕಾದೆಮಿ ಯತ್ನಿಸುತ್ತಿದೆ. ಪ್ರಾಚೀನ ಕೋಟೆಗಳು, ಕಟ್ಟಡಗಳು, ದೇವಾಲಯಗಳು, ಮಸೀದಿಗಳು, ಇಗರ್ಜಿ(ಚರ್ಚು)ಗಳು, ಶಾಸನಗಳು, ವೀರಗಲ್ಲು ಮುಂತಾದ ಸ್ಮಾರಕಶಿಲೆಗಳು, ತಾಮ್ರಪಟಗಳು, ತಾಳೆಗರಿಯ ಹೊತ್ತಿಗೆಗಳು, ಐತಿಹಾಸಿಕ ದಾಖಲೆಗಳಾಗಬಲ್ಲ ಕಾಗದಪತ್ರಗಳು, ನಾಣ್ಯಗಳು, ಕಲಾಕೃತಿಗಳು (ಶಿಲ್ಪ, ಕರ–ಕುಶಲ ಕಲೆಯ ವಸ್ತುಗಳು, ವರ್ಣಚಿತ್ರಗಳು), ಆಯುಧಗಳು ಮುಂತಾದ ಪ್ರಾಚೀನ ವಸ್ತುಗಳ ರಕ್ಷಣೆಗಾಗಿ ಪ್ರಚಾರ ಮಾಡುವುದು ಈ ಚಳವಳಿಯ ಉದ್ದೇಶ.

ಚಟುವಟಿಕೆಯ ಸ್ವರೂಪ

- ಪ್ರಾಚೀನ ವಸ್ತು ಮತ್ತು ಕಲಾಕೃತಿಗಳ (ಆ್ಯಂಟಿಕ್ವಿಟೀಸ್) ನೋಂದಾವಣೆಗೆ ಪ್ರೇರಣೆ ನೀಡುವುದು.
- ಪ್ರಾಚೀನ ಶಾಸನ, ಪ್ರತಿಮೆ, ಸ್ಮಾರಕಶಿಲೆಗಳ ರಕ್ಷಣೆಯ ಅವಶ್ಯಕತೆಯ ಬಗೆಗೆ ಅವುಗಳ ಪರಿಸರದ ಜನರಿಗೆ ತಿಳುವಳಿಕೆ ನೀಡುವುದು.
- ಪ್ರಾಚೀನ ಕಟ್ಟಡಗಳ ನಾಶ, ದುರುಪಯೋಗ, ಅವುಗಳ ಪರಿಸರದ ಮೇಲೆ ಒತ್ತುವರಿ ನಡೆಸುವುದರ ವಿರುದ್ಧ ಧ್ವನಿಯೆತ್ತುವುದು (ಪ್ರಚಾರ, ಸರಕಾರಕ್ಕೆ ಬರೆಯುವುದು, ಪತ್ರಿಕೆಗಳಿಗೆ ಬರೆಯುವುದು).
- ಓಲೆಗರಿಗಳ ಅಸ್ತಿತ್ವದ ಬಗೆಗೆ ಅಧಿಕೃತ ಸಂಗ್ರಾಹಕರಿಗೆ (ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾಲಯಗಳ ಸಂಬಂಧಿಸಿದ ಶಾಖೆಗಳು) ಮಾಹಿತಿ ನೀಡುವುದು. ಐತಿಹಾಸಿಕ ಮಹತ್ವದ ಕಾಗದ ಪತ್ರಗಳ ಬಗೆಗೆ ರಾಜ್ಯ ಪತ್ರಾಗಾರಕ್ಕೆ ಮಾಹಿತಿ ನೀಡುವುದು.

ಅಧ್ಯಾಪಕರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು ಈ ಚಟುವಟಿಕೆಯಲ್ಲಿ ವಿಶೇಷವಾಗಿ ಪಾಲುಗೊಳ್ಳಲು ಅಕಾದೆಮಿ ಕರೆ ನೀಡುತ್ತದೆ.



ಶ್ರೀ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳು

ಶ್ರೀ ತೋಂಟದಾರ್ಯ ಮಠ, ಗದಗ

(ಚಿತ್ರ/ಲಕ್ಷ್ಮಣ್ ತೆಲಗಾವಿ)



ಶ್ರೀಮತಿ ಪಾರ್ವತಿಬಾಯಿ ಮಾಳೀಕೊಪ್ಪಮಠ ಅವರಿಂದ ಪ್ರಾರ್ಥನೆ



ಶ್ರೀಗಳವರಿಂದ ಸಮ್ಮೇಳನದ ಉದ್ಘಾಟನೆ




ಸೂರ್ಯನಾಥ ಕಾಮತ್ ಅವರಿಂದ ಅಕಾದೆಮಿಯ ಉದ್ದೇಶ ನಿರೂಪಣೆ




ಶ್ರೀಗಳವರಿಂದ ಡಾ|| ಚಿತ್ತಿ ಅವರಿಗೆ ಸನ್ಮಾನ

(ಚಿತ್ರಗಳು/ಲತೆ)



ಶ್ರೀ ಸದಾಶಿವ ಎಸ್. ಒಡೆಯರ್ ಅವರಿಂದ 'ಇತಿಹಾಸ ದರ್ಶನ' ಮೂರನೇ
ಸಂಪುಟದ ಬಿಡುಗಡೆ
(ಚಿತ್ರಗಳು/ಲತೆ)







ಶ್ರೀಗಳವರಿಂದ ಆಶೀರ್ವಚನ






ಸಮ್ಮೇಳನದಲ್ಲಿ ಭಾಗವಹಿಸಿದವರು

(ಚಿತ್ರಗಳು/ಲತೆ)



ಡಾ|| ಎಂ. ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ನ
'ಗದಗ ಪ್ರದೇಶ : ಸಾಂಸ್ಕೃತಿಕ ಅಧ್ಯಯನ' ವಿಶೇಷ ವಿಚಾರಗೋಷ್ಠಿ





ಶ್ರೀ ಕೆ. ಅಭಿಶಂಕರ್ ಅವರ ಅಧ್ಯಕ್ಷತೆಯಲ್ಲಿ ಅಕಾದೆಮಿಯ ಸರ್ವಸದಸ್ಯರ ಸಭೆ
(ಚಿತ್ರಗಳು/ಅ. ಬಿ. [illegible])

ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು

ಇತಿಹಾಸ ಅಧ್ಯಯನ : ಅಂದು-ಇಂದು*

ಒಬ್ಬ ಘನ ವಿದ್ವಾಂಸನ 'ಹಿಸ್ಟ್ರಿ ಮೇಕ್ಸ್ ಮೆನ್ ವೈಜ್' ಎಂಬ ಸುಭಾಷಿತವು ಪ್ರಸಿದ್ಧ. ಇದು ಒಂದು ಜನಾಂಗದ, ದೇಶದ-ಒಟ್ಟಾರೆ ಮಾನವನ ಏಳಿಗೆಗೆ ಇತಿಹಾಸ ಅಧ್ಯಯನದ ಮಹತ್ವವನ್ನು ಸೂಚಿಸುತ್ತದೆ. ಕೇವಲ ಅವನ ನಿತ್ಯಜೀವನದ ಕ್ರಮ ರೀತಿನೀತಿಗಳನ್ನು ಹೇಳುವುದಲ್ಲದೆ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾಲಕಾಲಕ್ಕೂ ಮಾನವನು ತನ್ನ ಹಿಂದಿನ ಪೀಳಿಗೆಯವರ ಅನುಭವ ಪರಂಪರೆಯ ಹಿನ್ನೆಲೆಯಲ್ಲಿ ಹಾಗೂ ತಾನು ಇರುವ ಪರಿಸರಕ್ಕನುಗುಣವಾಗಿ ಮತ್ತು ಇತರ ಭಿನ್ನ ಭಿನ್ನ ಜನರ ಸಂಪರ್ಕದ ಪ್ರಭಾವದಿಂದ (ಅವನು ಸೇರಿದಂತೆ) ವಾಸ್ತವಿಕ ಜೀವನದ ಸುಧಾರಣೆ ; ಅಗಾಧ ಹಾಗೂ ನಿಗೂಢವಾದ ವಿಶ್ವದ ರಹಸ್ಯವನ್ನು ತತ್ವವನ್ನು ತಿಳಿದುಕೊಳ್ಳುವ ನಾನಾ ಪ್ರಕಾರದ ಪ್ರಯತ್ನಗಳು ; ಇಂಥ ಪ್ರಯತ್ನಗಳಲ್ಲಿ ಅವನ ಸೋಲು–ಗೆಲುವು, ಗುಣ-ದೋಷಗಳು ಮೊದಲಾದ ವಿಷಯಗಳ ಆಧಾರಬದ್ಧವಾದ ಸಮಗ್ರ ಅಧ್ಯಯನದ ನಿರೂಪಣೆಯೆ ಇತಿಹಾಸ. ಈ ರೀತಿಯ ನಿರೂಪಣೆಗೆ ಈಚೀನ ಕಾಲದಲ್ಲಿ ಹಲವಾರು ವೈಜ್ಞಾನಿಕ ವಿಧಾನಗಳನ್ನು, ಸಾಧನೆಗಳನ್ನು ಬಳಸಲಾಗುತ್ತಿದೆ.

ಇಷ್ಟು ವ್ಯಾಪಕವಾದ ಅರ್ಥವಿಲ್ಲದಿದ್ದರೂ ಇತಿಹಾಸದ ಮಹತ್ವವನ್ನು ತಿಳಿದು ತಮ್ಮ ತಮ್ಮ ಪರಂಪರೆಗನುಗುಣವಾಗಿ ಉದ್ದೇಶಗಳನ್ನಿಟ್ಟುಕೊಂಡು ತಮ್ಮ ತಮ್ಮ ದೇಶ/ಪ್ರದೇಶದ ಇತಿಹಾಸವನ್ನು ಹೇಳುವ/ಬರೆದಿಡುವ ಪ್ರಯತ್ನ ಮಾತ್ರ ಬಹಳ ಪ್ರಾಚೀನ ಕಾಲದಿಂದಲೂ ಇದೆ. ಗ್ರೀಕರಲ್ಲಿ ಹೆರೊಡೋಟಸನನ್ನು 'ಇತಿಹಾಸದ ಪಿತಾಮಹ'ನೆಂದು ವಿದ್ವಾಂಸರು ಗುರುತಿಸುತ್ತಾರೆ. ಪ್ರಾಚೀನ ಚೈನಾ ದೇಶದ ಕ್ರಿ. ಪೂ. ೩ನೇ ಶತಮಾನದಿಂದಲೂ ಅದರ ಕಾಲಾನುಕ್ರಮದ ಮುಖ್ಯ ಘಟನೆಗಳ ನಿರೂಪಣೆಯ ಗ್ರಂಥಗಳಿವೆ. ಈಚೀನ ಕಾಲದಲ್ಲಿ ಇತಿಹಾಸಪ್ರಜ್ಞೆಯಿಲ್ಲದ ದೇಶವೆಂದು ದೂಷಿಸಲ್ಪಟ್ಟ ನಮ್ಮ ದೇಶದಲ್ಲೂ ದೊಡ್ಡ ಪ್ರಮಾಣದಲ್ಲಿಯೇ ಇಂಥ ಪ್ರಯತ್ನವು ಹಿಂದಿನ ಕಾಲದಿಂದಲೂ ನಡೆದಿದೆ. ಮಾನವನ ಏಳಿಗೆಗೆ ನಿತ್ಯನೂತನ ಹಾಗೂ ಸತ್ಯವಾದ ಜೀವನಮೌಲ್ಯಗಳು ಯಾವುವು ? ಅವುಗಳನ್ನು ಏಕೆ ಪರಿಪಾಲಿಸಬೇಕು ? ಎಂಬಿವೆ ಮೊದಲಾದ ಮೂಲಭೂತ ವಿಷಯಗಳನ್ನು ಪ್ರತಿಪಾದನೆ ಮಾಡುವುದಕ್ಕೋಸ್ಕರ ಸಮಾಜದಲ್ಲಿ ಆಗಿಹೋದ ವಿವಿಧ ಸತ್ಯಘಟನೆಗಳನ್ನು ಕಾವ್ಯರೂಪದಲ್ಲಿ ಮನಮುಟ್ಟುವಂತೆ ನಿರೂಪಿಸುವ ರಾಮಾಯಣ ಮತ್ತು ಮಹಾಭಾರತವೂ ಕೂಡ ಐತಿಹಾಸಿಕ ಮಹತ್ವವುಳ್ಳದ್ದು. ಪುರಾಣಗಳಂತೂ ಬಹುಮಟ್ಟಿಗೆ ಇತಿಹಾಸವೆಂದು ಹೇಳಲಾಗಿದೆ. ಇವುಗಳಲ್ಲಿ ವಿಶ್ವಸೃಷ್ಟಿಯ ಆದಿಯಿಂದ ಹಿಡಿದು, ಮುಖ್ಯವಾಗಿ ಮನುವಿನಿಂದ ಅದರಲ್ಲೂ ಹೆಚ್ಚು ಸ್ಪಷ್ಟವಾಗಿ ಮಹಾಭಾರತದ ಪಾಂಡವ ಅರ್ಜುನನ ಮೊಮ್ಮಗ ಪರಿಕ್ಷಿತನ ಕಾಲದಿಂದ ಗುಪ್ತರ ಕಾಲದವರೆಗಿನ ಇತಿಹಾಸವು ಇವುಗಳಲ್ಲಿ ಅಡಕವಾಗಿದೆ.

---

* ಆಶೀರ್ವಚನ

ಸರ್ಗಶ್ಚ ಪ್ರತಿಸರ್ಗಸ್ಚ ವಂಶೋ ಮನ್ವಂತ
ರಾಣಿ ಚ
ವಂಶಾನುಚರಿತಂ ಚೇತಿ ಪುರಾಣಂ ಪಂಚ
ಲಕ್ಷಣಂ

ಹಿಂದೆ ಆಗಿಹೋದ ವಿಷಯಗಳನ್ನು ಏಕೆ ನೆನಪಿಡ ಬೇಕು ? ಅದರಿಂದ ನಮಗೇನು ಉಪಯೋಗ ? ಇದಕ್ಕೆ ಉತ್ತರ ರೂಪವಾಗಿ ನಮ್ಮ ಹಿಂದಿನವರು ಹೀಗೆ ಹೇಳಿ ದ್ದಾರೆ:

ಧರ್ಮಾರ್ಥ ಕಾಮ ಮೋಕ್ಷಾಣಾಂ ಉಪದೇಶಂ
ಸಮನ್ವಿತಂ
ಪೂರ್ವವೃತ್ತಂಕಥಾಯುಕ್ತಂ ಇತಿಹಾಸಂ
ಪ್ರಚಕ್ಷತೆ

ಆದ್ದರಿಂದ ನಮ್ಮ ಪ್ರಾಚೀನ ಜನರು ಇತಿಹಾಸದ ಅವಶ್ಯ ಕತೆ ಮತ್ತು ಮಹತ್ವವನ್ನು ಅರಿತಿದ್ದರು. ಇದರ ಉದ್ದೇಶ ಕೇವಲ ಪಂಡಿತರ ಅಧ್ಯಯನದ ವಸ್ತುವಾಗು ವುದಕ್ಕೆ ಅಥವಾ ಮಾನವನ ಕುತೂಹಲವನ್ನು ಉತ್ತರಿಸು ವುದಕ್ಕಲ್ಲ. ಮುಖ್ಯವಾಗಿ ಮನುಷ್ಯನು ಸನ್ಮಾರ್ಗದಲ್ಲಿ ನಡೆಯುವುದಕ್ಕೆ ಬೇಕಾದ ವಿವೇಕವನ್ನು ಪಡೆಯುವುದ ಕ್ಕೋಸ್ಕರ. ಇಷ್ಟೆ ಅಲ್ಲ, ಇತಿಹಾಸವನ್ನು ಬರೆಯ ಬೇಕಾದರೆ ಎಷ್ಟೆಲ್ಲ ಆಕರಗಳನ್ನು ಒಟ್ಟು ಮಾಡಬೇಕಾಗು ತ್ತದೆ, ಅವುಗಳನ್ನು ವಿಮರ್ಶಿಸಬೇಕಾಗುತ್ತದೆ–ಎಂಬು ವದನ್ನು ಕೂಡಾ ಸ್ಪಷ್ಟವಾಗಿ ಅರಿತಿದ್ದರು. ಕಾಶ್ಮೀರದ ಕಲ್ಹಣನು ತನ್ನ ಕೃತಿ 'ರಾಜತರಂಗಿಣಿ' (ಕ್ರಿ.ಶ. ೧೧೭೮) ಯಲ್ಲಿ,

ದೃಷ್ಟಂ ದೃಷ್ಟಂ ನೃಪೋದಂತಂ ಬಧ್ವಾ
ಪ್ರಮಯಮೀಯುಷಾಂ
ಅರ್ವಾಕ್ಕಾಲಭವೈರ್ವಾರ್ತಾ ಯತ್ಪ್ರಬಂಧೇಷು
ಪೂರ್ಯತೆ ॥
ದಾಕ್ಷ್ಯಂ ಕಿಯದಿದಂ ತಸ್ಮಾದಸ್ಮಿನ್ ಭೂತಾ
ರ್ಥವರ್ಣನೆ ।
ಸರ್ವಪ್ರಕಾರಂ ಸ್ಖಲಿತೆ ಯೋಜನಾಯ
ಮಮೋದ್ಯಮಃ ॥

"ಪ್ರಾಚೀನ ವಿದ್ವಾಂಸರು ತಮ್ಮ ಕಾಲದಲ್ಲಿ ಪ್ರತ್ಯೇಕ ಕಂಡು ತಿಳಿದ ರಾಜರ ವಿಷಯಗಳ ಬಗ್ಗೆ ಗ್ರಂಥ ಗಳನ್ನು ಬರೆದ ಕಾಲಜ್ಞಾನಿಗಳು. ಅನಂತರದ ವಿದ್ವಾಂಸರು ಈ ಹಿಂದಿನ ರಾಜರುಗಳ ಬಗ್ಗೆ ಬರೆಯು ವಾಗ ಈ ಗ್ರಂಥಗಳಿಂದ ಸಂಗ್ರಹಿಸುವದಲ್ಲದೆ ಪ್ರಚಲಿತ ದಂತಕಥೆ, ಆಡುಮಾತುಗಳನ್ನು ಸೇರಿಸಿ ಬರೆದರು. ಹಾಗೆ ಮಾಡುವಾಗ, ವಿಚಕ್ಷಣತೆಯನ್ನು ಉಪಯೋಗಿ ಸಿಲ್ಲ, ವಿಮರ್ಶೆಯನ್ನು ಮಾಡಿಲ್ಲ. ಆದ್ದರಿಂದ ಈಗ ನನ್ನ ಗ್ರಂಥರಚನೆಯಲ್ಲಿ ಇಂಥ ತಪ್ಪುಗಳನ್ನೆಲ್ಲ ತೆಗೆದು ಲಭ್ಯವಿರುವ ಹಿಂದಿನ ಮಹತ್ವದ ಪತ್ರಗಳನ್ನು, ದಾನ ಪತ್ರಗಳನ್ನು, ಶಾಸನಗಳನ್ನು ಪರಿಶೀಲಿಸಿ ಇವುಗಳ ಆಧಾರದ ಮೇಲೆ ವಿರೋಧಾಭಾಸಗಳನ್ನು ಬಗೆಹರಿಸಿ ಇತಿಹಾಸವನ್ನು ಬರೆಯುವ ಪ್ರಯತ್ನ ಮಾಡಿದ್ದೇನೆ" ಎಂದು ತನ್ನ ಕ್ರಮ ವಿಧಾನಗಳ ಬಗ್ಗೆ ಹೇಳಿದ್ದಾನೆ.

ಕಲ್ಹಣನು ಹೇಳಿದಂತೆ, ನಮ್ಮ ದೇಶದ ಉದ್ದಗ ಲಕ್ಕೂ ಹಾಗೂ ಸುಮಾರು ೫೦೦೦ ವರ್ಷಗಳ ಉದ್ದಕ್ಕೂ ವಿಪುಲ ಗ್ರಂಥಗಳಲ್ಲದೆ ನಾನಾ ಪ್ರಕಾರದ ಪ್ರಾಚ್ಯವಸ್ತು ಗಳು ಅಂದರೆ ವಿವಿಧ ಶಾಸನಗಳು, ಸ್ಮಾರಕಗಳು, ಮೂರ್ತಿಗಳು, ನೆಲೆಗಳು ಮೊದಲಾದವು ಹೇರಳವಾಗಿವೆ. ಸುಮಾರು ೧೮ನೇ ಶತಮಾನದ ಮಧ್ಯಭಾಗದಿಂದ ಹೆಚ್ಚಾಗಿ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಆಸ್ಥೆ ತಳೆದ ಬ್ರಿಟಿಷ್ ಅಧಿಕಾರಿಗಳು ಹಾಗೂ ಭಾರತೀಯ ವಿದ್ವಾಂಸರು ನಮ್ಮ ದೇಶದ ಪ್ರಾಚೀನ ಸಾಹಿತ್ಯ ಮತ್ತು ಪ್ರಾಚ್ಯವಸ್ತು ಶೋಧನೆ ಮತ್ತು ಅಧ್ಯಯನ ವನ್ನು ನಡೆಸುತ್ತಾ ಬಂದರು. ಸುಮಾರು ೧೯೪೭ ರಿಂದ ಇಂಥ ಶೋಧನೆಗಳು ಮತ್ತು ಅಧ್ಯಯನವು ತೀವ್ರವಾಗಿ ವ್ಯಾಪಕವಾಗುತ್ತಾ ಅನೇಕ ಪಟ್ಟು ಹೆಚ್ಚಾಗಿದೆ. ಅಷ್ಟಾಗಿ ಗಮನಕೊಡದಂಥ ಜನಪದಸಾಹಿತ್ಯ, ಸ್ಥಳನಾಮ, ಸ್ಥಳೀಯ ಪುರಾಣ ಮೊದಲಾದ ಹಲವಾರು ವಿಷಯಗಳ ಲ್ಲಿಯ ಐತಿಹಾಸಿಕ ಅಂಶಗಳನ್ನು ವೈಜ್ಞಾನಿಕ ವಿಧಾನ ಗಳಿಂದ ವಿಮರ್ಶೆ ಮಾಡಿ ಪ್ರಮಾಣಬದ್ಧ, ಪ್ರಾಮಾಣಿಕ, ನಿಷ್ಪಕ್ಷಪಾತ ಸಮಗ್ರ ಇತಿಹಾಸದ ಪುನರ್‌ರಚನೆಯ ಪ್ರಯತ್ನ ನಡೆದಿದೆ. ಇದು ಸಂತೋಷದ ಸಂಗತಿ. ಕೇಂದ್ರ ಹಾಗೂ ಪ್ರತಿಯೊಂದು ಪ್ರಾದೇಶಿಕ ಸರ್ಕಾರಗಳ ಪ್ರಾಚ್ಯವಸ್ತು ಇಲಾಖೆಗಳಲ್ಲದೆ, ಬಹುಮಟ್ಟಿಗೆ ಎಲ್ಲಾ ವಿಶ್ವವಿದ್ಯಾಲಯಗಳೂ ಅನೇಕ ಸಂಶೋಧನಾ ಸಂಸ್ಥೆ ಗಳೂ ಸ್ವತಂತ್ರವಾಗಿ ಅನೇಕ ವಿದ್ವಾಂಸರುಗಳೂ ಈ

ಮಹಾನ್‌ಕಾರ್ಯವನ್ನು ನಡೆಸುತ್ತಿದ್ದಾರೆ. ದಿನೇ ದಿನೇ ಸಂಶೋಧನೆ ಪ್ರಮಾಣ ಹೆಚ್ಚುತ್ತಿದೆ. ಆದರೂ ಇದುವರೆಗಿನ ಶೋಧನೆಗಳಿಂದ ಒಂದು ಸತ್ಯ ಸ್ಪಷ್ಟವಾಗುತ್ತಿದೆ. ಅದೇನೆಂದರೆ, ಈ ಕ್ಷೇತ್ರದಲ್ಲಿ ಇದುವರೆಗೆ ಆಗಿರುವ ಕೆಲಸ ಹಾಗೂ ಇನ್ನು ಮುಂದೆ ಆಗಬೇಕಾದ ಕೆಲಸದ ಪ್ರಮಾಣವು ಪಕ್ಷಿನೋಟದಿಂದಲೂ ಅಜಗಜಾಂತರ. ಈ ದೃಷ್ಟಿಯಿಂದ ನಿಷ್ಠಾವಂತ ಸಂಶೋಧಕರ, ಉತ್ತಮ ಮಟ್ಟದ ಸಂಸ್ಥೆಗಳ ಸಂಖ್ಯೆ ಬಹಳ ಕಡಿಮೆಯೆಂದೇ ಹೇಳಬೇಕು. ಉದಾಹರಣೆಗೆ ನಮ್ಮ ಗದಗ–ಡಂಬಳ–ಮುಳಗುಂದ ಪ್ರದೇಶದಲ್ಲಿ ಅವೆಷ್ಟು ಶಾಸನಗಳು, ವಿವಿಧ ಪ್ರಕಾರದ ವಾಸ್ತುಶಿಲ್ಪ ಶೈಲಿಯ ದೇವಾಲಯಗಳು, ಮೂರ್ತಿಗಳು ಮೊದಲಾದ ಪ್ರಾಚ್ಯವಸ್ತುಗಳು ವಿಪುಲವಾಗಿವೆ. ಇವುಗಳ ಬಗ್ಗೆ ಎಚ್. ಕಸೆನ್ಸ್‌ನ **'ಚಾಲುಕ್ಯನ್ ಆರ್ಕಿಟೆಕ್ಚರ್'** ಎಂಬ ಗ್ರಂಥದಲ್ಲಿ ಈ ಭಾಗದ ಹಲವು ದೇವಾಲಯಗಳ ಒಂದೆರಡು ಚಿತ್ರಗಳು, ಟಿಪ್ಪಣಿಗಳು ಹಾಗೂ ಕೆಲವು ಸಂಶೋಧನಾ ಲೇಖನಗಳು ಮಾತ್ರ ಇವೆ. ಇವೆಲ್ಲವನ್ನು ಸೇರಿಸಿದರೂ ಅದು ತೀರ ಅಲ್ಪ ಪ್ರಮಾಣದ್ದು. ಬೃಹತ್ ಪ್ರಮಾಣದ ಈ ವಿವಿಧ ಪ್ರಾಚ್ಯವಸ್ತುಗಳ ಕೂಲಂಕಷ ಸಮಗ್ರ ಅಧ್ಯಯನವು ಇನ್ನೂ ಆಗಬೇಕಾಗಿದೆ. ಗದಗ ಪ್ರದೇಶದ ಅನತಿ ದೂರದಲ್ಲೇ ರೋಣ–ಸೂಡಿ-ನರೇಗಲ್ಲ ಪ್ರದೇಶದಲ್ಲಿಯೂ ಇಂಥ ಸಾಂಸ್ಕೃತಿಕ ಅವಶೇಷಗಳು ಬಹಳ ಇವೆ ಎಂದು ನಮಗೆ ತಿಳಿದುಬಂದಿದೆ. ಇದರಂತೆಯೇ ಲಕ್ಷ್ಮೇಶ್ವರ–ಕುಕ್ಕನೂರು–ಇಟಗಿ ಪ್ರದೇಶಗಳು. ಹೀಗೆ ಒಂದೇ ಎರಡೇ. ಕರ್ನಾಟಕದಲ್ಲಿ ವಿವಿಧ ಭಾಗಗಳಲ್ಲಿ ಸೇರಿದಂತೆ ಇಂಥ ಸಾಂಸ್ಕೃತಿಕ ಕೇಂದ್ರಗಳು ನೂರಾರು ಇವೆ. ಇವುಗಳ ವ್ಯವಸ್ಥಿತ ಸಮಗ್ರ ಅಧ್ಯಯನ ಆಗಿದೆಯೇ ? ಈಗ ಈ ಪ್ರಶ್ನೆಗೆ ಬಹುಮಟ್ಟಿಗೆ ಉತ್ತರ ಮೌನವೆಂದೇ ತೋರುವದು. ಇವೆಲ್ಲವನ್ನು ಗಮನಿಸಿದಾಗ ಈ ಮಹತ್ ಮತ್ತು ಬೃಹತ್ ಕಾರ್ಯವನ್ನು ಮಾಡಲು ಇನ್ನೂ ಅದೆಷ್ಟು ನಿಷ್ಠಾವಂತ ಉತ್ತಮ ಸಂಶೋಧಕರು ಕಟಿಬದ್ಧರಾಗಬೇಕಾಗಿದೆ ; ಸಂಸ್ಥೆಗಳು ಮುಂದೆ ಬರಬೇಕಾಗಿದೆ.

ಹಿಂದೆ, ಮೌಲ್ಯ ಆಧಾರಿತ ಕೆಲವು ಐತಿಹಾಸಿಕ ವಿಷಯಗಳನ್ನು ನೃತ್ಯ, ನಾಟಕ, ಕಥೆ, ಕಾವ್ಯ ಮೊದಲಾದವುಗಳಿಂದ ತಿಳಿಸಿ ಜನಸಾಮಾನ್ಯರಲ್ಲಿ ತಿಳುವಳಿಕೆ ವಿವೇಕವನ್ನು ಮೂಡಿಸುವ ನಿರಂತರ ಪ್ರಯತ್ನ ನಡೆಯುತ್ತಿತ್ತು. ಈ ಕ್ರಮ ಸಮಾಜದ ಮೇಲೆ ಒಳ್ಳೆಯ ಪರಿಣಾಮವನ್ನು ಬೀರಿತೆಂದೆ ಹೇಳಬಹುದು. ಶಿವಾಜಿ, ಮಹಾತ್ಮಾಗಾಂಧಿ, ವಿಶ್ವೇಶ್ವರಯ್ಯರಂಥವರು ರಾಷ್ಟ್ರದ ಹಲವಾರು ರೀತಿಯ ಏಳಿಗೆಗೆ ಕಾರಣರಾಗುವಂಥ ವ್ಯಕ್ತಿಗಳಾಗುವಂತೆ ಮಾಡಿತು. ಆ ರೀತಿಯ ಇತಿಹಾಸ ನಿರೂಪಣೆ ಅಂದಿನ ಕ್ರಮ.

ಈಗ ಜನಸಾಮಾನ್ಯರು ಕೂಡಾ ಹೆಚ್ಚು ಹೆಚ್ಚು ವಿಚಾರಶೀಲರಾಗುತ್ತಿದ್ದಾರೆ, ಪ್ರಜ್ಞಾವಂತರಾಗುತ್ತಿದ್ದಾರೆ, ಕುತೂಹಲಶಾಲಿಗಳಾಗುತ್ತಿದ್ದಾರೆ. ಆದ್ದರಿಂದ ಇತಿಹಾಸ ನಿರೂಪಣೆಯು ಹೆಚ್ಚು ಹೆಚ್ಚು ವೈಜ್ಞಾನಿಕವಾಗಬೇಕಾಗುತ್ತದೆ. ಇದರಲ್ಲಿ ಮಾನವನೇ ಕೇಂದ್ರಬಿಂದು. ವಿವಿಧ ಕ್ಷೇತ್ರಗಳಲ್ಲಿಯ ಅವನ ಪ್ರಗತಿ ಸಾಧನೆಯಲ್ಲಿ ಕಾರಣಬದ್ಧವಾದ ಸೋಲು-ಗೆಲುವು, ಸಾಧಕ-ಬಾಧಕಗಳು ಇಂದಿನ ಜೀವನಕ್ಕೆ, ಮುಂದಿನ ಪ್ರಗತಿಗೆ ಎಷ್ಟರಮಟ್ಟಿಗೆ ಇವು ಸಮಯೋಚಿತ. ಹೀಗೆ ಹಲವಾರು ರೀತಿಯಿಂದ ನಿಷ್ಪಕ್ಷಪಾತವಾಗಿ ವಿಮರ್ಶಿಸಬೇಕಾಗಿದೆ. ಇಂಥ ಸತ್ಯ, ಅರ್ಥಪೂರ್ಣ ಇತಿಹಾಸ ಜನಸಾಮಾನ್ಯರಿಗೂ ಮುಟ್ಟಬೇಕಾಗಿದೆ.

ಹಾಗೆಯೇ, ನಮ್ಮ ದೇಶದಲ್ಲಿ ಅಭಿಮಾನಶೂನ್ಯರಿಗೇನು ಕಡಿಮೆ ಇಲ್ಲ. ಇತಿಹಾಸದ ಬಗ್ಗೆ ನಿರುತ್ಸಾಹ, ಜಿಗುಪ್ಸೆ, ಐತಿಹಾಸಿಕ ಕಾರಣಗಳಿಂದ ತಪ್ಪು ತಿಳುವಳಿಕೆ ಮೊದಲಾದವು ಗಣನೀಯವಾಗಿ ಇವೆ. ನಮ್ಮ ದೇಶ ಬಲಾಢ್ಯವಾಗಬೇಕಾದರೆ ಇವೆಲ್ಲವನ್ನು ಸರಿಯಾದ ಇತಿಹಾಸದ ಮಾಹಿತಿಯಿಂದ, ಉದಾಹರಣೆಗಳಿಂದ ನಿರ್ಮೂಲ ಮಾಡಿ ಜನರಲ್ಲಿ ಸ್ಫೂರ್ತಿಯನ್ನು, ಅಭಿಮಾನವನ್ನು ಮೂಡಿಸಬೇಕಾಗಿದೆ. ಆದ್ದರಿಂದ ಇಂದು ಒಳ್ಳೆಯ ಸಮಾಜನಿರ್ಮಾಣಕಾರ್ಯದಲ್ಲಿ ಇತಿಹಾಸಕಾರನ ಪಾತ್ರ ದೊಡ್ಡದಿದೆ.

ಈ ಹಿನ್ನೆಲೆಯಲ್ಲಿ ಮೂರು ವರ್ಷಗಳ ಹಿಂದೆ ಇತಿಹಾಸದಲ್ಲಿ ಆಸ್ಥೆವುಳ್ಳ ಜನರು ಹಾಗೂ ಉತ್ತಮ ಸಂಶೋಧಕರು ಸೇರಿ ಈ ಮಹಾತ್ಕಾರ್ಯದಲ್ಲಿ ಭಾಗವಹಿಸಲು ಕರ್ನಾಟಕ ಇತಿಹಾಸ ಅಕಾದೆಮಿ ಎಂಬ ಒಂದು ಸಂಸ್ಥೆಯನ್ನು ಮಾಡಿಕೊಂಡು ಒಳ್ಳೆಯ ರೀತಿಯಲ್ಲಿ

ಕೆಲಸ ಮಾಡುತ್ತಿದ್ದಾರೆ. ಕೇವಲ ವಿಶ್ವವಿದ್ಯಾಲಯ, ಕಾಲೇಜುಗಳಲ್ಲಿ ಬೋಧಿಸುವ ಇತಿಹಾಸ ಶಿಕ್ಷಕರನ್ನು ಮಾತ್ರವಲ್ಲದೆ, ಇತಿಹಾಸದಲ್ಲಿ ಆಸಕ್ತಿವುಳ್ಳ ಯಾವದೇ ವ್ಯಕ್ತಿಯು ಕೂಡಾ ಈ ಸಂಸ್ಥೆಯ ಕಾರ್ಯಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಇರುವುದು ನಿಜವಾಗಿಯೂ ಪ್ರಶಂಸನೀಯ. ಕೇವಲ ವಾರ್ಷಿಕ ಸಮ್ಮೇಳನದ ಚಟುವಟಿಕೆಗೆ ಸೀಮಿತವಾಗಿರದೆ, ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಹೆಚ್ಚು ಪರಿಚಯ ಇಲ್ಲದ ಇತಿಹಾಸದ ವಿಷಯಗಳ ಮೇಲೆ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು, ಕರ್ನಾಟಕ ಇತಿಹಾಸದ ಬಗ್ಗೆ ಹೆಚ್ಚು ಆಸಕ್ತಿಯನ್ನುಂಟುಮಾಡಲು ಆಕರ್ಷಕ ಬಹುಮಾನಗಳೊಡನೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದು ಮೊದಲಾದ ಚಟುವಟಿಕೆಗಳು ತುಲನಾತ್ಮಕವಾಗಿ ಈ ಅಕಾದೆಮಿಯ ವಿಶೇಷತೆಯೆಂದು ತೋರುವುದು. ಆದ್ದರಿಂದ ಈ ಅಕಾದೆಮಿಯು ಈ ವರ್ಷ ಐತಿಹಾಸಿಕ ಸ್ಥಳವಾದ ಗದಗಿನಲ್ಲಿ ಸಮ್ಮೇಳನವನ್ನು ನಡೆಸುತ್ತಿರುವುದು ನಮ್ಮೆಲ್ಲರಿಗೂ ಈ ನಗರದ ಜನರೆಲ್ಲರಿಗೂ ಹೆಮ್ಮೆಯನ್ನು ತಂದಿದೆ ಹಾಗೂ ಸಂತೋಷವನ್ನುಂಟು ಮಾಡಿದೆ. ಮೇಲಾಗಿ, ಗದಗ ಪ್ರದೇಶದ ಮೇಲೆ ವಿಶೇಷ ಗೋಷ್ಠಿಯೊಂದನ್ನು ಏರ್ಪಡಿಸಿರುವುದು ಉಚಿತವಷ್ಟೆ ಅಲ್ಲ, ಜ್ಞಾನಲಾಭವೂ ಹೌದು. ಇದರಿಂದ ಈ ಭಾಗದ, ಮುಖ್ಯವಾಗಿ ಶಾಲಾ ಕಾಲೇಜುಗಳ ಇತಿಹಾಸ ಶಿಕ್ಷಕರಲ್ಲಿ ಕುತೂಹಲವನ್ನು ಕೆರಳಿಸಿ, ಸ್ಫೂರ್ತಿಯನ್ನು ಒದಗಿಸಿ, ತಿಳುವಳಿಕೆಯನ್ನು ಹೆಚ್ಚಿಸಿ ಅವರು ಈ ಭಾಗದ ಇತಿಹಾಸ. ಸಂಸ್ಕೃತಿಗೆ ಸಂಬಂಧಿಸಿದ ಎಲ್ಲಾ ಆಕರಗಳನ್ನು ಶೋಧಿಸಿ ಅಭ್ಯಸಿಸುವುದರಲ್ಲಿ ತೊಡಗುವಂತೆ ಮಾಡಬಹುದೆಂದು ನಮ್ಮ ಆಶಯ. ಕರ್ನಾಟಕ ಇತಿಹಾಸದ ಪುನರ್ರಚನೆಯಲ್ಲಿ ಇವರು ವಿಶಿಷ್ಟ ಪಾಲನ್ನು ಕೊಟ್ಟು ತಮ್ಮ ಕರ್ತವ್ಯಗಳನ್ನು ನೆರವೇರಿಸುವರೆಂದು ಆಶಿಸುವೆವು.

ಡಾ॥ ಶ್ರೀನಿವಾಸ ರಿತ್ತಿ

ಕರ್ನಾಟಕದಲ್ಲಿ ಇತಿಹಾಸ ಶಿಕ್ಷಣ ಮತ್ತು ಸಂಶೋಧನೆ*

ಕರ್ನಾಟಕ ಇತಿಹಾಸ ಅಕಾದೆಮಿಯ ಮೂರನೆಯ ವಾರ್ಷಿಕ ಸಮ್ಮೇಳನಕ್ಕೆ ಅಧ್ಯಕ್ಷನೆಂದು ನನ್ನನ್ನು ಅಕಾದೆಮಿಯ ಪದಾಧಿಕಾರಿಗಳು ಆರಿಸಿದ್ದಾರೆ. ಅವರ ಈ ಔದಾರ್ಯಕ್ಕೆ ಋಣಿಯಾಗಿದ್ದೇನೆ. ಕಳೆದ ಸುಮಾರು ೩೦ ವರ್ಷಗಳಿಂದ ಈ ಕ್ಷೇತ್ರದಲ್ಲಿ, ವಿಶೇಷವಾಗಿ ಶಾಸನವಿಜ್ಞಾನದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ಕ್ಷೇತ್ರದಲ್ಲಿ ಹೆಸರು ಮಾಡಿದ ಹಲವಾರು ವಿದ್ವಾಂಸರ ನಿಕಟ ಒಡನಾಟವು ನನಗೆ ದೊರಕಿದೆ. ಇದರಿಂದಾಗಿ ಈ ಕ್ಷೇತ್ರದಲ್ಲಿ ಸ್ವಲ್ಪಮಟ್ಟಿಗೆ ಕೆಲಸ ಮಾಡಲು ನನಗೆ ಸಾಧ್ಯವಾಗಿದೆ. ಈ ಅಲ್ಪ ಕಾರ್ಯವನ್ನು ದೊಡ್ಡದು ಮಾಡಿ ಡಾ॥ ದೀಕ್ಷಿತ, ಡಾ॥ ಕಾಮತ ಮತ್ತು ಅವರ ಸ್ನೇಹಿತರು ನನಗೆ ಈ ಗೌರವದ ಸ್ಥಾನವನ್ನು ಕೊಟ್ಟಿದ್ದಾರೆ. ಈ ಗೌರವ ನನ್ನನ್ನು ಈ ಕ್ಷೇತ್ರಕ್ಕೆ ತಂದು ಮುನ್ನಡೆಯುವಂತೆ ದಾರಿ ತೋರಿಸಿದ ಹಿರಿಯರಿಗೆ, ಗುರುಗಳಿಗೆ ಸಲ್ಲುತ್ತದೆ. ಅವರೆಲ್ಲರನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಂಡು ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ.

ಕಳೆದ ಸುಮಾರು ೩೦ ವರ್ಷಗಳಿಂದ ನಾನು ಕರ್ನಾಟಕ ಇತಿಹಾಸದ ಅಭ್ಯಾಸ, ಶಿಕ್ಷಣ, ಸಂಶೋಧನೆ ಮತ್ತು ಇತಿಹಾಸದ ಗ್ರಂಥರಚನೆಯ ಕಾರ್ಯಗಳಲ್ಲಿ ಭಾಗವಹಿಸುತ್ತ ಬಂದಿದ್ದೇನೆ. ಹೀಗಾಗಿ ಇವುಗಳ ಸಂಬಂಧದಲ್ಲಿ ಅನೇಕ ಸಮಸ್ಯೆಗಳು, ವಿಚಾರಗಳು ನನಗೆ ಎದುರಾಗಿವೆ. ಇಂಥವುಗಳ ಬಗ್ಗೆ ಯೋಚಿಸುತ್ತಿರುವಾಗ ಇವುಗಳ ಕಾರ್ಯವಿಧಾನದ ಬಗ್ಗೆ, ಮುನ್ನಡೆಯ ಬಗ್ಗೆ ಹಲವಾರು ವಿಚಾರಗಳು ಬರುತ್ತವೆ. ಇಂಥ ಕೆಲವು ವಿಚಾರಗಳನ್ನು ಈ ಅವಕಾಶವನ್ನು ಉಪಯೋಗಿಸಿಕೊಂಡು ನಿಮ್ಮ ಮುಂದೆ ಇಡಲು ಯತ್ನಿಸುತ್ತೇನೆ. ಇವುಗಳನ್ನು ಈ ಕೆಳಗಿನ ಮೂರು ವಿಭಾಗಗಳಲ್ಲಿ ವಿಂಗಡಿಸ ಬಯಸುತ್ತೇನೆ: ೧. ಇತಿಹಾಸದ ಅಭ್ಯಾಸ ಮತ್ತು ಶಿಕ್ಷಣ, ೨. ಇತಿಹಾಸದ ಸಂಶೋಧನೆ, ಹಾಗೂ ೩. ಇತಿಹಾಸದ ಗ್ರಂಥರಚನೆ. ಇವೆಲ್ಲವುಗಳು ಕರ್ನಾಟಕದ ಇತಿಹಾಸಕ್ಕೆ ಸಂಬಂಧಿಸಿದಂತೆಯೇ ಇವೆ ಎಂದು ಬೇರೆ ಹೇಳಬೇಕಾಗಿಲ್ಲ.

೧. ಇತಿಹಾಸದ ಅಭ್ಯಾಸ ಮತ್ತು ಶಿಕ್ಷಣ: ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇತಿಹಾಸವನ್ನು ಮೂರು ಹಂತಗಳಲ್ಲಿ ಕಲಿಸುತ್ತೇವೆ. ಮಾಧ್ಯಮಿಕ ಶಾಲೆ, ಕಾಲೇಜು ಹಾಗೂ ವಿಶ್ವವಿದ್ಯಾಲಯ. ಪ್ರಾಥಮಿಕ ಹಂತದಲ್ಲಿಯೂ ಐತಿಹಾಸಿಕ ವ್ಯಕ್ತಿಗಳನ್ನು, ಘಟನೆಗಳನ್ನು ಕುರಿತು ಚಿಕ್ಕ ಚಿಕ್ಕ ಪಾಠಗಳು ಇದ್ದೇ ಇರುತ್ತವೆ. ಈ ಎಲ್ಲ ಹಂತಗಳಲ್ಲಿ ಇತಿಹಾಸವನ್ನು ಏಕೆ ಕಲಿಸುತ್ತೇವೆ, ಕಾಲೇಜಿನಲ್ಲಿ ಕಲಿತದ್ದನ್ನೇ ಮತ್ತೆ ವಿಶ್ವವಿದ್ಯಾಲಯದಲ್ಲಿ ಏಕೆ ಕಲಿಯಬೇಕು ಎಂಬ ಪ್ರಶ್ನೆಗಳು ಬರುತ್ತವೆ. ಆದರೆ ನಮಗೆಲ್ಲ ತಿಳಿದಂತೆ ವಿವಿಧ ಹಂತಗಳಲ್ಲಿ ವಿವಿಧ ದೃಷ್ಟಿಕೋನಗಳಿಂದ ಇದನ್ನು ಕಲಿಸುತ್ತೇವೆ. ಮೊದಲ ಹಂತಗಳಲ್ಲಿ ಅದನ್ನೇ ಆಳವಾಗಿ ಅಭ್ಯಸಿಸಿ ಅದರ ಪ್ರಯೋಜನವನ್ನು ಮನದಟ್ಟು ಮಾಡಿಕೊಡುವುದರ

* ಅಧ್ಯಕ್ಷ ಭಾಷಣ

ಜೊತೆಗೆ ಅದರಲ್ಲಿ ಹೆಚ್ಚಿನ ಸಂಶೋಧನೆ ನಡೆಸಲು ಪ್ರೇರೇಪಿಸುವಂತೆ ಕಲಿಸಬೇಕಾಗುತ್ತದೆ.

ಒಮ್ಮೊಮ್ಮೆ ಕೆಲವರು ಒಂದು ಪ್ರಶ್ನೆ ಕೇಳುತ್ತಾರೆ. ಹಳೆಯ ಸುದ್ದಿಗಳನ್ನು ಇಂದು ತಿಳಿದುಕೊಳ್ಳುವುದರಿಂದ ಉಪಯೋಗವೇನು ?— ಎಂದು. ಅದಕ್ಕೆ ನಮ್ಮ ಪ್ರಾಚೀನರು ಹೇಳುವ ಉತ್ತರವೆಂದರೆ, ಹಿಂದಿನ ಇತಿಹಾಸವನ್ನು ಅರಿಯುವುದರಿಂದ ಇಂದಿನವರಿಗೆ ಪ್ರಯೋಜನವಿದೆ. "ಪ್ರಯೋಜನಮನುದ್ದಿಶ್ಯ ನ ಮಂದೋಪಿ ಪ್ರವರ್ತತೆ" ಎಂದು ಶಂಕರಾಚಾರ್ಯರು ಹೇಳಿದಂತೆ ಪ್ರಯೋಜನವಿಲ್ಲದೆ ಯಾವ ಕೆಲಸವನ್ನೂ ಮಾಡಲಾಗುವುದಿಲ್ಲ. ಹಾಗಾದರೆ ಇತಿಹಾಸದ ಅಭ್ಯಾಸದ ಪ್ರಯೋಜನವೇನು ? ಇದಕ್ಕೆ ಉತ್ತರ ನಮ್ಮ ಪ್ರಾಚೀನರು ರೂಪಿಸಿಕೊಂಡ ಇತಿಹಾಸ ದೃಷ್ಟಿಯಲ್ಲಿದೆ.

ಧರ್ಮಾರ್ಥ ಕಾಮ ಮೋಕ್ಷಾಣಾಂ ಉಪದೇಶ
ಸಮನ್ವಿತಂ
ಪುರಾವೃತ್ತಂ ಕಥಾಯುಕ್ತಂ ಇತಿಹಾಸಂ
ಪ್ರಚಕ್ಷತೇ

ಇತಿಹಾಸದ ಮುಖ್ಯ ಪ್ರಯೋಜನವೆಂದರೆ ಅದು ನಮ್ಮ ಜೀವನದ ಮೌಲ್ಯಗಳನ್ನು ರೂಪಿಸಿಕೊಳ್ಳುವ, ಜೀವನವನ್ನು ಸುಧಾರಿಸಿಕೊಳ್ಳುವ ಒಂದು ಸಾಧನ. ಹಿಂದಿನ ಘಟನೆಗಳು, ವ್ಯಕ್ತಿಗಳ ನಡುವಳಿಕೆಗಳು ನಮಗೆ ಮಾರ್ಗದರ್ಶಕವಾಗಿರುತ್ತವೆ. ಹಾಗಾಗುವಂತೆ ನಾವು ಅರಿತುಕೊಳ್ಳಬೇಕು. ನಮ್ಮ ಮುನ್ನಡೆಗೆ ಮಾರ್ಗದರ್ಶಕವಾಗಬೇಕು. ಅವುಗಳ ಹಿನ್ನೆಲೆಯಲ್ಲಿ ನಾವು ನಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಜೀವನವನ್ನು ರೂಪಿಸಿಕೊಳ್ಳಬೇಕು. ಹೀಗೆಂದ ಮಾತ್ರಕ್ಕೆ ನೀತಿ ಪಾಠಗಳನ್ನು ಹೇಳುವ ಕತೆಗಳಷ್ಟೇ ಇತಿಹಾಸವೆಂದಲ್ಲ. ನಮ್ಮ ಜೀವನದ ಮೇಲೆ ಪ್ರಭಾವ ಬೀರುವಂಥ ಘಟನೆಗಳ ವಿವರಗಳೇ ಇತಿಹಾಸ, ಪುರಾವೃತ್ತ. ಅಂಥ ಘಟನೆಗಳು ಇಂದಿಗೆ ನಮಗೆ ಪ್ರಯೋಜನವಾಗುವಂತೆ ಅರ್ಥ ಮಾಡಿಕೊಳ್ಳಬೇಕು. ಇಲ್ಲವಾದರೆ ಇತಿಹಾಸ ಬರೇ ಹೆಸರುಗಳ, ತಾರೀಖುಗಳ ಸರಮಾಲೆಯಾಗುತ್ತದೆ. ಅದರ ಓದು ಬೇಸರ ತರಿಸುತ್ತದೆ.

ಒಂದು ಉದಾಹರಣೆಯನ್ನು ನೋಡಬಹುದು. ಬಹುಹಿಂದೆ ನಮ್ಮ ದೇಶದ ಮೇಲೆ ಅಲೆಗ್ಸಾಂಡರ್ ಎಂಬ ಗ್ರೀಕ್ ಅರಸನು ದಾಳಿ ಮಾಡಿದನೆಂಬುದನ್ನು ಪದೇ ಪದೇ ಓದುತ್ತೇವೆ. ಆಗ ಅಲ್ಲಿದ್ದ ಚಿಕ್ಕ ರಾಜ್ಯಗಳು ಪಟಪಟನೆ ಅವನ ದಾಳಿಗೆ ತುತ್ತಾದವು. ಅಂಭಿಯೆಂಬ ಒಬ್ಬ ರಾಜನು ತನ್ನ ದಾಯಾದಿಯ ಮೇಲೆ ಸೇಡು ತೀರಿಸಿಕೊಳ್ಳಲು ಈ ಪರಕೀಯನಿಗೆ ಬೆಂಬಲವಾಗಿ ನಿಂತನು. ಪೋರಸ್ ಎಂಬ ಅರಸನು ಅಲೆಗ್ಸಾಂಡರನನ್ನು ಎದುರಿಸಿದನು. ಯುದ್ಧದಲ್ಲಿ ಸೋತರೂ ಧೀರನಂತೆ ನಡೆದನು. ಆಯಿತು ಮುಂದೇನು ? ಹಿಂದೇನೊ ಆಯಿತು. ಅದರಿಂದ ಇಂದು ಉಪಯೋಗವೇನು ಎಂದರಾಗದು. ಭಾರತದ ಮೇಲೆ, ಭಾರತೀಯರ ಮೇಲೆ ಅದರ ಪರಿಣಾಮವೇನಾಯಿತು ? ಅದರಿಂದ ನಾವೇನು ಕಲಿಯಬಹುದು ಎಂಬುದನ್ನು ಬಿಂಬಿಸುವುದರಲ್ಲಿ ಇತಿಹಾಸ ಶಿಕ್ಷಣದ ಮರ್ಮ ಅಡಗಿದೆ.

ಈ ಘಟನೆ ಅಂದಿನ ಅನೇಕ ವಿಚಾರವಂತರ ಕಣ್ಣು ತೆರೆಯಿತು. ಅಂದಿನ ಚಿಕ್ಕ ಚಿಕ್ಕ ರಾಜ್ಯಗಳ ಬಲಹೀನತೆ, ಅವುಗಳ ನಡುವಿನ ಈರ್ಷ್ಯೆ, ಒಗ್ಗಟ್ಟಿನ ಅಭಾವ ಪರಕೀಯರ ಆಕ್ರಮಣಕ್ಕೆ ಕಾರಣವಾಯಿತೆಂಬ ಸತ್ಯದ ಅರಿವಾಯಿತು. ಒಗ್ಗಟ್ಟಿನ ಮಹತ್ವ ಮನದಟ್ಟಾಯಿತು. ಕೌಟಿಲ್ಯನಂಥ ಮೇಧಾವಿಯೊಬ್ಬ ತಲೆಯೆತ್ತಿದ. ದೇಶವು ಪರಕೀಯರ ಆಕ್ರಮಣಕ್ಕೆ ತುತ್ತಾದರೆ ಬಡವಾಗುತ್ತದೆಂದು ಸಾರಿ ಹೇಳಿದ. ಚಂದ್ರಗುಪ್ತನಂಥ ಒಬ್ಬ ನಾಯಕ ದೊರೆತ. ಜನರು ಒಗ್ಗೂಡಿದರು. ಅಲೆಗ್ಸಾಂಡರ್ ಹಿಮ್ಮೆಟ್ಟಿದ. ದೇಶ ಸ್ವತಂತ್ರವಾಯಿತು. ಅಫಘಾನಿಸ್ತಾನದಿಂದ ಹಿಡಿದು ಕಾವೇರಿಯವರೆಗೆ ವಿಶಾಲವಾದ ಸಾಮ್ರಾಜ್ಯ ಸ್ಥಾಪಿತವಾಯಿತು. ಕೌಟಿಲ್ಯ ಅರ್ಥಶಾಸ್ತ್ರದ ರೂಪದಲ್ಲಿ ಈ ಸಾಮ್ರಾಜ್ಯಕ್ಕೆ, ಮುಂದಿನ ಎಲ್ಲ ರಾಜ್ಯಗಳಿಗೆ ರಾಜಘಟನೆಯನ್ನು ಒದಗಿಸಿದ. ಪ್ರಜಾಸುಖ, ಪ್ರಜಾಹಿತ ಈ ಘಟನೆಯ ಮೂಲಸೂತ್ರಗಳಾದವು.

ಹೀಗೆ ಬರೀ ಘಟನೆಗಳನ್ನು ವಿವರಿಸಿದೆ. ಘಟನೆಗಳ ಹಿಂದಿರಬಹುದಾದ ಪರಿಣಾಮಗಳನ್ನು ಸೂಚ್ಯವಾಗಿ ವಿವರಿಸಿದರೆ ಅಧ್ಯಯನ ರೋಚಕವಾಗುತ್ತದೆ, ಪ್ರಯೋಜನಕಾರಿಯಾಗುತ್ತದೆ. ಇಂತಹ ಇನ್ನೂ ಅನೇಕ ಉದಾಹಾರಣೆಗಳನ್ನು ಕೊಡಬಹುದು.

ಇತಿಹಾಸದ ಅಧ್ಯಾಪನದಲ್ಲಿ ಇನ್ನೊಂದು ಮಹತ್ವದ ಅಂಶವೆಂದರೆ ಆ ಕ್ಷೇತ್ರದಲ್ಲಿ ಆದ ಹೊಸ ಹೊಸ ಸಂಶೋಧನೆಗಳನ್ನು, ಹೊಸ ಹೊಸ ವಿಷಯ ಗಳನ್ನು ಅವಗತ ಮಾಡಿಕೊಳ್ಳುವುದು. ಇವಿಲ್ಲದೆ ಹೋದರೆ ಮತ್ತೆ ಇತಿಹಾಸದ ಅಭ್ಯಾಸ ಚರ್ವಿತ ಚರ್ವಣವೇ ಆಗುತ್ತದೆ. ಒಂದು ಉದಾಹರಣೆಯನ್ನು ನೋಡಬಹುದು. ನಮ್ಮ ದೇಶದ ತೀರ ಪ್ರಾಚೀನ ಕಾಲದ ಇತಿಹಾಸವನ್ನು ಓದುವಾಗ ಆರ್ಯರೆಂಬವರು ಹೊರಗಿನಿಂದ ಬಂದವರು ಎಂಬುದನ್ನು ಓದುತ್ತೇವೆ. ಕಳೆದ ಎಷ್ಟೋ ವರ್ಷಗಳಿಂದ ಇದೇ ಮಾತೇ ನಮ್ಮ ಪಠ್ಯಪುಸ್ತಕಗಳಲ್ಲಿ ಬರುತ್ತದೆ. ಅಲ್ಲದೆ ಇದೊಂದು ಅಬಾಧಿತವಾದ ಸಿದ್ಧಾಂತ ಎಂಬ ನಂಬಿಕೆ ಬಲವಾಗಿ ಬೇರೂರಿದೆ. ಆದರೆ ಇತ್ತೀಚಿಗೆ ಈ ಸಿದ್ಧಾಂತವನ್ನು ಪ್ರಶ್ನಿಸುವ ಮತ್ತು ಅಲ್ಲಗಳೆಯುವಂತಹ ಸಂಶೋಧನೆ ಗಳು ನಡೆದಿವೆ. ಆದರೆ ಈಗ ಹಲವು ವರ್ಷ ಗಳಿಂದಲೂ ಇಂತಹ ಹೊಸ ವಿಚಾರಗಳು ಪ್ರಚಲಿತ ವಿದ್ದರೂ ಅವು ವಿದ್ಯಾರ್ಥಿಗಳನ್ನು ಮತ್ತು ಸಾಮಾನ್ಯ ಓದುಗರನ್ನು ಮುಟ್ಟಿಯೇ ಇಲ್ಲ. ಅದಕ್ಕಾಗಿ ಶಿಕ್ಷಕರಿಗೆ ಹೊಸ ಹೊಸ ವಿಚಾರಗಳು ಮನದಟ್ಟಾಗುವಂತೆ Orientation Course ಅಥವಾ Refresher Course ಗಳನ್ನು ಏರ್ಪಡಿಸುವುದು ಅಗತ್ಯವಾಗಿದೆ. ಇಂಥ ಕೋರ್ಸುಗಳಲ್ಲಿ ಹೊಸ ಹೊಸ ವಿಷಯಗಳನ್ನು ಯುವ ಶಿಕ್ಷಕರ ಗಮನಕ್ಕೆ ತರುವ ಪ್ರಯತ್ನಗಳು ನಡೆದು ಇತಿಹಾಸದ ಅರ್ಥಪೂರ್ಣ ಅಭ್ಯಾಸವು ಸಾಧ್ಯ ವಾಗುತ್ತದೆ. ಇತಿಹಾಸ ಒಂದು torch ಇದ್ದಂತೆ. ಕತ್ತಲಲ್ಲಿ ಮುಂದೆ ನಡೆಯುತ್ತಿರುವ ಮನುಷ್ಯನೊಬ್ಬನಿಗೆ ಹಿಂದಿಂದ ಬೆಳಕಿನ ಕಿರಣವೊಂದು ಬಂದು ಆತನಿಗೆ ದಾರಿ ಸರಿಯಾಗಿ ಕಾಣುವಂತೆ, ಇತಿಹಾಸ ಮನುಷ್ಯನಿಗೆ ಸರಿಯಾದ ಮಾರ್ಗದಲ್ಲಿ ಮುನ್ನಡೆಯುವಂತೆ ಮಾರ್ಗ ದರ್ಶನ ಮಾಡುತ್ತದೆ.

ಕರ್ನಾಟಕ ಇತಿಹಾಸ ಅಕಾದೆಮಿ ಇತಿಹಾಸವನ್ನು ಜನಪ್ರಿಯಗೊಳಿಸಲು ಈಗಾಗಲೇ ಒಂದು ಹೊಸ ಬಗೆಯ ಕಾರ್ಯಕ್ರಮ ನಡೆಸುತ್ತಿದೆ. ಅದೆಂದರೆ ಇತಿ ಹಾಸದ ಪರೀಕ್ಷೆಗಳನ್ನು ನಡೆಸುವುದು. ಇದರ ಪರಿಣಾಮ ಬಹಳ ಉತ್ತೇಜನಕಾರಿಯಾಗಿದೆ ಎಂದು ಕೇಳಿದ್ದೇನೆ. ಈ ಅಕಾದೆಮಿ ಅಲ್ಪಾವಧಿಯ ತರಬೇತಿ ಕೇಂದ್ರಗಳನ್ನು ನಡೆಸಿ ತನ್ಮೂಲಕ ಇತಿಹಾಸ ಕ್ಷೇತ್ರದಲ್ಲಿ ಆಗುತ್ತಿರುವ ಹೊಸ ಹೊಸ ಬೆಳವಣಿಗೆಗಳನ್ನು ಶಿಕ್ಷಕರ ಗಮನಕ್ಕೆ ತರುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಸೂಚಿಸಬಯಸುತ್ತೇನೆ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಅದೆಂದರೆ ಶಿಕ್ಷಣ ಮಾಧ್ಯಮ. ನಮ್ಮ ದೇಶದಲ್ಲಿ ಬಹುತೇಕ ರಾಜ್ಯಗಳು ಪ್ರಾದೇಶಿಕ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಆರಿಸಿಕೊಂಡಿವೆ. ಕರ್ನಾಟಕದಲ್ಲಿಯೂ ಕಾಲೇಜು ಹಂತದವರೆಗೆ ಕನ್ನಡ ಮಾಧ್ಯಮ ಇದೆ. ಇತ್ತೀಚಿಗೆ ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆಗಳಲ್ಲಿ ಪ್ರಶ್ನಪತ್ರಿಕೆಗಳಿಗೆ ಕನ್ನಡದಲ್ಲಿ ಉತ್ತರ ಬರೆಯಲು ಆಸ್ಪದ ಮಾಡಿಕೊಟ್ಟಿ ದ್ದಾರೆ. ಇತಿಹಾಸದ ಮಟ್ಟಿಗೆ ಹೇಳಬೇಕಾದರೆ, ಮುಕ್ಕಾಲು ಪಾಲು ಜನ ಕನ್ನಡವನ್ನೇ ಆರಿಸಿ ಕೊಳ್ಳುತ್ತಾರೆ ಎಂಬುದು ನನ್ನ ಅನುಭವದ ಮಾತು. ತಾತ್ವಿಕವಾಗಿ ಇದು ಸ್ವಾಗತಾರ್ಹವೆ. ಮಾತೃಭಾಷೆಯ ಮೂಲಕ ಬೋಧನೆ, ಮಾತೃಭಾಷೆಯ ಮೂಲಕ ಅಭಿವ್ಯಕ್ತಿ ಇವು ಹೆಚ್ಚು ಪರಿಣಾಮಕಾರಿಯಾಗುತ್ತವೆ ಎಂದು ನಾವು ಭಾವಿಸಿದ್ದೇವೆ. ಎಷ್ಟೋ ಸಲ ಇಂತಹ ಅನುಭವವೂ ನಮಗಾಗುತ್ತದೆ. ಆದರೆ ಇಲ್ಲಿ ಕೆಲವು ವ್ಯಾವಹಾರಿಕ ತೊಂದರೆಗಳಿವೆ. ಒಂದೆಂದರೆ, ಕಲಿಸುವವರಿಗೆ ಭಾಷೆಯ ಮೇಲಿನ ಪ್ರಭುತ್ವ ಚೆನ್ನಾಗಿರ ಬೇಕಾಗುತ್ತದೆ. ಉತ್ತರ ಬರೆಯುವವರಿಗೂ ಅಷ್ಟೇ. ಪ್ರಾಮಾಣಿಕವಾಗಿ ನನ್ನ ಅನುಭವವನ್ನು ಹೇಳಬೇಕೆಂದರೆ ನಾವು ಹೆಚ್ಚಾಗಿ ಇವೆರಡರ ಕೊರತೆಗಳನ್ನು ಕಾಣುತ್ತೇವೆ. ಅಪವಾದಗಳಿಲ್ಲವೆಂದಲ್ಲ. ಇನ್ನೊಂದು ಮಾತೆಂದರೆ ಕನ್ನಡ ಮಾಧ್ಯಮವನ್ನು ಆರಿಸಿಕೊಂಡ ಜನ ಕನ್ನಡದಲ್ಲಿರುವ ಪುಸ್ತಕಗಳನ್ನೇ ಬೇಡುತ್ತಾರೆ, ಓದುತ್ತಾರೆ. ಆದರೆ ಕನ್ನಡ ದಲ್ಲಿ ಉನ್ನತಮಟ್ಟದ ಪುಸ್ತಕಗಳು ಎಷ್ಟು ದೊರೆಯು ತ್ತವೆ. ಬರೆಯಬೇಕು, ಭಾಷಾಂತರಿಸಬೇಕು ಎಂದೇನೊ ಅನೇಕರು ಹೇಳುತ್ತಾರೆ. ಆದರೆ ಒಂದು ಐತಿಹಾಸಿಕ ಸತ್ಯವೆಂದರೆ ಈಗಾಗಲೇ ಇಂಗ್ಲೀಷಿನಲ್ಲಿ ಇತಿಹಾಸದ ಬಗ್ಗೆ ಶ್ರೇಷ್ಠ ಲೇಖಕರ ಅಸಂಖ್ಯ ಪುಸ್ತಕಗಳಿವೆ. ಇಂತಹ ಪುಸ್ತಕಗಳನ್ನು ಸ್ವತಂತ್ರವಾಗಿ ಬರೆಯಲು, ಅವು

ವಿದ್ಯಾರ್ಥಿಗಳಿಗೆ ಶಿಕ್ಷಕರಿಗೆ ಲಭ್ಯವಾಗಲು ಎಷ್ಟು ವರ್ಷ ಬೇಕಾದೀತು ? ಅಲ್ಲದೆ ಎಷ್ಟೆಂದು ಇಂತಹ ಪುಸ್ತಕಗಳನ್ನು ಭಾಷಾಂತರಿಸಲಾದೀತು ? ಅದಲ್ಲದೆ ಒಂದು ಪುಸ್ತಕವನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಭಾಷಾಂತರಿಸಿದಾಗ ಒಂದರಲ್ಲಿಯ ವಿಷಯವನ್ನು ಇನ್ನೊಂದರಲ್ಲಿ ಇಡುತ್ತೇವಷ್ಟೆ. ಆದರೆ ಮೂಲ ಲೇಖಕರ ಶೈಲಿ, ಅವರ ಭಾಷೆಯ ಸೊಗಸು. ಅವರು ವಿಚಾರಗಳನ್ನು ಮಂಡಿಸುವ ರೀತಿ ಇವೆಲ್ಲವುಗಳನ್ನು ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಎಷ್ಟರ ಮಟ್ಟಿಗೆ ತರಲಾದೀತು ? ಮೂಲ ಲೇಖಕರ ಗ್ರಂಥಗಳನ್ನು ಓದುವದರಿಂದ ನಮ್ಮ ಮನಸ್ಸಿನ ಮೇಲೆ, ನಮ್ಮ ಭಾಷೆಯ ಮೇಲೆ, ನಮ್ಮ ವಿಚಾರಶಕ್ತಿಯ ಮೇಲೆ ಆಗುವ ಪರಿಣಾಮ ಭಾಷಾಂತರಗಳಿಂದಾದೀತೆ ? ಆಗಲಾರದು ಎಂದು ನನ್ನ ಅನುಭವ. ಆದ್ದರಿಂದ ಬರೀ ಭಾಷಾಂತರಗಳನ್ನು ಓದುವುದರಿಂದ ನಾವು ಅನೇಕ ಉತ್ತಮ ಅನುಭವಗಳಿಂದ ವಂಚಿತರಾಗುತ್ತೇವೆ. ವಿಲ್ ಡುರ್‍ಯಾಂಟ್, ಟಾಯ್‌ನಬಿ ಇವರು ಹೋಗಲಿ, ಈಚಿನ ವಿದ್ವಾಂಸರಾದ ಡಾ॥ ರಾಧಾಕೃಷ್ಣನ್, ಜವಾಹರಲಾಲ್ ನೆಹರೂ, ಆರ್.ಸಿ. ಮುಜುಮುದಾರ, ನೀಲಕಂಠಶಾಸ್ತ್ರಿಯವರಂಥವರ ಗ್ರಂಥಗಳನ್ನು ಮೂಲದಲ್ಲಿ ಓದುವ ಸೊಗಸೇ ಬೇರೆ, ಭಾಷಾಂತರಗಳ ಪರಿಣಾಮವೇ ಬೇರೆ ಎಂಬುದು ಎಲ್ಲರ ಅನುಭವವಾಗಿರಲು ಸಾಕು. ಇಲ್ಲಿ ಇನ್ನೂ ಒಂದು ಅಂಶವನ್ನು ಗಮನಿಸಬೇಕು. ವಿದ್ಯಾರ್ಥಿಗಳು ಕನ್ನಡದಲ್ಲಿಯೇ ಕಲಿಯುತ್ತಿರುವಾಗ ಕನ್ನಡ ಪುಸ್ತಕಗಳನ್ನೇ ಹೆಚ್ಚು ಅಪೇಕ್ಷಿಸುವರಾದ್ದರಿಂದ ಕಲಿಸುವ ಶಿಕ್ಷಕರೂ ಸಹ ಕೇವಲ ಕನ್ನಡ ಪುಸ್ತಕಗಳನ್ನಷ್ಟೇ ಅವಲಂಬಿಸುತ್ತಾರೆಂಬುದು ನನ್ನ ಅನುಭವದ ಮಾತಾಗಿದೆ, ಇದರಿಂದ ಇನ್ನೂ ಹೆಚ್ಚಿನ ಹಾನಿಯುಂಟಾಗುತ್ತದೆ. ಕನ್ನಡ ಮಾಧ್ಯಮದ ಬಗ್ಗೆ ನನ್ನ ವಿರೋಧವಿಲ್ಲ. ಆದರೆ ಇತಿಹಾಸದ ಆಳವಾದ ಮತ್ತು ವಿಸ್ತಾರವಾದ ಜ್ಞಾನವನ್ನು ಪಡೆಯಲು ಇಂಗ್ಲೀಷ್ ಗ್ರಂಥಗಳ ಸಹಾಯ ಪಡೆಯುವುದು ಅನಿವಾರ್ಯ ಎಂಬುದು ನನ್ನ ದೃಢ ನಂಬಿಕೆ. ವಸ್ತುಸ್ಥಿತಿ ನನಗೆ ಬೇರೆಯೇ ಕಾಣುತ್ತದೆ. ಅನೇಕ ವಿದ್ಯಾರ್ಥಿಗಳು ನನ್ನ ಕಡೆಗೆ ಬರುತ್ತಾರೆ. ಕನ್ನಡ ಪುಸ್ತಕಗಳನ್ನಷ್ಟೇ ಕೇಳುತ್ತಾರೆ. ಅವರಿಗೂ ನಾನು ಈ ವಿಷಯವನ್ನು ತಿಳಿಸುತ್ತೇನೆ. ಆದರೆ ಅವರಿಗೆ ಹಿಡಿಸುವುದಿಲ್ಲ. ಉಚ್ಚ ತರಗತಿಯ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ನನ್ನ ಕಳಕಳಿಯ ಬಿನ್ನಹವೆಂದರೆ ನಿಮ್ಮ ತಿಳುವಳಿಕೆಯ ಕ್ಷೇತ್ರವನ್ನು ನೀವಾಗಿಯೇ ಸಂಕುಚಿತಗೊಳಿಸಿಕೊಳ್ಳಬೇಡಿರಿ. ಇಂಗ್ಲೀಷ್ ಓಡಿಸಿದರೆ ಕನ್ನಡ ಉಳಿಯುತ್ತದೆ ಎಂದು ಕೆಲವರು ನಂಬಿದಂತಿದೆ. ಆದರೆ ಇಂತಹ ನಂಬಿಕೆ ಆತ್ಮಘಾತಕವೇ ಸರಿ. ಕನ್ನಡದಲ್ಲಿ ಉತ್ತಮವಾಗಿ ಬರೆಯಲು ಬರಬೇಕಾದರೆ ಅದನ್ನು ನಾವು ಚೆನ್ನಾಗಿ ಕೃಷಿ ಮಾಡಬೇಕಾಗುತ್ತದೆ. ಅದಕ್ಕೆ ಇಂಗ್ಲೀಷು ಪೂರಕವಾಗುತ್ತದೆ. ಸಂಸ್ಕೃತವು ಸಹಾಯಕವಾಗುತ್ತದೆ. ಇತರ ಭಾಷೆಗಳೂ ಪುಷ್ಟಿಕೊಡುತ್ತವೆ "ಆನೋ ಭದ್ರಾ ಋತವೊ ಯಂತು ವಿಶ್ವತಃ" ಎಂಬ ಮಂತ್ರವು ನಮಗೆ ಗುರುವಾಗಿರಲಿ. "ಬಹುಸುತಾ ಅಸು ಬಹುಸ್ರುತಾ ಭವಂತು" ಎಂಬ ಅಶೋಕನ ಮಾತು ಸದಾ ನೆನಪಿರಲಿ.

೨. **ಇತಿಹಾಸ ಸಂಶೋಧನೆ :** ಕರ್ನಾಟಕದಲ್ಲಿ ಇತಿಹಾಸ ಸಂಶೋಧನೆಯ ಪರಂಪರೆಯ ದೃಷ್ಟಿಯಿಂದ ನಾವು ಸುದೈವಿಗಳೆಂದೇ ಹೇಳಬೇಕು. ತುಲನಾತ್ಮಕವಾಗಿ ನೋಡಿದರೆ ನಮ್ಮಲ್ಲಿ ಇತಿಹಾಸ ಸಂಶೋಧನೆ ಚಟುವಟಿಕೆಗಳು ಹೆಚ್ಚು ಹಿಂದಿನಿಂದಲೇ ಮತ್ತು ಹೆಚ್ಚು ವ್ಯಾಪಕವಾಗಿ ಇಲ್ಲಿ ನಡೆಯುತ್ತ ಬಂದಿದೆ ಎಂಬುದು ಸ್ಪಷ್ಟವಿದೆ. ನಮ್ಮಲ್ಲಿಯ ವಿಪುಲವಾದ ಶಾಸನಸಂಪತ್ತು ವಿದೇಶಿ ವಿದ್ವಾಂಸರನ್ನು ಆಕರ್ಷಿಸಿದುದೇ ಇದಕ್ಕೆ ಮುಖ್ಯ ಕಾರಣವೆನಿಸುತ್ತದೆ. ಶಾಸನ ಸಂಶೋಧನೆಯ ಕಾರ್ಯ ನಮ್ಮ ನಾಡಿನಲ್ಲಿ ೧೯ನೇ ಶತಮಾನದ ಕೊನೆಯ ಭಾಗದಿಂದಲೇ ಆರಂಭವಾಗಿದೆ. ಇದರ ಬೆಳವಣಿಗೆಯನ್ನು ಹಂತ ಹಂತವಾಗಿ ಗುರುತಿಸಬಹುದಾಗಿದೆ. ಫ್ಲೀಟ್ ಮತ್ತು ರೈಸರ ಕಾಲ ಈ ಬೆಳವಣಿಗೆಯ ಮೊದಲನೆಯ ಹಂತ. ಇದು ಶಾಸನ ಸಂಶೋಧನೆಗೆ ಭದ್ರವಾದ ಬುನಾದಿಯನ್ನು ಒದಗಿಸಿದ ಹಂತ. ಉತ್ತರಕರ್ನಾಟಕದಲ್ಲಿ ಜಾನ್ ಫ್ಲೀಟ್, ದಕ್ಷಿಣ ಕರ್ನಾಟಕದಲ್ಲಿ ಬೆಂಜಾಮಿನ್ ಲೂಯಿ ರೈಸ್ ಅವರು ಈ ಕಾರ್ಯವನ್ನು ಆರಂಭಿಸಿದರು. ಇದರ ಪರಿಣಾಮವಾಗಿ **Epigraphia Carnatica**ದ ೧೨ ಸಂಪುಟಗಳು ಹೊರಬಂದವು. ಕರ್ನಾಟಕದ ಇತಿಹಾಸದ ಸಂಶೋಧನೆಗೆ ಅಕ್ಷಯ ಭಂಡಾರ ದೊರೆಯಿತು. ಅಂದಿನ ಮೈಸೂರು

ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲಿಯೂ ಸುಮಾರು ೧೨ ಸಾವಿರಕ್ಕೂ ಹೆಚ್ಚಿನ ಶಾಸನಗಳನ್ನು ಈ ಸಂಪುಟಗಳು ಒಳಗೊಂಡಿವೆಯೆಂದರೆ ಈ ಸಾಮಗ್ರಿಯ ವೈಪುಲ್ಯ ನಮಗೆ ಮನದಟ್ಟಾಗುತ್ತದೆ. ಫ್ಲೀಟರ ಕಾರ್ಯ ವೈಖರಿಯೇ ಬೇರೆ. ತಾವು ಕಂಡುಹಿಡಿದ ಒಂದೊಂದು ಶಾಸನವನ್ನು ಕೂಲಂಕಷವಾಗಿ ವಿಮರ್ಶಿಸಿ Sanskrit-Prakrit and Old Kanarese Inscriptions ಎಂಬ ಮಾಲಿಕೆಯನ್ನು, Indian Antiquary ಯಲ್ಲಿ ನೂರಾರು ಲೇಖನಗಳನ್ನು ಪ್ರಕಟಪಡಿಸಿದರು. ಇವು ಒಂದು ಅಕ್ಷಯ ಭಂಡಾರವೇ. ಈ ಲೇಖನಗಳಿಂದಾಗಿ ಅವರು ಇಂದಿನ ಶಾಸನ ಸಂಶೋಧಕರಿಗೆ ಮಾರ್ಗದರ್ಶಕ ರಾದರು. ಇದೇ ದಾಟಿಯಲ್ಲಿಯೇ ಶಾಸನ ಸಂಶೋಧನೆ ಯಲ್ಲಿ ಬೆಳೆದ ಮುಂದಿನ ಹಂತವೆಂದರೆ ೨೦ನೇ ಶತ ಮಾನದ ಆದಿಭಾಗ. ಎನ್. ಲಕ್ಷ್ಮಿನಾರಾಯಣ ರಾವ್, ಆರ್. ಎಸ್. ಪಂಚಮುಖಿ ಈ ಹಂತದ ಪ್ರಮುಖರು. South Indian Inscriptions ಎಂಬ ಮಾಲಿಕೆಯಲ್ಲಿ Bombay Karnataka Inscriptions ಎಂಬ ಸಂಪುಟಗಳ ಮೂಲಕ ಉತ್ತರ ಕರ್ನಾಟಕದ ಶಾಸನಗಳ ಪ್ರಕಟಣೆ ಆರಂಭವಾದುದು ಆಗಲೆ. ಈ ಕಾಲದಲ್ಲಿ ಪ್ರಕಟಣೆಗಿಂತ ಸಂಗ್ರಹ ಕಾರ್ಯವೇ ಹೆಚ್ಚಾಯಿತು. ಉತ್ತರ ಕರ್ನಾಟಕದ ಧಾರವಾಡ, ವಿಜಾಪುರ ಜಿಲ್ಲೆಗಳ ಬಹುಪಾಲು ಶಾಸನ ಗಳು ಈ ಕಾಲದಲ್ಲಿ ಸಂಗ್ರಹಿತವಾದವು. ಈ ಸಂಗ್ರಹ ನಂತರದ ಹಂತದಲ್ಲಿ South Indian Inscriptions, Vol, XV XVIII, & XX ಈ ಸಂಪುಟಗಳಲ್ಲಿ ಸುಮಾರುಹದಿನೈದುನೂರಕ್ಕೂಹೆಚ್ಚು ಶಾಸನಗಳು ಪ್ರಕಟ ವಾದವು. ಡಾ॥ ಪಿ. ಬಿ. ದೇಸಾಯಿ ಡಾ॥ ಜಿ. ಎಸ್. ಗಾಯಿ ಈ ಹಂತದ ಪ್ರಮುಖರೆನ್ನಲು ಅಡ್ಡಿಯಿಲ್ಲ. ಡಾ॥ ಪಿ. ಬಿ. ದೇಸಾಯಿ ವಿಶೇಷ ಕೊಡುಗೆಯೆಂದರೆ ಅಂದಿನ ಹೈದರಾಬಾದ್ ಕರ್ನಾಟಕದ ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿಯ ಭಂಡಾರದ ಬಿಗಿಮುದ್ರೆ ಯನ್ನು ಒಡೆದುದು. ಅವರು ಪ್ರಕಟಿಸಿದ ಈ ಭಾಗಗಳ ಲ್ಲಿಯ ಶಾಸನಗಳ ಸಂಖ್ಯೆ ಬಹಳವಲ್ಲದಿದ್ದರೂ ಆ ಭಂಡಾ ರದ ಐಶ್ವರ್ಯದ ಮುನ್ಸೂಚನೆಯನ್ನು ಅವರಿತ್ತರು.

ಇನ್ನು ಮುಂದಿನ ಹಂತ ಸದ್ಯದ ಹಂತ. ಈ ಕಾಲದಲ್ಲಿ ಆಧುನಿಕ ಕರ್ನಾಟಕ ರಾಜ್ಯದ ನಿರ್ಮಾಣ ವಾಯಿತು. ಶಾಸನ ಸಂಗ್ರಹದವ್ಯಾಪ್ತಿಯೂ ಹೆಚ್ಚಿತು. ಗುಲ್ಬರ್ಗಾ, ರಾಯಚೂರ ಜಿಲ್ಲೆಗಳಲ್ಲಿ ಶಾಸನ ಸಂಗ್ರಹ ಕಾರ್ಯ ಶುರುವಾಗಿ ಹೊಸ ಹೊಸ ವಿಷಯಗಳನ್ನು ತಿಳಿಸುವ ಬಹಳಷ್ಟು ಶಾಸನಗಳು ಬೆಳಕಿಗೆ ಬಂದವು. ಈ ಹಂತದಲ್ಲಿಯ ಒಂದು ಮಹತ್ವದ ಬೆಳವಣಿಗೆಯೆಂದರೆ ಸರ್ಕಾರದ ಕಾರ್ಯಾಲಯಕ್ಕೆ ಸೀಮಿತವಾಗಿದ್ದ ಶಾಸನ ವಿಜ್ಞಾನದ ಅಭ್ಯಾಸ, ಸಂಶೋಧನೆ ವಿಶ್ವವಿದ್ಯಾಲಯಗಳ ಬಾಗಿಲಿಗೆ ಬಂದಿತು. ಶಾಸನವಿಜ್ಞಾನ ಒಂದು ಪಠ್ಯ ಕ್ರಮವಾಗಿ ವಿದ್ಯಾರ್ಥಿಗಳಿಗೆ ತರಬೇತಿ ದೊರೆಯತೊಡ ಗಿತು. ಒಂದು ರೀತಿಯಿಂದ ಈ ಅಭ್ಯಾಸ ವಿಸ್ತಾರ ಹೆಚ್ಚಿದರೂ ಇನ್ನೊಂದು ರೀತಿಯಿಂದ ಆಳ ಕಡಿಮೆ ಯಾಗತೊಡಗಿತು. ಶಾಸನ ಸಂಶೋಧನೆಗೆ ಭದ್ರ ತಳ ಹದಿ ಭಾಷೆಗಳು. ಒಮ್ಮೊಮ್ಮೆ ಶಾಸನವಿಜ್ಞಾನವೆಂದರೆ ಶಿಲಾಲಿಪಿಗಳಲ್ಲಿಯ ಅಕ್ಷರಗಳನ್ನೋದಿದರಾಯಿತು, ಎಂದು ಕಲ್ಪಿಸಲಾಗುತ್ತದೆ. ಆದರೆ ಇದು ಸರಿಯಲ್ಲ. ಅಕ್ಷರಗಳನ್ನೇ ಓದುವದು ಪ್ರಾರಂಭಿಕ ಕಾರ್ಯವಷ್ಟೆ. ಶಾಸನವಿಜ್ಞಾನದ ಮಹತ್ವದ ಭಾಗವೆಂದರೆ ಓದಿದ್ದರ ಅರ್ಥವನ್ನು ಸಮರ್ಪಕವಾಗಿ ವಿವರಿಸುವದು. ಈ ಕಾರ್ಯಕ್ಕೆ ಪ್ರಾಕೃತ, ಸಂಸ್ಕೃತ, ಹಳೆಗನ್ನಡಗಳ ಮೇಲಿನ ಪ್ರಭುತ್ವ ಅತ್ಯವಶ್ಯ. ಇವಿಲ್ಲದಿದ್ದಲ್ಲಿ ಶಾಸನಗಳ ಅಭ್ಯಾಸ ವ್ಯರ್ಥವೆ. ಆದರೆ ಇತ್ತೀಚೆಗೆ ಕೆಲವೆಡೆ ಭಾಷಾ ಪ್ರಭು ತ್ವಕ್ಕೆ ಮಹತ್ವವಿದ್ದಂತಿಲ್ಲ. ಭಾಷೆಗಳ ಸಮರ್ಪಕ ಜ್ಞಾನವಿಲ್ಲದೆ ಕಲಿಯುವದಂತೂ ಸರಿಯೇ. ಕಲಿಸು ವವರೂ ಇದ್ದಾರೆ ಎಂಬುದನ್ನು ನಾನು ವಿಷಾದದಿಂದ ಗಮನಿಸಿದ್ದೇನೆ. ಇದರಿಂದ ಏನನ್ನೂ ಸಾಧಿಸಲಾಗುವ ದಿಲ್ಲ ಎಂದು ನಾನು ಹೇಳಿದರೆ ಅಂಥವರು ನನ್ನನ್ನು ಕ್ಷಮಿಸುತ್ತಾರೆಂದು ತಿಳಿದುಕೊಂಡಿದ್ದೇನೆ.

ಬೇರೆಲ್ಲ ರಾಜ್ಯಗಳಿಗಿಂತ ಕರ್ನಾಟಕದಲ್ಲಿ Epigraphy consciousness ಹೆಚ್ಚಿಗೆ ಇದೆ ಎಂದು ನನ್ನ ಭಾವನೆ. ಇದರ ಜೊತೆಗೆ ಭಾಷಾಜ್ಞಾನ ಹೆಚ್ಚ ಬೇಕು. ನಮ್ಮ ಸಾಹಿತ್ಯ, ಪರಂಪರೆ, ಧರ್ಮ ಇವುಗಳ ಪೂರ್ಣ ಪರಿಚಯ ಬೇಕು. ಇವುಗಳನ್ನು ಬೆಳೆಸುವ ಕಾಲವೀಗ ಬಂದಿದೆ. ಶಾಸನವಿಜ್ಞಾನವನ್ನು ಕಲಿಯುವ ವಿದ್ಯಾರ್ಥಿಗೆ ಈ ಭಾಷೆಗಳಲ್ಲಿ ಒಂದು ಪಠ್ಯಕ್ರಮ

ಆತ್ಮಗತ್ಯವಾಗುತ್ತದೆ ಎಂಬುದನ್ನು ಸಂಬಂಧಪಟ್ಟವರು ಲಕ್ಷ್ಯದಲ್ಲಿಡುತ್ತಾರೆಂದು ನಾನು ನಂಬಿದ್ದೇನೆ.

ನಮ್ಮ ನಾಡಿನ ಐದಾರು ವಿಶ್ವವಿದ್ಯಾಲಯಗಳ ಪೈಕಿ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಹಳೆಯವು. ಇತಿಹಾಸ ಸಂಶೋಧನೆಯ ಕಾರ್ಯ ಹೆಚ್ಚಾಗಿ ನಡೆದುದು ಇಲ್ಲಿಯೇ. ಇಲ್ಲಿ ಮತ್ತು ಇತ್ತೀಚೆಗೆ ಸ್ಥಾಪಿತವಾದ ವಿಶ್ವವಿದ್ಯಾಲಯಗಳಲ್ಲಿ ಅನೇಕ ವಿದ್ಯಾರ್ಥಿಗಳು Ph. D. ಪದವಿಗಾಗಿ ಅನೇಕ ಐತಿಹಾಸಿಕ ವಿಷಯಗಳನ್ನು ಆರಿಸಿಕೊಳ್ಳುತ್ತಾರೆ. ನನ್ನಲ್ಲಿ ಸರಿಯಾದ ಅಂಕಿ ಅಂಶಗಳು ಇಲ್ಲದಿದ್ದರೂ ನಾನು ನೋಡಿದಂತೆ ನಮ್ಮ ವಿಶ್ವವಿದ್ಯಾಲಯಗಳಲ್ಲಿಯ ಸಂಶೋಧನೆಗೆ ಹೆಚ್ಚಾಗಿ ಶಾಸನಗಳೇ ಆಧಾರ. ಏಕೆಂದರೆ ಈ ಸಾಮಗ್ರಿ ವಿಪುಲವಾಗಿ ನಮ್ಮಲ್ಲಿಯೇ ದೊರೆಯುತ್ತದೆ. ಹೀಗಾಗಿ ನಮ್ಮಲ್ಲಿ ನಡೆಯುವ ಬಹುಪಾಲು ಸಂಶೋಧನೆಗಳು ೧೪-೧೫ನೇ ಶತಮಾನಕ್ಕೆ ಸೀಮಿತವಾಗಿರುತ್ತವೆ. ಆದರೆ ಕರ್ನಾಟಕದ ಇತಿಹಾಸ ಅದರಾಚೆಗೂ ಇದೆಯಲ್ಲ. ನಮ್ಮಲ್ಲಿ ಕೆಲ ವಿಶ್ವವಿದ್ಯಾಲಯಗಳಲ್ಲಿ ಮಧ್ಯಕಾಲೀನ ಮತ್ತು ಅರ್ವಾಚೀನ ಇತಿಹಾಸಗಳನ್ನು ಕಲಿಸುವ ವ್ಯವಸ್ಥೆಯಿದೆ. ಆದರೆ ಈ ಕ್ಷೇತ್ರಗಳಲ್ಲಿ ಸಂಶೋಧನೆ ಬಹಳಷ್ಟು ಕಡಿಮೆ ಎಂದು ನನಗನಿಸುತ್ತದೆ. ಶಾಸನಗಳಂತೆ ಈ ಕ್ಷೇತ್ರದಲ್ಲಿ ತಯಾರಿ ಸಾಮಗ್ರಿ (ready material) ಸಿಗದಿರುವದು ಇದಕ್ಕೆ ಒಂದು ಕಾರಣವಾದರೆ ಭಾಷಾಜ್ಞಾನದ ಅಭಾವವೂ ಇನ್ನೊಂದು ಕಾರಣ. ಆದರೆ ಸಾಮಗ್ರಿಗೆ ಏನೂ ಕೊರತೆಯಿಲ್ಲ. ಉದಾಹರಣೆಗೆ ಬಹಮನಿ, ಆದಿಲಶಾಹಿ ಸಾಮ್ರಾಜ್ಯಗಳ ಅಭ್ಯಾಸಕ್ಕೆ ವಿಪುಲವಾದ ಅವಕಾಶವಿದೆ. ಆದರೆ ಬಹಳಷ್ಟು ಸಾಮಗ್ರಿ ಇರುವದು ಪರ್ಶಿಯನ್ ಮತ್ತು ಅರೆಬಿಕ್ ಭಾಷೆಗಳಲ್ಲಿ. ಈ ಭಾಷೆಗಳಲ್ಲಿ ನುರಿತ ಇತಿಹಾಸ ಸಂಶೋಧಕರು ನಮ್ಮಲ್ಲಿ ಇಲ್ಲ ಎಂದು ಹೇಳಿದರೂ ಸಲ್ಲುತ್ತದೆ. ಅದೇ ರೀತಿಯಾಗಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಪೋರ್ತುಗೀಜರ ಇತಿಹಾಸ. ಇದಕ್ಕೆ ಸಂಬಂಧಿಸಿದಂತೆ ಸಾಮಗ್ರಿ ಇರುವದು ಹೆಚ್ಚಾಗಿ ಪೋರ್ತುಗೀಜ್ ಭಾಷೆಯಲ್ಲಿ. ಈ ಭಾಷೆಯನ್ನು ಬಲ್ಲ ನುರಿತ ಇತಿಹಾಸ ಸಂಶೋಧಕರು ಕಡಿಮೆ. ಆದರೆ ಇದರಂತೆ ಕರ್ನಾಟಕದಲ್ಲಿ ಮರಾಠರ ಆಡಳಿತ. ಇದಕ್ಕೆ ಸಂಬಂಧಿಸಿದಂತೆ ಸಹಸ್ರಾರು ಕಾಗದ ಪತ್ರಗಳು ಮೋಡಿಲಿಪಿಯಲ್ಲಿವೆ. ಆದರೆ ಈ ಲಿಪಿಯನ್ನು ಓದಬಲ್ಲ ಜನ ಎಷ್ಟು ಇದ್ದಾರೆ? ಹೀಗಾಗಿ ಈ ಕ್ಷೇತ್ರಗಳು ಸಂಶೋಧನೆಯ ದೃಷ್ಟಿಯಿಂದ ತೆರವಾಗಿಯೇ ಇವೆ. ಶಾಶ್ವತ ಕಲ್ಲುಗಳ ಮೇಲೆ ಬರೆದ ಶಾಸನಗಳೇ ನಶಿಸಿ ಹೋಗುತ್ತವೆ ಎಂದಾಗ ಈ ಕಾಗದ ಪತ್ರಗಳ ಗತಿ ಏನು ? ಕರ್ನಾಟಕದಲ್ಲಿ ಇತಿಹಾಸ ಸಂಶೋಧನೆಯು ಹೀಗೆ ಒಗ್ಗಾಲಿ ಅಥವಾ ಒಪ್ಪಾರಿಯಾಗಿದೆ. ಹೆಚ್ಚು ಮಹತ್ವ ಪ್ರಾಚೀನ ಮತ್ತು ತದನಂತರದ ಕಾಲಕ್ಕೆ ದೊರಕಿದೆ. ಅರ್ವಾಚೀನ ಇತಿಹಾಸ ಸಂಶೋಧನೆಗಾಗಿ ತೀವ್ರ ಗಮನವನ್ನು ಕೊಡುವದು ಅಗತ್ಯವಾಗಿದೆ. ಆದರೆ ಇವಕ್ಕೆಲ್ಲ ಭಾಷಾಜ್ಞಾನವೇ ಮೂಲ. ಆಯಾ ಭಾಷೆಗಳಲ್ಲಿ ಪರಿಣತಿ, ಆಯಾ ಕ್ಷೇತ್ರಗಳಲ್ಲಿ ಸಂಶೋಧನೆಗೆ ನೆರವನ್ನು ಕೊಡುತ್ತವೆ. ಮೂಲಸಾಮಗ್ರಿಯನ್ನು ಮೂಲದಲ್ಲಿಯೇ ಓದಿ ಸಂಶೋಧನೆ ಮಾಡುವ ಸಾಫಲ್ಯವೇ ಬೇರೆ. ಭಾಷಾಂತರ ಅಥವಾ ಇನ್ನಿತರ ಎರವಲು ಸರಕಿನ ಮೇಲೆ ನಡೆಸುವ ಸಂಶೋಧನೆಯ ಥಳುಕೇ ಬೇರೆ. ನನ್ನ ವಿನಮ್ರ ಸೂಚನೆಯೆಂದರೆ ಮೊದಲು ಆಯಾ ಭಾಷೆಗಳಲ್ಲಿ ಸೂಕ್ತ ತರಬೇತಿ ಬೇಕು, ನಂತರ ಸಂಶೋಧನೆ.

೩. **ಇತಿಹಾಸ ಗ್ರಂಥ ರಚನೆ :** ಕರ್ನಾಟಕದ ಇತಿಹಾಸದ ರಚನೆಯಲ್ಲಿಯೂ ಅಸಮಾಧಾನಕರ ಪರಿಸ್ಥಿತಿಯೇನಿಲ್ಲ ಎಂದು ನನಗನಿಸುತ್ತದೆ. ಕಳೆದ ಹಲವಾರು ದಶಕಗಳಿಂದಲೂ ರಾಜಮನೆತನಗಳ ಅಥವಾ ಸಮಗ್ರ ಕರ್ನಾಟಕದ ಇತಿಹಾಸ ರಚನೆ ಪ್ರಯತ್ನಗಳು ನಡೆದೇ ಇವೆ. ಡಾ॥ ಫ್ಲೀಟ್ ಅವರು ೧೮೮೬ ರಷ್ಟು ಪೂರ್ವದಲ್ಲಿ ತಮ್ಮ Dynasties of Canarese Districtsದ ಮುಖಾಂತರ ಕರ್ನಾಟಕದ ಪ್ರಮಾಣಬದ್ಧವಾದ ಇತಿಹಾಸದ ರಚನೆಗೆ ನಾಂದಿ ಹಾಡಿದರು. ಆ ಗ್ರಂಥದಲ್ಲಿಯ ಕೊರತೆಗಳನ್ನು ತುಂಬುವಂತೆ ರೈಸರು Mysore and Coorg from Inscriptions ಎಂಬ ಗ್ರಂಥವು ಸ್ವಲ್ಪಮಟ್ಟಿಗೆ ಪೂರಕವೆನಿಸಿತು. ಇವೇನು ಪರಿಪೂರ್ಣ ಗ್ರಂಥಗಳಲ್ಲದಿದ್ದರೂ poineer ಎಂಬ ದೃಷ್ಟಿಯಿಂದ ಈಗಲೂ ಅವುಗಳಿಗೆ ಮಹತ್ವವಿದೆ. ಇಲ್ಲಿಯವರೆಗೆ ಕರ್ನಾಟಕದಲ್ಲಾಳಿದ ಎಲ್ಲ ಪ್ರಮುಖ ರಾಜಮನೆತನಗಳ ಬಗ್ಗೆಯೂ ಗ್ರಂಥಗಳಿವೆ.

Karnataka through the Ages ಮತ್ತು History of Karnataka ಇವು ಕರ್ನಾಟಕದ ಸಮಗ್ರ ಚಿತ್ರಣವನ್ನು ಕೊಡಲು ಹವಣಿಸುತ್ತವೆ. ಆದರೆ ಇವುಗಳಲ್ಲಿಯೂ ಲೋಪಗಳು ಇಲ್ಲದಿಲ್ಲ. ಒಂದು ಸಂತೋಷದ ಸಂಗತಿಯೆಂದರೆ, ನಮ್ಮಲ್ಲಿ ಕನ್ನಡದಲ್ಲಿ ಕರ್ನಾಟಕದ ಚರಿತ್ರೆಯನ್ನು ಬರೆಯುವ ಹವ್ಯಾಸವು ಬಹು ಹಿಂದಿನಿಂದಲೇ ಪ್ರಾರಂಭವಾಗಿದೆ. ವೆಂಕಟರಂಗೊ ಕಟ್ಟಿಯವರ ಗೆಝೆಟಿಯರ್ ಭಾಷಾಂತರವನ್ನು ಬಿಟ್ಟರೂ ಸ್ವತಂತ್ರವಾಗಿ ಪೂರ್ಣಪ್ರಮಾಣದ ಚರಿತ್ರೆಯನ್ನು ಬರೆಯಲು ಮೊದಲು ಮಾಡಿದವರು ರಾ. ಹ. ದೇಶಪಾಂಡೆಯವರು (೧೯೨೬). ಇವರ ಮೊದಲ ಎರಡು ಸಂಪುಟಗಳು ಹನ್ನೆರಡನೆಯ ಶತಮಾನದವರೆಗಿನ ಚರಿತ್ರೆಯನ್ನೊಳಗೊಂಡಿದ್ದು ಮುಂದಿನ ಇತಿಹಾಸದ ಹಸ್ತಪ್ರತಿ ಬೆಳಕು ಕಾಣಲೇ ಇಲ್ಲ. ವಿಶೇಷವೆಂದರೆ ಬರೀ ಇತಿಹಾಸ ರಚನೆ ಇವರ ಉದ್ದೇಶವಾಗಿರದೆ, ತಮ್ಮ ತಾಯ್ನಾಡಿನ ಅಭಿವೃದ್ಧಿಗೋಸ್ಕರವಾಗಿ ಕನ್ನಡದ ಏಳ್ಗೆಯ ಸ್ಪಷ್ಟ ಉದ್ದೇಶದಿಂದ ಈ ಸಾಹಸಕ್ಕೆ ಕೈ ಹಾಕಿದರು. ರಾಜಪುರೋಹಿತರ 'ಕರ್ನಾಟಕದ ಇತಿಹಾಸ', ಆಲೂರು ವೆಂಕಟರಾಯರ 'ಕರ್ನಾಟಕದ ಗತವೈಭವ' ಇವು ಕನ್ನಡಿಗರ ಮೇಲಿನ ಅಭಿಮಾನದಿಂದ ಬರೆದವುಗಳು. ಧಾರವಾಡದ ಕರ್ನಾಟಕ ಇತಿಹಾಸ ಮಂಡಳದ ಮಹತ್ವಾಕಾಂಕ್ಷೆ ಯೋಜನೆ ಒಂದು ಸಂಪುಟದ ಪ್ರಕಟಣೆಯಲ್ಲಿಯೇ ಮುಕ್ತಾಯವಾಯಿತು. ಇತ್ತೀಚೆಗೆ ಬಂದ 'ಕರ್ನಾಟಕದ ಇತಿಹಾಸ ದರ್ಶನ' ಸ್ವಲ್ಪಮಟ್ಟಿಗೆ ಕರ್ನಾಟಕದ ಸಮಗ್ರ ಚಿತ್ರಣವನ್ನು ಕೊಡಲು ಪ್ರಯತ್ನಿಸುತ್ತಿದೆ.

ಇಷ್ಟಿದ್ದರೂ ಪರಿಪೂರ್ಣವೆನಿಸಿಕೊಳ್ಳುವ ಗ್ರಂಥ ಇನ್ನೂ ಬಂದಿಲ್ಲ. ಬಹುಶಃ ಬಾರಲೂ ಆಗದು. ಪ್ರತಿಯೊಬ್ಬ ಸಂಶೊಧಕ ಲೇಖಕನಿಗೂ ಒಂದು ದೃಷ್ಟಿಕೋನ, ಅಭಿರುಚಿ,ಬೇಕು ಬೇಡಗಳು, equipment ಇರುತ್ತವೆ. ಅವಕ್ಕನುಗುಣವಾಗಿ ಅವನು ತನ್ನ ಗ್ರಂಥವನ್ನು ರಚಿಸುತ್ತಾನೆ. ಓದುಗನಿಗೂ ತನ್ನದೇ ದೃಷ್ಟಿಕೋನ ಅಭಿರುಚಿ, equipment ಇರುತ್ತವೆ. ಅವಕ್ಕನುಗುಣವಾಗಿಯೇ ಅವನು ಪುಸ್ತಕವನ್ನು ಪರಿಶೀಲಿಸುತ್ತಾನೆ. ಹೀಗಾಗಿ ಯಾವುದೊ ಪುಸಕ್ತದಲ್ಲಿ ಅವನಿಗೆ ಕೊರತೆ ಕಾಣಬಹುದು. ಹೀಗಾಗಿಯೇ ಹೊಸ ಹೊಸ ಪ್ರಯತ್ನಗಳು ನಡೆಯುತ್ತವೆ ಮತ್ತು ನಡೆಯಬೇಕು. ನಮ್ಮ ನಾಡಿನ ಬಗ್ಗೆ ಎಷ್ಟು ಪುಸ್ತಕಗಳು ಬಂದರೂ ಕಡಿಮೆಯೆ.

ಇತಿಹಾಸ ಸಂಶೋಧನೆ, ಇತಿಹಾಸ ಗ್ರಂಥರಚನೆ ಮತ್ತು ಇತಿಹಾಸ ಶಿಕ್ಷಣ ಇವು ಅನ್ಯೋನ್ಯ ಸಂಬಂಧವುಳ್ಳವುಗಳು. ಸಂಶೋಧನೆ ಚೆನ್ನಾಗಿದ್ದರೆ ಗ್ರಂಥರಚನೆ ಚೆನ್ನಾಗಿ ಆಗುತ್ತದೆ. ತನ್ಮೂಲಕ ಇತಿಹಾಸ ಶಿಕ್ಷಣವೂ ಫಲಪ್ರದವಾಗುತ್ತದೆ.

ಇತಿಹಾಸ ಒಂದು ನಿರಂತರ ಪ್ರಕ್ರಿಯೆ. ಕಾಲಚಕ್ರ ಉರುಳುತ್ತಲೇ ಇರುತ್ತದೆ. ಘಟನೆಗಳು ನಡೆಯುತ್ತಲೇ ಇರುತ್ತವೆ. ಗಮನಾರ್ಹವಾದವುಗಳನ್ನು ಎತ್ತಿಕೊಂಡು ಅವುಗಳನ್ನು ವಿವರಿಸಿ ಆ ಸಮಾಜದ ಮುನ್ನಡೆಗೆ ಪ್ರಯೋಜನಕಾರಿಯಾಗುವಂತೆ ಮಾಡುವದೇ ಇತಿಹಾಸಕಾರನ ಕೆಲಸ. ಆ ಕೆಲಸ ನಿರಂತರವಾಗಿ ನಡೆಯಲೆಂದು ಆಶಿಸುತ್ತೇನೆ.

'ಕರ್ನಾಟಕದ ಇತಿಹಾಸ ಅಕಾದೆಮಿ' ಹೊಸದಾಗಿ ರೂಪಗೊಂಡ ಸಂಸ್ಥೆ, ಹೊಸ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡ ಸಂಸ್ಥೆ. ರಾಜ್ಯದ ತುಂಬೆಲ್ಲ ಖಾಸಗಿ ಸಂಸ್ಥೆಯೊಂದು ಪರೀಕ್ಷೆಗಳನ್ನು ನಡೆಸುವದು ಹೊಸ ಉಪಕ್ರಮವೆ. ಅದು ಅಷ್ಟೊಂದು ಜನಪ್ರಿಯವಾಗಿರುವದು ಆಶ್ಚರ್ಯವೆ. ಇತಿಹಾಸದ ಅಭ್ಯಾಸಕ್ಕೆ ಉತ್ತಮ ಭವಿಷ್ಯವಿದೆ ಎಂಬುದರ ಸೂಚನೆಯಿದು. ಅಕಾದೆಮಿ ಇದರ ಪ್ರಯೋಜನ ಪಡೆದು ಜೊತೆಗೆ ಇನ್ನೊಂದೆರಡು ಕಾರ್ಯಕ್ರಮಗಳನ್ನು ಹಾಕಿಕೊಂಡು ಇತಿಹಾಸದ ಅಭ್ಯಾಸ, ಸಂಶೋಧನೆ ಮುಂನ್ನಡೆಯಲು ಪ್ರಚೋದಿಸುತ್ತದೆಂದು ಆಶಿಸುತ್ತೇನೆ.

ಈಗ ನಡೆಸುತ್ತಿರುವ ಪರೀಕ್ಷೆಗಳ ಜೊತೆಗೆ ವರ್ಷಕ್ಕೊಮ್ಮೆ ನಾಲ್ಕಾರು ದಿನಗಳದೊಂದು Refresher course ನಡೆಸುವ ಪ್ರಯತ್ನವನ್ನು ಅದು ಮಾಡಬೇಕು. ಬೆಂಗಳೂರಿನಲ್ಲಿ ಮತ್ತು ಇತರ ಕೇಂದ್ರಗಳಲ್ಲಿ ಅವಶ್ಯಕ ಭಾಷೆಗಳಲ್ಲಿ ತರಬೇತಿಗಾಗಿ ಅಲ್ಪಾವಧಿಯ ಕೋರ್ಸ್

ಗಳನ್ನು ನಡೆಸುವ ಸಾಧ್ಯತೆಯನ್ನು ಪರಿಶೀಲಿಸಬೇಕೆಂದು ಸೂಚಿಸಬಯಸುತ್ತೇನೆ.

ಕೊನೆಯ ಒಂದು ಮಾತೆಂದರೆ, ನನ್ನ ಈ ಭಾಷಣ ಕರ್ನಾಟಕದಲ್ಲಿ ಇತಿಹಾಸದ ಬಗೆಗಿನ ಸಮಸ್ಯೆಗಳೆಲ್ಲವುಗಳ ಸಮಗ್ರ ಪರಿಶೀಲನೆಯಲ್ಲವೆಂದು ಸ್ಪಷ್ಟಪಡಿಸಬಯಸುತ್ತೇನೆ. ಪುರಾತತ್ವ ಮತ್ತು ವಾಸ್ತುಶಿಲ್ಪವಿಷಯಗಳನ್ನು ಇಲ್ಲಿ ಎತ್ತಲಾಗಿಲ್ಲ. ಅದಕ್ಕಿಲ್ಲಿ ಸಮಯವೂ ಇಲ್ಲ, ಅಗತ್ಯವೂ ಇಲ್ಲ.

ಈ ಅಕಾದೆಮಿಯ ಮೊದಲ ಪರಿಷತ್ತಿನ ಅಧ್ಯಕ್ಷರಾಗಿದ್ದ ಡಾ॥ ಎಂ. ಚಿದಾನಂದಮೂರ್ತಿಯವರು ಇಲ್ಲಿ ಆಗಬೇಕಾದ, ಮಾಡಬೇಕಾದ ಕಾರ್ಯಗಳನ್ನು ವಿವರವಾಗಿ ಚರ್ಚಿಸಿದ್ದಾರೆ. ನಾನು ಕೆಲವು ಸಮಸ್ಯೆಗಳ ಬಗ್ಗೆ ನನಗೆ ತೋಚಿದ ಕೆಲವು ವಿಚಾರಗಳನ್ನು ಇಲ್ಲಿ ವ್ಯಕ್ತಪಡಿಸಲು ಯತ್ನಿಸಿದ್ದೇನೆ. ಈ ಅವಕಾಶವನ್ನು ಒದಗಿಸಿದ ಅಕಾದೆಮಿಯ ಪದಾಧಿಕಾರಿಗಳಿಗೆ ಮತ್ತೊಮ್ಮೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಮಾತುಗಳನ್ನು ಸಮಾಧಾನದಿಂದ ಕೇಳಿದ ನಿಮಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಡಾ॥ ಅ. ಸುಂದರ

ಸನ್ನತಿಯ ಎರಡು ಗಮನಾರ್ಹ ಶಿಲ್ಪಗಳು

ಕಪಟರಾಳ ಕೃಷ್ಣರಾವ್ ಅವರಿಂದ ಮೊದಲು ಗಮನಿಸಲ್ಪಟ್ಟು[1], ಅನಂತರ ಮರೆತುಹೋಗಿದ್ದ ಸನ್ನತಿಯ ಜನವಸತಿಯಿದ್ದ ಪ್ರಾಕ್ಚಾರಿತ್ರಿಕ ಎಡೆಯನ್ನು ಎಸ್. ನಾಗರಾಜು ಅವರು ಮರುಶೋಧಿಸಿ (೧೯೬೪) ಬೌದ್ಧಮೂರ್ತಿ, ಆಲಂಕಾರಿಕ ಪಟ್ಟಿಕೆ, ಶಾಸನ, ಪ್ರಾಚೀನ ಅವಶೇಷ ಸಂಪುಟ ಹಾಗೂ ಇಟ್ಟಿಗೆಯಲ್ಲಿ ನಿರ್ಮಾಣಗೊಂಡ ವಿಶಾಲ ಕೋಟೆಗಳನ್ನು ಬೆಳಕಿಗೆ ತಂದನಂತರವೂ ಇಲ್ಲಿಯ ಕೆಲವು ಗಮನಾರ್ಹ ಪ್ರಾಚೀನ ಶಿಲ್ಪಾವಶೇಷಗಳು ಮತ್ತು ಶಾಸನಗಳನ್ನು ಕುರಿತ ಬರಹಗಳನ್ನು ಪ್ರಕಟಿಸಲಾಗಿದೆ.[2] ೧೯೮೬ರಲ್ಲಿ ಸ್ತೂಪ ಮತ್ತು ಜನವಸತಿಯಿದ್ದ ಎಡೆಯ ಭಾಗವೊಂದರ ಉತ್ಖನನ ಕೈಗೊಳ್ಳಲಾಗಿದೆ.[3]

೧೯೮೬ರಲ್ಲಿ ರಾಜ್ಯ ಪುರಾತತ್ತ್ವ ಮತ್ತು ವಸ್ತು ಸಂಗ್ರಹಾಲಯ ಇಲಾಖೆಯ ನಿರ್ದೇಶಕನಾಗಿದ್ದು, ಗುಲ್ಬರ್ಗಾದ ಸರ್ಕಾರಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿರುವ ಸನ್ನತಿಯ ನಿವೇಶನದಲ್ಲಿ ದೊರೆತ ಶಿಲ್ಪಾವಶೇಷಗಳ ಅಧ್ಯಯನವನ್ನು ನಾನು ಕೈಗೊಂಡಿದ್ದ ಸಂದರ್ಭದಲ್ಲಿ, ಅಲ್ಲಿಯ ಎರಡು ಶಿಲ್ಪಾವಶೇಷಗಳು ನನ್ನ ಗಮನ ಸೆಳೆದವು. ಅವುಗಳೆಂದರೆ, ಉದರ ಮತ್ತು ಸೊಂಟದ ಭಾಗಗಳನ್ನು ಮಾತ್ರ ಉಳ್ಳ ಏಕಶಿಲಾ ಯಕ್ಷನ(?) ತುಂಡು ಅವಶೇಷ ಮತ್ತು ಅಪರೂಪದ ಶೈಲಿಯ ಮಿಥುನ (ದಂಪತಿ) ಶಿಲ್ಪದ ಒಡೆದ ಭಾಗ. ಇವೆರಡೂ ಪೂರ್ಣ ಉಬ್ಬಿನಾಕಾರದ ಶಿಲ್ಪಗಳು. ಈಗಾಗಲೇ ಗಮನಿಸಲಾಗಿರುವ ಬೌದ್ಧ ಶಿಲ್ಪಾವಶೇಷಗಳಲ್ಲಿ ಅವಶೇಷ ಸಂಪುಟ, ಬುದ್ಧಪಾದ, ಬೌದ್ಧ ಕತೆ

---

1 ಕರ್ನಾಟಕ ಸಂಸ್ಕೃತಿಯ ಸಂಶೋಧನೆ (ಲೇಖನಗಳ ಸಂಗ್ರಹ), ಮೈಸೂರು, ೧೯೭೦ : 'ಶ್ರೀ ಚಂದ್ರಕಲಾ ಪರಮೇಶ್ವರಿ'

2 M. Sheshadri : 'Buddhist Monuments in Sannati', *The Quarterly Journal of the Mythic Society*, Vol. LVI, Nos. 1 to 4, 1965, pp. 35-37 ; 'Buddhist Monuments in Mysore', *Artibus Asiae*, Vol. XXXIV, No. 213, 1972, pp. 169-170

P.B. Desai : 'A New Buddhist Centre', *Journal of Karnataka University (Social Sciences)*, Vol. IV, 1968, pp. 3-8

M. S. Nagaraja Rao (Ed.) : *Progress of Archaeology in Karnataka (1956-72)*, Mysore, 1978, pp. 35-36 : 'Brahmi Inscriptions and their bearing on the Great Stupa at Sannati', *Indian Epigraphy : its bearing on the History of Art*, Varanasi, 1985, pp. 41-45 ; 'Sculptural Art in Sannati', *Kusumanjali* (C. Sivarama Murti Commemoration Volume), New Delhi, 1985

3 A. Sundara : 'Excavations in Sannati–1986-87', *Puratattva*, Vol. 17, 1987

ಗಳನ್ನು ಬಿಂಬಿಸುವ ಆಲಂಕಾರಿಕ ಪಟ್ಟಿಕೆಗಳು ಹಾಗೂ ವಿನೋದದಲ್ಲಿರುವ ದಾನಿ–ದಂಪತಿಗಳನ್ನು ಬಿಂಬಿಸುವ ಶಾಸನ ಸಹಿತವಾದ ಆಲಂಕಾರಿಕ ಪಟ್ಟಿಕೆಗಳು, ಪೂರ್ಣ ಉಬ್ಬಿನಾಕಾರದ ಕುಬ್ಜ ಯಕ್ಷರು, ರೆಕ್ಕೆಯುಳ್ಳ ಕುದುರೆ ಮತ್ತಿತರ ಪ್ರಾಣಿ, ಇತ್ಯಾದಿಗಳು ಸರ್ವಶ್ರುತವಾಗಿವೆ. ಈಗ ಇಲ್ಲಿ ಗಮನಿಸಲಾಗಿರುವ ಎರಡು ಶಿಲ್ಪಗಳು ಗಾತ್ರದಲ್ಲಿ ಸಣ್ಣವಾದರೂ ವಸ್ತು ಮತ್ತು ವೈವಿಧ್ಯಗಳಲ್ಲಿ ಭಿನ್ನವೆನಿಸಿವೆ.

ಯಕ್ಷ(?)ಶಿಲ್ಪ : ಚಿತ್ರ ೧ರಲ್ಲಿ ಕಾಣುವುದು ವಾಸ್ತವವಾಗಿಯೂ ಏಕಶಿಲಾ ಯಕ್ಷನ ತುಂಡು ಶಿಲ್ಪ. ಇದರ ಉದರ ಮತ್ತು ಸೊಂಟದ ಭಾಗವು ಮಾತ್ರ ಉಳಿದುಕೊಂಡಿದ್ದು, ಉದರದ ಭಾಗವು ಮುಕ್ಕಾಗಿದೆ. ಎದೆಯ ಮೇಲ್ಭಾಗ ಮತ್ತು ಮಧ್ಯತೊಡೆಯ ಕೆಳಭಾಗದ ಅವಶೇಷಗಳು ನಷ್ಟಗೊಂಡಿವೆ. ಆದರೂ ಈಗ ಉಳಿದಿರುವ ಅವಶೇಷವು ಈ ಶಿಲ್ಪವು ನಿಂತಿರುವ ಭಂಗಿಯಲ್ಲಿರುವುದನ್ನು ಖಚಿತಪಡಿಸುತ್ತದೆ. ಎಡಗೈಯನ್ನು ಸೊಂಟದ ಮೇಲೆ ಇರಿಸಿಕೊಂಡಂತೆ ಮೂಡಿಸಲಾಗಿದೆ. ಹಾಗೆಯೇ, ಶಿಲ್ಪವು ಕಟಿಬಂಧ ಸಹಿತವಾದ 'ಧೋತ್ರ'ವನ್ನು ಧರಿಸಿರುವಂತೆ ಬಿಡಿಸಿದ್ದು, ಪಾರ್ಶ್ವದಲ್ಲಿ ಇಳಿಬಿದ್ದಿರುವ ಕಟಿಬಂಧವು ನೆರಿಗೆಗಳಿಂದ ಕೂಡಿದೆ.

ಕಟಿಬಂಧವು ಜೋತುಬಿದ್ದಿರುವ ಗುಡಾಣದಂತಹ ಹೊಟ್ಟೆಗೆ ಕಟ್ಟು ಬಿಗಿದಿರುವಂತಿದೆ. ಬೊಜ್ಜುದೇಹವು ಗಮನಸೆಳೆಯುವಂಥಾದ್ದು. ಹಸ್ತವು ಉಬ್ಬಿಕೊಂಡಿದೆಯಲ್ಲದೆ, ಬೆರಳುಗಳು ದಪ್ಪವಾಗಿವೆ ಹಾಗೂ ಉಗುರುಗಳನ್ನು ಸ್ಪಷ್ಟವಾಗಿ ಬಿಡಿಸಲಾಗಿದೆ. ಮುಂಬದಿಯಲ್ಲಿ ಕಾಣುವ ಧೋತ್ರವು ವಿಶಿಷ್ಟತೆ ರಹಿತವಾದ ಅಸ್ಪಷ್ಟ ನೆರಿಗೆಗಳಿಂದ ಕೂಡಿದೆ.

ಮಿಥುನ (ದಂಪತಿ) ಶಿಲ್ಪ : ಚಿತ್ರ ೨ರಲ್ಲಿ ಕಾಣುವುದು ದಾನಿ–ದಂಪತಿಗಳ ಶಿಲ್ಪವೆಂದು ವ್ಯಕ್ತಪಟ್ಟಿದ್ದು, ಭೂಷಣವಾಗಿ ಆರಾಮ ಭಂಗಿಯಲ್ಲಿ ನಿಂತಿರುವಂತೆ ಇದೆ. ಆದರೆ ಸ್ತ್ರೀಯನ್ನು ತೋರಿಸುವ ಭಾಗ ಮತ್ತು ಪುರುಷನ ಕುತ್ತಿಗೆಯ ಮೇಲ್ಭಾಗ, ಎಡಭುಜ, ಬಲಗೈ ಹಾಗೂ ಮೊಣಕಾಲಿನ ಕೆಳಭಾಗಗಳು ಒಡೆದು ಕಾಣೆಯಾಗಿವೆ. ಆದಾಗ್ಯೂ ಈ ಶಿಲ್ಪದ ಮೂಲ ಸ್ವರೂಪವನ್ನು ಈಗ ಲಭ್ಯವಿರುವ ಅವಶೇಷದಿಂದಲೇ ತಿಳಿದುಕೊಳ್ಳಬಹುದಾಗಿದೆ. ಪುರುಷನು ತನ್ನ ಬಲ ತೋಳನ್ನು ಸ್ತ್ರೀಯಳ ಸೊಂಟದ ಹಿಂಬದಿಯನ್ನು ಬಳಸಿಕೊಂಡು ಆಕೆಯ ಬಲಭುಜದ ಮೇಲೆ ಇರಿಸಿದಂತಿದೆ. ಹಾಗೆಯೇ, ಸ್ತ್ರೀಯು ಅಭರಣಯುಕ್ತವಾದ ಜೋಡಿಬಳೆಗಳನ್ನು ಧರಿಸಿದ ತನ್ನ ಎಡಗೈಯನ್ನು ಪುರುಷನ ಬೆನ್ನಿನ ಮೇಲೆ ನಾಜೂಕಾಗಿ ಇರಿಸಿದ್ದಾಳೆ. ಪುರುಷನ ಎದೆಯು ನಗ್ನವಾಗಿದೆ. ಆತನು ಕಟಿವಸ್ತ್ರಸಹಿತವಾದ ಧೋತ್ರವನ್ನು ಧರಿಸಿದ್ದು, ಅದು ಆಕರ್ಷಕ ನೆರಿಗೆಗಳಿಂದ ಕೂಡಿದೆ. ಆ ವಸ್ತ್ರವು ಮುಂಬದಿಯಲ್ಲಿ ಮಾಲೆಯಾಕಾರದಲ್ಲಿ ಜೋತುಬಿದ್ದಿದ್ದು, ಪಾರ್ಶ್ವದಲ್ಲಿ ಉದ್ದವಾಗಿ ಕುಣಿಕೆಗಳಿಂದ ಬಂಧಿಸಿದಂತೆ ಅಲಂಕರಿಸಲ್ಪಟ್ಟಿದೆ. ಬೆನ್ನುಹುರಿಯಲ್ಲಿ ಕಾಣುವ ಲಂಬರೇಖೆಯಲ್ಲಿಯ ತಗ್ಗು ಆತನು ಆರೋಗ್ಯವಂತನೂ ದೃಢಕಾಯನೂ ಆದವನೆಂಬುದನ್ನು ವ್ಯಕ್ತಪಡಿಸುತ್ತದೆ. ದುಂಡನೆಯ ಮತ್ತು ಆಳವಾದ ನಾಭಿಯುಳ್ಳ ಸಮತಟ್ಟಾದ ಉದರ ಮತ್ತು ದೇಹದ ವಿವಿಧ ಭಾಗಗಳು–ಅದರಲ್ಲೂ ಮುಖ್ಯವಾಗಿ ಪೃಷ್ಠಗಳು ಶಿಲ್ಪದ ನಿಲುವಿನ ಭಂಗಿಯು ಪ್ರಯುಕ್ತ ಲಾಸ್ಯಪ್ರಧಾನವಾಗಿ ತೋರುತ್ತವೆ. ಉಡುಪಿನ ಸರಳ ವಿನ್ಯಾಸದಿಂದಾಗಿ ಮನುಷ್ಯಾಕೃತಿಯ ಸಹಜ ಸೌಂದರ್ಯವು ಎದ್ದು ಕಾಣುವಂತಿದೆ.

ಶೈಲಿಯ ದೃಷ್ಟಿಯಿಂದ ಈ ಎರಡು ಶಿಲ್ಪಗಳೂ ಕ್ರಿ. ಶ. ೨ನೆಯ ಶತಮಾನದವು.

ಕೆಲವು ವಿಚಾರಗಳು : ಇತ್ತೀಚೆಗೆ ನಾನು ಕಾರವಾರ ಜಿಲ್ಲೆಯ ಹೈಗುಂದದಲ್ಲಿ ಪೂರ್ಣ ಉಬ್ಬಿನಾಕಾರದ ಏಕಶಿಲಾ ಯಕ್ಷನ ಶಿಲ್ಪವನ್ನು ಗಮನಿಸಿದ್ದೇನೆ.[4] ಈ ಹಿಂದೆಯೇ ಸನ್ನತಿಯಲ್ಲಿ ದೊರೆತ ಎರಡು ಅಥವಾ ಮೂರು ಯಕ್ಷ ಶಿಲ್ಪಗಳೂ ಬೆಳಕಿಗೆ ಬಂದಿವೆ.[5] ಆದರೆ

4 *Indian Archaeology, A Review*, Annual Report of the Archaeological Survey of India, 1973-74, p. 17, Plate XXXII ; 'ಇತ್ತೀಚಿನ ಕೆಲವು ಮುಖ್ಯ ಪುರಾತತ್ತ್ವ ಶೋಧನೆಗಳು', ಕರ್ನಾಟಕ ಭಾರತಿ, ಸಂಪುಟ ೮, ಸಂಚಿಕೆ ೨, ೧೯೭೫

5 P. B. Desai, 1968 ; M. S. Nagaraja Rao, 1985

ಇವು ತಲೆ ಇತ್ಯಾದಿ ಅಂಗಗಳಲ್ಲಿ ಹಣತೆಗಳನ್ನು ಧರಿಸಿರುವ ಭೃತ್ಯವೃತ್ತಿಯ ಕುಬ್ಜಯಕ್ಷರ ಶಿಲ್ಪಗಳು. ಈಗ ಇಲ್ಲಿ ಗಮನಿಸಲಾಗಿರುವ ಸನ್ನತಿಯ ಏಕಶಿಲಾ ಯಕ್ಷನ ಸಾಮಾನ್ಯ ಶಿಲ್ಪವು ಕುಬ್ಜಯಕ್ಷ ಶಿಲ್ಪದ ರೀತಿಯಲ್ಲಿದ್ದರೂ ಹೈಗುಂದದ ನಿರ್ದಿಷ್ಟಕಾಲದಲ್ಲಿ ಉಪಾಸನೆಗೆ ಬಳಸುವ ಶಿಲ್ಪದಂತೆಯೇ ಇದೆ. ಆದ್ದರಿಂದ ಕರ್ನಾಟಕದ ಈ ಭಾಗದಲ್ಲಿ ಕ್ರಿಸ್ತಶಕಾರಂಭದ ಕಾಲಕ್ಕೆ ಯಕ್ಷಾರಾಧನೆಯು ಸಾಕಷ್ಟು ಪ್ರಚಲಿತವಾಗಿದ್ದಿತೆಂದು ತೋರುತ್ತದೆ. ಹೈಗುಂದದ ಯಕ್ಷಶಿಲ್ಪವು ಕರ್ಲೆಯಲ್ಲಿ ದೊರೆತಿರುವ ಶಿಲ್ಪದಂತೆಯೇ ಪಶ್ಚಿಮ ದಕ್ಖನ್ನಿನ ಶಿಲ್ಪಕಲಾಶೈಲಿಯಲ್ಲಿದ್ದರೆ, ಸನ್ನತಿಯ ಇಂತಹ ಬಹುಪಾಲು ಶಿಲ್ಪಗಳು ಅಮರಾವತಿಯ ನಂತರದ ಕಲಾಶೈಲಿಯಲ್ಲಿವೆ.

ಪೂರ್ಣಉಬ್ಬಿನಾಕಾರದ ಮಿಥುನ (ದಂಪತಿ) ಶಿಲ್ಪವು ಕರ್ನಾಟಕದಲ್ಲಿ ದೊರೆತ ಶಾತವಾಹನರ ಕಾಲದ ಶಿಲ್ಪಶೈಲಿಯಲ್ಲಿರುವ ಮೊಟ್ಟಮೊದಲನೆಯ ಶಿಲ್ಪವಾಗಿದೆ. ಮಿಥುನಾಕಾರದ ಉಬ್ಬುಶಿಲ್ಪಗಳು ಸಾಮಾನ್ಯವೆನಿಸಿದ್ದರೂ ಈಗ ಸನ್ನತಿಯಲ್ಲಿ ದೊರೆತಿರುವ ಮಿಥುನ ಶಿಲ್ಪವು ಅಪರೂಪದ ಗಮನಾರ್ಹ ಶಿಲ್ಪವೆನಿಸಿದೆ. ಈ ಶಿಲ್ಪವು ಸಹಾ ಬಹುಶಃ ಉಮಾ–ಮಹೇಶ್ವರ ಶಿಲ್ಪದಂತೆಯೇ ದೈವಿಕ ಭಾವನೆಯನ್ನೂ ಉಪಾಸನ ಪದ್ಧತಿಯನ್ನು ಬಿಂಬಿಸುವ ಉದ್ದೇಶದಿಂದ ಕೂಡಿದ್ದಿರಬಹುದೇ ?

(ಕನ್ನಡಾನುವಾದ/ಲಕ್ಷ್ಮಣ್ ತೆಲಗಾವಿ)

ಡಾ|| ಶ್ರೀನಿವಾಸ ವೆಂ. ಪಾಡಿಗಾರ

ಹುನಗುಂದ ತಾಲ್ಲೂಕಿನಲ್ಲಿ ಇತ್ತೀಚಿನ ಪುರಾತತ್ವ ಶೋಧನೆಗಳು

೧೯೮೮ ಮತ್ತು ೧೯೮೯ರ ಮಾರ್ಚ್ ತಿಂಗಳುಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತದ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗದ ವತಿಯಿಂದ ವಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೆಲವು ಗ್ರಾಮಗಳ ಪುರಾತತ್ವ ಅನ್ವೇಷಣೆ ನಡೆಸಿದಾಗ ಆದಿ ಶಿಲಾಯುಗದಿಂದ ಇತ್ತೀಚಿನವರೆಗಿನ ಕೆಲವು ಮಹತ್ವದ ನೆಲೆಗಳು ನನ್ನ ಗಮನಕ್ಕೆ ಬಂದವು. ಮಧ್ಯಕಾಲೀನವರೆಗಿನ ಪ್ರಮುಖ ಪುರಾತತ್ವ ಶೋಧನೆಗಳನ್ನಿಲ್ಲಿ ಸಂಗ್ರಹವಾಗಿ ವರದಿ ಮಾಡುತ್ತಿದ್ದೇನೆ.[1]

ಇತಿಹಾಸಪೂರ್ವ ಕಾಲದ ನೆಲೆಗಳು_ಪ್ರಾಚ್ಯಾವಶೇಷಗಳು: ಮಲಪ್ರಭಾ ನದಿಯುಗುಂಟ ನದಿಯ ಪಾತ್ರದಲ್ಲಿ, ವಿವಿಧಗ್ರಾಮಗಳ ಸಮೀಪ ಆದಿಶಿಲಾಯುಗ ಕಾಲದ ಎಲ್ಲ ಹಂತಗಳಿಗನ್ವಯಿಸುವ ಪ್ರಾಚ್ಯಾವಶೇಷಗಳು ಕಂಡುಬಂದವು. ಸಾಮಾನ್ಯವಾಗಿ ಕಂದುಮಿಶ್ರಿತ ಕೆಂಪು ವರ್ಣದ ಕ್ವಾರ್ಟ್‌ಜೈಟ್ ಶಿಲೆಯಲ್ಲಿ ತಯಾರಿಸಿದ ಕೈಗೊಡಲಿ (hand-axe), ಮಚ್ಚು (cleaver), ದುಂಡುಗೊಡಲಿ (ovate) ಮುಂತಾದ ಅಶ್ಯೂಲಿಯನ್ ತಂತ್ರದಿಂದ ತಯಾರಿಸಿದ ಶಿಲಾ ಉಪಕರಣಗಳು ಪೂರ್ವ ಆದಿ ಶಿಲಾಯುಗದ್ದಾಗಿವೆ. ಬೆನಕನವಾರಿ, ಐಹೊಳೆ, ನಿಂಬಲಗುಂದಿ, ಹಳೇ ಕಡಿವಾಳ, ಹಿರೇಮಾಗಿ/ಚಿಕ್ಕಮಾಗಿ ಗ್ರಾಮಗಳ ಸಮೀಪ ಇಂಥ ಉಪಕರಣಗಳು ದೊರೆಯುತ್ತವೆ. ಉಪಕರಣಗಳು ಹೆಚ್ಚು ನುಣುಪಾಗಿರದೇ ಚಕ್ಕೆ ತೆಗೆದ ಗುರುತುಗಳು ಸ್ಪಷ್ಟವಾಗಿರುವದರಿಂದ (ಉದಾ.: ಹಿರೇಮಾಗಿ) ನದಿಯ ಸೆಳೆತದಿಂದ ಇವು ಹೆಚ್ಚು ದೂರ ಸಾಗಿಸಲ್ಪಟ್ಟಿಲ್ಲವೆಂದು ನಿರ್ಧರಿಸಬಹುದು. ಅಂತಾಗಿ ಈ ಪ್ರದೇಶದಲ್ಲಿ ಪೂರ್ವ ಆದಿಶಿಲಾಯುಗದಿಂದಲೇ ಮಾನವನ ವಸತಿಯಿದ್ದಿತೆಂದು ತಿಳಿಯಬಹುದಾಗಿದೆ.

ಮಧ್ಯ ಆದಿಶಿಲಾಯುಗಕ್ಕನ್ವಯಿಸುವ ಶಿಲಾ ಉಪಕರಣ ಮಾದರಿಗಳು ಮಲಪ್ರಭಾ ನದೀಪಾತ್ರದಲ್ಲಿ ಬೇವಿನಾಳದ ಸಮೀಪ ದೊರೆತಿವೆ. ಇವು ಸಾಮಾನ್ಯವಾಗಿ ಹೆರೆಯುವ ಉಪಕರಣಗಳು (scrapers). ಐಹೊಳೆಯ ರಾವಳಫಡಿ ಶೈವ ಗುಹಾಲಯದ ಹಿಂಬದಿಯ ಹೊಲದಲ್ಲಿ ದೊರೆತ, ಈಟಿಯ ಮೊನೆಯಂತಿರುವ ಉಪಕರಣ ಅಶ್ಯೂಲಿಯನ್ ತಂತ್ರದ ಕೊನೆಯ ಅವಧಿಯ ಸೂಚಕವಾಗಿದ್ದು, ಚಿಕ್ಕ ಕೈಗೊಡಲಿ ಎನ್ನಬಹುದಾದರೂ ಮಧ್ಯ ಆದಿ ಶಿಲಾಯುಗಕ್ಕೆ ಅನ್ವಯಿಸುವಂತಹದು. ಜಾಸ್ಪರ್ ಇಲ್ಲವೆ ಕ್ವಾರ್ಟ್‌ಜೈಟ್ ಶಿಲೆಯನ್ನು ಇವುಗಳಿಗೆ ಬಳಸಲಾಗಿದೆ.

ಉತ್ತರ ಆದಿಶಿಲಾಯುಗದ ಕುರುಹುಗಳು ಸಿದ್ಧನಕೊಳ್ಳ, ಐಹೊಳೆ (ಕ್ಯಾದಿಗ್ಗೇರಿಗೆ ಹೋಗುವ ಹಾದಿ

---

1 ಈ ಅನ್ವೇಷಣೆಯಲ್ಲಿ ನನ್ನ ವಿದ್ಯಾರ್ಥಿಮಿತ್ರ ಶ್ರೀ ಎಂ. ಎನ್. ಕಡಪಟ್ಟಿಯವರ ಸಹಕಾರ ಪಡೆದಿದ್ದೇನೆ. ಅವರ ಸಹಾಯವನ್ನಿಲ್ಲಿ ಸ್ಮರಿಸುತ್ತೇನೆ.

ಯಲ್ಲಿ), ಬೇವಿನಾಳ ಮತ್ತು ಹಳೇ ಕಡಿವಾಳಗಳಲ್ಲಿ ಕಂಡುಬಂದಿವೆ. ಬೇವಿನಾಳದಲ್ಲಿ ದೊರೆತ ಚರ್ಟ್ ಶಿಲೆ(?)ಯ ತಿರುಳುಗಲ್ಲು (core) ಸಮೀಪದಲ್ಲೇ 'ಉದ್ಯಮ' ನೆಲೆ ಇರಬಹುದಾದ ಸೂಚನೆ ನೀಡಿದೆ. ಹಳೇ ಕಡಿವಾಳದಲ್ಲಿ ಹಕ್ಕಿಯ ಚುಂಚಿನಾಕಾರದ 'ಬ್ಯೂರಿನ್' ಮಾದರಿಯ ಉಪಕರಣ ದೊರತಿದೆ. ಸಿದ್ಧನಕೊಳ್ಳದಲ್ಲಿ ದೊರೆತ ಚಪ್ಪಟೆ ಹಳದೀವರ್ಣದ ಶಿಲೆಯ ತುಣುಕಿನ ಮೇಲೆ ಹಕ್ಕಿಯ ರೆಕ್ಕೆಯಂತೆ ಕಾಣುವ ಕೊರೆದು ಮಾಡಿದ ಚಿತ್ರವಿದ್ದು, ಉತ್ತರ ಆದಿಶಿಲಾಯುಗದ ಕಲೆಯ ಅಪರೂಪದ ಮಾದರಿಯಾಗಿದೆ. ರಾಜಸ್ಥಾನದ ಚಂದ್ರಾವತಿಯಲ್ಲಿ (ಸಿರೋಹಿ ಜಿಲ್ಲೆ) ದೊರೆತ ಮಧ್ಯಶಿಲಾಯುಗದ ತಿರುಳಿನ ಮೇಲೆ ಕೊರೆದಿರುವ ಚಿತ್ರವನ್ನು ಇದು ನೆನಪಿಸುತ್ತದೆ.[2] ಕರ್ನಾಟಕದಲ್ಲಿ ಆದಿಶಿಲಾಯುಗದ ಕಲೆಯ ಮಾದರಿ ಬಹುಶಃ ಈವರೆಗೆ ಇದೊಂದೆ. ಆದ್ದರಿಂದ ಮಹತ್ವದ ಶೋಧನೆಯಿದು.

ನೂತನ ಶಿಲಾಯುಗದ ನುಣುಪಿಸಿ ಹೊಳಪಿಸಿರುವ ಕೊಡಲಿ ಹಳೇ ಬೂದಿಹಾಳದಲ್ಲಿ ದೊರೆತಿದೆ. ಈ ನೆಲೆಯನ್ನೂ ಇನ್ನೂ ಹೆಚ್ಚು ಪರಿಶೀಲಿಸುವ ಅವಶ್ಯಕತೆಯಿದೆ.

ಕಬ್ಬಿಣಯುಗದ ಬೃಹತ್‌ಶಿಲಾಸಮಾಧಿಗಳು ಐಹೊಳೆ, ಬೇಲಾಪೂರ, ಕ್ಯಾದಿಗೇರಿಗಳಲ್ಲಿ ಡಾ॥ ಅ. ಸುಂದರ ಅವರಿಂದ ಈಗಾಗಲೇ ಶೋಧಿಸಲ್ಪಟ್ಟಿವೆ.[3] ಬೃಹತ್‌ಶಿಲಾಸಮಾಧಿಗಳ ಇನ್ನೊಂದು ಹೊಸ ಗುಂಪು ಸಿದ್ಧನಕೊಳ್ಳದಲ್ಲಿ ನನ್ನ ಅನ್ವೇಷಣೆಯಲ್ಲಿ ಕಂಡುಬಂದಿತು. ಈ ಗುಂಪಿನ ಸುಮಾರಾಗಿ ಎಲ್ಲ ಸಮಾಧಿಗಳೂ ಬಹಳ ಜೀರ್ಣಸ್ಥಿತಿಯಲ್ಲಿದ್ದು ಬಹುಶಃ ಕೊಳ್ಳೆ ಹೊಡೆಯಲ್ಪಟ್ಟಿವೆ. ಚಪ್ಪಡಿಕಲ್ಲುಗಳು (cap-stones), ಬದಿಯ ಶಿಲಾಫಲಕಗಳು (orthostats) ಚದುರಿಕೊಂಡುಬಿದ್ದಿವೆ. ಕೆಲವು ಸಮಾಧಿಗಳ 'ಪ್ಯಾಸೇಜ್'ಗಳು ಮತ್ತು ಅವುಗಳ ಮೇಲಿನ ಚಪ್ಪಡಿಗಳು ಅಲ್ಲಲ್ಲಿ ಉಳಿದಿರುವುದು ಕಂಡುಬರುತ್ತದೆ. ಈ ಹೊಸ ಬೃಹತ್‌ಶಿಲಾಸಮಾಧಿಗಳ ಗುಂಪಿನ ಶೋಧನೆಯೊಂದಿಗೆ ಪಟ್ಟದಕಲ್ಲು ಮತ್ತು ಐಹೊಳೆ–ಬೇಲಾಪೂರಗಳ ಮಧ್ಯವರ್ತಿ ಪ್ರದೇಶದಲ್ಲಿ ಕೂಡ ಕಬ್ಬಿಣಯುಗದ ಜನರ ವಸತಿಯ ಕುರುಹು ದೊರೆತಂತಾಗಿದೆ.

ಇತಿಹಾಸ ಆರಂಭ ಕಾಲದ ನೆಲೆ-ಹಿರೇಮಾಗಿ : ನನ್ನ ಸರ್ವೇಕ್ಷಣದಲ್ಲಿ ಕಂಡುಬಂದ ಅತಿ ಮಹತ್ವದ ನೆಲೆಯೆಂದರೆ ಇತಿಹಾಸ ಆರಂಭಕಾಲದ ಪಟ್ಟಣದ ಕುರುಹುಳ್ಳ ಹಿರೇಮಾಗಿ. ಮಲಪ್ರಭಾ ನದಿಯ ಬಲದಂಡೆಯ ಮೇಲಿರುವ ಈ ನೆಲೆ ಅಮೀನಗಡದಿಂದ ಸುಮಾರು ೯ ಕಿ.ಮೀ. ದೂರದಲ್ಲಿದೆ. ಊರು ಈಗ ಬಲು ಚಿಕ್ಕ ಹಳ್ಳಿಯಾಗಿದ್ದರೂ ಹಿಂದೆ 'ಪಟ್ಟಣ'ವಾಗಿದ್ದಿರಬಹುದೆಂಬ ಸೂಚನೆಗಳು ಸಾಕಷ್ಟಿವೆ. ಊರ ದಕ್ಷಿಣ ಬದಿಗೆ ಹಾಳುಮಣ್ಣಿಗಾಗಿ ನಿವೇಶನವನ್ನು ಸಾಕಷ್ಟು ಹಾಳು ಮಾಡಲಾಗಿದ್ದು, ಅಲ್ಲಲ್ಲಿ ಸುಮಾರು ೩ ರಿಂದ ೫ ಮೀಟರಿನಷ್ಟು ಎತ್ತರದ ಲಂಬಛೇದಗಳು ಕಂಡುಬರುತ್ತವೆ. ಬೂದಿಮಿಶ್ರಿತ ಮಣ್ಣು, ಉಂಡೆಕಲ್ಲುಗಳು, ಇಟ್ಟಿಗೆಗಳು, ಪೊತಿನ್ ನಾಣ್ಯಗಳು, 'ಆಂಧ್ರ ಸಂಸ್ಕೃತಿ'ಯ ಮಡಕೆಗಳು ಈ ನೆಲೆಯು ಇತಿಹಾಸ ಆರಂಭ ಕಾಲದ್ದೆಂದು, ಅಂದರೆ ಶಾತವಾಹನರ ಕಾಲದ್ದೆಂದು ಸ್ಪಷ್ಟಪಡಿಸುತ್ತವೆ. ಲಂಬಛೇದದಲ್ಲಿ ವೃತ್ತಾಕಾರದ ಬಾವಿಯೊಂದರ ಅಳಿದುಳಿದ ಭಾಗ ಕಾಣದೊರೆಯಿತು. ಇದನ್ನು ಕೀಲಿನಾಕಾರದ (wedge-shaped) ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. (ಇಟ್ಟಿಗೆಯ ಗಾತ್ರ ಹೀಗಿದೆ : ಎತ್ತರ ೭ ಸೆಂ.ಮೀ., ಸಮನಾಂತರ ಬದಿಗಳು ಕ್ರಮವಾಗಿ ೨೨ ಮತ್ತು ೧೩ ಸೆಂ.ಮೀ. ಹಾಗೂ ಒಳಮುಖವಾಗಿರುವ ಬದಿಗಳು ೨೬ ಸೆಂ.ಮೀ.) ಕಟ್ಟಡಗಳ ಸ್ಪಷ್ಟ ಚಲನಕ್ಷೆ ಯಾವುದೂ ಕಂಡುಬರಲಿಲ್ಲ.

---

2 V.H. Sonawane: 'An Engraved Mesolithic Core from Chandravati, Rajasthan' in *Archaeology and History* (*Essays in Memory of Shri A. Ghosh*), Delhi, 1987, pp. 53–56

3 A. Sundara : *Early Chamber Tombs of South India*, Delhi, 1975, p. 227

ಇಟ್ಟಿಗೆಗಳು ಸಾಮಾನ್ಯವಾಗಿ ೮ × ೨೦ × ೪೦ ಸೆಂ.ಮೀ. ಗಾತ್ರದವಾಗಿವೆ. ಈಗಿನ ಹಳ್ಳಿಯು ನಿವೇಶನದ ಕೇವಲ ಒಂದು ಭಾಗವನ್ನು ಮಾತ್ರ ಆಕ್ರಮಿಸಿದೆ ಎಂದರೆ ಮೂಲ ನಿವೇಶನದ ಪ್ರದೇಶ ಎಷ್ಟಿದ್ದಿರಬಹುದೆಂದು ಊಹಿಸಬಹುದು.

ಮಡಕೆಗಳು ಸಾಮಾನ್ಯವಾಗಿ ಎರಡು ವಿಧದ್ದಾಗಿವೆ : ಚಿತ್ರ ಬಿಡಿಸಿರದ ಕೆಂಪು ಮಡಕೆಗಳು ಮತ್ತು ಬಿಳಿ ಕಾವೋಲಿನ್ ಬಳಸಿ ಚಿತ್ರ ಬಿಡಿಸಿರುವ 'ರಸೆಟ್ ಕೋಟೆಡ್'' ಮಡಕೆಗಳು. ಇಂಗ್ಲೀಷ್ 'ವಿ' ಆಕಾರದ ಲಂಬಛೇದವುಳ್ಳ ಪಾತ್ರೆಗಳು, ಮುಚ್ಚಳ, ತಟ್ಟೆಯಾಕಾರದ ಪಾತ್ರೆಗಳು, ಬಟ್ಟಲುಗಳು, ಗುಂಡಿ, ಕೊಡ, ಲೋಟ ಇತ್ಯಾದಿಗಳು ಸಾಮಾನ್ಯವಾಗಿವೆ. 'ಆಂಫೋರಾ' ಮಧ್ಯ ಕುಂಬದ ಜೋಡು ಹಿಡಿಕೆಯ ಭಾಗ(?) ಹಾಗೂ 'ರೌಲೆಟೆಡ್'' ತಟ್ಟೆಯ ಒಂದು ಭಾಗ ರೋಮನ್ ಸಂಸ್ಕೃತಿಯ ಸಂಬಂಧದ ಕುರುಹಾಗಿರಬಹುದು. ಇತರ ಪ್ರಾಚ್ಯಾವಶೇಷಗಳಲ್ಲಿ ಸುಟ್ಟ ಮಣ್ಣಿನ, ದಂತದ, ಕಾರ್ನೇಲಿಯನ್ ಶಿಲೆಯ ಮಣಿಗಳು ಸೇರಿವೆ.

ನಾಣ್ಯಗಳು ಪೊಟಿನ್ ಲೋಹದ್ದಾಗಿದ್ದು, ಸಾಮಾನ್ಯವಾಗಿ ಒಂದು ಬದಿಗೆ ನಿಂತ ವೃಷಭದ ಎಡನೋಟವನ್ನು, ಹಿಂಬದಿಗೆ ಗುಡ್ಡ, ಅರ್ಧಚಂದ್ರ, ಶ್ರೀವತ್ಸ (?) ಮತ್ತು ಬೇಲಿಯೊಳಗಿರುವ ವೃಕ್ಷ, ಅಥವಾ ಗುಡ್ಡದ ಕೆಳಗೆ ನದಿ ಇರುವ ಚಿತ್ರ ಹೊಂದಿವೆ. ಒಂದು ನಾಣ್ಯದ ಮೇಲೆ ಸದರ (?) ಮಹಾರಠಿಸ ಎಂಬ ಬ್ರಾಹ್ಮೀ ಅಕ್ಷರಗಳಿವೆ. ಇವು ಮಹಾರಠಿಗಳ ನ್ಯಾಣಗಳೆಂಬುದು ಸ್ಪಷ್ಟವಿದೆ.

ಮಲಪ್ರಭಾ ನದಿಗುಂಟ ಶಾತವಾಹನ ಕಾಲೀನ ನೆಲೆಗಳಿರುವುದು [ಉದಾ. : ವಾಸನ (ನರಗುಂದ ತಾಲ್ಲೂಕು), ಪಟ್ಟದಕಲ್ಲು (ಬಾದಾಮಿ ತಾಲ್ಲೂಕು), ಐಹೊಳೆ (ಹುನಗುಂದ ತಾಲ್ಲೂಕು)] ಈಗಾಗಲೇ ಗೊತ್ತಿದ್ದು ಹಿರೇಮಾಗಿ ನೆಲೆಯ ಶೋಧನೆಯೊಂದಿಗೆ ಮತ್ತೊಂದು ಮಹತ್ವದ ನೆಲೆ ಬೆಳಕಿಗೆ ಬಂದಂತಾಗಿದೆ. ದುರದೃಷ್ಟವಶಾತ್ ಈ ನೆಲೆಯ ಅವಶೇಷಗಳು ಲೂಟಿಯಾಗಿದ್ದು, ಲೂಟಿ ಇನ್ನೂ ನಡೆಯುತ್ತಿದೆ.

ಮಧ್ಯಕಾಲೀನ ಪ್ರಾಚ್ಯಾವಶೇಷಗಳು : ಗುಡೂರಿನ ರಾಮಲಿಂಗ ದೇವಾಲಯ : ಗುಡೂರಿನ ಮರಳುಗಲ್ಲಿನಿಂದ ನಿರ್ಮಿತವಾದ ಕಲ್ಯಾಣ ಚಾಲುಕ್ಯರ ಆರಂಭಕಾಲದ್ದೆನ್ನಬಹುದಾದ ವೇಸರ ಮಾದರಿಯ ರಾಮಲಿಂಗ ದೇವಾಲಯವಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪ ಹೊಂದಿರುವ ಈ ದೇವಾಲಯಕ್ಕೆ ಮೂಲದಲ್ಲಿ ಮುಖಮಂಟಪವೂ ನಂದಿಮಂಟಪವೂ ಇದ್ದ ಕುರುಹುಗಳಿವೆ. ಗರ್ಭಗೃಹದಲ್ಲಿ ಗೋಡೆಗಳಲ್ಲಿ ಗೂಡುಗಳಿದ್ದು, ಅವುಗಳ ಮೇಲಿನ ಮಕರತೋರಣಗಳು ಬ್ರಹ್ಮ (ದಕ್ಷಿಣ), ಶಿವ (ಪಶ್ಚಿಮ) ಮತ್ತು ವಿಷ್ಣು (ಉತ್ತರ) ದೇವತೆಗಳ ಚಿಕಣಿ ಶಿಲ್ಪಗಳನ್ನು ಒಳಗೊಂಡಿವೆ. ಗೂಡುಗಳ ಗಾತ್ರವನ್ನು ಗಮನಿಸಿದರೆ ಅವುಗಳಲ್ಲಿ ಈ ದೇವತೆಗಳ ವಿಗ್ರಹವನ್ನು ಸೇರಿಸಿರುವದು ಅಸಾಧ್ಯವೆಂದು ತೋರುತ್ತದೆ. ಅರಸೀಬೀದಿಯ ಗುಣದ ಬೆಡಂಗಿ ಜಿನಾಲಯದ ಗರ್ಭಗೃಹದಲ್ಲಿಯೂ ಇದೇರೀತಿ ಗೂಡುಗಳು, ಮಕರತೋರಣ (ಇಲ್ಲಿ ಜಿನಬಿಂಬಗಳೊಂದಿಗೆ) ಇರುವುದು ಕಂಡು ಬರುತ್ತದೆ. ಈ ವ್ಯವಸ್ಥೆ ಈ ಭಾಗದ ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯಗಳ ವಿಶಿಷ್ಟ ಲಕ್ಷಣವೇನೋ ಎಂಬುದನ್ನು ಹೆಚ್ಚಿನ ಅಧ್ಯಯನ ಮಾಡಿ ನೋಡಬೇಕಾಗಿದೆ.

ರಾಮಲಿಂಗ ದೇವಾಲಯದ ಇನ್ನೊಂದು ವೈಶಿಷ್ಟ್ಯವೆಂದರೆ ಅದನ್ನು ನಿರ್ಮಿಸಲು ಬಳಸಿರುವ ಪ್ರತಿಯೊಂದು ಕಲ್ಲಿನ ಹೊರ ಮೈಯಲ್ಲೂ ಒಂದಿಲ್ಲೊಂದು ಅಂಕೆಯನ್ನು (ಕ್ರಿ.ಶ. ೧೧ನೇ ಶತಮಾನದ ಕನ್ನಡ ಅಂಕೆಗಳು) ಕೊರೆದಿರುವುದು. ಬಹುಶಃ ಶಿಲ್ಪಿಗಳಿಂದ ತಯಾರಿಸಲ್ಪಟ್ಟ ಘನಗಳು ಎಲ್ಲೆಲ್ಲಿ ಬರಬೇಕು ಎಂಬುದನ್ನು ಸೂಚಿಸಲು ಈ ಅಂಕೆಗಳ ಗುರುತುಗಳನ್ನು ಮಾಡಿಕೊಂಡಿದ್ದಿರಬೇಕು. ಅಲ್ಲಲ್ಲಿ ಕೆಲವು ಅಕ್ಷರಗಳೂ ಕಂಡು ಬರುತ್ತಿದ್ದು, ಇವು ಬಹುಶಃ ಶಿಲ್ಪಿಗಳ ಹೆಸರಿನ ಮೊದಲ ಅಕ್ಷರಗಳಿರಬಹುದು.

ಎಚ್. ಎಸ್. ಗೋಪಾಲರಾವ್

ಕೊಂಗುಣಿವರ್ಮ ಮಾಧವನ ಗಣಿಗನೂರು ತಾಮ್ರಪಟಗಳು

ಮೈಸೂರು ಜಿಲ್ಲೆಯ ಯಳಂದೂರು ತಾಲ್ಲೂಕಿನ ಗಣಿಗನೂರು ದಾಖಲೆ ಚಾಮಲಾಪುರ ಗ್ರಾಮದ ನಿವಾಸಿ ಹಾಲಿ ಬೆಂಗಳೂರಿನ ಖಾದಿ ಗ್ರಾಮೋದ್ಯೋಗ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಶ್ರೀ ಸಿ.ಎಂ. ಬಸವರಾಜು ಅವರಿಂದ ದೊರೆತ, ವಂಶಪಾರಂಪರ್ಯವಾಗಿ ಅವರ ಮನೆಯಲ್ಲಿರುವ ಹಾಗೂ ಆನೆಯ ಮುದ್ರೆ ಸಹಿತ ಬಳೆಗೆ ಸೇರಿಸಿರುವ ೩ ಹಲಗೆಗಳ ತಾಮ್ರಶಾಸನವು ಈಚೆಗೆ ನನ್ನ ಅಧ್ಯಯನಕ್ಕೆ ದೊರೆತಿದೆ.

ಪ್ರತಿ ಹಲಗೆಯ ಉದ್ದ ೨೬.೫ ಸೆಂ. ಮೀ., ಅಗಲ ೬.೫ ಸೆಂ.ಮೀ. ಇದ್ದು, ಉಂಗುರದ ಹೊರ ವ್ಯಾಸ ೭ ಸೆಂ.ಮೀ., ಒಳವ್ಯಾಸ ೫.೭೫ ಸೆಂ.ಮೀ. ಇದೆ. ಉಂಗುರ ಸಹಿತ ತಾಮ್ರಪಟಗಳ ಒಟ್ಟು ತೂಕ ೬೯೫ ಗ್ರಾಂ. ಉಂಗುರದ ತೂಕ ೧೦೫ ಗ್ರಾಂ. ಉಂಗುರವನ್ನು ಆನೆಯ ಲಾಂಛನದ ಮುದ್ರೆ ಬಂಧಿಸಿದೆ.

ಅಧ್ಯಯನಕ್ಕೆ ಲಭ್ಯವಾದ ಗಣಿಗನೂರಿನ ತಾಮ್ರಪಟಗಳಲ್ಲಿ ಮೊದಲನೆಯ ತಾಮ್ರಪಟದ ಕೆಳಭಾಗದಲ್ಲಿ ಮತ್ತು ಮೂರನೆಯ ತಾಮ್ರಪಟದ ಮೇಲ್ಭಾಗದಲ್ಲಿ ಬರವಣಿಗೆ ಇಲ್ಲ. ಮೊದಲನೆಯ ತಾಮ್ರಪಟದ ಮೇಲ್ಭಾಗದಲ್ಲಿ ಶಾಸನವು ಆರಂಭವಾಗಿದೆ. ಉಂಗುರಕ್ಕೆ ತಾಮ್ರಪಟಗಳನ್ನು ಜೋಡಿಸಿರುವ ರೀತಿಯಂತೆ ಮೊದಲನೆಯ ಹಲಗೆ ಕೆಳಭಾಗದಲ್ಲೂ ಮೂರನೆಯ ಹಲಗೆ ಮೇಲ್ಭಾಗದಲ್ಲೂ ಇವೆ. ಆದ್ದರಿಂದ ಮೊದಲನೆಯ ಹಲಗೆಯ ಒಳಭಾಗದಲ್ಲಿ ಶಾಸನದ ಮೊದಲ ಏಳು ಸಾಲುಗಳನ್ನು ಬರೆಯಲಾಗಿದೆ. ಅದಕ್ಕೆ ಅಭಿಮುಖವಾದ ಎರಡನೆಯ ಹಲಗೆಯ ಭಾಗದಲ್ಲಿ ಶಾಸನದ ಮುಂದಿನ ಆರು ಸಾಲುಗಳನ್ನೂ ಹಿಂಭಾಗದಲ್ಲಿ ಆರು ಸಾಲುಗಳನ್ನೂ ಕೊನೆಯ ಹಲಗೆಯ ಒಳಮೈಯಲ್ಲಿ ಐದು ಸಾಲುಗಳನ್ನೂ ಬರೆಯಲಾಗಿದೆ. ಶಾಸನವು ಒಟ್ಟು ೨೪ ಸಾಲುಗಳಲ್ಲಿ ಬರೆಯಲ್ಪಟ್ಟಿದೆ. ಸಂಸ್ಕೃತ ಮತ್ತು ಕನ್ನಡಭಾಷೆಗಳಲ್ಲಿ, ಕನ್ನಡ ಲಿಪಿಯಲ್ಲಿ ಬರೆಯಲ್ಪಟ್ಟಿರುವ ಶಾಸನದ ಪಾಠ ಕೆಳಕಂಡಂತಿದೆ :

ಶಾಸನದ ಪಾಠ

೧ ಸ್ವಸ್ತಿಜಿತ ಭಗವತಾಗತ ಘನಗಗನಾಭೇನ ಪದ್ಮನಾಬೇನ ಶ್ರೀ ಮಜ್ಜಾನ್ಹ
ವ್ಯಾಯ ಕೂಲೋಮಲ ವ್ಯಾಯೋಮಾವಭಾಸನ ಭಾಸ್ಕರ

೨ ಸಖಿಳ್ಗಕ ಪ್ರಹರ ಖಣ್ಡಿತ ಮಹಾಶಿಲಾಸ್ತಮ್ಬಲಬ್ಧ ಭಳವಾರಕ್ರಮ
ವಿದಾರುಣೋರಿಗಣ ವಿದಾರಿಣೋಪಲಬ್ಧವ್ರಣ ವಿಭೂಷಣ ವಿಭೂಷಿತ ಕಾಣ್ವಾ

೩ ಯನಸಗೋತ್ರ ಶ್ರೀಮಾಗೊಂಗುಣಿವರ್ಮ್ಮ ದಮ್ಮ ಮಹಾರಾಜರಾಜಃ ಅಪಿಜ
ಶ್ರೀ ಮದ್ಧರ್ಹಭಟ್ಟಾರಕರ ಸಾಧನ ಪ್ರಸದಿತರಾದಿತವನೇ ಕಥಾದ್ಧರ

೪ ಧಿಮತ್ತ ವಾತಂಗುತ್ತುಂಗ ಕುಭ್ಭಸ್ವಧಾವಲ್ಲರಿ ಮುಕ್ತಪಳಪ್ರಕಟತಟ
ಕತಟ ನದಿ ಭನ್ನಾವಕಾಭೂಷಣಾಕರ ಪ್ರಭೇಚಾರ್ಯರ್ಾತಾ

೫ ಯತ ಭುಜಸ್ಯ ಭೂತುಮಧ ರಜ ಲಕ್ಷಾಧಿರಾಜ ಭುಜ ಭಳಾವಷ್ಪಭೀತಾ
ಭ್ಧಿದಾತ್ಮಾವಣ್ಣಾಳಭೂತಸವಾರಸವಠಾತಿತೋಧಿರ

೬ ಯತಖಿಂಪ್ರಖ್ಯಾತ ಕುಳಾನಸ್ಯಯೋಜಯು ಭೂಷಣೋವಠಾನಿ ಸುರಧಿ
ವರಾಷುಜನ ಅತಧರ ತದೀಯುವಠಾನದಾನದರ ಸಂಭಪ್ಪೇರ್ೀತಾರ್ದ್ದಿರ್ವಂ

೭ ಧುಕರರತಪ್ರ ಕಸ್ಯಾಕಳಾಸಜ್ಜನಸ್ತುತಸ್ವ್ಯಕಳಕ್ರತಾನತವಿಭೀತಿ ಗುಣೇ
ಶಖಾಗಾಭಿತಾಲಂನ್ಯಸ್ವರಯತಿತವತಿ ಶ್ರೀ ಲ ನಿಂಘಗೇಧ

೮ ಆಚಾರ್ಯ್ಯರ್ ಪ್ರಸದಿತಭುಜಭಳ ಪ್ರಕವಂ ಸ್ವಳ್ಯಕ ಪ್ರಹರಖಣ್ಣಿತ
ಮಹಾಶಿಲಾಸ್ತಭ್ಭ ಕನ್ಯಕಾರ ಪುಷೋಕ್ರತ ಲಲಟಪ

೯ ಟ್ಟಾಭಿಶಿತಾತ್ರ(ವಾ)ಜಂಗ ಶ್ರೀ ಕೊಂಗುಣಿವುರ್ಮ್ಮರ್ಮಹಾರಾಜಾಧಿರಾಜ
ಪರಮೇಸ್ವರ ಪರಮುಭಟ್ಟಾರಕ ಪ್ರುದ್ಧಿಗಂಗ ವಾಧವ ಮಹಾರಜ

೧೦ ಧಿರಾಜ ತಳವನಪುರವತೀ ಸಕವರಿಷೇಷುರ್ಗತೇಷು ನಯುನಗಿರಿಸಶಿ
ಸಮ್ಮ ಸಂವಚ್ಚರೇ ಅಷಡವಾಸೇ ಸುದ್ದ ಪನ್ನವಿು ಗುರು

೧೧ ವಾರೇ ಉತ್ತರೇ ನಕ್ಷತ್ರೇ ಅವ್ರಿತಯೋಗೇ ಸಿನ್ನರವ್ಮೋರ್ನ್ದವ್ಮ್ಮಗವುಣ್ಣನ
ವುಗ ವಾರವ್ಮ್ಮಗವುಣ್ಣ ಹೆಡೆಗೆಹಳಿವರಗಣ್ಣ ಕತ್ತಿಗೆಯ

೧೨ ಭ್ಯೇರವಚಲಧಂಕಾರಾ ವುರಣರಂಸುಡಿಕಾಡ ಹೇಭ್ಬಣರ ಕೇತವ್ಮ್ಮಗವುಣ್ಣನ
ವುಗನಿಗುನ್ದನಾಡಳ್ದವುರ್ಕಾಲಭ್ಯೇರವಶ್ಯೋಗಾ

೧೩ ಲ ಪಾರ್ತ್ರ್ರಸಿತಗರಗಣ್ಣ ಮಡಿಮುಕರ ಕದ ಇನ್ನಿಭರು ತವ್ಮ್ಮ ಗಟಣಧಿ
ಹೆನ್ನವಿುನಾಡ ಮುತ್ತಗನೂರ ಭಿಲ್ಲ ಬೆಡಂಗನುವ ಕೊನ್ನದ

೧೪ ಮಾರನೊ(ಯೇಭ್ಭ)ಭಟರಕಾದಿಕೊನ್ನು ಅವರ ಹೇಡಿ ಬಣ್ಬರವ ಹಿಡಿದು
ಒಪ್ಪಿಸೆ ಗಂಗ ಚಕ್ರವಳ್ತಿ ಮೆಚ್ಚಿ ಕಲ್ದಳಿನಾಡ ಗಣಿಗನೂರ ಕೊಡಂ

೧೫ ಗೆಯು ಕೊಟ್ಟ ತಸ್ಯಸೀವಾನ್ತ ಈಸಾನ್ಯಮೊಕನೋಡಿ ಗಣಿಗನೂರ ಸೆನೆಗುಡಲ
ಧುವಿಶನ್ದಿವೇಣುವೃಕ್ಷದ ಕೊಳನೋದಕ್ಷಣಮೊಕ

೧೬ ನೋಡಿ ಭೂಮುವೃಕ್ಷವೆ ಕಲ್ಪವ್ರಿಕ್ಷವೆ ಬಧಿಪಳ್ಳದಾಣ್ಣೆ ಹೇರೊಭ್ಭಿವಿಡಿದು
ನಡೆದು ಪಕ್ಕಿವಿಳಿಲಿ ಮುತ್ತೇಣಿಯು ದಾಣ್ಟೆ ಭವ್ಮ್ಮದಿವನ ಕಲ್ಪವ್ರ

೧೭ ಕ್ಷಲೆ ಹೇರೊಭ್ಭಿವಿಡದು ನಡೆದು ಪಳ್ಳವ ದಾಣ್ಟೆ ಜೇನಡುವಿನ ಹೇರೊಭ್ಭಿಯೇ
ಅಗ್ನಿ ಮೊಕನೋಡಿ ಗಣಿಗನೂರ ಬಾಣವುರದು ವಿ

೧೮ ಸನ್ದಿವಟವೃಕ್ಷವೇ ಪಚ್ಚಿಮವೊಕನೋಡಿ ಈಚಿಲ ಹೇರೊಟ್ಟೆಯೇಕಾಜಾಡಲಿಯೆ
ಕೋಕೆಡಿಯೇ ಕಲ್ಪವೃಕ್ಷವೇ ಗೋಸಾವಿುತ್ತಿಯೇ ಒಗತಡಿಯೆ

೧೯ ನರಿತ್ಯಾವೊಕ ನೋಡಿ ಗಣಿಗನೂರ ಭಾಣವುರ ಅವ್ಬೋಳೆಯುತ್ತಿ ಸನ್ದ
ಪಳ್ಳದ ಹೆಗ್ಗಡ ಹೆಉತರ ಮೊಕನೋಡಿ ಹಳ್ಳವಿಡಿದು

೨೦ ನಡರು ಅಜ್ಜುಣ ವೃಕ್ಷಲೆ ಹುಳ್ಳು ಕಲ್ಲೆ ಚೂದ ವೃಕ್ಷನೇವಾಯರಾಭ್ಯ ವೊಕ
ನೋಡಿ ಗಣೆಗನೂರ ಶ್ರೀ ನಿದಿಯಾ(......)
೨೧ ಅಡುರ ಕುಕಲ್ಲೆ ನೆದಿಯು ತಡಿವಿಡಿದು ನಡೆದು ಪೂರ್ಬ್ಬ ವೊಕನೋಡಿ ಕಲ್ಪ
ವೃಕ್ಷಲೆ ಮುತ್ತತ್ರಿಯೆ ಕುಡಿತು ಕಃಡ ಈನ್ತಪ್ಪದಕೆ—
೨೨ ಭಡಗರೆನಾಡ ತಳವನಪುರದ ಹಣ್ಣುವಸೋಶಲಿಯು ವಾಗ ಹದಿನಾಡ
ಯೆಕಿಯೂರ ಸೇವಿಸ ಅಮ್ಮೆಳೆಯು ಕಣ್ಣಾನ್ದೆಯು ಆಲೂ
೨೩ ರ ಕೋವ ಸ್ವದತ್ತ ಪರದತ್ತಯೋಹಸ್ಯೋತ ವಸುನ್ದರ ಷಷ್ಟಿರ್ವರಿಷ
ಸಹಸ್ರಣಾವಿಷ್ಟಾಯ ಜಾಯತೇಕ್ರಿಮಿ ಬಹುಭವ್ವಾಸತಾಭ
೨೪ ಕ್ತಾ ರಾಜಸ್ಯಸರಾಜಭಿಯಸ್ಯಯಸ್ಯಯತಾಭೂಮಿ ತಸ್ಯತಸ್ಯತತಾಪಲಂ

ಶಾಸನದ ಸಾರಾಂಶ : ಖಡ್ಗದ ಒಂದು ಪ್ರಹಾರದಿಂದ ಶಿಲಾಸ್ತಂಭವನ್ನು ಖಂಡಿಸಿ ಪರಾಕ್ರಮಿಯೆಂದು ಪ್ರಖ್ಯಾತನಾದ ಕಾಣ್ವಾಯನಸಗೋತ್ರದ ಶ್ರೀಮತ್ ಕೊಂಗುಣಿವರ್ಮ್ಮ ಧರ್ಮ ಮಹಾರಾಜರಾಜನು ಶ್ರೀಮತ್ (ಅರ್ಹದ್ಭಟ್ಟಾರಕರ) ಪ್ರಸಾದದಿಂದ ವಿಪುಲವಾದ ಐಶ್ವರ್ಯವನ್ನು ಪಡೆದನು. ಜೈನಗುರು (ಸಿಂಹನಂದಿ) ಷಂಘಗೋಧ ಆಚಾರ್ಯರ ಅನುಗ್ರಹದಿಂದ ಶಿಲಾಸ್ತಂಭವನ್ನು ಖಂಡಿಸುವ ಸಾಮರ್ಥ್ಯವನ್ನು ಪಡೆದನು. ಕರ್ಣಿಕಾರ ಪುಷ್ಪಗಳಿಂದ ಅಲಂಕೃತವಾದ ಲಲಾಟವನ್ನುಳ್ಳ ಶ್ರೀಕೊಂಗುಣಿವರ್ಮ್ಮ ಮಹಾರಾಜಾಧಿರಾಜ ಪೃಥ್ವಿಗಂಗವಾಧವ ಮಹಾರಾಜನು ತಳವನಪುರದಲ್ಲಿದ್ದಾಗ ಗತವರ್ಷ ಶಕ ೧೭೨ (ನಯನಗಿರಿ ಸಶಿ)—ಸೌಮ್ಯ ಸಂವತ್ಸರದ ಆಷಾಢ ಮಾಸದ ಶುಕ್ಲಪಕ್ಷದ ಪಂಚಮಿ ಗುರುವಾರದಂದು ಉತ್ತರಾನಕ್ಷತ್ರ, ಅಮೃತ ಯೋಗಗಳ ಸಂದರ್ಭದಲ್ಲಿ ಧರ್ಮಗವುಣ್ಡನ ಮಗ ಮಾರಮ್ಮಗವುಣ್ಡ. ಹೇಡಿಗಳನ್ನು ಹಳಿಯುವ, ಕತ್ತಿಗೆಯ ಭೈರವ ಇತ್ಯಾದಿ ಗುಣವಿಶೇಷಗಳನ್ನುಳ್ಳ ಕೇತಮ್ಮಗವುಣ್ಡನ ಮಗ ನೀರ್ಗುಂದನಾಡನ್ನಾಳಿದ ಕದ—ಇಬ್ಬರೂ ತಮ್ಮ ಆಳ್ವಿಕೆಯ ಭಾಗದಲ್ಲಿ ಕೊನ್ತದ ಮಾರನ ಜೊತೆಗೆ ಹೋರಾಡಿ, ಅವರ ಹೇಡಿ ಭಂಟರನ್ನು ಹಿಡಿದು ಒಪ್ಪಿಸಲು ಗಂಗ ಚಕ್ರವರ್ತಿಯು ಮೆಚ್ಚಿ ಕಲ್ದಳಿನಾಡ ಗಣೆಗನೂರನ್ನು ಕೊಡುಗೆಯಾಗಿ ಕೊಟ್ಟಿದ್ದಾನೆ. ಇದಕ್ಕೆ ಸೀಮಾ ವಿವರಗಳೂ ಇವೆ.

ಆಯಾ ಸೀಮೆಗಳ ಎಲ್ಲೆಗಳನ್ನು ಮರ, ಕೊಳ, ಪೊದೆಗಳ ಮೂಲಕ ನಿರ್ದೇಶಿಸಿರುವುದೇ ಅಲ್ಲದೆ ಬಾಣಪುರದ ಪ್ರಸ್ತಾಪವೂ ಇದೆ.

ಶಾಸನಕ್ಕೆ ಭಡಗೆರೆನಾಡ ತಳವನಪುರದ ಹಣ್ಣುವ, ಸೋಶಲಿ(ಸೋಸಲೆ)ಯ ಮಾಗ, ಹದಿನೆಂಡ ಯೆಕಿಯಾರಿ ಸೇವಿಸ, ಅಮ್ಮೆಳೆಯ ಕಣ್ಣಾನ್ದೆಯ, ಆಲೂರ ಕೋವ ಇವರುಗಳು ಸಾಕ್ಷಿಗಳಾಗಿದ್ದಾರೆ.

ಶಾಸನಾಂತ್ಯದಲ್ಲಿ ಶಾಪಾಶಯವಿದೆ.

ಶಾಸನದ ಭಾಷೆ : ಆರಂಭದಿಂದ ದಾನ ನೀಡಿದ ಕಾಲದ ಪ್ರಸ್ತಾಪದವರೆಗೆ ಮತ್ತು ಶಾಪಾಶಯದ ಭಾಗ ಸಂಸ್ಕೃತ ಭಾಷೆಯಲ್ಲಿದೆ. ಉಳಿದ ಭಾಗ ಅಂದರೆ ವೀರರ ಪ್ರಸ್ತಾಪ, ಮೆಚ್ಚಿ ನೀಡಿದ ದಾನ ಮತ್ತು ದಾನದ ಸೀಮಾ ವಿವರಗಳು ಕನ್ನಡಭಾಷೆಯಲ್ಲಿವೆ.

ಈ ಶಾಸನದಲ್ಲಿ ಬಳಸಿರುವ ಭಾಷೆಯು ತೀರಾ ಅಶುದ್ಧವಾಗಿದೆ. ಇದರಿಂದ ಇದು ಯಾವ ಕಾಲಕ್ಕೆ ಸೇರಬಹುದೆಂದು ನಿರ್ಧರಿಸಲು ಸುಲಭವಾಗಿ ಅವಕಾಶವಿಲ್ಲವಾಗಿದೆ,

ಉದಾಹರಣೆಗೆ, 'ಪದ್ಮನಾಬೇನ ಶ್ರೀಮಜ್ಜಾನ್ಹ ವ್ಯಾಯ ಕೂಲೋಮಲವ್ಯಾಯೋಮಾವಭಾಸನ', 'ಶ್ರೀಮದ್ಧರ್ಹಭಟ್ಟಾಕರ ಸಾಧನ ಪ್ರಸಗಿತರಾದಿತವನೇಕ ಧಾದ್ದರದಿ' ಮತ್ತು 'ಮಾತಂಗುತ್ತಂಗ ಕುಭ್ಭ ಸ್ಥಧಾವಲ್ಲರಿ', 'ಶ್ರೀ ಸಿಂಘಗೋಧ ಆಚಾಯ್ರ್ಯ ಪ್ರಸದಿತ ಭುಜಬಳ ಪ್ರಕಮ ಸ್ವಳ್ಯಕ ಪ್ರಹರ ಖಣ್ಡಿತ ಮಹಾ

ಶಿಲಾಸ್ತಂಭ'—ಇತ್ಯಾದಿ ಭಾಗಗಳನ್ನು ಗಮನಿಸಬಹುದು. ಕನ್ನಡಭಾಷೆಯ ಬಳಕೆಯ ಸಂದರ್ಭದಲ್ಲೂ 'ಹೆಡೆಗೆ ಹಳಿವರಗಣ್ಡ ಕತ್ತಿಗೆಯ ಭೈರವ ಚಲಧಂಕಾರಾ ಮರಣರಂ ಸುಡಿಕಾಡ ಹೇಭ್ಬಣರ'—ಮತ್ತಿನ್ನೂ ಹಲವು ಅಶುದ್ಧತೆಗಳು ಗೋಚರಿಸುತ್ತವೆ.

ಅಶುದ್ಧತೆಯ ದೋಷದಿಂದ ಶಾಸನದ ಭಾಷೆಯ ಸ್ಪಷ್ಟ ಸ್ವರೂಪವನ್ನು ಗುರುತಿಸಲಾಗದಿದ್ದರೂ ಈವರೆಗೆ ಪ್ರಕಟವಾಗಿರುವ ಹಲವು ಗಂಗ ತಾಮ್ರಶಾಸನಗಳ ನೆರವಿನಿಂದ ವಿಶೇಷವಾಗಿ ಮಾರಸಿಂಹನ ಕೂಡಲೂರು ತಾಮ್ರಪಟಗಳು ಶಾಸನದ ಪಾಠವನ್ನು ಪರಿಷ್ಕರಿಸಿಕೊಂಡು ಗಮನಿಸಿದರೂ ಭಾಷೆಯ ಆಧಾರದಿಂದ ಶಾಸನದ ಕಾಲವನ್ನು ನಿರ್ಧರಿಸಲು ಅವಕಾಶಗಳಿಲ್ಲವಾಗಿದೆ.

ಶಾಸನದ ಲಿಪಿ : ಶ , ಲ, ದ, ಅಕ್ಷರಗಳು ಕ್ರಿ.ಶ. ೮–೯ನೆಯ ಶತಮಾನಕ್ಕೂ ಜ,ಚ,ರ,ಕ,ಖ, ಇತ್ಯಾದಿ ಅಕ್ಷರಗಳು ೧೨-೧೩ನೆಯ ಶತಮಾನಕ್ಕೂ ಭ ಕಾರವು ಕ್ರಿ.ಶ.೧೩–೧೪ನೆಯ ಶತಮಾನದ ನಾಗರಿ ಸ್ವರೂಪಕ್ಕೂ ಸೇರಿವೆ. ಶ್ರೀ ಕಾರಕ್ಕೆ ಟಿ ಕಾರವನ್ನು ಬಳಸಲಾಗಿದೆ. 'ಅ' ಕಾರದ ಸಂಜ್ಞೆಗೆ ನಾಗರಿ ಭಾಷೆಯಲ್ಲಿದ್ದಂತಹ ಪಕ್ಕದಲ್ಲಿ ಗೀಟು ಬರೆಯುವ ಕ್ರಮವನ್ನೇ ಇಲ್ಲಿ ಹಲವೆಡೆ ಬಳಸಲಾಗಿದೆ. 'ಭಾ' ಎಲ್ಲೆಡೆಯೂ ನಾಗರಿಯ ಸ್ವರೂಪವನ್ನೇ ಯಥಾವತ್ತಾಗಿ ಉಳಿಸಿಕೊಂಡಿದೆ. ಲಿಪಿ ಸ್ವರೂಪದಿಂದ ಇದು ೧೩–೧೪ನೆಯ ಶತಮಾನಗಳ ಕಾಲಕ್ಕೆ ಸೇರಬಹುದಾಗಿದೆ.

ಶಾಸನದ ಕಾಲ : ಶಾಸನದಲ್ಲೇ 'ಸಕವರಿಷೇಷು ಗ್ಗತೇಷು ನಯನಗಿರಿಸಶಿ ಸವ್ಮ್ಯ ಸಂವಚ್ಚರೇ ಅಷಡ ಮಾಸೇ ಸುದ್ಧ ಪನ್ಚಮಿ ಗುರುವಾರೇ ಉತ್ತರೇ ನಕ್ಷತೇ ಅಮೃತಯೋಗೇ' ಎಂದು ಉಲ್ಲೇಖಿತವಾಗಿದೆ. ಅಂದರೆ ಶಾ. ಶ. ೧೭೨–ಅರ್ಥಾತ್ ಕ್ರಿ.ಶ. ೨೫೦ ಈ ಶಾಸನದ ಕಾಲವಾಗುತ್ತದೆ.

ಆದರೆ ಕ್ರಿ. ಶ. ೨೫೦ ಸೌಮ್ಯ ಸಂವತ್ಸರವಾಗಿರಲಿಲ್ಲ. ಅದು ಪ್ರಮೋದೂತ ಸಂವತ್ಸರವಾಗಿತ್ತು–ಆಗಿನ ಸಂವತ್ಸರ ಚಕ್ರದಲ್ಲಿ ಕ್ರಿ.ಶ. ೨೭೯ ಸೌಮ್ಯ ಸಂವತ್ಸರವಾಗಿತ್ತು. ಕ್ರಿ. ಶ. ೨೭೯ರ ಸೌಮ್ಯ ಸಂವತ್ಸರದ ಆಷಾಡ ಶುದ್ಧ ಪಂಚಮಿಯು ಜೂನ್ ೧೪ ಭಾನುವಾರದಂದು ಸಂಭವಿಸಿತ್ತು.

ಕ್ರಿ.ಶ. ೨೫೦ರ ಪ್ರಮೋದೂತ ಸಂವತ್ಸರದ ಆಷಾಡ ಶುದ್ಧ ಪಂಚಮಿಯು ಮೇ ೨೩ ಗುರುವಾರ ಅಥವಾ ಜೂನ್ ೨೨ ಶನಿವಾರ ಸಂಭವಿಸಿತ್ತು (ಆ ವರ್ಷ ಅಧಿಕ ಆಷಾಢ ಸಂಭವಿಸಿತ್ತು).

ಈಗ ನಿರ್ಧಾರಿತವಾಗಿರುವಂತೆ ಕೊಂಗುಣಿವರ್ಮನ ಆಳ್ವಿಕೆಯ ಕಾಲವು ಕ್ರಿ. ಶ. ಸುಮಾರು ೩೨೫–೩೫೦.[1] ಇದು ಶಾಸನೋಕ್ತ ಕ್ರಿ. ಶ. ೨೫೦ರ ಈ ವ್ಯಾಪ್ತಿಯಿಂದ ಹೊರತಾಗಿದೆ.

ಶಾಸನೋಕ್ತ ಕಾಲವು ಮೇಲೆ ಉಲ್ಲೇಖಿಸಿದ ಹಲವು ಕಾರಣಗಳಿಂದ ಅನುಮಾನಾಸ್ಪದವಾಗಿದೆ.

ಶಾಸನದ ಭಾಷೆ, ಲಿಪಿಸ್ವರೂಪ, ಅನುಮಾನಾಸ್ಪದ ಕಾಲದ ಉಲ್ಲೇಖಗಳಿಂದಾಗಿ ಈಗ ದೊರೆತಿರುವ ಗಣಿಗನೂರಿನ ತಾಮ್ರಪಟಗಳು, ಈಗಾಗಲೇ ಕೃತಕವೆಂದು ತೀರ್ಮಾನಿಸಲಾಗಿರುವ ಹಲವು ಗಂಗ ತಾಮ್ರಪಟಗಳ ಜೊತೆಗೆ ಮತ್ತೊಂದು ಸೇರ್ಪಡೆಯಾಗಿದೆ.

"The possibility of their being later renderings, contaminated with certain predominant traits of the period in which they were copied, of geunine characters which were perhaps facing destruction cannot be ruled out" ಎಂಬ ಡಾ॥ ಕೆ. ವಿ. ರಮೇಶ್ ಅವರ ಕೃತಕ ಎನ್ನಬಹುದಾದ ತಾಮ್ರಪಟಗಳ ಬಗೆಗಿನ ಸಮಾಧಾನಕರ ಅಭಿಪ್ರಾಯ[2] ಮತ್ತು "ಹಳೆಯ ಶಾಸನದ ಪ್ರತಿರೂಪವೆಂದು ಗೊತ್ತಾದ ಪಕ್ಷವೊಂದನ್ನು ಬಿಟ್ಟು ಉಳಿದೆಡೆಗಳಲ್ಲಿ ಲಿಪಿಸ್ವರೂಪವು ನಿರ್ಧಾರಕ ಅಂಶವೆಂದು ಧಾರಾಳವಾಗಿ

---

1. ಪಿ. ಬಿ. ದೇಸಾಯಿ, ಎಸ್. ಎಚ್. ರಿತ್ತಿ, ಬಿ. ಆರ್. ಗೋಪಾಲ್ : ಎ ಹಿಸ್ಟರಿ ಆಫ್ ಕರ್ನಾಟಕ
2 ಇನ್‌ಸ್ಕ್ರಿಪ್ಷನ್ಸ್ ಆಫ್ ವೆಸ್ಟರ್ನ್ ಗಂಗಾಸ್

ಹೇಳಬಹುದು" ಎಂಬ ಎನ್. ಲಕ್ಷ್ಮೀನಾರಾಯಣರಾವ್ ಮತ್ತು ಆರ್. ಎಸ್. ಪಂಚಮುಖಿ ಅವರುಗಳ ಅಭಿಪ್ರಾಯದ[3] ಹಿನ್ನೆಲೆಯಲ್ಲಿ, "ಮುದ್ರಣ ವ್ಯವಸ್ಥೆಯೇ ಇಲ್ಲದಿದ್ದ ಕಾಲದಲ್ಲಿ ದೇಶದ ಎಲ್ಲೆಡೆಯಲ್ಲೂ ಲಿಪಿ ಸ್ವರೂಪ ಹೀಗೇ ಇತ್ತು ಎಂದು ನಿಶ್ಚಿತವಾಗಿ ಹೇಳುವುದು ಸಮಂಜಸವಲ್ಲ.ನಿರ್ದಿಷ್ಟ ಶತಮಾನದಲ್ಲಿ, ನಿರ್ದಿಷ್ಟ ಅರಸು ಮನೆತನಗಳ ಆಳ್ವಿಕೆಯ ಸಮಯದಲ್ಲಿ, ಲಿಪಿ ಸ್ವರೂಪ ಮತ್ತು ಭಾಷಾಸ್ವರೂಪ ಸಾಮಾನ್ಯವಾಗಿ ಹೀಗಿದ್ದಿತು ಎಂಬ ತೀರ್ಮಾನಕ್ಕೆ ಬಂದು, ಆ ಆಧಾರದ ಮೇಲೆ ತಾಮ್ರಶಾಸನಗಳ ನೈಜತೆ ಮತ್ತು ಕೃತಕತೆಗಳ ವಿಶ್ಲೇಷಣೆ ನಡೆಸಬಹುದಾದರೂ ಮೇಲೆ ಸೂಚಿಸಿದ ಪ್ರಾದೇಶಿಕ ವೈಲಕ್ಷಣ ಮತ್ತು ವೈಶಿಷ್ಟ್ಯಗಳನ್ನು ಮರೆಯಬಾರದು" ಎಂದು ಈ ಹಿಂದೆ ನಾನು ಭಾವಿಸಿದ್ದರೂ[4] ಪ್ರತಿಗಳಲ್ಲದ ಕೇವಲ ಸೃಷ್ಟಿತ ಶಾಸನಗಳು ಪರೀಕ್ಷೆಯ ಒಂದಲ್ಲ ಒಂದು ಹಂತದಲ್ಲಿ ಸೋಲುತ್ತವೆ ಎನ್ನುವುದಕ್ಕೆ ಪ್ರಸ್ತುತ ಪ್ರಕಟಿಸುತ್ತಿರುವ ಗಣಿಗನೂರಿನ ತಾಮ್ರಪಟಗಳು ಮುಖ್ಯ ಉದಾಹರಣೆಗಳಾಗಿವೆ. ಕನಿಷ್ಟ ೪ ಶತಮಾನಗಳ ಮಿಶ್ರಿತ ಲಿಪಿಸ್ವರೂಪದ ಅಶುದ್ಧ ಭಾಷೆಯ ಗಣಿಗನೂರಿನ ತಾಮ್ರಪಟಗಳು ಕೃತಕ ತಾಮ್ರಶಾಸನಗಳಿಗೆ ಒಂದು ಉತ್ತಮ ಮಾದರಿಯಾಗುತ್ತದೆ.

ಗಣಿಗನೂರಿನ ತಾಮ್ರಪಟಗಳಲ್ಲಿ ಐತಿಹಾಸಿಕ ಪ್ರತಿಕೂಲಗಳೇನೂ ಇಲ್ಲ ಎನ್ನುವುದು ಸಮಾಧಾನಕರ ಅಂಶಗಳಲ್ಲೊಂದು. ಗಂಗವಂಶದ ಕೇವಲ ಕೊಂಗುಣಿವರ್ಮ್ಮ ಮಾಧವನ ಉಲ್ಲೇಖ ಮಾತ್ರ ಇರುವ ಗಣಿಗನೂರಿನ ಶಾಸನದಪಾಠವನ್ನು ಕೂಡಲೂರಿನ[5] ಈ ಮಾರಸಿಂಹನ ಶಾಸನದಲ್ಲಿನ ಕೊಂಗುಣಿವರ್ಮ್ಮನ ಭಾಗದವರೆಗಿನ ಶಾಸನಪಾಠದಿಂದ ಪರಿಷ್ಕರಿಸಬಹುದಾಗಿದೆ. ಆ ಪ್ರಕಾರ ಅರ್ಹದಭಟ್ಟಾರಕ ಮತ್ತು ಸಿಂಹನಂದಿ ಗುರುಗಳ ಪ್ರಸ್ತಾಪ ಮಹತ್ವದ್ದಾಗಿದೆ.

ಪ್ರಸ್ತುತ ಗಣಿಗನೂರಿನ ತಾಮ್ರಪಟಗಳು ವಿಶ್ವಸನೀಯವಲ್ಲವಾದರೂ ಎರಡು ಪ್ರಮುಖ ಕಾರಣಗಳಿಂದ ಮಹತ್ವ ಪಡೆಯುತ್ತವೆ:

೧. ಇದು ಈವರೆಗೆ ದೊರೆತಿರುವ ಗಂಗರಶಾ ಸನಗಳಲ್ಲಿ ಕೊಂಗುಣಿವರ್ಮ್ಮನ ಮೊದಲ ಶಾಸನವಾಗಿದೆ.

೨. ಕೃತಕವಾಗಿರದಿದ್ದರೆ ಇಬ್ಬರು ವೀರರನ್ನು ಪರಿಚಯಿಸುವ ಅತ್ಯಂತ ಪ್ರಾಚೀನ ದಾಖಲೆಯಾಗುತ್ತಿತ್ತು.

---

3 ಕರ್ನಾಟಕದ ಅರಸು ಮನೆತನಗಳು, ಧಾರವಾಡ, ೧೯೪೬, ಪು. ೧೧೩–೧೧೪

4 'ತಲಕಾಡು ಗಂಗರ ಕೃತಕ ತಾಮ್ರಶಾಸನಗಳು', ಹರತಿಸಿರಿ (ಹೆಚ್. ವಿ. ವೀರನಾಯಕ 'ಹರತಿ' ನೆನಪಿನ ಸಂಪುಟ), ಹರ್ತಿಕೋಟೆ, ೧೯೮೭, ಪು. ೭೬೬

5 ದಿ ಆನ್ಯುಯಲ್ ರಿಪೋರ್ಟ್ ಆಫ್ ದಿ ಮೈಸೂರು ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್, ೧೯೨೦-೨೧

ಡಾ॥ ಬಿ. ವ್ಹಿ. ಶಿರೂರ

ಶ್ರವಣಬೆಳ್ಗೊಳದ ತ್ಯಾಗದ ಬ್ರಹ್ಮದೇವರ ಕಂಬ

ಈಗ ದೊರೆತಿರುವ ಶ್ರವಣಬೆಳ್ಗೊಳದ ೫೭೩ ಶಾಸನಗಳಲ್ಲಿ ದೊಡ್ಡ ಬೆಟ್ಟದ ಮೇಲಿರುವ 'ತ್ಯಾಗದ ಬ್ರಹ್ಮದೇವರ ಕಂಬ'ವೂ ಒಂದು. ಸಿಂಹಪೀಠದ ಮೇಲೆ ನಿಲ್ಲಿಸಿದ ಸಿಲಿಂಡರಾಕಾರದ ಈ ಕಂಬದ ಕೆಳಗಿನ ಕಾಲು ಭಾಗ ಚಚ್ಚೌಕಾಗಿದೆ. ಮೇಲಿನ ಮಿಕ್ಕ ಭಾಗವೆಲ್ಲ ಸುಂದರ ಹೂ ಬಳ್ಳಿಯ ಚಿತ್ರವನ್ನೊಳಗೊಂಡಿದೆ. ಚೌಕೋನಾಕಾರದ ಮಧ್ಯದ ನಾಲ್ಕೂ ಭಾಗಗಳಲ್ಲಿ ಚಾವುಂಡರಾಯ ತನ್ನ ವಂಶಾವಳಿಯನ್ನೂ ಕಾರ್ಯ ಸಾಧನೆಯನ್ನೂ ಹೇಳುವ ಶಾಸನವೊಂದನ್ನು ಕೆತ್ತಿಸಿದ್ದಾನೆ. ಆದರೆ ದುರ್ದೈವಕ್ಕೆ ಕ್ರಿ. ಶ. ಸು. ೧೨೦೦ರಲ್ಲಿ ಹೆಗ್ಗಡೆ ಕಣ್ಣ ಎಂಬುವನು ತನ್ನ ಒಂದು ಶಾಸನ ಬರೆಸುವುದಕ್ಕಾಗಿ ಈ ಶಾಸನದ ಮೂರು ಬದಿಗಳನ್ನು ಅಳಿಸಿ ಹಾಕಿದ್ದಾನೆ. ಉಳಿದಿರುವ ಶಾಸನಭಾಗದಲ್ಲಿ ಚಾವುಂಡರಾಯನು ತನ್ನ ಅರಸು ಜಗದೇಕವೀರ(ರಾಚಮಲ್ಲ)ನ ಅಪ್ಪಣೆಯ ಮೇರೆಗೆ ಪಾತಾಳಮಲ್ಲನ ತಮ್ಮನಾದ ವಜ್ಜಳದೇವನ ಮೇಲೆ ಸೈನ್ಯ ತೆಗೆದುಕೊಂಡು ಹೋಗಿ ವೈರಿ ಸೈನ್ಯ ನಾಶಗೊಳಿಸಿದ. ನೊಳಂಬ ರಾಜ ಮತ್ತು ರಣಸಿಂಗರೊಂದಿಗೆ ನಡೆದ ಯುದ್ಧದಲ್ಲಿ ಜಗದೇಕವೀರನು ಚಾವುಂಡರಾಯನ ಶೌರ್ಯವನ್ನು ಸುತ್ತಿಸಿದ ಇತ್ಯಾದಿ ವಿವರ ಮಾತ್ರ ಇದೆ.

ಶಾಸನದಿಂದ ಹಾಳಾಗಿ ಹೋಗಿರುವ ಪಾಠ (Text)ದಲ್ಲಿ ಏನು ವಿಷಯ ಇದ್ದಿರಬಹುದು? ಚಾವುಂಡರಾಯ ಇದನ್ನು ಯಾವ ಉದ್ದೇಶಕ್ಕಾಗಿ ನಿಲ್ಲಿಸಿರಬಹುದು ?–ಎಂಬುದು ಕುತೂಹಲ ಹುಟ್ಟಿಸುವ ವಿಷಯವಾಗಿದೆ. ಇದನ್ನು ಪತ್ತೆ ಹಚ್ಚಲು ಸದ್ಯ ನಮಗೆ ಯಾವ ಆಧಾರವೂ ಇಲ್ಲ. ಜನ ಮಾತ್ರ ಇದನ್ನು ಇಂದಿಗೂ 'ತ್ಯಾಗದ ಬ್ರಹ್ಮದೇವರ ಕಂಬ' ಎಂದು ಕರೆಯುತ್ತಾರೆ. ಬಹುಶಃ ಇದು ತುಂಬ ಪ್ರಾಚೀನ ಕಾಲದಿಂದಲೂ ಜನರ ಬಾಯಲ್ಲಿ ಬದುಕಿ ಬಂದ ಶಬ್ದವಾಗಿರಬೇಕು. ಗ್ರಾಮೀಣರು ಇದಕ್ಕೆ ಕಾಲ್ಪನಿಕ ವಿವರಣೆ ಕೊಡಲು ಪ್ರಯತ್ನಿಸಿ, ಚಾವುಂಡರಾಯನು ಇಲ್ಲಿ ಕುಳಿತು ದಾನ ಮಾಡುತ್ತಿದ್ದ, ಅದಕ್ಕಾಗಿ ಈ ಕಂಬಕ್ಕೆ ಈ ಹೆಸರು ಬಂದಿತು, ಇತ್ಯಾದಿಯಾಗಿ ಹೇಳತೊಡಗಿದರೆಂದು ತೋರುತ್ತದೆ. ಒಬ್ಬ ವ್ಯಕ್ತಿ ದಿನವೂ ಒಂದು ಕಟ್ಟೆಯ ಮೇಲೆ ಬಂದು ಕುಳಿತೇ ದಾನ ಮಾಡುತ್ತಿದ್ದ, ಅಥವಾ ದಾನ ಮಾಡಬೇಕಾದ ಪ್ರಸಂಗ ಒದಗಿದಾಗ ಈ ಕಟ್ಟೆಗೇ ಬರುತ್ತಿದ್ದ ಎಂದರೆ ವಿಚಿತ್ರವೆನಿಸುತ್ತದೆ. 'ತ್ಯಾಗದ ಕಂಬ' ಎಂಬ ಪ್ರಚಲಿತ ಶಬ್ದವನ್ನು ಗಮನಿಸಿ ಜನಸಾಮಾನ್ಯರು ಕಟ್ಟಿದ ಕಥೆಯಿದು ಎಂಬುದು ಸ್ಪಷ್ಟವಾಗುತ್ತದೆ. ಹಾಗಾದರೆ ಅಳಿಸಿಹೋದ ಅಕ್ಷರಗಳಲ್ಲಿ ಏನು ವಿಷಯವಿದ್ದಿರಬಹುದು ಎಂಬುದು ಕುತೂಹಲದ ವಿಷಯವಾಗಿ ಉಳಿದು, ತ್ಯಾಗದ ಕಂಬ ಎಂಬ ನುಡಿಗಟ್ಟು ಈ ಕುತೂಹಲಕ್ಕೆ ಏನಾದರೂ ಸೂಚನೆ ನೀಡಬಹುದೇ ? ಎನಿಸುತ್ತದೆ.

ಈ ಸಂದರ್ಭದಲ್ಲಿ ಡಾ॥ ಎಂ. ಎಂ. ಕಲಬುರ್ಗಿ ಅವರ ಒಂದು ವ್ಯಾಖ್ಯಾನ ನಮ್ಮ ಗಮನ ಸೆಳೆಯುತ್ತದೆ. ಅವರು ಪಂಪಭಾರತದ 'ಚಾಗದ ಕಂಬಮಂ ನೀಡಿ, ಬೀರದ ಶಾಸನಮಂ ನೆಗಟ್ಚಿ' ಎಂಬ ವಾಕ್ಯಕ್ಕೆ ವಿವರಣೆ ನೀಡುತ್ತ 'ಮೂಲತಃ ತ್ಯಾಗದ ಕುರುಹಾಗಿ ಕಂಬವನ್ನು ಶೌರ್ಯದ ಕುರುಹಾಗಿ ಶಿಲಾಫಲಕರೂಪದ ಶಾಸನವನ್ನು

ನಿಲ್ಲಿಸುತ್ತಿರಬಹುದು' ಎಂದು ಹೇಳುತ್ತಾರೆ. ತ್ಯಾಗ (ದಾನ)ದ ಕುರುಹಾದ 'ಗೋಸಾಸ' ಸ್ಮಾರಕಗಳನ್ನು ಕುರಿತು ಶಾಸನಗಳಲ್ಲಿ 'ಕಂಬಮಂ ನಿಲಿಸಿದಂ, ಮೇಂಟೆಯುಂ ನಿಲಿಸಿದಂ' ಎಂದು ಹೇಳಲಾಗಿದೆ ಎಂಬು ದನ್ನೂ ಅವರು ಆಧಾರವಾಗಿ ಹಿಡಿಯುತ್ತಾರೆ. ಈ ವಿವರಣೆಯ ಬೆಳಕಿನಲ್ಲಿ ಶ್ರವಣಬೆಳ್ಗೊಳದ ತ್ಯಾಗದ ಕಂಬ ಶಬ್ದವನ್ನು ನೆನೆದರೆ ಈ ಶಾಸನದ ಅಳಿಸಿಹೋದ ಸ್ಥಾನದ 'ತ್ಯಾಗ(ದಾನ)'ದ ವಿಷಯವನ್ನು ಬರೆಯಲಾಗಿ ದ್ದಿತೆಂದೂ ಆ ಕಾರಣಕ್ಕಾಗಿ ಅದನ್ನು 'ತ್ಯಾಗದ ಕಂಬ' ಎಂದು ಕರೆಯಲಾಗಿದ್ದು. ಆಮೇಲೆ ಜನಪದರು ಚಾವುಂಡರಾಯ ಇಲ್ಲಿ ಕುಳಿತು ದಾನ ಮಾಡುತ್ತಿದ್ದ ಎಂಬ ಕಾಲ್ಪನಿಕ ವಿಷಯವನ್ನು ಪ್ರಚಾರ ಮಾಡಿದರೆಂದೂ ಹೇಳಬಹುದಾಗಿದೆ. ತ್ಯಾಗಕ್ಕೆ ಕಂಬವನ್ನು ನಿಲ್ಲಿಸುತ್ತಿದ್ದ ರೆಂಬ ಪಂಪನ ಮಾತಿಗೆ ಉದಾಹರಣೆಯೆನ್ನುವಂತೆ ಈ ಶಾಸನದ 'ತ್ಯಾಗದ ಕಂಬ' ಎಂಬ ಶಬ್ದ ಇನ್ನೂ ಜನರ ಬಾಯಲ್ಲಿ ಜೀವಂತ ಉಳಿದುದು ಇಲ್ಲಿ ಗಮನಿಸಬೇಕಾದ ವಿಷಯವೆನಿಸಿದೆ.

ದಾನಶಾಸನವಾದ ಈ ಕಂಬದ ಮೇಲೆ ಕಟ್ಟಲಾದ ಮಂಟಪದಲ್ಲಿ 'ಬ್ರಹ್ಮದೇವರ' ವಿಗ್ರಹವಿರುವುದರಿಂದ ಜನ ಈ 'ತ್ಯಾಗದ ಕಂಬ'ವನ್ನು 'ತ್ಯಾಗದ ಬ್ರಹ್ಮದೇವರ ಕಂಬ' ಎಂದು ಕರೆಯುತ್ತಿದ್ದಂತಿದೆ.

ಡಾ|| ಎಸ್. ಎಲ್. ಶಾಂತಕುಮಾರಿ

ತಂಬೂರ ಶಾಸನ

ತಂಬೂರು, ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಒಂದು ಚಿಕ್ಕ ಹಳ್ಳಿ. ಇಲ್ಲಿ ಉಪಸ್ಥಿತವಿರುವ ದೇವಾಲಯ, ಮೂರ್ತಿಶಿಲ್ಪಗಳು ಮತ್ತು ಹಲವು ಶಾಸನಗಳಿಂದ ಹಿಂದೆ ಇದು ಒಂದು ಹೆಸರಾಂತ ಸ್ಥಳವಾಗಿತ್ತೆಂದು ತಿಳಿದುಬರುತ್ತದೆ. ಕೆಲದಿನಗಳ ಹಿಂದೆ ಕಲಘಟಗಿಯ ಅನ್ವೇಷಣೆಯ ಕಾಲಕ್ಕೆ ನನಗೆ ಇಲ್ಲಿ ಹಲವು ಶಾಸನಗಳು ದೊರೆತಿದ್ದು, ಅವುಗಳಲ್ಲಿ ಹಲವು ಮಹತ್ವಪೂರ್ಣ ಮಾಹಿತಿಯನ್ನು ಒದಗಿಸುತ್ತವೆ. ಅಂಥವುಗಳಲ್ಲಿ ಒಂದನ್ನು ಕುರಿತು ಪ್ರಸ್ತಾಪಿಸುವುದು ಈ ಲೇಖನದ ಉದ್ದೇಶವಾಗಿದೆ.

ಈ ಊರಿನ ಶ್ರೀ ನಂದಿಕಟ್ಟಿ ಸಾಹೇಬ್ ಎನ್ನುವವರ ಹೊಲದಲ್ಲಿ ಹುಗಿಯಲ್ಪಟ್ಟಿದ್ದ ಈ ಶಾಸನವು ಸು. ೧ ಮಿ. ೧೨ ಸೆಂ.ಮಿ. ಉದ್ದ ಮತ್ತು ೧ ಮಿ. ೨ ಸೆಂ.ಮಿ. ಅಗಲವಿದ್ದು, ಇದರಲ್ಲಿ ೬೨ ಸಾಲುಗಳಿವೆ. ಶಾಸನದ ಮೇಲ್ಭಾಗ ಮತ್ತು ಕೆಳಗಿನ ಭಾಗವು ಒಡೆದು ಹೋಗಿರುವುದರಿಂದ ಶಾಸನದ ಪಾಠ ಅಪೂರ್ಣವಾಗಿದೆ.

ಮೊದಲಿಗೆ, ಮಲ್ಲಪ್ಪದಂಡನಾಯಕ ಎಂಬುವನ ಆಳ್ವಿಕೆಯ ಬಗ್ಗೆ ಹೇಳುವ ಈ ಶಾಸನದಲ್ಲಿ ಸಾಮನ್ತಕಗ್ಗ ಎನ್ನುವ ಒಬ್ಬ ಅಧಿಕಾರಿಯನ್ನು ಕುರಿತು ಹೇರಳವಾದ ವರ್ಣನೆಯಿದೆ. ಇದರಿಂದ ಇವನು ಅತ್ಯಂತ ಪರಾಕ್ರಮಿ ಹಾಗೂ ಉದಾರಿ ಎಂದು ತಿಳಿದುಬರುತ್ತದೆ.ಕದಂಬ ವೀರ ಪೆರ್ಮಾಡಿಯ ಸಾಮನ್ತನಾಗಿದ್ದ ಇವನ ವಂಶಾವಳಿಯ ಬಗ್ಗೆಯೂ ಮಾಹಿತಿ ನೀಡುವ ಈ ಶಾಸನವು ಸಾಮನ್ತ ಕಗ್ಗನು ತನ್ನ ಒಡೆಯನಾದ ವೀರ ಪೆರ್ಮಾಡಿಯ ಹೆಸರಿನಲ್ಲಿ ಪೆರ್ಮ್ಮಾಡೀಶ್ವರ ಎಂಬ ದೇವಾಲಯವನ್ನು ಕಟ್ಟಿಸಿದನೆಂದು ತಿಳಿಸುತ್ತದೆ. ಶಬ್ದಸಂಖ್ಯೆಯಲ್ಲಿ ಹೇಳಲಾಗಿರುವ ಈ ಶಾಸನದ ಕಾಲ ಕ್ರಿ.ಶ.ಸು. ೧೨೧೪ ಡಿಸೆಂಬರ್ ೧೪ ಭಾನುವಾರ ಎಂದಾಗುತ್ತದೆ. ಈ ದಿನದಂದು ಸಾಮನ್ತ ಕಗ್ಗನು ತಾನು ಕಟ್ಟಿಸಿದ ಪೆರ್ಮ್ಮಾಡೀಶ್ವರ ದೇವಾಲಯಕ್ಕೆ ಮಂಗಲಾನಕರವನ್ನು, ಶಿವಶಕ್ತಿ ಬ್ರತಿನಾಥರ ಪಾದಪೂಜೆ ಮಾಡಿ, ಬಿಟ್ಟನೆಂದು ತಿಳಿದುಬರುತ್ತದೆ. ಈ ದೇವಾಲಯಕ್ಕೆ ಹಾಗೂ ಇಲ್ಲಿ ನಡೆಯುವ ವಿದ್ಯಾಭ್ಯಾಸ ಮುಂತಾದವುಗಳ ಸಲುವಾಗಿ ಊರಿನ ಗೌಡರು, ಪ್ರಭುಗಳು, ಐನೂರ್ವರು, ನಕರ ಸಮೂಹದವರು, ತೆಲ್ಲಿಗರು ಮುಂತಾದವರು ಭೂಮಿ ಹಾಗೂ ದ್ರವ್ಯ, ಎಣ್ಣೆ ಮುಂತಾದ ರೂಪದಲ್ಲಿ ದತ್ತಿ ಬಿಟ್ಟಿದ್ದು ತಿಳಿದುಬರುತ್ತದೆ.

ಈ ಶಾಸನದಲ್ಲಿ ಧಾರವಾಡದ ಹೆಸರು ಮತ್ತು ಇಲ್ಲಿದ್ದ ಒಂದು ಮಠ ಹಾಗೂ ಇಲ್ಲಿಯ ಗುರುಪರಂಪರೆ ಉಕ್ತವಾಗಿದೆ. ಈ ಮಠದ ಗುರುಪರಂಪರೆ ಹೀಗಿದೆ:

ಅಗ್ನಿಮುನೀಂದ್ರ
|
ಸೋಮೇಶ್ವರ ಕಲಿಕಾಲ
|
ಮಧ್ವರೇಶ
|
ಶಿವಶಕ್ತಿಜ್ಞಾನಿ
|
ಶಿವಸಿದ್ಧಾಂತ
|
ಯೋಗವಿಚ್ಛವಿಶಕ್ತಿ

ಶಿವಶಕ್ತಿಜ್ಞಾನಿಗಳನ್ನು ಲೋಕೋತ್ತಮನೂ ಅಕುಟಿಳ ಗುಣನಿಲಯನೂ ಶೌಚ್ಛಿಕ ತಿಳಕನೂ ಪ್ರವರ ನೈಷ್ಠಿಕಾಭರಣನೂ ಎಂದು ಮುಂತಾಗಿ ವರ್ಣಿಸುವ ಶಾಸನವು ಯೋಗವಿಚ್ಛವಿಶಕ್ತಿಯನ್ನು ಕುರಿತು ಸಕಲ ಶಾಸ್ತ್ರ ಪ್ರೌಢನೀರಜನೆಂದೂ ಯಮನಿಯಮ ಸುಚ್ಚರಿತ್ರ ಶಮದಮನಿಷ್ಠಿತ ತಪಃಪ್ರಭಾವದಿಂದ ಕೂಡಿದವನಾಗಿ ಯತಿಪತಿಗಳಿಗೆ ತಿಲಕಪ್ರಾಯನಾಗಿದ್ದನೆಂದೂ ವರ್ಣಿಸುತ್ತದೆ.

ಈ ಶಾಸನದಲ್ಲಿ ಒಂದೆರಡು ಅಂಶಗಳು ಗಮನಾರ್ಹವಾಗಿವೆ. ಉದಾಹರಣೆಗೆ, ಶಾಸನದಲ್ಲಿ ಉಕ್ತವಾಗಿರುವ ಧಾರವಾಡದ ಹೆಸರು, ಇಲ್ಲಿದ್ದ ಮಠ ಮತ್ತು ಈ ಮಠದ ಗುರುಪರಂಪರೆ. ಧಾರವಾಡದ ಹೆಸರನ್ನು ಉಲ್ಲೇಖಿಸುವ ಹಲವೇ ಶಾಸನಗಳಲ್ಲಿ ಈ ಶಾಸನವೂ ಒಂದಾಗಿದೆಯಲ್ಲದೆ, ಈ ಶಾಸನದಿಂದ ಇಲ್ಲಿದ್ದ ಮಠದ ಬಗೆಗಿನ ಉಲ್ಲೇಖವು ಮೊದಲಬಾರಿಗೆ ಬರುತ್ತದೆ. ಅದೇ ರೀತಿ ಇಲ್ಲಿಯ ಗುರುಪರಂಪರೆ. ಆದರೆ ಈ ಮಠ ಯಾವ ಮಠವನ್ನು ಕುರಿತಾಗಿದೆ ಎಂದು ತಿಳಿದುಬರುವುದಿಲ್ಲ. ಸಾಮಾನ್ಯವಾಗಿ ಮಠಗಳು ಒಂದು ದೇವಾಲಯಕ್ಕೆ ಸೇರಿದವುಗಳಾಗಿರುತ್ತವೆ. ಆದರೆ ಇಲ್ಲಿಯ ಮಠ ಯಾವ ದೇವಾಲಯಕ್ಕೆ ಹೊಂದಿಕೊಂಡಿತ್ತೆಂದು ತಿಳಿದುಬರುವುದಿಲ್ಲ. ಸಾಮಾನ್ಯವಾಗಿ ಮಠಗಳು ಕಾಲಾಮುಖ ಶೈವರಿಗೆ ಸೇರಿದವುಗಳಾಗಿರುತ್ತವೆ. ಆದರೆ ಇಲ್ಲಿ ಈ ಮಠ ಯಾವ ಪಂಗಡಕ್ಕೆ ಸೇರಿದ್ದೆಂದು ಹೇಳಲಾಗುವುದಿಲ್ಲವಾದರೂ ಮೊದಲಿಗೆ ಕಾಲಾಮುಖ ಪಂಗಡಕ್ಕೆ ಸೇರಿದ್ದ ಮಠ ಧಾರವಾಡದಲ್ಲಿದ್ದಿತೆಂದು ಹೇಳಲಾಗಿದೆ. ಇದಕ್ಕೆ ಪೂರಕವಾಗಿ ಕ್ರಿ.ಶ. ೧೧೮೧ರ ಧಾರವಾಡದ ಒಂದು ಶಾಸನದಲ್ಲಿ ಕಲ್ಯಾಣಶಕ್ತಿ ಎಂಬ ಗುರುವಿನ ಉಲ್ಲೇಖ ಬರುತ್ತದೆ. ಇದರಿಂದ ಈ ಮಠವು ಕಾಲಾಮುಖ ಪಂಗಡಕ್ಕೆ ಸೇರಿದ ಮಠವಾಗಿತ್ತೆಂದು ಊಹಿಸಬಹುದಾಗಿದೆ.

ಮತ್ತೊಂದು ಗಮನಾರ್ಹ ಸಂಗತಿ ಎಂದರೆ, ಈ ಶಾಸನದಲ್ಲಿ ವರ್ಣಿತನಾಗಿರುವ ಹಾಗೂ ಅನೇಕ ವಿಧವಾಗಿ ಹೊಗಳಿಕೆಗೆ ಪಾತ್ರನಾಗಿರುವ ಸಾಮಂತ ಕಗ್ಗನ ಬಗ್ಗೆ ಮೊದಲಬಾರಿಗೆ ಈ ಶಾಸನವು ವಿವರಣೆ ನೀಡುತ್ತದೆ.

ಈ ಶಾಸನದಲ್ಲಿ ಉಕ್ತವಾಗಿರುವ ಕಾರಗೋಡತಳ, ಬಳಗದ್ದೆ, ಹೆಗ್ಗೇರಿ ಮುಂತಾದ ಸ್ಥಳಗಳನ್ನು ಇಂದಿಗೂ ಅದೇ ಹೆಸರಿನಿಂದ ಗುರುತಿಸಬಹುದಾಗಿದೆ. ಅದೇ ರೀತಿ ಮಾವಳ್ಳಿ-೧೨, ಹುಲಿಗೋಡು-೧೨, ತಮ್ಮಿಯೂರು-೧೨ ಎಂಬ ಹೆಸರುಗಳು ಶಾಸನದಲ್ಲಿ ಕಂಡುಬರುತ್ತವೆ. ಮಾವಳ್ಳಿ ಮತ್ತು ಕಾರಗೋಡತಳ ಇಂದು ಕಾಡು ಪ್ರದೇಶವಾಗುಳಿದು ಅದೇ ಹೆಸರಿನಿಂದ ಕರೆಯಲ್ಪಡುತ್ತಿವೆ. ತಮ್ಮಿಯೂರು ಇಂದಿನ ತಂಬೂರಾದರೆ ಅದೊಂದು ಚಿಕ್ಕ ಗ್ರಾಮವಾಗಿ ಉಳಿದಿದೆ.

ಹೀಗೆ, ಮೇಲ್ಕಂಡ ಈ ವಿವರಗಳಿಂದ ತಂಬೂರಿನ ಈ ಶಾಸನವು ಒಂದು ವೈಶಿಷ್ಟ್ಯಪೂರ್ಣ ಶಾಸನವಾಗಿದೆ ಎಂದು ಹೇಳಬಹುದು.

ಡಾ॥ ಕೆ. ಜಿ. ವಸಂತಮಾಧವ

ಕೊಡೆತೂರು ಮಜಿಲಾರ ಬಾಳಿಕೆ ಶಿಲಾಶಾಸನ

ಪೀಠಿಕೆ : ತುಳುನಾಡಿನ ಅರಸುಮನೆತನಗಳಲ್ಲಿ ಸಾವಂತ(ಸಾಮಂತ)ರಸರು ಇಲ್ಲಿಯ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಇವರು ಧರ್ಮ ಸಮನ್ವಯ ಕಾಪಾಡಿಕೊಂಡು ಬಂದು ಕಲೆ, ಸಾಹಿತ್ಯಗಳನ್ನು ತಮ್ಮ ಆಳ್ವಿಕೆಯಲ್ಲಿ ಪ್ರೋತ್ಸಾಹಿಸಿದರು. ಇವರು ೧೪ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಶಾಂಭವಿ ನದಿಯಿಂದ, ನಂದಿನಿ ನದಿ(ಮೂಲ್ಕಿ ಮತ್ತು ಪಾವಂಜೆ)ಯವರೆಗಿನ ಪ್ರದೇಶವನ್ನು ಆಳಿಕೊಂಡಿದ್ದರು. ಈ ಅರಸು ಮನೆತನದವರು ವಿಜಯನಗರ ಮತ್ತು ಕೆಳದಿ ನಾಯಕರ ಸಾರ್ವಭೌಮತೆಯನ್ನು ಒಪ್ಪಿಕೊಂಡು ತಮ್ಮ ಸೀಮೆಯನ್ನು ಆಳಿಕೊಂಡಿದ್ದರು. ಇವರ ರಾಜಧಾನಿ ಮೊದಲು ಸೀಮಂತೂರು, ನಂತರ ಮೂಲಿಕೆಯ ಕೋಟೆ ಕೇರಿ ಮತ್ತು ಕೊನೆಗೆ ಪಡುಪಣಂಬೂರು ಆಗಿದ್ದವು. ಇವರ ಆಳ್ವಿಕೆ ಪ್ರದೇಶ ಒಂಭತ್ತು ಮಾಗಣೆಗಳನ್ನು ಒಳಗೊಂಡಿತ್ತು. ಈ ಒಂಭತ್ತು ಮಾಗಣೆಗಳಲ್ಲಿ ಕೊಡೆತ್ತೂರು ಒಂದಾಗಿತ್ತು. ಇಲ್ಲಿಯೆ ಈ ಮೇಲೆ ಕಾಣಿಸಿದ ಶಾಸನವು ಇದೆ. ಈ ಶಾಸನ ಇರುವ ಪ್ರದೇಶ 'ಮಂಜಿಲಾರ ಬಾಳಿಕೆ' ಎನ್ನುತ್ತಾರೆ. ಈ ಶಾಸನ ಇರುವುದನ್ನು ಪಿ. ಶ್ರೀನಿವಾಸಭಟ್ಟರು ತಿಳಿಸಿದರು.

ಶಾಸನದ ಪಾಠ

೧ ಶ್ರೀ ಕಾಂತೇಶ್ವರಾಯನಮಃ ಸ್ವಸ್ತಿಶ್ರೀ ಜಯಾ
೨ ಭ್ಯುದಯ ಶಾಲಿವಾಹನ ಶಕವರುಷ
೩ ೧೫೩೨ನೆಯ ಸಉಮ್ಯ ಸಂವತ್ಸರದ ಮಾಘ
೪ ಶುಧ ೧ರಲು ಶ್ರೀಮತು ಕಾಂತೇಶ್ವರದೇವರ
೫ ಸಂಕೇತ ಕೊಡೆತೂರ . . ದಲ್ಲಿ ಚೆಂನಮದೇವಿಯ
೬ ಕಿಂನಿಕ ಸಾವಂತರು ಹಾಕಿಸ್ದ ಶಿಲಾಶಾಸನದ
೭ ಕ್ರಮವೆಂತೆಂದರೆ ದೇವಸ್ಥದ ಒಕಲಿಂದ ನಂಮ ಮನು
೮ ಶ್ಯರು ಯೆತ್ತುವ ಮೂವತ್ತೆರಡು ವರಹಂನು ಆ ಒ
೯ ಕಲರ ಚೌಟ ಉಪಾರನ ಮನುಶ್ಯರು ಯೆತ್ತ
೧೦ ಲಿಲ ಆ ಒಕಲ ತಾವೆ ನಂಮ ಮನುಶ್ಯರು

೧೧ ಪೂರ್ವ ಪ್ರಮಾಣದಲಿ ಯೆತ್ತಾಣ ಒತ್ತಾಯ

೧೨ ಮಾಡದಂತೆ ಕಟ್ಟು ಮಾಡಿಸ್ತೇವು ಕಾಂತೇಶ್ವರದ

೧೩ ಮನುಶ್ಯರು ಪೊಕಲಿಂ ದುಗ್ಗಪಡೆತ ಭೋಗವ ಪೂರ್ವ

೧೪ ವರ್ತಕದಲ್ಲಿ ತಗೆವೂಯಿದಕ್ಕೆ ನಾಲು ತಪ್ಪಿದರೆ

೧೫ ಜನಾರ್ದನದೇವರಿಗೂ ವರ್ದಮಾನಸ್ವಾಮಿಗೂ ತಪ್ಪಿ

೧೬ ದವರು ಕಾಂತೇಶ್ವರದೇವರ ಮನುಶ್ಯರು ತಪ್ಪಿದರೆ ಕಾಂತೇಶ್ವ

೧೭ ರಗೆ ತಪ್ಪಿದವರು ॥ ಭದ್ರಭೂಯಾತ್ ಶ್ರೀ*

ಶಾಸನದ ಸಾರಾಂಶ : ಕನ್ನಡಲಿಪಿ ಮತ್ತು ಅದೇ ಭಾಷೆಯಲ್ಲಿ ಈ ಶಾಸನ ಇದೆ. ಶಾಸನವು ೧೭ ಪಂಕ್ತಿಗಳ ನ್ನೊಳಗೊಂಡಿದೆ. 'ಕಾಂತೇಶ್ವರಾಯ ನಮಃ' ಎಂದು ಇದು ಆರಂಭವಾಗುತ್ತದೆ. ಇಲ್ಲಿ ತಿಳಿಸಿದ ಕಾಂತೇಶ್ವರ ಕಾರ್ಕಳ ತಾಲೋಕಿನ ಕಾಂತಾವರದ ಶಿವಾಲಯವಾಗಿದೆ. ಈ ಶಾಸನವು 'ಚೆಂನಮದೇವಿಯು ಕಿಂನಿಕ ಸಾವಂತರು' ಎಂದು ತಿಳಿಸಿ ಇವರುಗಳು ಹಾಕಿದ ಶಾಸನದ ವಿವರ ಗಳನ್ನು ತಿಳಿಸುತ್ತದೆ. ಈ ವಿವರಗಳು ಏನೆಂದರೆ, ಇವರು ಕೊಡೆತೂರದಲ್ಲಿ ಕಾಂತೇಶ್ವರದೇವರ ಒಕ್ಕಲಿಗೆ ಈ ದೇವಾಲಯಕ್ಕೆ ಕೊಡುವ ಹಣವನ್ನು(ಗೇಣಿ) ೩೨ ವರಹವನ್ನು ನಿರ್ಣಯಿಸಿ, ಇದಕ್ಕಿಂತ ಹೆಚ್ಚಿಗೆ ಹಣವನ್ನು ಚಾವುಟರು ದೇವಾಲಯದ ಪರವಾಗಿ ಎತ್ತಬಾರದು. (ಇಲ್ಲಿ ತಿಳಿಸಿದ ಚಾವುಟರು ತುಳುನಾಡಿನ ಇನ್ನೊಂದು ಅರಸು ಮನೆತನ. ಇವರ ರಾಜಧಾನಿ ಪುತ್ತಿಗೆಯಾಗಿತ್ತು. ಇವರ ಸೀಮೆಯಲ್ಲಿ ಕಾಂತೇಶ್ವರ ದೇವಾಲಯವಿದೆ.) ಈ ನಿರ್ದಿಷ್ಟ ಮೊತ್ತದ ಗೇಣಿಕ್ಕಿಂತ ಹೆಚ್ಚಿಗೆ ನಾವು ಎತ್ತಲು ಬಿಡಬಾರದು. ಇದನ್ನು ಉಲ್ಲಂಘಿಸಿದರೆ ಜನಾರ್ಧನ, ವರ್ಧಮಾನ ಮತ್ತು ಕಾಂತೇಶ್ವರ ದೇವರಿಗೆ ತಪ್ಪಿದವರು. ಇಷ್ಟನ್ನು ತಿಳಿಸಿ ಶಾಸನವು ಅಂತ್ಯವಾಗುತ್ತದೆ.

ಶಾಸನದ ಪ್ರಾಮುಖ್ಯತೆ : ಈ ಮಂಜಿಲಾರ ಬಾಳಿಕೆಯ ಶಾಸನವು ಮೂಲಿಕೆಸೀಮೆಯ ಇತಿಹಾಸ ಅಧ್ಯಯನಕ್ಕೆ ಹೊಸ ಸಂಗತಿಗಳನ್ನು ತಿಳಿಸಿದೆ. ಇಷ್ಟರ ವರೆಗೆ ಸ್ಪಷ್ಟವಾಗಿ ತಿಳಿಸದ ಚೆಂನಮದೇವಿ ಮತ್ತು ಕಿನಿಕ ಸಾಮಂತರ ಜಂಟಿ ಆಳ್ವಿಕೆಯನ್ನು ಈ ಶಾಸನವು ತಿಳಿಸಿದೆ. ಇವಳು ಈ ಹಿಂದೆ ಆಳಿದ್ದ ದುಗ್ಗಣ ಸಾವಂತನ ಸಹೋದರಿ. ಇವಳನ್ನೆ ಪದ್ಮನಾಭಕವಿಯು ದೇವಂಮರಾಜಿ[1] ಎಂದು ತನ್ನ ಕಾವ್ಯದಲ್ಲಿ ತಿಳಿಸಿದ್ದಾನೆ. ಇವಳನ್ನು ಪಶ್ಚಿಮ ವೇಣುಪುರದ (ಪಡುಬಿದ್ರೆ) ಬಲ್ಲಾಳ ಮಹಾಲಿಂಗನು ಮದುವೆಯಾಗಿದ್ದನು.[2] ಶಾಸನದಲ್ಲಿ ತಿಳಿಸಿದ ಕಿಂನಿಕನು ಅಪ್ರಬುದ್ಧನಾಗಿದ್ದುದರಿಂದ ಈ ರಾಣಿ ಮಗನ ಹೆಸರಿನಲ್ಲಿ ನಡೆಸಿಕೊಂಡು ಬಂದಳೆಂದು ತಿಳಿದು ಬರುತ್ತದೆ. ಇದನ್ನೇ ಇಟೇಲಿಯ ಪ್ರವಾಸಿ ಡೆಲ್ಲಾವೆಲ್ಲಿ ಮತ್ತು ಪದ್ಮನಾಭಕವಿಯು ಬರಹಗಳು ಸಮರ್ಥಿಸು ತ್ತವೆ.[3] ಈ ರಾಣಿಯನ್ನೇ ಡೆಲ್ಲಾವೆಲ್ಲಿಯು 'ಕಾರ್ನಾಟ ರಾಣಿ' ಎಂದು ಕರೆದಿದ್ದಾನೆ.[4] ಕೊಡತೂರದಲ್ಲಿಯ ಕಾಂತೇಶ್ವರದೇವರ ಒಕ್ಕಲಿಗೆ ಕೊಡುವ ಗೇಣಿ ನಿರ್ಧರಿ ಸಿದ್ದು ಈ ಶಾಸನದ ಇನ್ನೊಂದು ಹೊಸಸಂಗತಿ. ಇದ ರಿಂದ ಈ ಒಕ್ಕಲಿಗೆ ಈ ಪ್ರದೇಶದಲ್ಲಿ ಕೃಷಿಜೀವನದಲ್ಲಿ

---

* ಶಾಸನದ ಪಾಠ ನೋಡಿ : ಕೆ. ಜಿ. ವಸಂತಮಾಧವ : ಮೂಲಿಕೆಯ ಇತಿಹಾಸ, ಪು. ೭೬-೭೭

1 ಗಣಪತಿ ರಾವು ಎಂ. ಐಗಳ : ದಕ್ಷಿಣಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಮಂಗಳೂರು, ೧೯೨೩, ಪು. ೩೪೨

2 ಪುಟ್ಟುಸ್ವಾಮಿ (ಸಂ.) : ಪದ್ಮಾವತಿ ಮಹಾತ್ಮ್ಯ, ಅಥವಾ ಜಿನದತ್ತರಾಯ ಚರಿತ್ರೆ, ಮಂಗಳೂರು, ೧೯೫೦, ಪು. ೫

3 *The Travels in India*, Vol. II, London, 1892, pp. 352-3 ; ಪದ್ಮನಾಭಕವಿ, ಪು. ೫ : ಪದ್ಯ ೬೧

4 *The Travels in India*, Vol. II, p.352 ; ವಿವರಗಳಿಗೆ, B.A. Saletore 'Carnate', *Journal of the Bombay Historical Society*, Vol. II, 1929, pp. 223-231 ; ಕೆ. ಜಿ. ವಸಂತಮಾಧವ : 'ಕಾರ್ನಾಟಿನ ರಾಣಿ', ವಿಜಯ, ೧೯೭೨, ಪು. ೪೭-೫೩

ಭದ್ರತೆಯನ್ನು ಉಂಟುಮಾಡಲು ಸಹಾಯಕವಾಯಿತು. ಗೇಣಿಯನ್ನು ಹಣದ ಮುಖಾಂತರವೂ ಕೊಡುವ ಪದ್ಧತಿ ಇದೆಯೆಂದು ಈ ಶಾಸನದಿಂದ ತಿಳಿದುಬರುತ್ತದೆ. ಚೌಟ ಅರಸರ ಅಧಿಕಾರಿಗಳು ಕಾಂತೇಶ್ವರದೇವರ ಒಕ್ಕಲಿಂದ ಗೇಣಿ ವಸೂಲಿ ಮಾಡುತ್ತಿದ್ದರೆಂದು ಈ ಶಾಸನದಿಂದ ತಿಳಿಯುತ್ತದೆ. ಇದರಿಂದಾಗಿ ಅರಸುಗಳಿಗೆ ದೇವಾಲಯದ ಮೇಲೆ ಹಿಡಿತ ಇದ್ದಿತೆಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ಈ ಮಜಿಲಾರ ಬಾಳಿಕೆ ಶಿಲಾಶಾಸನವು ದೇವಸ್ಥಾನದ ಒಕ್ಕಲಿಗೆ ಗೇಣಿ ಏರಿಸಿದ ಹಾಗೇ ರಕ್ಷಣೆಯನ್ನೂ ನೀಡುತ್ತದೆ. ಇದು ಈ ಶಾಸನದ ಇನ್ನೊಂದು ವೈಶಿಷ್ಟ್ಯ. ಇದನ್ನು ಉಲ್ಲಂಘಿಸಿದವರು ಈ ಪ್ರದೇಶದ ಮುಖ್ಯ ದೇವರುಗಳಾದ ಜನಾರ್ಧನ, ಕಾಂತೇಶ್ವರ ಮತ್ತು ವರ್ಧಮಾನರಿಗೆ ತಪ್ಪಿದವರು ಎಂದು ಈ ಶಾಸನ ಎಚ್ಚರಿಸಿದೆ.

ಇಲ್ಲಿ ತಿಳಿಸಿದ ಜನಾರ್ಧನದೇವರು ಮೂಲಿಕೆ ಸೀಮೆಯ ದೇವಾಲಯವಾದ ಸೀಮಂತೂರು ಜನಾರ್ಧನ. ಈ ದೇವಾಲಯದಲ್ಲೇ ಸಾವಂತರಸರಿಗೆ ಪಟ್ಟವಾಗುವುದು. ಈ ದೇವರ ಸಮ್ಮುಖದಲ್ಲಿ ಸಾವಂತ ಅರಸರುಗಳು ಒಪ್ಪಂದಗಳನ್ನು ಮಾಡಿಕೊಂಡಿದ್ದರು.[5] ವರ್ಧಮಾನ, ಇದು ಕಾರ್ನಾಡಿನಲ್ಲಿರುವ (ಈಗ ಪಡುಪಣಂಬೂರು) ವರ್ಧಮಾನ ಬಸದಿ. ಈ ಬಸದಿಯನ್ನು ದುಗ್ಗಣ ಸಾವಂತನು ಕಟ್ಟಿದನು. ಈ ಶಾಸನದಲ್ಲಿರುವ ಜನಾರ್ಧನ, ವರ್ಧಮಾನ ಮತ್ತು ಕಾಂತೇಶ್ವರಗಳ ಉಲ್ಲೇಖವು, ಇಲ್ಲಿ ವೈಷ್ಣವ, ಜೈನ ಮತ್ತು ಶೈವ ಸಂಪ್ರದಾಯಗಳ ಸಮನ್ವಯತೆಯನ್ನು ವ್ಯಕ್ತಪಡಿಸುತ್ತದೆ. ಈ ಶಾಸನವು ತುಳುನಾಡಿನ ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲುತ್ತದಾದ್ದರಿಂದಾಗಿ ಇದು ಅಧ್ಯಯನಕ್ಕೆ ಯೋಗ್ಯವಾಗಿದೆ.*

5 *Annual Report on South Indian Epigraphy*, 1931, Nos. 339, 340 ; ನೋಡಿ : ಕೆ. ಜಿ. ವಸಂತಮಾಧವ : ಮೂಲಿಕೆಯ ಇತಿಹಾಸ, ಮೂಲ್ಕಿ, ೧೯೮೮, ಪು. ೧೯, ೨೦, ೨೯

* ಈ ಶಾಸನ ಅಧ್ಯಯನಿಸುವಲ್ಲಿ ಸಹಕಾರವಿತ್ತ ಶ್ರೀ ಪಿ. ಶ್ರೀನಿವಾಸಭಟ್ಟ ಮತ್ತು ಶ್ರೀ ಎಸ್. ಮೋಹನರಾವ್-ಇವರುಗಳಿಗೆ ನಾನು ಕೃತಜ್ಞನಾಗಿದ್ದೇನೆ.

ದೇವರಕೊಂಡಾರೆಡ್ಡಿ

ಗುಮ್ಮಳಾಪುರದ ಗೌರಮ್ಮನಗುಡಿಯ ಶಿಲಾಶಾಸನ

ಬೆಂಗಳೂರಿಗೆ ಸುಮಾರು ೪೫ ಕಿಲೋಮೀಟರ್ ದೂರದಲ್ಲಿರುವ ಗುಮ್ಮಳಾಪುರ ಗ್ರಾಮವು ಇಂದು ರಾಜಕೀಯವಾಗಿ ತಮಿಳುನಾಡಿಗೆ ಸೇರಿದೆ. ಪ್ರಸ್ತುತ ಶಾಸನವು ಅಲ್ಲಿಯ ಗೌರಮ್ಮನ ಗುಡಿಯ ಮುಂದೆ ಇದೆ. ಕನ್ನಡಭಾಷೆ ಮತ್ತು ಲಿಪಿಯಲ್ಲಿರುವ ಈ ಶಾಸನವು ೨.೪ ಮೀ. ಎತ್ತರ ಮತ್ತು ೦.೮ಮೀ. ಅಗಲವಿದ್ದು,ಸ್ಥಳೀಯವಾಗಿ ದೊರೆಯುವ ಗಟ್ಟಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಲಾಗಿದೆ. ಇದರಲ್ಲಿ ಒಟ್ಟು ೨೯ ಸಾಲುಗಳಿವೆ. ೧೮, ೧೯ ಮತ್ತು ೨೬, ೨೭ನೇ ಸಾಲುಗಳಲ್ಲಿ ಹಲವು ಅಕ್ಷರಗಳು ತೃಟಿತವಾಗಿವೆ. ಭಾಷೆ ಮತ್ತು ಲಿಪಿ ಸಮಕಾಲೀನ ವಿಜಯನಗರ ಶಾಸನಗಳಲ್ಲಿದ್ದಂತೆಯೇ ಇದೆ. ಶಾಸನದ ಅಂತ್ಯಭಾಗ ಮಾತ್ರ ಇದ್ದಕ್ಕಿದ್ದಂತೆ ಕೊನೆಯಾದಂತೆ ಭಾಸವಾಗುತ್ತದೆ.

ಶಾಲಿವಾಹನ ಶಕ ೧೫೨೮ನೆಯ ಪರಾಭವ ಸಂವತ್ಸರದ ಕಾರ್ತಿಕ ಬ ೧೨ ಸೋಮವಾರ ಎಂದು ಕಾಲವನ್ನು ಉಲ್ಲೇಖಿಸುತ್ತದೆ ಈ ಶಾಸನ. ಈ ತೇದಿ ವಿವರಗಳು ಕ್ರಿ.ಶ. ೧೬೦೬ನೇ ನವೆಂಬರ್ ೧೭ನೇ ತಾರೀಖಿಗೆ ಸರಿಹೊಂದುತ್ತದೆ. ಈ ಕಾಲಕ್ಕೆ ವಿಜಯನಗರದ ಅರಸ ವೆಂಕಟಪತಿರಾಯನು ಪೆನುಗೊಂಡೆಯಿಂದ ರಾಜ್ಯಭಾರ ಮಾಡುತ್ತಿದ್ದನು. ಅವನ ಕೈಕೆಳಗೆ ಚತುರ್ಥಗೋತ್ರದ (ನಾಲ್ಕನೇ ವರ್ಣದವನಾದ) ಇಮ್ಮಡಿ ಕೆಂಪೇಗೌಡನು ಎಲಹಂಕನಾಡ ಪ್ರಭುವಾಗಿದ್ದನೆಂದು ಪ್ರಸ್ತುತ ಶಾಸನದಿಂದ ತಿಳಿದುಬರುತ್ತದೆ. ಈ ಇಮ್ಮಡಿ ಕೆಂಪೇಗೌಡನ ತಂದೆ ಕೆಂಪೇಗೌಡನೆಂದೂ ತಾತ ಕೆಂಪನಾಚೇಗೌಡನೆಂದೂ ಸ್ಪಷ್ಟವಾಗಿ ಹೇಳಿದೆ.

ದಾನ ಸ್ವೀಕರಿಸಿದ ವ್ಯಕ್ತಿ ನಂಜೇದೇವರು ಅಯ್ಯನವರು. ಈತನನ್ನು ಭಾರದ್ವಜಗೋತ್ರದ ಪಡಿವಿಡಿ ವರ್ಗದ ಕೊಲ್ಲಿಪಾಕೆ ರೇವಣಸಿದ್ಧೇಶ್ವರನ ಸಂಪ್ರದಾಯಸ್ಥನೆಂದೂ ಗುಮ್ಮಳಾಪುರದ ಸಿಂಹಾಸನಕ್ಕೆ ಕರ್ತೃನೆಂದೂ ಕರೆದಿದ್ದು, ಇವನ ತಂದೆ ಚೆನ್ನಮಲ್ಲಿಕಾರ್ಜುನದೇವ ಮತ್ತು ತಾತ ನಂಜೇದೇವರು ಎಂದೂ ಉಲ್ಲೇಖಿಸಲಾಗಿದೆ. ಮೇಲೂರಿಗೆ ಸೇರಿದ ಗುಮ್ಮಳಾಪುರವನ್ನು ದಾನವಾಗಿ ನೀಡಲಾಗಿದೆ. ಮೇಲೂರು ಈಗ ಇಲ್ಲ, ಹಾಳೂರಾಗಿದೆ. ಗುಮ್ಮಳಾಪುರ ಇಂದಿಗೂ ಉಳಿದಿದೆ.

ಈ ಶಾಸನದಲ್ಲಿ ಪ್ರಯುಕ್ತವಾಗಿರುವ ಎಲಹಂಕ ನಾಡಪ್ರಭು ಇಮ್ಮಡಿ ಕೆಂಪೇಗೌಡನ ರಾಜ್ಯವು ಗುಮ್ಮಳಾಪುರದವರೆಗೂ ವಿಸ್ತರಿಸಿತ್ತೆ ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ವಾಸ್ತವವಾಗಿ, ಈ ಅವಧಿಯಲ್ಲಿ ಗುಮ್ಮಳಾಪುರದ ಉತ್ತರಕ್ಕಿರುವ ಆನೇಕಲ್ ಪ್ರದೇಶವು ಸುಗಟೂರು ವಂಶದ ದೊರೆ ಇಮ್ಮಡಿ ತಮ್ಮೇಗೌಡನ ಅಧೀನದಲ್ಲಿತ್ತೆಂದು ತಿಳಿದುಬರುತ್ತದೆ. ಸುಗಟೂರು ವಂಶದ ಮುಮ್ಮಡಿ ತಿಮ್ಮೇಗೌಡನ ಕ್ರಿ ಶ. ೧೬೧೪ರ ಶಾಸನವೊಂದರಲ್ಲಿ "ನಂಮರಾಜ್ಯದ ಸಿಂಹಾಸನಕ್ಕೆ ಆಪ್ತರಾದ ಪಟ್ಟದಗುರು ನಂಜೇದೇವರು" ಎಂಬ ಮಾತು ಬಂದಿದೆ.[1]

1 ಎಪಿಗ್ರಾಫಿಯ ಕರ್ನಾಟಿಕಾ, ಸಂಪುಟ ೧೦, ಕೋಲಾರ ೬೪, ಗರುಡನಹಳ್ಳಿ

ಕ್ರಿ.ಶ. ೧೬೨೯(?)ರ ಸರ್ಜಾಪುರದ ಶಾಸನದಲ್ಲಿ ಇದೇ ಮುಮ್ಮಡಿ ತಮ್ಮೇಗೌಡನು ಈತನಿಗೆ ಬೆಳವನಹಳ್ಳಿ ಎಂಬ ಗ್ರಾಮವನ್ನು ದತ್ತಿ ಬಿಟ್ಟ ವಿವರವಿದೆ.[2] ಹಾಗೆಯೇ, ಇಮ್ಮಡಿ ಕೆಂಪೇಗೌಡನ ಯುದ್ಧಸಾಹಸಗಳನ್ನು ವರ್ಣಿಸುವ ಹಾಡುಗಬ್ಬವಾದ ಅಜ್ಞಾತಕವಿಯೋರ್ವನ ಕೃತಿ 'ಕೆಂಪೇಗೌಡನ ಜಯಪ್ರಶಸ್ತಿ'ಯಲ್ಲಿ ಗುಮ್ಮಳಾಪುರದ ಗುರುನಂಜೇಶನ ಪ್ರಸ್ತಾಪ ಬಂದಿದೆ.[3] ಈ ಎರಡೂ ಪಾಳೆಯಗಾರ ವಂಶಿಯರು ವೀರಶೈವ ಧರ್ಮಕ್ಕೆ ಪೋಷಕರಾಗಿದ್ದ ಅಂಶ ವಿರೂಪಾಕ್ಷಪಂಡಿತನ 'ಚೆನ್ನಬಸವ ಪುರಾಣ'ದಿಂದ ತಿಳಿದುಬರುತ್ತದೆ.[4] ಅಲ್ಲದೆ ಇವರು ಪರಸ್ಪರ ಬಾಂಧವ್ಯವುಳ್ಳವರಾಗಿದ್ದರೆಂಬ ಅಂಶ ಇತರ ಆಕರಗಳಿಂದಲೂ ತಿಳಿದುಬರುತ್ತದೆ.[5] ಅದರಿಂದಾಗಿ ಈ ಎರಡೂ ಮನೆತನಗಳಿಗೂ ಪ್ರಸ್ತುತ ಶಾಸನದಲ್ಲಿ ಪ್ರಯುಕ್ತವಾಗಿರುವ ನಂಜೇದೇವರು ಅಯ್ಯನವರು ಗುರುವಿನ ಸ್ಥಾನದಲ್ಲಿದ್ದನೆಂದು ಹೇಳಬಹುದು. ಪ್ರಸ್ತುತ ಗುಮ್ಮಳಾಪುರದಲ್ಲಿರುವ ವೀರಶೈವ ಮಠವು ಬಾಳೆಹೊನ್ನೂರು ಸಿಂಹಾಸನದ ಶಾಖಾಮಠವಾಗಿದೆ.

ಗುಮ್ಮಳಾಪುರವು ಒಂದು ಕಾಲದಲ್ಲಿ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರವಾಗಿದ್ದಿತು. ಅದರಲ್ಲೂ ವೀರಶೈವ ಧರ್ಮದ ಇತಿಹಾಸದಲ್ಲಿ ಇದಕ್ಕೆ ಗಣನೀಯ ಸ್ಥಾನವಿದೆ ಎಂದು ಹೇಳಬಹುದು. ಗುಮ್ಮಳಾಪುರದಲ್ಲಿ ಪ್ರಭುಗ[6] ಮತ್ತು ಹಲಗ[7] ಎಂಬ ವೀರಶೈವ ಕವಿಗಳು ಆಗಿಹೋಗಿದ್ದಾರೆ. ಈ ಸ್ಥಳದ ಸಿದ್ಧವೀರಣ್ಣೊಡೆಯರ ಹೆಸರು ಪ್ರಸಿದ್ಧ ವೀರಶೈವ ಕೃತಿ 'ಶೂನ್ಯಸಂಪಾದನೆ'ಯೊಂದಿಗೆ ಸಂಬಂಧಪಟ್ಟಿದೆ. ಹದಿನೈದನೇ ಶತಮಾನಕ್ಕೆ ಸೇರಿದ ಗುಮ್ಮಳಾಪುರದ ಸಿದ್ಧಲಿಂಗೇಶ್ವರ ಕವಿಯು 'ಷಟ್ಸ್ಥಲದ ಲಿಂಗಾಂಗ ಸಂಬಂಧ ನಿರ್ವಚನ' ಎಂಬ ಕೃತಿಯನ್ನು ಬರೆದಿದ್ದಾನೆ.[8] ಈತನು ತೋಂಟದ ಸಿದ್ಧಲಿಂಗಯತಿಯ ಶಿಷ್ಯನಿದ್ದಂತೆ ತಿಳಿಯುತ್ತದೆ.

ಈ ಊರಿನಲ್ಲಿ ಬಹಳಷ್ಟು ದೇವಾಲಯಗಳಿದ್ದು ಪಾಳುಬಿದ್ದಿವೆ. ಇಂದಿಗೂ ಸುತ್ತಮುತ್ತಲ ಊರುಗಳ ಜನರ ಬಾಯಲ್ಲಿ ಇಲ್ಲಿನ ವೀರಶೈವ ಭಕ್ತರ ಕಥೆಗಳು ಪ್ರಚಲಿತವಿವೆ. ಗೌರಮ್ಮನ ಪರಿಷೆ ಇಲ್ಲಿ ನಡೆಯುವ ಮುಖ್ಯ ಆಕರ್ಷಣೆ. ಒಂದು ತಿಂಗಳಕಾಲ ನಡೆಯುವ ಈ ಪರಿಷೆಯ ಮುಖ್ಯದೇವತೆ ಗೌರಮ್ಮ. ಗೌರೀ ತಿಂಗಳ ಮೊದಲ ದಿನ ಮಣ್ಣಿನಲ್ಲಿ ಗೌರಿಯ ವಿಗ್ರಹ ಮಾಡಿ ಪ್ರತಿಷ್ಠಾಪಿಸಿ ಮಹಾನವಮಿ ತಿಂಗಳ ಅಮಾವಾಸ್ಯೆ ಕಳೆದ ಮೇಲೆ ಬರುವ ಗುರುವಾರದಂದು ಗೌರಿಯನ್ನು ನೀರಿಗೆ ಬಿಡುತ್ತಾರೆ. ಈ ಗೌರಿ, ಒಂದು ವರ್ಷ ಬಾಣಂತಿ, ಒಂದು ವರ್ಷ ಬಸುರಿ ಎಂಬ ನಂಬಿಕೆ ಭಕ್ತರಲ್ಲಿದೆ. ಇಲ್ಲಿಯ ಗಣಪತಿಯನ್ನು ಗೂಳೂರು ಗಣಪತಿ ಎಂದು ಕರೆಯುತ್ತಾರೆ.

ಒಟ್ಟಾರೆ, ಇನ್ನೂ ಇಲ್ಲಿಯ ವೀರಶೈವ ಪರಂಪರೆ ಮತ್ತು ಮಠಗಳ ಬಗೆಗೆ ಅಧ್ಯಯನ ನಡೆಯಬೇಕಾದ ಅಗತ್ಯವಿದೆ.

ಶಾಸನದ ಪಾಠ

೧ ಶಿವಾಯ ನಮಃ
೨ ಶುಭಮಸ್ತು ಸ್ವಸ್ತಿಶ್ರೀ ವಿ
೩ ಜಯಾಭ್ಯುದಯ ಶಾಲಿ

---

2 ಅದೇ, ಸಂಪುಟ ೯, ಆನೇಕಲ್ ೧೦

3 ಕರ್ಲಮಂಗಲಂ ಶ್ರೀಕಂಠಯ್ಯ (ಸಂ.) : ಗೌಡಕುಲವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ, ಬೆಂಗಳೂರು, ೧೯೬೧

4 ಆರ್. ನರಸಿಂಹಾಚಾರ್ : ಕರ್ಣಾಟಕ ಕವಿಚರಿತೆ, ಸಂಪುಟ ೨ (ದ್ವಿಮು), ೧೯೭೩, ಪು. ೨೬೦

5 ಪಿ. ವಿ. ಕೃಷ್ಣಮೂರ್ತಿ : 'ಕೆಂಪೇಗೌಡನ ಜಯಪ್ರಶಸ್ತಿ : ಒಂದು ಚಾರಿತ್ರಕ ಪರಿಶೀಲನೆ', ಇತಿಹಾಸ ದರ್ಶನ, ಸಂಪುಟ ೪, ೧೯೮೯, ಪು. ೧೧೮

6 ಕರ್ಣಾಟಕ ಕವಿಚರಿತೆ, ಪು. ೧೪೬

7 ಅದೇ, ಪು. ೩೮೬

8 ಅದೇ, ಪು. ೬೩

೪ ವಾಹನ ಶಕವರುಷಂಗಳು ೧೫೨೮
೫ ನೆಯ ಪರಾಭವ ಸಂವತ್ಸರದ ಕಾರ್ತೀಕ ಬ
೬ ೧೨ ಸೋಮವಾರದಲ್ಲು ॥ ಶ್ರೀಮದ್ರಾ
೭ ಜಾಧಿರಾಜ ಪರಮೇಶ್ವರ ಶ್ರೀ ವೀರಪ್ರ
೮ ತಾಪ ಶ್ರೀ ವೀರ ವೆಂಕಟಪತಿದೇವ ಮಹಾರಾ
೯ ಯರು ರತ್ನಸಿಂಹಾಸನರೂಢರಾಗಿ ಪ್ರಿಥುವೀ
೧೦ ಸಾಮ್ರಾಜ್ಯಂಗೆಯ್ಯುತ್ತಿರಲೂ ಚತುರ್ಥಗೋತ್ರದ
೧೧ ಯಲಹಂಕನಾಡ ಪ್ರಭು ಕೆಂಪನಾಚೇ*ಗೌಡರ ಪವುತ್ರರಾದ ಕೆಂಪೇ
೧೨ ಗೌಡರ ಪುತ್ರರಾದ ಯಿಂಮಡಿ ಕೆಂಪೇಗೌಡರು
೧೩ ಭಾರದ್ವಾಜ ಗೋತ್ರದ ಪಡಿವಿಡಿವರ್ಗದ
೧೪ ಕೊಲ್ಲಿಪಾಕೆ ರೇವಣಸಿದ್ಧೇಶ್ವರನ ಸಂಪ್ರದಾಯದವ
೧೫ ರಾದ ಗುಂಮಳಾಪುರದ ಸಿಂಹಾಸನ ಕರ್ತ
೧೬ ರಾದ ನಂಜೆದೇವರು ಅಯ್ಯನವರ ಪವುತ್ರರಾದ ಚೆಂ
೧೭ ನಮಲ್ಲಿಕಾರ್ಜುನದೇವರ ಪುತ್ರರಾದ ನಂಜದೇ
೧೮ ವ ಅಯ್ಯನವರ . . . . .
೧೯ ಯರ . . . . . ಮೇಲೂರೊಳಗಣ ಗುಂಮಳಾಪುರ
೨೦ ದ ಗ್ರಾಮವನೂ । ಚತುರ್ಥ ಗೋತ್ರದ ಯಲಹಕನಾಡ
೨೧ ಪ್ರಭು ಕೆಂಪನಾಚೇಗೌಡರ ಪಉತ್ರರಾದ ಯಿಂಮಡಿ ಕೆಂಪೇ
೨೨ ಗೌಡರು ಭಾರದ್ವಾಜ ಗೋತ್ರದ ಪಡಿವಿಡಿವರ್ಗದ ಕೊಲ್ಲಿಪಾಕೆ
೨೩ ರೇವಣಸಿದ್ಧೇಶ್ವರನ ಸಂಪ್ರದಾಯಕರಾದ ಗುಂಮಳಾಪುರದ
೨೪ ಸಿಂಹಾಸನಕೆ ಕರ್ತರಾದ ನಂಜೇದೇವರು ಅಯ್ಯನವರ ಪವುತ್ರ
೨೫ ರಾದ ಚೆನ್ನಮಲ್ಲಿಕಾರ್ಜುನದೇವರ ಪುತ್ರರಾದ ನಂಜೇ
೨೬ ದೇವರು ಅಯ್ಯನವರ ಪಾದಕೆ . . . .
೨೭ ಸ್ವಾಮಿ ನಂಜದೇವಪ್ಪ ಅಯ್ಯನ . . . . ಪಾದಕೆ
೨೮ ಶಿವಾರ್ಪಿತವಾಗಿ ಸಮರ್ಪಿಸಿದೆವಾದ ಕಾರ
೨೯ ಣ

* ನಾಚೇ ಎಂಬುದನ್ನು 'ನಾಡ' ಎಂದು ಗ್ರಹಿಸಲಾಗಿದೆ. ನೋಡಿ : ಈ ಶಾಸನದ ಸಾರಾಂಶವನ್ನು ಪ್ರಕಟಿಸಿರುವ ಕೇಂದ್ರ ಸರ್ಕಾರದ ಪುರಾತತ್ವ ಇಲಾಖೆಯ ವಾರ್ಷಿಕ ವರದಿ 'ಇಂಡಿಯನ್ ಎಪಿಗ್ರಫಿ', ೧೯೭೧-೭೨/ಬಿ ೧೯೫.

ಕುಂ. ಬಾ. ಸದಾಶಿವಪ್ಪ
ಡಾ॥ ರು. ಮ. ಷಡಕ್ಷರಯ್ಯ

ಬಾಗಳಿ ಕಂಚಿನಪತ್ರ

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲೂಕಿಗೆ ಸೇರಿದ ಬಾಗಳಿ ಗ್ರಾಮದಲ್ಲಿ ಕಂಚಿನಪತ್ರವೊಂದು ಇತ್ತೀಚೆಗೆ ಪತ್ತೆಯಾಗಿದ್ದು, ಅದು ಬಾಗಳಿಯ ಕೆರೆ ನೀರು ಬಿಡುವ ಬಾರಿಕರ ಮನೆತನಕ್ಕೆ ಸೇರಿದ ಶ್ರೀ ಹಾಲಪ್ಪನವರ ಹತ್ತಿರ ಈ ಕಂಚಿನಪತ್ರ ಇರುತ್ತದೆ. ಸುಮಾರು ೭೦ ವರ್ಷಗಳ ಪೂರ್ವದಲ್ಲಿ ತಮ್ಮಲ್ಲಿದ್ದ ಒಂದು ಹಳೆಯ ಕೈಬರಹದ ಪತ್ರದ ಪಾಠವನ್ನು ತಮ್ಮ ತಂದೆಯವರು ಈ ಕಂಚಿನಪತ್ರದಲ್ಲಿ ಕೆತ್ತಿಸಿರುವುವಾಗಿ ಅವರು ಹೇಳಿರುವರು (ಕೈಬರಹದ ಪತ್ರ ಈಗ ಅವರಲ್ಲಿ ಉಳಿದಿಲ್ಲ). ಇಂತಹ ಕಂಚಿನಪತ್ರಗಳು ಈ ಪ್ರದೇಶದಲ್ಲಿ ದೊರಕುವುದು ವಿರಳ. ಇದರ ಉದ್ದ ೩೦ ಸೆಂ. ಮೀ., ಅಗಲ ೨೦ ಸೆಂ. ಮೀ. ಇರುತ್ತದೆ. ಮೇಲ್ಭಾಗದಲ್ಲಿ ರಂಧ್ರವನ್ನು ಮಾಡಲಾಗಿದೆ. ಇದರ ಭಾಷೆ ಮತ್ತು ಲಿಪಿ ಕನ್ನಡದಲ್ಲಿದ್ದು, ಇದರ ಪಾಠಕ್ರಮ ಹೀಗಿದೆ :

ಶ್ರೀ

ಕಂಚಿನಪತ್ರ

ನಮಸ್ತುಂಗ ಸಿರಸ್ತುಂಗ ಚಂದ್ರ ಚಾಮರ ಚಾರುವೆ ತ್ರೈಲೋಕ್ಯ ನಗಾರಂಭ ಮೂಲಸ್ಥಂಭಾಯ ಶಂಭವಿ ಸ್ವಸ್ತಿಶ್ರೀ ವಿಜಯಾಬ್ಯುದಯ ಶಾಲಿವಾಹನ ಶಕ ವರ್ಷಂಗಳು ೮೦೫ನೆಯ ಸೋಭಾನ ಕೃತು ಸಂವತ್ಸರದ ವೈಶಾಕ ಬಹುಳ ೧೨ರಲ್ಲೂ ರಾಜರಾಜಶ್ರೀ ಕರಿಕಾಲ ಖಂಡೇರಾಯರು ಬಾಗಿಲ ಕಾಯೋ ಗೊಲ್ಲರ ಗೋಪಾಲ ಗೌಡನಿಗೆ, ನಿರೂಪ ದಯಪಾಲಿಸಿದ್ದು ಯೇನೆಂದರೆ ಸದರೀ ಬಾಗಳೀ ಎಂದು ಹೆಸರಿಟ್ಟು ಹುಗ್ಗಿ ಹೊಯ್ದರು. ಇದಕ್ಕೆ ಆಯಗಾರ ಹಿರೇಯಸ್ತರು ಮೋಟಿ ಬಣಕಾರು ಶಾನಬೋಗರು ವೆಂಕಟಪತಿ ಪತ್ತಾರಿ ಕರಿಯಣ್ಣ ಅಗಸರ ಮಲ್ಲಂಣ ತಳವಾರ ಭೀಮಪ್ಪ ಚಲುವಾದಿ ಕಂಗಣಾ ಇಂತಿವರು ಆಯಗಾರರು ಗೌಡ್ಕಿ ಸ್ವಸ್ತಿ ಸ್ತಿರಪಡಿಸಿದ್ದು ಕೆರೆ ಕಟ್ಟಿಸಿದ ನಾಣ್ಯ ೨೦೦೦-೦೦ ಯಿದಕ್ಕೆ ತಪ್ಪಬಾರದೆಂದು ಬರಕೊಟ್ಟ ದಾನಪತ್ರ ಸಹಿ ಯಿದರ ಕೆಳಗಳಹಳ್ಳಿ ಕೂಲಹಳ್ಳಿ-ಚಿಕ್ಕಲಗಣಕಟ್ಟಿ ಹಿರೆಕಲಗಳಕಟ್ಟಿ ನಾರಣಪುರ. ಹರಿಯಲ್ಲಾಪುರ ಶಿಳಗಣ್ಣ ಯಲ್ಲಪುರ ಸಿದ್ದಪುರ ಮಾದಾಪುರ ಯರಡೆತ್ತಿನಹಳ್ಳಿ ಮಿರನ್ನಳ್ಳಿ ಕನಕಾಪುರ ಹೊಡ್ಡಿನ ದಾದಪುರ ಮಾಡ್ಲಗೇರಿ ಹಿಟ್ಟಿನಹಳ್ಳಿ ಸಂಗೇನಹಳ್ಳಿ ಕಾನಹಳ್ಳಿ ವಿಟಲಾಪುರ ಕೋಡಿಹಳ್ಳಿ ಕೂಂಗನಸುರು ಶೃಂಗಾರತೋಟ ದಡಿಗೇರಹಳ್ಳಿ ಕಾಯಕದಹಳ್ಳಿ ಹೊಂಬಳಗಟ್ಟಿ ಯಿರಪ್ರ ಗಾಳಿಹಳ್ಳಿಯ ಮುವತ್ತು ಮೂರು ಗ್ರಾಮಗಳಿಗೆ ಮೇಲೆ ಬರೆದಿರುವ ಆಯಗಾರರು ಸ್ವಸ್ತಿ ಪಡೆದಿರುತ್ತಾರೆ. ಯಿವರು ಭಾದ್ಯರು ಯಿರುವರು. ಬಾಗಳಿ ಕಟ್ಟಿಮನೆಯವರು ಯಿನ್ನು ಯಿರತಕ್ಕ ಕಟ್ಟೆಗಳು ಬಾಗಳಿ ವಳಗೆ ಹರಪನಹಳ್ಳಿ ಕಸಬೆ ಯಿದರಂತೆ ಮೇಲೆ ಕಂಡ ಕರೆಕಾಲ ಖಂಡೆರಾಯರು ನಿರುಪ ಕೊಟ್ಟು ಸ್ತಿರ ಪಡಿಸಿದರು.

ಈ ಪತ್ರದಲ್ಲಿ ಶಾಲಿವಾಹನ ಶಕವರ್ಷ ೮೦೫ ಶೋಭನ ಸಂವತ್ಸರದ ವೈಶಾಕ ಬಹುಳ ೧೨ರಲ್ಲಿ ಎಂದಿದ್ದು, ಅದು ಕ್ರಿ.ಶ. ೮೮೩ ಏಪ್ರಿಲ್ ೧೨ನೇ ಶುಕ್ರವಾರ ಆಗುತ್ತದೆ. ಈ ಸಮಯದಲ್ಲಿ ಖರೇ ಖಂಡೇ

ರಾಯನ ಬಾಗಿಲು ಕಾಯುವ ಗೊಲ್ಲರ ಗೋಪಾಲ ಗೌಡನು ಬಾಗಳಿ ಗ್ರಾಮವನ್ನು ಹುಗ್ಗಿ ಹೊಯ್ದು ಸ್ಥಾಪಿಸಿದನು ಎಂದು ಹೇಳಲಾಗಿದೆ. ಆರು ಜನ ಆಯಗಾರರ ಮೇಟಿ ಬಣಕಾರ, ಶಾನುಭೋಗರು, ಪತ್ತಾರಿ, ಅಗಸರು, ತಳವಾರ, ಚಲುವಾದಿಯರ ಉಲ್ಲೇಖವಿದೆ. ಇವರೆಲ್ಲ ಗ್ರಾಮದ ಹಿರಿಯರು. ಈ ಗ್ರಾಮದ ಕೆರೆ ನಿರ್ಮಾಣದ ವೆಚ್ಚ ೨೦೦೦ ನಾಣ್ಯಗಳೆಂದು ತಿಳಿಸಲಾಗಿದೆ. ಆದರೆ ಕೆರೆಯ ಬಗ್ಗೆ ಹೆಚ್ಚು ವಿವರಗಳಿಲ್ಲ. ಬಾಗಳಿಗೆ ೩೩ ಹಳ್ಳಿಗಳು ಸೇರಿದ್ದವೆಂದಿದೆ. ಈ ೩೩ ಹಳ್ಳಿಗಳಿಗೆ ಎರಡು ಕಟ್ಟೆಮನೆಗಳು ಇದ್ದುವೆಂದು ಕಾಣುತ್ತದೆ. ಇವು ಹರಪನಹಳ್ಳಿ ಮತ್ತು ಬಾಗಳಿಗೆ ಇದ್ದವು. ಹರಪನಹಳ್ಳಿಗೆ ಕಸಬೆ ಗ್ರಾಮವೆಂದು ತಿಳಿಸಿ ಅದು ಬಾಗಳಿಗೆ ಸೇರಿದ್ದಿತೆಂದು ಹೇಳಲಾಗಿದೆ. ಇಂತಹ ಕಟ್ಟೆಮನಿಗಳ ಅಸ್ತಿತ್ವ ಈ ಭಾಗದಲ್ಲಿ ಈಗಲೂ ಇರುವುದನ್ನು ಕಾಣುತ್ತೇವೆ. ಈ ಹಳ್ಳಿಗಳ ಆಯಗಾರರ ಮತ್ತು ಕಟ್ಟೆಮನಿಗಳ ವ್ಯವಸ್ಥೆಗೆ ಖರೇ ಖಂಡೇರಾಯರು ಒಪ್ಪಿಗೆ ನೀಡಿದ ಉಲ್ಲೇಖವಿದ್ದು, ಇದರ ಐತಿಹಾಸಿಕ ಕತೆಯನ್ನು ಈ ಕೆಳಗೆ ಚರ್ಚಿಸಲಾಗಿದೆ.

ಸುಮಾರು ಎರಡು ಶತಮಾನಕ್ಕೂ ಹೆಚ್ಚು ಕಾಲ ರಾಜ್ಯವಾಳಿದ ಹರಪನಹಳ್ಳಿ ಪಾಳೇಗಾರರ ಇತಿಹಾಸ ವಾಗಿ ಈ ವರೆಗೂ ದೊರೆತಿಲ್ಲ. ಈ ರಾಜಮನೆತನದಲ್ಲಿ ೧೬ ಜನರು ಆಳಿದರು. ಈ ವಂಶದ ಮೊದಲ ಅರಸ ದಾದಯ್ಯನಾಯಕ.ಇವನು ಬಾಗಳಿಯಿಂದ ಹರಪನಹಳ್ಳಿಗೆ ಬಂದು ತನ್ನ ರಾಜ್ಯವನ್ನು ವಿಸ್ತರಿಸುವ ಮುನ್ನ ಗೊಲ್ಲರ ಗೋಪಾಲಗೌಡನಿಂದ ಬಾಗಳಿಯ ಗೌಡಿಕಿಯನ್ನು ಪಡೆದನು. ಈ ಕಂಚಿನಪತ್ರದಲ್ಲಿ ಗೊಲ್ಲರ ಗೋಪಾಲ ಗೌಡನು ಹುಗ್ಗಿ ಹೊಯ್ದು ಬಾಗಳಿ ಸ್ಥಾಪಿಸಿದನೆಂದು ಉಲ್ಲೇಖಿಸಲಾಗಿದೆ. ಬಹುಶಃ ದಾದಯ್ಯನಾಯಕನು ಬಾಗಳಿ ಗೌಡಿಕಿಯನ್ನು ಈ ಗೊಲ್ಲರ ಗೋಪಾಲಗೌಡ ಪಡೆದಿರಬಹುದು.

ಇನ್ನೊಂದು ಮಾಹಿತಿ ಏನೆಂದರೆ, ಈ ದಾದಾ ನಾಯಕನು ಅಲ್ಲಿಯ ಜೋಯಿಸ ರಾಮಭಟ್ಟರಿಗೆ ಬಾಗಳಿಗೆ ಸೇರಿದ ೩೩ ಹಳ್ಳಿಗಳನ್ನು ಪುರೋಹಿತ ನಿರ್ವಹಿಸಲಿಕ್ಕೆ ದತ್ತಿ ಕೊಟ್ಟಿದ್ದನು. ಈ ವಿಷಯ ಇಂದಿಗೂ ಹರಪನಹಳ್ಳಿ ಭಾಗದಲ್ಲಿ ಪ್ರಚಲಿತವಿದೆ. ಬಾಗಳಿಗೆ ಸೇರಿದ ಈ ೩೩ ಹಳ್ಳಿಗಳ ಹೆಸರುಗಳು ಈ ಕಂಚಿನಪತ್ರದಲ್ಲಿವೆ. ಈ ಕಂಚಿನಪತ್ರದಲ್ಲಿ ಒಂದೆಡೆ ಬಾಗಳಿಗೆ ಸೇರಿದ ೩೩ ಹಳ್ಳಿಗಳ ಸಂಖ್ಯೆಯನ್ನು ತಿಳಿಸಿ ೩೨ ಹಳ್ಳಿಗಳ ಹೆಸರುಗಳನ್ನು ಮಾತ್ರ ಬರೆಯಲಾಗಿದೆ. ೩೩ ಹಳ್ಳಿಗಳು ಬಾಗಳಿಗೆ ಸೇರಿದ ಮಾಹಿತಿ ಈ ಎರಡ ರಲ್ಲೂ ಕಾಣುತ್ತೇವೆ.

ಬಾಗಳಿಯಲ್ಲಿ ಸುಮಾರು ಕ್ರಿ.ಶ. ೧೦ನೇ ಶತಮಾನ ದಿಂದ ೧೬ನೇ ಶತಮಾನದವರೆಗೆ ಸುಮಾರು ೫೦ಕ್ಕೂ ಮೇಲ್ಪಟ್ಟು ಶಿಲಾಶಾಸನಗಳು, ಹಲವಾರು ದೇವಾಲಯ ಗಳು ಮತ್ತು ಮೂರ್ತಿಗಳು ಇರುತ್ತವೆ. ಕೋಗಳಿ-೫೦೦ ನಾಡಿನ ಮಾಸವಾಡಿ-೧೪೧ ರಲ್ಲಿ ಈ ಬಾಗಳಿ ಒಂದು ಗ್ರಾಮವಾಗಿದ್ದಿತೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಈ ಗ್ರಾಮಗಳನ್ನು ಶಾಸನಗಳಲ್ಲಿ ಬೂದಗೂಳ, ಬಾಳ್ಗುಳಿ, ಬಾಳಗುಳಿ, ಬಾಗುಳಿ ಮುಂತಾಗಿ ಕರೆಯಲಾಗಿದೆ. ಬಾಗಳಿ ಎಂಬ ಹೆಸರು ತದನಂತರ ಕಾಣುವುದು. ಬಾಗಳಿ ಗ್ರಾಮಕ್ಕೆ ಸೇರಿದ ೩೩ ಹಳ್ಳಿಗಳ ವಿಷಯವು ಸುಮಾರು ಕ್ರಿ. ಶ. ೧೬ನೇ ಶತಮಾನದ ವರೆಗಿನ ಯಾವ ಶಾಸನಗಳಲ್ಲೂ ಕಾಣಸುವು ದಿಲ್ಲ. (ಈ ಹಳ್ಳಿಗಳು ಬಾಗಳಿಯ ಸುತ್ತಮುತ್ತ ಸುಮಾರು ಏಳೆಂಟು ಕಿಲೋ ಮೀಟರ್ ಅಂತರದಲ್ಲಿ ಇಂದಿಗೂ ಇವೆ.)

ಕಂಚಿನಪತ್ರದಲ್ಲಿರುವ ಅಕ್ಷರಗಳ ಶೈಲಿಯು ಇತ್ತೀಚಿನ ಕಾಲದ್ದು. ಸುಮಾರು ೭೦ ವರ್ಷಗಳ ಹಿಂದೆ ಬಾಗಳಿಯ ಶ್ರೀ ಬಾರಿಕರ ಹಾಲಪ್ಪರ ಮನೆಯ ವಂಶಸ್ಥರಲ್ಲಿ ಈ ಕಂಚಿನಪತ್ರದ ಪಾಠಕ್ರಮವು ಒಂದು ಪೇಪರಿನಲ್ಲಿ ಬರೆಯಲಾಗಿತ್ತು. ತದನಂತರ ಈ ವಂಶಸ್ಥರು ಕಂಚಿನಪತ್ರದಲ್ಲಿ ಬರೆಸಿ ತಮ್ಮಲ್ಲಿ ಇಟ್ಟು ಕೊಂಡರೆಂಬ ವಿಷಯವು ನಿಜಸಂಗತಿ ಎಂದು ತಿಳಿಯುತ್ತದೆ.

ಇದರಲ್ಲಿ ಬರುವ ಕಾಲಮಾನವನ್ನು ಪರೀಕ್ಷಿಸಿ ದಾಗ ಅದು ಸರಿಯಾಗಿರುವುದು ಕಾಣುತ್ತದೆ. ಆದರೆ ಅದರ ಐತಿಹಾಸಿಕ ಅಂಶಗಳು ಕ್ರಿ. ಶ. ೯ನೇ ಶತಮಾನದ್ದಾಗಿರದೆ ಹರಪನಹಳ್ಳಿ ನಾಯಕರ ಕಾಲಕ್ಕೆ ಸಂಬಂಧಿಸಿದ್ದವಾಗಿವೆ. ಕಂಚಿನಪತ್ರದಲ್ಲಿ ಬರುವ ಆರು ಮನೆತನದ ವೃತ್ತಿದಾರರ ಹೆಸರುಗಳು ತದನಂತರದವು. ಏಕೆಂದರೆ ಈ ಹೆಸರುಗಳ ಬಳಕೆ ಪ್ರಾಚೀನ ಮಧ್ಯಯುಗ

ದಲ್ಲಿ ಕಂಡುಬರುವುದಿಲ್ಲ. ಸುಮಾರು ಕ್ರಿ. ಶ. ೧೦ನೇ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಕೆರೆಯ ವಿಷಯ ಶಾಸನಗಳಲ್ಲಿ ಬರುತ್ತದೆ. ಅದಕ್ಕೆ ಪಿರಿಯಕೆರೆ ಎಂದು ಹೆಸರು. ಇದು ಈ ಕಂಚಿನಪತ್ರದಲ್ಲಿ ಕಾಣುವುದಿಲ್ಲ. ಬಹುಶಃ ಕ್ರಿ.ಶ.೧೬-೧೭ನೇ ಶತಮಾನದಲ್ಲಿ ೨೦೦೦ ನಾಣ್ಯಗಳನ್ನು ಕೊಟ್ಟು ಇಲ್ಲಿಯ ಕೆರೆಯನ್ನು ಜೀರ್ಣೋದ್ಧಾರ ಮಾಡಿರಬೇಕೆಂದು ಕಾಣುತ್ತದೆ. ಇದರಲ್ಲಿ ಕಾಣುವ ಐತಿಹಾಸಿಕ ಅಂಶಗಳು, ವಿವಿಧ ವೃತ್ತಿದಾರರ ಹೆಸರುಗಳು, ಬಾಗಳಿಗೆ ಸೇರಿದ ೩೩ ಹಳ್ಳಿಗಳ ವಿವರ ಮತ್ತು ಕಟ್ಟೆಮನಿಗಳ ಅಸ್ತಿತ್ವ, ವ್ಯವಸ್ಥೆ ಮುಂತಾದವುಗಳನ್ನು ಪರಿಶೀಲಿಸಿದಾಗ ಐತಿಹಾಸಿಕವಾಗಿ ಇವು ಸುಮಾರು ಕ್ರಿ. ಶ. ೧೬-೧೭ನೇ ಶತಮಾನದವಿರಬೇಕೆಂದು ಕಂಡು ಬರುವುವು.

ಪ್ರೊ॥ ಎಲ್.ವ್ಹಿ. ಪಾಟೀಲ

ಗದಗ ತಾಲೂಕು ಶಾಸನಗಳ ಲಿಪಿಕಾರರು ಹಾಗೂ ರೂವಾರಿಗಳು

ಕರ್ನಾಟಕದ ಶಾಸನಕವಿಗಳನ್ನು ಕುರಿತು ಆರ್. ನರಸಿಂಹಾಚಾರ್ಯರು, ಮೇವುಂಡಿ ಮಲ್ಲಾರಿ, ಶ್ರೀನಿವಾಸ ರಿತ್ತಿ, ಎಂ.ಎಂ. ಕಲಬುರ್ಗಿ ಹಾಗೂ ಇತರ ವಿದ್ವಾಂಸರು ಬರೆದಿರುವರು. ಲಿಪಿಕಾರರನ್ನು ಮತ್ತು ರೂವಾರಿಗಳನ್ನು ಕುರಿತು ಬರೆಯುವಲ್ಲಿ ಕೊರತೆ ಎದ್ದು ಕಾಣುತ್ತದೆ. ಡಾ॥ ಎಂ. ಎಂ. ಕಲಬುರ್ಗಿ ಅವರು ತಮ್ಮ 'ಶಾಸನ ವ್ಯಾಸಂಗ' ಗ್ರಂಥದಲ್ಲಿ ಲಿಪಿಕಾರರನ್ನು ಹಾಗೂ ರೂವಾರಿಗಳನ್ನು ಗುರುತಿಸುವ ಕಾರ್ಯವನ್ನು ಮಾಡಿದ್ದಾರೆ. ಪ್ರಸ್ತುತ ಪ್ರಬಂಧವು ಗದಗ ತಾಲೂಕಿನ ಭೌಗೋಲಿಕ ವ್ಯಾಪ್ತಿಯ ಮಿತಿಯಲ್ಲಿದ್ದ ಶಾಸನಗಳ ಲಿಪಿಕಾರರು ಹಾಗೂ ರೂವಾರಿಗಳನ್ನು ಗುರುತಿಸುವ ಹೆಚ್ಚಿನ ಪ್ರಯತ್ನದ ಉದ್ದೇಶವನ್ನು ಹೊಂದಿದೆ.

ಕುಂತಳದೇಶದಲ್ಲಿ ಬೆಳ್ವೊಲ್‌ನಾಡು ಪ್ರಸಿದ್ಧಿಯನ್ನು ಪಡೆದಿತ್ತು. ಬೆಳ್ವೊಲ್‌ನಾಡು ೩೦೦ ಗ್ರಾಮಗಳನ್ನು ಹೊಂದಿತ್ತು. ಗದಗಿನ ಸಮೀಪದಲ್ಲಿರುವ 'ಅಣ್ಣೀಗೇರಿ' ಈ ನಾಡಿನ ರಾಜಧಾನಿಯಾಗಿತ್ತು. ಗದಗ ತಾಲೂಕು ಈ ಬೆಳ್ವೊಲನಾಡಿನ ದಕ್ಷಿಣಭಾಗದಲ್ಲಿ ಸಮಾವೇಶವಾಗಿತ್ತೆಂದು ತಿಳಿದುಬರುತ್ತದೆ. ಈ ನಾಡಿನಲ್ಲಿ ಕ್ರಿ.ಶ. ೭ ನೆಯ ಶತಮಾನದಿಂದ ಶಾಸನಗಳನ್ನು ಬರೆಯಿಸಿದ ಉಲ್ಲೇಖಗಳು ದೊರೆಯುತ್ತವೆ. ಸಾವಿರಾರು ಶಾಸನಗಳು ಈ ನಾಡಿನಲ್ಲಿ ಬರೆಯಲ್ಪಟ್ಟಿವೆ. ಈ ಶಾಸನಗಳನ್ನು ಬರೆದ ಕವಿಗಳ, ಲಿಪಿಕಾರರ ಹಾಗೂ ರೂವಾರಿಗಳ ವಿಚಾರ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಬಹುಪಾಲು ಶಾಸನಗಳಲ್ಲಿ ಇವರು ತಮ್ಮ ಹೆಸರನ್ನೇ ಹೇಳಿಕೊಂಡಿಲ್ಲ. ಹೇಳಿಕೊಂಡವರ ಸಂಖ್ಯೆ ತೀರ ವಿರಳ. ಕ್ರಿ.ಶ. ೯ ನೆಯ ಶತಮಾನದಿಂದ ಈಚೆಗೆ ಕವಿಗಳು, ಲಿಪಿಕಾರರು ಹಾಗೂ ರೂವಾರಿಗಳು ತಮ್ಮ ಹೆಸರುಗಳನ್ನು ಹೇಳಿಕೊಳ್ಳಲು ಪ್ರಾರಂಭಿಸಿದ್ದು ಕಂಡುಬರುತ್ತದೆ.

ನಮಗೆ ದೊರೆತ ಲಿಪಿಕಾರರ ಪರಿಚಯವನ್ನು, ಅವರು ಬರೆದ ಶಾಸನದ ಗ್ರಾಮದ ಹೆಸರು, ಕಾಲ ಹಾಗೂ ಲಿಪಿಕಾರರ ಹೆಸರನ್ನು ಅನುಕ್ರಮವಾಗಿ ಈ ಕೆಳಗೆ ಕೊಡಲಾಗಿದೆ.

ಶಾಸನವಿದ್ದ ಗ್ರಾಮದ ಹೆಸರು	ಕಾಲ	ಲಿಪಿಕಾರರ ಹೆಸರು
ಚಿಂಚಿಲಿ	ಕ್ರಿ.ಶ. ೯ನೆಯ ಶತಮಾನ	ಪರಮೇಶ್ವರ ಭಟ್ಟರು[1]
ಅಸುಂಡಿ	" ೧೦ನೆಯ "	ಲೋಕಯ್ಯ[2]
ಹಿರೇಹಂದಿಗೋಳ	" ೧೦ನೆಯ "	ದೇವಯ್ಯ[3]

1 *South Indian Insccriptions*, Vol. XI, 15
2 *Ibid.*, 34
3 *Ibid.*, 43

ನೀಲಗುಂದ	ಕ್ರಿ.ಶ. ೧೦ನೆಯ ಶತಮಾನ	ಕನ್ನೋಜ[4]
ಗದಗ	" ೧೧ನೆಯ "	ಕಾಳಿದಾಸಿಮಯ್ಯ[5]
ಕೋಟುಮಚಗಿ	" ೧೧ನೆಯ "	ಗೋವಿಂದಭಟ್ಟ[6]
ಹೊಂಬಳ	" ೧೧ನೆಯ "	ಮಹಾದೇವಯ್ಯ[7]
ಕೋಟುಮಚಗಿ	" ೧೨ನೆಯ "	ಜೋಗಿಶೆಟ್ಟಿ[8]
ಚಿಕ್ಕಹಂದಿಗೋಳ	" ೧೨ನೆಯ "	ಬಾಹುಬಲಿಪಂಡಿತದೇವ[9]

ಮೊದಮೊದಲು ಲಿಪಿಕಾರರು ತಮ್ಮನ್ನು ಕುರಿತು ಹೆಚ್ಚಿನ ವಿವರಗಳನ್ನು ಹೇಳದೆ ಕೇವಲ ತಮ್ಮ ಹೆಸರನ್ನು ಮಾತ್ರ ಹೇಳಿರುವರು. ಕ್ರಿ. ಶ. ೧೦೮೨ ರ ಮತ್ತು ೧೦೮೭ ರ ಕುರ್ತಕೋಟಿ ಗ್ರಾಮದ ಎರಡು ಶಾಸನಗಳನ್ನು ಬರೆದ ಕುಳಕರಣಿ ಮಾಬಳಾಯ್ಯನು ತಾನು ಮಹಾಜನರ ಪಾದಪದ್ಮದ ಮಧುಕರನೆಂದು ಹಾಗೂ ಶಿವಭಕ್ತನೆಂದು ಹೇಳಿಕೊಳ್ಳುವುದರೊಂದಿಗೆ ತನ್ನ ಹಸ್ತಕೌಶಲ ಕುರಿತು ತಿಳಿಸಿದ್ದಾನೆ.[10] ಮುತ್ತಿನಂತಹ ಸುಂದರವಾದ ಅಕ್ಷರಗಳನ್ನು ತಾನು ಬರೆಯುತ್ತಿದ್ದನೆಂದು ಚಿಕ್ಕಹಂದಿಗೋಳ ಶಾಸನದಲ್ಲಿ ಬಾಹುಬಲಿಯತಿನಾಥನೆಂಬ ಲಿಪಿಕಾರ ಹೇಳಿಕೊಂಡಿದ್ದಾನೆ.[11]

ಲಿಪಿಕಾರರಂತೆ ರೂವಾರಿಗಳು ಸಹಾ ತಮ್ಮ ಹೆಸರನ್ನು ಹಾಗೂ ಇತರ ವಿವರಗಳನ್ನು ಹೇಳಿರುವದು ಅಪರೂಪ. ತಮ್ಮ ಹೆಸರನ್ನು ಮಾತ್ರ ಹೇಳಿಕೊಂಡ ರೂವಾರಿಗಳು ಕಂಡರಿಸಿದ ಶಾಸನ ಹುಟ್ಟಿದ ಊರಿನ ಹೆಸರಿನೊಂದಿಗೆ ಕಾಲ ಹಾಗೂ ರೂವಾರಿಗಳ ಹೆಸರನ್ನು ಇಲ್ಲಿ ಹೇಳಲಾಗಿದೆ :

ಶಾಸನವಿದ್ದ ಗ್ರಾಮದ ಹೆಸರು	ಕಾಲ	ರೂವಾರಿಯ ಹೆಸರು
ಅಸುಂಡಿ	ಕ್ರಿ.ಶ. ೯೨೫	ಬೆಸಗಯ್ದನಾಸಿಂಗ[12]
ಕೋಟುಮಚಗಿ	" ೧೦೧೨	ಜಾವೋಜಂ ಕಂಡರಿಸಿದ[13]
ಲಕ್ಕುಂಡಿ	" ೧೦೭೬	ರೂವಾರಿ ಕೇತೋಜನಬೆಸ[14]
ಹೊಸೂರು	" ೧೧೪೭	ಬಮ್ಮೋಜನ ಕಂಡರಣೆ[15]
ಚಿಂಚಲಿ	" ?	ಇನ್ದಗೋಟೆಯ ಬೆಸಂ[16]

4 *Epigraphia Indica*, Vol. IV, p. 204
5 *SII.*, XI, 48
6 *EI.*, XX, p. 66
7 *SII.*, XI, 84
8 *EI.*, XX, p. 64
9 *SII.*, XV, 128
10 *Ibid.*, XI, 127 & 133
11 *Ibid.*, XV, 128
12 *Ibid.*, XI, 34
13 *EI.*, XX, p. 66
14 *SII.*, XV, 533
15 *Ibid.*, 36
16 *Ibid.*, XI, 15

ಈ ಮೇಲೆ ಉಲ್ಲೇಖಿಸಿದ ರೂವಾರಿಗಳು ಶಾಸನ ಹುಟ್ಟಿದ ಊರಿನವರೇ ಆಗಿರಬಹುದು, ಇಲ್ಲವೆ ಪರ ಊರಿನವರಾಗಿರಬಹುದು. ಸ್ಪಷ್ಟವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಈ ಮುಂದೆ ಉಲ್ಲೇಖಿಸಿರುವ ರೂವಾರಿಗಳು ತಮ್ಮ ಗ್ರಾಮದ ಹೆಸರನ್ನು ಹೇಳಿಕೊಂಡಿದ್ದಾರೆ ಹಾಗೂ ತಮ್ಮ ತಂದೆ, ಗುರುಗಳ ಹೆಸರನ್ನು ಸಹಾ ತಿಳಿಸಿದ್ದಾರೆ:

ಶಾಸನವಿದ್ದ ಗ್ರಾಮದ ಹೆಸರು	ಕಾಲ	ರೂವಾರಿ ಕುರಿತು
ಕುರ್ತಕೋಟಿ	ಕ್ರಿ. ಶ. ೧೦೧೦	ಮಂಟೂರಾಯೋಜನ ಬೆಸ[17]
ಹೊಂಬಳ	" ೧೦೪೯	ಸೂಣ್ಡಿಯ ಸೇವೋಜನ ಕಣ್ಡರಣೆ[18]
ಮುಳಗುಂದ	" ೧೦೭೨	"ಪುರಿಕರನಗರದ ಬಮ್ಮಂ ಸರಸ್ವತಿಗಣದ ದಾಸಿ ಕಣ್ಡ....ನಿರುತ .ಯತಿ....ಸಟಂ ಖಂಡರಿಸಿದಂ ನಾಗವರ್ಮನ ಚ್ಛಾತ್ರಂ"[19]
ಚಿಕ್ಕಹಂದಿಗೋಳ	" ೧೦೯೯	"ಕುನ್ದುರಗೆಯ ಸಿಣ್ಗೋಜನ ಪುತ್ರಂ ರೂವಾರಿ ಕೇತೋಜಂ ಬೆಸಗೆಯ್ದಂ...."[20]
ಎಲಿಶಿರೂರು	" ೧೧೩೩	"ಹೊಸುವುರ ಮೊರಕೇಶ್ವರ ದೇವರ ಓಜನ ಮಗ ಸಿಂಗೋಜನ ಪುತ್ರ ಗಣ ಪೋಜನ ಬರೆಪಂ...."[21]
ಚಿಕ್ಕಹಂದಿಗೋಳ	" ೧೧೭೪	"ನರೆಯಂಗಲ್ಲ ಬಲ್ಲೋಜನ ಮಗ ಬಡಗಿ ಬಮ್ಮೋಜನ ಕಂಡರಣೆ...."[22]

ಈ ಮೇಲೆ ಹೇಳಿದ ರೂವಾರಿಗಳೆಲ್ಲರೂ ತಮ್ಮ ಕಾಲದಲ್ಲಿ ಪ್ರಸಿದ್ಧರಾದ ಶಿಲ್ಪಿಗಳಾಗಿದ್ದಿರಬಹುದು. ಅಂತಲೇ ಇವರನ್ನು ಶಾಸನ ಸಿದ್ಧವಾಗಬೇಕಾದ ಊರಿಗೆ ಕರೆಯಿಸಿ ಈ ರೂವಾರಿಗಳಿಂದ ಶಾಸನ ಕಂಡರಣೆ ಕೆಲಸವನ್ನು ಮಾಡಿಸಿದ್ದಾರೆಂದೆನಿಸುತ್ತದೆ. ಈ ರೂವಾರಿಗಳು ಅಕ್ಷರಗಳನ್ನು ಕಂಡರಿಸುವಲ್ಲಿ ವಿಶೇಷ ಹಸ್ತಕೌಶಲ ಮತ್ತು ಶಾಸನ ಫಲಕದ ಶಿಲ್ಪವನ್ನು ಸುಂದರವಾಗಿ ಕೆತ್ತನೆ ಮಾಡುವ ನೈಪುಣ್ಯತೆಯನ್ನು ಹೊಂದಿದವರಾಗಿದ್ದಿರಬಹುದಾಗಿದೆ.

ಕ್ರಿಸ್ತಶಕ ೧೦೦೨ ರ ಗದಗ ಶಾಸನವೊಂದನ್ನು ಕಂಡರಿಸಿದ ಸೈವೋಜನೆಂಬುವನು ತನ್ನನ್ನು ರೂವಾರಿ ಬೈರವನೆಂದು ಕರೆದುಕೊಂಡಿದ್ದಾನೆ. ಈ ರೂವಾರಿ ಬೈರವ ಶಿಲಾಕಂಸ ವಿದ್ಯೆಯನ್ನು ಬಲ್ಲವನಾಗಿದ್ದ.[23]

ಕ್ರಿಸ್ತಶಕ ೧೦೮೨ ರ ಕುರ್ತಕೋಟಿ ಗ್ರಾಮದ ಶಾಸನವನ್ನು ಕಂಡರಿಸಿದ 'ಅಯ್ಯಣ' ಎಂಬ ರೂವಾರಿ ತಾನು ಮರದ, ಇಟ್ಟಿಗೆಯ, ದಂತದ, ಚಿತ್ರದ ಕಲೆಗಳಲ್ಲಿ ಚತುರನಾಗಿದ್ದನೆಂದು ಮತ್ತು ಕರ್ಮಾರವಿಜ್ಞಾನದಲ್ಲಿ ವಿಶ್ವಕರ್ಮನೆಂದು ಪ್ರಸಿದ್ಧಿಯನ್ನು ಕರ್ಮಾರನೆಂದು ಹೇಳಿಕೊಂಡಿದ್ದಾನೆ. ಈ ರೂವಾರಿ ಶಾಸನವನ್ನು

17 *Ibid.*, 127
18 *Ibid.*, 84
19 *Ibid.*, 97
20 *Ibid.*, 147
21 *Ibid.*, 50
22 *Karnataka Inscriptions*, Vol. V, 38
23 *SII.*, XI, 48

ಶಾಸ್ತ್ರಯುಕ್ತವಾಗಿ ಶಾಸನಫಲಕವನ್ನು ಬೆಸಗೆಯ್ದನೆಂದು ಹೇಳಿದ್ದನ್ನು ಗಮನಿಸಿದರೆ, ಶಾಸನ ಕಂಡರಣೆಯು ಒಂದು ಕಲೆಯಾಗಿ ಪರಿಣಮಿಸಿತ್ತೆಂದು ತಿಳಿದು ಬರುತ್ತದೆ.[24] 'ಗುಣಪಾ.....ರ್ಯ ಪ್ರಣೀತಶಾಸ್ತ್ರ' ಎಂಬ ಗ್ರಂಥವೊಂದು ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದ್ದಿರಬಹುದೆಂದು 'ಕುರುವತ್ತಿ' ಶಾಸನದಲ್ಲಿ ಉಲ್ಲೇಖವಾದ ಸಂಗತಿಯನ್ನು ಸ್ಮರಿಸಬಹುದಾಗಿದೆ.[25] 'ಅಯ್ಯಣ' ಎಂಬ ರೂವಾರಿ ಶಾಸನ ಕಂಡರಣೆ ಮಾಡಿದ ಕಾಲ ಹಾಗೂ 'ಕುರುವತ್ತಿ' ಶಾಸನದ ಕಾಲ ಎರಡು ದಶಕಗಳ ಅಂತರವನ್ನು ಹೊಂದಿದೆ. 'ಕುರುವತ್ತಿ' ಶಾಸನದ ಕಾಲ ಕ್ರಿ.ಶ. ೧೦೯೯. ಈ ಶಾಸನದಲ್ಲಿ ಉಲ್ಲೇಖವಾದ ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥ ಕ್ರಿ.ಶ. ೧೦೮೨ ರ 'ಅಯ್ಯಣ' ಕಾಲದಲ್ಲಿ ಪ್ರಚಲಿತದಲ್ಲಿ ಇದ್ದಿರಬಹುದಾಗಿದೆ.

ಬೆನ್ನೂರಿನ ವೀರಗಲ್ಲಿನ ಬರಹವನ್ನು ಸವಣಬಲ್ಲಗೆದೇವನ ಮಗನಾದ ನಾಯ್ತುವರ್ಮೋಜ ರೂವಾರಿ[26]– ಕಂಡರಿಸಿದ್ದು, ಈ ರೂವಾರಿಯೇ ವೀರಗಲ್ಲಿನ ಶಿಲ್ಪವನ್ನೂ ಸಿದ್ಧಗೊಳಿಸಿರಬಹುದು.

'ಧಾರವಾಡ ಜಿಲ್ಲೆಯ ಶಾಸನಸೂಚಿ' ಪ್ರಕಾರ ಗದಗ ತಾಲೂಕಿನ ೩೨ ಗ್ರಾಮಗಳಲ್ಲಿಯ ೨೧೧ ಶಾಸನಗಳನ್ನು ಈ ವರೆಗೆ ಪ್ರಕಟಿಸಿದ ಸಂಗತಿ ವ್ಯಕ್ತವಾಗುತ್ತದೆ. ಇಷ್ಟು ಶಾಸನಗಳಲ್ಲಿ ಕೇವಲ ಬೆರಳು ಮೇಲೆ ಎಣಿಸುವಷ್ಟು ಲಿಪಿಕಾರರು ಹಾಗೂ ರೂವಾರಿಗಳು ತಮ್ಮ ವಿಷಯ ಕುರಿತು ಉಲ್ಲೇಖಿಸಿದ್ದಾರೆ. ಕವಿಗಳನ್ನೊಳಗೊಂಡು ಲಿಪಿಕಾರರು ಹಾಗೂ ರೂವಾರಿಗಳು ನಿರಹಂಕಾರಭಾವದಿಂದ ತಮ್ಮ ಹೆಸರನ್ನು ಹೇಳದೇ ಇರುವುದು ಕಂಡುಬರುತ್ತದೆ. ಉಲ್ಲೇಖಿಗೊಂಡ ಲಿಪಿಕಾರರ ಹಾಗೂ ರೂವಾರಿಗಳ ಸಂಗತಿ ಒಂದೆಡೆ ಬರುವುದು ಅವಶ್ಯವಿದೆ. ಸಮಗ್ರ ಕರ್ನಾಟಕ ಶಾಸನಗಳನ್ನು ಪರಿಶೀಲಿಸಿ, ಪರಿಶೋಧಿಸಿ ಲಿಪಿಕಾರರ ಹಾಗೂ ರೂವಾರಿಗಳ ಅಧ್ಯಯನ ಆಗಬೇಕಾಗಿದೆ. ಶಾಸನಕವಿಗಳ ಚರಿತ್ರೆಯಲ್ಲಿ ಲಿಪಿಕಾರರು ಹಾಗೂ ರೂವಾರಿಗಳ ವಿಷಯಕ್ಕೆ ಸೂಕ್ತ ಪ್ರಾಶಸ್ತ್ಯವನ್ನು ಕೊಡಬೇಕು. ಆಗ ಮಾತ್ರ ಶಾಸನಕವಿಗಳ ಚರಿತ್ರೆ ಸಮಗ್ರವಾಗಲು ಪೂರಕವಾಗುತ್ತದೆ.

---

24 *Ibid.*, 127
25 *Ibid.*, IX, 165
26 *Ibid.*, XI, 81

ಎಸ್. ಎಂ. ನಾಗಭೂಷಣ

ಕೊಟ್ಟೂರಿನ ಪ್ರಾಚ್ಯ ಅವಶೇಷಗಳು: ಒಂದು ಸಮೀಕ್ಷೆ

ಕೊಟ್ಟೂರು ಒಂದು ಪ್ರಾಚೀನ ಪಟ್ಟಣ. ಇದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಿಂದ ಪಶ್ಚಿಮಕ್ಕೆ ೧೮ ಕಿ.ಮೀ. ಅಂತರದಲ್ಲಿದೆ. ಈ ಪ್ರಾಚೀನ ಪಟ್ಟಣದಲ್ಲಿ, ಬೇರೆ ಬೇರೆ ಕಾಲವಶಾನಗಳಿಗೆ ಸೇರಿದ ಪ್ರಾಚ್ಯ ಅವಶೇಷ ಗಳು ಕಂಡುಬರುತ್ತವೆ. ಅವುಗಳನ್ನು ಪ್ರಾಚೀನ ಹಾಗೂ ಅರ್ವಾಚೀನ ಕಾಲದ ಪ್ರಾಚ್ಯ ಅವಶೇಷಗಳೆಂದು ವಿಂಗಡಿಸಬಹುದು. ಪ್ರಾಚೀನ ಕಾಲಕ್ಕೆ ಸೇರಿದ ಅಂದರೆ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ದೇವಸ್ಥಾನಗಳು, ಶಾಸನಗಳು ಇಲ್ಲಿವೆ. ಗದ್ದೆಕಲ್ಲೇಶ್ವರ ಸಿರಿಮಠ, ಮೂರು ಕಲ್ಲು ಮಠಗಳೆಂದು ಇವುಗಳನ್ನು ಶಾಸನಗಳಲ್ಲಿ ಬೇರೆ ಹೆಸರುಗಳಿಂದ ಕರೆಯಲಾಗಿದೆ. ಇವಲ್ಲದೆ, ಅರ್ವಾ ಚೀನ ಕಾಲದ ಮೂರು ಕೊಟ್ಟೂರೇಶ್ವರ ಮಠಗಳಿದ್ದು, ಅವುಗಳನ್ನು ಹಿರೇಮಠ, ತೊಟ್ಟಿಲಮಠ ಹಾಗೂ ಗಚ್ಚಿನ ಮಠಗಳೆಂದು ಕರೆಯುತ್ತಾರೆ. ಇವಲ್ಲದೇ ವೀರಭದ್ರ ದೇವರು, ರಾಮಲಿಂಗದೇವರು, ಚಂದ್ರಮೌಳೇಶ್ವರ, ಬನಶಂಕರಿ ಹಾಗೂ ಕೊಟ್ರಮ್ಮನ ಗುಡಿಗಳಿವೆ.

ಈ ಪಟ್ಟಣದಲ್ಲಿ ಬೇರೆ ಬೇರೆ ರಾಜಮನೆತನಗಳಿಗೆ ಸೇರಿದ ಅನೇಕ ಶಾಸನಗಳು ಸಿಕ್ಕುತ್ತವೆ. ಅವುಗಳಲ್ಲಿ ನಾಲ್ಕು ಶಾಸನಗಳು ಪ್ರಕಟವಾಗಿವೆ; ಉಳಿದ ಏಳು ಶಾಸನಗಳು ಇನ್ನೂ ಅಪ್ರಕಟಿತ.

ಕೊಟ್ಟೂರು : 'ಕೊಟ್ಟೂರು ಗ್ರಾಮ' ಕಲ್ಯಾಣ ಚಾಲುಕ್ಯರ ಕಾಲಕ್ಕಿಂತ ಮೊದಲಿನಿಂದಲೂ ಬೆಳೆದು ಬಂದ ಪಟ್ಟಣವಿರಬಹುದು. ಇದು ಒಂದು ಆಡಳಿತಕೇಂದ್ರ ವಾಗಿಯೂ ವ್ಯಾಪಾರಕೇಂದ್ರವಾಗಿಯೂ ಇತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಇದುವರೆಗೆ ನಮಗೆ ತಿಳಿದುಬಂದಂತೆ, ಗದ್ದೆಕಲ್ಲೇಶ್ವರ ದೇವಸ್ಥಾನದ ಸಮೀಪ ದಲ್ಲಿ ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲನ ಕಾಲದ ಶಾಸನದಲ್ಲಿ (ಕ್ರಿ.ಶ. ೧೧೧೨) ಮೊಟ್ಟಮೊದಲು ಕೊಟ್ಟೂರು[1] ಎಂಬ ಹೆಸರಿನ ಉಲ್ಲೇಖ ಸಿಕ್ಕಿರುತ್ತದೆ. ಅಲ್ಲದೇ ಸುತ್ತಮುತ್ತಲ ಬಾಗಳಿ, ಕೋಗಳಿ, ಅಂಬಳಿ, ತೆಲಗಿಯ ಶಾಸನಗಳಲ್ಲಿ ಕೊಟ್ಟುಪ್ಪರ್ನ್ನೆರಡು[2] ಕೊಟ್ಟೂರು ಸೀಮೆ[3] ಎಂದು ಬಣ್ಣಿಸಲಾಗಿದೆ. ಆದರೆ 'ಕೊಟ್ಟೂರು ಬಸವೇಶ್ವರ ಚಾರಿತ್ರ'ದಲ್ಲಿ 'ಸರಸೀ ಪುರಂ'[4] ಎಂದು ಕರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಕೊಟ್ಟೂರಿನ ಪ್ರಾಚೀನ ವಾಸ್ತುಶಿಲ್ಪಗಳನ್ನು ಅಭ್ಯಸಿಸಿ ಒಂದು ಸಂಕ್ಷಿಪ್ತ ಸಮೀಕ್ಷೆಯನ್ನು ನೀಡಲು ಪ್ರಯತ್ನಿಸ ಲಾಗಿದೆ.

ವಾಸ್ತುಶಿಲ್ಪ

೧. ಗದ್ದೆಕಲ್ಲೇಶ್ವರ ದೇವಸ್ಥಾನ : ಇದು ವರೆಗೆ ತಿಳಿದುಬಂದಂತೆ ಗದ್ದೆಕಲ್ಲೇಶ್ವರ ದೇವಸ್ಥಾನವು

1 ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ ೯–೧, ಸಂಖ್ಯೆ ೧೮೭, ಪು. ೧೮೧, ೧೯ನೇ ಸಾಲು

2 ಅದೇ, ಸಂಖ್ಯೆ ೨೫೧, ಪು. ೨೬೦, ೩೫ನೇ ಸಾಲು

3 ಅದೇ, ಸಂಖ್ಯೆ ೫೨೨, ಪು. ೫೩೮, ೮ನೇ ಸಾಲು

4 ಆರ್. ಸಿ. ಹಿರೇಮಠ (ಸಂ.) : ಕೊಟ್ಟೂರ ಬಸವೇಶ್ವರ ಚಾರಿತ್ರ, ಸಂಧಿ ೨, ಪದ್ಯ ೯

ಈ ಗ್ರಾಮದ ಪ್ರಾಚೀನತಮ ದೇವಾಲಯವಾಗಿದೆ. ಇದು ಗ್ರಾಮದ ಪೂರ್ವದಿಕ್ಕಿನಲ್ಲಿಯ ಗದ್ದೆಗಳ ಮಧ್ಯ ದಲ್ಲಿರುವುದರಿಂದ 'ಗದ್ದೆಕಲ್ಲೇಶ್ವರ' ಎಂದು ಹೆಸರು ಬಂದಿರಬಹುದು. ಆದರೆ ಶಾಸನದಲ್ಲಿ ಇದನ್ನು ರಾಮೇಶ್ವರ ದೇವಸ್ಥಾನ್[5] ಎಂದು ಕರೆಯಲಾಗಿದೆ. ಗರ್ಭಗೃಹ ಅಂತರಾಳಗಳನ್ನು ಬಿಟ್ಟು ಉಳಿದ ಭಾಗ ವೆಲ್ಲಾ ಪಾಳುಬಿದ್ದಿದೆ. ಈ ದೇವಾಲಯದ ವಾಸ್ತು, ಶಿಲ್ಪ ಮತ್ತು ಶಾಸನಗಳ ಆಧಾರದಿಂದ ಇದನ್ನು ಕಲ್ಯಾಣ ಚಾಲುಕ್ಯರ ಕಾಲದ ಮತ್ತು ಶೈಲಿಯ ದೇವಾಲಯ ಎಂದು ಹೇಳಬಹುದು. ವಿಚಿತ್ರವೆಂದರೆ, ಇದನ್ನು ಕಣಶಿಲೆಯಿಂದ ಕಟ್ಟಿದೆ. ಆದರೆ ಸಾಮಾನ್ಯವಾಗಿ ಕಲ್ಯಾಣ ಚಾಲುಕ್ಯರ ದೇವಾಲಯಗಳನ್ನು ಬಳಪದಕಲ್ಲು ಅಥವಾ ಪಾಟಿಕಲ್ಲಿನಿಂದ ಕಟ್ಟಿದ್ದು ನಮಗೆ ತಿಳಿದಿದೆ. ಪೀಠ, ಶಿವಲಿಂಗ, ಮುಖಮಂಟಪಗಳಿಗೆ ಬಳಪದಕಲ್ಲು ಬಳಸಲಾಗಿದೆ. ಮತ್ತೊಂದು ವಿಶೇಷವೆಂದರೆ, ಈ ದೇವಾಲಯ ದಕ್ಷಿಣಾಭಿಮುಖವಾಗಿದೆ. ಸಾಮಾನ್ಯ ವಾಗಿ ದೇವಾಲಯಗಳು ಪೂರ್ವಾಭಿಮುಖವಾಗಿರುತ್ತವೆ. ಪಕ್ಕದಲ್ಲಿಯೇ ಮತ್ತೊಂದು ಗರ್ಭಗುಡಿ ಅಂತರಾಳಗಳ ನ್ನೊಳಗೊಂಡ ಗಣಪತಿ ದೇವಸ್ಥಾನವು ಪೂರ್ವಾಭಿ ಮುಖವಾಗಿದೆ. ನವರಂಗ ಭಾಗ ಸಂಪೂರ್ಣ ಭಗ್ನ ವಾಗಿದೆ. ಅದರ ಕುರುಹಾಗಿ ಒಂದು ಕಂಬ ಮಾತ್ರ ಉಳಿದಿದೆ.

ಗರ್ಭಗೃಹ : ಚೌಕಾಕಾರದ ಗರ್ಭಗುಡಿಯಲ್ಲಿ ಶಿವಲಿಂಗವಿದೆ. ಮೇಲೆ ಛತ್ತು ಚೌರಸಗಳಿಂದ ಕೂಡಿದ್ದು ತುದಿಯಲ್ಲಿ ಪದ್ಮವಿನ್ಯಾಸವುಳ್ಳ ಫಲಕವಿದೆ. ಗರ್ಭ ಗೃಹದ ಬಾಗಿಲು ಸುಂದರ ಶಿಲ್ಪಕಲಾಕೃತಿಯಿಂದ ತುಂಬಿದೆ. ರತ್ನಶಾಖೆ. ಲತಾಶಾಖೆ, ಸ್ತಂಬಶಾಖೆ, ಲತಾಸುರಳಿಶಾಖೆಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಅಂತರಾಳದಲ್ಲಿ ಶಿಲ್ಪ ಅಲಂಕಾರ ಗಳಿಲ್ಲ. ಮುಖಮಂಟಪ ಹಾಳಾಗಿದೆ. ನವರಂಗ ಹಾಳಾಗಿದ್ದು. ಈಗಾಗಲೇ ಹೇಳಿದಂತೆ ಒಂದು ಕಂಬ ಮಾತ್ರ ಉಳಿದಿದೆ. ನವರಂಗದ ದಕ್ಷಿಣಕ್ಕೆ ಪೂರ್ವಾಭಿ ಮುಖವಾಗಿ ಅದೇರೀತಿಯ ಅಂತರಾಳ ಗರ್ಭಗೃಹವಿದ್ದು ಗರ್ಭಗುಡಿಯಲ್ಲಿ ಶಿವಲಿಂಗದ ಬದಲು ಗಣಪತಿ ವಿಗ್ರಹ ವಿದೆ. ಇದನ್ನು ಅನಂತರ ಪ್ರತಿಷ್ಠೆ ಮಾಡಿದಂತೆ ತೋರುತ್ತದೆ. ಗರ್ಭಗೃಹ ದ್ವಾರ, ದ್ವಾರಶಾಖೆಗಳಿಂದ ಅಲಂಕರಿಸಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಇದೆ. ಈ ಲಲಾಟಬಿಂಬದ ಎರಡು ಬದಿಗೆ ಮೂರುಸಾಲಿನ ಶಾಸನ ವಿದೆ. ಇದು ಇನ್ನೂ ಪ್ರಕಟವಾಗಿಲ್ಲ.

ಪಾಳುಬಿದ್ದ ದೇವಾಲಯದ ಆವರಣದಲ್ಲಿ ಇರುವ ಐದುಅಡಿ ಎತ್ತರದ ಬಳಪದಕಲ್ಲಿನ ಕಂಬ ಸುಂದರವಾಗಿದೆ. ಕೆಳಭಾಗ ಚೌಕಾಕಾರವಾಗಿದ್ದು ಪ್ರತಿ ಚೌಕದಲ್ಲಿ ಒಂದು ದೇವರ ಮೂರ್ತಿಯ ಶಿಲ್ಪವಿದೆ. ಎರಡನೇ ಭಾಗದಲ್ಲಿ ಹದಿನಾರು ಏಣುಗಳಿವೆ ಹಾಗೂ ಅವು ಕುಸುರಿ ಕೆಲಸ ದಿಂದ ಸುಂದರವಾಗಿವೆ. ಮೂರನೆಯ ಭಾಗದಲ್ಲಿ ಗಂಟೆ ಆಕಾರವಾಗಿದ್ದು, ನಾಲ್ಕನೇ ಭಾಗದಲ್ಲಿ ದುಂಡಾದ ಬಳೆ ಗಳಿವೆ.

ಭಿತ್ತಿ ಶಿಖರ ಹಾಳಾಗಿದ್ದು ಮೂಲ ಶಿಖರದ ಸ್ಥಳ ದಲ್ಲಿ ಗಾರೆಯಿಂದ ಮಾಡಿದ ಗೋಳಾಕೃತಿಯ ಗುಮ್ಮಟ ವಿದೆ.

೨. ಮೂರುಕಲ್ಲು ಮಠ : ಇದು ಕೊಟ್ಟೂರು ನಗರದ ಉತ್ತರಭಾಗದಲ್ಲಿ ಕೂಡ್ಲಿಗಿ ರಸ್ತೆಯ ಪಕ್ಕ ದಲ್ಲಿದೆ. ಶಾಸನದಲ್ಲಿ ಇದನ್ನು ಉಡಕೇಶ್ವರ್[6] ದೇವ ಸ್ಥಾನವೆಂದು ಉಲ್ಲೇಖ ಮಾಡಲಾಗಿದೆ. ಈ ದೇವ ಸ್ಥಾನವನ್ನು ಕಣಶಿಲೆಯಿಂದ ಕಟ್ಟಿದ್ದು, ಅಲ್ಲಲ್ಲಿ ತೋರಣ, ದ್ವಾರ, ಜಾಲಂಧ್ರಗಳಿಗೆ ಕರಿಶಿಲೆಯನ್ನು ಉಪಯೋಗಿ ಸಿದ್ದಾರೆ. ಪೂರ್ವಾಭಿಮುಖವಾಗಿರುವ ತ್ರಿಕೂಟಾಚಲ ದೇವಾಲಯವು ಕದಂಬನಾಗರ ಶೈಲಿ ಶಿಖರಗಳಿಂದ ಶೋಭಿಸುತ್ತಿದೆ. ಗರ್ಭಗೃಹ ಅಂತರಾಳ, ನವರಂಗ, ಮುಖಮಂಟಪದಲ್ಲಿ ಕಕ್ಷಾಸನಗಳಿವೆ. ದೇವಸ್ಥಾನದ ಹೊರನೋಟ ಕ್ರಮವಾಗಿ ಅಧಿಷ್ಠಾನ, ಭಿತ್ತಿ, ಕಪೋತ ಮತ್ತು ಕದಂಬನಾಗರ ಶೈಲಿಯ ಶಿಖರಗಳಿವೆ.

ಗರ್ಭಗೃಹ: ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ಕರಿಶಿಲೆಯ ಪೀಠದಮೇಲೆ ಇರುವ ಶಿವಲಿಂಗವು ಸುಮಾರು

---

5 ಸೌ.ಇ.ಇ., ೯-೧, ಸಂಖ್ಯೆ ೧೮೭. ಪು. ೧೮೧, ೨೦ನೇ ಸಾಲು

6 ಅದೇ, ಸಂಖ್ಯೆ ೩೩೮, ಪು. ೩೫೮, ೩ನೇ ಸಾಲು

ಮೂರು ಅಡಿ ಎತ್ತರವಾಗಿದೆ. ಮೇಲ್ಚಾವಣಿಯು ಚೌರಸಗಳಿಂದ ಕೂಡಿದ್ದು, ಕೊನೆಯಲ್ಲಿ ಕಮಲ ವಿನ್ಯಾಸ ವಿದೆ. ಗರ್ಭಗೃಹದ ದ್ವಾರವು ಸೂಕ್ಷ್ಮ ವಿನ್ಯಾಸದಿಂದ, ದ್ವಾರಶಾಖೆಗಳಿಂದ ಅಲಂಕೃತವಾಗಿದೆ. ಲಲಾಟಬಿಂಬ ದಲ್ಲಿ ಗಜಲಕ್ಷ್ಮಿ ಇದೆ.

ಅಂತರಾಳದ ಬಾಗಿಲು ದ್ವಾರಶಾಖೆಗಳಿಂದ ಕೂಡಿದ್ದು, ಇಕ್ಕೆಲಗಳಲ್ಲಿ ದ್ವಾರಪಾಲಕ ಹಾಗೂ ಅಮೃತ ಕಳಸಗಳ ಉಬ್ಬುಶಿಲ್ಪಗಳಿವೆ. ಲಲಾಟಬಿಂಬ ವಿಲ್ಲ. ದ್ವಾರಬಾಗಿಲ ಶಾಖೆಗಳ ಎರಡು ಬದಿಗೆ ವಜ್ರಾಕೃತಿಯ ನಾಲ್ಕು ದಳ ಹೂಗಳನ್ನು ಕೆತ್ತಿದ ಜಾಲಂಧ್ರಗಳಿವೆ. ಉಳಿದೆರಡು ಗರ್ಭಗೃಹಗಳು ಇದೇ ರೀತಿಯಲ್ಲಿವೆ.

ನವರಂಗ : ಮೂರು ಗರ್ಭಗೃಹಗಳಿಗೆ ಹೊಂದಿ ಕೊಂಡಂತೆ ನವರಂಗವಿದೆ. ನಾಲ್ಕು ಕಂಬಗಳ ಮಧ್ಯ ಸ್ವಲ್ಪ ಎತ್ತರವಾದ ನೃತ್ಯಮಂಟಪವಿದೆ. ಮೇಲ್ಚಾ ವಣಿಯು ಚೌರಸಗಳಿಂದ ಕೂಡಿ ತುದಿಯಲ್ಲಿ ಅರಳಿದ ಕಮಲ ವಿನ್ಯಾಸವಿದೆ. ಕಂಬಗಳ ಕೆಳಗಿನ ಭಾಗವು ಚೌಕಾಕಾರವಾಗಿದ್ದು, ಎರಡನೇ ಭಾಗವು ಎಂಟು ಏಣು ಗಳಿಂದ ಕೂಡಿದೆ. ಮೂರನೇ ಭಾಗದಲ್ಲಿ ಚೌಕಾಕಾರ, ನಾಲ್ಕನೇ ಭಾಗದಲ್ಲಿ ದುಂಡನೆಯ ಬಳೆಗಳಿವೆ. ಮೇಲ್ಭಾಗ ದಲ್ಲಿ ಚೌಕಾಕಾರದ ಬೋದಿಗೆ ಇದೆ. ನವರಂಗದಲ್ಲಿ ದೇವ ಕೋಷ್ಠಗಳಿಲ್ಲ.

ಮುಖಮಂಟಪ : ಮುಖಮಂಟಪವು ದ್ವಾರ, ಶಾಖೆಗಳಿಂದ ಅಲಂಕೃತವಾಗಿದೆ. ರತ್ನಶಾಖೆ, ಲತಾ ಶಾಖೆ, ಸ್ಥಂಬಶಾಖೆ, ಲತಾಸುರಳಿ ಶಾಖೆಗಳಲ್ಲಿ, ಹಂಸ ನರ್ತಕಿಯರ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಇದೆ. ತೋರಣದಲ್ಲಿ ದ್ರಾವಿಡಶೈಲಿಯ ಗೋಪುರ ಗಳಿವೆ.ಮುಖಮಂಟಪಕ್ಕೆ ಹೊಂದಿಕೊಂಡು ಕಕ್ಷಾಸನವಿದೆ.

ದೇವಾಲಯದ ಹೊರನೋಟದಲ್ಲಿ ಅಧಿಷ್ಠಾನ, ಭಿತ್ತಿ, ಕಪೋತ ಶಿಖರಗಳು ಸಾಮಾನ್ಯರನ್ನು ಸಹಾ ಆಕರ್ಷಿಸುವಷ್ಟು ಸುಂದರವಾಗಿವೆ. ಅಧಿಷ್ಠಾನದಲ್ಲಿ ಐದು ಸರಳ ಪಟ್ಟಿಕೆಗಳಿವೆ. ಭಿತ್ತಿಭಾಗದಲ್ಲಿ ಯಾವುದೇ ಅಲಂಕಾರವಿಲ್ಲದೆ ಸರಳವಾಗಿದೆ. ಕದಂಬನಾಗರ ಶಿಖರ ಪಿರಮಿಡ್ ಆಕಾರದಲ್ಲಿ ಏರುತ್ತಾ ಕೊನೆಯಲ್ಲಿ ಚೌಕಾ ಕಾರದ ಸ್ತೂಪಿ ಇದೆ. ಕಳಸ ಹಾಳಾಗಿದೆ. ಸುತ್ತ ಮುತ್ತಲೂ ಭಗ್ನಶಿಲ್ಪ ಅವಶೇಷಗಳನ್ನು ನೋಡ ಬಹುದು.

೩. ಸಿರಿಮಂತ ದೇವಸ್ಥಾನ : ಈ ದೇವಸ್ಥಾನವು ಕೊಟ್ಟೂರು ಪೂರ್ವಭಾಗದಲ್ಲಿದ್ದು, ಕೂಡ್ಲಿಗಿ ರಸ್ತೆಯ ದಕ್ಷಿಣಭಾಗದಲ್ಲಿದೆ. ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ ಅಂತರಾಳ, ಸಭಾಮಂಟಪದ ಒಂದು ಅಂಕಣ ಮಾತ್ರ ಉಳಿದಿವೆ. ಉಳಿದ ಭಾಗ ಮತ್ತು ಶಿಖರ ಹಾಳಾಗಿವೆ. ಸಭಾಮಂಟಪದ ಮಧ್ಯ ದಲ್ಲಿ ಗರ್ಭಗುಡಿಗೆ ಎದುರಾಗಿ ಭಗ್ನ ನಂದಿ ಇದೆ.

ಗರ್ಭಗೃಹ : ಚೌಕಾಕಾರದ ಗರ್ಭಗೃಹದಲ್ಲಿ ಕರಿಕಲ್ಲಿನ ಶಿವಲಿಂಗವಿದೆ. ಮೇಲ್ಚಾವಣಿ ಚೌರಸಗಳಿಂದ ಕೂಡಿದ್ದು, ಕೊನೆಯ ಚೌರಸದಲ್ಲಿ ಕಮಲ ವಿನ್ಯಾಸ ವಿದೆ. ಗರ್ಭಗೃಹದ ದ್ವಾರವು ದ್ವಾರಶಾಖೆಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಇದೆ. ಅಂತರಾಳದಲ್ಲಿ ಇತ್ತೀಚೆಗೆ ಪ್ರತಿಷ್ಠಾಪಿಸಿದ ನಂದಿ ವಿಗ್ರಹವಿದೆ. ಅಂತರಾಳದ ದ್ವಾರವು ರತ್ನಶಾಖೆ, ಲತಾಶಾಖೆ, ಸ್ಥಂಬಶಾಖೆ, ಲತಾಸುರಳಿ ಶಾಖೆಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮಿ ಇದೆ. ದ್ವಾರಶಾಖೆಗಳ ಎರಡು ಬದಿಗೆ ವಜ್ರಾಕೃತಿ ವಿನ್ಯಾಸ ದಿಂದ ಒಳಗೊಂಡ ಜಾಲಂಧ್ರಗಳಿವೆ. ಕೆಳಗೆ ಎರಡೂ ಬದಿಗೆ ದ್ವಾರಪಾಲಕರ ಹಾಗೂ ಅಮೃತ ಕಳಸಗಳ ಉಬ್ಬುಶಿಲ್ಪಗಳಿವೆ.

ಸಭಾಮಂಟಪ : ಇದು ಹಾಳಾಗಿದ್ದು ಒಂದು ಅಂಕಣ ಮಾತ್ರ ಉಳಿದಿದೆ. ಅಂತರಾಳ ದ್ವಾರದ ಎರಡು ಬದಿಗೆ ಎರಡು ದೇವಕೋಷ್ಠಗಳಿವೆ.ದೇವಕೋಷ್ಠಗಳನ್ನು ದ್ವಾರಪಟ್ಟಿಕೆಗಳಿಂದ ಅಲಂಕರಿಸಲಾಗಿದ್ದು, ಮೇಲೆ ತೋರಣದಲ್ಲಿ ದ್ರಾವಿಡಶೈಲಿಯ ಗೋಪುರಗಳಿವೆ. ಈಗ ದೇವಕೋಷ್ಠಗಳಲ್ಲಿ ಯಾವುದೇ ವಿಗ್ರಹಗಳಿಲ್ಲ.ಪಾಳುಬಿದ್ದ ಬಯಲು ಸಭಾಮಂಟಪದಲ್ಲಿ ಗರ್ಭಗುಡಿಗೆ ಎದುರಾಗಿ ೧೦ ಅಡಿ ಅಂತರದಲ್ಲಿ ೩ ಅಡಿ ಎತ್ತರದ ಭಗ್ನ ನಂದಿ ಇದೆ. ನಂದಿಯನ್ನು ದಾಟಿ ಮುಂದೆ ಹೋದರೆ ಎರಡು ಸೋಪಾನಗಳಿವೆ. ಸಭಾಮಂಟಪ ಈ ಸೋಪಾನದ ವರೆಗೆ ಇತ್ತೆಂದು ತಿಳಿದುಬರುತ್ತದೆ. ಆವರಣದಲ್ಲಿ ಅನೇಕ ಭಗ್ನ ಅವಶೇಷಗಳು ಬಿದ್ದಿವೆ.

ಶಾಸನಗಳು: ಕೊಟ್ಟೂರಿನಲ್ಲಿ ಇದುವರೆಗೆ ಒಟ್ಟು ಹನ್ನೊಂದು ಶಾಸನಗಳು ಲಭ್ಯವಾಗಿವೆ. ಅವುಗಳಲ್ಲಿ ನಾಲ್ಕು ಮಾತ್ರ ಪ್ರಕಟಿತ[7] ; ಉಳಿದ ಏಳು ಅಪ್ರಕಟಿತ. ಅವುಗಳಲ್ಲಿ ಅತಿ ಪ್ರಾಚೀನ ಶಾಸನ ಇದುವರೆಗೆ ತಿಳಿದಂತೆ ಗದ್ದೆಕಲ್ಲೇಶ್ವರ ದೇವಸ್ಥಾನದ ಮುಂದಿರುವ ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲನ ಕಾಲದ್ದು (ಕ್ರಿ.ಶ. ೧೦೧೨ ಏಪ್ರಿಲ್ ೧ ಸೋಮವಾರ). ಈ ಶಾಸನದಲ್ಲಿ ರಾಮೇಶ್ವರ ದೇವಸ್ಥಾನ(ಗದ್ದೆಕಲ್ಲೇಶ್ವರ)ದ ಅರ್ಚಕರಾದ ಅಮೃತರಾಶಿ ಪಂಡಿತರಿಗೆ ದೇವಸ್ಥಾನದ ಸೇವೆಗಾಗಿ ಕೊಟ್ಟ ಭೂದಾನವನ್ನು ಉಲ್ಲೇಖಿಸಲಾಗಿದೆ.

ಮತ್ತೊಂದು ಶಾಸನವು ಹೊಯ್ಸಳ ವೀರ ಬಲ್ಲಾಳನ ಕಾಲಕ್ಕೆ ಸಂಬಂಧಿಸಿದ್ದು, ಮೂರುಕಲ್ಲುಮಠದ ಮುಂದಿದೆ. ಈ ಶಾಸನದಲ್ಲಿ, ಹೊಯ್ಸಳ ದಂಡನಾಯಕನಾದ ಕೇಶವ ದಂಡನಾಯಕನು ಕೊಟ್ಟೂರ ಸೀಮೆಯ ಹತ್ತಿರದ ಮಗಿಮಾವಿನ (?) ಹಳ್ಳಿಯನ್ನು ಬ್ರಾಹ್ಮಣರಿಗೆ ದತ್ತಿಕೊಟ್ಟುದನ್ನೂ ಮಂತ್ರಿ ಮುಕ್ತಿದೇವನು 'ಉಡಕೇಶ್ವರ' (ಮೂರುಕಲ್ಲುಮಠ) ದೇವಸ್ಥಾನಕ್ಕೆ ಭೂದಾನ ಮಾಡಿದುದನ್ನೂ ಉಲ್ಲೇಖಿಸಲಾಗಿದೆ.

ನಾನು ಆಯ್ಕೆ ಮಾಡಿದ ಕೆಲವು ಕಲ್ಯಾಣ ಚಾಲುಕ್ಯ ವಾಸ್ತುಶಿಲ್ಪಗಳನ್ನು ಮಾತ್ರ ಇಲ್ಲಿ ಸಮೀಕ್ಷೆ ಮಾಡಿದ್ದು, ವಿಜಯನಗರ ಕಾಲದ ಉಳಿದ ದೇವಸ್ಥಾನಗಳನ್ನು ಇಲ್ಲಿ ಗಮನಿಸಿರುವುದಿಲ್ಲ. ನನ್ನ ಅಧ್ಯಯನದಿಂದ ತಿಳಿದುಬಂದಿರುವ ಸಂಗತಿಗಳೆಂದರೆ,

೧. ಕೊಟ್ಟೂರಿನಲ್ಲಿ ಕಂಡುಬರುವ ದೇವಸ್ಥಾನಗಳು ಒಟ್ಟಾರೆ ಚಾಲುಕ್ಯಶೈಲಿಯ ಅಭ್ಯಾಸಕ್ಕೆ ಉಪಯುಕ್ತವಾಗಿವೆ. ಆದರೆ ಕೆಲವು ಪ್ರಾದೇಶಿಕ ವೈಶಿಷ್ಟ್ಯಗಳಿವೆ.

೨. ಈ ದೇವಸ್ಥಾನಗಳಿಗೆ ಬಳಸಿದ ಕಲ್ಲು ಕಣಶಿಲೆ ಎಂಬುದು ಒಂದು ವಿಶೇಷ. ಈಗಾಗಲೇ ಹೇಳಿದಂತೆ ಕಲ್ಯಾಣ ಚಾಲುಕ್ಯರ ಶಿಲ್ಪಗಳಲ್ಲಿ ತಮ್ಮ ಶೈಲಿಯ ಮತ್ತು ಶಿಲ್ಪಕ್ಕೆ ಬಳಪದ ಅಥವಾ ಪಾಟಿಕಲ್ಲನ್ನು ಬಳಸಿರುವುದು ಕಂಡುಬರುತ್ತದೆ. ಬಹುಶಃ ಇಲ್ಲಿ ಪ್ರಾದೇಶಿಕವಾಗಿ ಸಿಗುವ ಕಣಶಿಲೆಯನ್ನೇ ಶಿಲ್ಪಗಳಿಗೆ ಬಳಸಿರುವುದು ಕಂಡುಬರುತ್ತದೆ.

೩. ಇದರಿಂದಾಗಿ ಕಲ್ಯಾಣ ಚಾಲುಕ್ಯ ವೈಶಿಷ್ಟ್ಯವಾದ ಶಿಲ್ಪ ಅಲಂಕಾರದ ಕುಸುರಿ ಕೆಲಸವು ಈ ದೇವಸ್ಥಾನಗಳಲ್ಲಿ ಕಂಡುಬರುವುದಿಲ್ಲ.

೪. ಈ ದೇವಸ್ಥಾನಗಳ ಹೆಸರುಗಳು ಜನರ ನಿತ್ಯ ವ್ಯವಹಾರದಲ್ಲಿ ಮಾರ್ಪಾಡು ಹೊಂದಿದ್ದು, ಸುದೈವದಿಂದ ದೇವಸ್ಥಾನಗಳಿಗೆ ಸಂಬಂಧಿಸಿದ ಶಾಸನಗಳು ಲಭಿಸಿದ್ದರಿಂದ ನಮ್ಮ ಅಧ್ಯಯನಕ್ಕೆ ಅವುಗಳ ನಿಜವಾದ ಹೆಸರುಗಳನ್ನು ತಿಳಿಯಲು ಸಾಧ್ಯವಾಗಿದೆ; ಇತಿಹಾಸಕ್ಕೆ ಬೆಳಕು ಬೀಳುತ್ತಿದೆ.

೫. ಕೊಟ್ಟೂರಿನಲ್ಲಿ ಇದುವರೆಗೆ ಕಂಡುಬರುವ ಕಲ್ಯಾಣ ಚಾಲುಕ್ಯರ ಶೈಲಿಯ ವಾಸ್ತುಶಿಲ್ಪ ಮತ್ತು ಶಾಸನಗಳ ಅಧ್ಯಯನದಿಂದ ತಕ್ಕಮಟ್ಟಿಗೆ ಪ್ರಾದೇಶಿಕತೆಯನ್ನು ಗುರುತಿಸಲು ಸಾಧ್ಯವಾಗಿದೆ.*

---

7 ಅದೇ, ೬–೧ ಮತ್ತು ೨

* ಈ ಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಮಾರ್ಗದರ್ಶನ ಮಾಡಿದ ನನ್ನ ಸಂಶೋಧನ ಮಾರ್ಗದರ್ಶಿಗಳಾದ ಡಾ॥ ಎಚ್. ಆರ್. ರಘುನಾಥಭಟ್ಟರಿಗೆ ಕೃತಜ್ಞತೆಗಳು.

ಡಾ॥ ಚೆನ್ನಕ್ಕ ಎಲಿಗಾರ

ಬಂಕಾಪುರದ ಇಂದ್ರೇಶ್ವರ ದೇವಸ್ಥಾನ

ಧಾರವಾಡ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಂಕಾಪುರ ಸುಪ್ರಸಿದ್ಧ ಐತಿಹಾಸಿಕ ಸ್ಥಳ. ಇದು ರಾಷ್ಟ್ರಕೂಟ ಕಾಲದಷ್ಟು ಹಿಂದೆಯೆ ರಾಜಧಾನಿಯಾಗಿತ್ತು. ರಾಷ್ಟ್ರಕೂಟ ಸಾಮಂತ ಚಲ್ಲಕೇತನ ವಂಶದ ವೀರ ಬಂಕೇಯನಿಂದ, ಜೈನಧರ್ಮದ ಗುಣಭದ್ರಾಚಾರ್ಯ ವಿರಚಿತ 'ಉತ್ತರಪುರಾಣ'ದಿಂದ ವಿಶೇಷ ಮಹತ್ವ ಹೊಂದಿದೆ. ಕ್ರಿ.ಶ. ೯೨೫ರ ಶ್ರವಣಬೆಳಗೊಳ ಶಾಸನದ ಪ್ರಕಾರ, ಇದು ರಾಷ್ಟ್ರಕೂಟ ನಿತ್ಯವರ್ಷ ನಾಲ್ಕನೆಯ ಗೋವಿಂದನ ಆಳ್ವಿಕೆಗೆ ಬಂಕಾಪುರ ಒಳಪಟ್ಟಿತ್ತು.[1] ರಾಷ್ಟ್ರಕೂಟ ಇಂದ್ರವಲ್ಲಭ ಅಥವಾ ನಾಲ್ಕನೆಯ ಇಂದ್ರನಿಗೆ ಬಂಕಾಪುರದಲ್ಲಿ ಕ್ರಮಬದ್ಧವಾದ ಪಟ್ಟಾಭಿಷೇಕವಾಯಿತು. ಇದು 'ಶ್ರೀಮದಿನ್ದ್ರರಾಜ ಪಟ್ಟಬಂಧೋತ್ಸವ' ಎಂದು ಶಾಸನದಲ್ಲಿ ನೇರವಾಗಿಯೆ ಉಲ್ಲೇಖಿಸಲ್ಪಟ್ಟಿದೆ. ಇಮ್ಮಡಿ ಮಾರಸಿಂಹ ಈ ಇಂದ್ರನನ್ನು ರಾಷ್ಟ್ರಕೂಟ ಸಿಂಹಾಸನದ ಮೇಲೆ ಕುಳ್ಳಿರಿಸಲು ಸರ್ವಪ್ರಯತ್ನ ಕೈಕೊಂಡ. ಆದರೆ ವಿಧಿಬರಹ ಬೇರೆಯಾಗಿತ್ತು. ಮಾರಸಿಂಹನು ಕ್ರಿ. ಶ. ೯೭೫ರಲ್ಲಿ ಬಂಕಾಪುರದಲ್ಲಿ ಮರಣ ಹೊಂದಿದರೆ,[2] ನಾಲ್ಕನೆಯ ಇಂದ್ರನು ಕ್ರಿ. ಶ. ೯೮೨ರಲ್ಲಿ ಮರಣಹೊಂದಿದ.[3] ಇಂದ್ರನ ಮರಣದ ಪ್ರಸ್ತಾಪ ಮಾಡಿದ ಶ್ರವಣಬೆಳಗೊಳ ಶಾಸನವು ಮರಣಸ್ಥಳವನ್ನು ಸೂಚಿಸಿಲ್ಲ. ಆದರೆ ಡಾ॥ ಪಿ.ಬಿ. ದೇಸಾಯಿಯವರು, ಇಂದ್ರನು ತನ್ನ ಕೊನೆಗಾಲದವರೆಗೂ ಬಂಕಾಪುರದಲ್ಲಿಯೆ ಇದ್ದಿರಬೇಕೆಂದಿದ್ದಾರೆ.[4] ಈ ಇಂದ್ರನ ಹೆಸರಿನಲ್ಲಿ ಸ್ಥಾಪಿತವಾದವು ಬಂಕಾಪುರದ ಇಂದ್ರೇಶ್ವರಗೇರಿ, ಇಂದ್ರೇಶ್ವರಪುರ ಹಾಗೂ ಇಂದ್ರೇಶ್ವರ ದೇವಸ್ಥಾನ. ಕ್ರಿ. ಶ. ೧೦೦೭ ರ ಹೊಟ್ಟೂರ ಶಾಸನವು 'ಇಂದ್ರೇಶ್ವರಗೇರಿ'ಯ ಪ್ರಸ್ತಾಪ ಮಾಡಿದರೆ,[5] ಕ್ರಿ.ಶ. ೧೦೬೨ರ ಬಂಕಾಪುರ ಶಾಸನವು 'ಇಂದ್ರೇಶ್ವರಪುರ'ದ ಪ್ರಸ್ತಾಪ ಮಾಡಿದೆ.[6] ಇಂದ್ರೇಶ್ವರ ದೇವಸ್ಥಾನದ ಪ್ರಥಮ ಉಲ್ಲೇಖವು ಕೋಳೂರು ಶಾಸನದಲ್ಲಿದೆ.[7] ಆದರೆ ಇದರ ನಿರ್ಮಾಣದ ಕಾಲ ತಿಳಿದುಬಂದಿಲ್ಲ. ದೇವಾಲಯದ ಪರಿಸರಕ್ಕೆ 'ಪುರ'ವೆಂದು ಕರೆಯಲಾಗುತ್ತಿದ್ದುದರಿಂದ ಇಂದ್ರೇಶ್ವರ ದೇವಾಲಯದ ಪರಿಸರವೇ ಇಲ್ಲಿಯ 'ಇಂದ್ರೇಶ್ವರಪುರ'. ಇಂದ್ರೇಶ್ವರಗೇರಿ ಎಂಬುದು ಇದರ ಇನ್ನೊಂದು ಹೆಸರಾಗಿರಬೇಕು.

---

1 ಎ. ಕ., ೨, ಶ್ರವಣಬೆಳಗೊಳ
2 ಅದೇ. ೬೪
3 ಅದೇ, ೬೩
4 ಅದೇ; ಮುನ್ನುಡಿ
5 ಎ. ಇ., ೧೬, ೧೧ ಹೊಟ್ಟೂರು
6 ಎಸ್. ಆಯ್. ಆಯ್., ೧೮, ೬೬ ಬಂಕಾಪುರ
7 ಎ. ಇ., ೧೯, ೨೯(೬) ಕೋಳೂರು (ಕ್ರಿ.ಶ. ೧೦೪೫)

ಇಂದ್ರೇಶ್ವರ ದೇವಾಲಯವನ್ನು ಕುರಿತು ಈವರೆಗೆ ಆರು ಶಾಸನಗಳು ಲಭ್ಯವಾಗಿದ್ದು, ಇತ್ತೀಚೆಗೆ ನನ್ನ ಗಮನಕ್ಕೆ ಬಂದ ಶಾಸನವನ್ನು (ಅಪ್ರಕಟಿತ) ಸೇರಿಸಿದರೆ ಈ ಸಂಖ್ಯೆ ಏಳಾಗುತ್ತದೆ. ಆ ಶಾಸನಗಳೆಂದರೆ, ೧. ಕದಂಬಾನ್ವಯದ ರಾಜಗುರುದೇವರು ಬಂಕಾಪುರದ ಇಂದ್ರೇಶ್ವರ ದೇವರ್ಗಾಳ್ವ ಪನ್ನೆರಡು ಬಾಡದ ಸುಂಕವನ್ನಾಳುತ್ತಿರಲು ಕೋಳೂರು ಕಲಿದೇವೇಶ್ವರಕ್ಕೆ ಬಿಟ್ಟ ದತ್ತಿ[8]; ೨. ರಾಜಗುರು ವರುಣಶಿವ ಪಂಡಿತ ದೇವ ಶ್ರೀ ಮದ್ಬಂಕಾಪುರದಿಂದ್ರೇಶ್ವರ ದೇವರ್ಗಾಳ್ವ ಪನ್ನೆರಡು ಬಾಡಂ ಸುಖದಿಂದಾಳುತ್ತಿರಲುಂ ಪೆರ್ಗಡೆ ಚಾವುಂಡಯ್ಯ ಇಂದ್ರೇಶ್ವರಪುರದ ಅಧಿಕಾರ ನೋಡುತ್ತಿದ್ದ ಉಲ್ಲೇಖ[9] ; ೩. ಬಂಕಾಪುರದ ಇಂದ್ರೇಶ್ವರ ದೇವರ್ಗಾಳ್ವ ಗೊರವ ಎಂಬ ಉಲ್ಲೇಖ[10]; ೪. ರಾಜಧಾನಿ ಪಟ್ಟಣಂ ಶ್ರೀಮತ್ ಬಂಕಾಪುರದ ಶ್ರೀಮದಿಂದ್ರೇಶ್ವರದಾಚಾರ್ಯ, ಸೋಮರಾವುಳ, ಶಿವಶಕ್ತಿ ಪಂಡಿತರ ಜೊತೆಯಲ್ಲಿ ಮಂಡಳೇಶ್ವರ ಕೀರ್ತಿ ದೇವರಸ, ಕಾಳಲದೇವಿ ಮಹಾಪ್ರಧಾನ ಕುಮಾರ ಮಲ್ಲರಸರು ಇಂದ್ರೇಶ್ವರದೇವರ ನಂದಾದೀವಿಗೆಗೆ ಬಿಟ್ಟ ಸುಂಕದಾನದ ಉಲ್ಲೇಖ[11] ; ೫. ವಾಕೆಟಿಗವಲ್ಲಿಯ ಸಿದ್ದೇಶ್ವರ ದೇವರ್ಗೆ ಇಂದ್ರೇಶ್ವರದೇವರ್ಗೆ ಬಿಟ್ಟ ದತ್ತಿ[12] ; ೬. ಬಂಕಾಪುರದ ಇಂದ್ರೇಶ್ವರಕೆ ಹಿಡಿಕೇಶ್ವರ ಗ್ರಾಮ ದಾನ.[13]

ಕಲ್ಯಾಣ ಚಾಲುಕ್ಯರ ಕಾಲದ ಬಂಕಾಪುರ ಶಾಸನದಲ್ಲಿ ಈ ಇಂದ್ರೇಶ್ವರ ದೇವಸ್ಥಾನವನ್ನು,

ಧರಣೀನಾರಿಯು ವಕ್ತ್ರದಂತೆ ಬನವಾಸಿದೇಶ
ವೆಸ್ಸು ನಿರಂ
ತರ ಶೋಭಾಸ್ಪದವಲ್ಲಿ ಕಣ್ಪೊತ್ತೆಸೆದಿರ್ಕು
ಪಾನುಂಗಲ್ಲನಾಡು ಸು
ನ್ದರ ಶೋಭೋತ್ತಮದಕ್ಕೆ ಮೂಗೆನಿಸು
ಗುಂ ಬಂಕಾರಪುರಪಟ್ಟಣಂ ತ
ತ್ಪುರಾಭರಣಂ ತಾನೆನಲಿಂದ್ರವಲ್ಲಭಂ ಶಿವಾ
ವಾಸಂ ಜಗನ್ಮಣ್ಡನಂ ॥[14]

ಎಂದು ವರ್ಣಿಸಲಾಗಿದೆ. ಚಾಲುಕ್ಯ ತ್ರೈಲೋಕ್ಯ ಮಲ್ಲ (ಸೋಮೇಶ್ವರ ೧), ಭುವನೈಕಮಲ್ಲ (ಸೋಮೇಶ್ವರ ೨), ತ್ರಿಭುವನಮಲ್ಲ (ವಿಕ್ರಮಾದಿತ್ಯ ೪)—ಈ ಮೂವರು ದೊರೆಗಳ ಕಾಲದಲ್ಲಿಯೂ ಇಂದ್ರೇಶ್ವರ ದೇವಸ್ಥಾನದ ಖ್ಯಾತಿ ಹಬ್ಬಿತ್ತು. ಭುವನೈಕಮಲ್ಲನ ರಾಜಗುರುವೆನಿಸಿದ ರಾಜಗುರುದೇವ 'ಶ್ರೀಮದ್ಬಂಕಾಪುರದಿಂದ್ರೇಶ್ವರ ದೇವರ್ಗಾಳ್ವ ಪನ್ನೆರಡು ಬಾಡಂ' ಸಂತೋಷದಿಂ ಆಳುತ್ತಲಿದ್ದ.[15] ಕ್ರಿ. ಶ. ೧೦೪೫[16] ಮತ್ತು ಕ್ರಿ.ಶ. ೧೦೮೫–೮೬ ರ[17] ಕೋಳೂರು ಶಾಸನಗಳು, ಕ್ರಿ.ಶ. ೧೦೬೨ ರ ಬಂಕಾಪುರ ಶಾಸನವು[18] 'ಶ್ರೀ ವರುಣಶಿವ ಪಂಡಿತದೇವರ್' ಎಂಬವರನ್ನು ಗುರುದೇವ ಎಂದು ಕರೆದಿವೆ. 'ಕೊಂಕಣರಕ್ಷಾಳಂ ಕದಂಬಾನ್ವಯ ಸಮುದ್ಧರಣ'ರೆಂಬ ಬಿರುದು ಇವರಿಗಿತ್ತು. ಕರ್ಜಗಿ ತಾಲೂಕಿನ ಕೋಳೂರಿನಲ್ಲಿ ದೊರೆಯುವ ಆರು ಶಾಸನಗಳಲ್ಲಿ ಇಂದ್ರೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದ

---

8 ಅದೇ
9 ಎಸ್. ಆಯ್. ಆಯ್., ೧೮, ೬೬ ಬಂಕಾಪುರ (ಕ್ರಿ.ಶ. ೧೦೬೨)
10 ಎ. ಇ., ೧೯, ೨೯ ಕೋಳೂರ (ಕ್ರಿ.ಶ. ೧೦೭೯)
11 ಎಸ್. ಆಯ್. ಆಯ್., ೧೮, ೨೯೧ ಬಂಕಾಪುರ
12 ಅದೇ, ೧೫೯ ಹಾವೇರಿ (ಕ್ರಿ.ಶ. ೧೧೫೬)
13 ಎ. ಆರ್. ಎಸ್. ಆಯ್. ಇ., ೧೯೪೪–೪೫, ೬ ಬಂಕಾಪುರ (ಕ್ರಿ.ಶ.೧೨೫೮)
14 ಎಸ್. ಆಯ್. ಆಯ್., ೧೮, ೨೯೧ ಬಂಕಾಪುರ
15 ಅದೇ, ೬೬,-ಬಂಕಾಪುರ (ಕ್ರಿ. ಶ. ೧೦೬೨)
16 ಎ. ಇ., ೧೯, ೨೯ ಕೋಳೂರು
17 ಅದೇ
18 ಎಸ್. ಆಯ್. ಆಯ್., ೧೮, ೬೬ ಬಂಕಾಪುರ

೨ ಶಾಸನಗಳು ರಾಜಗುರುದೇವರಿಗೆ ಸಂಬಂಧಿಸಿರುವುದರಿಂದ, ಇಂದ್ರೇಶ್ವರ ದೇವರ ಭೋಗಕ್ಕೆ ಬಿಟ್ಟ ೧೨ ಹಳ್ಳಿಗಳಲ್ಲಿ ಕೋಳೂರು ಗ್ರಾಮವೂ ಸೇರ್ಪಡೆಯಾಗಿರಬೇಕು. ಕೋಳೂರಿನ ೬ ಶಾಸನಗಳನ್ನು ಸಂಗ್ರಹಿಸಿ ಪ್ರಕಟಿಸಿದ ಬಾರ್ನೆಟರ ವಿಚಾರವೂ ಅದೇ ಆಗಿದೆ.[19]

ಹಾನಗಲ್ಲ ಕದಂಬರ ಕಾಲದಲ್ಲಿ ಇಂದ್ರೇಶ್ವರ ದೇವಾಲಯದ ಜವಾಬ್ದಾರಿಯನ್ನು ನಿರ್ವಹಿಸಿದ ಆಚಾರ್ಯರಾದ ಶ್ರೀ ಮದೆಕ್ಕೋಟಿಯ ಕುಮಾರ ಭುಜಬಳ ಚಕ್ರವರ್ತಿ ಸೋಮರಾವುಳ ಪಂಡಿತ[20] ಮತ್ತು ಶಿವಶಕ್ತಿದೇವ ಮುನಿಪ[21]ರನ್ನು ಬಂಕಾಪುರ ಶಾಸನ ಹೊಗಳಿದೆ. ಶಾಸನಗಳುದ್ದಕ್ಕೂ ಈ ಆಚಾರ್ಯರ ಭವ್ಯ ವ್ಯಕ್ತಿತ್ವ ತುಂಬಿ ನಿಂತಿದೆ. ಕ್ರಿ. ಶ ೧೦೬೨ ರ ಶಾಸನದಲ್ಲಿ ಪೆರ್ಗಡೆ ಚಾವುಂಡಯ್ಯ ಇಂದ್ರೇಶ್ವರಪುರದ ಅಧಿಕಾರ ನೋಡುತ್ತಿದ್ದ.[22] ಇಂದ್ರೇಶ್ವರದ ಪಾದಮೂಲ ಪರಿವಾರದ ಸೂಳೆಯರಿಗೆ 'ಕೌಜೂರೊಳಗಾಗಿ ಪಲಸೂರು' ಬಿಟ್ಟಿದ್ದಂತೆ ತಿಳಿದುಬರುತ್ತದೆ.[23]

ಹೀಗೆ ವಿಭಿನ್ನ ರಾಜಕೀಯ ಮನೆತನಗಳ ಗೌರವ ಪಡೆದು ಮೆರೆದ ಅದರ ಸ್ಥಳವೂ ಈ ದೇವಸ್ಥಾನವೂ ಗೊತ್ತಾಗದಂತೆ ಇಂದು ನಾಶವಾಗಿ ಹೋಗಿವೆ. 'ಪ್ರಾಚೀನ ಕರ್ನಾಟಕದ ಪ್ರಮುಖ ಪಟ್ಟಣ ಹಾವೇರಿ' ಎಂಬ ಲೇಖನವನ್ನು ಬರೆಯುತ್ತ ಡಾ॥ ಶ್ರೀನಿವಾಸ ರಿತ್ತಿಯವರು, "ಹಾವೇರಿಯ ಶಾಸನಗಳಲ್ಲಿ ಸಿದ್ದೇಶ್ವರನೊಂದಿಗೆ ಇಂದ್ರೇಶ್ವರವೆಂಬ ದೇವತೆಯ ಹೆಸರೂ ಬರುತ್ತದೆ. ಆದರೆ ಹಾವೇರಿಯಲ್ಲಿ ಇಂದ್ರೇಶ್ವರ ದೇವಾಲಯವೆಂಬುದಲ್ಲಿಯೂ ಇಲ್ಲ. ಸಿದ್ದೇಶ್ವರ ದೇವಾಲಯದ ಬಳಿಯಲ್ಲಿದ್ದ ಒಂದೇ ಒಂದು ಗುಡಿ ಎಂದರೆ ನರಸಿಂಹದೇವರದು. ಆದರೆ ನರಸಿಂಹ ದೇವಾಲಯದ ಉಲ್ಲೇಖ ಯಾವ ಶಾಸನದಲ್ಲಿಯೂ ಸಿಗುವದಿಲ್ಲ. ಈ ಇಂದ್ರೇಶ್ವರ ದೇವರ ಉಲ್ಲೇಖ ಬಂಕಾಪುರದಲ್ಲಿ ಈಗಲೂ ಇರುವ ಇಂದ್ರೇಶ್ವರ ದೇವರಿಗೆ ಸಂಬಂಧಿಸಿದುದಿರಬೇಕು ಎಂದು ಶ್ರೀ ಬೆಂಗೇರಿಯವರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಅಭಿಪ್ರಾಯ ಸರಿಯಾದುದಲ್ಲವೆಂದು ತೋರುತ್ತದೆ. ಯಾಕೆಂದರೆ ಇಂದ್ರೇಶ್ವರನ ಉಲ್ಲೇಖವಿರುವ ಹಾವೇರಿಯ ಎರಡು ಶಾಸನಗಳಲ್ಲಿ ಬಂಕಾಪುರದ ಹೆಸರೇ ಇಲ್ಲ. ಅಲ್ಲದೆ ಒಂದರಲ್ಲಿ 'ರತ್ನಭಟ್ಟದಂಗನಾಯಕರು ವಾರರಗವಲ್ಲಿಯ ಸಿದ್ದೇಶ್ವರದೇವರ್ಗ್ಗೆ ಇಂದ್ರೇಶ್ವರ ದೇವರ್ಗೆ' ಎಂದು ಹೇಳಿರುವುದರಿಂದ ಈ ಇಬ್ಬರೂ ದೇವತೆಗಳು ಹಾವೇರಿಯಲ್ಲಿಯೆ ಇದ್ದಿರಬೇಕೆಂದು ಹೇಳಿರುವುದರಿಂದ ಈ ಇಬ್ಬರೂ ದೇವತೆಗಳು ಹಾವೇರಿಯಲ್ಲಿಯೆ ಇದ್ದಿರಬೇಕೆಂದು ಸೂಚಿತವಾಗುತ್ತದೆ. ಇನ್ನೊಂದು ಶಾಸನದಲ್ಲಿ 'ಇಂದ್ರೇಶ್ವರ ಹಾವೇರಿಯ ನಾಲ್ನೂರ್ವರು ಮಹಾಜನರಿಗೆ ಕರುಣಿಸಲಿ' ಎಂದು ಪ್ರಾರ್ಥಿಸಲಾಗಿದೆ. ಆದ್ದರಿಂದ ಸಿದ್ದೇಶ್ವರ ದೇವಾಲಯದ ಪಕ್ಕದಲ್ಲಿಯೆ ಇಂದ್ರೇಶ್ವರ ದೇವಾಲಯವೂ ಇದ್ದಿರಬೇಕು. ಕಾಲಕ್ರಮೇಣ ಅದು ಇನ್ನೊಂದು ದೇವತೆಯ ಆಲಯವಾಗಿ ಮಾರ್ಪಟ್ಟಿರಬೇಕು" ಎಂದು ಹೇಳಿರುವರು.[24] ಡಾ॥ ರಿತ್ತಿಯವರ ಹೇಳಿಕೆಯ ಪ್ರಕಾರ ಹಾವೇರಿಯಲ್ಲಿಯೂ ಒಂದು ಇಂದ್ರೇಶ್ವರ ದೇವಾಲಯವಿದ್ದಿರಬಹುದು. ಇದರಿಂದ ಬಂಕಾಪುರದ ಇಂದ್ರೇಶ್ವರ ದೇವಾಲಯ ಭಿನ್ನವಾದುದು. ಬೆಂಗೇರಿಯವರು ಬಂಕಾಪುರದಲ್ಲಿ 'ಈಗಲೂ ಇರುವ ಇಂದ್ರೇಶ್ವರ ದೇವರು' ಎಂದು ಹೇಳುವುದರಿಂದ ಅವರ ತಲೆಮಾರಿನಲ್ಲಿ ಈ ದೇವಾಲಯದ ಅಸ್ತಿತ್ವವಾಗಲಿ, ಅವಶೇಷವಾಗಲಿ ಇದ್ದಿರಬೇಕು. ಆದರೆ ಈಗ ಈ ಹೆಸರೂ ಗ್ರಾಮಸ್ಥರಿಗೆ ಗೊತ್ತಿಲ್ಲ.

---

19 ಎ. ಇ., ೧೯, ೨೯, ಮುನ್ನುಡಿ

20 ಎಸ್. ಆಯ್. ಆಯ್., ೧೮, ೨೯೧ ಬಂಕಾಪುರ

21 ಅದೇ

22 ಅದೇ, ೬೬ ಬಂಕಾಪುರ

23 ಅದೇ

24 ಪ್ರಬುದ್ಧ ಕರ್ನಾಟಕ, ಸಂಪುಟ ೪೧, ಸಂಚಿಕೆ ೨, ಪು. ೬೩-೭೧

ಆದರೆ ಇತ್ತೀಚೆಗೆ ನನಗೆ ದೊರೆತ ಸ್ತಂಭಶಾಸನ ದಿಂದ ಇಂದ್ರೇಶ್ವರ ದೇವಾಲಯದ ಬಗೆಗೆ ಹೆಚ್ಚಿನ ಮಾಹಿತಿ ಸಿಕ್ಕು ಅದರ ಸ್ಥಾನವನ್ನು ಪತ್ತೆ ಹಚ್ಚಬಹು ದಾಗಿದೆ.

ಬಂಕಾಪುರದ ಸುಪ್ರಸಿದ್ಧ ಕೋಟೆಯ ಒಳಗಿರುವ ಸರಕಾರಿ ಪಶು ಸಂಗೋಪನ ಕೇಂದ್ರ ಕಚೇರಿಯ ಮುಂಭಾಗದ ಇಕ್ಕೆಲಗಳಲ್ಲಿ ಸುಮಾರು ಮೂರು ಪೂಟು ಎತ್ತರ,ಒಂದುವರೆ ಪೂಟು ಅಗಲದ ಎರಡು ಕಂಬಗಳಿವೆ. ಸ್ತಂಭಗಳ ಕೆಳಭಾಗ ಚೌಕೋನಾಕಾರವಾಗಿದ್ದು ಮೇಲ್ಭಾಗ ವೃತ್ತಾಕಾರವಾಗಿದೆ. ಇವುಗಳಲ್ಲಿ ಒಂದು ಕಂಭದ ಕೆಳ ಭಾಗದಲ್ಲಿ ಒಂದು ಭಾಗವನ್ನು ಬಿಟ್ಟು ಏಕ್ಕ ಮೂರು ಮುಖಗಳಲ್ಲಿ ಇಂದ್ರೇಶ್ವರನಿಗೆ ಸಂಬಂಧಿಸಿದ ಒಂದು ಶಾಸನವಿದ್ದು, ಅದರ ಪೂರ್ಣಪಾಠ[25] ಹೀಗಿದೆ :

೧ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೆ ತ್ರೈಳೋಕ್ಯ ನಗರಾರಂಭ
ಮೂಲಸ್ತಂಭಾಯ ಶಂಭವೇ ॥
೨ ಸ್ವಸ್ತಿ । ಸಮಧಿಗತ ಪಂಚಮಹಾಶಬ್ದ ಮಹಾಮಂಡಳೇಶ್ವರಂ ಬನವಾಸಿ ಪುರವರಾಧೀ
೩ ಸ್ವರಂ ಶ್ರೀ ಸಪ್ತಕೋಟೀಶ್ವರದೇವರ ಲಬ್ಧವರಪ್ರಸಾದ ಕಾದಂಬಕುಲತಿಲಕ ಭು
೪ ಜಬಲ ಕ್ಷತ್ರಿಯೋತ್ತಮ ಶಿವಚಿತ್ತವೀರ ಚಟ್ಟಯ್ಯದೇವರಸರ ರಾಜ್ಯೋದಯದ ನಾ
೫ ಲ್ಕನೆಯ ಕಾಳಯುಕ್ತ ಸಂವತ್ಸರದ ಆಶ್ವಯುಜ ಬಹುಳ ಅಷ್ಟಮಿ ಆದಿತ್ಯ
೬ ವಾರ ಬ್ಯತಿಪಾತದಂದು × ಸ್ವಸ್ತಿ ಸಮಧಿಗತಿ ಪಂಚಮಹಾಶಬ್ದ ಮ
೭ ಹಾ ಮಂಡಲೇಶ್ವರಂ ಕಂಧೋರ ಪುರವರಾಧಿಶ್ವರಂ ಶ್ರೀ. ಶೂರ್ಯ್ಯ ವಂ
೮ ಶೋದ್ಭವ ಕುಲತಿಲಕ ಕಾಸ್ಯಪಗೋತ್ರಪವಿತ್ರ ಕಲಿಕಾಲ
೯ ಚೋಳಾನ್ವಯ ನಾಮಾದಿ ಪ್ರಶಸ್ತಿಸಹಿತಂ ಶ್ರೀಮದುತ್ತಮ .. ನಂಡೆ ಚೋಳಮಹಾ
೧೦ ರಾಜ[ಕು]ಮಾರ ಮಲ್ಲದೇವರಸರು ರಾಜಧಾನಿ ಜೊಂನ್ನವಳ್ಳಿಯ ? ಪಾಳೆಯದ
೧೧ ಲು ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಮಿರ್ದು ಹಾನುಂಗಲ್ಲ ನಾಡೊ
೧೨ ಳಗಣ ಶ್ರೀಮದಿಂದ್ರ[ವ]ಲ್ಲಭ ರಾಜಧಾನಿ ಪಟ್ಟಣಂ ಬಂಕಾಪುರದ ಶ್ರೀಮದಿಂ
೧೩ ದ್ರೇಸ್ವರದೇವರ ಅಂಗಭೋಗ ಧರ್ಮಕಾರ್ಯ್ಯಕೆಂದು ಶ್ರೀ [ಚ]
೧೪ ಟ್ಟಯ್ಯದೇವರ್ಸಗ್ಗೆ ಪದ್ಮಲದೇವಿಯಗ್ಗೆ ಮಹಾರಾಜ್ಯಾಭ್ಯು[ದ]
೧೫ ಯಾರ್ತ್ಥವಾಗಿ ಸ್ವಸ್ತಿ ಯಮನಿಯಮ ಸ್ವಾಧ್ಯಾಯ [ಧ್ಯಾ]
೧೬ ನಾಧಾರಣ ಮೋನಾನುಷ್ಟಾನ ಜಪ ಸಮಾಧಿ ಸೀಲ [ಗು]
೧೭ ಣ ಸಂಪನ್ನರುಂ ಆಹಾರಾಭಯಭೈಷಜ್ಯ ಶಾಸ್ತ್ರದಾ[ನ]
೧೮ ವಿನೋದರುಂ . . . ಶಂಭು ಪಾರಾಯಣ ಕಾಣ? . . .

---

25 ಅಪ್ರಕಟಿತಶಾಸನ

೧೯ ....

೨೦ ....

೨೧ ....

೨೨ ನಿಘಂಟಣಕಾರ ಕಾಬ್ಯನಾಟಕ ಭರತ ವಾತ್ಸಾಯ಼ನ ಶಬ್ದ

೨೩ ಸ್ಮೃತಿ ಮೊದಲಾಗಿ ಅನೇಕ ವಿದ್ಯಾಪಾರಾವಾರರುಂ ವಿಭೂ ?

೨೪ ಳಿತ ಜಟಾಜೂಟ ಲಾಕುಳೋದ್ಧರಣ ಪರಿಣತಾಂರ್ತಕರ

೨೫ ಣರುಂ ಧರ್ಮಲತಾಧಾರದಂಡರುಂ ನಿರ್ಮ್ಮಳವಾಚಾ ಪ್ರಚಂಡರುಂ

೨೬ ಸತ್ಯವಾಕ್ಯಮಳೀನೀ ಮಾರ್ತ್ತಂಡರುಂ ಸಕಲಶಾಸ್ತ್ರಾಂಗ ವಿಚಾರ

೨೭ ಚದುರರುಂ ಸಾಹಿತ್ಯವಿದ್ಯಾಧರರುಂ ಚಾರಿತ್ರನಿರತರುಂ ಶ್ರೋ

೨೮ ತ್ರಿಯಾನ್ವಯ ಪವಿತ್ರಾಂಬೋಧಿವರ್ದ್ಧನ ಸುಧಾಕರರುಂ

೨೯ ಶ್ರೀ ಯಿಂದ್ರೇಶ್ವರ ದೇವಾವಲೋಕನೋದ್ಭವೋದ್ಭೂತರೋ

೩೦ ಮಾಂಚ ಕಂಚುಗಿತಗಾತ್ರರುಮಪ್ಪ ಶ್ರೀ ಸೋಮರಾ

೩೧ ವುಳದೇವರ ಕುಮಾರ ಶ್ರೀ ಸೂಕ್ಷ್ಮಶಿವದೇವರ ಬ್ರಹ್ಮಶಿವದೇ[ವರ]

೩೨ ಕಾಲಂಕರ್ಚಿ ಕೈಧಾರೆಯಂ ಮಾಡಿ ಹಲಸಿಗೆ ಹಂನಿತ್ಸಾಸಿರ

೩೩ ದವೊಳಗಣ ತಂಬುವೂರ ಹಂನೆರಡಲು ಬಳಿಯ ಬಾಡ ಕೆಸರ

೩೪ ಹಳ್ಳಿಯ ಚತುರಾಘಂಟ ಸಮೇತನಾಗಿ ಸರ್ವನಮಸ್ಯಂ ಬಿಟ್ಟ ?

೩೫ ಆ ಕೆಸಱಹಳ್ಳಿಯ ಸೀಮೆವೂರಿಂ ಯಿಸಾನ್ಯದಲು ಮಡ ?

೩೬ ಮೊಟ್ಟೆಯಲ್ಲಿ ತೆಂಕ ಮುಂದಾಗಿ ಹರಿದ ವುಳುವೆಯ ತೊಱೆ

೩೭ ಯದಲ್ಲಿ ತೊಱೆಯ ಕೂಡಿದ ಕಾಂಚಿವಾಳದ ಹಳ್ಳ ಅಲ್ಲಿ ನಟ್ಟ ಲಿಂಗಮುದ್ರೆ

೩೮ ಯ ಕಲ್ಲು ಆ ಹಳ್ಳವಿಡಿದು ಪಡುವ ಮುಂತಾಗಿ ಕೂಡಿದ ಹಬ್ಬ

೩೯ ಅಲ್ಲಿಂ ಮುಂದೆ ಪಂಚಲಿಂಗದೇವರ ಕೆಯ್ಯ ನಟ್ಟಕಲ್ಲು ಮತ್ತಂ ಆ

೪೦ ಅಲ್ಲಿಂ ಮುಂದು ಬಂದ ಬಚಲ ಹೆಬ್ಬದುವಿನ ನಟ್ಟಕಲ್ಲು ಅಲ್ಲಿಂ ಪ

೪೧ [ಡು]ವಲು ಮಸಣಕೆ[ಱೆ]ದೇವಿಯ ಬಲದ ದೆಸೆಯ ಹಿರಿಯ

೪೨ ಕಂತೆಯ ಮರನ? ತುಂಬು ಆ ತುಂಬುವಿಡಿದು ಕೆಱೆಯ ನಡುವಣ [ಪಡುವಲ

೪೩ ತಾಗಿ ನೈರುತ್ಯದಲ್ಲಿ ಕೆಸಱಹಳ್ಳಿಯ ಕಾರುಗೋಡಸೀಮೆಗೆ ನಟ್ಟಕಲ್ಲು ಅಲ್ಲಿಂ

೪೪ ಬಡಗಲು ತಾಗಿ ನಟ್ಟಕಲ್ಲು ಅಲ್ಲಿಂದಂ ಬಡಗಲು ವಾಯುವ್ಯದಲ್ಲಿ ತೇಗಿನಮೊರ

೪೫ ಡಿ ಮೊರಡಿಯ ಮೂಡಲು ಕೆಸಱಹಳ್ಳಿಯ ಜೂಜನಹಳ್ಳಿಯ ಸೀಮೆ

೪೬ ಮೂಡಲು ನಟ್ಟಕಲ್ಲು ಅಲ್ಲಿಂ ಮೂಡಲು ಜಂಬೆಗಲ್ಲಿನ ಕೆಱೆಯಲ್ಲಿಂ ಮೂಡ

೪೭ ಲ್ಲಿಂ ನಟ್ಟಕಲ್ಲು ಅಲ್ಲಿಂ ಮೂಡಲು ಹಡಪದ ಸೋಮನಕೊಳ ಅಲ್ಲಿಂ ಮೂಡಲು

೪೮ ಯ ಕೊಳ ಅಲ್ಲಿಂ ಮೂಡಲು ಈಶಾನ್ಯದ ....

(ಮುಂದೆ ತ್ರುಟಿತ)

'ಹಾನುಗಲ್ಲ ನಾಡೊಳಗಣ ಶ್ರೀಮದಿಂದ್ರವಲ್ಲಭ ರಾಜಧಾನಿ ಪಟ್ಟಣ ಬಂಕಾಪುರದ ಶ್ರೀಮದಿಂದ್ರೇಶ್ವರ ದೇವರ ಅಂಗಭೋಗ ಧರ್ಮ ಕಾರ್ಯಕೆನ್ದು ಶ್ರೀ ಚಟ್ಟಯ್ಯದೇವರಸರ್ಗೆ ಪದ್ಮಲದೇವಿಯರ್ಗ್ಗೆ ರಾಜ್ಯಾಭ್ಯುದಯಾರ್ಥ'ವಾಗಿ ಕೆಸರಹಳ್ಳಿಯನ್ನು ದತ್ತಿಬಿಟ್ಟುದು ಪ್ರಸ್ತುತ ಶಾಸನದ ವಿಷಯ.

ಈ ಶಾಸನ ಮತ್ತು ಇದರ ಎಡಬಲದಲ್ಲಿ ದೊರೆತ ಇನ್ನೂ ಕೆಲವು ಪ್ರಾಚೀನ ಅವಶೇಷಗಳ ಆಧಾರದಿಂದ ಇಂದ್ರೇಶ್ವರ ದೇವಾಲಯವು ಈ ಕೋಟೆಯ ಪರಿಸರ ದಲ್ಲಿಯೆ ಇದ್ದಿರಬೇಕೆನಿಸುತ್ತದೆ. ಉತ್ಖನನದ ಮೂಲಕ ಹೆಚ್ಚಿನ ಶೋಧ ನಡೆಸಬೇಕಿದೆ.

ಎಸ್. ಎ. ಜಗನ್ನಾಥ

ಅಥಣಿ ತಾಲ್ಲೂಕಿನ ಕಲ್ಯಾಣ ಚಾಳುಕ್ಯರ ದೇವಾಲಯಗಳು: ಒಂದು ಅಧ್ಯಯನ

ಕರ್ನಾಟಕದಲ್ಲಿ ಕಂಡುಬರುವ ವಾಸ್ತುಕಲಾ ಇತಿಹಾಸವನ್ನು ಸೂಕ್ಷ್ಮವಾಗಿ ವಿವೇಚಿಸಿದರೆ ಹಲವು ಪರಿವರ್ತನೆಯ ಕಲಾಶೈಲಿಗಳ ಹಂತಗಳು ಗೋಚರವಾಗುತ್ತವೆ. ಬಾದಾಮಿ, ಐಹೊಳೆ ಮತ್ತು ಪಟ್ಟದಕಲ್ಲಿನ ದೇವಾಲಯಗಳು ತಮ್ಮದೇ ಆದ ವೈಶಿಷ್ಟ್ಯಪೂರ್ಣವಾದ ಲಕ್ಷಣಗಳನ್ನು ರೂಢಿಸಿಕೊಂಡು ಚಾಳುಕ್ಯ ಶೈಲಿಯವೆಂದೇ ಪ್ರಸಿದ್ಧಿ ಪಡೆದಿವೆ. ಈ ಶೈಲಿಯು ದಕ್ಷಿಣ ಭಾರತದಲ್ಲಿ ಜನಪ್ರಿಯವಾಗಿದ್ದ ವೇಸರ ಅಥವಾ ದ್ರಾವಿಡಶೈಲಿಗಿಂತಲೂ ಪ್ರತ್ಯೇಕವಾಗಿತ್ತು. ಅನಂತರ ಕರ್ನಾಟಕವನ್ನಾಳಿದ ರಾಷ್ಟ್ರಕೂಟರ ಕಾಲದಲ್ಲಿ ದೇವಾಲಯಗಳ ನಿರ್ಮಾಣದಲ್ಲಿ ಹಲವು ಪ್ರಮುಖ ಪರಿವರ್ತನೆಗಳು ರೂಢಿಗೆ ಬಂದವು. ಎತ್ತರವಾದ ವೃತ್ತಾಕಾರವಾದ ಸ್ತಂಭಗಳು, ಬೃಹದಾಕಾರವಾದ ವಿಮಾನ ರಚನೆ ಹಾಗೂ ವಾಸ್ತು ನಿವೇಶನದಲ್ಲಿ ವೈಶಾಲ್ಯತೆ ಮುಂತಾದವುಗಳು ಈ ಶೈಲಿಯ ಪ್ರಮುಖ ಲಕ್ಷಣವಾಗಿ ಬೆಳೆದು ಬಂದವು. ರಾಷ್ಟ್ರಕೂಟರ ಕಾಲದ ಶಿಲ್ಪಕಲಾ ಕೃತಿಗಳು ಅಂದಿನ ಜನಜೀವನದ ಅಭಿವ್ಯಕ್ತತೆಯೋ ಎಂಬಂತೆ ಸರಳ ಉಡುಪು ಹಾಗೂ ಆಭರಣ ವಿನ್ಯಾಸಗಳನ್ನು ಹೊಂದಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ರಾಷ್ಟ್ರಕೂಟರ ಪತನದ ತರುವಾಯ ಬಾದಾಮಿ ಚಾಳುಕ್ಯರ ಮುಂದುವರಿಕೆ ಎಂದು ಹೇಳಿಕೊಂಡು ಬಂದ ಕಲ್ಯಾಣ ಚಾಳುಕ್ಯರು ವಿಶಿಷ್ಟವಾದ ದೇವಾಲಯ ವಾಸ್ತುಶಿಲ್ಪ ಶೈಲಿಯನ್ನು ಕರ್ನಾಟಕದ ಉತ್ತರಭಾಗಗಳಲ್ಲಿ ಹೇರಳವಾಗಿ ಪರಿಚಯಿಸಿದರು. ವಾಸ್ತುಶಿಲ್ಪ ಬೆಳವಣಿಗೆಯ ದೃಷ್ಟಿಯಿಂದ ಕಲ್ಯಾಣ ಚಾಳುಕ್ಯರ ಕಾಲವನ್ನು ಒಂದು ಪರಿವರ್ತನೆಯ (transition) ಯುಗವೆಂದು ಹಲವು ವಿದ್ವಾಂಸರುಗಳ ಅಭಿಪ್ರಾಯವಾಗಿದೆ. ಪ್ರಮುಖವಾಗಿ ಚಾಳುಕ್ಯರ ಪ್ರಾರಂಭದ ಕಾಲದಲ್ಲಿ ನಿರ್ಮಿತವಾದ ಹಲವು ದೇವಾಲಯಗಳು ರೂಢಿಯಲ್ಲಿದ್ದ ರಾಷ್ಟ್ರಕೂಟರ ಕಲಾಶೈಲಿಯ ಲಕ್ಷಣಗಳನ್ನು ಅಲ್ಪಸ್ವಲ್ಪ ಬದಲಾವಣೆಗಳೊಡನೆ ರೂಢಿಗೆ ಬಂದದ್ದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಉದಾಹರಣೆಗೆ, ಕದಂಬನಾಗರ ಶಿಖರ, ವೃತ್ತಾಕಾರವಾದ ಬೃಹದ್‌ಗಾತ್ರದ(massive) ಸ್ತಂಭಗಳು, ನವರಂಗದ ಆಂತರಿಕ ವಿನ್ಯಾಸದಲ್ಲಿ ವಿಸ್ತರಣೆ, ದೇವಾಲಯದ ಮುಂಭಾಗದಲ್ಲಿ ವ್ಯಕ್ತವಾಗುವ ಮುಖಮಂಟಪ ಅಥವಾ ಬೇರೆ ಯಾವುದೇ ವಿಸ್ತೃತ ಭಾಗ ಹಾಗೂ ದೇವಾಲಯದ ಸ್ಥಳವಿನ್ಯಾಸದಲ್ಲಿ ವೈಶಾಲ್ಯತೆ ಮುಂತಾದ ಪ್ರಮುಖ ಬದಲಾವಣೆಗಳು ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿ ವ್ಯಕ್ತವಾಗುವುದು ಗಮನೀಯವಾಗಿದೆ. ಈ ಕಾಲದ ಶಿಲ್ಪಕಲಾಕೃತಿಗಳು ಅಂದಿನ ಜನಜೀವನದ ಅಭಿವ್ಯಕ್ತತೆಯೋ ಎಂಬಂತೆ ಸರಳ ವೇಷಭೂಷಣ ಹಾಗೂ ಆಭರಣಗಳ ಸಹಜ ಅಲಂಕಾರಗಳು ಚಾಳುಕ್ಯರ ಶೈಲಿಯ ಒಂದು ಬದಲಾವಣೆಯ ಪ್ರತಿರೂಪವೆನ್ನಬಹುದು. ಬೆಳಗಾವಿ ಜಿಲ್ಲೆಯ ಹಲಸಿ, ಗೋಕಾಕ್ ಜಲಪಾತದ ಬಳಿ ಇರುವ ದೇವಾಲಯಗಳು ಹಾಗೂ ಸೌಂದತ್ತಿ, ಬೈಲಹೊಂಗಲ, ಹೂಲಿ ಮುಂತಾದ ಪ್ರದೇಶಗಳಲ್ಲಿ ಕಲ್ಯಾಣ ಚಾಳುಕ್ಯರ ಶೈಲಿಯ ದೇವಾಲ

ಯಗಳು ನೂರಕ್ಕೂ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಆದರೆ, ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ದೇವಾಲಯಗಳು ಖಚಿತವಾಗಿಯೂ ವೈಶಿಷ್ಟ್ಯಪೂರ್ಣ ಲಕ್ಷಣಗಳನ್ನು ವ್ಯಕ್ತಪಡಿಸುವುದು ಹಾಗೂ ವಾಸ್ತುಶಿಲ್ಪ ಅಧ್ಯಯನದ ದೃಷ್ಟಿಯಿಂದ ಆಸಕ್ತಿಯುತವಾಗಿವೆ.

ಅಥಣಿ ತಾಲ್ಲೂಕಿನ ದಕ್ಷಿಣದ ಗಡಿಯಲ್ಲಿ ಅರ್ಧ ಚಂದ್ರಾಕಾರವಾಗಿ ವಿನ್ಯಾಸ ಹೊಂದಿರುವ ಕೃಷ್ಣಾನದಿಯ ಎಡದಂಡೆಯು ಚಾಳುಕ್ಯ ವಾಸ್ತುಶಿಲ್ಪದ ಬಹುಮುಖ್ಯವಾದ ಕೇಂದ್ರವೆನ್ನಬಹುದು. ಈ ಪ್ರದೇಶದಲ್ಲಿ ಪೂರ್ವೇತಿಹಾಸದ ಹಲವು ನಿವೇಶನಗಳನ್ನು ಈಗಾಗಲೇ ಗುರುತಿಸಿರುವುದರಿಂದ ಐತಿಹಾಸಿಕವಾಗಿ ಈ ಕೇಂದ್ರಗಳ ಮಹತ್ವವು ವ್ಯಕ್ತವಾಗುತ್ತದೆ. ಅಥಣಿಯನ್ನು ಮಹಾರಾಷ್ಟ್ರದಿಂದ ಪ್ರವೇಶ ಮಾಡುವ ಕರ್ನಾಟಕ(ಪಶ್ಚಿಮದ) ಮಹಾದ್ವಾರವೆಂದು ಕರೆಯಲಾಗಿದೆ. ಅನೇಕ ವಿದೇಶಿ ಯಾತ್ರಿಕರು ಬಿಜಾಪುರಕ್ಕೆ ಭೇಟಿ ನೀಡಿದಾಗ ಅಥಣಿಯ ಮೂಲಕವೇ ಪ್ರಯಾಣಿಸಿದರೆನ್ನುವುದು ಇಲ್ಲಿ ಗಮನಿಸಬೇಕಾದ ಅಂಶ. ಅಥಣಿ ನಗರದಲ್ಲೆ ಹಲವಾರು ದೇವಾಲಯಗಳಿದ್ದು, ನಗರದ ಮಧ್ಯಭಾಗದಲ್ಲಿರುವ ಅಮೃತಲಿಂಗೇಶ್ವರ ದೇವಾಲಯವು ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾದ ಸುಂದರ ಕಟ್ಟಡ. ನವರಂಗ ದ್ವಾರದ ಎರಡೂ ಕಡೆಗಳಲ್ಲಿ ಜಾಲಂಧ್ರಗಳಿವೆ ಮತ್ತು ಮುಂಭಾಗದ ಎರಡೂ ಕಂಬಗಳು ಲೇಥ್‌ನಲ್ಲಿ ಸಿದ್ಧಗೊಂಡಿದ್ದು, ಅತ್ಯಂತ ಕುತೂಹಲಕಾರಿ ಸೂಕ್ಷ್ಮ ಕೆತ್ತನೆಗಳನ್ನು ಹೊಂದಿವೆ. ಕೃಷ್ಣಾನದಿಯ ಅರ್ಧಚಂದ್ರಾಕಾರವಾದ ಎಡದಂಡೆಯ ಉದ್ದಕ್ಕೂ ಇರುವ ಪುರಾತನ ಸ್ಥಳಗಳೆಂದರೆ ಐನಾಪುರ, ಸಪ್ತಸಾಗರ, ಸತ್ತಿ, ಸವದಿ ಮುಂತಾದವು. ಈ ಸ್ಥಳಗಳು ಮೂಲತಃ ಪೂರ್ವೇತಿಹಾಸದ ಕೇಂದ್ರಗಳಾಗಿರುವುದು ಈಚೆಗೆ ಸ್ಪಷ್ಟವಾಗಿದೆ. ಈ ಸ್ಥಳಗಳಲ್ಲಿ ಹಾಗೂ ಸುತ್ತಮುತ್ತಲ ಇತರೆ ಪ್ರದೇಶಗಳಲ್ಲಿ ವ್ಯಕ್ತವಾಗುವ ವಿಶೇಷ ಆಕರ್ಷಣೆ ಎಂದರೆ ವಿಪುಲವಾಗಿರುವ ಕಲ್ಯಾಣ ಚಾಳುಕ್ಯರ ದೇವಾಲಯಗಳು. ಕೃಷ್ಣಾನದಿಯ ತೀರದಲ್ಲಿ ಕಂಡುಬರುವ ಹಲವು ದೇವಾಲಯಗಳನ್ನು ಸ್ಥಳಗಳ ಸರದಿಯಲ್ಲಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಥಣಿಯಿಂದ ಪಶ್ಚಿಮಕ್ಕೆ ೨೪ ಕಿ.ಮೀ. ದೂರದಲ್ಲಿರುವ ಪ್ರಾಚೀನ ಸ್ಥಳವಾದ ಬಾಡಗಿಯನ್ನು ಸಮೀಪದ ಕೊಕಟನೂರು ಶಾಸನದಲ್ಲಿ 'ಬಾಡಿಗೆ' ಎಂದು ಕರೆಯಲಾಗಿದೆ. ಆ ಗ್ರಾಮದ ಪ್ರವೇಶದ್ವಾರದಲ್ಲಿ ಕಲ್ಮೇಶ್ವರ ಎಂದು ಸ್ಥಳೀಯವಾಗಿ ಕರೆಯಲ್ಪಡುವ ಸುಂದರ ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿರುವ ತ್ರಿಕೂಟಾಚಲ ದೇವಾಲಯವಿದೆ. ಈ ದೇವಾಲಯದ ನವರಂಗದಲ್ಲಿ ಮೂರು ಮಹಾದ್ವಾರಗಳಿದ್ದು. ಗರ್ಭಗೃಹದ ದ್ವಾರದ ಮೇಲ್ಭಾಗದ ಭಿತ್ತಿಯಲ್ಲಿ ಕಿರಾತಾರ್ಜುನೀಯವನ್ನು ಪ್ರತಿನಿಧಿಸುವ ಸುಂದರ ಉಬ್ಬುಶಿಲ್ಪವಿದೆ. ನವರಂಗದ ಮಹಾದ್ವಾರದ ಮೇಲ್ಭಾಗದಲ್ಲಿ ಸಪ್ತಮಾತೃಕೆಯರ ಜೋಡು ಶಿಲ್ಪವಿದೆ. ನವರಂಗದಲ್ಲಿ ಲೇಥ್‌ನಿಂದ ತಿರುಗಿಸಲ್ಪಟ್ಟಿರುವ ಚಾಳುಕ್ಯ ಶೈಲಿಯ ಕಂಬಗಳು ನುಣುಪಾಗಿದ್ದು ಅಲಂಕೃತಗೊಂಡಿವೆ. ಹೊರಭಾಗದಲ್ಲಿ ದೇವಾಲಯದ ಸುತ್ತಲೂ ಮಣ್ಣಿನ ರಾಶಿಯು ಆವರಿಸಿದ್ದರೂ ಗರ್ಭಗೃಹದ ಹೊರಪಾರ್ಶ್ವದ ಭಿತ್ತಿಯಲ್ಲಿ ಉಮಾಮಹೇಶ್ವರ, ಚಾಮರಧಾರಿಣಿಯರು, ಗಣಪತಿ, ನರ್ತನ ಭಂಗಿಯಲ್ಲಿರುವ ಮದನಿಕೆಯರು, ಸಂಗೀತಗಾರರು ಮತ್ತು ಹಲವಾರು ಮಿಥುನ ಉಬ್ಬುಶಿಲ್ಪಗಳು ಕಂಡುಬರುತ್ತವೆ. ಈ ದೇವಾಲಯದ ಮುಂಭಾಗದ ಜಗಲಿಯಲ್ಲಿ ಅಪ್ರಕಟಿತ ಶಾಸನವು ಹೂತುಹೋಗಿದ್ದು, ಅದರ ಮೇಲ್ಭಾಗವು ಮಾತ್ರ ಕಾಣಿಸುತ್ತದೆ.

ಬಳ್ಳಿಗೇರಿಯು ಇನ್ನೊಂದು ಪ್ರಾಚೀನ ಸ್ಥಳವಾಗಿದ್ದು, ಅಥಣಿಯಿಂದ ೧೮ ಕಿ. ಮೀ. ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಈ ಸ್ಥಳವನ್ನು 'ಬಾಳಂಗೇರಿ' ಎಂದು ಪದೇ ಪದೇ ಉಲ್ಲೇಖಿಸಲಾಗಿದೆ. ಇಲ್ಲಿ ಸ್ಥಳೀಯವಾಗಿ ಕರೆಯಲ್ಪಡುವ ಬಸವಣ್ಣನ ದೇವಾಲಯವು ಬಹುತೇಕವಾಗಿ ಅಲ್ಲಿಯ ಶಾಸನಗಳಲ್ಲಿ ಉಕ್ತವಾಗಿರುವ ನರಸಿಂಹನ ದೇವಾಲಯವೆಂದು ಹೇಳಬಹುದು. ಏಕೆಂದರೆ ಈ ಚಾಳುಕ್ಯ ಶೈಲಿಯ ದೇವಾಲಯವು ತ್ರಿಕೂಟಾಚಲವಾಗಿದೆ ಹಾಗೂ ಮೂರು ಗರ್ಭಗುಡಿಗಳಲ್ಲೂ ಶಿವಲಿಂಗವಿದ್ದರೂ ಮುಖ್ಯ (ಕೇಂದ್ರ) ಗರ್ಭಗೃಹದ ಲಲಾಟದಲ್ಲಿ ಲಕ್ಷ್ಮಿನರಸಿಂಹನ ಉಬ್ಬುಶಿಲ್ಪವಿದೆ. ಬಸವಣ್ಣನ ದೇವಾಲಯದ ಸಮೀಪದಲ್ಲೆ (ಅರ್ಧಭಾಗ ಮಣ್ಣಿನಲ್ಲಿ ಹೂತಿರುವ) ವೀರಭದ್ರ ದೇವಾಲಯವೊಂದು ಇದೆ.

ಇದೂ ತ್ರಿಕೂಟಾಚಲವಾಗಿದ್ದು ಕಲ್ಯಾಣ ಚಾಳುಕ್ಯರ ಶೈಲಿಯ ಕಂಬಗಳನ್ನು ಹೊಂದಿದೆ. ಇದೇ ದೇವಾಲಯದ ಪರಿಸರದಲ್ಲಿರುವ ಮತ್ತೊಂದು ಶಾಸನವು, ಪಾರ್ಶ್ವನಾಥ ತೀರ್ಥಂಕರ ಬಸದಿಗೆ ನೀಡಿರುವ ಹಲವು ದಾನಗಳನ್ನು ಕುರಿತು ತಿಳಿಸುತ್ತದೆ. ಇದರ ಪ್ರಕಾರ, ಚಾಳುಕ್ಯ ಬಿಜ್ಜಳನ ಅಧಿಕಾರಿಯಾದ ಕಾಳಿದಾಸ ಚಂಪು ಎಂಬುವನು ತಾನು ಕಟ್ಟಿಸಿದ ಪಾರ್ಶ್ವನಾಥ ಬಸದಿಗೆ ಹಲವು ದಾನಗಳನ್ನು ನೀಡಿದನು. ಬಹುಶಃ ವೀರಭದ್ರ ದೇವಾಲಯವು(?) ಬಸದಿಯಾಗಿದ್ದಿರಬಹುದು. ಈಗ ಈ ಸ್ಥಳದಲ್ಲಿ ಯಾವ ಜೈನ ಕುಟುಂಬಗಳೂ ಕಂಡುಬರುವುದಿಲ್ಲ.

ಅಥಣಿಯಿಂದ ೨೪ ಕಿ.ಮೀ. ಪಶ್ಚಿಮ ದಿಕ್ಕಿನಲ್ಲಿರುವ ಕೃಷ್ಣಾನದಿಯ ಎಡದಂಡೆಯಲ್ಲಿ ಇರುವ ಮತ್ತೊಂದು ಪುರಾತನ ಸ್ಥಳವೆಂದರೆ ಐನಾಪುರ; ಕಲ್ಯಾಣ ಚಾಳುಕ್ಯರ ಕಾಲದ ಪ್ರಸಿದ್ಧ ಜೈನಕೇಂದ್ರ. ಸ್ಥಳೀಯರು ಐನಾಪುರವನ್ನು ಪುರಾತನ 'ಅಯ್ಯನಪುರ' ಅಥವಾ 'ಜೈನಾಪುರ ಎಂದು ಹೇಳುವರು. ಅಯ್ಯನಪುರ ಎಂದರೆ ಪುರಾತನ ಅಗ್ರಹಾರವೆಂದು ಹಲವು ವಿದ್ವಾಂಸರು ತರ್ಕಿಸಿರುವರು. ಊರಿನ ಮಧ್ಯದಲ್ಲಿರುವ ಎರಡು ಪುರಾತನ ಬಸದಿಗಳೆಂದರೆ ಆದಿನಾಥ ಮತ್ತು ಪಾರ್ಶ್ವನಾಥ. ಆದಿನಾಥ ಬಸದಿಯೊಳಗಡೆ ಇರುವ ಆದಿನಾಥ ವಿಗ್ರಹವನ್ನು ಬಿಜಾಪುರದ ಬಳಿಯ ಗ್ರಾಮವೊಂದರಿಂದ ಇಲ್ಲಿಗೆ ತಂದಿರಿಸಲಾಗದೆಯೆಂಬುದು ಸ್ಥಳೀಯರ ಹೇಳಿಕೆ. ನವರಂಗದ ಒಳಗೆ ಅರ್ಧಮಂಟಪದ ದ್ವಾರದ ಬಳಿ ಇತ್ತೀಚೆಗೆ ಪ್ರತಿಷ್ಠಾಪಿಸಿರುವ ಗೊಮ್ಮಟೇಶ್ವರನ ವಿಗ್ರಹವಿದೆ. ಪಾರ್ಶ್ವನಾಥ ಬಸದಿಯೂ ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿಯೇ ನಿರ್ಮಿತವಾಗಿರುವ ಒಂದು ಸುಂದರ ಕಟ್ಟಡ. ಇಲ್ಲಿಯ ಮೂಲವಿಗ್ರಹವು ಭಿನ್ನವಾಗಿರುವ ಕಾರಣ ಪೂಜೆಗೊಳ್ಳದ ಅದನ್ನು ನವರಂಗದ ಬಲಭಾಗದಲ್ಲಿ ಇರಿಸಲಾಗಿದೆ. ಇದರ ಪೀಠದ ಮೇಲೆ ಚಾಳುಕ್ಯರ ಶೈಲಿಯ ಸವೆದುಹೋದ ಅಪ್ರಕಟಿತ ಶಾಸನವಿದೆ. ಈ ಮೂರ್ತಿಯ ಪಕ್ಕದಲ್ಲೆ ಧ್ಯಾನಾಸಕ್ತನಾಗಿ ಕುಳಿತಿರುವ ಮಹಾವೀರನ ಚಾಳುಕ್ಯ ಶೈಲಿಯ ವಿಗ್ರಹವಿದ್ದು, ಇದರ ಪೀಠದ ಮೇಲೂ ಅಪ್ರಕಟಿತ ಶಾಸನವಿದೆ.ಮುಖಮಂಟಪದ ಎಡಭಾಗದಲ್ಲಿರುವ ಚಾಳುಕ್ಯ ಕಂಬವೊಂದರಲ್ಲಿ ಸಹಸ್ರ ಜಿನಬಿಂಬಗಳನ್ನು ಉಬ್ಬುಶಿಲ್ಪದೋಪಾದಿಯಾಗಿ ಸುಂದರವಾಗಿ ಕೆತ್ತಲಾಗಿದೆ. ದೇವಾಲಯದ ಎದುರಿಗೆ ಸುಮಾರು ೧೨ ಮೀಟರ್ ಎತ್ತರದ ಮಾನಸ್ತಂಭವಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ಆಯತಾಕಾರವಾದ ಗೋಪುರವಿದೆ. ಈ ಸ್ಥಳದ ಹೊರಭಾಗದಲ್ಲಿ ಕಾಣಸಿಗುವ 'ಗುಂಫ' ಎಂದು ಕರೆಯಲಾಗುವ ಜೈನರ ಖಾಸಗಿ ಆವರಣದಲ್ಲಿ ಚಾಳುಕ್ಯ ಶೈಲಿಯ ಅಪೂರ್ಣವಾದ ದೇವಾಲಯದ ಗರ್ಭಗೃಹ ಮತ್ತು ಅರ್ಧಮಂಟಪ ಮಾತ್ರ ಇವೆ. ಗರ್ಭಗೃಹದ ಸುತ್ತಲೂ ವಿಪುಲವಾದ ಕೆತ್ತನೆಯುಳ್ಳ ದೇವಕೋಷ್ಠಗಳು ಕಂಡುಬಂದರೂ ಅವುಗಳಲ್ಲಿ ಯಾವುದೇ ಶಿಲ್ಪಗಳು ಇಲ್ಲ. ಆದರೆ ಶಿಲ್ಪಗಳನ್ನು ಬಿಡಿಸುವ ಪೂರ್ವಯೋಜನೆಗಾಗಿ ರಚಿಸಲಾಗಿರುವ ರೇಖಾವಿನ್ಯಾಸಗಳು ಈಗ ಹೊರಭಾಗದ ಗೋಡೆಯ ಮೇಲೆ ಕಾಣಸುತ್ತವೆ. ಗರ್ಭಗೃಹದ ಮೇಲಿರುವ ಶಿಥಿಲವಾದ ಕದಂಬನಾಗರ ಶಿಖರವು ಸೂರ್ಯನ ಕಿರಣಗಳಿಗೆ ಪ್ರತಿಬಿಂಬಿಸುವಷ್ಟು ನುಣುಪಾಗಿದೆ. ಐನಾಪುರದಲ್ಲಿ ಇನ್ನೂ ಕೆಲವು ಅನಂತರದ ಕಾಲದ ದೇವಾಲಯಗಳೂ ಕಾಣಸಿಗುತ್ತವೆ.

ಕೃಷ್ಣಾನದಿಯ ಎಡದಂಡೆಯ ಮೇಲಿರುವ ಸಪ್ತಸಾಗರವು ಅಥಣಿ ತಾಲ್ಲೂಕಿನ ರಮಣೀಯ ಹಾಗೂ ಮುಖ್ಯವಾದ ಪೂರ್ವೇತಿಹಾಸದ ಪ್ರದೇಶವೆನ್ನಬಹುದು. ಇಲ್ಲಿ ಇತ್ತೀಚಿನವರೆಗೂ ಬೂದಿಹಳ್ಳಗಳು (ash mounds) ಇದ್ದುವೆಂದು ತಿಳಿದುಬರುತ್ತದೆ. ನದಿಯಲ್ಲಿ ಆಳಕ್ಕೆ ಈಸಿಹೋದರೆ ಹಲವಾರು ಶಿವಲಿಂಗಾಕಾರದ ಶಿಲೆಗಳು ಕಂಡುಬರುತ್ತವೆಂದು ಸ್ಥಳೀಯರು ಹೇಳುವರು. ಬಹುಶಃ ಇವು ಪ್ರಾಚೀನ ದೇವಾಲಯದ (ಈಗ ಕಾಣಸಿಗುವುದಿಲ್ಲ) ಮುಳುಗಡೆಯ ಭಾಗಗಳಿರಬಹುದು.

ಅಥಣಿಯಿಂದ ದಕ್ಷಿಣಕ್ಕೆ ಹೋದರೆ(೧೦ ಕಿ.ಮೀ.) ಸಿಗುವ ಪುರಾತನ ಸ್ಥಳವೆಂದರೆ 'ಸತ್ತಿ'ಅಥವಾ ಪ್ರಾಚೀನ ಸತ್ತತ್ತಿ ಅಗ್ರಹಾರ. ಇದು ಕೃಷ್ಣಾನದಿಗೆ ಅಂಟಿಕೊಂಡಂತಿರುವ ಪೂರ್ವೇತಿಹಾಸದ ಸ್ಥಳವೂ ಹೌದು. ಶಾಸನಗಳಲ್ಲಿ (೧೧೮೩) ಈ ಸ್ಥಳವು ಮಹಾಸತ್ತತ್ತಿ ಅಗ್ರಹಾರ ಎಂದು ಪದೇಪದೇ ಉಲ್ಲೇಖಗೊಂಡಿದೆ. ಪ್ರಸ್ತುತ ಇಲ್ಲಿ ಕಂಡುಬರುವ ಕಲ್ಮೇಶ್ವರ,ಮಲ್ಲಿಕಾರ್ಜುನ ಮತ್ತು ತ್ರಿಕೂಟಾಚಲವೆಂದು ಕರೆಯಲ್ಪಡುವ ಲಕ್ಷ್ಮೀನರ

ಸಿಂಹನ ದೇವಾಲಯಗಳು, ಎಲ್ಲವೂ ಕಲ್ಯಾಣ ಚಾಳುಕ್ಯರ ಶೈಲಿಯಲ್ಲಿ ನಿರ್ಮಿತವಾಗಿವೆ. ಕಲ್ಮೇಶ್ವರ ದೇವಾಲಯವು ಒಂದು ಗರ್ಭಗೃಹ, ಅರ್ಧಮಂಟಪ ಹಾಗೂ ನವರಂಗಗಳಿಂದ ಕೂಡಿದ್ದು, ಮೊದಲೆರಡೂ ದ್ವಾರಗಳ ಅಕ್ಕ ಪಕ್ಕದಲ್ಲಿ ಜಾಲಂಧ್ರಗಳಿಂದ ಅಲಂಕೃತಗೊಂಡಿವೆ. ನವರಂಗದ ಒಂದು ಕಂಬದ ಮೇಲೆ ಅಪ್ರಕಟಿತ ಶಾಸನವೊಂದು ಕಂಡುಬರುತ್ತದೆ ಹಾಗೂ ಇತರೆ ಕಂಬಗಳು ಬೃಹದ್ ಆಕಾರದವಾಗಿದ್ದು ಲೇಥ್‌ನಿಂದ ತಿರುಗಿಸಲ್ಪಟ್ಟಿವೆ. ನವರಂಗದ ಛಾವಣಿಯಲ್ಲಿರುವ ಆಳವಾದ ಸುಂದರ ಕೆತ್ತನೆಗಳಿಂದ ಕೂಡಿದ ಭುವನೇಶ್ವರಿಯು ಬಹಳ ಆಕರ್ಷಣೀಯವಾದುದು. ಮುಂಭಾಗದಲ್ಲಿರುವ ಮುಖಮಂಟಪವನ್ನು ಮಣ್ಣಿನ ಗೋಡೆಗಳಿಂದ (ಇತ್ತೀಚಿನದು) ಮುಚ್ಚಲಾಗಿದ್ದು, ಮಧ್ಯದಲ್ಲಿ ಕಿರುದಾದ ದ್ವಾರವು ಇದೆ. ಸಮೀಪದಲ್ಲೇ ಇನ್ನೆರಡು ಅಪ್ರಕಟಿತ ಶಾಸನಶಿಲೆಗಳಿದ್ದು ಅವುಗಳಿಗೆ ಗಾಢವಾದ ತೈಲಬಣ್ಣವನ್ನು ಲೇಪಿಸಲಾಗಿದೆ. ಆದರೂ ಶಾಸನದ ಅಕ್ಷರಗಳು ಕ್ರಿ. ಶ. ೧೨ನೆಯ ಶತಮಾನದ ಸ್ವರೂಪವನ್ನು ವ್ಯಕ್ತಪಡಿಸುತ್ತವೆ. ಈ ದೇವಾಲಯದ ಸಮೀಪವೇ ಮಲ್ಲಿಕಾರ್ಜುನ ದೇವಾಲಯವು ಕಂಡುಬರುತ್ತದೆ. ಇದು ಸಹಾ ಚಾಳುಕ್ಯರ ಶೈಲಿಯಲ್ಲೆ ನಿರ್ಮಿತವಾಗಿರುವ ಕಿರಿದಾದ ಕಟ್ಟಡ. ಇದರ ಬಹುತೇಕ ಭಾಗವು ಶಿಥಿಲಗೊಂಡಿದೆ. ಈ ದೇವಾಲಯದ ಎದುರಿಗೆ ಮಣ್ಣಿನ ರಾಶಿಯು ಬಿದ್ದಿದ್ದು ಅದರಲ್ಲಿ ಹಳೆಯ ದೇವಾಲಯ ಕಟ್ಟಡಕ್ಕೆ ಸೇರಿದ ಅನೇಕ ಶಿಲಾಮೂರ್ತಿಗಳು ಹಾಗೂ ಕಂಬದ ಭಾಗಗಳು ಮಣ್ಣಿನಲ್ಲಿ ಹುದುಗಿರುವುದು ಕಂಡುಬರುತ್ತದೆ. ಇವೆರಡೂ ದೇವಾಲಯಗಳಿಂದ ಸ್ವಲ್ಪ ದೂರದಲ್ಲಿ ಊರಿನ ಮಧ್ಯದಲ್ಲಿರುವುದೇ ತ್ರಿಕೂಟಾಚಲ ಲಕ್ಷ್ಮೀನರಸಿಂಹನ ದೇವಾಲಯ. ಈ ದೇವಾಲಯದಲ್ಲಿ ಮೂರು ಗರ್ಭಗುಡಿಗಳಿದ್ದು, ಮಧ್ಯದ ಗರ್ಭಗೃಹವು ಯಾವುದೇ ದೇವತಾಮೂರ್ತಿ ಇಲ್ಲದಿದ್ದರೂ ಒಂದು ಚತುರ್ಮುಖ ಬ್ರಹ್ಮನ ನಿಂತಿರುವ ಶಿಲಾಮೂರ್ತಿಯನ್ನು ಪಾಣಿಪೀಠದ ಮೇಲೆ ಇರಿಸಿ ಗೋಡೆಗೆ ವಾಲಿಸಿ ನಿಲ್ಲಿಸಲಾಗಿದೆ. ಇದರ ಎಡಗಡೆ ಇರುವ ಇನ್ನೊಂದು ಗರ್ಭಗೃಹದಲ್ಲಿ ಜನಾರ್ಧನನ(ವಿಷ್ಣು) ಸುಮಾರು ಒಂದು ವರೆ ಮೀಟರ್ ಎತ್ತರದ ಅತ್ಯಂತ ಸುಂದರವಾದ ಶಿಲಾಮೂರ್ತಿಯು ಕಂಡುಬರುತ್ತದೆ. ಇದನ್ನು ಸಹಾ ಸಡಿಲವಾಗಿ ಗೋಡೆಗೆ ಆನಿಸಿ ನಿಲ್ಲಿಸಲಾಗಿದೆ. ಮತ್ತು ಇದರ ಗರ್ಭಗುಡಿಯ ಛಾವಣಿಯು ಕುಸಿಯುತ್ತಿದೆ. ಜನಾರ್ಧನನ ಹಿಂಭಾಗದ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರದ ಬಿಂಬಗಳಿವೆ. ಕೊನೆಯಲ್ಲಿ ಬುದ್ಧನ ಬಿಂಬವೂ ಕಂಡುಬರುತ್ತದೆ. ಈ ಗರ್ಭಗುಡಿಯ ಎದುರಿಗೆ ಹಾಗೂ ಮಧ್ಯದ ಗರ್ಭಗೃಹದ ಬಲಗಡೆ ಇರುವ ಗರ್ಭಗೃಹದಲ್ಲಿ ಶಿವಲಿಂಗವನ್ನು ಇರಿಸಲಾಗಿದೆ. ನವರಂಗದ ಕಂಬಗಳು ಬೃಹದಾಕಾರವಾಗಿದ್ದು ಮಧ್ಯದಲ್ಲಿ ಕೂರ್ಮದ ಉಬ್ಬುಶಿಲ್ಪವಿದೆ. ನವರಂಗದ ಮಹಾದ್ವಾರದ ಲಲಾಟದಲ್ಲಿ ಲಕ್ಷ್ಮೀನರಸಿಂಹನ ಉಬ್ಬುಶಿಲ್ಪವಿರುವುದರಿಂದ ಇದನ್ನು ಮೂಲತಃ ವೈಷ್ಣವ ದೇವಾಲಯವೆನ್ನುವುದರಲ್ಲಿ ಸಂದೇಹವಿಲ್ಲ. ಅಲ್ಲದೆ, ಅಥಣಿ ತಾಲ್ಲೂಕಿನ ಮೂರಗುಂಡಿಯಲ್ಲಿ ದೊರೆತ ತಾಮ್ರಶಾಸನವೊಂದರಲ್ಲಿ(ಕ್ರಿ.ಶ. ೧೧೮೩) ಸತ್ತಿ ಮಹಾ ಅಗ್ರಹಾರದ ನರಸಿಂಹನ ದೇವಾಲಯಕ್ಕೆ ಚಾಳುಕ್ಯ ದಂಡಾಧಿಕಾರಿಯಾಗಿದ್ದ ಸೋಮ ಚಾಮುಪತಿ ಎಂಬುವನು ನೀಡಿದ ಹಲವು ದಾನಗಳ ಉಲ್ಲೇಖವಿದೆ. ಈ ದೇವಾಲಯದ ಹೊರ ಆವರಣವು ಪೂರ್ಣವಾಗಿ ಮಣ್ಣಿನಿಂದ ಆವೃತ್ತವಾಗಿದ್ದು, ಇದರ ಛಾವಣಿಯು ಇಂದಿನ ಭೂಮಿಯ ಮಟ್ಟಕ್ಕಿರುವುದು ಆಶ್ಚರ್ಯಕರವಾಗಿದೆ.

ಸತ್ತಿಯಿಂದ ಪೂರ್ವಕ್ಕೆ ೧೦ ಕಿ.ಮೀ. ದೂರದಲ್ಲಿ ಕೃಷ್ಣಾನದಿಯ ಪಾತ್ರವನ್ನೇ ಅನುಸರಿಸಿ ಹೋದರೆ ಸಿಗುವ ಮತ್ತೊಂದು ಪೂರ್ವೇತಿಹಾಸದ ತಾಣವೆಂದರೆ ಸವದಿ. ಊರಿನ ತುಂಬಾ ಕಲ್ಯಾಣ ಚಾಳುಕ್ಯರ ಕಟ್ಟಡಗಳು ಹಾಗೂ ದೇವಾಲಯಗಳ ಅವಶೇಷಗಳು ಕಾಣಸಿಗುತ್ತವೆ. ಕೃಷ್ಣಾನದಿಯ ದಂಡೆಯ ಮೇಲೆ ಇರುವ ಗೋಪಾಲಕೃಷ್ಣ ದೇವಾಲಯ ನಕ್ಷತ್ರಾಕಾರವಾದ ಸ್ಥಳ ವಿನ್ಯಾಸವಿರುವ ತ್ರಿಕೂಟಾಚಲವಾಗಿದೆ. ಮಧ್ಯದ ಗರ್ಭಗುಡಿಯಲ್ಲಿ ಕೊಳಲು ಹಿಡಿದಿರುವ ವೇಣುಗೋಪಾಲ, ಬಲಗಡೆ ಮತ್ತು ಎಡಗಡೆಯ ಗರ್ಭಗೃಹದಲ್ಲಿ ಶಿವಲಿಂಗಗಳು ಕಂಡುಬರುತ್ತವೆ. ಆದರೆ, ಈ ಎರಡೂ ಗರ್ಭಗೃಹಗಳ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಮಧ್ಯದ ಗರ್ಭಗುಡಿಯ ದ್ವಾರದ ಲಲಾಟದಲ್ಲಿ ಯೋಗನಾರಾಯಣನ ಉಬ್ಬುಶಿಲ್ಪವಿದೆ. ದೇವಾಲಯದ ಸುತ್ತಲೂ ಮುಳ್ಳಿನ ಗಿಡಗಳು ಆವರಿಸಿರುವುದರಿಂದ ಅದರ ಹೊರಭಾಗದ ವೀಕ್ಷಣೆ ಸಾಧ್ಯವಿಲ್ಲ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಎದುರಿಗೆ

ಕೃಷ್ಣಾನದಿಯು ಹರಿಯುತ್ತಿದ್ದು ಅತ್ಯಂತ ರಮಣೀಯ ದೃಶ್ಯವಾಗಿದೆ. ನದಿಯ ಆಚೆಯ ದಡದಲ್ಲಿ ಜಮಖಂಡಿ ತಾಲ್ಲೂಕಿನ ಪೂರ್ವೇತಿಹಾಸದ ಚಿತ್ರಕಲೆಗಳನ್ನು ಹೊಂದಿರುವ ಗೊಂಬಿಗುಡ್ಡವಿದೆ. ಆದರೆ, ನದಿಯನ್ನು ದಾಟಿ ಹೋಗಲು ಸೌಕರ್ಯವಿಲ್ಲ. ಈ ಸ್ಥಳದಲ್ಲಿ ಕಲ್ಯಾಣ ಚಾಳುಕ್ಯರ ಕಾಲದ ಒಂದು ಜೈನ ಬಸದಿ ಇದೆ. ಗರ್ಭಗೃಹದಲ್ಲಿ ಆದಿನಾಥ ಮೂರ್ತಿ ಇದೆ ಮತ್ತು ಬಸದಿಯ ಇತರೆ ಭಾಗಗಳು ಸಂಪೂರ್ಣವಾಗಿ ನಾಶವಾಗಿವೆ. ಆದಿನಾಥನ ವಿಗ್ರಹದ ಪೀಠದ ಮೇಲೆ ಅಪ್ರಕಟಿತ ಕನ್ನಡ ಶಾಸನವಿದೆ. ಬಸದಿಯ ಸಮೀಪದಲ್ಲೆ ಲೇಥ್‌ನಿಂದ ತಿರುಗಿಸಿದ ಹಲವಾರು ಕಂಬಗಳಿವೆ ಹಾಗೂ ಸಾಕಷ್ಟು ಐತಿಹಾಸಿಕ ಅವಶೇಷಗಳಿವೆ. ಸವದಿಯನ್ನು ತಲುಪಲು ಸೂಕ್ತ ಮಾರ್ಗ ಹಾಗೂ ಸಾರಿಗೆ ವ್ಯವಸ್ಥೆ ಇದ್ದರೆ, ಇದನ್ನು ಆಕರ್ಷಣೀಯ ಸ್ಥಳವನ್ನಾಗಿ ಪರಿವರ್ತಿಸಲು ಸಾಧ್ಯವಿದೆ.

ಸವದಿಯಿಂದ ಅಥಣಿಗೆ ಹೋಗುವ ದಾರಿಯಲ್ಲಿ ಕಂಡುಬರುವ ಎರಡು ಮುಖ್ಯ ಪ್ರದೇಶಗಳೆಂದರೆ ನಂದಗಾವ ಮತ್ತು ಕೊಕಟನೂರು. ನಂದಗಾವ ಯಲ್ಲಮ್ಮನ ವಾಡಿಯ ಹಾದಿಯಲ್ಲಿ ಸಿಗುವ ಬಹುಮುಖ್ಯವಾದ ಸ್ಥಳ. ಇಲ್ಲಿರುವ ತ್ರಿಕೂಟಾಚಲ ದೇವಾಲಯವು ಚಾಳುಕ್ಯರ ಶೈಲಿಯ ಬಹು ಸುಂದರ ಶಿಲ್ಪಕಲಾ ಪರಿಪೂರ್ಣತೆಯನ್ನು ಹೊಂದಿರುವ ಕಟ್ಟಡವೆನ್ನಬಹುದು. ತ್ರಿಕೂಟ ಗರ್ಭಗುಡಿಗಳ ಮುಂಭಾಗದಲ್ಲಿರುವ ನವರಂಗವು ವಿಪುಲ ಕೆತ್ತನೆಗಳಿಂದ ಅಲಂಕೃತಗೊಂಡಿರುವ ಸ್ತಂಭಗಳನ್ನು ಹೊಂದಿದೆ. ಮುಂದೆ ಕಿರಿದಾದ ಮಂಟಪ ಮತ್ತು ಅಲ್ಲಿಂದ ಮುಂದೆ ಷಟ್‌ಕೋನಾಕಾರವಾದ (hexagonal) ಸುಂದರ ಮುಖಮಂಟಪವಿದೆ. ಇದು ಬಹುಮಟ್ಟಿಗೆ ಬೆಳಗಾವಿ ಕೋಟೆಯೊಳಗಿರುವ ಕಮಲ ಬಸ್ತಿಯನ್ನು ಹೋಲುತ್ತದೆ. ಅದರಂತೆಯೇ ಇದರ ಛಾವಣಿಯಲ್ಲಿ ಕಮಲದಳಗಳ ಕೆತ್ತನೆಯಿಂದ ರಚಿಸಲಾಗಿರುವ ಕೆಳಮುಖವಾಗಿರುವ ದೊಡ್ಡ ಕಮಲದ ಹೂವಿನ ಸೂಕ್ಷ್ಮಕೆತ್ತನೆ ಇದೆ. ಇಲ್ಲಿಯ ಶಿಲ್ಪಗಳು ಕೆತ್ತನೆಯಲ್ಲಿ ಕಲಾಪರಿಪೂರ್ಣತೆ ಪಡೆದಿರುವುದು ಪ್ರಶಂಸನೀಯ. ಈ ಮುಖಮಂಟಪದ ದ್ವಾರದ ಮುಂಭಾಗದಲ್ಲಿ ಎರಡು ಎತ್ತರವಾದ ವೈಷ್ಣವ ದ್ವಾರಪಾಲಕರ ಮೂರ್ತಿಗಳು ಇದ್ದು, ಅದರಲ್ಲಿ ಒಂದು ಬಿದ್ದುಹೋಗಿದೆ. ದೇವಾಲಯದ ಮೂರು ಗರ್ಭಗೃಹಗಳೂ ಖಾಲಿ ಇವೆ. ಮಧ್ಯದಲ್ಲಿರುವ ಗರ್ಭಗೃಹದ ದ್ವಾರದ ಲಲಾಟದಲ್ಲಿ ಗಣಪತಿಯ ಉಬ್ಬುಶಿಲ್ಪವಿದೆ, ಹಾಗೂ ಉಳಿದೆರಡು ಗರ್ಭಗೃಹದ ದ್ವಾರದ ಲಲಾಟಗಳಲ್ಲಿ ಗಣಪತಿ ಮತ್ತು ವಿಷ್ಣುವಿನ ಉಬ್ಬುಶಿಲ್ಪಗಳಿವೆ. ಎಲ್ಲಾ ದ್ವಾರಗಳ ಪಕ್ಕದಲ್ಲಿ ಜಾಲಂಧ್ರಗಳಿವೆ. ನವರಂಗದ ಛಾವಣಿಯಲ್ಲಿರುವ ಭುವನೇಶ್ವರಿಯು ತಾವರೆಯ ಹೂವಿನ ವಿನ್ಯಾಸದಿಂದ ಅಲಂಕೃತಗೊಂಡಿದೆ. ಮಧ್ಯದ ಗರ್ಭಗೃಹದ ಮಹಾದ್ವಾರದ ಮೇಲ್ಭಾಗದಲ್ಲಿ ನಟರಾಜ ಹಾಗೂ ಅಷ ದಿಕ್ಪಾಲಕರು ಮತ್ತು ಮಕರತೋರಣಗಳ ಅಲಂಕಾರವಿದೆ.

ನಂದಗಾವ್‌ನಿಂದ ಸಮೀಪದಲ್ಲೆ (೩ ಕಿ. ಮೀ. ದೂರದಲ್ಲಿ) ಕೃಷ್ಣಾನದಿಯ ತೀರದಲ್ಲಿ ಇರುವ ಪ್ರಾಚೀನ ಕೊಕಟನೂರು ಅಥವಾ ಶಾಸನಗಳಲ್ಲಿ ಉಕ್ತವಾಗಿರುವ ಕೊರ್ಗ್ಗಟ್ಟನೂರು ಅಗ್ರಹಾರವು ಅಥಣಿ ತಾಲ್ಲೂಕಿನ ಮತ್ತೊಂದು ಮುಖ್ಯವಾದ ಸ್ಥಳ. ಈ ಊರಿನಲ್ಲೂ ತ್ರಿಕೂಟಾಚಲ ದೇವಾಲಯವು ಬಹುಶಃ ಕ್ರಿ. ಶ. ೧೧ನೇ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತವಾಗಿರುವುದೆಂದು ಅಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಈ ದೇವಾಲಯವನ್ನು ಶಾಸನಗಳಲ್ಲಿ 'ತ್ರಿಪುರುಷ' ದೇವಾಲಯವೆಂದು ಕರೆಯಲಾಗಿದೆ. ಇದು ತ್ರಿಕೂಟಾಚಲವಾಗಿದ್ದು ಎಲ್ಲಾ ಗರ್ಭಗುಡಿಗಳಲ್ಲೂ ಶಿವಲಿಂಗಗಳಿವೆ. ಆದರೆ ಮಧ್ಯದ ಮತ್ತು ಎಡಭಾಗದ ಗರ್ಭಗೃಹದ ದ್ವಾರಗಳಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪಗಳಿವೆ ಹಾಗೂ ಬಲಭಾಗದ ಗರ್ಭಗೃಹದ ಲಲಾಟದಲ್ಲಿ ವಿಷ್ಣುವಿನ ಬಿಂಬವಿದೆ. ಎಲ್ಲಾ ಗರ್ಭಗೃಹದ ಮುಂಭಾಗದಲ್ಲೂ ಪ್ರತ್ಯೇಕ ಅರ್ಧಮಂಟಪವಿದೆ ಹಾಗೂ ಒಂದು ವಿಶಾಲವಾದ ಸಾಮಾನ್ಯ ನವರಂಗವಿದೆ. ಈ ದೇವಾಲಯದ ಗರ್ಭಗೃಹ ಹಾಗೂ ಅರ್ಧಮಂಟಪಗಳ ದ್ವಾರಗಳಲ್ಲಿ ಜಾಲಂಧ್ರಗಳಿವೆ. ಇದೇ ದೇವಾಲಯದ ಪರಿಸರದಲ್ಲಿ ಮೂರು ಶಿಲಾಶಾಸನಗಳಿದ್ದು ಎಲ್ಲವೂ ಪ್ರಕಟಗೊಂಡಿವೆ. ಅಥಣಿಯಿಂದ ಪೂರ್ವಕ್ಕೆ ಬಿಜಾಪುರ ರಸ್ತೆಯಲ್ಲಿ ಹೋಗಿ ನಂತರ ಎಡಭಾಗಕ್ಕೆ ತಿರುಗಿ ಸ್ವಲ್ಪ ದೂರ ಹೋದರೆ ಗುಡ್ಡಗಳ ಮಧ್ಯದಲ್ಲಿ ಕಾಣುವ ಪ್ರದೇಶವೇ ರಾಮತೀರ್ಥ ಎಂದು ಕರೆಯಲ್ಪಡುವ ಸುಂದರ ತಾಣ. ಈ ಸ್ಥಳದಲ್ಲಿರುವ


ರಾಮೇಶ್ವರ ದೇವಾಲಯುವು ಅತ್ಯಂತ ವಿಶಾಲವಾದ ನಿವೇಶನದಲ್ಲಿ ನಿರ್ಮಿತವಾಗಿರುವ ಕಲ್ಯಾಣ ಚಾಳುಕ್ಯರ ಕಟ್ಟಡ.ಮುಖ್ಯ ದೇವಾಲಯುವು ತ್ರಿಕೂಟಾಚಲವಾಗಿದ್ದು ಪ್ರತ್ಯೇಕ ಅರ್ಧಮಂಟಪಗಳನ್ನು ಹಾಗೂ ವಿಶಾಲವಾದ ನವರಂಗವನ್ನು ಹೊಂದಿದೆ. ಈ ದೇವಾಲಯುದ ಮುಖ ಮಂಟಪವು ಸಹಾ ವಿಶಾಲವಾಗಿದ್ದು ಮುಂಭಾಗದಲ್ಲಿ ಎತ್ತರವಾದ ಬೃಹದ್ ಮರದ ಬಾಗಿಲುಗಳಿವೆ. ಮಧ್ಯದ ಗರ್ಭಗೃಹದ ಮೇಲ್ಭಾಗದಲ್ಲಿ ಕದಂಬನಾಗರ ಶಿಖರವಿದೆ. ಈ ದೇವಾಲಯುದ ಪರಿಸರದಲ್ಲಿ ಎರಡು ಶಾಸನಗಳಿದ್ದು, ಅದರಲ್ಲಿ ಒಂದು ಕ್ರಿ.ಶ. ೧೧೬೭ರ ಕಾಲಕ್ಕೆ ಸೇರಿದ್ದು, ಸಿಂಧುವೇದ ಎಂಬ ಬಿಜ್ಜಳನ ಅಧಿಕಾರಿಯು ರಾಮೇಶ್ವರ ದೇವಾಲಯುಕ್ಕೆ ಮಾಡಿದ ದಾನಗಳ ಬಗೆಗೆ ಉಲ್ಲೇಖಿಸುತ್ತದೆ. ನವರಂಗದ ಮಹಾದ್ವಾರದ ಎರಡೂ ಕಡೆಗಳಲ್ಲಿ ಎತ್ತರವಾದ ದ್ವಾರಪಾಲಕರ ಮೂರ್ತಿಗಳಿವೆ. ಮುಖ ಮಂಟಪದ ಸುತ್ತಲೂ ಕಕ್ಷಾಸನವಿದೆ. ದೇವಾಲಯುದ ಪ್ರಾಕಾರದ ಸುತ್ತಲೂ ಸಣ್ಣಪುಟ್ಟ ದೇವಾಲಯುಗಳಿವೆ. ಹಿಂಭಾಗದಲ್ಲಿ ಪಾರ್ವತಿ ದೇವಸ್ಥಾನವು ಎತ್ತರವಾದ ಗುಡ್ಡದ ಕೆಳಭಾಗದಲ್ಲಿದೆ. ಇದರ ಪಕ್ಕದಲ್ಲಿ ಗವಿಯು ದ್ವಾರವಿದ್ದು, ಇದು ದೂರದ ಒಂದು ಕ್ಷೇತ್ರಕ್ಕೆ ಹೋಗುವುದೆಂದು ಪ್ರತೀತಿ ಇದೆ. ಮುಖ್ಯ ದೇವಾಲಯುದ ಎದುರು ಭಾಗದಲ್ಲಿ ಎತ್ತರವಾದ ಧ್ವಜಸ್ತಂಭವಿದೆ. ಇಲ್ಲಿಗೆ ಸಮೀಪದಲ್ಲೆ ಇರುವ ತೆಲಸಂಗ ಎಂಬ ಪ್ರದೇಶವು ಪ್ರಾಚೀನ ಘಟಿಕಾಸ್ಥಾನವಾಗಿತ್ತೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಶಾಸನಗಳಲ್ಲಿ ಈ ಸ್ಥಳವನ್ನು 'ತೆಲ್ಲಿಸಂಗ'ವೆಂದು ಕರೆಯಲಾಗಿದೆ. ಈಗ ಶ್ರೀನಿವಾಸ ದೇವಾಲಯುದಲ್ಲಿ ಎರಡು ಎತ್ತರವಾದ ಚಾಳುಕ್ಯ ಶೈಲಿಯು ವಿಷ್ಣುವಿನ ಶಿಲಾಪ್ರತಿಮೆಗಳು ಕಂಡುಬರುತ್ತಿದ್ದು, ಇವೆರಡೂ ಇದೇ ಊರಿನ ಹೊರಗೆ ಇರುವ ಗದ್ದೆಯು ಬಯಲಿನಲ್ಲಿ ಉತ್ಖನನ ಮಾಡುತ್ತಿದ್ದಾಗ ಸಿಕ್ಕಿದುವೆಂದು ಸ್ಥಳೀಯರು ಹೇಳುತ್ತಾರೆ.

ಅಥಣಿ ತಾಲ್ಲೂಕಿನ ವಿವಿಧ ಭಾಗಗಳಲ್ಲಿ ಕಂಡುಬರುವ ಕಲ್ಯಾಣ ಚಾಳುಕ್ಯರ ಕಾಲದ ದೇವಾಲಯುಗಳ ಸ್ಥೂಲ ಪರಿಚಯುದಿಂದ ಎರಡು ವಾಸ್ತುವಾಂಶಗಳು ವ್ಯಕ್ತವಾಗುತ್ತವೆ. ಮೊದಲನೆಯುದಾಗಿ, ಒಂದೇ ತಾಲ್ಲೂಕಿನಲ್ಲಿ ಅದರಲ್ಲೂ ಕೃಷ್ಣಾನದಿಯು ತೀರದುದ್ದಕ್ಕೂ ಸಿಗುವ ಚಾಳುಕ್ಯರ ದೇವಾಲಯುಗಳು ಬೇರೆ ಯಾವುದೇ ಜಿಲ್ಲೆಯಲ್ಲೂ ಕಂಡುಬಾರದೇ ಇರುವುದು ; ಹಾಗೂ ಎರಡನೆಯುದಾಗಿ, ಎಲ್ಲ ದೇವಾಲಯುಗಳೂ (ಬಹುತೇಕವಾಗಿ) ತ್ರಿಕೂಟಾಚಲಗಳಾಗಿರುವುದು. ಉತ್ತರಕರ್ನಾಟಕದ ನೆರೆಹೊರೆಯು ಜಿಲ್ಲೆಗಳಿಗಿಂತಲೂ ಬೆಳಗಾವಿ ಜಿಲ್ಲೆಯು ಅಧಿಕ ಸಂಖ್ಯೆಯುಲ್ಲಿ ಕಲ್ಯಾಣ ಚಾಳುಕ್ಯರ, ರಟ್ಟರ ಹಾಗೂ ಗೋವೆ ಕದಂಬರ ಸಮಕಾಲೀನ ಶೈಲಿಯು ದೇವಾಲಯುಗಳನ್ನು ಹೊಂದಿರುವುದು ಗಮನೀಯುವಾಗಿದೆ.

ಅಥಣಿ ತಾಲ್ಲೂಕಿನ ಚಾಳುಕ್ಯರ ದೇವಾಲಯುಗಳ ಮೂಲ ಅಧ್ಯಯುನದೊಡನೆ ಹೇಳಬೇಕಾದ ಇನ್ನೊಂದು ಮುಖ್ಯ ಅಂಶವೆಂದರೆ, ಕೃಷ್ಣಾನದಿಯು ಪಾತ್ರವನ್ನು ವಹಿಸಿ ಮತ್ತಷ್ಟು ಸ್ಥಳಗಳನ್ನು ಅವಲೋಕಿಸಿದರೆ ನಮಗೆ ಅಸಂಖ್ಯಾತ ಪೂರ್ವೇತಿಹಾಸದ ನಿವೇಶನಗಳು ದೊರೆಯುತ್ತವೆ.

ಆಧಾರ ಗ್ರಂಥಗಳು

1. Suryanath U. Kamath (Ed.) : *Belgaum District Gazetteer*, Bangalore, 1987
2. H. J. Stokes : *Historical Account of the Belgaum District in Bombay Presidency*, Bombay, 1870
3. James M. Campbell : *Gazetteer of the Bombay Presidency, Belgaum*, Bombay, 1884



ಸನ್ನತಿ : ಯಕ್ಷನ ಶಿಲ್ಪ (ಮುಂಭಾಗ)




ಸನ್ನತಿ : ಯಕ್ಷನ ಶಿಲ್ಪ (ಹಿಂಭಾಗ)




ಸನ್ನತಿ : ಮಿಥುನ ಶಿಲ್ಪ (ಮುಂಭಾಗ)





ಸನ್ನತಿ : ಮಿಥುನ ಶಿಲ್ಪ (ಹಿಂಭಾಗ)







ಹಳೇ ಕಡಿವಾಳ, ಬೇವಿನಾಳ, ಗೂಡೂರು ಮತ್ತು ಹಿರೇಮಾಗಿಗಳಲ್ಲಿಯ
ಪ್ರಾಗೈತಿಹಾಸಿಕ ಉಪಕರಣ ಇತ್ಯಾದಿ
(ಲೇಖನ ೨)



ಗುಮ್ಮಳಾಪುರದ ಗೌರಮ್ಮನ ಗುಡಿಯ
ಮುಂದಿನ ಶಾಸನ (ಅಧ್ಯಾಯ 1)



ಸಗಣಿ ಕಡಿತ ಪತ್ರ (ಅಧ್ಯಾಯ 8 ...)



ದಕಲ್ಲಿನ ವಿರೂಪಾಕ್ಷ ದೇವಾಲಯದ ಕಂಬ :
ಲ್ಯಾ–ಇಂದ್ರ ಕಥೆಯ ನಿರೂಪಣೆ ಮುಂದುವರೆದುದು



ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಕಂಬ :
ಅಹಲ್ಯಾ–ಇಂದ್ರ ಕಥೆಯ ನಿರೂಪಣೆ – ದಕ್ಷಿಣ ಮುಖ



ತ್ಯಾಗದ ಬ್ರಹ್ಮದೇವರ ಕಂಬ (ದಕ್ಷಿಣ ಮುಖ)
(ಕೃಪೆ : ಮೈಸೂರು ಪುರಾತತ್ತ್ವ ಇಲಾಖೆ)
(ಲೇಖನ ೪)



ಖಾನಾಪುರದ ಜೈನ ಯಕ್ಷಿ ಪದ್ಮಾವತಿ
(ಕೃಪೆ : ಡಾ॥ ಅ. ಸುಂದರ)
(ಲೇಖನ ೧೩)



ಕೊಟ್ಟೂರು : ಮೂರುಕಲ್ಲು ಮಠ (ಮುಂಭಾಗ)



ಕೊಟ್ಟೂರು : ಮೂರುಕಲ್ಲು ಮಠ (ಹಿಂಭಾಗ)




ಕೊಟ್ಟೂರು : ಸಿರಿ ಮಠ, ನಂದಿ ವಿಗ್ರಹ
(ಚಿತ್ರ/ದಿವಾಕರ ಎಸ್. ಕೊಟ್ಟೂರು) (ಲೇಖನ ...)




ಕೊಟ್ಟೂರು : ಮೂರುಕಲ್ಲು ಮಠ (ಗರ್ಭಗೃ...




ಕೊಟ್ಟೂರು : ಸಿರಿ ಮಠ, ಗರ್ಭಗೃಹ




ಪಾಟೇಶ್ವರ : ಸಹಸ್ರಲಿಂಗ



ಪಾಟೇಶ್ವರ : ಸಹಸ್ರಲಿಂಗ (ಸಮೂಹ)



ಪಾಟೇಶ್ವರ : ಲಿಂಗಗಳು



ಪಾಟೇಶ್ವರ : ವಿಷ್ಣು ಅವತಾರ

(ಖನ ೧೯)



...ಟೇಶ್ವರ : ಮುಖ ದೇವಾಲಯದ



...ಟೇಶ್ವರ : ಚಾಮುಂಡಿ



[illegible]



[illegible]



[illegible] ಅವತಾರ



[illegible] ಅವತಾರ



ರಾಮತೀರ್ಥ ದೇವಾಲಯ, ಅಥಣಿ

(ಚಿತ್ರಗಳು/ಅ. ಲ. ನರಸಿಂಹನ್) (ಲೇಖನ ೧೩)




ವಿಷ್ಣು, ತಲಸಂಗ



ಪಾರ್ಶ್ವನಾಥ, ಸವದಿ



ವಿಷ್ಣು, ಸತ್ತಿ



ಜೈನ ದೇವಾಲಯ, ಐನಾಪುರ



ರೇಖಾಚಿತ್ರ, ಪಾಕಂಪ್ಲಿ, ಐನಾಪುರ

(ಚಿತ್ರಗಳು/ಅ. ಲ. ನರಸಿಂಹನ್) (ಲೇಖನ ೧೨)





ಕಲ್ಲಿನ ಮೇಲೆ ಕೊರದ ರೇಖಾಚಿತ್ರ, ಐನಾಪುರ (ಬ



ಕಲ್ಲೇಶ್ವರ ದೇವಸ್ಥಾನ, ಗೂಳೆ ತುಮಕೂರು
ಲೇಖನ ೧೯



ಸಿಂದಗಿ : ನಂದಿಯು ಕೊರಳ ಮುಂದಿರುವ
ಲೇಖನ ೧೯



ಸಿಂದಗಿ : ಪೀಠದ ಮೇಲಿರುವ ಶ್ರೀ ತೂಂಬದ ನಿವ್ವಲಿಂಗ
ಮೂರ್ತಿಗಳು ಮತ್ತು ಅವರ ಹೆಸರು ...



ಸಿಂದಗಿ : ಆಕಳು ಕಾಲುಗಳ ಮುದೆಗಳು ಮತ್ತು ತೊಟ್ಟಿ



ನಂಜರಾಯಪಟ್ಟಣದ ದೇವಾಲಯ



ಪಾಲ್ಬರೆಯ ಸೋಮೇಶ್ವರ (?) ದೇಗುಲದ ಪಾರ್ಶ್ವನೋಟ

ಫಲಕ ೨೪



ನಂಜರಾಯಪಟ್ಟಣದ ವೀರಭದ್ರ ದೇಗುಲ



ಅಮ್ಮಾಳ ಪಾಲಿಂಗಪ್ಪನ ಗುಡಿಯ ಆವರಣ ಮತ್ತು ಲಿಂಗಗಳು



ಪಾಲ್ಪರೆಯ ವೀರಭದ್ರ ಶಿಲ್ಪ



ನಂಜರಾಯಪಟ್ಟಣದ ಯಮುಗಳ



ನಂಜರಾಯಪಟ್ಟಣದ ವೀರಶಿ

ಚಿತ್ರ ೨೪



ಪಾಲ್ಪರೆಯಲ್ಲಿದ್ದ ಶ್ರೀರಂಗ (ವಿಷ್ಣು) ದೇವಾಲಯದ ಅವಶೇಷಗಳು



ಚಿತ್ರಮರ್ಗ ಬೆಟ್ಟ: ಗೋಪಾಲಸ್ವಾಮಿ ಹೊಂಡ, ಗೋಪಾಲಕೃಷ್ಣ ದೇವಾಲಯ ಮತ್ತು
ಪೆರುಮಾಳಪುರದ ನಿವೇಶನ (ಲೇಖನ [illegible])



ಚಿತ್ರಮರ್ಗ ಬೆಟ್ಟ: ಶೃಂಗಾರತೋಟದ ಬಯಲು ಮತ್ತು
ಗೋಪಾಲಕೃಷ್ಣ ದೇವಾಲಯ



ಚಿತ್ರದುರ್ಗ ಬೆಟ್ಟ : ಗೋಪಾಲಕೃಷ್ಣ ದೇವಾಲಯದ ನವರಂಗದಲ್ಲಿರುವ ನಾಯಕ ಮತ್ತು ನಾಗತಿಯರ (?) ಉಬ್ಬುಶಿಲ್ಪಗಳು



ಚಿತ್ರದುರ್ಗ ಬೆಟ್ಟ : ಗರುಡಾಂಜನೇಯ ಬಾಗಿಲು

(ಚಿತ್ರ ೨೫)



ಚಿತ್ರದುರ್ಗ ಬೆಟ್ಟ : ಸುಬ್ರಹ್ಮಣ್ಯೇಶ್ವರ ದೇವಾಲಯ



ಚಿತ್ರದುರ್ಗ ಬೆಟ್ಟ: ಬ್ರಹ್ಮಪುರಿಗೇರಿಯಿದ್ದ ಇಂದಿನ ಅರಮನೆ ಅವಶೇಷಗಳ ಆವರಣ

([illegible])

4. R. S. Panchamukhi (Ed.) : *Karnataka Inscriptions*, Vol. I, II, & III, Part 1, 1941, 1952 & 1953

5. B. R. Gopal (Ed.) : *Karnataka Inscriptions*, Vol. V & VI, 1969 & 1973 ; *The Chalukyas of Kalyana and the Kalachuris*, Dharwad, 1981

6. K. V. Soundar Rajan : *South Indian Temple Styles*, New Delhi, 1972

7. ಸೂರ್ಯನಾಥ ಯು. ಕಾಮತ್ (ಸಂ.) : ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-ಎರಡು, ಬೆಂಗಳೂರು, ೧೯೮೩

ಕೊ. ಸ. ಅಪರ್ಣ

ಗೋಣಿತುಮಕೂರು ಮತ್ತು ಕಲ್ಲೇಶ್ವರ ದೇವಾಲಯ

ಗೋಣಿತುಮಕೂರು, ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ. ಇದು ತುರುವೇಕೆರೆ–ದಬ್ಬೆಘಟ್ಟ ಮಾರ್ಗದಲ್ಲಿದ್ದು, ತುರುವೇಕೆರೆಯಿಂದ ಮೂರು ಮೈಲಿ ದೂರದಲ್ಲಿದೆ. ಸುಮಾರು ೮೦೦–೯೦೦ ವರ್ಷಗಳ ಇತಿಹಾಸವಿರುವ ಈ ಹಳ್ಳಿಯಲ್ಲಿ ಮೂರು ಶಾಸನಗಳು ದೊರೆತಿವೆ. ಇವುಗಳಲ್ಲಿ ಒಂದು ಲಿಂಗಮುದ್ರೆಯ ಕಲ್ಲಾಗಿದ್ದರೆ,[1] ಮತ್ತೊಂದು '....ಕೆಱೆ[3] ಬಂಡಿಯ....' ಎಂಬ ಉಲ್ಲೇಖವಿರುವ ತ್ರುಟಿತ ಶಾಸನವಾಗಿದೆ. ಈ ಊರಿನಲ್ಲಿರುವ ಕೆರೆಯ ಬಗ್ಗೆ ಇದು ಹೇಳುತ್ತಿರಬಹುದು. ವಿಜಯನಗರ ಕಾಲದ ಮತ್ತೊಂದು ಶಾಸನವೂ ಇದ್ದು, ಅದು ಅಲ್ಲಲ್ಲಿ ಹಾಳಾಗಿದ್ದರೂ ಪೂರ್ಣಪಾಠವನ್ನೊಳಗೊಂಡಿದೆ. ಇಷ್ಟೇ ಅಲ್ಲದೆ, ಅಲ್ಲಲ್ಲಿ ಬಿಡಿ ವೀರಗಲ್ಲುಗಳೂ ಮಾಸ್ತಿಕಲ್ಲುಗಳೂ ದೊರೆತಿದ್ದು, ಅವು ಊರಿನ ಹಿರಿಮೆಯನ್ನು ಸಾರುತ್ತಿವೆ. 'ಮಾಸ್ತಮ್ಮ ದೇವರು' ಎಂದು ಹೇಳುವ ಒಂದು ಸಣ್ಣ ಗುಡಿಯೂ ಅಲ್ಲಿದ್ದು, ಅದರ ಹಿನ್ನೆಲೆಯಲ್ಲಿ ಐತಿಹ್ಯವೊಂದಿದೆ.[2]

1 ಈ ಲಿಂಗಮುದ್ರೆಯ ಕಲ್ಲಿಗೇ ಒಂದು ಗುಡಿಯನ್ನು ಕಟ್ಟಲಾಗಿದೆ.

2 ಅಲ್ಲಿನ ಜನರು ಈ ರೀತಿಯಾಗಿ ಹೇಳುತ್ತಾರೆ: ಗೋಣಿಗರು ಹೆಚ್ಚಾಗಿ ವಾಸವಾಗಿದ್ದ ಈ ಊರಿಗೆ ಕೃಷ್ಣದೇವರಾಯನ ಕಾಲದಲ್ಲಿ ಅಲೆಮಾರಿಗಳಾಗಿ ಬಂದು ಒಕ್ಕಲಿಗರು ಸೇರಿಕೊಂಡರು.ಅವರದು ಒಂದೇ ಮನೆ ಇದ್ದರೂ ಆ ಮನೆಯಲ್ಲಿ ಹದಿನೇಳು ಜನರಿದ್ದುದರಿಂದ ಗೋಣಿಗರಿಗಿಂತಲೂ ಇವರೇ ಬಲಿಷ್ಠರಾಗಿದ್ದರು. ಇವರ ಮನೆಯ ಒಂದು ಸುಂದರವಾದ ಹೆಣ್ಣು ಮಗಳನ್ನು, ಪಕ್ಕದ ಗ್ರಾಮವಾದ ನಡುವನಹಳ್ಳಿಯ ಗೊಲ್ಲರು, ಮದುವೆ ಮಾಡಿಕೊಡುವಂತೆ ಕೇಳಲು,ಇವರು ತಮ್ಮ ಜಾತಿಯಿಂದ ಗೊಲ್ಲರ ಜಾತಿಗೆ ಹೆಣ್ಣು ಕೊಡುವುದಿಲ್ಲವೆಂದು ಹೇಳಿದಾಗ ರೊಚ್ಚಿಗೆದ್ದ ಗೊಲ್ಲರು ಇವರ ಮೇಲೆ ದಾಳಿ ನಡೆಸಿ, ಈ ಹದಿನಾರು ಜನರನ್ನೂ ಕೊಲೆ ಮಾಡಿದರು. (ಶತ್ರುಗಳಾಗಿದ್ದ ಗೋಣಿಗರು ಇವರ ಸಹಾಯಕ್ಕೆ ಬರಲಿಲ್ಲ). ಉಳಿದ ಒಬ್ಬಳೇ ಹೆಣ್ಣುಮಗಳು 'ತನ್ನ ರಕ್ಷಣೆ'ಗಾಗಿ ಬೆಂಕಿಗೆ ಹಾರಿಕೊಂಡು'ಹುತಾತ್ಮೆ'ಯಾದಳು. ಇವಳೊಂದಿಗೆ ಇವಳ ಗೆಳತಿಯಾಗಿದ್ದ ಮಡಿವಾಳರ ಹೆಣ್ಣುಮಗಳು ಕೂಡಾ ಅಗ್ನಿಗೆ ಆಹುತಿಯಾದಳು. ಹೀಗೆ ಅಲ್ಲಿಯ ಮಹಾಸತಿ ಮೈದಳೆದು ಪೂಜನೀಯಳಾದಳು.

ಇದೇ ಮನೆತನದಲ್ಲಿ ಮಹಾಪರಾಕ್ರಮಶಾಲಿಯಾದ ಗಂಡು ಮಗುವೊಂದು ಜನಿಸಲು ಅವನಿಗೆ ಬ್ರಹ್ಮಲಿಂಗೇಶ್ವರನ ಅಂಕಿತದಲ್ಲಿ ಬಮ್ಮೆಗೌಡ ಎಂದು ಹೆಸರಿಟ್ಟರು. ಗೋಣಿತುಮಕೂರಿನ ಮೂಲಪುರುಷನಾಗಿ ಆತನು ಉಳಿಯಲೆಂದು, ಇದೇ ಊರಿನಲ್ಲಿದ್ದು ಬಲಿಷ್ಠವಾದ ಮನೆತನವಾಗಲೆಂದು, ಇವನ ಸೋದರಮಾವಂದಿರು, ಊರಿನ ಸುತ್ತ ನಾಲ್ಕು ಮನೆತನಗಳನ್ನು ಇವನ ಸಹಾಯಕ್ಕೆಂದು ನೆಲೆ ನಿಲ್ಲಿಸಿದರಲ್ಲದೆ, ಕುಡಿಯುವ ನೀರಿನ ಕಲ್ಯಾಣಿ ಇತ್ಯಾದಿ ಅನುಕೂಲಗಳನ್ನು ಮಾಡಿಕೊಟ್ಟರು. ನಾಲ್ಕು ಮಂದಿಯನ್ನು ಈ ಊರಿನ ನಾಲ್ಕು ಪಾಲಿನ ಗೌಡರೆಂದು ನೇಮಿಸಿದರು. ಇವರೆಲ್ಲರೂ ವಂಶಪಾರಂಪರ್ಯವಾಗಿ ಗೌಡಿಕೆಯನ್ನು ನಡೆಸಿಕೊಂಡು, ಊರಿನ ಹಬ್ಬ ಹರಿದಿನಗಳನ್ನು ವಿಜೃಂಭಣೆಯಿಂದ ನಡೆಸಿಕೊಂಡು ಬರುತ್ತಿದ್ದಾರೆ.

ಸುಮಾರು ೮೦೦-೯೦೦ ವರ್ಷಗಳ ಹಿಂದೆ ಹೀಗೆ ರೂಪುಗೊಂಡ ಗೋಣಿತುಮಕೂರಿನ ಆದಿವಾಸಿಗಳು ಗೋಣಿಗರೆಂದೂ ಅವರಿಂದ ಈ ಊರಿಗೆ 'ಗೋಣಿತುಮಕೂರು' ಎಂಬ ಹೆಸರು ಬಂದಿತೆಂದೂ ತಿಳಿದುಬರುತ್ತದೆ.

ಈ ಊರಿನಲ್ಲಿ ಆಂಜನೇಯ, ಭೈರವೇಶ್ವರ, ಗದ್ದೆ ಕೆಂಪಮ್ಮ, ಅರಸಮ್ಮ, ರಾಮಲಿಂಗೇಶ್ವರ, ಬ್ರಹ್ಮಲಿಂಗೇಶ್ವರ, ಕಲ್ಲೇಶ್ವರ, ವಿಘ್ನೇಶ್ವರ, ಮುಂತಾದ ದೇವಾಲಯಗಳಿದ್ದು, ಗ್ರಾಮದ ಮುಖ್ಯಸ್ಥರು ಹೇಳಿದಂತೆ ಹಬ್ಬಗಳನ್ನು, ಪೂಜೆ–ಪುನಸ್ಕಾರಗಳನ್ನು ನಡೆಸಿಕೊಂಡು ಬರುತ್ತಾರೆ. ಈ ದೇವಾಲಯಗಳು ಸುಮಾರು ೩೦೦–೪೦೦ ವರ್ಷಗಳ ಹಿಂದಿನವೆಂದು ತೋರುತ್ತವೆ.

ಬ್ರಹ್ಮಲಿಂಗೇಶ್ವರ ದೇವಾಲಯ : ಈ ಬ್ರಹ್ಮಲಿಂಗೇಶ್ವರನೇ ಗ್ರಾಮದ ಮೂಲದೇವರು. ಹಿಂದೆ ಗೋಡಾರಣ್ಯವಾಗಿದ್ದ ಈ ಊರಿನಲ್ಲಿ ತಪಸ್ಸು ಮಾಡಿ ತ್ರಿಮೂರ್ತಿಗಳ ದರ್ಶನ ಪಡೆದು, ಕಾಯವಳಿದ ಋಷಿಯೊಬ್ಬನ ಕಥೆಯನ್ನು ಈ ದೇವಾಲಯದ ಹಿನ್ನೆಲೆಯಲ್ಲಿ ಹೇಳುತ್ತಾರೆ. ಅಂತೆಯೇ, ಇವನ ಸೇವೆ ಮಾಡಿ ಕಾಯ ಕಳೆದ 'ಅರಸಮ್ಮ'ನೇ ಈ ಊರಿನ ಗ್ರಾಮದೇವತೆ. ಈ ಋಷಿಯ ಇಚ್ಛೆಯಂತೆ ಈ ಎರಡೂ ದೇವಾಲಯಗಳನ್ನು (ಬ್ರಹ್ಮಲಿಂಗೇಶ್ವರ ಮತ್ತು ಅರಸಮ್ಮನ ದೇವಾಲಯಗಳು) ಕಟ್ಟಲಾಗಿದ್ದು, ಇಂದಿಗೂ ಇಲ್ಲಿ ವಂಶಪಾರಂಪರ್ಯವಾಗಿ ಪೂಜೆಗಳು ನಡೆಯುತ್ತಿವೆ ; ಇದಕ್ಕೆ ಗ್ರಾಮದವರ ದತ್ತಿಯೂ ಇದೆಯೆಂದು ಹೇಳುತ್ತಾರೆ. ಬ್ರಹ್ಮಲಿಂಗೇಶ್ವರ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಅಗ್ನಿಕುಂಡ, ವೀರಗಾಸೆ ಕುಣಿತ, ದೇವರ ಪ್ರತಿಮೆ ಹೊತ್ತು ಕುಣಿಯುವುದು, ಡೋಲು–ವಾದ್ಯಗಳ ಸಮೇತ ನರ್ತನ, ಇತ್ಯಾದಿಗಳು ತಪ್ಪದೆ ನಡೆಯುತ್ತವೆ.

ಅರಸಮ್ಮದೇವಿ : ಗ್ರಾಮದೇವತೆಯಾದ 'ಆದಿಶಕ್ತಿ ಅರಸಮ್ಮದೇವಿ'ಯು ಇಂದಿಗೂ 'ದುಷ್ಟಶಿಕ್ಷಣ ಶಿಷ್ಟರಕ್ಷಣ' ದೇವಿಯಾಗಿ ಜನಪದರ ನಂಬಿಕೆಗೆ, ಅವರ ಭಕ್ತಿಪೂರ್ವಕ ಪೂಜಾದಿಗಳಿಗೆ ಪಾತ್ರಳಾಗಿದ್ದಾಳೆ. ಸುಮಾರು ೨೫೦ ವರ್ಷಗಳ ಹಿಂದೆ ಪೂಜೆ ಮಾಡುತ್ತಿರುವಾಗ ತಾಯಿಯ ಶಿಲ್ಪದಿಂದ ಹಾಲು ಧಾರಾಕಾರವಾಗಿ ಹರಿಯಲು, ಗ್ರಾಮದ ಜನರು ಅದನ್ನು 'ಮಹಾರಾಜ'ರಿಗೆ ಕಳುಹಿಸಿದರಂತೆ. ಮಹಾರಾಜರು ಆ ಹಾಲನ್ನು ಪರೀಕ್ಷಿಸಿ, ಇದು ದೈವದತ್ತವಾಗಿ ಬಂದ ಕ್ಷೀರವೆಂದು ಭಾವಿಸಿ ಈ ದೇವತೆಗೆ ಹೆಚ್ಚಿನ ಕೊಡುಗೆ ಕೊಡಬೇಕೆಂದು ಆದೇಶಿಸಿದರಂತೆ. ಅಲ್ಲದೆ, ಮಹಾರಾಜರು ಇವಳನ್ನು 'ಅಮೃತ ಮಹಾಲಕ್ಷ್ಮಿ' ಎಂದು ಗೌರವಿಸಿ ಪೂಜಿಸಿದರಂತೆ. ಈ ದೇವಿಯ ಹೆಸರಿನಲ್ಲಿ ವರ್ಷಕ್ಕೊಮ್ಮೆ ಯುಗಾದಿಯ ನಂತರ ಜಾತ್ರೆ ನಡೆಯುತ್ತದೆ. ಒಕ್ಕಲು ಗೌಡರು ಇದರ ಪೂಜೆಯನ್ನು ಮಾಡುತ್ತಾರೆ.

ಕಲ್ಲೇಶ್ವರ ದೇವಾಲಯ : ಈ ಊರಿನಲ್ಲಿ ಪ್ರಾಚೀನವಾದ, ವಾಸ್ತುಶಿಲ್ಪದ ದೃಷ್ಟಿಯಿಂದ ಮುಖ್ಯವಾದ ದೇವಾಲಯವಿದು. ಇದು ಈ ಊರಿನ ಬಸ್ ನಿಲ್ದಾಣ ಮತ್ತು ಕೆರೆಗೆ ಹತ್ತಿರದಲ್ಲಿದೆ. ಶಾಸ್ತ್ರಕ್ಕೆ ಸರಿಯಾಗಿ ಪೂರ್ವದಿಕ್ಕಿಗೆ ಮುಖವಾಗಿರುವ[3] ಈ ದೇವಾಲಯವನ್ನು ಪೂರ್ಣವಾಗಿ ಕಲ್ಲಿನಿಂದ ಕಟ್ಟಲಾಗಿದ್ದು, ಸರಳ ರಚನೆಯನ್ನು ಹೊಂದಿದೆ. ಹೆಚ್ಚು ಎತ್ತರವಾಗಿರದ ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿದ್ದು, ಪ್ರವೇಶದಲ್ಲಿ ಮೆಟ್ಟಿಲುಗಳಿವೆ. ಹೊರಭಾಗದಲ್ಲಿ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಶಿಖರ, ಗ್ರೀವ, ಕಲಶ ಈ ಎಲ್ಲ ಭಾಗಗಳೂ ಬಹುಪಾಲು ಮೊದಲಿನಂತೆಯೇ ಉಳಿದಿವೆ. ದೇವಾಲಯವು ಇಂದಿಗೂ ಸುಸ್ಥಿತಿಯಲ್ಲಿದೆ. ಅಲ್ಲದೆ, ಅಧಿಷ್ಠಾನವು ಖುರ–ಕುಂಭ–ಪಟ್ಟಿಕಾಗಳಿರುವ ಸರಳವಾದ 'ಮಂಚಬಂಧ' ಅಧಿಷ್ಠಾನವಾಗಿದ್ದು, ಅಲಂಕಾರರಹಿತವಾಗಿದೆ. ಅಧಿಷ್ಠಾನದ ಯಾವುದೇ ಭಾಗದಲ್ಲಾದರೂ 'ಪ್ರಣಾಳ'ವು ಬರಬಹುದಾಗಿದ್ದು, ಆ ಭಾಗವು ಗರ್ಭಗೃಹದ ನೆಲಮಟ್ಟವನ್ನು ಸೂಚಿಸುತ್ತದೆ ಮತ್ತು ಪ್ರಣಾಳವು ದೇವಾಲಯದ ಎಡಭಾಗದಲ್ಲಿರಬೇಕೆಂಬುದು ನಿಯಮ.[4] ಅಂತೆಯೇ, ಇಲ್ಲಿಯೂ ದೇವಾಲಯದ ಎಡಭಾಗಕ್ಕೆ, ಅಧಿಷ್ಠಾನದ 'ಕಂಠ'ಭಾಗದಲ್ಲಿ ಸಾಧಾರಣ ರೀತಿಯ ಪ್ರಣಾಳವನ್ನು ರಚಿಸಲಾಗಿದೆ. ಅಧಿಷ್ಠಾನದ ಮೇಲಿನ ಭಿತ್ತಿಯನ್ನೂ ಸರಳವಾಗಿ ರಚಿಸಲಾಗಿದೆ. ಭದ್ರ–ಕರ್ಣಗಳ ವಿಂಗಡಣೆಯಿಲ್ಲದೆ ನೇರ ರಚನೆಯನ್ನು ಹೊಂದಿದ್ದರೂ ಗರ್ಭಗೃಹ ಮತ್ತು ಅಂತರಾಳವನ್ನೊಳಗೊಂಡ ಭಾಗ ಮಾತ್ರ ಹಿಂದೆ ಸರಿದಂತಿದ್ದು ನವರಂಗದ ವೈಶಾಲ್ಯತೆಯನ್ನು ಗುರುತಿಸಬಹುದಾಗಿದೆ. ಭಿತ್ತಿಗೆ 'ವೇದಿ' ಇಲ್ಲದಿರುವುದರಿಂದ, ನೇರವಾಗಿ ಅಧಿ

3 ಮಯಮತ, ೯.೮೪-೮೫

4 ಅದೇ, ೧೯.೨೩-೨೯

ಷ್ಠಾನದ ಮೇಲಿನಿಂದಲೇ ಭಿತ್ತಿಯಲ್ಲಿ ನಿಶ್ಚಿತ ಅಂತರದಲ್ಲಿ 'ಕುಡ್ಯಸ್ತಂಭ'ಗಳನ್ನು ಬಿಡಿಸಲಾಗಿದೆ. ಈ ಕುಡ್ಯಸ್ತಂಭಗಳು 'ಬ್ರಹ್ಮಕಾಂತ' ರೀತಿಯವು. ಅದರ ಬೋದಿಗೆಯ ಮೇಲೆ ಪುಷ್ಪವನ್ನೂ 'ಕಲಶ'ದ ಮೇಲೆ 'ಪತ್ರಚಿತ್ರ'ವನ್ನೂ ಬಿಡಿಸಲಾಗಿದೆ. ಭಿತ್ತಿಯಲ್ಲಿ ಇನ್ನಾವುದೇ ಅಲಂಕಾರವಿಲ್ಲ.

ಈ ದೇವಾಲಯದಲ್ಲಿ ಪ್ರಸ್ತರದ–ಉತ್ತರ, ವಾಜನ, ವಲಭೀ, ಕಪೋತ-ಈ ಎಲ್ಲ ಭಾಗಗಳನ್ನೂ ಗುರುತಿಸಬಹುದಾಗಿದೆ. 'ವಲಭೀ'ಯು ನಿರಲಂಕೃತವಾಗಿದ್ದು, ಕಪೋತದ ಮೇಲೆ 'ನಾಸಿ'ಗಳನ್ನೂ ಬಿಡಿಸಲಾಗಿದೆ. ದೇವಾಲಯದ ಎಡಭಾಗದಲ್ಲಿ ನವರಂಗಕ್ಕೆ ಸೇರಿದ ಎಡೆಯಲ್ಲಿ ಮಾತ್ರ ಮೊದಲಿನ ಪ್ರಸ್ತರವು ಹಾಳಾಗಿರುವುದರಿಂದ, ಈಗ ಸಿಮೆಂಟ್ ಗಾರೆಗಳಿಂದ ಕೈಪಿಡಿಗೋಡೆಯನ್ನು ರಚಿಸಿ ಆ ಭಾಗವನ್ನು ಮುಚ್ಚಿದ್ದಾರೆ. ಪ್ರಸ್ತರದ ಮೇಲೆ ಶಿವನ ವಾಹನವಾದ ನಂದಿಯನ್ನೂ ಮೂಲೆಗಳಲ್ಲಿ ಸಿಂಹವನ್ನೂ ಇಡಲಾಗಿದೆ.[5] ಇದರ ಮೇಲೆ ಕಟ್ಟಲಾಗಿರುವ ಶಿಖರವು 'ಕದಂಬನಾಗರ' ರೀತಿಯದಾಗಿದೆ.[6] ಹಂತಹಂತವಾಗಿ ಕಿರಿದಾಗುತ್ತಾ ಹೋಗುವ ನಾಲ್ಕು ತಳಗಳನ್ನು ಹೊಂದಿರುವ ಈ ಶಿಖರವು ಕಪೋತ-ಕಂಠಗಳಿಂದ ಕೂಡಿದೆ ಹಾಗೂ ಕಪೋತದಲ್ಲಿ ಸಾಲು ನಾಸಿಗಳಿವೆ. ಅಂತ್ಯದಲ್ಲಿ ನಾಲ್ಕು ಮುಖದ 'ಬ್ರಹ್ಮಛಂದ ಶಿಖರ'ವಿದೆ. ಶಿಖರದ ನಾಲ್ಕೂ ದಿಕ್ಕುಗಳಲ್ಲಿ ಮಹಾನಾಸಿಯನ್ನು ಕೆತ್ತಲಾಗಿದ್ದು (ಈಗ ಸವೆದುಹೋಗಿದೆ), ಇದರ ಮೇಲೆ ಮಹಾಪದ್ಮ ಮತ್ತು ಸ್ತೂಪಿ ಇವೆ. ಶಿಖರದ ಮುಂಭಾಗದಲ್ಲಿ ಶುಕನಾಸಿಯ ರಚನೆಯು ನಾಲ್ಕು ತಳಗಳನ್ನೂ ಆವರಿಸಿದೆ.

ಗರ್ಭಗೃಹವು ಅವಶ್ಯಕತೆಗೆ ತಕ್ಕಂತೆ ಚಚ್ಚೌಕವಾಗಿಯೂ ಚಿಕ್ಕದಾಗಿಯೂ ಇದ್ದು, ಅದರಲ್ಲಿ ಸಣ್ಣದಾದ ಲಿಂಗವಿದೆ. ಅಲ್ಲಲ್ಲಿ ಭಿತ್ತಿಸ್ತಂಭಗಳಿವೆ. 'ವಿತಾನ'ದಲ್ಲಿ ಪುಷ್ಪವನ್ನು ಬಿಡಿಸಲಾಗಿದೆ. ದ್ವಾರದಲ್ಲಿ ನಿರಲಂಕೃತ ಶಾಖೆಗಳಿದ್ದು ಅದರ ಕೆಳಗೆ 'ಪೇದ್ಯಾಪಿಂಡ'ವನ್ನು ರಚಿಸಿದ್ದಾರೆ. 'ಮಂಗಳಫಲಕ'ದ ಮೇಲೆ ಯಾವುದೇ ಬಿಂಬವಿಲ್ಲ. ಆದರೆ ಅದರ ಪಕ್ಕಗಳಲ್ಲಿ ಕೆಳಗೆ ತೂಗಾಡುತ್ತಿರುವ ಕಮಲದ ಮೊಗ್ಗನ್ನು ಬಿಡಿಸಲಾಗಿದೆ. ಅಂತರಾಳವೂ ಗರ್ಭಗೃಹದಷ್ಟೇ ವಿಸ್ತಾರವಾಗಿದೆ. ಇದು 'ತೆರೆದ ಅಂತರಾಳ'ವಾಗಿದ್ದು, ವಿತಾನದಲ್ಲಿ ಕಮಲದ ಮೊಗ್ಗನ್ನು ಬಿಡಿಸಿದ್ದಾರೆ.

ಅಂತರಾಳದ ಮುಂದಿನ ನವರಂಗವು ಹೆಚ್ಚು ವಿಶಾಲವಾಗಿಲ್ಲವಾದರೂ ಸುಂದರ ಕಂಬ ಮತ್ತು ವಿತಾನಾಲಂಕರಣಗಳನ್ನು ಹೊಂದಿದೆ. ನವರಂಗದಲ್ಲಿ ವೇದಿಕೆಯನ್ನೂ ಕಂಬಗಳ ಮಧ್ಯೆ 'ವಿತಾನ'ವನ್ನೂ ರಚಿಸಬೇಕೆಂದು 'ಮಯಮತ'ದಲ್ಲಿ ಹೇಳಿದೆ.[7] ಅಂತೆಯೇ, ಈ ದೇವಾಲಯದಲ್ಲಿ ಚಚ್ಚೌಕವಾಗಿರುವ ನವರಂಗದ ಮಧ್ಯೆ ವೇದಿಕೆಯನ್ನು ರಚಿಸಿದ್ದು (ಈಗ ಬಹುಪಾಲು ಮುಚ್ಚಿಹೋಗಿದೆ), ಅದರ ಮೇಲೆ ನಾಲ್ಕು ಕಂಬಗಳೂ ಅವುಗಳ ಸುತ್ತ ಭಿತ್ತಿಗೆ ಸೇರಿದ ಹನ್ನೆರಡು ಕಂಬಗಳೂ ಇವೆ. ಕಂಬಗಳು ಪೀಠರಹಿತವಾಗಿಯೂ ಸರಳವಾಗಿಯೂ ರಚನೆಗೊಂಡಿವೆ. ಕಂಬದ ಮಧ್ಯಭಾಗದಲ್ಲಿ ಹದಿನಾರುಮುಖದ ವಿನ್ಯಾಸವಿದ್ದು, ಅದರ ಮೇಲೆ ಚೌರಸ ಫಲಕವಿದೆ. ಇದರ ಮೇಲೆ ಕಂಬದ ಉಳಿದ ಭಾಗಗಳಾದ ಕಲಶ, ತಡಿ, ಕುಂಭಗಳಿವೆ. ಹೆಚ್ಚು ಉಬ್ಬಿದಂತಿರದ 'ಕುಂಭ'ದ ಮೇಲೆ ಬೋದಿಗೆಯನ್ನು ರಚಿಸಲಾಗಿದೆ. ('ಫಲಕ' ಇಲ್ಲ). ಕಂಬದ ನಾಲ್ಕೂ ಮುಖದಲ್ಲಿರುವ ಈ ಬೋದಿಗೆಯು 'ತರಂಗಬೋದಿಗೆ'ಯಾಗಿದೆ ಹಾಗೂ ಅದರಲ್ಲಿ 'ಮಧ್ಯಪಟ್ಟ'ವೂ ಇದೆ. ವೇದಿಕೆಯ ನಾಲ್ಕೂ ಕಂಬಗಳ ಮಧ್ಯೆ ಒಂದು ಅಂಕಣವೂ ಸುತ್ತ · ಇದೇ ರೀತಿ ಎಂಟು ಅಂಕಣಗಳೂ ಇವೆ. 'ನವರಂಗ' ಎಂಬ ಹೆಸರಿಗೆ ತಕ್ಕಂತೆ ಒಟ್ಟು ಒಂಭತ್ತು ಅಂಕಣಗಳಿರುವ ಸಮತಲ ವಿತಾನದಲ್ಲಿ ಎಲ್ಲ ಅಂಕಣಗಳನ್ನೂ 'ಪದ್ಮಶಿಲಾ' ರೀತಿಯಲ್ಲಿ ರಚಿಸಲಾಗಿದೆ. ಮಧ್ಯೆ ಅಧೋಮುಖಿಯಾದ ಕಮಲವನ್ನು ಬಿಡಿಸಿದ್ದಾರೆ. ನವರಂಗದಲ್ಲಿ ಗಣಪತಿ, ಸರಸ್ವತಿ, ಇತ್ಯಾದಿ ಬಿಂಬಗಳಿವೆ. ಇದರ

---

5 ಗ್ರೀವಭಾಗದಲ್ಲಿ ನಂದಿಯನ್ನು ಇಡಬೇಕೆಂಬುದು ನಿಯಮ – ಮಯಮತ, ೧೯.೪೭-೪೮

6 ಈ ರೀತಿಯ ಶಿಖರವನ್ನು 'ಫಾಂಸನಾ ದ್ರಾವಿಡಶಿಖರ'ವೆಂದು ಡಾ॥ ಕೆ. ವಿ. ಸೌಂದರರಾಜನ್‌ರವರು ಗುರುತಿಸುತ್ತಾರೆ- ನೋಡಿ : *Encyclopedia of Indian Temple Architecture*, Vol. I, Part 2, p. 57

7 ಮಯಮತ, ೨೫.೩೦-೩೧

ದ್ವಾರವು ಗರ್ಭಗೃಹದ ದ್ವಾರದಂತೆಯೇ ಇದೆ. ಹೀಗೆ ನವರಂಗವು ಚಿಕ್ಕದಾದರೂ ಪೂರ್ಣ ಅಲಂಕರಣವನ್ನು ಹೊಂದಿದೆ.

ಈ ದೇವಾಲಯದ ನಿರ್ಮಾಣದ ಕಾಲವನ್ನು ಹೇಳುವ ಯಾವ ಶಾಸನವೂ ದೊರೆತಿಲ್ಲ. ತುರುವೇಕೆರೆ ಮತ್ತು ಅದರ ಸುತ್ತಲಿನ ಪ್ರದೇಶಗಳು ೧೧-೧೨ನೇ ಶತಮಾನದಲ್ಲಿ ಪ್ರಸಿದ್ಧಿಗೆ ಬರುತ್ತವೆ. ಸುಮಾರು ಇದೇ ಕಾಲದಲ್ಲಿಯೇ ಈ ಊರು ಸಹಾ ಅಸ್ತಿತ್ವಕ್ಕೆ/ಪ್ರಸಿದ್ಧಿಗೆ ಬಂದಂತೆ ತೋರುತ್ತದೆ. ಅಲ್ಲದೆ, ಈ ದೇವಾಲಯದ ಅಧಿಷ್ಠಾನ, ಶಿಖರ, ಕಂಬ–ಇವು ಸಹಾ ಇದೇ ಕಾಲದ ಇತರ ದೇವಾಲಯಗಳನ್ನು ಹೋಲುತ್ತವೆ. ಈ ಹಿನ್ನೆಲೆಯಲ್ಲಿ ಈ ದೇವಾಲಯವನ್ನು ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸೇರಿದ ದೇವಾಲಯವೆಂದು ಊಹಿಸಬಹುದಾಗಿದೆ.

ವಾಸ್ತುಶೈಲಿಯ ವಿಶೇಷತೆ : ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ, ಕಲಶ–ಹೀಗೆ ಆರೂ ಅಂಗಗಳಿದ್ದು, ಈ ದೇವಾಲಯವು ದ್ರಾವಿಡಶೈಲಿಯ ಷಡ್ವರ್ಗ ದೇವಾಲಯಗಳಿಗೆ ಒಂದು ಉದಾಹರಣೆಯಾಗಿದೆ. 'ಮಂಚಬಂಧ' ಅಧಿಷ್ಠಾನದ ಆರಂಭವನ್ನು ಮಹಾಕೂಟದ ಹಿರೇಮಹಾಕೂಟೇಶ್ವರ ದೇವಾಲಯದಲ್ಲೇ ಕಾಣಬಹುದಾಗಿದೆ. (ಕಾಲ : ಕ್ರಿ. ಶ. ಸುಮಾರು ೫೫೦-೬೦೦). ಕ್ರಿ.ಶ. ೭-೮ನೇ ಶತಮಾನದ ಐಹೊಳೆ–ಬಾದಾಮಿ–ಪಟ್ಟದಕಲ್ಲಿನ ಕೆಲವು ದೇವಾಲಯಗಳು ಮತ್ತು ಕೆಲವು ದೇವಾಲಯಗಳ 'ಪ್ರತೋಲಿ'ಗಳಲ್ಲೂ ಮಂಚಬಂಧ ಅಧಿಷ್ಠಾನವಿದೆ. ಆ ನಂತರದ ದೇವಾಲಯಗಳಲ್ಲಿ ಅದು ಹೆಚ್ಚಾಗಿ 'ಪ್ರತೋಲಿ'ಗಳಲ್ಲೇ ಉಳಿದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಹೀಗಿರುವಾಗ, ಬಾದಾಮಿ ಚಾಲುಕ್ಯರ ನಂತರ ಪ್ರಧಾನ ದೇವಾಲಯದಲ್ಲಿ ಅಪರೂಪವಾಗಿ ಕಾಣಬರುವ ಮಂಚಬಂಧ ಅಧಿಷ್ಠಾನವಿರುವ ಕೆಲವೇ ದೇವಾಲಯಗಳಲ್ಲಿ ಇದೂ ಒಂದಾಗಿದೆ. ಕದಂಬನಾಗರ ಶಿಖರವು ಕ್ರಿ.ಶ. ೭–೮ನೇ ಶತಮಾನದಿಂದಲೂ ಬಳಕೆಯಲ್ಲಿದ್ದು, ಕ್ರಿ. ಶ. ೧೦-೧೧ನೇ ಶತಮಾನದ ದೇವಾಲಯಗಳಲ್ಲೂ ಇದನ್ನು ಕಾಣುತ್ತೇವೆ. ಹೀಗೆ ಅಲ್ಲಲ್ಲಿ ಕಾಣಬರುವ ಕದಂಬ ನಾಗರ ಶಿಖರಕ್ಕೆ ಇದು ಮತ್ತೊಂದು ಕೊಡುಗೆಯಾಗಿದೆ.

ಈ ದೇವಾಲಯದ ನವರಂಗದಲ್ಲಿರುವ ಕಂಬವು ಕ್ರಿ.ಶ. ೧೦-೧೧ನೇ ಶತಮಾನದ ಅನೇಕ ದೇವಾಲಯಗಳಲ್ಲಿ ಕಾಣಬರುತ್ತದೆ. ಈ ರೀತಿಯ ಕಂಬಗಳಿಗೆ ಚೌರಸಫಲಕದ ಅಂತ್ಯಗಳಲ್ಲಿ ಕಮಲದ ಮೊಗ್ಗುಗಳನ್ನು ಬಿಡಿಸಿದಾಗ ಅವು 'ಚಿತ್ರಸ್ಕಂಭ' ಪ್ರಕಾರದ ಸ್ತಂಭವೆನಿಸುತ್ತವೆ. ಮುಂದೆ, ಕ್ರಿ.ಶ. ೧೪–೧೫ನೇ ಶತಮಾನಗಳಲ್ಲಿ ಕಾಣಬರುವ 'ಚಿತ್ರಸ್ಕಂಭ'ವೆಂಬ ಸ್ತಂಭ ಪ್ರಕಾರಕ್ಕೆ ಈ ರೀತಿಯ ಸ್ತಂಭಗಳೇ ಪ್ರೇರಕವಾಗಿವೆಯೆನ್ನಬಹುದು.

ದೇವಾಲಯವು ರಚನಾ ವಿನ್ಯಾಸದಲ್ಲಿ ಸುತ್ತಲಿನ ದೇವಾಲಯಗಳನ್ನು ಹೋಲುತ್ತಿದ್ದು ಕಾಲ, ರಾಜವಂಶಗಳಿಗಿಂತ ಹೆಚ್ಚಾಗಿ ಪ್ರಾದೇಶಿಕತೆಯನ್ನು ಎತ್ತಿಹಿಡಿಯುತ್ತಿದೆ.

ಈ ದೇವಾಲಯದಲ್ಲಿ ವೀರಶೈವರು ನಿತ್ಯವೂ ಪೂಜೆಯನ್ನು ಮಾಡುತ್ತಾರಾದರೂ ಮಹಾಶಿವರಾತ್ರಿಯಲ್ಲಿ ವಿಶೇಷವಾಗಿ ಅಭಿಷೇಕ ಇತ್ಯಾದಿಗಳು ನಡೆಯುತ್ತವೆ. ಊರಿನಲ್ಲಿ ಕಾಲಕ್ಕೆ ಸರಿಯಾಗಿ ಮಳೆ ಬಾರದೇ ಇದ್ದಲ್ಲಿ, ಸಾಂಪ್ರದಾಯಿಕವಾಗಿ ರುದ್ರಾಭಿಷೇಕವನ್ನು ನೆರವೇರಿಸುತ್ತಾರೆ. ಅಂದು, ದೇವರಿಗೆ ಗಂಟುಕು ನೀರು ಕುಡಿಸಿ ಕೋಡಿ ಹರಿಸಿದರೆ ದೇವರು ಆಶೀರ್ವದಿಸಿ ಮಳೆ ತರಿಸುತ್ತಾನೆಂಬ ನಂಬಿಕೆ ಇಲ್ಲಿನ ಜನರಲ್ಲಿದೆ.

ಹೀಗೆ,ಚಿಕ್ಕದಾಗಿ ಸರಳವಾಗಿ ರಚಿಸಲ್ಪಟ್ಟಿದ್ದರೂ ಈ ದೇವಾಲಯವು ಈ ತಾಲ್ಲೂಕಿನ ದೇವಾಲಯಗಳಲ್ಲಿ ವಾಸ್ತುಶಿಲ್ಪ ದೃಷ್ಟಿಯಿಂದ ತನ್ನದೇ ಆದ ಸ್ಥಾನವನ್ನು ಹೊಂದಿದೆ. ಆದರೆ ತುರುವೇಕೆರೆ, ನಾಗಲಾಪುರ, ಈ ಪ್ರದೇಶದ ದೇವಾಲಯಗಳ ಬಗೆಗೆ ಉಲ್ಲೇಖ ದೊರೆಯುವಂತೆ ಈ ದೇವಾಲಯದ ಬಗೆಗೆ ದೊರೆಯುವುದಿಲ್ಲ. ಸಮಗ್ರವಾಗಿ ಗಮನಿಸಿದರೆ, ಈ ಊರಿನ ಎಲ್ಲ ದೇವಾಲಯಗಳೂ ಒಂದು ರೀತಿಯಲ್ಲಿ ಆಸಕ್ತಿದಾಯಕವಾಗಿವೆ ಎಂದು ಹೇಳಬಹುದಾಗಿದೆ.

ಈ ಊರಿನ ಬಗೆಗಾದರೂ ಹೆಚ್ಚಿನ ವಿಷಯಗಳು ನಮಗೆ ಸದ್ಯಕ್ಕೆ ಸಿಗುತ್ತಿಲ್ಲ. ಈ ಊರಿನ ಇತಿಹಾಸವನ್ನು ಸು. ೮೦೦_೯೦೦ ವರ್ಷಗಳಷ್ಟು ಹಿಂದಕ್ಕೆ ಒಯ್ಯಬಹುದಾದರೂ ಅದಕ್ಕೆ ದಾಖಲೆಗಳ ನೆರವು ಬೇಕು. ಅದಕ್ಕೂ ಹಿಂದಿನ ಇತಿಹಾಸವನ್ನೂ ಗುರುತಿಸುವ ಪ್ರಯತ್ನ ಮಾಡಬೇಕಿದೆ. ಮಹಾಸತಿ, ಅರಸಮ್ಮದೇವಿ-ಈ ಕಥೆಗಳಿಗೂ ದತ್ತಿ ಪಡೆದ ವಿಷಯಗಳಿಗೂ ಆಧಾರಗಳನ್ನು ಹುಡುಕಬೇಕಾಗಿದೆ. ಅಲ್ಲದೆ, ಈ ಊರಿನ ಸಾಮಾಜಿಕ, ಸಾಂಸ್ಕೃತಿಕ ಅಂಶಗಳ ಬಗ್ಗೆ ಇನ್ನೂ ಹೆಚ್ಚಿನ ವಿಷಯಗಳನ್ನು ಸಂಗ್ರಹಿಸಬೇಕಾಗಿದೆ.*

---

* ಇಲ್ಲಿಯ ದೇವಾಲಯ ಮತ್ತು ಶಾಸನಗಳನ್ನು ಕುರಿತು ವಿಷಯವನ್ನು ಸಂಗ್ರಹಿಸುವಲ್ಲಿ ನನಗೆ ಸಹಾಯ ಮಾಡಿದ ನನ್ನ ತಾತನವರಾದ ಶ್ರೀ ಟಿ. ಎಸ್. ಕೆರಗೋಡಯ್ಯ (ನಿವೃತ್ತ ಶಾನುಭೋಗರು) ಅವರಿಗೂ ಸೋದರಮಾವ ಶ್ರೀ ಟಿ. ಕೆ. ಶಿವಸ್ವಾಮಿ ಅವರಿಗೂ ಅಧ್ಯಾಪಕರಾದ ಶ್ರೀ ಶಿವರಾಮರಾಜು ಅವರಿಗೂ ಊರಿನ ಹಿರಿಯರಿಗೂ ನಾನು ಕೃತಜ್ಞನಾಗಿದ್ದೇನೆ.

ಡಾ॥ ರು. ಮ. ಷಡಕ್ಷರಯ್ಯ

ತೋಂಟದ ಸಿದ್ಧಲಿಂಗಯತಿಯ ಶಿಲ್ಪಶೋಧನೆ

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಮತ್ತು ಸಿಂದಗಿ ತಾಲೂಕುಗಳ ಕೆಲಗ್ರಾಮಗಳ ಅನ್ವೇಷಣೆಯನ್ನು ೧೯೮೮–೮೯ರಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ವತಿಯಿಂದ ಕೈಕೊಂಡು ಹಲವಾರು ಪ್ರಾಚೀನ-ಮಧ್ಯಕಾಲೀನ ಜನವಸತಿಯ ನೆಲೆ, ದೇವಾಲಯ, ಶಿಲ್ಪ, ಶಾಸನ, ಇತ್ಯಾದಿಗಳನ್ನು ಹುಡುಕಲಾಯಿತು. ಕ್ರಿ. ಶ, ಸು. ೨–೧೫ನೆಯ ಶತಮಾನದ ನೆಲೆಗಳು ಈ ಜಿಲ್ಲೆಯ ಸರೂರ, ಗುಂಡಕರ್ಜಿ, ಬಸರಕೋಡು (ಮುದ್ದೇಬಿಹಾಳ ತಾಲೂಕು), ಸಿಂದಗಿ ಮತ್ತು ಚಾನುಕೋಟಿ(ಸಿಂದಗಿ ತಾಲೂಕು)ಗಳಲ್ಲಿ, ಕ್ರಿ. ಶ. ಸು. ೧೧–೧೩ನೆಯ ಶತಮಾನದ ಶೈವ ದೇವಾಲಯಗಳು ಸರೂರಲ್ಲಿ ಒಂದು, ಬಸರಕೋಡದಲ್ಲಿ ಮೂರು, ಚಾನುಕೋಟಿಯಲ್ಲಿ ಒಂದು ಮತ್ತು ಈ ಕಾಲದ ಗಣೇಶ, ಶಿವಲಿಂಗ, ನಂದಿ, ಉಮಾ-ಮಹೇಶ್ವರ, ವಿಷ್ಣು, ಬ್ರಹ್ಮ, ಗಣೇಶ, ಭೈರವ, ಮಹಿಷಾಸುರ ಮರ್ದಿನಿ, ಸೂರ್ಯ, ಪಾರ್ಶ್ವನಾಥ, ಜೈನ ಚತುಷ್ಕೂಟ, ಜೈನಯಕ್ಷಿಣಿ ಅಂಬಿಕ, ಶೈವಯತಿಗಳು, ಉಪಾಸಕರು, ಭಕ್ತರು, ಪೌರಾಣಿಕ ಕಥೆಯ ನಿರೂಪಣೆಯುಳ್ಳ ಶಿಲ್ಪ, ಇತ್ಯಾದಿ ಅಲ್ಲಿ ಕಂಡುಬಂದಿವೆ. ಬಸರಕೋಡಿನ ತ್ರಿಕೂಟ ಬಹುಶಃ ತ್ರೈಪುರುಷ ದೇವಾಲಯ. ಅದರಲ್ಲಿ ಒಂದು ಗರ್ಭಗೃಹದಲ್ಲಿಯ ಸುಂದರ ಸೂರ್ಯನ ಪೀಠ-ಮಂಟಪ, ಚಾನುಕೋಟಿಯ ದೇವಾಲಯದ ಹೊರಗೋಡೆಯಲ್ಲಿ ತೋರಿಸಿದ ಸುಂದರ ವಿವಿಧ ಚಿತ್ರಗಳು, ಗುಂಡಕರ್ಜಿಯ ಜೈನ ಚತುಷ್ಕೂಟದಲ್ಲಿ ನಾಲ್ಕುಮಂದಿ ತೀರ್ಥಂಕರರ ಸಂಗಡ ಯಕ್ಷ-ಯಕ್ಷಿಣಿಯರ ಹೆಸರುಳ್ಳ ಶಾಸನ, ಸರೂರಿನ ಮುನಿ–ಭಕ್ತರ ಶಿಲ್ಪ, ಸಿಂದಗಿಯ ಮುನಿ, ಯತಿ, ಭಕ್ತ, ಉಪಾಸಕ, ಉಪಾಸಕಿ, ಇತ್ಯಾದಿಯಲ್ಲದೆ ತೋಂಟದ ಸಿದ್ಧಲಿಂಗಯತಿವರ್ಯರ ಶಿಲ್ಪ, ಹಸುವಿನ ನಾಲ್ಕು ಕಾಲುಗಳ ಮುದ್ರೆಯುಳ್ಳ ತೊಟ್ಟಿ ಮತ್ತು ನಂದಿಯ ಕೊರಳ ಮುಂದೆ ಕಂಠಹಾರದ ಬದಲಿಗೆ ಯೋಗಮುದ್ರೆಯಲ್ಲಿ ಕುಳಿತ ಯೋಗಿ, ಇತ್ಯಾದಿ ಬಹು ಮುಖ್ಯವಾಗಿವೆ. ಸಿಂದಗಿ ಮತ್ತು ಸರೂರಿನಲ್ಲಿರುವ ಯತಿ, ಯೋಗಿ, ಉಪಾಸಕ, ಉಪಾಸಕಿ ಗುಂಪಿಗೆ ಸೇರಿದ ಶಿಲ್ಪಗಳ ಶೈಲಿ–ಭಂಗಿ–ಕಾಲಮಾನ ಮೂರರಲ್ಲೂ ವ್ಯತ್ಯಾಸವಿದ್ದರೂ ಕಟ್ಟಿದ ರುದ್ರಾಕ್ಷಿಹಾರದಿಂದ ಅವರು ಶೈವರೆಂದೂ ಅವುಗಳು ಶೈವರ ಮುನಿ-ಭಕ್ತರ ಕೇಂದ್ರಗಳಾಗಿದ್ದವೆಂದೂ ತಿಳಿಯುವುದು. ಈ ಹಿಂದೆ ಸಿಂದಗಿಯ ಶಿಲ್ಪಗಳು ಪ್ರಥಮಬಾರಿಗೆ ಕನ್ನಡ ಸಂಶೋಧನ ಸಂಸ್ಥೆಯ ಪ್ರಾಗ್ರೆಸ್ ರಿಪೋರ್ಟ್ಸ್, ೧೯೫೩–೫೬, ಪುಟ ೧೫ರಲ್ಲಿ ವರದಿಯಾಗಿದ್ದವು. ಅವುಗಳ ಅಂಗವಿನ್ಯಾಸ, ಕಾಲಮಾನ, ವಸ್ತ್ರಾಭರಣ ಮೊದಲಾದುವನ್ನು ಡಾ॥ ಅ. ಸುಂದರ ಅವರು ಅಧ್ಯಯನಮಾಡಿ ೧೯೭೩ರಲ್ಲಿ 'ಸಿಂದಗಿಯ ಪ್ರಾಚೀನ ಶಿಲಾಮೂರ್ತಿಗಳು' ಎಂಬ ಲೇಖನ ಬರೆದು ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ'(ಸಂಪುಟ ೬. ಸಂಚಿಕೆ ೨, ಪು.೧೧೫-೧೨೮)ಯಲ್ಲಿ ಪ್ರಕಟ ಮಾಡಿದ್ದರು. ನಾನು ಈ ಭಾಗದಲ್ಲಿ ಅನ್ವೇಷಣೆ ಕೈಕೊಂಡಾಗ ಸಿಂದಗಿಯ ಸಂಗಮೇಶ್ವರ ದೇವಾಲಯದ ಹೊರಗೆ ಅಪ್ರಕಟಿತ ಮೂರು ಮಹತ್ವದ ಶಿಲ್ಪಗಳು ಕಂಡುಬಂದವು. ಅದರಲ್ಲಿ ತೋಂಟದ ಸಿದ್ಧಲಿಂಗಯತಿಯ ಉಬ್ಬುಶಿಲ್ಪ ಒಂದು ಬೃಹತ್‌ಪೀಠದಲ್ಲಿ ಪ್ರಥಮವಾಗಿ ಕಂಡುಬಂದಿತು (ಚಿತ್ರ–೧). ಅದರ ಅಧ್ಯಯನವನ್ನು ಇಲ್ಲಿ ಕೈಕೊಳ್ಳಲಾಗಿದೆ.

ಶಿಲ್ಪ : ಒಂದು ಬೃಹತ್‌ಪೀಠಕ್ಕೆ ಜಲಧಾರಿ ಮತ್ತು ಮಧ್ಯಮೂರ್ತಿಯನ್ನು ಕೂಡಿಸಲು ಮಾಡಿದ ಒಂದು ರಂಧ್ರ ಮೇಲ್ಭಾಗದಲ್ಲಿದೆ. ಮುಂದಿನ ಚೌರಸ ಮೈಯಲ್ಲಿ ಕೆಲವು ಚಿತ್ರಗಳಿವೆ. ಆದರೆ ರಂಧ್ರದಲ್ಲಿ ಕೂಡಿಸಿದ್ದ ಶಿಲ್ಪ ಈಗ ಇರುವುದಿಲ್ಲ. ಅದರ ಚೌರಸದಲ್ಲಿರುವ ಚಿತ್ರಗಳಿಗೆ ಪೌರಾಣಿಕ ಐತಿಹ್ಯವಿದ್ದಂತೆ ಕಾಣುತ್ತದೆ. ಸುತ್ತಲೂ ಪಟ್ಟಿಕೆಯಿದ್ದು, ಕೆಳಗಡೆ ಸ್ವಲ್ಪ ಭಾಗದವರೆಗೆ ನಯಮಾಡಲಾಗಿದೆ. ಉಳಿದ ಕೆಳಗಿನ ಭಾಗ ಹೆಚ್ಚು ಒರಟಾಗಿರುವುದು. ಆ ಪೀಠವನ್ನು ಕೂಡಿಸಿದಾಗ ಒರಟಾದ ಭಾಗ ಮಾತ್ರ ನೆಲದಲ್ಲಿ ಮುಚ್ಚಿಹೋಗುವುದರಿಂದ ಅದನ್ನು ಅಷ್ಟೊಂದು ನಯ ಮಾಡದಿರುವುದು ಗೊತ್ತಾಗುತ್ತದೆ.

ಚಿತ್ರಗಳು: ಯತಿ–ಹಸು : ಚಿತ್ರಫಲಕದಲ್ಲಿ ಒಬ್ಬ ಯೋಗಿಯು ಒಂದು ಹಸುವಿನ ನಾಲ್ಕು ಕಾಲುಗಳ ಕೆಳಗಡೆ ಯೋಗಮುದ್ರೆಯಲ್ಲಿ ಕುಳಿತಿರುವನು. ಕೈಗಳು ಯೋಗಮುದ್ರೆಯಲ್ಲಿವೆ. ರುದ್ರಾಕ್ಷಿ ಸರಗಳನ್ನು ತಲೆಗೆ, ಕೊರಳಿಗೆ(೨), ತೋಳುಗಳಿಗೆ ಮತ್ತು ಕಾಲುಗಳಿಗೆ ಕಟ್ಟಲಾಗಿದೆ. ತಲೆಗೆ ಜಟಾಮುಕುಟವಿದ್ದು ಓಲೆಗಳನ್ನು ಕಿವಿಗಳಲ್ಲಿ ಧರಿಸಲಾಗಿದೆ. ನಿಂತ ಹಸುವಿನ ಚಪ್ಪೆಭಾಗ ಅದರ ಬದಿಯ ಒಬ್ಬ ವ್ಯಕ್ತಿಯ ತೋಳು,ಸೊಂಟದಿಂದ ಕಾಲುಗಳ ಭಾಗ ಒಡೆದಿದೆ. ಹಸುವಿನ ಕೆಚ್ಚಲನ್ನು ಯತಿಯು ಬಲಗಡೆ ತಲೆ ಪಕ್ಕದಲ್ಲಿ ತೋರಿಸಿದ್ದು ಗಂಟೆಯ ಸರ ಕೊರಳಲ್ಲಿ ಕಟ್ಟಲಾಗಿದೆ. ಮತ್ತು ಚಿಕ್ಕ ಚೂಪಾದ ಕೋಡುಗಳಿದ್ದು, ಅವುಗಳ ಕೆಳಗೆ ಗೆಜ್ಜೆಯ ಸರವನ್ನು ಬಿಗಿಯಾಗಿ ಕಟ್ಟಲಾಗಿದೆ. ನಿಂತ ಹಸುವಿನ ಮುಂದಿನ ಮತ್ತು ಹಿಂದಿನ ಕಾಲುಗಳ ಮಧ್ಯೆ ಕುಳಿತ ಯತಿಯು ತಪವನ್ನಾಚರಿಸುವುದು ತಿಳಿಯುತ್ತದೆ. ಮತ್ತು ಹಸುವು ಯತಿವರ್ಯರಿಗೆ ಹಾಲು ಕರೆಯುತ್ತಿರುವುದನ್ನು ಸಾಂಕೇತಿಕವಾಗಿ ತೋರಿಸಿದಂತೆ ಕಾಣುತ್ತದೆ.

ಕಬ್ಬಿನಕೋಲು : ಹಸುವಿನ ಬಾಲದಕಡೆ ನಿಂತ ಒಂದು ಕೋಲು ಮತ್ತು ಅದರ ನಾಲ್ಕೈದು ಉದ್ದವಾದ ಎಲೆಗಳು ಇವಲ್ಲದೆ ಆ ಕೋಲಿನಲ್ಲಿ ಚಿಕ್ಕ ಚಿಕ್ಕ ಗೆಣ್ಣುಗಳನ್ನು ಪ್ರತ್ಯೇಕಿಸಿರುವುದರಿಂದ ಅದು ಒಂದು ಕಬ್ಬಿನ ಕೋಲೆಂದು ಮತ್ತು ಅದು ಕಬ್ಬಿನತೋಟವನ್ನು ಸಾಂಕೇತಿಕವಾಗಿ ಸೂಚಿಸಿದಂತೆ ಕಾಣುವುದು.

ಇಬ್ಬರು ಭಕ್ತರು : ಕಬ್ಬಿನಕೋಲಿನ ಬದಿಗೆ ನಿಂತ ಇಬ್ಬರು ಭಕ್ತರಿದ್ದು ಅವರು ಯತಿಯ ಕಡೆ ಮುಖ ಮಾಡಿರುವರು. ಅವರಲ್ಲಿ ಒಬ್ಬನ ಕೈಗಳನ್ನು ಮುಂದೆ ಚಾಚಿ ಬೊಗಸೆಯಲ್ಲಿ ಯಾವುದೋ ಒಂದು ವಸ್ತುವನ್ನು ಹಿಡಿದು ನಿಂತಿರುವನು. ಅವನು ತನ್ನ ತಲೆಯ ಉಂಗುರ ಕೂದಲನ್ನು ಹಿಂದಕ್ಕೆ ಎಳೆದು ಸಿಂಬೆಯಾಕಾರದಲ್ಲಿ ಅಲಂಕಾರ ಮಾಡಿಕೊಂಡು ಸುತ್ತಿ ತುರುಬನ್ನು ಬಿಗಿಯಾಗಿ ಕಟ್ಟಿರುವನು. ಕೈಗೆ ರುದ್ರಾಕ್ಷಿಹಾರ ಮತ್ತು ಸೊಂಟಕ್ಕೆ ವಸ್ತ್ರವನ್ನು ಬಿಗಿಯಾಗಿ ತನ್ನ ಮಂಡೆಯ ಮೇಲ್ಭಾಗದವರೆಗೆ ಸುತ್ತಿ ಕಟ್ಟಿಕೊಂಡಿರುವನು. ಅವನ ಹಿಂದೆ ಮತ್ತೊಬ್ಬನು ಮುಂದೆ ಚಾಚಿದ ಕೈಗಳಲ್ಲಿ ಒಂದು ದುಂಡುತಟ್ಟೆಯಿದೆ, ಅವನ ತಲೆಯ ಕೂದಲನ್ನು ಹಿಂದಕ್ಕೆ ಸ್ವಲ್ಪ ಕೆಳಗಿಳಿಸಿ ಸಣ್ಣ ತುರುಬನ್ನು ಕಟ್ಟಿದ್ದು ಓಲೆಗಳನ್ನು ಕಿವಿಗಳಲ್ಲಿ, ಸರವನ್ನು ಕೊರಳಲ್ಲಿ ಧರಿಸಿ ಸೊಂಟಕ್ಕೆ ವಸ್ತ್ರವನ್ನು ಬಿಗಿದಿರುವನು. ಸೊಂಟಕ್ಕೆ ಕಟ್ಟಿದ ವಸ್ತ್ರದ ನೆರಿಗೆ ಪಟ್ಟಿಯನ್ನು ಮುಂದೆ ಮಂಡೆಯ ಕೆಳಭಾಗದವರೆಗೆ ಇಳಿಬಿಟ್ಟಿರುವನು. ಕೈಗೆ ರುದ್ರಾಕ್ಷಿ ಹಾರವನ್ನು ಕಟ್ಟಲಾಗಿದೆ. ಈ ಇಬ್ಬರು ಭಕ್ತರು ನಿಂತ ಭಂಗಿಯು ಅತ್ಯಂತ ಭಕ್ತಿಯಿಂದ ಯತಿವರ್ಯನು ಎಡೆಯನ್ನು ಸ್ವೀಕರಿಸಲು ವಿನಂತಿ ಮಾಡಿಕೊಳ್ಳುವುದು ಕಾಣುತ್ತದೆ. ಇಬ್ಬರ ಎತ್ತರದಲ್ಲಿ ವ್ಯತ್ಯಾಸವಿದೆ.

ದಂಪತಿ-ಸೇವಕರು : ಹಸುವಿನ ಕೊರಳ ಹಗ್ಗವನ್ನು ಬಲಗೈಯಲ್ಲಿ ಹಿಡಿದು ನಿಂತ ವ್ಯಕ್ತಿಯಿದ್ದಾನೆ. ಅವನ ಹಿಂದೆ ಇಬ್ಬರು ದಂಪತಿಗಳಿದ್ದಾರೆ. ಹಸುವಿನ ಕೊರಳ ಹಗ್ಗವಿಡಿದು ನಿಂತ ವ್ಯಕ್ತಿಯ ಎಡಗೈಯಲ್ಲಿ ಚಿಕ್ಕದಾದ ದಪ್ಪ ಕೋಲಿದೆ. ಬಹುಶಃ ಅದು ಮೋಳಿಯಿರಬಹುದು. ತುಂಬಿದ ಹುಡಿಯನ್ನು ಸೊಂಟಕ್ಕೆ ಕಟ್ಟಿರುವನು. ತಲೆ ಚಪ್ಪಟೆಯಾಗಿದ್ದು ಕೂದಲನ್ನು ಬದಿಗೆ ಬಾಚಿರುವನು. ಕೈಗಳಿಗೆ ರುದ್ರಾಕ್ಷಿಹಾರ ಕಟ್ಟಿರುವನು. ಬಿಗಿಯಾಗಿ ಸೊಂಟಕ್ಕೆ ಮಂಡೆಯ ಮೇಲ್ಭಾಗದವರೆಗೆ ವಸ್ತ್ರವನ್ನು ಸುತ್ತಿಕಟ್ಟಿರುವನು. ಎಡಗೈಯಲ್ಲಿ ಮೋಳಿ ಬಲಗೈಯಲ್ಲಿ ಹಸುವಿನ ಕೊರಳಹಗ್ಗ ಹಿಡಿದು ಸೊಂಟದಲ್ಲಿ ತುಂಬಿದ ಹುಡಿ ಕಟ್ಟಿಕೊಂಡು ಹೊತ್ತಿರುವ ಈ ವ್ಯಕ್ತಿಯು ಬದಿಯಲ್ಲಿಯ ದಂಪತಿಗಳ ಸೇವಕನಿರಬೇಕು.

ಅವನ ಬದಿಯಲ್ಲಿ ನಿಂತ ದಂಪತಿಗಳೂ ಯತಿವರ್ಯನ ಕಡೆ ಮುಖಮಾಡಿ ನಿಂತಿರುವರು.ಹೆಂಡತಿಯು

ತನ್ನ ತಲೆಯಮೇಲೆ ಕೊಡ ಹೊತ್ತು, ಅದನ್ನು ಬಲಗೈಯಲ್ಲಿ ಹಿಡಿದಿರುವಳು ಮತ್ತು ಆಕೆಯು ಎಡಗೈಯನ್ನೂ ಕೆಳಗೆ ಇಳಿಬಿಟ್ಟಿರುವಳು. ತಲೆಯ ಕೂದಲನ್ನು ಹಿಂದಕ್ಕೆ ಎಳೆದು ಸಿಂಬೆಯಂತೆ ಸುತ್ತಿ ತುರುಬನ್ನು ಕಟ್ಟಿರುವಳು. ಸೊಂಟಕ್ಕೆ ಬಿಗಿಯಾಗಿ ಸೀರೆಯನ್ನು ಕಾಲುಗಳ ಮೇಲಿನ ತನಕ ಸುತ್ತಿ ಉಟ್ಟಿರುವಳು. ಸೀರೆಯ ಸೆರಗಿನ ಅಲ್ಪ ಭಾಗವನ್ನು ಹಿಂಬದಿಯಲ್ಲಿ ಮಂಡೆಯ ತನಕ ತೋರಿಸಲಾಗಿದೆ. ಕೈಗಳಿಗೆ ರುದ್ರಾಕ್ಷಿಹಾರ ಕಟ್ಟಿರುವಳು. ಅವಳ ಹಿಂದೆ ಆಕೆಯ ಗಂಡನು ಕೈಮುಗಿದು ಭಕ್ತಿಯಿಂದ ನಿಂತಿರುವನು. ಇವನ ಎತ್ತರ ಹೆಂಡತಿ ಮತ್ತು ಅವರ ಸೇವಕನಿಗಿಂತ ಹೆಚ್ಚಿಗಿರುವುದು. ಸೊಂಟಕ್ಕೆ ಪಂಚೆಯನ್ನು ಕಟ್ಟಿರುವನು. ಪಂಚೆಯ ನೆರಿಗೆಯನ್ನು ಮುಂಬದಿಗೆ ಮಂಡೆಯ ಕೆಳಗಿನವರೆಗೆ ಇಳಿಬಿಟ್ಟುಕೊಂಡಿರುವನು. ಕೈಗಳಿಗೆ ರುದ್ರಾಕ್ಷಿಹಾರಗಳನ್ನು ಕಟ್ಟಿರುವನು.

ಈ ವಿವರಗಳಿಂದ ಯತಿಯು ಒಂದು ಕಬ್ಬಿನ ತೋಟದಲ್ಲಿ ತಪಸ್ಸಿಗೆ ಕುಳಿತಿರುವುದು, ಆ ಯತಿಗೆ ಹಸುವು ಹಾಲನ್ನು ಕರೆಯುವುದು, ಭಕ್ತಾದಿಗಳು ಎರಡು ಸನ್ನಿವೇಶದಲ್ಲಿ ಯತಿಯ ದರ್ಶನ ಎರಡು ಕಾರಣಕ್ಕಾಗಿ ಪಡೆದುದು ಗೋಚರಿಸುವುದು. ರುದ್ರಾಕ್ಷಿಹಾರವನ್ನು ಯತಿ ಮತ್ತು ಭಕ್ತಾದಿಗಳು ಕಟ್ಟಿಕೊಂಡಿರುವುದರಿಂದ ಅವರು ಶೈವರೆಂದು ತಿಳಿಯುವುದು. ಈ ಸನ್ನಿವೇಶವು ಪುರಾಣದಲ್ಲಿ ಕಾಣುವ ಒಬ್ಬ ಶೈವ ಮಹಿಮಾವಂತನ ಶಿಲ್ಪವೆಂದು ಊಹಿಸಬಹುದಾಗಿದೆ. ಹಾಗಾದರೆ ಆ ಮಹಿಮಾವಂತನು ಯಾರು ? ಶಿಲ್ಪದಲ್ಲಿ ಕಾಣುವ ಸನ್ನಿವೇಶಗಳು ಯಾವ ಯತಿಯ ಕಥೆಯಲ್ಲಿ ಕಾಣುವವು ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ತಪಸ್ಸನ್ನಾಚರಿಸುವ ಯತಿಯ ಸುತ್ತ ಹುತ್ತ ಬೆಳೆಯುವುದು, ಹಸು ಯತಿಗೆ ಹಾಲುಹಿಂಡುವುದು ಇತ್ಯಾದಿ ವಿವಿಧ ಧರ್ಮದ ಪುರಾಣ, ಇತ್ಯಾದಿಗಳಲ್ಲಿ ಕಾಣುತ್ತವೆ. ಶಿಲ್ಪದಲ್ಲಿ ಕಾಣುವ ಸನ್ನಿವೇಶ ಮತ್ತು ಯತಿ-ಭಕ್ತವೃಂದ ಶೈವರಾಗಿರುವುದರಿಂದ ಈ ವಿವರಣೆಯನ್ನು ಶೈವ ಧರ್ಮದ ಕಥೆಗಳಲ್ಲಿ ನೋಡಬೇಕಾಗುತ್ತದೆ. ಅದು ಡಾ॥ ಆರ್.ಸಿ. ಹಿರೇಮಠ ಅವರು ಸಂಪಾದಿಸಿದ 'ಶ್ರೀ ಜಗದ್ಗುರು ತೋಂಟದ ಸಿದ್ಧಲಿಂಗ ಶಿವಯೋಗಿಗಳ ಷಟ್ಸ್ಥಲ ಜ್ಞಾನಸಾರಾಮೃತ'(ಧಾರವಾಡ, ೧೯೬೪)ದಲ್ಲಿದೆ. ಅದರಲ್ಲಿ ಮತ್ತು ಶಿಲ್ಪದಲ್ಲಿ ಕಾಣುವ ಒಂದೇ ಸನ್ನಿವೇಶದ ಸ್ಥೂಲ ವಿವರವನ್ನು ಈ ಕೆಳಗಿನ ವಿವರದಲ್ಲಿ ಕಾಣಬಹುದು.

ಮೇಲೆ ಪ್ರಸ್ತಾಪಿಸಿದ ಪುರಾಣದಲ್ಲಿ, ತೋಂಟದ ಶ್ರೀ ಸಿದ್ಧಲಿಂಗಯತಿಗಳು ದೇಶಸಂಚಾರ ಮಾಡುತ್ತಾ ಕೊನೆಗೆ ಮೈಸೂರುಮಂಡಲದ ಸಿದ್ಧಗಂಗಾಕ್ಷೇತ್ರಕ್ಕೆ ಬರುತ್ತಾರೆ. ಸಿದ್ಧಗಂಗಾದಿಂದ ಕಗ್ಗೆರೆಗೆ ಅಭಿಮುಖವಾಗಿರಲು ಆ ಊರ(ಗೊಲ್ಲರ) ನಂಬೆಣ್ಣನೆಂಬ ಭಕ್ತ, ಗಿರಿಗೌಡನೆಂಬ ಆ ಊರಗೌಡ ಮೊದಲಾದವರು ಸಿದ್ಧಲಿಂಗಯತಿಗಳನ್ನು ಕಗ್ಗೆರೆಗೆ ಕರೆದುಕೊಂಡು ಹೋಗುವ ಸಮಯದಲ್ಲಿ ಊರ ನೆರೆಯ ಉಪವನದಲ್ಲಿಯೇ ಒಂದು ಮಾಮರದ ಕೆಳಗೆ ಗದ್ದುಗೆಯನ್ನು ಹಾಕಿ ಅವರನ್ನು ಕುಳ್ಳಿರಿಸುವರು. ಅಷ್ಟರಲ್ಲಿ ಕೆಂಚ, ದೊಡ್ಡ ಎಂಬ ಶಬರರು ಕಗ್ಗೆರೆಯ ಮೇಲೆ ಭೀಕರ ದಾಳಿ ಮಾಡಿದರು. ವಾಲ್ಮೀಕಿ ಕುಲದರಸನಾದ ರತ್ನಗಿರಿಯ ದೊರೆಯು (ನಿರಂಜನ ವಂಶರತ್ನಾಕರ, ಪು. ೪೬),ಅಲ್ಲಿಯ ಜನ ಚದುರಿಹೋಗಿ ನಿಡುಗಲ್ಲದರಸರ ಸಹಾಯವನ್ನು ಪಡೆದರು. ನಂಬೆಣ್ಣ ಮೊದಲಾದವರ ಭಕ್ತಿಯ ಔತಣವನ್ನು ಸ್ವೀಕರಿಸಿದ ಸಿದ್ಧಲಿಂಗ ಶಿವಯೋಗಿಗಳು ಆ ಮಾಮಗದಡಿಯಲ್ಲಿಯೇ ಶಿವಯೋಗ ನಿದ್ರಾಮುದ್ರಿತರಾದರು. ಹೀಗೆ ಆರು ತಿಂಗಳವರೆಗೆ ಶಿವಯೋಗಾನುಷ್ಠಾನದಲ್ಲಿರಲು ಅವರ ದೇಹದ ಸುತ್ತ ಹುತ್ತ ಬೆಳೆಯಿತು. ಆರುತಿಂಗಳು ಕಳೆದ ಮೇಲೆ ಕಗ್ಗೆರೆಯ ಗೌಡರು ಶಬರಾಧಿನಾಥನ ನಂಬುಗೆ ಪಡೆದು ಪುನಃ ಕಗ್ಗೆರೆಯನ್ನು ಕಟ್ಟಿಸಿ ನಂಬೆಣ್ಣ ಮೊದಲಾದ ಭಕ್ತರನ್ನು ಅಲ್ಲಿಗೆ ಕಳಿಸುವರು. ಭಕ್ತಜನರೆಲ್ಲರೂ ಅಲ್ಲಿಗೆ ಬಂದು ಹುತ್ತಿನಲ್ಲಿ ಕುಳಿತಿದ್ದ ಶಿವಯೋಗಿಗಳನ್ನು ಕಂಡು ಪ್ರಾರ್ಥಿಸುವರು. ಅವರ ಭಕ್ತಿಯನ್ನು ಸ್ವೀಕರಿಸಬೇಕೆಂದು ಶಿವಯೋಗಿಗಳು ಯೋಗದಿಂದ ಎಚ್ಚೆತ್ತು ಕಗ್ಗೆರೆಯನ್ನು ಪ್ರವೇಶಿಸುವರು.

ದಂತಕಥೆಯ ಪ್ರಕಾರ, ನಂಬೆಣ್ಣನ ಹಸುವು ಪ್ರತಿದಿನ ಯಥಾಪ್ರಕಾರ ಇನ್ನಿತರ ಹಸುಗಳ ಸಂಗಡ ಮೇಯ್ದು ಸಂಜೆ ಮನೆಗೆ ಬರುತ್ತಿತ್ತು. ಕೆಲವು ದಿವಸ ಅದು ಸಂಜೆಹೊತ್ತಿನಲ್ಲಿ ಹಾಲು ಕರೆಯಲಿಲ್ಲ. ಏಕೆ ಹಸುವು ಈ ರೀತಿ ಸಂಜೆ ಹಾಲು ಕರೆಯುತ್ತಿಲ್ಲ ? ಕಾರಣವೇನು ? ಇದನ್ನು ಪರೀಕ್ಷಿಸಬೇಕೆಂದು ಆತನು ಒಂದು ದಿನ ನಿರ್ಧರಿಸಿದ. ಹಸುಗಳು ಮನೆಗೆ ಮರಳಿ ಸಂಜೆ

ಹೊತ್ತಿಗೆ ಬರುವುದನ್ನು ಗೊಲ್ಲರ ನಂಬೆಣ್ಣ ಕಾಯು ಹತ್ತಿದ. ತನ್ನ ಹಸು ಇನ್ನಿತರ ಹಸುಗಳ ಸಂಗಡ ಬಾರದಿರುವುದನ್ನು ಅರಿತು ಅದನ್ನು ಹುಡುಕಲು ಹೋದ. ಅಂದು ಹಸುವು ಹುತ್ತದ ಮೇಲೆ ನಿಂತು ಹಾಲುಕರೆಯುವುದನ್ನು ಕಂಡು ಚಕಿತನಾದ. ಹುತ್ತಿನಲ್ಲಿ ಶ್ರೀ ಸಿದ್ಧಲಿಂಗ ಯತಿಗಳು ಕುಳಿತಿದ್ದುದನ್ನು ತದನಂತರ ಮನಗಂಡು ಆಶ್ಚರ್ಯಭರಿತನಾದ. ಕಗ್ಗೆರೆಯಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಕಬ್ಬಿನತೋಟದಲ್ಲಿ ಬೀಡು ಬಿಟ್ಟು ತಪಸ್ಸನ್ನಾಚರಿಸಿದ ಸ್ಥಳವನ್ನು ಜನರು ಇಂದಿಗೂ ತೋರಿಸುತ್ತಾರೆ.

ಈ ಮೇಲಿನ ನಿರೂಪಣೆಯು ಶಿಲ್ಪದ ಚಿತ್ರಗಳಲ್ಲಿ ಕಾಣುವುದು. ಕೇಂದ್ರವ್ಯಕ್ತಿ–ಯತಿಯು–ಶ್ರೀ ಸಿದ್ಧಲಿಂಗ ಸ್ವಾಮಿಗಳು. ಹಸುವಿನ ಬಾಲದ ಬದಿಗೆ ಇಬ್ಬರು ನಿಂತ ವ್ಯಕ್ತಿಗಳ ಸಂದರ್ಭವು ಈ ಮೇಲೆ ತಿಳಿಸಿದ ಕಥೆಯಲ್ಲಿ ಕಾಣುವ ನಂಬೆಣ್ಣ ಮೊದಲಾದವರ ಭಕ್ತಿಯ ಔತಣವನ್ನು ಸ್ವೀಕರಿಸಿದ ಸಂದರ್ಭವಿರಬೇಕು. ಕಬ್ಬಿನಕೋಲು ಯತಿಯು ಕಬ್ಬಿನತೋಟದಲ್ಲಿ ತಪಸ್ಸನ್ನಾಚರಿಸಿದ ನಿರೂಪಣೆಯನ್ನು ನೀಡುವುದು. ಹಸುವಿನ ಕಾಲುಗಳ ಮಧ್ಯೆ ಯತಿಯು ತಪಸ್ಸನ್ನಾಚರಿಸುವುದು, ಹಸುವಿನ ಕೆಚ್ಚಲು ಬದಿಗೆ ತೋರಿಸಿರುವುದು, ಒಬ್ಬ ವ್ಯಕ್ತಿ ಹಸುವಿನ ಕೊರಳ ಹಗ್ಗ ಹಿಡಿದು ನಿಂತಿರುವುದು ಮತ್ತು ಬದಿಯಲ್ಲಿ ನಿಂತ ದಂಪತಿಗಳ ಸನ್ನಿವೇಶವು ಹಸುವಿನ ಪರೀಕ್ಷೆಗೈದ ಗೊಲ್ಲರ ನಂಬೆಣ್ಣನ ಸಂದರ್ಭ ತಿಳಿಸುವುದು. ಆದುದರಿಂದ ಈ ಶಿಲ್ಪವು ತೋಂಟದ ಶ್ರೀ ಸಿದ್ಧಲಿಂಗ ಶಿವಯೋಗಿಯದೆಂದು ಹೇಳಬಹುದು. ಈ ಚಿತ್ರವುಳ್ಳ ಪೀಠದ ಮೇಲೆ ಕುಳ್ಳಿರಿಸಿದ ಮೂರ್ತಿಯೂ ಶ್ರೀ ಸಿದ್ಧಲಿಂಗ ಯತಿಗಳದ್ದಾಗಿರಬೇಕು. ಅದು ಹೇಗಿದೆ, ಎಲ್ಲಿದೆ ಎಂಬ ಸಂಶಯಗಳು ತಲೆದೋರುತ್ತವೆ.

ಈ ಶಿಲ್ಪದ ಬದಿಗೆ ಒಂದು ಒಡೆದ ಬೃಹತ್ ನಂದಿಯ ವಿಗ್ರಹವಿದೆ. ಅದರ ಕೊರಳು ಮತ್ತು ಮುಂದಿನ ಕಾಲುಗಳ ಮುಂದೆ ಪದ್ಮಾಸನದಲ್ಲಿ ಕುಳಿತ ಒಬ್ಬ ಯತಿಯ ಶಿಲ್ಪವಿರುವುದು ವಿಶೇಷವಾಗಿದೆ (ಚಿತ್ರ-೨). ಇನ್ನೊಂದು ಶಿಲ್ಪಫಲಕದ ಮೇಲೆ ನಾಲ್ಕು ಮೂಲೆಗಳಲ್ಲಿ ನಾಲ್ಕು ಆಕಳು ಕಾಲುಗಳ ಮುದ್ರೆಗಳಿದ್ದು ಮಧ್ಯ ಚೌರಸಾಕಾರದ ತೊಟ್ಟಿಯಿರುವುದು ವಿಶೇಷವಾಗಿದೆ. (ಚಿತ್ರ-೩). ಇದಲ್ಲದೆ ಬದಿಯ ಶ್ರೀ ಸಂಗಮೇಶ್ವರ ದೇವಾಲಯದ ಒಳಗಡೆ ವಿವಿಧ ನಮೂನೆಯ ಶಿವಲಿಂಗಗಳು, ನಿಂತ ಮತ್ತು ಕುಳಿತ ಭೈರವ ವಿಗ್ರಹಗಳು, ದೇವಿ ಮೂರ್ತಿಗಳಲ್ಲದೆ ಹಲವಾರು ನಮೂನೆಯ ಯೋಗಿನಿಗಳು ಮತ್ತು ಯೋಗಿಗಳು—ಒಂದರಲ್ಲಿ ಮೂರು, ಮತ್ತೊಂದರಲ್ಲಿ ಎಂಟು, ಇನ್ನೊಂದರಲ್ಲಿ ಒಂದು, ಉಪಾಸಕ–ಭಕ್ತರ ಶಿಲ್ಪ ಇತ್ಯಾದಿ ದುಂಡು ಮತ್ತು ಉಬ್ಬು ಶಿಲ್ಪಗಳಲ್ಲಿವೆ. ಒಂದೇಸಾಲಿನಲ್ಲಿ ರುದ್ರಾಕ್ಷಿಸರ ಅಲಂಕಾರದ ಮೂವತ್ತಾರು ಲಿಂಗಗಳು ಒಂದೆಡೆ,. ಉಳಿದವುಗಳಲ್ಲಿ ಒಂದಕ್ಕೆ ನಾಲ್ಕುನೂರ ಇಪ್ಪತ್ತೊಂಭತ್ತು ಚಿಕ್ಕ ಚಿಕ್ಕ ಲಿಂಗಗಳನ್ನು ರೇಖೆಯಲ್ಲಿ ತೋರಿಸಲಾಗಿದೆ. ಇಂತಹ ಶೈವ ದೇವಸ್ಥಾನದಲ್ಲಿ ಭೈರವ ಮತ್ತು ದೇವಿಮೂರ್ತಿಗಳ ಸಂಗಡ ಶೈವ ಉಪಾಸಕ, ಯೋಗಿ, ಯೋಗಿನಿ, ಭಕ್ತ, ಇತ್ಯಾದಿ ಶಿಲ್ಪಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದಿರುವುದರಿಂದ ಅದೊಂದು ಶೈವ–ಶಾಕ್ತ ಸಂಪ್ರದಾಯಗಳ ಕೇಂದ್ರವೆಂದೂ ಹಲವಾರುಗಳು ವಿಜಯನಗರ ಕಾಲದವೆಂದೂ ಡಾ॥ ಅ. ಸುಂದರ ಅವರು ಅಭಿಪ್ರಾಯಪಟ್ಟಿರುವರು.

ಈ ಮೂರ್ತಿಗಳಲ್ಲಿ ಒಬ್ಬ ಯೋಗಿಯ (ಒಡೆದ) ದುಂಡುವಿಗ್ರಹಕ್ಕೆ ಗಡ್ಡ, ಮೀಸೆ, ಇತ್ಯಾದಿಗಳಿದ್ದು ಲಂಗೋಟಿಯನ್ನು ತೊಡಿಸಲಾಗಿದೆ. ಆ ವಿಗ್ರಹ ದರ್ಶನವು ಭಯಭಕ್ತಿಯನ್ನುಂಟು ಮಾಡುವ ಹಾಗಿದೆ ಎಂದು ಡಾ॥ ಸುಂದರ ಅವರು ಅಭಿಪ್ರಾಯಪಟ್ಟಿರುವರು. ಬಹುಶ: ಈ ವಿಗ್ರಹವೇ ಸಿದ್ಧಲಿಂಗಮೂರ್ತಿಯಿರಬಹುದು. ಅವುಗಳಲ್ಲಿ ಒಂದು ದಂಪತಿಗಳ ಕೈಯಲ್ಲಿ ಇಷ್ಟಲಿಂಗ ಹಿಡಿದ ಶಿಲ್ಪವಿದೆ. ಇನ್ನೊಂದಕ್ಕೆ ಅಪರೂಪವಾಗಿ ಕೃಷ್ಣನ ಮೂರ್ತಿಯ ಕಿರೀಟದಲ್ಲಿ ಸಣ್ಣ ಲಿಂಗವನ್ನು ತೋರಿಸಲಾಗಿದೆ. ಇದರಿಂದ ಡಾ॥ ಸುಂದರ ಅವರು ಈ ಪ್ರದೇಶದಲ್ಲಿ ಶ್ರೀವೈಷ್ಣವಧರ್ಮಕ್ಕೆ ಶೈವ ಧರ್ಮದ ಪ್ರಭಾವದ ಸಂಕೇತವಿರಬಹುದೆಂದಿದ್ದಾರೆ. ಈ ವಿಷಯದಿಂದ ವೀರಶೈವಧರ್ಮದ ಪ್ರಭಾವವು ವೈಷ್ಣವ ಧರ್ಮದ ಮೇಲೆ ಬಿದ್ದಿರಬೇಕು ಮತ್ತು ಅದು ಈ ಎರಡು ಪಂಗಡಗಳನ್ನು ಸಮಾಧಾನ ಪಡಿಸುವ ಒಂದು ಪ್ರಯೋಗವಾಗಿರಬೇಕು.

ತೋಂಟದ ಶ್ರೀ ಸಿದ್ಧಲಿಂಗೇಶ್ವರ ಶಿಲ್ಪವು

ಶೈಲಿಯ ದೃಷ್ಟಿಯಿಂದ ಕ್ರಿ. ಶ. ಸು. ೧೩-೧೪ನೆಯ ಶತಮಾನದ್ದು. ಸಾಹಿತ್ಯದ ಪ್ರಕಾರ, ವಿದ್ವಾಂಸರು, ತೋಂಟದ ಸಿದ್ಧಲಿಂಗಸ್ವಾಮಿಗಳ ಕಾಲಮಾನ ಕ್ರಿ. ಶ. ಸು. ೧೫ನೆಯ ಶತಮಾನದ್ದೆಂದು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಚೆನ್ನಬಸವಪುರಾಣ (೬೩, ೪೩, ೬೪), ಪ್ರೌಢದೇವರಾಯನ ಆಳ್ವಿಕೆಯ ಕಾಲ (ಕ್ರಿ. ಶ. ಸು. ೧೪೧೯_೪೯) ಮೊದಲಾದವುಗಳ ವಿವರವನ್ನು ನೀಡುವರು. ಡಾ॥ ಸುಂದರ ಅವರು ವಿಜಯನಗರದ ಕೆಲ ಅರಸರಲ್ಲಿ ವೀರಶೈವಧರ್ಮದ ಬೆಳವಣಿಗೆಗೆ ನೆರವಾದವರ ಮತ್ತು ಅವರು ನೀಡಿದ ಸಹಕಾರದ ಬಗೆಗೂ ಸೂಚಿಸಿರುವರು. ಆದರೆ ಈ ಭಾಗವು ವಿಜಯನಗರ ಅರಸರ ಆಳ್ವಿಕೆಯ ವ್ಯಾಪ್ತಿಯಲ್ಲಿ ಇದ್ದಿತ್ತೇ ? ಮತ್ತು ಹಿಂದೂ ಧರ್ಮದ ಬೆಳವಣಿಗೆಗೆ ಪುರಸ್ಕಾರ ದೊರೆತಿತ್ತೇ ? ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. (ನೋಡಿ: ಪಿ.ಬಿ. ದೇಸಾಯಿ : ಎ ಹಿಸ್ಟರಿ ಆಫ್ ಕರ್ನಾಟಕ, ಧಾರವಾಡ, ೧೯೭೦). ಸಮಂಜಸ ಆಧಾರಗಳು ದೊರೆಯುವವರೆಗೆ ಇದೊಂದು ಅಭಿಪ್ರಾಯವಾಗಿ ಉಳಿಯುವುದು.*

* ಕೃತಜ್ಞತೆಗಳು : ಅನ್ವೇಷಣೆಯ ಕಾರ್ಯ ಕೈಕೊಳ್ಳಲು ಪರವಾನಿಗೆ ನೀಡಿದವರು ಕರ್ನಾಟಕ ವಿಶ್ವವಿದ್ಯಾಲಯದ ಡಾ॥ ಜಿ. ಕೆ. ನಾರಾಯಣರೆಡ್ಡಿ, ಕುಲಪತಿಗಳು ಮತ್ತು ಡಾ॥ ಎ.ಎ. ಬಡಿಗೇರ, ಕುಲಸಚಿವರು. ನನ್ನ ಅಧ್ಯಯನದಲ್ಲಿ ಸಹಕರಿಸಿದವರು, ಬಸರಕೋಡ ಗ್ರಾಮದ ಮಂಡಳ ಪಂಚಾಯತಿ ಅಧ್ಯಕ್ಷರು ಮತ್ತು ಸಾರ್ವಜನಿಕರು. ಡಾ॥ ಸಾಲಿಮಠ, ಶ್ರೀ ಅಡಿಕೆಣ್ಣನವರ ಮತ್ತು ಶ್ರೀ ಹೊಸಮನಿ (ಸಿಂದಗಿ) ಅವರುಗಳು ಚಾನುಕೋಟಿಗೆ ಹೋಗುವಲ್ಲಿ ಸಹಕಾರ ನೀಡಿರುವರು. ಶ್ರೀ ಅಡಿಕೆಣ್ಣನವರು ಚಾನುಕೋಟಿಯ ದೇವಾಲಯ ಮತ್ತು ಶಾಸನಗಳನ್ನು ಅಭ್ಯಾಸ ಮಾಡಿ ವರದಿ ನೀಡಲು ಮೊದಲು ವಿನಂತಿಸಿದ್ದರು. ಅದೇ ರೀತಿ ಶ್ರೀ ಶರಣಪ್ಪ ಕಂಚಾಣಿಯವರು ಸರೂರಿನಲ್ಲಿ ದೊರೆತ ಹೊಸ ಶಾಸನವನ್ನು ಅಧ್ಯಯನ ಕೈಗೊಳ್ಳಲು ಡಾ॥ ಎಂ. ಎಂ. ಕಲ್ಬುರ್ಗಿಯವರಿಗೆ ಮೊದಲು ವಿನಂತಿಸಿದ್ದರು.ಡಾ॥ ಕಲ್ಬುರ್ಗಿಯವರು ಈ ಕಾರ್ಯ ಕೈಕೊಳ್ಳಲು ನಂತರ ಸೂಚಿಸಿದ್ದರು. ಇವರೆಲ್ಲರಿಗೂ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಕೆ. ಉಮಾದೇವಿ

ಅಹಲ್ಯಾ-ಇಂದ್ರ ಕಥೆಯನ್ನು ನಿರೂಪಿಸುವ ಪಟ್ಟದಕಲ್ಲಿನ ಕುತೂಹಲಕಾರಿ ಶಿಲ್ಪ

ಬಾದಾಮಿ ಚಾಲುಕ್ಯ ದೊರೆ ಇಮ್ಮಡಿ ವಿಕ್ರಮಾದಿತ್ಯನ ಆಡಳಿತಾವಧಿಯಲ್ಲಿ ನಿರ್ಮಾಣಗೊಂಡ ಪಟ್ಟದ ಕಲ್ಲಿನ (೭೩೩–೪೪) ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳ ಕಂಬಗಳು ರಾಮಾಯಣ, ಮಹಾಭಾರತ, ಪುರಾಣ, ಪಂಚತಂತ್ರ ಮುಂತಾದ ಕೃತಿಗಳನ್ನಾಧರಿಸಿದ ನಿರೂಪಣಾತ್ಮಕ ಕಥಾನಕ ಶಿಲ್ಪಗಳಿಂದ ಅಲಂಕಾರಗೊಂಡಿವೆಯೆಂಬುದು ಸರ್ವವಿದಿತ.[1] ಇವುಗಳಲ್ಲಿ ಅನೇಕ ಶಿಲ್ಪಗಳು ನಿರೂಪಿಸುವ ಕಥೆಗಳಾವವು ಎಂಬುದನ್ನು ಈಗಾಗಲೇ ನಿರ್ಧರಿಸಲಾಗಿದ್ದರೂ ಕೆಲವು ಗುರುತಿಸಲಾರದೇ ಉಳಿದುಕೊಂಡಿವೆ. ಕೆಲವು ಶಿಲ್ಪಗಳ ಕೆಳಗೆ ಕಥೆಗಳ ಪಾತ್ರಗಳನ್ನು ಶಾಸನಗಳಿಂದ ಸೂಚಿಸಲಾಗಿದೆ. ಅಂಥದೊಂದು ನಿರೂಪಣಾ ಶಿಲ್ಪ ಅಹಲ್ಯೆ ಮತ್ತು ಇಂದ್ರರನ್ನು ಕುರಿತದ್ದಾಗಿದೆ.

ಈ ಶಿಲ್ಪ ವಿರೂಪಾಕ್ಷ ದೇವಾಲಯದ ಸಭಾಮಂಟಪದ ವಾಯುವ್ಯ ಭಾಗದಲ್ಲಿರುವ ಎರಡನೇ ಕಂಬದ ದಕ್ಷಿಣ ಮತ್ತು ಪೂರ್ವ ಮುಖಗಳಲ್ಲಿ ಕಂಡು ಬರುತ್ತದೆ. ಅದರ ವಿವರವನ್ನು ಹೀಗೆ ಕೊಡಬಹುದು :

ಕಂಬದ ದಕ್ಷಿಣ ಮುಖ : (ಚಿತ್ರ-೧) (ನೋಡುವವರ ಎಡದಿಂದ ಬಲಕ್ಕೆ)–

೧. ಮೇಲ್ಭಾಗದ ಪಟ್ಟಿಕೆ : ತಿಲೋತ್ತಮೆ ಕುಳಿತಿದ್ದಾಳೆ ಹಾಗೂ ಇಂದ್ರ ಮತ್ತು ವಜ್ರ ಅವಳೆಡೆಗೆ ಸಾಗಿ ಬರುತ್ತಿದ್ದಾರೆ ; ತಿಲೋತ್ತಮೆ ತನ್ನ ಎಡಕ್ಕೆ ಸಾಗುತ್ತಿದ್ದಾಳೆ ; ತಿಲೋತ್ತಮೆ ಮತ್ತು ಅಹಲ್ಯೆ ಕಟ್ಟೆಯ ಮೇಲೆ ಮಾತನಾಡುತ್ತ ಕುಳಿತಿದ್ದಾರೆ.

೨. ಕೆಳಪಟ್ಟಿಕೆ : ಪರಿಚಾರಕರ ಮಧ್ಯೆ ಮನೆಯೊಂದರಲ್ಲಿ ಇಂದ್ರ-ವಜ್ರರು ಕುಳಿತಿದ್ದಾರೆ ; ತಿಲೋತ್ತಮೆ ಅವರೆಡೆಗೆ ಸಾಗಿಬರುತ್ತಿದ್ದಾಳೆ ; ಬಾಗಿಲು ಕಾಯುವ ವಿಶಿಷ್ಟ ರೀತಿಯ ವಸ್ತ್ರಧಾರಿಯಿದ್ದಾನೆ ; ತಿಲೋತ್ತಮೆ ಇಂದ್ರ-ವಜ್ರರೊಂದಿಗೆ ಮಾತನಾಡುತ್ತಿದ್ದಾಳೆ.

ಕಂಬದ ಪೂರ್ವ ಮುಖ : (ಚಿತ್ರ-೨)-

೧. ಮೇಲ್ಭಾಗದ ಪಟ್ಟಿಕೆ : ಅರ್ಧವೃತ್ತಾಕೃತಿಯಲ್ಲಿ ಋಷಿಗಳ ಸಹಿತ ಆಶ್ರಮ. ಇದರ ಕೆಳಗೆ ಪಟ್ಟಿಕೆಯಲ್ಲಿ ಮರದಡಿಯಲ್ಲಿ ಮಲಗಿ ವಿಶ್ರಮಿಸುತ್ತಿರುವ ಸ್ತ್ರೀ; ತನ್ನ ಎಡಬದಿಗೆ ಚಲಿಸುತ್ತಿರುವ ಸ್ತ್ರೀ ; ಅಲ್ಲಿ ಇಬ್ಬರು ವ್ಯಕ್ತಿಗಳು ಮಾತನಾಡುತ್ತ ಕುಳಿತಿದ್ದಾರೆ. ಇವರು ಋಷಿಗಳಂತೆ ಕಾಣುತ್ತಾರೆ.

೨. ಕೆಳಪಟ್ಟಿಕೆ : ಇಂದ್ರ ಮತ್ತು ತಿಲೋತ್ತಮೆ ಮಾತನಾಡಿಕೊಳ್ಳುತ್ತಿದ್ದಾರೆ ; ತಿಲೋತ್ತಮೆ ತನ್ನ

1 ರಾಮಾಯಣ ಮಹಾಭಾರತದ ಕಥೆಗಳಲ್ಲದೆ, ಭಾಗವತ ಪುರಾಣದಿಂದಾಯ್ದ, ಮುಖ್ಯವಾಗಿ ಕೃಷ್ಣಚರಿತೆಯ ನಿರೂಪಣಾತ್ಮಕ ಶಿಲ್ಪಪಟ್ಟಿಕೆಗಳು ಈ ಕಂಬಗಳ ಮೇಲೆ ಕಂಡುಬರುತ್ತವೆ. ಪಂಚತಂತ್ರದಿಂದಾಯ್ದ ಟಿಟ್ಟಿಭಸಮುದ್ರ ಕಥೆ, ಮಂಗ ಮತ್ತು ಕೀಲಿನ ಕಥೆ, ಮಂಗ ಮತ್ತು ಮೊಸಳೆಯ ಕಥೆ ಮುಂತಾದವೂ ಯಶೋಧರಚರಿತೆಯ ಕಥೆಯೂ ಈಗಾಗಲೇ ಗಮನಿಸಲ್ಪಟ್ಟಿವೆ.

ಎಡಕ್ಕೆ ಚಲಿಸುತ್ತಿದ್ದಾಳೆ ; ಇಂದ್ರ-ತಿಲೋತ್ತಮೆಯರು ಸಾಗುತ್ತಿದ್ದಾರೆ ; ಇಂದ್ರ-ಅಹಲ್ಯೆಯರು ಒಬ್ಬರ ನ್ನೊಬ್ಬರು ತಬ್ಬಿಕೊಂಡಿದ್ದಾರೆ.

ಇಂದ್ರ-ಅಹಲ್ಯೆಯರ ಕಥೆಯ ವಿವಿಧ ನಿರೂಪಣೆ ಗಳು ರಾಮಾಯಣ,[2] ಬ್ರಹ್ಮಪುರಾಣ,[3] ಕಥಾಸರಿತ್ಸಾಗರ[4] ಗಳಲ್ಲಿ ಕಂಡುಬರುತ್ತವೆಯಲ್ಲದೆ ಮಹಾಭಾರತದಲ್ಲಿಯೂ[5] ಉಲ್ಲಿಖಿತವಾಗಿದೆ. ಆದರೆ ಈವರೆಗೆ ನಾವು ಗಮನಿಸಿ ರುವ ನಿರೂಪಣೆಗಳಲ್ಲಿ ತಿಲೋತ್ತಮೆಯಾಗಲೀ ವಜ್ರ ನಾಗಲೀ ಯಾವದೇ ಪಾತ್ರವಹಿಸಿದಂತೆ ಕಂಡುಬಂದಿಲ್ಲ. ಋಷಿ ಗೌತಮನು ಇಂದ್ರನಿಗೆ ಶಾಪವಿತ್ತಾಗ ಅವನ ಮೈಯಲ್ಲಿ ಸಾವಿರ ಕುರೂಪಿ ಚಿನ್ಹೆಗಳು ಕಾಣಿಸಿಕೊಂಡ ವೆಂದೂ ಅವು ಇಂದ್ರನು ತಿಲೋತ್ತಮೆಯನ್ನು ನೋಡಿ ದಾಗ ಸಾವಿರ ಕಣ್ಣುಗಳಾಗಿ ಮಾರ್ಪಟ್ಟವೆಂದೂ ಕಥಾ ಸರಿತ್ಸಾಗರದಲ್ಲಿ ಉಲ್ಲೇಖವಿದೆ.[6]

ಪ್ರಸ್ತುತ ಶಿಲ್ಪ ನಿರೂಪಿಸುವ ಕಥೆ ಬಹುಶಃ ಈ ಕೆಳಗಿನಂತಿದೆ :

ಇಂದ್ರನು ತನ್ನ ಆಯುಧವಾದ ವಜ್ರದೊಂದಿಗೆ (ಮಾನವಾಕೃತಿ)ತಿಲೋತ್ತಮೆಯೆಡೆಗೆ ಹೋಗಿ ಅಹಲ್ಯೆಗೆ ತನಗವಳಲ್ಲಿ ಉಂಟಾಗಿರುವ ಅನುರಾಗವನ್ನು ತಿಳಿಸುವಂತೆ ಕೇಳಿಕೊಳ್ಳುತ್ತಾನೆ. ಅಹಲ್ಯೆಗೆ ವಿಷಯ ತಿಳಿಸಿದ ತಿಲೋ ತ್ತಮೆ ಮರಳಿ ಇಂದ್ರನೆಡೆಗೆ ಬಂದು ಅವನನ್ನು ಗೌತಮ ಋಷಿಯ ಆಶ್ರಮಕ್ಕೆ ಕರೆದೊಯ್ಯುತ್ತಾಳೆ. ಅಲ್ಲಿ ಋಷಿಯ ವೇಷದಲ್ಲಿ ಇಂದ್ರ ಅಹಲ್ಯೆಯೊಡನೆ ಕೂಡಿ ಕೊಳ್ಳುತ್ತಾನೆ.

ನಾವು ಇಲ್ಲಿ ಶಿಲ್ಪ-ಕಥಾನಕವನ್ನು ಈ ರೀತಿ ಅರ್ಥ ವಿಸುವದು ಸರಿಯಿದ್ದರೆ, ಇದರಿಂದ ಮುಖ್ಯ ಸಂಗತಿ ಯೊಂದು ಸೂಚಿತವಾಗುತ್ತದೆ : ಚಾಲುಕ್ಯ ಶಿಲ್ಪಿಗಳು ಅಹಲ್ಯಾ-ಇಂದ್ರ ಕಥೆಯ ಬೇರೆ ಆವೃತ್ತಿಯನ್ನು ಈ ಶಿಲ್ಪದಲ್ಲಿ ಬಳಸಿದ್ದಾರೆ. ಆ ಆವೃತ್ತಿ ನನಗೆ ತಿಳಿದಿರುವ ಮಟ್ಟಿಗೆ ಸದ್ಯ ಲಭ್ಯವಿರುವ ಸಾಹಿತ್ಯಕ ಆಧಾರಗಳಲ್ಲಿ ಕಂಡುಬರುತ್ತಿಲ್ಲ.

---

2 ರಾಮಾಯಣ, ಬಾಲಕಾಂಡ, ಅಧ್ಯಾಯ ೪೮
3 ಬ್ರಹ್ಮಪುರಾಣ, ಅಧ್ಯಾಯ ೮೭
4 ಸಿ. ಎಚ್. ಟಾವ್ನಿ (ಅನುವಾದ) : ಕಥಾಸರಿತ್ಸಾಗರ, ಪು. ೧೨೨–೨೩
5 ಮಹಾಭಾರತ, ಉದ್ಯೋಗಪರ್ವ, ಅಧ್ಯಾಯ ೧೨
6 ಕಥಾಸರಿತ್ಸಾಗರ

ಎಚ್. ಎಸ್. ಕಾಂಬಳೆ

ಖಾನಾಪುರದಲ್ಲಿಯ ಒಂದು ಅಪರೂಪದ ಪದ್ಮಾವತಿ ಜೈನಯಕ್ಷಿ ಶಿಲ್ಪ

ಖಾನಾಪುರವು ಧಾರವಾಡದಿಂದ ಉತ್ತರಕ್ಕೆ ಸುಮಾರು ೨೪ ಕಿ. ಮೀ. ದೂರದಲ್ಲಿ ಇದೆ. ಈ ಗ್ರಾಮದ ಬಲಗುಡ್ಡದ ಮೇಲೆ ಇತ್ತೀಚೆಗೆ ಒಂದು ದೇವಾಲಯವನ್ನು ಕಟ್ಟಲಾಗಿದೆ. ಇದನ್ನು ಸ್ಥಳಿಕರು 'ಶಂಕ್ರಿ ದೇವಾಲಯ' ಎಂದು ಕರೆಯುತ್ತಾರೆ.

ಗರ್ಭಗುಡಿಯಲ್ಲಿ ಶಂಕ್ರಿದೇವಿ ಎಂದು ಕರೆಯಲಾಗುವ ಒಂದು ಪ್ರಾಚೀನ ವಿಗ್ರಹವಿದೆ. ಶೈಲಿ ದೃಷ್ಟಿಯಿಂದ ಬಹುಶಃ ಇದು ಕ್ರಿ.ಶ. ೧೧–೧೨ನೇ ಶತಮಾನದ್ದು ಎಂದು ಹೇಳಬಹುದು. ಮೂರ್ತಿಯ ಲಕ್ಷಣಗಳನ್ನು ಪರಿಶೀಲಿಸಿದರೆ 'ಜೈನ ಪದ್ಮಾವತಿ' ಎಂದು ಗುರುತಿಸಬಹುದು. ಈ ಮೂರ್ತಿಯು ತ್ರಿಭಂಗದಲ್ಲಿ ಇದೆ ; ಚತುರ್ಭುಜ ಹೊಂದಿದೆ. ಬಲ ಮತ್ತು ಎಡ ಕೈಗಳಲ್ಲಿ ಕ್ರಮವಾಗಿ 'ಅಂಕುಶ' ಮತ್ತು 'ಪಾಶಾ' ಇವೆ. ಮುಂದಿನ ಎಡಹಸ್ತವು ಮುರಿದು ಹೋಗಿ ಅದರಲ್ಲಿ ಖಡ್ಗವನ್ನು ಜೋಡಿಸಲಾಗಿದೆ.

ಸಾಮಾನ್ಯವಾಗಿ ಈ ಕಾಲದ ಮೂರ್ತಿಶಿಲ್ಪಗಳಲ್ಲಿ ತೋರಿಸಲ್ಪಟ್ಟ ಎಲ್ಲ ಆಭರಣಗಳು ಅಂದರೆ ಕಿರೀಟ, ಚಕ್ರಕುಂಡಲ, ಕಂಠಹಾರ, ಸರ ಮತ್ತು ಕೈಬಳೆ ಮೊದಲಾದವುಗಳಿಂದ ಅಲಂಕರಿಸಲ್ಪಟ್ಟಿದೆ. ಕಿರೀಟ ಮಕುಟದ ಮೇಲೆ 'ಜಿನಬಿಂಬ'ವಿದೆ ಹಾಗೂ ಬಿಚ್ಚಿದ ಹಾವಿನ ಹೆಡೆ ಇದೆ. ಇವೆರಡೂ ಲಕ್ಷಣಗಳು ಜೈನ ಪದ್ಮಾವತಿ ಯಕ್ಷಿಯ ವಿಶಿಷ್ಟ ಲಕ್ಷಣಗಳಾಗಿವೆ. ಆದ್ದರಿಂದ ಈ ಮೂರ್ತಿಯನ್ನು ಪದ್ಮಾವತಿ ಯಕ್ಷಿ ಎಂದು ಗುರುತಿಸಬಹುದು. ಕಟಿವಸ್ತ್ರವನ್ನು ಎರಡು ಬದಿಗಳಲ್ಲಿ ನೆಲ ಮುಟ್ಟುವಂತೆ ಇಳಿಬಿಡಲಾಗಿದೆ. ಇದರ ಪ್ರಭಾವಳಿಯು ಅಂಡಾಕೃತಿಯಲ್ಲಿ ಇದ್ದು ತೀರಾ ಸರಳವಾಗಿದೆ. ತಲೆ ಹಿಂಬದಿಯಲ್ಲಿ ವರ್ತುಳ ಪ್ರಭಾಮಂಡಳವಿದೆ. ಮೈಮಾಟವು ನೀಳವಾಗಿದೆ. ಇವೆಲ್ಲವು ತುಲನಾತ್ಮಕ ವಿಶಿಷ್ಟ ಲಕ್ಷಣಗಳು. ಸಾಮಾನ್ಯವಾಗಿ ೧೧–೧೨ನೇ ಶತಮಾನದ ಜೈನಯಕ್ಷಿ ಮೂರ್ತಿಯನ್ನು ಕುಳಿತ ಭಂಗಿಯಲ್ಲಿ ತೋರಿಸಲಾಗುತ್ತದೆ. ಇಲ್ಲಿ ನಿಂತ ಭಂಗಿಯಲ್ಲಿ ತೋರಿಸುವುದು ಒಂದು ಅಪರೂಪದ ಮಾದರಿ. ಈ ತರದ ಮೂರ್ತಿ ಐಹೊಳೆಯಲ್ಲಿ ಒಂದಿದೆ. ಇದರಲ್ಲಿ ಒಂದು ವಿಶಿಷ್ಟ ಲಕ್ಷಣವಿದೆ ; ಇದು ಅಷ್ಟ-ಭುಜ ಉಳ್ಳದ್ದು; ಶೈಲಿದೃಷ್ಟಿಯಿಂದ ಇದು ೧೨ನೇ ಶತಮಾನದ್ದು.

ಆದ್ದರಿಂದ ಖಾನಾಪುರದ ಗುಡ್ಡದ ಬದಿಯಲ್ಲಿ ಆಗಾಗ ಅಗೆದಾಗ ಜೈನ ಅವಶೇಷಗಳು ದೊರೆಯುತ್ತವೆ, ಮತ್ತು ಅರ್ಧ ಕಿ.ಮೀ. ದೂರದಲ್ಲಿ ತಡಕೊಡ ಗ್ರಾಮದೊಳಗೆ ಒಂದು ಜೈನ ಬಸದಿ ಇದೆ. ಇವುಗಳನ್ನು ಪರಿಶೀಲಿಸಿದಾಗ ಇಲ್ಲಿ ಒಂದು ಪಾರ್ಶ್ವನಾಥ ದೇವಾಲಯ ಇದ್ದಿರಬಹುದು ಎಂದು ಹೇಳಬಹುದು. ಇವುಗಳ ಹೆಚ್ಚಿನ ಅಧ್ಯಯನ ಕೈಗೊಳ್ಳಲಾಗಿದೆ.

ಆರ್. ಆರ್. ಜೋಶಿ

ಮುಂಡ್ಕಿಯ ಒಂದು ಅಪೂರ್ವ ಸೂರ್ಯನ ವಿಗ್ರಹ

ಇಂದಿನವರೆಗೂ ಸೂರ್ಯನ ಆರಾಧನೆಯ ಸ್ಥಳವಾಗಿದ್ದ ಮುಂಡ್ಕಿ (ಅರ್ಲವಾಡದ ಒಂದು ಭಾಗ) ಅಳ್ನಾವರದಿಂದ ಪಶ್ಚಿಮಕ್ಕೆ ಸುಮಾರು ಐದು ಕಿ.ಮೀ. ದೂರದಲ್ಲಿದೆ. ಇಲ್ಲಿ ಪ್ರಾಚೀನ ಪ್ರಸಿದ್ಧ ಸೂರ್ಯ ದೇವಾಲಯ, ಕಲ್ಮೇಶ್ವರ ದೇವಾಲಯ, ಮೂರ್ತಿಶಿಲ್ಪಗಳು ಹಾಗೂ ವೀರಗಲ್ಲುಗಳಿವೆ.

ಮುಂಡ್ಕಿಯ ಪ್ರಾಚೀನತೆ ಇದುವರೆಗೂ ತಿಳಿದು ಬಂದಿಲ್ಲ. ಅನಿಲಾಪುರ (ಇಂದಿನ ಅಳ್ನಾವರ) ಗೋವೆಯ ಕದಂಬರ ಉಪರಾಜಧಾನಿಯಾಗಿತ್ತು. ಮುಂಡ್ಕಿ ಈ ರಾಜಧಾನಿ ಪಟ್ಟಣದ ಒಂದು ಮುಖ್ಯ ಪುರವಾಗಿರಬಹುದು.

ಸೂರ್ಯನ ದೇವಾಲಯ : ಪ್ರಾಚೀನವಾದ ಈ ದೇವಾಲಯ ಬಹಳಷ್ಟು ನಾಶವಾಗಿದ್ದು, ಅರ್ಲವಾಡದ ಪ್ರಜ್ಞಾವಂತ ಜನರಿಂದ ಈಗ ಜೀರ್ಣೋದ್ಧಾರಗೊಳ್ಳುತ್ತಿದೆ. ಗರ್ಭಗುಡಿಯಲ್ಲಿ ಎತ್ತರದ ಚತುರ್ರಥ ಪಾಣಿಪೀಠದ ಮೇಲೆ ಸುಂದರವಾದ ಸೂಕ್ಷ್ಮ ಕೆತ್ತನೆಯ ಸಮಭಂಗದಲ್ಲಿಯ ಸೂರ್ಯನ ವಿಗ್ರಹವು ಅತ್ಯಂತ ಮನೋಹರವಾಗಿದೆ. ಪಾಣಿಪೀಠ ೭೨ ಸೆಂ. ಮೀ. ಎತ್ತರ, ೧.೩೩ ಸೆಂ. ಮೀ. ಅಗಲವಾಗಿದೆ. ಇದರ ಬಲಗಡೆ ಜಲಹರಿಯಿದೆ. ಇದು ಸಹಾ ಆಕರ್ಷಕವಾಗಿದ್ದು, ಅರಳಿದ ಪದ್ಮದ ಹಾಗಿದೆ. ಸೂರ್ಯನ ಹಿಂದಿನ ಮಕರತೋರಣದ ಪ್ರಭಾವಳಿ ಸಂಪೂರ್ಣ ಭಗ್ನವಾಗಿದ್ದರೂ ಇಡಿ ಶಿಲ್ಪದ ಭವ್ಯತೆಗೆ, ಚೆಲುವಿಗೆ ಕುಂದುಬಂದಿಲ್ಲ. ಈ ಮಕರತೋರಣದ ನಾಲ್ಕೈದು ಭಾಗಗಳು ಭಗ್ನವಾಗಿ ಬಿದ್ದಿವೆ. ಮಕರಗಳ ಬಾಯಿಯಿಂದ ಹೊರಹೊರಟ ಕಲಾತ್ಮಕವಾದ ಹೂಬಳ್ಳಿಯಲ್ಲಿ ಅಷ್ಟದಿಕ್ಪಾಲಕರು, ಮಾಲಾಕಾರರು, ಉಷಾ ಪ್ರತ್ಯುಷಾರನ್ನು ನೋಡಬಹುದು.

ಸೂರ್ಯನ ವಿಗ್ರಹ : ಈ ವಿಗ್ರಹದ ಎತ್ತರ ೨.೩೬ ಸೆಂ.ಮೀ. ಹಾಗೂ ಅಗಲ ೭೫ ಸೆಂ. ಮೀ. ದ್ವಿಭುಜ ಸೂರ್ಯನು ಪದ್ಮಪೀಠದ ಮೇಲೆ ಸಮಭಂಗದಲ್ಲಿ ನಿಂತಿರುವನು. ಈ ದೇವತೆಯು ಕೈಗಳಲ್ಲಿ ಸೂಕ್ಷ್ಮ ಕಲಾಕೆತ್ತನೆಯ ಪದ್ಮಗಳನ್ನು ಬೆರಳುಗಳಿಂದ ಹಿಡಿದಿರುವನು. ಕೈಬಳೆ, ತೋಳಬಂಧ, ಭುಜಬಂಧಗಳಿವೆ. ಎಲ್ಲಾ ಬೆರಳುಗಳಲ್ಲಿ ಉಂಗುರಗಳಿವೆ. ಕಾಲುಗೆಜ್ಜೆ, ಕಾಲಖಡಗ, ಮೇಖಲ, ಕಾಲುಂಗರಗಳಿವೆ. ಕೊರಳಲ್ಲಿ ಒಂದು ಎಳೆಯ ಸರ, ಪದ್ಮಪದಕದ ಸರ, ಉದ್ದನೆಯ ಸರ, ಯಜ್ಞೋಪವೀತ, ವೈಜಯಂತಿಮಾಲೆ ಮುಂತಾದ ಅಲಂಕೃತ ಸೂಕ್ಷ್ಮಕೆತ್ತನೆಯ ಆಭರಣಗಳಿಂದ ಅಲಂಕೃತವಾಗಿದ್ದಾನೆ. ಟೊಂಕಾಭರಣವು ಗಮನಾರ್ಹವಾಗಿದೆ. ಸುಂದರ ಕಲಾತ್ಮಕವಾದ ಕರಂಡ ಕಿರೀಟವಿದೆ. ಕಿರೀಟದ ಮೇಲೆ ಸಿಂಹಮುಖದಿಂದ ಹೊರಬಂದ ಮುತ್ತಿನ ಕುಚ್ಚು ಕಲಾತ್ಮಕವಾಗಿದೆ. ಕಿರೀಟದ ನಡುವೆ ಪದಕವಿದೆ. ಕಿರೀಟದ ಆಚೆ ಈಚೆ ಮುತ್ತಿನಸರ ಜೋತುಬಿದ್ದಿದೆ. ಕಿವಿಯಲ್ಲಿ ಕರ್ಣಕುಂಡಲಗಳಿವೆ. ಸೂರ್ಯನ ಮುಖಭಾವ ಗಂಭೀರವಾಗಿದೆ. ಮುತ್ತಿನ ಅಂಚಿನ ಪ್ರಭಾವಳಿಯು ಇದೆ.

ಪ್ರಭಾವಳಿಯ ಕೆಳಗೆ ಸೂರ್ಯನ ಎಡಕ್ಕೆ ಇಬ್ಬರು ಚಾಮರಧಾರಣಿಗಳು ನಿಂತಿದ್ದಾರೆ. ಒಬ್ಬಳು ಒಂದು ಕೈಯಲ್ಲಿ ಚಾಮರ, ಇನ್ನೊಂದು ಕೈಯಲ್ಲಿ ಪೂರ್ಣಾಫಲವನ್ನು ಹಿಡಿದಿದ್ದಾಳೆ. ಇನ್ನೊಬ್ಬಳು ಒಂದು ಕೈಯಲ್ಲಿ

ಚಾಮರ, ಮತ್ತೊಂದು ಕೈಯನ್ನು ತಲೆಯ ಮೇಲ್ಗಡೆ ಹಿಡಿದಿರುವಳು. ಬಲಗಡೆಗೆ ಇರುವ ಇಬ್ಬರು ಚಾಮರಧಾರಣಿಗಳು ಎಡಕ್ಕೆ ಇರುವ ಚಾಮರಧಾರಣಿಗಳಂತೆ ಇದ್ದಾರೆ. ಆದರೆ ಇಲ್ಲಿ ತಲೆಯ ಮೇಲ್ಗಡೆ ಹಿಡಿದಿರುವವಳ ಕೈಯಲ್ಲಿ ಹೂಗೊಂಚಲವಿದೆ. ಇವರೆಲ್ಲರೂ ದ್ವಿಭಂಗದಲ್ಲಿ ಇದ್ದು, ಸರ್ವ ಅಲಂಕೃತರಾಗಿದ್ದಾರೆ. ಕೊನೆಯ ಚಾಮರಧಾರಣಿಗಳು ಕತ್ತರಿಕಾಲಿನಲ್ಲಿ ನಿಂತಿದ್ದಾರೆ.

ಸೂರ್ಯನ ಪೀಠದ ಮೇಲೆ ಉಬ್ಬುಶಿಲ್ಪದಲ್ಲಿ ಏಳು ಕುದುರೆಗಳ ನಡುವೆ ಸಾರಥಿಯಾದ ಅರಣನಿರುವನು. ಒಟ್ಟಿನಲ್ಲಿ ಇದೊಂದು ಗೋವೆಯ ಕದಂಬರ ವಿಶಿಷ್ಟ ಮಾದರಿಯ ಕಲಾತ್ಮಕ, ಸೂಕ್ಷ್ಮಕೆತ್ತನೆಯ, ಮನಮೋಹಕ ಕೃತಿಯಾಗಿದೆ. ಅಷ್ಟೇ ಅಲ್ಲದೇ. ಈ ಭಾಗದ ಒಂದು ಮೇರುಕೃತಿಯಾಗಿದೆ. ಶೈಲಿಯ ದೃಷ್ಟಿಯಿಂದ ನೋಡಲಾಗಿ ಇದು ೧೨ನೇ ಶತಮಾನಕ್ಕೆ ಸೇರಿದ್ದಾಗಿದೆಯೆಂದು ಹೇಳಬಹುದು.

ಭೈರವ : ಈ ಶಿಲಾಪ್ರತಿಮೆಯ ಎತ್ತರ ೧.೧೦ ಸೆಂ.ಮೀ. ಹಾಗೂ ಅಗಲ ೬೧ ಸೆಂ. ಮೀ. ಗುಡಿಯ ಮುಂಭಾಗದ ಎಡಕ್ಕೆ ಈ ಪ್ರತಿಮೆ ಇದೆ. ಭೈರವನು ನಾಲ್ಕು ಕೈಗಳಲ್ಲಿ ತ್ರಿಶೂಲ, ಖಡ್ಗ, ಢಮರು, ರಾಕ್ಷಸನ ಜುಟ್ಟನ್ನು ಹಿಡಿದಿರುವನು. ತನ್ನ ಬಲಗಾಲನ್ನು ನಾಯಿಯ ಬೆನ್ನಮೇಲಿಟ್ಟಿರುವನು. ಇದೊಂದು ಗಮನಾರ್ಹ ಭಂಗಿಯಾಗಿದೆ. ನಾಯಿಯು ರಾಕ್ಷಸನ ರುಂಡವನ್ನು ನೆಕ್ಕಲು ಕಾತುರವಾಗಿದೆ. ೧೫ ರುಂಡಗಳು ವೈಜಯಂತಿಮಾಲೆ, ನಾಗಸರ್ಪದ ಕೊರಳಹಾರ, ಕೈಬಳೆ, ಖಡೆ, ಮೇಖಲ, ಕಾಲಗೆಜ್ಜೆ, ಕಿವಿಯೋಲೆ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ತಲೆಕೂದಲು ತಲೆಯಹಿಂದೆ ಸುತ್ತಲೂ ಹರಡಿ ಎತ್ತರವಾದ ಪ್ರಭಾವಳಿಯಂತೆ ಇದೆ. ಮುಖದಲ್ಲಿ ರೌದ್ರರೂಪವಿದೆ. ಇದು ಸಹಾ ಗೋವೆಯ ಕದಂಬರ ಅಪರೂಪದ ಮಾದರಿಯ ಕಲಾಕೃತಿಯಾಗಿದೆ.

ವಿಘ್ನೇಶ್ವರ : ಈ ಮೂರ್ತಿಯ ಎತ್ತರ ೬೩ ಸೆಂ.ಮೀ. ಹಾಗೂ ಅಗಲ ೬೦ ಸೆಂ.ಮೀ. ಚತುರ್ಮುಖನಾದ ಗಣಪತಿಯು ಸುಖಾಸೀನನಾಗಿದ್ದಾನೆ. ಹಿಂದಿನ ಎರಡೂ ಕೈಗಳು ಭಗ್ನವಾಗಿವೆ. ಮುಂದಿನ ಒಂದು ಕೈಯಲ್ಲಿ ದಂತವನ್ನು, ಇನ್ನೊಂದು ಕೈಯಲ್ಲಿ ಮೋದಕ ಪಾತ್ರೆಯನ್ನು ಹಿಡಿದಿರುವನು. ಇವನ ಸೊಂಡಿಲು ಬಲಮುರಿಯದಾಗಿದೆ. ಹೊಟ್ಟೆಯ ಮೇಲೆ ನಾಗ ಉದರ ಬಂಧವಿದೆ. ಭುಜಸರ,ಕೊರಳಹಾರ, ಕೈಬಳೆ, ಮುಂತಾದ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಇದು ಸಹಾ ೧೨ನೇ ಶತಮಾನಕ್ಕೆ ಸೇರಿದ್ದಾಗಿದೆ.

ರಾಜಯೋಗಿ : ಈತನ ಎತ್ತರ ೭೫ ಸೆಂ.ಮೀ., ಅಗಲ ೫೬ ಸೆಂ.ಮೀ. ಪದ್ಮಾಸೀನನಾಗಿ ಕುಳಿತಿರುವನು. ಕೈಗಳು ಯೋಗಮುದ್ರೆಯಲ್ಲಿವೆ. ಕೈಬಳೆ, ಬಾದಾಮಿ ಆಕಾರದ ತೋಳಬಂಧಗಳಿವೆ. ಯಜ್ಞೋಪವೀತವಿದೆ. ಮೇಲ್ಗಡೆ ಛತ್ರವಿದೆ. ಪ್ರಭಾವಳಿಯು ಸಿಂಹಮುಖದಿಂದ ಹೊರಬಂದ ಹೂಬಳ್ಳಿ ಕಲಾತ್ಮಕವಾಗಿದೆ. ಯೋಗಿಯ ಪಾದದ ಹತ್ತಿರ ಆಚೆ ಈಚೆ ಸ್ತ್ರೀಪುರುಷ ಭಕ್ತರಿರುವರು. ಯೋಗಿಯ ಹಿಂದೆ ಆಚೆ ಈಚೆ ಚಾಮರಗಳಿವೆ. ಈ ಶಿಲ್ಪವನ್ನು ನೋಡಿದಾಕ್ಷಣ ಇದು ತೀರ್ಥಂಕರ ವಿಗ್ರಹವೆಂದು ಭಾಸವಾಗುತ್ತದೆ. ಇದು ಸಹಾ ೧೨ನೇ ಶತಮಾನಕ್ಕೆ ಸೇರಿದ್ದಾಗಿದೆ.

ಮೂಲಸ್ಥಾನ ದೇವರಾದ ಶ್ರೀ ಸೂರ್ಯ ನಾರಾಯಣನಿಂದ ಹಿಡಿದು ಇಲ್ಲಿರುವ ಎಲ್ಲ ವಿಗ್ರಹಗಳಿಗೆ ಕಂತಿ ಮಾಡಿಸಿದ್ದಾರೆ. ಆದಾಗ್ಯೂ ಅವುಗಳ ಆಕರ್ಷಣೆಗೆ ಕುಂದುಬಂದಿಲ್ಲ.

ರಾಷ್ಟ್ರಕೂಟ ಕಾಲದ ವೀರಗಲ್ಲು : ಇದರ ಎತ್ತರ ೧.೮೩ ಸೆಂ.ಮೀ.,ಅಗಲ ೯೪ ಸೆಂ.ಮೀ. ಹಾಗೂ ದಪ್ಪ ೧೧ ಸೆಂ. ಮೀ. ಇದು ಗೋಗ್ರಹಣದ ವೀರಗಲ್ಲು ವೀರನ ಹಿಂದೆ ಏಳು ಆಕಳುಗಳು ನಿಂತಿವೆ. ವೈರಿಗಳು ಧನುರ್ಧಾರಿಗಳಾಗಿದ್ದಾರೆ. ವೀರನು ಖಡ್ಗ ಮತ್ತು ಢಾಲುಗಳನ್ನು ಹಿಡಿದಿರುವನು. ಮಧ್ಯಭಾಗದಲ್ಲಿ ವೀರನು ಅಪ್ಸರೆಯ ಭುಜದ ಮೇಲೆ ಕೈಹಾಕಿ ಮೇಲೆ ಹಾರುವ ಸ್ಥಿತಿಯಲ್ಲಿರುವನು. ಸುತ್ತಲೂ ವಾದ್ಯಗಾರರಿರುವರು. ಮೇಲ್ಭಾಗದಲ್ಲಿ ವೀರನು ಆಸನದ ಮೇಲೆ ಸುಖಾಸೀನನಾಗಿ ಕುಳಿತಿರುವನು. ತನ್ನ ಕೈಗಳಲ್ಲಿ ಪದ್ಮಗಳನ್ನು ಹಿಡಿದಿರುವನು. ಇವನ ಆಚೆ ಈಚೆ ಚಾಮರ ಧಾರಣಿ ಅಪ್ಸರೆಯರಿರುವರು. ಈ ಬಿಡಿಶಿಲ್ಪ ಎರಡು ಕಂಬಗಳ ನಡುವೆ ಚಿತ್ರಿಸಲ್ಪಟ್ಟಿದೆ. ಮೇಲ್ಭಾಗದಲ್ಲಿ ಶಾಲಾ ಮಾದರಿಯ ಶಿಖರವಿದೆ. ಆಚೆ ಈಚೆ ಸಣ್ಣ

ಶಿಖರಗಳಿವೆ. ಈ ವೀರಗಲ್ಲನ್ನು ಸೂಕ್ಷ್ಮದೃಷ್ಟಿಯಿಂದ ನೋಡಲಾಗಿ ಇದು ರಾಷ್ಟ್ರಕೂಟರ ಕಾಲದ ವೀರಗಲ್ಲಾಗಿದೆ. ಆದರೆ ಮುಂಡ್ಕಿಯು ಪ್ರಾಚೀನತೆ ರಾಷ್ಟ್ರಕೂಟರ ಕಾಲಕ್ಕೆ (೯ನೇ ಶತಮಾನಕ್ಕೆ) ಹೋಗುತ್ತದೆ. ಮುಂದೆ ಗೋವೆಯ ಕದಂಬರ ಕಾಲದಲ್ಲಿ ಇದು ಒಂದು ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿ ಹೊಂದಿರಬಹುದು.

ಕಲ್ಮೇಶ್ವರ ದೇವಾಲಯ

ಪ್ರಾಚೀನವಾದ ಈ ದೇವಾಲಯ ಪೂರ್ಣ ಭಗ್ನವಾಗಿದೆ. ಇದರ ಸುತ್ತಮುತ್ತಲೂ ಗುರುತಿಸಲಾರದಷ್ಟು ಜಿನ, ಕೇಶವ, ಭೈರವ ಮುಂತಾದ ಶಿಲಾಪ್ರತಿಮೆಗಳು ಭಗ್ನವಾಗಿ ಬಿದ್ದಿವೆ. ಆದ್ದರಿಂದ ಇಲ್ಲಿ ಶೈವ, ಜೈನ, ವೈಷ್ಣವ ಧರ್ಮಗಳು ಪ್ರಚಲಿತದಲ್ಲಿ ಇದ್ದವು ಎಂದು ಹೇಳಬಹುದು. ಕಾಳಾಮುಖ ಶೈವರು ಸೂರ್ಯೋಪಾಸಕರಾಗಿದ್ದು ಅವನ ಆರಾಧಕರೂ ಆಗಿದ್ದರು. ಇದಕ್ಕೆ ಇಲ್ಲಿರುವ ಬೃಹದಾಕಾರದ ಸೂರ್ಯನ ಸುಂದರ ಕಲಾಕೃತಿಯೇ ಸಾಕ್ಷಿಯಾಗಿದೆ. ಬಹುಶಃ ಇದು ಕಾಳಾಮುಖ ಶೈವರ ಸ್ಥಳ ಇರಬಹುದು. ಧಾರ್ಮಿಕ ಕೇಂದ್ರವಾಗಿ, ಕಲಾಸಂಪತ್ತಿನ ಬೀಡಾಗಿ ಮೆರೆದ ಮುಂಡ್ಕಿ ಈಗ ಒಂದು ಹಾಳೂರಾಗಿದೆ.*

---

* ಈ ಪ್ರಬಂಧವನ್ನು ಬರೆಯಲು ಸಹಾಯ ಮಾಡಿದ ನನ್ನ ಮಾರ್ಗದರ್ಶಿಗಳಾದ ಡಾ॥ ಎಚ್. ಆರ್. ರಘುನಾಥಭಟ್ಟರಿಗೆ ನಾನು ಕೃತಜ್ಞನಾಗಿದ್ದೇನೆ.

ಕೆ. ವಸಂತಲಕ್ಷ್ಮಿ

ಕರ್ನಾಟಕದ ಸರಸ್ವತಿ ಶಿಲ್ಪಗಳು

ಯಾ ಕುಂದೇಂದು ತುಷಾರಹಾರಧವಳಾ ಯಾ
ಶುಭ್ರವಸ್ತ್ರಾನ್ವಿತಾ ।
ಯಾ ವೀಣಾವರದಂಡ ಮಂಡಿತಕರಾ ಯಾ ಶ್ವೇತ
ಪದ್ಮಾಸನಾ ।
ಯಾ ಬ್ರಹ್ಮಾಚ್ಯುತ ಶಂಕರ ಪ್ರಭೃತಿಭಿಃದೇವೈ
ಸದಾ ಪೂಜಿತಾ ।
ಸಾಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷ
ಜಾಡ್ಯಾಪಹಃ॥

ವಿದ್ಯಾಧಿದೇವತೆಯಾದ ಸರಸ್ವತಿ ಆರಾಧನೆಯು ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ನಡೆದುಬಂದಿದೆ. ಸರಸ್ವತಿಯನ್ನು ಋಗ್ವೇದದಲ್ಲಿ 'ನದೀ ದೇವತೆ' ಎಂದೂ ಬುದ್ಧಿದಾಯಿನೀ ಎಂದೂ ಸ್ತುತಿಸಲಾಗಿದೆ. ಋಗ್ವೇದದ ಮೂರು ಸೂಕ್ತಗಳು ಸಮಗ್ರವಾಗಿ ಸರಸ್ವತಿ ಸೂಕ್ತಗಳಾಗಿವೆ. ಅಲ್ಲದೆ, ಅನೇಕ ಮಂತ್ರಗಳೂ ಈ ದೇವತೆಯ ಸ್ತುತಿಯಲ್ಲಿ ಪ್ರವೃತ್ತವಾಗಿವೆ ಎಂದು ವಿದ್ವಾಂಸರು ಸೂಚಿಸಿರುತ್ತಾರೆ. ಸರಸ್ವತಿ ಸೂಕ್ತದ ಪಠಣದಿಂದ ಮಾನವನು 'ವಾಗ್ಮಿ'ಯಾಗುವನೆಂದು ಋಗ್ವಿಧಾನವು ತಿಳಿಸುತ್ತದೆ.[1] ಈ ದೇವಿಯನ್ನು ವೇದದಲ್ಲಿಯೇ ಬರುವ ಅಂಭ್ರಣನ ಮಗಳಾದ 'ವಾಕ್' ಎಂಬುವಳು 'ದೇವಿಸೂಕ್ತ'ದಿಂದ ಸ್ತುತಿಸಿದ್ದಾಳೆ. ಹೀಗೆ ವಾಕ್‌ನಿಂದ ಪೂಜಿತಳಾದ ಈಕೆ 'ವಾಗ್ದೇವಿ'ಯಾದಳು. ಈ ಸೂಕ್ತವು (ಋಕ್. ೧೦.೧೨೮) ಸರಸ್ವತಿದೇವಿಯ ಹಿರಿಮೆಯನ್ನು ಸಾರುವುದಾಗಿದೆ. ಹೀಗೆಯೇ ಧೀಃಶಕ್ತಿಯನ್ನು ಪ್ರಚೋದಿಸುವ ಸವಿತೃವಿನ ಭರ್ಗವನ್ನು ಕುರಿತ ಮಂತ್ರ ಬೆಳಗಿನಲ್ಲಿ ಗಾಯತ್ರಿ, ಮಧ್ಯಾಹ್ನ ಸಾವಿತ್ರಿ, ಸಂಜೆ ಸರಸ್ವತಿಯೆಂಬ ಕಲ್ಪನೆ ಬೆಳೆಯಿತೆಂದು ಪ್ರೊ॥ ಎಸ್.ಕೆ. ರಾಮಚಂದ್ರರಾವ್ ತಿಳಿಸಿರುವರು.[2] ಹೀಗೆ ಸರಸ್ವತಿಯನ್ನು 'ಬ್ರಹ್ಮನ ಶಕ್ತಿ' ಎಂದು ಕಲ್ಪಿಸುವರಾದರೂ ವ್ಯವಹಾರದಲ್ಲಿ ಇವಳು ಸ್ವತಂತ್ರ ದೇವತೆ ಎನಿಸಿದ್ದಾಳೆ. ಈ ದೇವಿಯನ್ನು ಬೌದ್ಧರೂ ಜೈನರೂ ಶಾಕ್ತರೂ ಪೂಜಿಸಿರುತ್ತಾರೆ. ಹೀಗಿದ್ದರೂ ಸರಸ್ವತಿದೇವಿಗಾಗಿಯೇ ನಿರ್ಮಿಸಿರುವ ಸ್ವತಂತ್ರ ದೇವಾಲಯಗಳು ಕಂಡುಬರುವುದಿಲ್ಲ.

ಮಥುರೆಯ ಬಳಿ ಇರುವ 'ಕಂಕಾಲಿದಿಣ್ಣೆ' ಎಂಬಲ್ಲಿ ದೊರೆತಿರುವ ಸರಸ್ವತೀ ಶಿಲ್ಪವೇ ಪ್ರಾಚೀನವಾದುದು. ಇದು ಕ್ರಿ.ಶ. ಸು. ೨ನೇ ಶತಮಾನಕ್ಕೆ ಸೇರಿದ ಕುಶಾನರ ಕಾಲದ ಶಿಲ್ಪ. ಈ ಶಿಲ್ಪದಲ್ಲಿ ದೇವಿಯು ಎಡಕೈಯಲ್ಲಿ ಪುಸ್ತಕವನ್ನು, ಬಲಗೈಯಲ್ಲಿ ಅಕ್ಷಮಾಲೆಯನ್ನು ಹಿಡಿದಿದ್ದಾಳೆ. ಬದಿಯಲ್ಲಿ ಇಬ್ಬರು ಸೇವಕರಿದ್ದಾರೆ. ಜೈನ ಚೈತ್ಯದ ಬಳಿ ದೊರೆತಿರುವ ಈ ಶಿಲ್ಪದ ಪೀಠದಡಿಯಲ್ಲಿ ಬ್ರಾಹ್ಮಿಲಿಪಿಯ ಶಾಸನವಿದ್ದು, ಇದರಿಂದ ಇದು ಸರಸ್ವತಿ ಬಿಂಬವೆಂದು ಸ್ಪಷ್ಟವಾಗುತ್ತದೆ.[3] ಇದನ್ನು

1 ಎನ್. ಎಸ್. ಅನಂತರಂಗಾಚಾರ್ : ವೈದಿಕಸಾಹಿತ್ಯ ಚರಿತ್ರೆ, ಪು. ೨೧೮

2 ಮೂರ್ತಿಶಿಲ್ಪ : ನೆಲೆ-ಹಿನ್ನೆಲೆ, ಪು. ೧೮೬

3 Kanailal Bhattacharya : *Saraswathi*, pp· 80-81

ಬಿಟ್ಟರೆ ಬೇರೆ ಸರಸ್ವತಿ ಶಿಲ್ಪಗಳು ದೊರೆತಿಲ್ಲವಾದ್ದರಿಂದ 'ಸರಸ್ವತಿ ಶಿಲ್ಪ'ದ ಕಲ್ಪನೆಯು ಮೂಲತಃ ಜೈನಧರ್ಮ ದಿಂದ ಆರಂಭವಾಗಿದ್ದಿರಬಹುದೆಂದು ಊಹಿಸಬಹುದಾ ಗಿದೆ. ಇದರಂತೆ, ತಮಿಳುನಾಡಿನ ಮಧುರೆಯ ಸಮೀಪ ದಲ್ಲಿರುವ ತಿರುಪ್ಪರಕುನ್ನ್ರಂನಲ್ಲಿರುವ ಬೆಟ್ಟಗಳಲ್ಲಿನ ಗುಹೆಗಳು (ಕ್ರಿ. ಶ. ಸು. ೨ನೇ ಶತಮಾನ) ಪ್ರಾಚೀನ ಜೈನಕೇಂದ್ರವಾಗಿದ್ದವು. ಇಲ್ಲಿನ ಗುಹೆಗಳಲ್ಲಿ ಕಲ್ಲಿನ ಹಾಸಿಗೆಗಳು, ಶಾಸನಗಳು ಇದ್ದು, ಈ ಬೆಟ್ಟದ ಒಂದು ಭಾಗವನ್ನು 'ಸರಸ್ವತಿತೀರ್ಥ'ವೆಂದು ಕರೆದಿರುತ್ತಾರೆ. ಇದರಿಂದ ಸರಸ್ವತಿಯ ಸಗುಣ ಸ್ವರೂಪವನ್ನು ಮೊದ ಲಿಗೆ ಕಲ್ಪಿಸಿದವರು ಜೈನರೆಂದೇ ಮಾರುತಿನಂದನ್ ಪ್ರಸಾದ್ ತಿವಾರಿಯವರು ಅಭಿಪ್ರಾಯಪಟ್ಟಿರುವರು.[4]

ಇಲ್ಲಿ ಕೇವಲ ಕರ್ನಾಟಕದಲ್ಲಿ ದೊರೆತಿರುವ ಸರಸ್ವತಿ ಶಿಲ್ಪಗಳನ್ನು ಆಧರಿಸಿ 'ಸರಸ್ವತಿ ಆರಾಧನೆ'ಯು ಬೆಳೆದು ಬಂದ ಬಗೆಯನ್ನು ಗುರುತಿಸಲು ಯತ್ನಿಸಲಾಗಿದೆ. ಇದಕ್ಕಾಗಿ ಕರ್ನಾಟಕದ ಇತಿಹಾಸವನ್ನು ಗಮನಿಸಿದರೆ, ಕದಂಬರ ಕಾಲದ ಶಿಲ್ಪಗಳು ಬೆರಳೆಣಿಕೆಯಷ್ಟು ಮಾತ್ರ ದೊರೆತಿದ್ದು, ಇವುಗಳಲ್ಲಿ ಒಂದಾದರೂ ಸರಸ್ವತಿ ಶಿಲ್ಪವು ದೊರೆತಿರುವುದಿಲ್ಲ. ಇದರಿಂದ ಆಗ ಸರಸ್ವತಿಯ ಮೂರ್ತಿ ಪೂಜೆಯು ಕರ್ನಾಟಕದಲ್ಲಿ ಪ್ರಚಲಿತ ಇದ್ದಿರಲಾರದೆಂದು ತಿಳಿಯುತ್ತದೆ. ಆದರೆ ಆಗಿದ್ದ ಘಟಿಕಾಸ್ಥಾನಗಳಲ್ಲಿ ವಾದ ವಿವಾದಗಳು ನಡೆಯುತ್ತಿದ್ದುದರ ಬಗೆಗೆ ಶಾಸನ ಗಳು ತಿಳಿಸುತ್ತವೆ ಮತ್ತು ಈ ಕಾಲದ ಶಾಸನಗಳಲ್ಲಿ ಯಾಗ–ಯಜ್ಞಗಳ ಬಗೆಗೆ ಹೆಚ್ಚಿನ ವಿವರಗಳು ದೊರೆ ಯುವುದನ್ನು ಕಂಡಾಗ ಸರಸ್ವತಿದೇವಿಯನ್ನು ಆವರು ಶಬ್ದ ಪ್ರಕ್ರಿಯೆಗಳಿಂದಲೇ ಆರಾಧಿಸುತ್ತಿದ್ದಿರಬೇಕೆನ್ನಿಸು ತ್ತದೆ.

ಮುಂದೆ ಬಾದಾಮಿ ಚಾಳುಕ್ಯರ ಕಾಲದ ಹಲ ವಾರು ದೇವಾಲಯಗಳು, ನೂರಾರು ಶಿಲ್ಪಗಳು ಇಂದು ಉಳಿದಿರುವುವಾದರೂ ಸರಸ್ವತಿಯ ಬಿಡಿಶಿಲ್ಪಗಳು ಕಾಣಬರದಿರುವುದು ಆಶ್ಚರ್ಯಕರವಾಗಿದೆ. ಆ ಕಾಲ ದಲ್ಲಿನ ಸಂಸ್ಕೃತ ಸಾಹಿತ್ಯದಲ್ಲಿ ಸರಸ್ವತಿಯನ್ನು 'ಪ್ರತಿಭಾ ಚೇತನ'ವೆಂದೂ 'ನಾದಮಯೀ'ಯೆಂದೂ ವರ್ಣಿಸ ಲಾಗಿದೆ.[5] ಆದರೆ ಅವಳ ಶಾರೀರಿಕ ವರ್ಣನೆ ಇಲ್ಲಿ ಕಾಣಸಿಗುವುದಿಲ್ಲ. ಸುಮಾರು ಇದೇ ಕಾಲಕ್ಕೆ ಸೇರ ಬಹುದಾದ ಈ ಐಹೊಳೆಯ ರಾವಳಫಡಿ ಗುಹೆಯಲ್ಲಿ ಗಂಗಾಧರಮೂರ್ತಿಯ ಉಬ್ಬುಶಿಲ್ಪವಿದೆ. ಇಲ್ಲಿಯ ಶಿವನ ಶಿರದ ಮೇಲ್ಭಾಗದಲ್ಲಿರುವ ಕಮಲದಲ್ಲಿ ಮೂರು ಸ್ತ್ರೀದೇವತೆಗಳು ಕೈ ಮುಗಿದುಕೊಂಡಿರುವಂತಿದೆ. ಇವರು ಜಲದೇವತೆಗಳಾದ ಗಂಗಾ, ಯಮುನಾ, ಸರಸ್ವತಿ ದೇವಿಯರಾಗಿ ತೋರುವರೆಂದು ಎ. ಎಂ. ಅಣ್ಣಿಗೇರಿಯವರು ತಿಳಿಸಿರುತ್ತಾರೆ.[6] ಇದರಿಂದ ಸರಸ್ವತಿ ಯನ್ನು ದೇವಿಯ ಸ್ವರೂಪದಲ್ಲಿ ಬಿಡಿಶಿಲ್ಪಗಳಲ್ಲಿ ಬಿಡಿಸಿ ಆರಾಧಿಸುವ ಕಲ್ಪನೆ ಆಗಿರಲಿಲ್ಲವೆಂದು ಭಾವಿಸಬಹು ದಾಗಿದೆ.

ಸುಮಾರು ೮–೯ನೇ ಶತಮಾನದ ಹೊತ್ತಿಗೆ ಕರ್ನಾಟಕವು ಕಲೆ ಮತ್ತು ಸಾಹಿತ್ಯದಲ್ಲಿ ಹೆಚ್ಚಿನ ಪ್ರಗತಿ ಯನ್ನು ಸಾಧಿಸಿತ್ತು. ಸು. ೮ನೇ ಶತಮಾನದ ಕನ್ನಡ ಸಾಹಿತ್ಯದ ಮೊದಲ ಗ್ರಂಥವಾದ 'ಕವಿರಾಜಮಾರ್ಗ' ದಲ್ಲಿ ಕವಿಯು,

> ಶ್ರೀವಿಶದವರ್ಣೆ ಮಧುರಾ
> ರಾವೋಚಿತೆ ಚತುರ ರುಚಿರ ಪದರಚನೆ ಚಿರಂ ॥
> ದೇವಿ ಸರಸ್ವತೀ ಹಂಸೀ
> ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್॥

ಎಂದು ಸ್ತುತಿಸಿದ್ದಾನೆ. ಆದರೆ ಇಲ್ಲಿಯೂ ಅವಳನ್ನು 'ಪ್ರತಿಭೆ', 'ಚೇತನ'ವೆಂಬಂತೆಯೇ ಭಾವಿಸಲಾಗಿದೆ. ಕವಿ ಪಂಪನು 'ಆದಿಪುರಾಣ'ದಲ್ಲಿ "ಪರಮ ಜಿನೇಂದ್ರ ವಾಣಿಯೆ ಸರಸ್ವತಿ ಬೇಱದು ಪೆಣ್ಣರೂಪಮಂ ಧರಿಯಿಸಿ ನಿಂದುದಲ್ತೆ" ಎಂದಿದ್ದು, ೧೦ನೇ ಶತಮಾನದ ಹೊತ್ತಿಗೆ

---

4 *Elements of Jaina Iconography*, pp. 112-113

5 ಚತುರ್ಮುಖ ಮುಖಾಂಭೋಜ ವನಹಂಸ ವಧೂರ್ಮಮ ।
ಮಾನಸೇ ರಮತಾಂ ನಿತ್ಯಂ ಸರ್ವಶುಕ್ಲಾ-ಸರಸ್ವತೀ ॥ (ದಂಡಿ : ಕಾವ್ಯಾದರ್ಶ)

6 ಐಹೊಳೆ : ಸಂಸ್ಕೃತಿ ಮತ್ತು ಕಲೆ, ಪು. ೬೮

ಸರಸ್ವತಿಗೆ ಸ್ವರೂಪ ನಿರ್ದಿಷ್ಟತೆ ಇತ್ತೆಂದು ತಿಳಿದುಬರು ತ್ತದೆ.

ಸುಮಾರು ೧೧ನೇ ಶತಮಾನದ ನಂತರದಲ್ಲಿ ಇದ್ದ ಕ್ಕಿದ್ದಂತೆ ಸರಸ್ವತೀ ಆರಾಧನೆ ಹೆಚ್ಚು ಪ್ರಚಲಿತ ವಾದಂತೆ ಕಾಣಬರುತ್ತದೆ. ಕೆಲವೆಡೆ ಸರಸ್ವತಿದೇವಿ ಗಾಗಿಯೇ ಕಟ್ಟಲಾಗಿರುವ ಸುಂದರ ದೇವಾಲಯಗಳೂ ಇವೆ. ಇದಕ್ಕೆ ಎರಡು ಕಾರಣಗಳನ್ನು ತೋರಿಸಬಹುದು: ೧. ವೇದ, ಪುರಾಣಗಳು ಸರಸ್ವತಿಯನ್ನು ಬ್ರಹ್ಮನ ಶಕ್ತಿ ಎಂದೂ ತಿಳಿಸುತ್ತವೆ. ಇದರಿಂದ ಬ್ರಹ್ಮೇಶ್ವರ ದೇವಾಲಯದ ಬಳಿ ಬರುವ ದೇವಿ ಆಲಯವು ಸರಸ್ವತೀ ದೇವಾಲಯವಾಗಿ ಪರಿಣಮಿಸಿರುವುದು. ಉದಾಹರಣೆ: ಅಬ್ಬಲೂರಿನ ಬ್ರಹ್ಮೇಶ್ವರ ಮತ್ತು ಗದಗಿನ ತ್ರಿಕೂಟೇಶ್ವರ ದೇವಾಲಯಗಳು. ೨. ಹೊಯ್ಸಳರ ಕಾಲದ ಅನೇಕ ದೇವಾಲಯಗಳ ನವರಂಗದಲ್ಲಿ 'ಸರಸ್ವತೀ ಮೂರ್ತಿಗಳನ್ನು ಸ್ಥಾಪಿಸಿರುವುದು.

ಹೊಯ್ಸಳರ ಕಾಲದ ಶಿಲ್ಪಗಳಲ್ಲಿ ಕೆಲವರು ತಮ್ಮನ್ನು 'ಸರಸ್ವತೀ ಗಣದಾಸಿ' ಎಂದೂ ಹೇಳಿಕೊಂಡಿದ್ದಾರೆ. ಇವರು ವಿದ್ಯಾವಂತರೂ ಕುಶಲಿಗಳೂ ಆಗಿದ್ದರೆಂದು ತಿಳಿದುಬರುತ್ತದೆ.[7] ಆಗ ಜೈನಧರ್ಮದ ಮೂಲ ಸಂಘದ 'ಸರಸ್ವತಿ ಗಣ'ವೆಂಬ ಶಾಖೆಯೊಂದು ಪ್ರಚಲಿತ ದಲ್ಲಿತ್ತು. ಈ ಎಲ್ಲ ಅಂಶಗಳಿಂದ ಸರಸ್ವತೀ ಆರಾಧ ನೆಯು ಕರ್ನಾಟಕದಲ್ಲಿ ಸುಮಾರು ೧೧-೧೨ನೇ ಶತಮಾನ ದಲ್ಲಿ ಹೆಚ್ಚು ಪ್ರಚಲಿತವಾಗಿತ್ತೆಂದು ಹೇಳಬಹುದು.

ಕರ್ನಾಟಕದಲ್ಲಿ ದೊರೆತಿರುವ ಸರಸ್ವತಿದೇವಿಯ ಶಿಲ್ಪಗಳನ್ನು ಗಮನಿಸಿದರೆ, ಗದಗಿನ ಸರಸ್ವತೀ ದೇವಾಲ ಯದ ಗರ್ಭಗೃಹದಲ್ಲಿರುವ ಸರಸ್ವತಿಯು ಪದ್ಮಪೀಠದ ಮೇಲೆ ಪದ್ಮಾಸನ ಭಂಗಿಯಲ್ಲಿ ಕುಳಿತಿದ್ದಾಳೆ. ಇವಳು ಧರಿಸಿರುವ ಕರಂಡಮುಕುಟವು ಸುಂದರವಾಗಿದ್ದು, ಅದರ ಕರ್ಣಪುಷ್ಪ, ಮುಕ್ತಾಫಲಗಳನ್ನು ಬಿಡಿಬಿಡಿಯಾಗಿ ಕೆತ್ತಲಾಗಿದೆ. ದೇವಿಯು ಕಿವಿಗಳಲ್ಲಿ ಮಕರಕುಂಡಲಗಳೂ ಕೊರಳಲ್ಲಿ ಎರಡು ಕಂಠಿಕೆಗಳೂ ಸುಂದರವಾದ ಉರ ಹಾರವೂ ಇವೆ. ಈ ದೇವಿಯು ಛನ್ನವೀರವನ್ನೂ ರತ್ನದ ಬಾಹುಪೂರಗಳನ್ನೂ ಧರಿಸಿದ್ದಾಳೆ. ಅವಳ ತೋಳಿನಲ್ಲಿ ರುವ ಕೇಯೂರಗಳು ಎದ್ದು ಕಾಣುವಂತಿಲ್ಲ. ದೇವಿಯ ಕೈಗಳು ಮುರಿದಿದ್ದು, ವಿವರಗಳು ತಿಳಿಯುವುದಿಲ್ಲ. ದೇವಿಗೆ ಶಿರದಲ್ಲಿ ಅಲಕಚೂಡಕದ ಅಲಂಕಾರವಿದೆ. ಸುರುಳಿ ಕೂದಲು ಭುಜದ ಮೇಲೂ ಹರಡಿದೆ. ಕತ್ತಿನಲ್ಲಿ ಕಂಠಿಕೆ, ಏಕಾವಳಿ, ತ್ರಿವಳಿಗಳಲ್ಲದೇ ಎರಡು ಸುಂದರ ವಾದ ಪದಕದ ಹಾರಗಳಿವೆ. ಉರಹಾರವಲ್ಲದೇ ಭುಜ ಗಳ ಮೇಲಿಂದ ವಸ್ತ್ರದಂತೆ ಹಾಕಿರುವ ಮಣಿಮಾಲೆ ಯೊಂದನ್ನು ದೇವಿ ಧರಿಸಿರುತ್ತಾಳೆ. ವಿಶೇಷವಾಗಿ ಛನ್ನವೀರವನ್ನು ಇಲ್ಲಿ ಕಾಣುತ್ತೇವೆ. ಪಟ್ಟಿಯಂತಹ ಯಜ್ಞೋಪವೀತವೂ ಇದೆ. ಕಟಿಸೂತ್ರವನ್ನು ಬಿಡಿಸಿರು ವರಲ್ಲದೇ ಚಿತ್ತಾರದ ವಸ್ತ್ರವು ಮೊಣಕಾಲವರೆಗೆ ಬಿಡಿಸ ಲಾಗಿದೆ. ಕಾಲಿನಲ್ಲಿ ಐದು ಕಡಗಗಳು, ಚೈನು, ಕಾಲುಂಗುರಗಳಿವೆ. ಕೈಗಳು ಮುರಿದಿದ್ದು ಹೆಚ್ಚಿನ ವಿವರ ಗಳು ತಿಳಿದುಬರುತ್ತಿಲ್ಲ. ಇಂಥ ದೇವಿಯು ಭದ್ರಪೀಠದ ಮೇಲೆ ಮಂಡಿಸಿದ್ದಾಳೆ. ಪೀಠದ ಮಧ್ಯಭಾಗದಲ್ಲಿ 'ಹಂಸಲಾಂಛನ'ವಿದೆ. ಪೀಠದ ಸುತ್ತ ನರ್ತನಭಂಗಿ ಯಲ್ಲಿರುವ ಸಣ್ಣ ಸಣ್ಣ ಬಿಂಬಗಳಿರುವುದು ಆಶ್ಚರ್ಯಕರ ವಾಗಿದೆ. ಪೀಠದ ಎರಡೂ ಅಂಚಿನಲ್ಲಿ ಆನೆಯನ್ನು ಬಿಡಿಸಲಾಗಿದೆ.

ಅಬ್ಬಲೂರಿನಲ್ಲಿರುವ ಬ್ರಹ್ಮೇಶ್ವರ ದೇವಾಲಯದ ಮುಂಭಾಗದಲ್ಲಿಯೂ ಸರಸ್ವತಿ ದೇವಾಲಯವಿದ್ದು, ಇಲ್ಲಿರುವ ದೇವಿಯ ಶಿಲ್ಪವು ಬಹು ಸುಂದರವಾಗಿದೆ. ದೇವಿಯನ್ನಾವರಿಸಿರುವ ಮಕರತೋರಣದ ಮಕರದ ಮೇಲೆ ಯಕ್ಷರನ್ನು ಬಿಡಿಸಲಾಗಿದೆ. ತೋರಣದ ಕೆಳ ಭಾಗದಲ್ಲಿ ಚಾಮರಧಾರಿಗಳಿದ್ದಾರೆ. ದೇವಿಯ ಕರಂಡ ಮಕುಟವು ಬಿಡಿಬಿಡಿಯಾಗಿ ಬಿಡಿಸಲಾಗಿರುವ ರತ್ನಮಯ ಕಿರೀಟವಾಗಿದೆ. ಕಿವಿಗಳಲ್ಲಿ ಮಕರಕುಂಡಲಗಳನ್ನೂ ತೋಳಿನಲ್ಲಿ ಭುಜಕೀರ್ತಿ ಮತ್ತು ಕೇಯೂರಗಳನ್ನೂ ಕಾಣುತ್ತೇವೆ. ದೇವಿಯು ಕೊರಳಿನಲ್ಲಿ ಕಂಠಿಕೆಯನ್ನಲ್ಲದೇ ಎರಡು ಹಾರಗಳನ್ನೂ ಧರಿಸಿದ್ದಾಳೆ. ಚತುರ್ಭುಜ ಳಾದ ದೇವಿಯು ಕ್ರಮವಾಗಿ ಬಲಕೆಳಗೈಯಲ್ಲಿ ಚಿನ್ಮುದ್ರೆ ಯಲ್ಲಿ ಅಕ್ಷಮಾಲೆಯನ್ನೂ ಮೇಲಿನ ಬಲಗೈಯಲ್ಲಿ ಅಂಕುಶವನ್ನೂ ಎಡ ಮೇಲ್ಗೈಯಲ್ಲಿ ಪಾಶವನ್ನೂ ಕೆಳ ಎಡಗೈಯಲ್ಲಿ ಪುಸ್ತಕವನ್ನೂ ಹಿಡಿದಿದ್ದಾಳೆ. ಇದರ

7 *E.C.*, Vol. XV, Bl. 257, 1140 A.D.

ಶಿಲ್ಪವಿನ್ಯಾಸವು ಕಲ್ಯಾಣಿ ಚಾಲುಕ್ಯರ ಶೈಲಿಯದಾಗಿದೆ.

ಹೀಗೆಯೇ, ಹಳೆಬೀಡಿನ ಬಳಿ ಇರುವ ಅಡಗೂರಿನ ಲಕ್ಷ್ಮೀನಾರಾಯಣ ದೇವಾಲಯ ತ್ರಿಕೂಟಾಚಲವಾಗಿದ್ದು, ಇದರ ಎಡಭಾಗದ ಗರ್ಭಗೃಹದಲ್ಲಿ ಸರಸ್ವತಿಯ ಬಿಂಬವಿದೆ. ಇದು ಹೊಯ್ಸಳರ ಶೈಲಿಯ ಸರಸ್ವತಿಯ ಪೂರ್ಣಶಿಲ್ಪವಾಗಿದೆ. ಇಲ್ಲಿ ನಾಲ್ಕು ಸಾಲಿನ ಪುಷ್ಪವಲ್ಲಿ ಮೊದಲಾದ ಪಟ್ಟಿಕೆಗಳಿಂದ ಕೂಡಿದ ಸುಂದರವಾದ ಮಕರತೋರಣದ ಕೆಳಗೆ, ದೇವಿಯು ಪದ್ಮಪೀಠದ ಮೇಲೆ ಮಂಡಿಸಿದ್ದಾಳೆ. ದೇವಿಗೆ ಶಿರಶ್ಚಕ್ರವಲ್ಲದೆ, ಸುಂದರವಾದ ರತ್ನದ ಕರಂಡಮಕುಟವೂ ಇದೆ. ಅಲಕಚೂಡಕದ ಮಾದರಿಯ ಕೇಶವನ್ನು ಬಿಡಿಸಲಾಗಿದೆ. ಕಿವಿಗಳಲ್ಲಿ ಮಕರಕುಂಡಲಗಳಿವೆ. ತೋಳಿನಲ್ಲಿ, ಮಣಿಯುಕ್ತವಾದ ಬಾಹುಪೂರ ಮತ್ತು ಕೇಯೂರಗಳೂ ಕೈಗಳಲ್ಲಿ ಸಣ್ಣ ಸಣ್ಣ ಬಳೆಗಳೂ ಕಡಗಗಳೂ ಇವೆ. ಎಡಭುಜದಿಂದ ಬಲಭಾಗದ ಕಡೆಗೆ ಹಾದು ಹೋಗಿರುವಂತೆ ಯಜ್ಞೋಪವೀತವನ್ನು ಬಿಡಿಸಲಾಗಿದೆ. ಕಾಲುಗಳಲ್ಲಿ ಎರಡು ಎರಡು ಬಳೆಗಳೂ ಬೆರಳುಗಳಲ್ಲಿ ಉಂಗುರಗಳೂ ಇವೆ. ಕಾಲುಗಳಲ್ಲಿ ಗೆಜ್ಜೆ, ಚೈನುಗಳು ಇವೆ. ಇಲ್ಲಿ ದೇವಿಯು ಪದ್ಮಾಸನ ಭಂಗಿಯಲ್ಲಿ ಕುಳಿತಿದ್ದಾಳೆ. ಚತುರ್ಭುಜೆಯಾದ ದೇವಿಯ ಕೈಗಳಲ್ಲಿ ಕೆಳಬಲಗೈಯಲ್ಲಿ ಚಿನ್ಮುದ್ರೆಯಲ್ಲಿ ಅಕ್ಷಮಾಲೆಯನ್ನು, ಬಲಮೇಲ್ಗೈಯಲ್ಲಿ ಅಂಕುಶವನ್ನು, ಎಡಮೇಲ್ಗೈಯಲ್ಲಿ ಪಾಶ ಮತ್ತು ಎಡಕೆಳಗೈಯಲ್ಲಿ ಪುಸ್ತಕಗಳನ್ನು ಕಾಣುತ್ತೇವೆ. ಇಲ್ಲಿ ದೇವಿಯ ಕೈಯಲ್ಲಿ ಪದ್ಮಚಿಹ್ನೆಯನ್ನು ಬಿಡಿಸಿದ್ದಾರೆ. ಅಕ್ಷಮಾಲೆಯ ಮಣಿಗಳು ರುದ್ರಾಕ್ಷಿಯಂತೆ ಬಿಡಿಸಲಾಗಿದ್ದು, ಬಿಡಿಬಿಡಿಯಾಗಿ ಬಿಡಿಸಿದೆ. ಪಾಶದ ಮೇಲ್ಭಾಗದಲ್ಲಿ ಕೀರ್ತಿಮುಖದ ಅಲಂಕಾರವಿದೆಯಲ್ಲದೆ ಅಂಕುಶಕ್ಕೆ ಮಣಿಯುಕ್ತವಾದ ಹಿಡಿಕೆಯಿದೆ. ಈ ವಿಶೇಷವಾದ ಕುಸುರಿ ಕೌಶಲ್ಯವು, ಶಿಲ್ಪವು ಹೊಯ್ಸಳರ ಶೈಲಿಯದೆಂದು ಸಾರಿ ಹೇಳುವಂತಿದೆ.

ಹಂಪೆಯ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಹೊಯ್ಸಳರ ಶೈಲಿಯನ್ನು ಅನುಕರಿಸಿ ಕಟ್ಟಲಾಗಿರುವ ಭುವನೇಶ್ವರಿ ದೇವಾಲಯವಿದೆ. ಆದರೆ ಇಲ್ಲಿಯ ಶಿಲ್ಪದ ಬಗೆಗೆ ಹೆಚ್ಚಿನ ವಿವರಗಳು ತಿಳಿದುಬರುತ್ತಿಲ್ಲ. ಈ ಬಿಂಬವನ್ನು 'ಭುವನೇಶ್ವರಿ' ಎಂದು ಕರೆಯುವರು. ಆದರೆ 'ಭುವನೇಶ್ವರಿ' ಎಂಬುದು ಸರಸ್ವತಿಯ ದ್ವಾದಶ ನಾಮಾವಳಿಯಲ್ಲಿ ಕಾಣಸಿಗುವ ಹನ್ನೆರಡನೇ ಹೆಸರೆಂದು ಸ್ತೋತ್ರಗಳು ತಿಳಿಸುತ್ತವೆ.[8] ಇದರಂತೆ ಭುವನೇಶ್ವರಿ ಶತಕವೆಂಬ ಕಾವ್ಯದಲ್ಲಿ ಕವಿಯು ದೇವಿಯನ್ನು ಹೀಗೆಂದು ವರ್ಣಿಸಿದ್ದಾನೆ :

ಶ್ರೀ ಪರಮೇಶ್ವರಿ ಗಗನದಂತೆ ವಿರಾಜಿಪುದೇನು
ನೀಂ ಜಗ
ದ್ವ್ಯಾಪಕೆ ರಾಜಹಂಸಗಮನಾಂಚಿತೆ ವಿಶ್ರುತ
ತಾರಾಕೋಪ ಸಂ
ದೀಪನೆ ಸತ್ಪಯೋಧರ ವಿಡಂಬನಶೋಭಿತೆ
ದಿವ್ಯರೂಪೆ
ಪಂಪಾಪುರಮಂದಿರೆ ವರದೆ ಸುಂದರೆ ನೀಂ
ಭುವನೈಕ ನಾಯಕಿ ॥[9]

ಇಲ್ಲಿ ಕವಿ ಬಳಸಿರುವ 'ಜಗದ್ವ್ಯಾಪಕೆ' 'ರಾಜಹಂಸ ಗಮನಾಂಚಿತೆ' 'ದಿವ್ಯರೂಪೆ'–ಮೊದಲಾದ ಗುಣವಾಚಕಗಳು ಸರಸ್ವತಿಯ ಲಕ್ಷಣಗಳೇ ಆಗಿವೆ. ಡಾ॥ ವಸುಂಧರಾ ಫಿಲಿಯೋಜಾರವರು ತಮ್ಮ ಗ್ರಂಥದಲ್ಲಿ, 'ಭುವನೇಶ್ವರಿ'ಯನ್ನೇ ವಿಜಯನಗರದ ಕಾಲದಲ್ಲಿ 'ಚಿಕ್ಕ ಪಂಪಾದೇವಿ' ಎಂದು ಕರೆಯುತ್ತಿದ್ದರೆಂದು ತಿಳಿಸುತ್ತಾರೆ.[10] 'ಹರಿಶ್ಚಂದ್ರಕಾವ್ಯ'ದಲ್ಲಿ ರಾಘವಾಂಕನು ಸರಸ್ವತಿಯನ್ನೇ ಪಂಪಾಂಬಿಕೆಯೆಂದು ಕರೆದಿದ್ದಾನೆ :

---

8 ಪ್ರಥಮಂ ಭಾರತೀ ನಾಮಂ ದ್ವಿತೀಯಂ ಚ ಸರಸ್ವತೀ ।
.... ॥
ನವಮಂ ಬುದ್ಧಿಧಾತ್ರೀ ಚ ದಶಮಂ ವರದಾಯಿನೀ ।
ಏಕಾದಶಂ ಕ್ಷುದ್ರಘಂಟಾ । ದ್ವಾದಶಂ ಭುವನೇಶ್ವರೀ ॥

9 ಟಿ. ಆರ್. ಮಹಾದೇವಯ್ಯ (ಸಂ) : ನಾಂದಿ, ಶ್ಲೋ. ಸಂ. ೪೫೧, ಪು. ೧೧೭

10 ಅಳಿದುಳಿದ ಹಂಪೆ, ಪು. ೨೭

ವಾಣಿಯರಿವಿನ ಬೆಳಗು ಮುಕುತಿವನಿತೆಯ
ಮುಡಿಯ
ಮಾಣಿಕಂ ಸರ್ವಮಂತ್ರಾದಿ ಪಂಚಾಕ್ಷರಿಯ
ಪ್ರಾಣ ಮಂಗಳದಮನೆ ದೇವಲೋಕದ ಜನ್ಮ
ಭೂಮಿ ತಾವರೆಗಣ್ಣನ ।
ರಾಣಿಯೆಸೆವೊಲವಾಗ್ಯಂ ಸರ್ವಸಿದ್ಧಿಗಳ
ತಾಣಂ ವಿರೂಪಾಕ್ಷನುನ್ನತೈಶ್ವರ್ಯದ
ಕ್ಷೋಣಿ ಪಂಪಾಂಬಿಕೆ ಮದೀಯ ಮತಿಗೀಗೆ
ಪ್ರಸನ್ನತೆಯನುತ್ಸವದೊಳಂ ॥ (೧-೨)

ಇದಲ್ಲದೆ, ವಿಜಯನಗರ ಕಾಲದ ಅನೇಕ ಶಾಸನಗಳು 'ಶ್ರೀ ಸರಸ್ವತೀಭ್ಯಾಂ ನಮಃ' ಎಂದೇ ಆರಂಭವಾಗುತ್ತವೆ. ಇದರಂತೆ 'ಭುವನೇಶ್ವರಿ'ಯೇ ಆಗ ನಾಡದೇವಿಯಾಗಿದ್ದುದನ್ನು ಗಮನಿಸಿದರೆ, ಬಹುಶಃ ಇದು ಸರಸ್ವತಿ ಬಿಂಬವೇ ಆಗಿದ್ದಿರಬೇಕೆನ್ನಿಸುವುದು. ಈಗಲೂ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ಮತ್ತೊಂದು ಸರಸ್ವತಿ ಶಿಲ್ಪವೂ ಇದೆ. ಇದು ೧೬ನೇ ಶತಮಾನದ ನಂತರದ ಕಾಲದ ಚಿಕ್ಕ ಮೂರ್ತಿ.

ಹೀಗೆ ಸರಸ್ವತಿಗಾಗಿಯೇ ನಿರ್ಮಿತವಾಗಿರುವ ದೇವಾಲಯಗಳಲ್ಲದೆ, ಸುಂದರವಾದ ಸರಸ್ವತಿಯ ಬಿಡಿ ಶಿಲ್ಪಗಳು ಹಲವೆಡೆ ಕಾಣಬರುತ್ತವೆ. ಇಂತಹ ಶಿಲ್ಪಗಳಲ್ಲಿ ಬಾಗಳಿಯ ಸರಸ್ವತಿ ಶಿಲ್ಪವು ಪ್ರಸಿದ್ಧವಾದುದ್ದಾಗಿದೆ. ಕಲ್ಯಾಣಿ ಚಾಲುಕ್ಯರ ಶೈಲಿಯ ಈ ಬಿಂಬದಲ್ಲಿ ದೇವಿಯು ಸುಂದರವಾದ ವಲ್ಲಿ, ಪ್ರಭಾವಳಿಯ ಕೆಳಗೆ ಶಿರಶ್ಚಕ್ರವುಳ್ಳ ಕರಂಡಮಕುಟವನ್ನು ಧರಿಸಿ ಪದ್ಮಾಸನದ ಮೇಲೆ ಕುಳಿತಿದ್ದಾಳೆ. ಇಲ್ಲಿ ಶಿರಶ್ಚಕ್ರ, ಕರಂಡಮಕುಟಗಳನ್ನು ಬಿಡಿಬಿಡಿಯಾಗಿ ಬಿಡಿಸಿದೆ. ದೇವಿಯ ಮುಡಿ ಅಲಕಚೂಡಕದ ಮಾದರಿಯಲ್ಲಿದೆ. ಕೊರಳಿನಲ್ಲಿ ಕಂಠಿಕೆಯಲ್ಲದೆ ಎರಡು ಉರಹಾರಗಳೂ ಎರಡು ಪದಕದ ಹಾರಗಳೂ ಇವೆ. ದೇವಿಯು ನೀಳವಾದ ಕಾಯವನ್ನು ಹೊಂದಿದ್ದು, ತೋಳಿನಲ್ಲಿ ಸುಂದರವಾದ ಬಾಹುಪೂರ, ಕೇಯೂರಗಳನ್ನೂ ಕೈಗಳಲ್ಲಿ ರತ್ನಕಂಕಣಗಳನ್ನೂ ಎಲ್ಲಾ ಬೆರಳುಗಳಲ್ಲಿ ಉಂಗುರಗಳನ್ನೂ ಧರಿಸಿದ್ದಾಳೆ. ದೇವಿಯ ಕೈಗಳಲ್ಲಿ ಕ್ರಮವಾಗಿ ಅಕ್ಷಮಾಲೆ, ಅಂಕುಶಪಾಶ, ಪುಸ್ತಕಗಳಿವೆ. ಕಾಲಿನಲ್ಲಿ ಗೆಜ್ಜೆಯಲ್ಲದೇ ಎರಡು–ಎರಡು ಅಂದಿಗೆಗಳೂ ಬೆರಳಿನಲ್ಲಿ ಉಂಗುರಗಳೂ ಇವೆ.

ಮಹಾಕೂಟದ ಮಹಾಕೂಟೇಶ್ವರ ದೇವಾಲಯದ ಆವರಣದಲ್ಲಿರುವ ಪರಿವಾರ ದೇವತೆಗಳ ಗುಡಿಯೊಂದರಲ್ಲಿ ಇಂತಹದೇ ಬಿಂಬವೊಂದಿದೆ. ಈ ದೇವಿಯ ಪೀಠದ ಕೆಳಗೆ ಹಂಸಲಾಂಛನವೂ ಇದೆ.

ಐಹೊಳೆಯ ವಿರೂಪಾಕ್ಷ ದೇವಾಲಯದ ಕಂಬವೊಂದರ ಮೇಲೆ ಸರಸ್ವತಿಯ ಉಬ್ಬುಶಿಲ್ಪವಿದೆ. ಇಲ್ಲಿ ದೇವಿಯ ಮುಂದಿನ ಎರಡು ಕೈಗಳು ಭಿನ್ನವಾಗಿದ್ದು, ಹಿಂದಿನ ಕೈಗಳಲ್ಲಿ ಪಾಶ, ಅಂಕುಶಗಳನ್ನು ಬಿಡಿಸಲಾಗಿದೆ. ಈ ದೇವಾಲಯವು ಸುಮಾರು ಹನ್ನೊಂದನೇ ಶತಮಾನದ ನಿರ್ಮಾಣವಾಗಿದೆ.

ಈ ಬಿಂಬಗಳಲ್ಲದೆ, ಹೊಯ್ಸಳರ ಕಾಲದ ಅನೇಕ ದೇವಾಲಯಗಳ ನವರಂಗದಲ್ಲಿ (ದೇವಕೋಷ್ಟಗಳಲ್ಲಿ) ಸರಸ್ವತಿಯ ಶಿಲ್ಪಗಳು ಕಾಣಸಿಗುತ್ತವೆ. ಅವುಗಳಲ್ಲಿ ಮುಖ್ಯವಾಗಿ ನಾಗಲಾಪುರ, ಕೋರವಂಗಲ, ನುಗ್ಗೇಹಳ್ಳಿ, ಬಸರಾಳು, ಭದ್ರಾವತಿ, ಬೆಳವಾಡಿ, ಹಾರ್ನಹಳ್ಳಿ, ಮೊಸಳೆ, ಅರಳುಗುಪ್ಪೆ, ಜಾವಗಲ್ಲು, ಹೊಸಹೊಳಲು ಮೊದಲಾದ ದೇವಾಲಯಗಳನ್ನು ಹೆಸರಿಸಬಹುದು. ಈ ಎಲ್ಲಾ ದೇವಾಲಯಗಳಲ್ಲಿ ಕಾಣಬರುವ ಸರಸ್ವತಿಯ ಶಿಲ್ಪಗಳೆಲ್ಲ ಬಹುಮಟ್ಟಿಗೆ ಒಂದೇ ಮಾದರಿಯಲ್ಲಿವೆ. ಪದ್ಮಪೀಠದ ಮೇಲೆ ದೇವಿಯು ಪದ್ಮಾಸನ ಭಂಗಿಯಲ್ಲಿ ಕುಳಿತಿರುತ್ತಾಳೆ. ಸುಂದರವಾದ ಕರಂಡಮುಕುಟವನ್ನು ಧರಿಸಿರುವ ದೇವಿಯ ಮುಡಿ ಅಲಕಚೂಡಕದ ಮಾದರಿಯಲ್ಲಿರುತ್ತದೆ. ದೇವಿಯು ಕಿವಿಗಳಲ್ಲಿ ಮಕರಕುಂಡಲಗಳನ್ನು/ರತ್ನಕುಂಡಲಿಗಳನ್ನು ಧರಿಸಿರುತ್ತಾಳೆ. ಕೊರಳಲ್ಲಿ ಕಂಠಿಕೆಯಲ್ಲದೆ, ಸುಂದರವಾದ ಪದಕದ ಹಾರಗಳನ್ನೂ ಉರಹಾರವನ್ನೂ ಯಜ್ಞೋಪವೀತವನ್ನೂ ಬಿಡಿಸಲಾಗಿರುತ್ತದೆ. ಮೇಖಲೆಯ ಮುಕ್ತಾವಳಿ ಕೆಲವೆಡೆ ಕಾಲಿನವರೆಗೆ ಇಳಿಬಿದ್ದಿರುತ್ತದೆ. ಬಿಡಿಬಿಡಿಯಾಗಿ ಮಣಿಗಳಂತೆ ಬಿಡಿಸಿರುವ ರತ್ನದ ಕೇಯೂರಗಳು, ಬಾಹುಪೂರ, ಕಡಗಗಳು, ಅಂಗುಲೀಯಕ, ಅಂದಿಗೆ ಮೊದಲಾದವು ಎಲ್ಲಾ ಬಿಂಬಗಳಲ್ಲೂ ಕಾಣಬರುವ ಆಭರಣಗಳಾಗಿವೆ. ದೇವಿಯು ಬಲಕೈಗಳಲ್ಲಿ ಕ್ರಮವಾಗಿ ಚಿನ್ಮುದ್ರೆಯಲ್ಲಿ ಅಕ್ಷಮಾಲೆಯನ್ನೂ ಮೇಲಿನ ಕೈಯಲ್ಲಿ ಅಂಕುಶವನ್ನೂ ಎಡಕೈಗಳಲ್ಲಿ ಪಾಶ ಮತ್ತು ಕೆಳಗೈಯಲ್ಲಿ 'ಪುಸ್ತಕ'ವನ್ನೂ ಹಿಡಿದಿರುತ್ತಾಳೆ. ಕೆಲವೆಡೆ

‘ಛನ್ನವೀರ’ವನ್ನೂ ಬಿಡಿಸಿರುತ್ತಾರೆ. ಕೆಲವು ಮೂರ್ತಿಗಳು ಸುಂದರವಾದ ಮಕರತೋರಣವನ್ನು ಹೊಂದಿವೆ. ‘ಶಿರಶ್ಚಕ್ರ’ ಮತ್ತು ‘ಹಂಸಲಾಂಛನ’ವು ಎಲ್ಲಾ ಬಿಂಬಗಳಲ್ಲೂ ಕಾಣಸಿಗುವುದಿಲ್ಲ. ದೊಡ್ಡದಾದ ತೋರಹಾರವೊಂದು ಕಾಲುಗಳ ಬಳಿ ಅರ್ಧಚಂದ್ರಾಕಾರವಾಗಿ ಬಂದಿರುವುದನ್ನು ಎಲ್ಲಾ ಬಿಂಬಗಳಲ್ಲೂ ಕಾಣುತ್ತೇವೆ. ಆದರೆ ಈ ಸರಸ್ವತಿಶಿಲ್ಪಗಳು, ಶಿಲ್ಪಶಾಸ್ತ್ರಗ್ರಂಥಗಳು ಸೂಚಿಸುವ ಸರಸ್ವತಿಯ ಲಕ್ಷಣಗಳನ್ನು ಹೊಂದಿಲ್ಲದಿರುವುದು ಆಶ್ಚರ್ಯಕರವಾಗಿದೆ. ಇಂತಹದೇ ಸರಸ್ವತಿಯ ಬಿಂಬಗಳನ್ನು ಜೈನಬಸದಿಗಳಲ್ಲೂ ಕಾಣುತ್ತೇವೆ.

ಜೈನಧರ್ಮದಲ್ಲಿ ‘ಸರಸ್ವತಿ’ಯು ಮಹಾವೀರ ತೀರ್ಥಂಕರನ ಯಕ್ಷಿದೇವತೆಯಾಗಿ ಕಾಣಿಸಿಕೊಳ್ಳುತ್ತಾಳೆ. ಅತ್ಯಂತ ಪ್ರಾಚೀನವಾದ ‘ಸರಸ್ವತಿ’ ಎಂಬ ಉಲ್ಲೇಖವುಳ್ಳ ಕಂಕಾಲಿದಿಣ್ಣೆಯ ಶಿಲ್ಪವು ವರ್ಧಮಾನಚೈತ್ಯದ ಬಳಿ ದೊರೆತದ್ದು ಎಂಬುದು ಗಮನಾರ್ಹ. ಶ್ವೇತಾಂಬರ ಪದ್ಧತಿಯಂತೆ ಈ ಯಕ್ಷಿಯನ್ನು ಚಿತ್ರಿಸಿದಾಗ, ಇವಳ ಬಿಂಬವು ಮೇಲೆ ತಿಳಿಸಿದ ‘ಸರಸ್ವತಿ’ ಶಿಲ್ಪದಂತೆ ಕಾಣಸಿಗುತ್ತದೆ. ಹಳೇಬೀಡಿನ ಬಸದಿಯಲ್ಲೂ ‘ಸಿದ್ಧಾಯಿಕೆ’ ಎಂದು ಕರೆಯಲ್ಪಡುವ ಇಂತಹ ಶಿಲ್ಪಗಳೇ ಇವೆ. ಜಿನನಾಥಪುರದ ಶಾಂತೀಶ್ವರ ಬಸದಿಯ ಹೊರಭಿತ್ತಿಯಲ್ಲಿ ಎರಡು ಸಿದ್ಧಾಯಿಕೆಯ ಬಿಂಬಗಳನ್ನು ಕೆತ್ತಲಾಗಿದೆ. ಹಾಗೆ ಶ್ರವಣಬೆಳಗೊಳದ ಭಂಡಾರಿಬಸದಿಯ ನವರಂಗದ ಕಂಬವೊಂದರ ಮೇಲೆ ಸಿದ್ಧಾಯಿಕೆಯ ಉಬ್ಬುಶಿಲ್ಪವಿದ್ದು, ಈ ಬಿಂಬವಿರುವ ಮಂಟಪವನ್ನು ‘ಸರಸ್ವತೀ ಮಂಟಪ’ವೆಂದೇ ಶಾಸನವು ಉಲ್ಲೇಖಿಸಿದೆ.[11] ಇದರಂತೆ ವೈದಿಕಧರ್ಮದಲ್ಲಿ ‘ಬ್ರಹ್ಮ’ದೇವರಿಗೆ ಪೂಜೆ ನಿಷಿದ್ಧವೆನಿಸಿದ್ದು, ಅವನ ಪತ್ನಿಯ ಸ್ವರೂಪದಲ್ಲಿ ಗುರುತಿಸುವ ಸರಸ್ವತಿಯ ಆರಾಧನೆಯು ಹೆಚ್ಚು ಪ್ರಚಲಿತವಾಗದಿರಲು ಕಾರಣವಿದ್ದಿರಬೇಕು. ಜೈನಧರ್ಮ ಹೆಚ್ಚು ಪಸರಿಸಿದ ಕಾಲದಲ್ಲಿ ಅದರ ಯಕ್ಷದೇವತೆಗಳಲ್ಲೊಬ್ಬನಾದ ಬ್ರಹ್ಮದೇವರ ಶಿಲ್ಪಗಳೂ ಯಕ್ಷಿಯರಲ್ಲೊಬ್ಬಳಾಗಿದ್ದ ಸರಸ್ವತಿಯ ಶಿಲ್ಪಗಳೂ ದೇವಾಲಯಗಳಲ್ಲಿ ಪೂಜೆಗೊಂಡಿವೆ. ಆದರೆ ಈ ಎರಡು ಬಿಂಬಗಳು ಜೈನಧರ್ಮದಲ್ಲೂ ತಮ್ಮ ಲಕ್ಷಣಗಳಲ್ಲಿ ವ್ಯತ್ಯಾಸವನ್ನು ಹೊಂದಿರುವುದಿಲ್ಲ. ಇದರಂತೆ ಹೊಯ್ಸಳರ ಕಾಲದಲ್ಲಿ ವಿವಿಧ ಪ್ರಾಂತ್ಯಗಳ ಶಿಲ್ಪಿಗಳು ದೇವಾಲಯ ನಿರ್ಮಾಣದಲ್ಲಿ ಪಾಲ್ಗೊಂಡಿದ್ದರೆಂದು ತಿಳಿದುಬರುತ್ತದೆ ಇದರಿಂದ ಬಹುಶಃ ‘ಸರಸ್ವತಿಗಣದಾಸಿ’ಗಳ ಸಮೂಹಕ್ಕೆ ಸೇರಿದ್ದ ಶಿಲ್ಪಿಗಳು ಶಿಲ್ಪಕಾರ್ಯದಲ್ಲಿ ತೊಡಗಿದ ಕಡೆಯಲ್ಲೆಲ್ಲ ಮೊದಲು ತಮ್ಮ ಆರಾಧ್ಯದೈವವಾಗಿದ್ದ ಸರಸ್ವತಿಯ ಶಿಲ್ಪವನ್ನು ಬಿಡಿಸಿ ನವರಂಗದಲ್ಲಿಟ್ಟು ಕೆಲಕಾಲ ಪೂಜಿಸಿರಬೇಕು. ಅನಂತರವೂ ಪೂಜೆಗೊಂಡಿದ್ದ ವಿಗ್ರಹವನ್ನು ತೆಗೆಯಲಾಗದೇ ಎಲ್ಲೆಡೆ ನವರಂಗದಲ್ಲಿ ಈಗಲೂ ಇಡಲಾಗಿದೆ. ಈ ಕಾರಣದಿಂದಲೇ ಹೀಗೆ ಕಾಣಬರುವ ಹಲವಾರು ಸರಸ್ವತೀ ಶಿಲ್ಪಗಳು ಶಾಸ್ತ್ರಗ್ರಂಥದ ಲಕ್ಷಣಗಳಿಗೆ ಅನುಗುಣವಾಗಿಲ್ಲವೆನ್ನಬಹುದು.

ಹೊಯ್ಸಳರ ಕಾಲದಲ್ಲಿ ಕಲೆ ಮತ್ತು ಸಾಹಿತ್ಯವು ಹೆಚ್ಚು ವಿಕಾಸಗೊಂಡಿತೆನ್ನಬಹುದು. ದೇವಾಲಯಗಳಲ್ಲಿ ಸುಮಾರು ೮–೯ನೇ ಶತಮಾನದಿಂದ ರಂಗಭೋಗದ ಸಂಪ್ರದಾಯವು ಪ್ರಚಲಿತದಲ್ಲಿತ್ತು. ಸುಮಾರು ೧೦-೧೧ನೇ ಶತಮಾನದಲ್ಲಿ ಅನೇಕ ಬಿಂಬಗಳನ್ನು ನಾಟ್ಯಭಂಗಿಗಳಲ್ಲಿ ಬಿಡಿಸುತ್ತಿದ್ದರು. ಹೀಗೆ ಸರಸ್ವತಿಯನ್ನು ನಾಟ್ಯಭಂಗಿಯಲ್ಲಿ ಬಿಡಿಸಿರುವ ಅನೇಕ ಶಿಲ್ಪಗಳನ್ನು ಹೊಯ್ಸಳರ ದೇವಾಲಯದ ಹೊರಭಿತ್ತಿಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ, ಬಸರಾಳಿನ ಮಲ್ಲಿಕಾರ್ಜುನ ದೇವಾಲಯ, ಬೇಲೂರು, ಸೋಮನಾಥಪುರಗಳ ಕೇಶವ ದೇವಾಲಯಗಳ ಹೊರಭಿತ್ತಿಗಳಲ್ಲಿ ಸುಂದರವಾದ ‘ನಾಟ್ಯ ಸರಸ್ವತಿ’ಯ ಶಿಲ್ಪಗಳಿವೆ. ಈ ದೇವಿಯನ್ನು ನಾಟ್ಯಭಂಗಿಯಲ್ಲಿ ಸಾಮಾನ್ಯವಾಗಿ ೮ ಕೈ ಅಥವಾ ೧೬ ಕೈಗಳಿರುವಂತೆ ಬಿಡಿಸಲಾಗಿದ್ದು, ಬಳಿಯಲ್ಲಿ ಗರಿಕೆದರಿರುವ ನವಿಲು, ಹಂಸವೂ ತಾಳವಾದಕಿಯರೂ ಇರುತ್ತಾರೆ. ಹೊಯ್ಸಳ ವಿಷ್ಣುವರ್ಧನನ ಪತ್ನಿ ‘ಶಾಂತಲೆ’ಗೆ ‘ನಾಟ್ಯಸರಸ್ವತಿ’ ಎಂಬ ಅಭಿಧಾನವಿದ್ದಿತು ಹಾಗೂ ಅನೇಕ ಶಾಸನಗಳಲ್ಲಿ

---

11. ಪಿ.ವಿ. ಕೃಷ್ಣಮೂರ್ತಿ : ‘ಚೆಂಗಾಳ್ವರ ಶಾಸನ’, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಜೂನ್ ೧೯೮೨ ; ಹೀಗೆ ನವರಂಗದಲ್ಲಿ ಸರಸ್ವತಿ ಬಿಂಬಗಳಿದ್ದ ಹಲವು ದೇವಾಲಯಗಳಲ್ಲಿ ಈ ನವರಂಗ ಮಂಟಪಗಳನ್ನು ಸರಸ್ವತಿಮಂಟಪಗಳೆಂದೇ ಉಲ್ಲೇಖಿಸಲಾಗಿದೆ., *S.I.I*–IX-I, ೧೨೮, ಕ್ರಿ.ಶ. ೧೦೬೫.

ನೃತ್ಯ ಪ್ರವೀಣರನ್ನು ನಾಟ್ಯಸರಸ್ವತಿ ಎಂದೇ ಗುರುತಿಸಲಾಗಿದೆ. ಇಂತಹ ಶಿಲ್ಪಗಳನ್ನು ಕೆಲವೆಡೆ ಮಕರತೋರಣದಲ್ಲಿ ಮತ್ತು ಲಲಾಟಬಿಂಬಗಳಾಗಿ ಅಥವಾ ವಿತಾನಾಲಂಕರಣದಲ್ಲಿ ಬಳಸಲಾಗಿದೆಯಲ್ಲದೇ ಗರ್ಭಗೃಹದಲ್ಲೆಲ್ಲೂ ಕಾಣಬರುವುದಿಲ್ಲ.

ಈ ದೇವಿಯ ಆರಾಧನೆಯ ಮುಂದಿನ ಹಂತವನ್ನು ಗಮನಿಸಿದರೆ ಸುಮಾರು ೧೪–೧೫ನೇ ಶತಮಾನದ ನಂತರದಲ್ಲಿ ನಿರ್ಮಾಣವಾಗಿರುವ ದೇವಾಲಯಗಳ ನವರಂಗದಲ್ಲಿ ಸರಸ್ವತಿಯ ಶಿಲ್ಪಗಳು ಕಾಣಬರುವುದಿಲ್ಲ. ಆದರೆ ಇದರಿಂದ ಸರಸ್ವತಿ ಆರಾಧನೆಯ ಪ್ರಭಾವವು ಕಡಿಮೆಯಾಯಿತೆಂದು ಹೇಳಲಾಗದು. ಬದಲಿಗೆ ಸುಮಾರು ೧೫-೧೬ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಹಲವಾರು ಧಾರ್ಮಿಕ ಸ್ಥಿತ್ಯಂತರಗಳಾದವು. ಇದರ ಅಂಗವಾಗಿ ರಾಮಾನುಜಕೂಟ, ದಾಸಕೂಟ, ಶಿವಕೂಟ ಮೊದಲಾದ ಕೇಂದ್ರಗಳಲ್ಲಿ ಚರ್ಚೆ, ಸಭೆ ಮೊದಲಾದವು ನಡೆಯುತ್ತಿದ್ದುವೆಂದು ತಿಳಿಯುತ್ತದೆ. ಜನರ ಪ್ರತಿಭಾ ಪ್ರದರ್ಶನಕ್ಕಾಗಿಯೇ ವಿಜಯನಗರದ ಅರಸರು 'ನವರಾತ್ರಿ' ಹಬ್ಬವನ್ನು ನಾಡಹಬ್ಬವನ್ನಾಗಿ ಆಚರಿಸಲು ಆರಂಭಿಸಿದ್ದನ್ನು ಗಮನಿಸಬಹುದಾಗಿದೆ. ಈ ನವರಾತ್ರಿ ಕಾಲದಲ್ಲಿ ಮಾಡುವ ವಿಶೇಷ ಪೂಜೆಗಳು ಪ್ರತಿದಿನವು ಸರಸ್ವತಿಯ ವಿವಿಧ ಅವತಾರಗಳನ್ನು ಪೂಜಿಸುವ ದಿನಗಳಾಗಿವೆ. ಇದು ಸರಸ್ವತಿ ಆರಾಧನೆಯು ಅಂದಿನಿಂದ ಇಂದಿನವರೆಗೆ ಉಳಿದುಬಂದಿರುವ ಕ್ರಮವನ್ನು ಸೂಚಿಸುತ್ತದೆ. ವಿಜಯನಗರದ ದೊರೆ ೨ನೇ ಹರಿಹರನ ಕಾಲದಲ್ಲಿ 'ಸರಸ್ವತಿ-ಬ್ರಹ್ಮ'ರ ಲಾಂಛನವಿರುವ ನಾಣ್ಯಗಳನ್ನು ಟಂಕಿಸಿದ್ದನ್ನು ಕಾಣುತ್ತೇವೆ. ಇದೇ ಕಾಲದ ಹಲವಾರು ಶಾಸನಗಳಲ್ಲಿ 'ಶ್ರೀ ಸರಸ್ವತೀಭ್ಯಾಂ ನಮಃ' ಎಂಬ ಪ್ರಾರ್ಥನೆಯು ಕಾಣಬರುತ್ತದೆ. ಇದನ್ನು ಗಮನಿಸಿದರೆ ಬಹುಶಃ ಹಂಪೆಯ ಭುವನೇಶ್ವರಿ ದೇವಾಲಯವು ಈ ಕಾಲದಲ್ಲೇ ನಿರ್ಮಾಣಗೊಂಡಿದ್ದಿರಬಹುದು.

ವಿಜಯನಗರದ ಅರಸರ ಕಾಲದಲ್ಲಿ ವರ್ಣಚಿತ್ರ ಕಲೆಯು ಬಹಳ ಪ್ರಗತಿ ಹೊಂದಿತು. ಅಲ್ಲದೇ, ಈ ಸುಮಾರಿಗೆ ಅನೇಕ ಶಿಲ್ಪಶಾಸ್ತ್ರ ಗ್ರಂಥಗಳೂ ಬೆಳಕಿಗೆ ಬಂದಿದ್ದು, ವೈದಿಕ ಪರಂಪರೆಗನುಗುಣವಾಗಿ ನಿರ್ಮಾಣಗೊಂಡ ಸರಸ್ವತಿಶಿಲ್ಪಗಳೂ ಕಂಡುಬರುತ್ತವೆ. ಲೇಪಾಕ್ಷಿಯ ವೀರಭದ್ರ ದೇವಾಲಯದ ಉಬ್ಬುಶಿಲ್ಪಗಳಲ್ಲಿ ಇಂಥ ಸರಸ್ವತಿಯ ಬಿಂಬವಿದೆ. ಬೆಂಗಳೂರಿನ ಕಾಶೀ ವಿಶ್ವೇಶ್ವರ ದೇವಾಲಯದ ಪ್ರಾಕಾರದಲ್ಲಿ ಈ ಕಾಲದ ಸರಸ್ವತಿಯ ಬಿಡಿಶಿಲ್ಪವೊಂದಿದ್ದು, ಹಿಂಗೈಗಳಲ್ಲಿ ಅಕ್ಷಮಾಲೆ, ಪುಸ್ತಕವನ್ನೂ ಮುಂದಿನ ಕೈಗಳಲ್ಲಿ ವೀಣೆಯನ್ನೂ ಹಿಡಿದಿರುವಂತೆ ಬಿಡಿಸಲಾಗಿದೆ. ಈ ದೇವಿಯ ಪೀಠದ ಕೆಳಗೆ ಹಂಸಲಾಂಛನವೂ ಇದೆ. ಮೈಸೂರರಸರ ಕಾಲದಲ್ಲಿ ನಮಗೆ ಸರಸ್ವತಿಯು ಶಿಲ್ಪಗಳಿಗಿಂತ ವರ್ಣಚಿತ್ರಗಳಲ್ಲಿ ಹೆಚ್ಚಾಗಿ ರೂಪುಗೊಂಡಿದ್ದಾಳೆ. ಆದರೆ ಈ ವರ್ಣಚಿತ್ರಗಳಲ್ಲಿ ಕೆಲವೆಡೆ ಶಿಲ್ಪಶಾಸ್ತ್ರಾನುಸಾರವಾಗಿ ಚಿತ್ರಿತವಾಗಿದ್ದರೆ, ಹಲವೆಡೆ ಚಿತ್ರಗಾರನ ಸ್ವಕಲ್ಪನೆ-ಪ್ರಾಧಾನ್ಯತೆ ಪಡೆದಿದೆ. ಅವಳ ಎಲ್ಲಾ ಅಂಶಗಳೂ ವ್ಯಕ್ತಗೊಂಡಿರುವಂತೆ, ನದಿತೀರದಲ್ಲಿ ನವಿಲಿನ ಮೇಲಿರುವಂತೆ, ಬಿಳಿ ತಾವರೆಗಳು ಕಾಲಬಳಿ ಪೀಠದೋಪಾದಿಯಲ್ಲಿರುವಂತೆ ಚಿತ್ರಿಸಲಾಗಿದ್ದು, ಕೈಗಳಲ್ಲಿ ಅಕ್ಷಮಾಲೆ, ಪುಸ್ತಕಗಳೂ ಮುಂಗೈಗಳಲ್ಲಿ ವೀಣೆಯೂ ಇರುವಂತೆ ಬಿಡಿಸಿರುತ್ತಾರೆ. ಹೀಗೆ ೧೯–೨೦ನೇ ಶತಮಾನದ ಹೊತ್ತಿಗೆ ಸರ್ವಲಕ್ಷಣಗಳನ್ನೂ ಅಭಿವ್ಯಕ್ತಿಸುವ ಸರಸ್ವತಿಯ ಆಕಾರವು ಪ್ರಚಲಿತವಾಗಿದೆ ಎನ್ನಬಹುದು.

ಒಟ್ಟಿನಲ್ಲಿ, ವೇದಗಳ ಕಾಲದಲ್ಲಿ ಆರಂಭವಾದ ಸರಸ್ವತೀ ಆರಾಧನೆಯು ಹೀಗೆ ನಿರಂತರವಾಗಿ ಗುಪ್ತಗಾಮಿನಿಯಾದರೂ ಚೈತನ್ಯದಾಯಿನಿಯಾಗಿ ಇಂದಿನವರೆಗೂ ಸಾಗಿ ಬಂದಿರುವುದನ್ನು ಗಮನಿಸಬಹುದಾಗಿದೆ.*

---

* ಸರಸ್ವತಿಯ ಶಿಲ್ಪವೈವಿಧ್ಯದ ಬಗೆಗೆ ನನ್ನ ಗಮನ ಸೆಳೆದು ಪ್ರೇರೇಪಿಸಿ ಪ್ರೋತ್ಸಾಹಿಸಿದ ನನ್ನ ಗುರುಗಳಾದ ಡಾ॥ ಆರ್. ಶೇಷಶಾಸ್ತ್ರಿ ಮತ್ತು ಶ್ರೀ ದೇವರಕೊಂಡಾರೆಡ್ಡಿಯವರಿಗೆ ನಾನು ಋಣಿಯಾಗಿರುವೆ.

ಅನುಬಂಧ

ಶಿಲ್ಪಶಾಸ್ತ್ರಗ್ರಂಥಗಳು ತಿಳಿಸುವ ಸರಸ್ವತಿಶಿಲ್ಪದ ಲಕ್ಷಣಗಳು:[12]

೧. **ಅಂಶುಭೇದಾಗಮ :**

ಸರಸ್ವತೀ ಚತುರ್ಹಸ್ತಾ ಶ್ವೇತಪದ್ಮಾ ಸಮನ್ವಿತಾ ।
ಜಟಾಮಕುಟ ಸಂಯುಕ್ತಾ ಶುಕ್ಲವರ್ಣಾ ಸಿತಾಂಬರಾ ॥
ಯಜ್ಞೋಪವೀತ ಸಂಯುಕ್ತಾ ರತ್ನಕುಂಡಲ ಮಂಡಿತಾ ।
ವ್ಯಾಖ್ಯಾನಂ ಚಾಕ್ಷಸೂತ್ರಂ ಚ ದಕ್ಷಿಣೆ ತು ಕರದ್ವಯೆ ।
ಪುಸ್ತಕಂ ಪುಂಡರೀಕಂ ಚ ತ್ರಿನೇತ್ರಾ ಚಾರುರೂಪಿಣಿ ॥
ಋಷ್ಯಾಗತ ಕೃತಸ್ಸರ್ವೆ ಮುನಿಭಿಃ ಸ್ಸೇವಿತಾ ವರಾ ।
ಏವಂ ಲಕ್ಷಣ ಸಂಯುಕ್ತಾ ವಾಗ್ದೇವಿ ಪರಿಕೀರ್ತಿತಾ ॥

೨. **ಪೂರ್ವಕರಣಾಗಮ :**

ಶ್ವೇತ ಪದ್ಮಾಸನಾಸೀನಾಂ ಶುಕ್ಲವರ್ಣಂ ಚತುರ್ಭುಜಾಂ ।
ಜಟಾಮಕುಟಸಂಯುಕ್ತಾಂ ಮುಕ್ತಾಕುಂಡಲ ಮಂಡಿತಾಂ ।
ಯಜ್ಞೋಪವೀತಿನೀಂ ಹಾರಮುಕ್ತಾಭರಣ ಭೂಷಿತಾಂ ।
ದುಕೂಲವಸನಾಂ ದೇವೀಂ ನೇತ್ರತ್ರಯ ಸಮನ್ವಿತಾಂ ।
ಸದಶಂ (ಸುದಂಡಂ) ದಕ್ಷಿಣೇಹಸ್ತೇ ವಾಮಹಸ್ತೇ ತು ಪುಸ್ತಕಂ ।
ದಕ್ಷಿಣೆ ಚಾಕ್ಷಮಾಲಾ ಚ ಕರಕಂ ವಾಮಕೆ ಕರೆ ॥
ವಾಗೀಶ್ಯಾಕೃತಿರಾಖ್ಯಾತಾ ದುರ್ಗಾಯಾಕೃತಿರುಚ್ಯತೇ ॥

೩. **ರೂಪಮಂಡನ :**

ಏಕವಕ್ತ್ರಾ ಚತುರ್ಹಸ್ತಾ ಮುಕುಟೇನ ವಿರಾಜಿತಾ ।
ಪ್ರಭಾಮಂಡಲ ಸಂಯುಕ್ತಾ ಕುಂಡಲಾನ್ವಿತ ಶೇಖರಾ
ಅಕ್ಷಾಬ್ಜ ವೀಣಾ ಪುಸ್ತಕಂ ಮಹಾವಿದ್ಯಾ ಪ್ರಕೀರ್ತಿತಾ
ವರಾಕ್ಷಾಬ್ಜಂ ಪುಸ್ತಕಂ ಚ ಸರಸ್ವತೀ ಶುಭಾವಹಾಃ ॥

೪. **ವಿಷ್ಣುಧರ್ಮೋತ್ತರ ಪುರಾಣ :**

ಪುಸ್ತಕಂ ಚಾ ಅಕ್ಷಮಾಲಾ ಚ ತಸ್ಯಾ ದಕ್ಷಿಣ–ಹಸ್ತಯೋಃ ।
ವಾಮಯೋಶ್ಚ ತಥಾ ಕಾರ್ಯ ವೈಣವೀ ಚ ಕಮಂಡುಲುಃ ॥
ಸಮಪಾದ ಪ್ರತಿಷ್ಠಾ ಚಾ ಕಾರ್ಯ ಸೌಮ್ಯಮುಖೀ ತಥಾ ॥

---

12 T. A. Gopinath Rao : *Elements of Hindu Iconography*, Vol. I, Part II, Appendix-C, p.136

ಉಷಾ ಭೆಂಡೆ

ಪಾಟೇಶ್ವರ ದೇವಾಲಯ ಸಮೂಹದ ಬಿಂಬಗಳ ಕೆಲವು ಗಮನಾರ್ಹ ಶಿಲ್ಪಲಕ್ಷಣಗಳು

ಮಹಾರಾಷ್ಟ್ರದ ಸತಾರಾದಿಂದ ಸುಮಾರು ೭ ಕಿ.ಮೀ.ದೂರದ ಬೆಟ್ಟಸಾಲುಗಳ ಮೇಲೆ ದೇಗಾಂವೆ ಬಳಿ ಇರುವ ಪಾಟೇಶ್ವರ ಗುಹಾದೇವಾಲಯಗಳ ಬಗ್ಗೆ ಹಳೆಯ ಸತಾರಾ ಕೋಶ(Gazetteer)ದಲ್ಲಿ ಮಾಹಿತಿ ಇರುವುದಾದರೂ ಮೊದಲಬಾರಿಗೆ ಇಲ್ಲಿ ಅವುಗಳ ಬಗ್ಗೆ ವಿವರವಾದ ಅಧ್ಯಯನವನ್ನು ಮಾಡಲಾಗಿದೆ.

ಮೆಟ್ಟಿಲು ಮೆಟ್ಟಿಲಾದ ಎರಡು ಕಲ್ಲಿನ ಕಲ್ಯಾಣಿಗಳ ಪಕ್ಕದಲ್ಲಿರುವ ಈ ದೇವಾಲಯ ಸಮೂಹದಲ್ಲಿ, ಪ್ರಾಕಾರದಿಂದ ಕೂಡಿದ ಪಾಟೇಶ್ವರ ದೇವಾಲಯ ಮತ್ತು ಭಾಗಶಃ ಕಟ್ಟಿದ ಹಾಗೂ ಭಾಗಶಃ ಕೊರೆದ ಐದು ಗುಹಾಲಯಗಳಿವೆ. ಈ ದೇವಾಲಯಗಳಲ್ಲಿರುವ ಕೆಲವು ಗಮನ ಸೆಳೆಯುವ ಬಿಂಬಗಳೆಂದರೆ ಪಾಟೇಶ್ವರ ದೇವಾಲಯದ ಗಣೇಶಾನೀ, ದುರ್ಗಾ, ಷಣ್ಮುಖ, ಎಲ್ಲಾ ಗುಹಾದೇವಾಲಯಗಳಲ್ಲಿನ ಶಿವಲಿಂಗ, ವಿಷ್ಣುವಿನ ದ್ವಾದಶಾವತಾರದ ಪಟ್ಟಿಕೆಗಳು, ತ್ರೈಮಾತೆಯರ ಪಟ್ಟಿಕೆಯ ಮಹಾಕಾಳೀ, ಮಹಾಲಕ್ಷ್ಮೀ ಮತ್ತು ಮಹಾಸರಸ್ವತಿ, ಚಾಮುಂಡಿಯ ಬಿಂಬ, ಅಷ್ಟಮಾತೃಕಾ ಪಟ್ಟಿಕೆ, ಹನ್ನೊಂದು ದೇವತೆಗಳ (ಏಕಾದಶ ರುದ್ರರು?) ಒಂದು ಪಟ್ಟಿಕೆ, ಸೂರ್ಯ ಅಥವಾ ಕೇಶವ ಅಥವಾ ದುರ್ಗಾ ಇರುವ ಸಹಸ್ರಲಿಂಗ ಪಟ್ಟಿಕೆ ಹಾಗೂ ಎಂಟು ಕೈ ಇರುವ ಪ್ರಾಣಿ–ಮಾನವರೂಪದ ನಂದಿ.

ಈ ಬಿಂಬಗಳಲ್ಲಿ ಕಾಣಬರುವ ಕೆಲವು ಆಸಕ್ತಿದಾಯಕ ಮತ್ತು ವಿಶೇಷ ಲಕ್ಷಣಗಳು ಹೀಗಿವೆ : ಇಲ್ಲಿ ಗಣೇಶಾನೀ ಇರುವುದು ಮಹತ್ವವಾದುದೆನಿಸುತ್ತದೆ. ಏಕೆಂದರೆ, ದಖ್ಖನ್ ಮತ್ತು ದಕ್ಷಿಣಭಾರತದಲ್ಲಿ (ಬೇರಾಘಾಟ್‌ನಲ್ಲಿರುವ ಚೌಸತ್‌ಯೋಗಿನೀ ದೇವಾಲಯದಲ್ಲಿರುವಂತೆ) ಗಣೇಶಾನಿಯನ್ನು ಹೆಚ್ಚಾಗಿ ಚಿತ್ರಿಸಿರುವುದಿಲ್ಲ. ದ್ವಾದಶಾವತಾರದ ಪಟ್ಟಿಕೆಯೇ ಅಪರೂಪದ್ದಾಗಿದ್ದು, ಅದರಲ್ಲಿ ವರಾಹಮೂರ್ತಿಯನ್ನು ಪೂರ್ಣವಾಗಿ ಪ್ರಾಣಿರೂಪದಲ್ಲಿ ಕಡೆಯಲಾಗಿದೆ. ಬುದ್ಧ ಮತ್ತು ತೀರ್ಥಂಕರರಿಬ್ಬರೂ ಪದ್ಮಾಸನದಲ್ಲಿದ್ದಾರೆ. ಅಪರೂಪವಾದ ತ್ರೈಮಾತೆಯರನ್ನು ಚಿತ್ರಿಸಿದ್ದು (ಮಾತೃಕಾದ ಒಂದು ಬಗೆಯಲ್ಲಿ),ಅದರೊಂದಿಗೆ ಅವರವರ ವಾಹನವೂ ಇವೆ. ಯೋಗಿಯಿಂದ ಪೂಜಿಸಲ್ಪಡುತ್ತಿರುವ ಇವು, ಸುಮಾರು ಹನ್ನೊಂದನೇ ಶತಮಾನದಿಂದ ಇಲ್ಲಿ ಪ್ರಸಿದ್ಧವಾಗಿದ್ದ ಮಹಾಲಕ್ಷ್ಮಿ ಆರಾಧನೆಗೆ ಅನುಗುಣವಾಗಿವೆ. ಅಷ್ಟಮಾತೃಕಾದಲ್ಲಿ ಗಣೇಶ ಮತ್ತು ವೀಣಾಧರರಿಲ್ಲದೆ, ಸಾಮಾನ್ಯವಾಗಿ ವೀರಭದ್ರನು ಈ ದೇವತೆಗಳ ಪಕ್ಕದಲ್ಲಿದ್ದಾನೆ. ಏಕಾದಶಲಿಂಗಗಳು ಎತ್ತರವಿಲ್ಲದ ಪೀಠಗಳ ಮೇಲಿದ್ದು, ಆ ಪೀಠಗಳು ತ್ರಿಕೋನ, ಬಿಲ್ಲು, ನಕ್ಷತ್ರ ಮುಂತಾದ ಆಕಾರಗಳಲ್ಲಿವೆ ; ಒಂದೊಂದೂ ತ್ರಿಶೂಲದಂತಹ ಭಿನ್ನವಾದ ಗುರುತುಗಳಿಂದ ಕೂಡಿವೆ. ಸಣ್ಣ ಸಣ್ಣ ಲಿಂಗಗಳ ಸಾಲುಗಳಿಂದ ಕೂಡಿದ ಸರಳಪೀಠದ ಮೇಲಿರುವ ಬೃಹದಾಕಾರದ ಲಿಂಗ ಮತ್ತು ವಿಷ್ಣು, ಕೇಶವ, ದುರ್ಗಾ–ಇರುವ ಸಹಸ್ರಲಿಂಗ ಪಟ್ಟಿಕೆಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ನಂದೀಶ್ವರನ ಬಿಂಬ

ದಲ್ಲಿ ಮುಂಭಾಗವನ್ನು ಮನುಷ್ಯಾಕೃತಿಯಂತೆ ಕಡೆಯ ಲಾಗಿದೆ. ಎಂಟು ಕೈ ಇದ್ದು ಪದ್ಮಾಸನದಲ್ಲಿ ಕುಳಿತಿದ್ದಾನೆ. ಗಲ್ಲವು ನಂದಿಯ ಮೂತಿಯಂತಿದೆ. ತಲೆಯಿಂದ ಹಿಂದಿನ ಭಾಗವು ನೆಲಕ್ಕೆ ಹೊಟ್ಟೆಯೂನಿಸಿ ಮಲಗಿ ತಲೆ ಎತ್ತಿಕೊಂಡಿರುವ ನಂದಿಯಂತೆ (ಮೃಗರೂಪದ ದೇವತೆಯಂತೆ) ಬಿಡಿಸಿದೆ. ಒಂದು ಕೈ ಚಿನ್ಮುದ್ರೆಯಲ್ಲಿಯೂ ಉಳಿದ ಕೈಗಳು ಬಿಲ್ಲು ಬಾಣ, ಶೂಲ, ಖೇಟಕಧಾರಿಗಳಾಗಿಯೂ ಉಳಿದೆರಡು ಕೈಗಳು ಅಭಯ ಮತ್ತು (ಜಪಮಾಲೆ ಸಹಿತವಾದ) ವರದಮುದ್ರೆಗಳಲ್ಲಿಯೂ ಇವೆ.

ದ್ವಾದಶಾವತಾರ, ತ್ರೈದೇವೀ, ಏಕಾದಶರುದ್ರ ಇತ್ಯಾದಿ ಬಿಂಬಗಳು ಶೈಲಿಯ ದೃಷ್ಟಿಯಿಂದ ಕ್ರಿ. ಶ. ೧೨-೧೩ನೇ ಶತಮಾನಕ್ಕೆ ಸೇರುತ್ತವೆ. ಉಳಿದವು ಕ್ರಿ.ಶ. ೧೪-೧೬ನೇ ಶತಮಾನದವು. ಈ ಪ್ರದೇಶವು ಕ್ರಿ. ಶ. ೧೧ನೇ ಶತಮಾನದಿಂದ ಮರಾಠರ ಕಾಲದವರೆಗೂ (ಇಲ್ಲಿಯ ದೇವಾಲಯಗಳು ಸೂಚಿಸುವಂತೆ) ಪ್ರಸಿದ್ಧ ಶೈವಕೇಂದ್ರವಾಗಿದ್ದಂತೆ ತೋರುತ್ತದೆ. ಕೆಲವು ಬಿಂಬಗಳಲ್ಲಿ ನಾಥಸಂಪ್ರದಾಯದ ತಾಂತ್ರಿಕ ಪ್ರಭಾವವು ಇರುವಂತಿದೆ. ಈ ಸಂಪ್ರದಾಯವು ಮಧ್ಯಕಾಲೀನೋತ್ತರ ಕಾಲದಲ್ಲಿ ಇಲ್ಲಿ ಪ್ರಚಲಿತದಲ್ಲಿದ್ದಿತು. ಅಲ್ಲದೆ ಈಗಲೂ ನಾಥ ಸಂಪ್ರದಾಯದ ಭಕ್ತರು ಸತಾರಾ–ಕೊಲ್ಹಾಪುರಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಂಡುಬರುತ್ತಾರೆ.

ಇಲ್ಲಿ, ಪ್ರಾಣಿ–ಮಾನವ ರೂಪದಂತೆ ನಂದಿಯನ್ನು ಬಿಡಿಸಿರುವಂತಹುದು ಅಪರೂಪವೇನಲ್ಲ ; ಬಾದಾಮಿ ಚಾಳುಕ್ಯರ ಬಿಂಬಗಳಲ್ಲೂ ಇದು ಕಂಡುಬರುತ್ತದೆ. ಉದಾಹರಣೆಗೆ, ಹರಿ–ಹರರ ಪಟ್ಟಿಕೆಯಲ್ಲಿ ನಂದಿಯು ಪ್ರಾಣಿ–ಮಾನವ ರೀತಿಯಲ್ಲಿದ್ದು, ಪಾರ್ವತಿಯು ಶಿವನ ಪಕ್ಕದಲ್ಲಿಯೂ ಗರುಡ ಮತ್ತು ಲಕ್ಷ್ಮೀ ವಿಷ್ಣುವಿನ ಪಕ್ಕದಲ್ಲಿಯೂ ಇರುವರು. ನಂದಿಯನ್ನು ಸಾಮಾನ್ಯವಾಗಿ ಮೃಗರೂಪದ ದೇವತೆಯ ಆಕಾರದಲ್ಲೇ ಬಿಡಿಸಿರುವುದುಂಟು. ಆದ್ದರಿಂದ ಈ ಪಾಟೇಶ್ವರದಲ್ಲಿನ ಬಿಂಬದ ವಿಶೇಷತೆಯೆಂದರೆ, ಅದಕ್ಕೆ ಎಂಟು ಕೈ ಇರುವುದು ಮತ್ತು ಪ್ರಾಣಿ-ಮಾನವ ರೂಪದಂತಿರುವುದು.

(ಕನ್ನಡಾನುವಾದ/ಕೂ. ಸ. ಅಪರ್ಣ)

ಇಷಿಕವ ಕಾನ್

ಬಾದಾಮಿ ಚಾಲುಕ್ಯರ ಕಾಲದ ಪ್ರಾಂತ್ಯಾಡಳಿತ

ಬಾದಾಮಿ ಚಾಲುಕ್ಯರ ಪ್ರಾಂತ್ಯಾಡಳಿತವನ್ನು ಕುರಿತು ಈ ಕಿರುಪ್ರಬಂಧದಲ್ಲಿ ಚರ್ಚಿಸಲಾಗಿದೆ. ಈ ರಾಜವಂಶವು ಕುಂತಳನಾಡು ಹಾಗೂ ಸುತ್ತಮುತ್ತಲಲ್ಲಿ ಕ್ರಿ. ಶ. ಆರನೇ ಶತಮಾನದಿಂದ ಎಂಟನೇ ಶತಮಾನದ ವರೆಗೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ವಂಶದ ರಾಜ ಮಹಾರಾಜರುಗಳು,ರಾಜಮನೆತನದವರು, ಸಾಮಂತರು ಗಳು ಮತ್ತು ಶ್ರೀಸಾಮಾನ್ಯರು ನೀಡಿದ ದಾನದತ್ತಿ ಗಳನ್ನು ಉಲ್ಲೇಖಿಸುವ ಶಾಸನಗಳು ವಿಪುಲ ಸಂಖ್ಯೆ ಯಲ್ಲಿವೆ. ಪ್ರಸ್ತುತ ಅಧ್ಯಯನಕ್ಕಾಗಿ, ರಾಜ್ಯಾಡಳಿತ ವಿಭಾಗಗಳನ್ನು ಗುರುತಿಸುವ ಪದಗಳನ್ನು ಶಾಸನಾದಿ ದಾಖಲೆಗಳಿಂದ ಆಯ್ದುಕೊಳ್ಳಲಾಗಿದೆ. ಶಾಸನಗಳು ದೇಶ, ವಿಷಯ, ಆಹಾರ, ಭೋಗ, ರಾಷ್ಟ್ರ, ಮಂಡಲ, ನಾಡು ಮುಂತಾದ ಪದಗಳನ್ನು ಬಳಸಿದ್ದು, 'ವಿಷಯ' ವೆಂಬ ಪದವನ್ನುಳಿದು ಇನ್ನಿತರ ರಾಜ್ಯಾಡಳಿತ ವಿಭಾಗ ಗಳ ಪದಗಳು ಹೆಚ್ಚು ಬಳಕೆಯಲ್ಲಿಲ್ಲವೆಂದು ಗಮನಿಸ ಬಹುದು. ಆದ್ದರಿಂದ ಬಾದಾಮಿ ಚಾಲುಕ್ಯರ ನಾಡಿ ನಲ್ಲಿ 'ವಿಷಯ'ವೇ ಪ್ರಧಾನ ಆಡಳಿತ ವಿಭಾಗವಾಗಿತ್ತು ಎಂದು ಸೂಚಿಸಲ್ಪಟ್ಟಿದೆ.[1]

ಈ ಪದವು ಸಾಮಾನ್ಯವಾಗಿ ದಾನ ನೀಡಿದ ಭೂಮಿಕಾಣಿ, ಗ್ರಾಮಾದಿಗಳೊಂದಿಗೆ ರಾಜ್ಯಾಡಳಿತ ವಿಭಾಗವಾಗಿ ಕಾಣಿಸಿಕೊಂಡಿದೆ. ರಾಜಶಾಸನಗಳುಳ್ಳ ಸ್ಥಳಗಳಲ್ಲಿಯೂ ರಾಜ್ಯಾಡಳಿತ ವಿಭಾಗವಾಗಿ ಕಾಣಿಸಿ ಕೊಂಡಿದ. ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿರುವ 'ವಿಷಯ'ಗಳನ್ನು ಈ ವಂಶದ ದೊರೆಗಳ ಕಾಲಾನುಕ್ರಮ ಣಿಕೆಯಲ್ಲಿ ಕೆಳಕಂಡಂತೆ ಗುರುತಿಸಲಾಗಿದೆ :

ಮಂಗಳೇಶ : ಕೊಂಕಣ

ಪುಲಿಕೇಶಿ II : ಅಪರೆತಿಕಾ, ಕುಂಡಿ, ಕೊನಿಕಲ್, ಗೋಪರಾಷ್ಟ್ರ, ಘಳಕಿ, ಬಾಣರಾಜ, ಚಲಿಕ್ಯ, ಕಾಶಾಕುಲ

(ಅನಾಯಕತ್ವದ ಕಾಲ) : ಉಚ್ಛಶೃಂಗ

ವಿಕ್ರಮಾದಿತ್ಯ I : ಇಟುವ, ನಳವಾಡಿ, ಕುಂಡಿ, ಬೆಳ್ವಳ, ಬಾಹಿರಿಕಾ, ಕುಟುಮಯಿ, ಚಲಿಕ್ಯ, ಕಣ್ಣ, ಅಪರಂತ

ವಿನಯಾದಿತ್ಯ : ನಾಸಿಕ್ಯ, ಪಲಯಸ್ಥಾನ, ಪೆಡೆಕಲ್, ಕುರಾಟ, ವೆಂತಿ, ಇಡೆವೊಬಿಲ್, ತೊರ ಮರ, ನಳವಾಡಿ, ಉತ್ತರಾದ, ಕುಂಡಿ, ಕರಹಾಟಕ

ವಿಜಯಾದಿತ್ಯ : ವೆಂಗನೂರ್, ಪೆಡೆಕಲ್, ಬಾವಿ ಹಾರ, ಇರಿಡಿಗೆ, ಕರಹಾಟಕ, ತಾಲಿತಟಾ ಹಾರ, ಅಲಕುಕ,[2] ಗೋಪರಾಷ್ಟ್ರ, ಪೂರ್ವ

1 ಹೆಚ್. ಸಿ. ರಾಯ್‌ಚೌಧುರಿ, ಟಿ.ವಿ. ಮಹಾಲಿಂಗಂ, ಕೆ. ಎ. ನೀಲಕಂಠಶಾಸ್ತ್ರಿ ಮುಂತಾದ ವಿದ್ವಾಂಸರೂ ಇದೇ ಅಭಿ ಪ್ರಾಯವನ್ನು ಮಂಡಿಸಿದ್ದಾರೆ.

2 ಆಲಕ್ತಕ ? – ಎಲಾಪುರ್ ತಾಮ್ರಪಟಗಳು : ಇಂಡಿಯನ್ ಹಿಸ್ಟಾರಿಕಲ್ ಕ್ವಾರ್ಟರ್ಲಿ, ಸಂಪುಟ ೪, ಪು. ೪೨೫-೪೩೦

ತ್ರಿಕೂಟ, ಆಮ್ರರಾಜಿ, ಮೈರಿಕಾ, ಮಹಾ ಗಿರಿಹಾರ,[3] ಪ್ರೇತಹ್ರದ, ಸಮಗಿರಿ, ತೂರ ಮಾರ, ಪಥಿಕಾ

ವಿಕ್ರಮಾದಿತ್ಯ II : ವಂಗನೂರ್, ಚಿಪ್ರುರುಲಣ, ತೂರಮಾರ

ಕೀರ್ತಿವರ್ಮನ್ II : ಬೆಳ್ವೊಲ, ಪಾನ್ಯಂಗಲ್, ತೂರಮಾರ

ವಿಷಯಗಳನ್ನು ಹೆಸರಿಸುವ ಶಾಸನಗಳ ಸಂಖ್ಯೆ ಅರ ವತ್ತು. ಇವುಗಳಲ್ಲಿ ಅರ್ಧದಷ್ಟು ಶಾಸನಗಳು ವಿನಯಾದಿತ್ಯ ಮತ್ತು ವಿಜಯಾದಿತ್ಯರ ಕಾಲಕ್ಕೆ ಸೇರಿದವು. ಈ ವಂಶದ ಆಳ್ವಿಕೆಯಲ್ಲಿ ಈ ಕಾಲವು ಅತ್ಯಂತ ಶಾಂತಿಯುತ ಕಾಲ ವೆನಿಸಿತ್ತು. ಹಲವು ರಾಜರ ಆಳ್ವಿಕೆಯಲ್ಲಿ, ಹಲವಾರು ಶಾಸನಗಳಲ್ಲಿ ಕೆಲವು ವಿಷಯಗಳ ಪ್ರಸ್ತಾಪವಿದೆ. 'ಕುಂಡಿ' ವಿಷಯದ ಪ್ರಸ್ತಾಪವು, ಎರಡನೇ ಪುಲಿಕೇಶಿ, ಒಂದನೇ ವಿಕ್ರಮಾದಿತ್ಯ ಹಾಗೂ ವಿನಯಾದಿತ್ಯರ ಕಾಲ ದಲ್ಲಿಯೂ ಕಂಡುಬಂದಿದೆ. 'ತೋರಮಾರ' ವಿಷಯವೂ ಕಡೆಯ ಮೂರು ದೊರೆಗಳ ಆಡಳಿತ ಕಾಲದಲ್ಲಿ, ವಿನಯಾದಿತ್ಯ, ಎರಡನೇ ವಿಕ್ರಮಾದಿತ್ಯ ಮತ್ತು ಎರ ಡನೇ ಕೀರ್ತಿವರ್ಮನ ಕಾಲದಲ್ಲಿಯೂ ಉಲ್ಲೇಖವಿದೆ.

ಆಧುನಿಕ ಜಿಲ್ಲೆಗಳ ಭೌಗೋಳಿಕ ಕಕ್ಷೆಯಲ್ಲಿ ಈ ವಿಷಯಗಳ ವ್ಯಾಪ್ತಿಯನ್ನು ಕೆಳಕಂಡಂತೆ ಗುರುತಿಸ ಬಹುದು. ಈಗಿನ ಜಿಲ್ಲೆಗಳ ಹೆಸರುಗಳನ್ನು ಕಂಸದಲ್ಲಿ ಸೂಚಿಸಿದ್ದು, ಪ್ರಾಂತ್ಯಾವಾರು ವಿವರಗಳನ್ನು ನೀಡ ಲಾಗಿದೆ :

ಗುಜರಾತ್ : ಪಥಿಕಾ (ಬ್ರೋಚ್–ಸೂರತ್)
ಕಾಶಾಕುಲ (ಸೂರತ್)
ಬಾಹಿರಿಕ (ಸೂರತ್)

ಮಹಾರಾಷ್ಟ್ರ : ನಾಸಿಕ್ಯ (ನಾಸಿಕ್)
ಗೋಪರಾಷ್ಟ್ರ (ನಾಸಿಕ್)
ಕರಾಟ (ಥಾನಾ)
ಮಂತಿ (ಥಾನಾ)
ಸಮಗಿರಿ (ಪೂನಾ)
ಪಲಯತ್ಥಾನ (ಸತಾರ–ಪೂನಾ)
ಕರಹಾಟಕ (ಸತಾರ)
ಇರಿಡಿಗೆ (ರತ್ನಗಿರಿ)
ಕುಟುಮಯಿ (ಉಸ್ಮಾನಾಬಾದ್)
ಬಾವಿಹಾರ (ನಾಂದೇಡ್)
ಕುಂಡಿ (ಕೊಲ್ಹಾಪುರ–ಸಾಂಗ್ಲಿ)
ಉತ್ತರಾಡ[4]
ಅವರಂತ, ಅವರೆತಿಕಾ<ಅಪರಾಂತ
ಕೊಂಕಣ

ಕರ್ನಾಟಕ : ಇಡೆವೊಟಲ್ (ಉತ್ತರಕನ್ನಡ–ಶಿವಮೊಗ್ಗ)
ತೋರಮಾರ (ಶಿವಮೊಗ್ಗ)
ಉಚ್ಚಶೃಂಗ (ಬಳ್ಳಾರಿ-ಚಿತ್ರದುರ್ಗ)
ಪಾನುಂಗಲ್ (ಧಾರವಾಡ)
ಬೆಳ್ವೊಲ (ಧಾರವಾಡ–ರಾಯಚೂರು)
ಕೊನಿಕಲ್ (ಬೆಂಗಳೂರು)
ಅಲಕುಕಅ<ಲಕ್ಕುಕ? (ಧಾರವಾಡ)

ಆಂಧ್ರಪ್ರದೇಶ : ನಳವಾಡಿ (ಕರ್ನೂಲ್)
ಪೆಡಿಕಲ್ (ಕರ್ನೂಲ್)
ಇಚುವ (ಕರ್ನೂಲ್)
ತೂರಮಾರ (ಅನಂತಪುರ)
ವಂಗನೂರ್ (ಅನಂತಪುರ–ಕಡಪ)
ಬಾಣರಾಜ
ಪಟಿಕಿ

ಈ ಮಾಹಿತಿಗಳಿಂದ 'ವಿಷಯ'ಗಳ ಭೌಗೋಳಿಕ ನೆಲೆ ಮತ್ತು ವ್ಯಾಪ್ತಿಗೆ ಸಂಬಂಧಿಸಿದಂತೆ ಹಲವು ಸ್ಪಷ್ಟ ಅಂಶಗಳನ್ನು ಗಮನಿಸಬಹುದು. ಪ್ರಾಂತ್ಯಾಡಳಿತಗಾರರು ಅಧಿಕಾರ ಹೊಂದಿದ್ದ ಪ್ರದೇಶಗಳ ವ್ಯಾಪ್ತಿಯಲ್ಲಿ ಹಲ ವಾರು 'ವಿಷಯ'ಗಳು ಸೇರಿದ್ದವು. ಆಯಾ ಪ್ರದೇಶದ

3 ಪೂರ್ವಭಾಗ ಮತ್ತು ಪಶ್ಚಿಮಭಾಗಗಳೆಂದು ವಿಭಾಗಿಸಲಾಗಿದೆ.

4 ಇದು ಚಿಮುಲ್ಯದೇಶವೆಂಬ ಹೆಸರುಳ್ಳ ಉತ್ತರಭಾಗಕ್ಕೆ ಸೇರಿದ್ದು, ಚಿಮುಲ್ಯವು ಪ್ರಮುಖ ಸ್ಥಳವಾಗಿತ್ತು. ಇಂದಿನ ಕೊಲಾಬಾ ಜಿಲ್ಲೆಯ ಚಾಲ್, ಚಿಮುಲ್ಯದ ಆಧುನಿಕ ರೂಪವೆನಿಸಿದೆ.

ಅಧಿಕಾರವನ್ನು ನಿರ್ವಹಿಸಲು ಅವರುಗಳಿಗೇ ಬಿಟ್ಟಿದ್ದು, ಚಾಲುಕ್ಯರಿಗೆ ಸಹಾಯಕರಾಗಿ ಮುಂದುವರೆದರು. ಆದರೆ ಈ ದಿಸೆಯಲ್ಲಿ ಇಂದಿನ ಬಿಜಾಪುರ ಜಿಲ್ಲೆಗೆ ಸಂಬಂಧಿಸಿದಂತೆ 'ವಿಷಯ' ವ್ಯವಸ್ಥೆಯನ್ನು ಗುರುತಿಸುವ ಶಾಸನಗಳಾವುದೂ ದೊರೆತಿಲ್ಲ.

ಧಾರವಾಡ ಜಿಲ್ಲೆಯೂ ಸೇರಿದಂತೆ ಬಿಜಾಪುರ ಜಿಲ್ಲೆಯು ಸಾಮ್ರಾಜ್ಯದ ಪ್ರಮುಖ ಭಾಗವೆನಿಸಿದ್ದು ಬಾದಾಮಿಯು ರಾಜಧಾನಿಯಾಗಿತ್ತು. ರಾಜಕೀಯ ಚಟುವಟಿಕೆಗಳ ಬಿಂದುವೆನಿಸಿದ ಈ ಅಧಿಷ್ಠಾನ(ರಾಜಧಾನಿ)ದೊಂದಿಗೆ ಧಾರ್ಮಿಕ ಕೇಂದ್ರಗಳೆನಿಸಿದ ಮಹಾಕೂಟ, ಪಟ್ಟದಕಲ್ಲು, ಲಕ್ಷ್ಮೇಶ್ವರ, ವಾಣಿಜ್ಯ ಹಾಗೂ ಶಿಕ್ಷಣಕ್ಷೇತ್ರವೆನಿಸಿದ ಐಹೊಳೆಯೂ ಸೇರಿತ್ತು. ಈ ಪ್ರದೇಶದಲ್ಲಿ ರಾಜವಂಶಕ್ಕೆ ಸೇರಿದ ಶಾಸನಗಳು ಮೂರನೆ ಒಂದು ಭಾಗದಷ್ಟು ಲಭ್ಯವಿವೆ. ಆದರೂ ಈ ಶಾಸನಗಳಲ್ಲಿ 'ವಿಷಯ'ಗಳ ಪ್ರಸ್ತಾಪವಿಲ್ಲವೆಂದು ಗಮನಿಸಬಹುದು. ಸಾಮ್ರಾಜ್ಯದ ಹೃದಯದಂತಿದ್ದ ಈ ಪ್ರದೇಶವು ರಾಜಮನೆತನದ ನೇರ ಆಡಳಿತಕ್ಕೆ ಒಳಪಟ್ಟು, ಪ್ರತ್ಯೇಕ ಆಡಳಿತ ಪ್ರದೇಶವಾಗಿ ಗುರುತಿಸದಿರಬಹುದು; ಇದನ್ನು ಪುಷ್ಟೀಕರಿಸಲು ಮತ್ತಷ್ಟು ಸಾಕ್ಷ್ಯಾಧಾರಗಳು ಬೇಕು.

ಬಾದಾಮಿಯನ್ನು ರಾಜಧಾನಿಯಾಗಿ ಉಳ್ಳ ಈ ಕೇಂದ್ರಪ್ರದೇಶವು ಈಗಿನ ಮಹಾರಾಷ್ಟ್ರ, ಆಂಧ್ರ ಪ್ರದೇಶ ಹಾಗೂ ದಕ್ಷಿಣದ ಭಾಗಗಳಿಂದ ಸುತ್ತುವರೆದಿತ್ತು. ಈ ಸುತ್ತಮುತ್ತಲ ಪ್ರದೇಶದಲ್ಲಿ ಹಲವಾರು 'ವಿಷಯ'ಗಳು ಅಡಕಗೊಂಡಿದ್ದವು. ಪ್ರಾಂತ್ಯಾಡಳಿತಗಾರರೆನಿಸಿದ, ಸಾಮಂತಾದಿಗಳು ಹಾಗೂ ಅವರ ಬಂಧುವರ್ಗಕ್ಕೆ ಸೀಮಿತಗೊಳ್ಳುತ್ತಿದ್ದ ವಿಷಯ ವ್ಯಾಪ್ತಿಯನ್ನು ಒಂದೊಂದಾಗಿ ಪರಿಶೀಲಿಸಬಹುದು.

ಸೇಂದ್ರಕ ವಂಶದ ದೊರೆ ಸೇನಾನಂದನು ಅವರೆತಿಕಾ ವಿಷಯದ ಗ್ರಾಮ ಭೂಮಿಕಾಣಿಗಳನ್ನು ದಾನ ಕೊಟ್ಟಿದ್ದು, ಸ್ಥಳದ ವಿಷಯ ವಾಸಿಗಳಿಗೆ ಹಾಗೂ ಅಧಿಕಾರಿಗಳಿಗೆ ತಿಳಿಸುವುದಕ್ಕಾಗಿ ಶಾಸನ ನೀಡಿದ.[5] ಅವರೆತಿಕಾದ ಪ್ರಾಚೀನರೂಪ 'ಅಪರಾಂತ'ವೆನ್ನಬಹುದಾಗಿದ್ದು, ಇದು ಉತ್ತರ ಕೊಂಕಣ ಪ್ರದೇಶವೆನಿಸಿದ್ದು, ಇಂದಿನ ಮಹಾರಾಷ್ಟ್ರದ ಥಾನಾ, ಕೊಲಾಬಾ, ರತ್ನಗಿರಿ ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿದೆ.

ಚಿಪ್ಲುನ್ ಶಾಸನದ ಪ್ರಕಾರ ಈ ಪ್ರದೇಶವು ದಕ್ಷಿಣ ಕೊಂಕಣಕ್ಕೆ ಸೇರಿದ್ದು, ಸೇಂದ್ರಕರು ಇಲ್ಲಿಯೂ ಆಡಳಿತ ನಡೆಸುತ್ತಿದ್ದರು. ಇದು ಕದಂಬರ ಚಕ್ರಾಧಿಪತ್ಯಕ್ಕೆ ಸೇರಿತ್ತು. ಒಂದನೇ ಕೀರ್ತಿವರ್ಮನ ರಾಣಿ ಸೇಂದ್ರಕ ವಂಶಕ್ಕೆ ಸೇರಿದವಳು. ಈಕೆ ಇಮ್ಮಡಿ ಪುಲಿಕೇಶಿಯ ತಾಯಿ. ಸೇನಾನಂದನು ಇಮ್ಮಡಿ ಪುಲಿಕೇಶಿಯ ಸೋದರಮಾವ. ತದನಂತರದ ಕಾಲದಲ್ಲಿ ಈ ಭಾಗದ ಆಡಳಿತವು ಚಿಕ್ಕಪ್ಪನಾದ ಒಂದನೇ ವಿಕ್ರಮಾದಿತ್ಯನಿಗೆ ವಹಿಸಲ್ಪಟ್ಟಿತು.

ಇಮ್ಮಡಿ ಪುಲಿಕೇಶಿಯ ಅಲ್ಟೆಮ್ ತಾಮ್ರಪಟಗಳ ಪ್ರಕಾರ,[6] ಸೇಂದ್ರಕರ ರಾಜ್ಯವು ಕುಂಡಿ ವಿಷಯಕ್ಕೂ ವ್ಯಾಪಿಸಿತ್ತು. ಇದು ಮೀರಿಂಜೆ ವಿಭಾಗಕ್ಕೆ ಹತ್ತಿರವೆನಿಸಿದ್ದು, ಮಹಾರಾಷ್ಟ್ರದ ಇಂದಿನ ಮೀರಜ್ ಎಂದು ಗುರುತಿಸಬಹುದು.

ಮೊದಲನೆಯ ವಿಕ್ರಮಾದಿತ್ಯನ ಅಣ್ಣ ಚಂದ್ರಾದಿತ್ಯನು ಈ ಪ್ರಾಂತ್ಯದ ಹತ್ತಿರ ರಾಜ್ಯಭಾರ ನಡೆಸುತ್ತಿದ್ದನು.[7]

ಇಮ್ಮಡಿ ಪುಲಿಕೇಶಿಯ ನಿರ್ಪಣ್ ತಾಮ್ರಶಾಸನಗಳ ಪ್ರಕಾರ, ಗೋಪರಾಷ್ಟ್ರ ವಿಷಯವು ರಾಜಮನೆತನದ ತ್ರಿಭುವನಮಲ್ಲ ನಾಗವರ್ಧನ ಅರಸರ ಆಳ್ವಿಕೆಯಲ್ಲಿತ್ತು.[8] ವಿಜಯಾದಿತ್ಯನ ಕಾಲದಲ್ಲಿ ಈ ವಿಭಾಗವನ್ನು ಹರಿಶ್ಚಂದ್ರ ವಂಶದ ಭೋಗಶಕ್ತಿಯು ಆಳುತ್ತಿದ್ದನು. ಇದಲ್ಲದೆ

5 ಚಿಪ್ಲುನ್ ತಾಮ್ರಪಟಗಳು : ಎಪಿಗ್ರಾಫಿಯಾ ಇಂಡಿಕಾ, ಸಂ. ೩, ಪು. ೫೦-೫೩
6 ಇಂಡಿಯನ್ ಆಂಟಿಕ್ವೆರಿ, ಸಂ. ೭, ಪು. ೨೦೯-೨೧೭
7 ನೆರೂರ್ ತಾಮ್ರಪಟಗಳು : ಇಂಡಿಯನ್ ಆಂಟಿಕ್ವೆರಿ, ಸಂ.೭, ಪು. ೧೭೩-೧೭೪ ; ಕೊಛ್ರೆ ತಾಮ್ರಪಟಗಳು : ಇಂಡಿಯನ್ ಆಂಟಿಕ್ವೆರಿ, ಸಂ. ೮, ಪು. ೪೬-೪೭
8 ಅದೇ, ಸಂ. ೯, ಪು. ೧೨೩-೧೨೫

ಪುರಿ ಕೊಂಕಣ ಭಾಗದೊಂದಿಗೆ, ಇನ್ನಿತರ ಆರು ವಿಷಯಗಳಾದ ಪೂರ್ವ-ತ್ರಿಕೂಟ,ಆಮ್ರರಾಜ, ವೈರಿಕಾ,ಮಹಾಗಿರಿಹಾರ, ಪುಲ್ಲುಸಂಧಾಂಬಕ ಮತ್ತು ಪ್ರೇತಹೃದಗಳಲ್ಲಿಯೂ ಆಳ್ವಿಕೆ ಇತ್ತು. ಭೋಗಶಕ್ತಿಯು ಅಜ್ಜಸ್ವಾಮಿಚಂದ್ರನು ಒಂದನೇ ವಿಕ್ರಮಾದಿತ್ಯನನ್ನು ಗೌರವದಿಂದ ಆದರಿಸಿ ಅನುಸರಿಸಿದನು. ಆದ್ದರಿಂದ ಚಾಲುಕ್ಯರ ಆಳ್ವಿಕೆ ಈ ವಿಭಾಗದಲ್ಲಿ ನಿರಂತರವಾಗಿ ಮುಂದುವರೆಯಿತು.[9] ಇಲ್ಲಿಂದ ಉತ್ತರಕ್ಕೆ ಬಾಹಿರಿಕ ವಿಷಯ,[10] ನಾಸಿಕ್ಯ ವಿಷಯ,[11] ಕುರಾಟ ವಿಷಯ ಮತ್ತು ವೆಂತಿ ವಿಷಯ,[12] ಕಾಶಾಕುಲ ವಿಷಯ[13]ಗಳಿದ್ದುವೆಂದು ಮಾಹಿತಿಗಳು ದೊರೆಯುತ್ತವೆ.

ಒಂದನೇ ವಿಕ್ರಮಾದಿತ್ಯ ಮತ್ತು ವಿನಯಾದಿತ್ಯರ ಶಾಸನೋಲ್ಲೇಖಗಳ ಪ್ರಕಾರ ವಿಕ್ರಮಾದಿತ್ಯನ ಸಹೋದರ, ಯುವರಾಜಧಾರಾಶ್ರಯ ಜಯಸಿಂಹವರ್ಮನು ಮೊದಲ ನಾಲ್ಕು ವಿಷಯಗಳಲ್ಲಿ ಆಡಳಿತ ನಡೆಸುತ್ತಿದ್ದ. ಈ ಸಾಲಿನ ವಂಶಜರೇ ಮುಂದೆ ಗುಜರಾತ್‌ನಲ್ಲಿ ಸ್ವತಂತ್ರ ಶಾಖೆಯಾಗಿ ಅಭಿವೃದ್ಧಿ ಹೊಂದಿದರು. ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಈ ರಾಜವಂಶಕ್ಕೆ ಸೇರಿದ ವಿಜಯರಾಜನು ಕಾಶಾಕುಲ ವಿಷಯವನ್ನು ಆಳುತ್ತಿದ್ದನು.

ಸ್ಥಳೀಯ ಆಡಳಿತ ಹಾಗೂ ಆಡಳಿಗಾರರ ಪರಸ್ಪರ ಸಂಬಂಧ ಇವುಗಳನ್ನು ಕುರಿತು ನಿಖರವಾಗಿ ಏನನ್ನೂ ಹೇಳಲು ಸಾಧ್ಯವಾಗದು. ಆದರೆ ಈ ಪ್ರಾಂತ್ಯಾಡಳಿತಗಾರರನ್ನು ನಿಯಂತ್ರಿಸಲು ಮತ್ತು ದೇಶಕೋಶಗಳನ್ನು ವಿಸ್ತರಿಸುವ ಮುಂದಾಲೋಚನೆಯಿಂದ ಕೇಂದ್ರವು ತನ್ನ ರಾಜಮನೆತನಕ್ಕೆ ಸಂಬಂಧಪಟ್ಟವರನ್ನು ಪ್ರತಿನಿಧಿಗಳಾಗಿ ಗಡಿನಾಡುಗಳಿಗೆ ಕಳುಹಿಸುವ ವಾಡಿಕೆಯನ್ನು ಬೆಳೆಸಿದ್ದರೆನ್ನಬಹುದು. ಇದರಿಂದಾಗಿ ಗುಜರಾತ್ ಮತ್ತು ವೆಂಗಿಗಳಲ್ಲಿ ಮನೆತನದ ಸ್ವತಂತ್ರ ಶಾಖೆಗಳು ಬೆಳೆಯಲು ಅವಕಾಶವಾಯಿತು.

ವೆಂಗಿಶಾಖೆಯು ಎರಡನೇ ಪುಲಿಕೇಶಿಯ ಸಹೋದರ ವಿಷ್ಣುವರ್ಧನನಿಂದ ಆರಂಭಗೊಂಡಿತು. ಈ ಪ್ರದೇಶದಲ್ಲಿ ಒಂದೇ ಒಂದು ವಿಷಯವು[14] ಗುರುತಿಸಲ್ಪಟ್ಟಿದ್ದು, ಸುಮಾರು ನಾನೂರು ವರ್ಷಗಳಿಗೂ ಹೆಚ್ಚು ಕಾಲ ಅಸ್ತಿತ್ವದಲ್ಲಿತ್ತು. ಇದಕ್ಕಿಂತ ಹೆಚ್ಚು ವಿಸ್ತಾರವುಳ್ಳ ಪ್ರಾಂತೀಯ ವಿಭಾಗಗಳು ತದನಂತರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಒಂದನೇ ವಿಕ್ರಮಾದಿತ್ಯನ ಹಿರಿಯ ಅಣ್ಣ ಆದಿತ್ಯವರ್ಮ ಹಾಗೂ ಅವನ ಮಗ ಅಭಿನವಾದಿತ್ಯರು ಉಚ್ಛಶೃಂಗ ವಿಷಯವನ್ನಾಳಿದರು. ಇವರ ಕಾಲದಲ್ಲಿ ಬಾದಾಮಿಯಲ್ಲಿ ಅನಾಯಕತ್ವವಿತ್ತು.[15]

ಬಾಣರಾಜ ವಿಷಯ[16] ಮತ್ತು ನಳವಾಡಿ ವಿಷಯ[17]ಗಳಲ್ಲಿ ಕ್ರಮವಾಗಿ ಬಾಣ ಹಾಗೂ ನಳರೆಂಬ ವಂಶೀಯರು ಆಳ್ವಿಕೆ ನಡೆಸಿದರು. ಇವರು ಸ್ಥಳೀಯ ಆಡಳಿತಗಾರರೆನಿಸಿದ್ದು, ರಾಜ್ಯವಿಸ್ತರಣೆಗೆ ಅವಕಾಶವಿಲ್ಲದೆ ತಮ್ಮ ಪರಿಧಿಗೆ ಸೀಮಿತಗೊಂಡು ವಿಷಯಗಳ ಹೆಸರುಗಳೂ ತಕ್ಕಂತೆ ಗುರುತಿಸಿದ್ದೆನ್ನಬಹುದು.

ಬಾಣರ ಆಳ್ವಿಕೆಗೆ ಇಂದಿನ ಅನಂತಪುರ ಜಿಲ್ಲೆಯ

---

9 ಅಂಜನೇರಿ ತಾಮ್ರಪಟಗಳು : ಸೌ. ಇ. ಇ., ಸಂ. ೪, ಪು. ೧೪೬-೧೫೪
10 ಅದೇ, ಪು. ೧೨೩-೧೨೬
11 ಅದೇ, ಪು. ೧೨೬-೧೩೦
12 ಎಪಿಗ್ರಾಫಿಯಾ ಇಂಡಿಕಾ, ಸಂ. ೨೮, ಪು. ೧೬-೨೨
13 ಸೌ. ಇ. ಇ., ಸಂ. ೪, ಪು. ೧೬೫
14 ಎಪಿಗ್ರಾಫಿಯಾ ಇಂಡಿಕಾ, ಸಂ. ೯, ಪು. ೩೧೬-೩೧೯
15 ಅದೇ, ಸಂ. ೩೨, ಪು. ೨೧೩-೨೧೬
16 ಸೌ. ಇ. ಇ., ಸಂ. ೯, ಭಾಗ ೧, ಸಂಖ್ಯೆ ೪೬
17 ಜೆ.ಬಿ.ಬಿ.ಆರ್.ಎ.ಎಸ್., ಸಂ. ೧೬, ಪು. ೨೨೫-೨೨೬, ೨೩೩-೨೩೬ ; ಎಪಿಗ್ರಾಫಿಯಾ ಇಂಡಿಕಾ, ಸಂ. ೨೨, ಪು. ೨೪-೨೯

ವ್ಯಾಪ್ತಿಯು ಒಳಪಟ್ಟಿದ್ದು, ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಚಾಲುಕ್ಯರ ಅಧೀನ ರಾಜರೆನಿಸಿದರು. ವೆಂಗನೂರು ವಿಷಯ[18] ಮತ್ತು ತೂರವಾರ ವಿಷಯ[19]ಗಳಲ್ಲಿಯೂ ಬಾಣರ ಆಳ್ವಿಕೆ ಇತ್ತು. ಈ ಪ್ರದೇಶದಲ್ಲಿ ನಳವಂಶೀಯರೂ ಆಡಳಿತ ನಡೆಸಿದ್ದು, ಪ್ರಸ್ತುತ ಕರ್ನೂಲ್ ಜಿಲ್ಲೆಯನ್ನೊಳಗೊಳ್ಳುತ್ತದೆ. ಅಳುಪರು ಚಾಲುಕ್ಯ ರಾಜ್ಯದ ಪ್ರಾಂತ್ಯಾಡಳಿತ ವಿಷಯ ವಿಭಾಗಗಳಲ್ಲಿ ಸ್ಥಳೀಯ ಸ್ವತಂತ್ರ ಆಡಳಿತಗಾರರಾಗಿ ರಾಜ್ಯಭಾರ ಮಾಡಿದರು. ಇಡೆವೊಟಲ್ ಮತ್ತು ತೋರವಾರ ವಿಷಯಗಳಲ್ಲಿ ಇವರ ಆಳ್ವಿಕೆ ಇತ್ತು.[20] ವಿನಯಾದಿತ್ಯನ ಮಗಳಾದ ಕುಂಕುಮ ದೇವಿಯನ್ನು ಅಳುಪರ ದೊರೆ ಚಿತ್ರವಾಹನನಿಗೆ ಕೊಡಲ್ಪಟ್ಟಿತ್ತು.[21]

'ವಿಷಯ'ವು ಆಡಳಿತ ವಿಭಾಗವೆಂಬ ಅರ್ಥವಲ್ಲದೆ, ರಾಜ್ಯದ ಪೂರ್ಣ ವಿಸ್ತಾರಕ್ಕೂ ಅನ್ವಯವಾಗುವಂತೆ ಪ್ರಯೋಗಿಸಲ್ಪಟ್ಟಿದೆ ಎಂದು ಗಮನಿಸಬಹುದು. ಒಂದನೇ ವಿಕ್ರಮಾದಿತ್ಯನ ಗದ್ವಾಲ್ ತಾಮ್ರಪಟಗಳ ಪ್ರಕಾರ[22] ಚಾಲುಕ್ಯ ಸೈನ್ಯವು ಚೋಲಿಕಾ ವಿಷಯವನ್ನು ಆಕ್ರಮಿಸಿತ್ತು. ಪ್ರಾಚೀನ ಚೋಳ ಸಾಮ್ರಾಜ್ಯದ ರಾಜಧಾನಿಯಾದ ಉರಗಪುರವು ಚೋಲಿಕಾ ವಿಷಯದಲ್ಲಿದೆ. ಚಾಲುಕ್ಯರ ಆಕ್ರಮಣದ ನಂತರ ಚೋಲಿಕಾ ವಿಷಯವು ಚಾಲುಕ್ಯರ ಅಧಿಕಾರದೊಳಗಣ ಪ್ರದೇಶವಾಯಿತೆಂಬ ವಿಷಯ ಸ್ಪಷ್ಟವಾಗುವುದಿಲ್ಲ. ಇಲ್ಲಿ ವಿಷಯವು ಆಡಳಿತ ವಿಭಾಗವಾಗಿರದೆ ಒಟ್ಟಾರೆ ಪ್ರದೇಶವನ್ನು ಸೂಚಿಸಿರಬಹುದು.

ಇದೇರೀತಿ "ವೈರಾಜ್ಯ–ಕಾಂಚೀಪತಿ (ಪಲ್ಲವಪತಿ)–ಬಲಂ–ಅವಷ್ಟಾಭ್ಯ – ಸಮಸ್ತ – ವಿಷಯ[23]ವೆಂಬ ಒಕ್ಕಣೆಯಲ್ಲಿ ವಿನಯಾದಿತ್ಯನೊಡನೆ ಪಲ್ಲವರಾಜನು ಮೂರು ರಾಜ್ಯಗಳ ಮುಂದಾಳಾಗಿ ಸಂಧಿ ಮಾಡಿಕೊಂಡಿದ್ದನ್ನು ಗುರುತಿಸಿದೆ. ಇಲ್ಲಿ 'ವಿಷಯ'ವೆನ್ನುವಲ್ಲಿ ಸಾಮ್ರಾಜ್ಯವನ್ನು ಸ್ಪಷ್ಟವಾಗಿ ಸೂಚಿಸಿದೆಯೇ ಹೊರತು ಆಡಳಿತ ಭಾಗವೆನಿಸಿಲ್ಲ. ಅಳುಪರ ಅಧಿಕಾರದೊಳಗಣ ಪ್ರದೇಶಕ್ಕೆ ಸಂಬಂಧಿಸಿದಂತೆ "ಸ್ವವಿಷಯ–ಉಪಭೋಗ-ರಕ್ಷಣೆ–ವಿಧಿ–ವಿಧಾನಾನ್ಯಪಹಾಯ"[24] ಎಂದು ಉಲ್ಲೇಖಿಸಿದ್ದು, ಚಾಲುಕ್ಯರಿಗೆ ಅಳುಪರ ರಾಜನಿಷ್ಠೆಯನ್ನು 'ವಿಷಯ'[24]ವು ಸೂಚಿಸಿದೆಯೇ ಹೊರತು ಆಡಳಿತವಿಭಾಗವನ್ನು ಗುರುತಿಸಿಲ್ಲ. ಇದೇರೀತಿ ಶಾಸನದ "ದ್ರಾವಿಡ ವಿಷಯ–ವಾಸ್ತವ್ಯ"[25]ವೆಂಬ ಉಲ್ಲೇಖದಲ್ಲಿ ದ್ರಾವಿಡ ಪ್ರದೇಶದಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣನಿಗೆ ಸಂಬಂಧಿಸಿದ್ದು, ದ್ರಾವಿಡ ವಿಷಯ ಯಾವುದೆಂಬ ಬಗ್ಗೆ ಸ್ಪಷ್ಟತೆಯಿಲ್ಲ.

ಮೇಲ್ಕಂಡ ವಿವರಗಳಿಂದ ಚಾಲುಕ್ಯರ ಶಾಸನಗಳಲ್ಲಿ ವಿಷಯವು ಆಡಳಿತ ವಿಭಾಗವಾಗಿ ಸ್ವತಂತ್ರ ಪ್ರದೇಶವಾಗಿ ಬಳಸಿರುವುದನ್ನು ಗಮನಿಸಬಹುದು.

ಗುಪ್ತರ ರಾಜ್ಯದ ಪೂರ್ವಭಾಗಗಳಲ್ಲಿ ವಿಷಯಾಡಳಿತವು ಪರಿಷ್ಕರಿಸಲ್ಪಟ್ಟು ಜಾರಿಗೊಳಿಸಿದ ಉತ್ತಮ ವ್ಯವಸ್ಥೆಯೆನಿಸಿತ್ತು. ವಿಷಯಾಧಿಕರಣವು ಸ್ಥಳೀಯ ಸಂಸ್ಥೆಯೆನಿಸಿದ್ದು, ಈ ಸಂಸ್ಥೆಯಲ್ಲಿ ಕೇಂದ್ರದಿಂದ ನೇಮಿಸಲ್ಪಟ್ಟ ಅಧಿಕಾರಿಗಳು ಹಾಗೂ ಗ್ರಾಮ ಜನಪದದ ಸದಸ್ಯರುಗಳನ್ನೊಳಗೊಂಡಿತ್ತು. ಇವರನ್ನು ಕ್ರಮವಾಗಿ ಮಹತ್ತರ ಮತ್ತು ಕುಟುಂಬಿನ್ ಎಂದೆನಿಸಿ

---

18 ಎಪಿಗ್ರಾಫಿಯಾ ಇಂಡಿಕಾ, ಸಂ. ೩೮, ಪು. ೩೩೪-೩೩೫, ೩೩೭-೩೩೮ ; ಸಂ. ೩೦, ಪು. ೬೯-೭೧
19 ಅದೇ, ಸಂ. ೩೦, ಪು. ೧೨-೧೭
20 ಇಂಡಿಯನ್ ಆಂಟಿಕ್ವೆರಿ, ಸಂ. ೧೯, ಪು. ೧೪೬ : ಅಡಿಟಿಪ್ಪಣಿ ; ಸಂ. ೭, ಪು. ೩೦೦ : ಅಡಿಟಿಪ್ಪಣಿ
21 ಶಿಗ್ಗಾನ್ ತಾಮ್ರಪಟಗಳು : ಎಪಿಗ್ರಾಫಿಯಾ ಇಂಡಿಕಾ, ಸಂ. ೩೨, ಪು. ೩೧೭-೩೨೪
22 ಎಪಿಗ್ರಾಫಿಯಾ ಇಂಡಿಕಾ, ಸಂ. ೧೦, ಪು. ೧೦೦-೧೦೬
23 ಕೆ. ವಿ. ರಮೇಶ್ : ಚಾಲುಕ್ಯಾಸ್ ಆಫ್ ವಾತಾಪಿ, ಡೆಲ್ಲಿ, ೧೯೮೪. ಪು. ೧೧೨ : ಅಡಿಟಿಪ್ಪಣಿ
24 ಮರುತೂರು ತಾಮ್ರಪಟಗಳು : ಸಿ.ಪಿ.ಎ.ಪಿ.ಜಿ.ಎಮ್., ಸಂ. ೧, ಪು. ೩೩೦-೩೩೧
25 ಕಂಡಲ್ಗಾನ್ ತಾಮ್ರಪಟಗಳು : ಇಂಡಿಯನ್ ಆಂಟಿಕ್ವೆರಿ, ಸಂ. ೧೪, ಪು. ೩೩೦-೩೩೧

ದ್ವಾರೆ.ಕೇಂದ್ರವು ಗ್ರಾಮಗಳಲ್ಲಿದ್ದ ಈ ಸ್ವಾಯಂತ್ತ ಸಂಸ್ಥೆಗಳ ಮೂಲಕ ಪ್ರಾಂತ್ಯಾಡಳಿತವನ್ನು ನಿರ್ವಹಿಸುತ್ತಿತ್ತು.[26] ಚಾಲುಕ್ಯರ ಕಾಲದ ವಿಷಯಾಡಳಿತದ ಬಗ್ಗೆ ಖಚಿತವಾಗಿ ಏನನ್ನೂ ಹೇಳಲಾಗದು. ಕೇಂದ್ರವು ಅಧೀನ ಸಾಮಂತರುಗಳಿಗೆ ಸ್ವತಃ ಅಧಿಕಾರ ಮುಂದುವರೆಸಲು ಹೆಚ್ಚು ರಿಯಾಯಿತಿ ತೋರಿದ್ದರಿಂದ, ಕೇಂದ್ರಾಪ್ರದೇಶಗಳನ್ನು ಪಾಲಿಸುವ ಸ್ಥಳೀಯ ಆಡಳಿತ ಸಂಸ್ಥೆಗಳು ಅವುಗಳ ಕಾರ್ಯ ನಿರ್ವಹಣೆಯಲ್ಲಿ ಮಹತ್ವವೆನಿಸಲಿಲ್ಲ. ಕೇಂದ್ರದ ಆದೇಶಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ವ್ಯವಸ್ಥಿತ ಆಡಳಿತ ಪದ್ಧತಿ ವಿಷಯ ಪ್ರದೇಶಗಳಲ್ಲಿ ಬೆಳೆದಿರಲಿಲ್ಲವೆನ್ನಬಹುದು.

ಚಾಲುಕ್ಯರು ಹೊಸದಾಗಿ ರಾಜ್ಯಕೋಶಗಳ ಮೇಲೆ ದಿಗ್ವಿಜಯ ಸಾಧಿಸಿದಾಗ ತಮ್ಮ ಪ್ರತಿನಿಧಿಯಾಗಿ ಪ್ರಾಂತ್ಯಾಧಿಕಾರಿಯನ್ನು ನೇಮಿಸುತ್ತಿದ್ದರು, ಅಥವಾ ಸಾರ್ವಭೌಮತ್ವವನ್ನು ಒಪ್ಪಿಕೊಂಡಲ್ಲಿ ಸಾಮಂತಾದಿಗಳಿಗೇ ಆಡಳಿತ ನಡೆಸಲು ಅವಕಾಶವೀಯುತ್ತಿದ್ದರು. ಇಂತಹ ಆಡಳಿತ ಪ್ರದೇಶಗಳು, ವಿಷಯುವೆಂಬ ಅಭಿಧಾನದಿಂದ ಗುರುತಿಸಲ್ಪಟ್ಟವು. ದೇಶಕೋಶಗಳನ್ನು ವಿಸ್ತರಿಸುವ ಹಾಗೂ ತಮ್ಮ ಪ್ರಭಾವ ವರ್ಚಸ್ಸನ್ನು ಬೆಳೆಸುವ ದೃಷ್ಟಿಯಲ್ಲಿ ಇದು ರೂಢಿಗತವಾದ ಪದ್ಧತಿ ಎನಿಸಿತ್ತು. ಕೇಂದ್ರದ ರಕ್ಷಣೆಗಾಗಿ ಕೇಂದ್ರೀಕೃತಗೊಂಡ ಸಮಗ್ರ ಪಡೆ ಅಥವಾ ದಳದ ವ್ಯವಸ್ಥೆ ಇತ್ತೇ ? ಇವು ಪ್ರಾಂತ್ಯಾಡಳಿತಗಾರರ ಮೇಲೆ ಹೇಗೆ ಪ್ರಾಬಲ್ಯ ಸಾಧಿಸುತ್ತಿತ್ತು ಎಂದು ತಿಳಿಯಬೇಕಾಗಿದೆ.

ಚಾಲುಕ್ಯರು ಸ್ಥಳೀಯ ಆಡಳಿತಗಾರರನ್ನು ಅಂಕೆಯಲ್ಲಿಡಲು ಬಹುಶಃ ಮಿತಿಮೀರಿದ ಸೈನ್ಯದ ಪಡೆಯನ್ನು ಹೊಂದಿದ್ದರು. ಆಗಾಗ್ಗೆ ಧಾರ್ಮಿಕ ಹಾಗೂ ಇನ್ನಿತರ ಕಾರಣಗಳಿಗಾಗಿ ಸೈನ್ಯ ಹಾಗೂ ಮಹಾಸಂಧಿ ವಿಗ್ರಹಕ ಮುಂತಾದ ಅಧಿಕಾರಿಗಳೊಂದಿಗೆ ಜೈತ್ರಯಾತ್ರೆ ಹೊರಡುತ್ತಿದ್ದರು. ಒಮ್ಮೊಮ್ಮೆ ರಾಣಿ ಪರಿವಾರವೂ ಇವರೊಂದಿಗೆ ಧಾವಿಸುತ್ತಿತ್ತು. ಇಂತಹ ಸಮಯಗಳಲ್ಲಿ ಚಾಲುಕ್ಯ ದೊರೆಗಳು ದೇವಸ್ಥಾನಾದಿಗಳಿಗೆ ದಾನದತ್ತಿಗಳನ್ನೂ ಪ್ರಾಂತ್ಯಾಡಳಿತಗಾರರಿಗೆ ಜಹಗೀರು ಮುಂತಾದವನ್ನೂ ದೃಢೀಕರಿಸುತ್ತಿದ್ದರು.[27]

(ಕನ್ನಡಾನುವಾದ/ಎಂ. ಎನ್. ಪ್ರಭಾಕರ್)

---

26 ಹೆಚ್. ಸಿ. ರಾಯ್‌ಚೌಧುರಿ : ಪೊಲಿಟಿಕಲ್ ಹಿಸ್ಟರಿ ಆಫ್ ಏನ್ಷೆಂಟ್ ಇಂಡಿಯಾ, ಕಲ್ಕತ್ತಾ, ೧೯೨೩, ೧೯೭೨, ಪು. ೪೬೬-೫೩೯

27 ರಾಜರುಗಳ ದಂಡಯಾತ್ರೆ ಅಥವಾ ತೀರ್ಥಯಾತ್ರೆಯ ಸಂದರ್ಭದಲ್ಲಿ, ಅವರು ತಂಗುತ್ತಿದ್ದ ಸ್ಥಳಗಳಲ್ಲೇ ರಾಜಶಾಸನಗಳನ್ನು ಏಡುತ್ತಿದ್ದರು.

ಎಂ. ಎನ್. ಪ್ರಭಾಕರ್

ಹೊಯ್ಸಳರ ಕಾಲದ ರಾಜಕೀಯ ವ್ಯವಸ್ಥೆ : ಕೆಲವು ಟಿಪ್ಪಣಿಗಳು

ಮೊದಲೊಳ್ ಸಾಮಂತರಿನಿನಿ
ಸುದಿತೋದಿತನಾಗಿ ಮಂಡಳೇಶ್ವರನಿಂದ-
ಭ್ಯುದಯಂಪರನೆನಿಸಿ ಚಕ್ರಿಯಿ-
ನುದಯ ಪರಂಪರೆಯ ನೆಯ್ದಿದಂ ಕವಿರತ್ನಂ[1]

ರನ್ನ ಕವಿಚಕ್ರವರ್ತಿಯ ಗದಾಯುದ್ಧ ಕಾವ್ಯದಲ್ಲೊಂದು ಪದ್ಯ ;- ಸಾಮಂತ-ಮಂಡಳೇಶ್ವರ–ಚಕ್ರಿ (ಚಕ್ರವರ್ತಿ)ಯರ ಪರಂಪರೆಯನ್ನು ಅಥವಾ ಆರೋಹಣ ಕ್ರಮವನ್ನು ಪರೋಕ್ಷವಾಗಿ ಗುರುತಿಸಿದೆ. ಅಜಿತ ಪುರಾಣದ ಮತ್ತೊಂದು ಪದ್ಯವು ಸಾಮಂತ-ಮಂಡಳಿಕ-ಚಕ್ರವರ್ತಿಗಳನ್ನು ಕ್ರಮವಾಗಿ ಗುರುತಿಸಿದೆ :

ಕೊಂಡಾಟದ ಸಾಮಂತರ
ಮಂಡಳಿಕರ ಸಕಳ ಚಕ್ರವರ್ತಿಗಳ
ಸಭಾಮಂಡಳದೊಳುಭಯ ಕವಿಮುಖ
ಮಂಡನವಾಗಿರ್ಪ ರತ್ನಮಿ ಕವಿರತ್ನಂ[2]

ಕ್ರಿ. ಶ. ಹತ್ತನೆಯ ಶತಮಾನದ ರನ್ನ ಕವಿಗೆ ಚಾಲುಕ್ಯ ಚಕ್ರವರ್ತಿ ಆಶ್ರಯದಾತ. "ಕೃತಿ ನೆಗಟ್ದ ಗದಾಯುದ್ಧ ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ"[3] ಎಂಬ ಒಕ್ಕಣೆ ಚಾಲುಕ್ಯ ಚಕ್ರವರ್ತಿಯನ್ನು ಸ್ಮರಿಸುತ್ತದೆ.

ಕ್ರಿ.ಶ. ಆರನೆಯ ಶತಮಾನದಲ್ಲಿ ಉತ್ತರ ಗುಜರಾತಿನಿಂದ ಕರ್ನಾಟಕಕ್ಕೆ ಬಂದು ಪ್ರಸಿದ್ಧ ದೊರೆತನ ಸ್ಥಾಪಿಸಿದ ಕೀರ್ತಿ ಚಾಲುಕ್ಯರಿಗೆ ಸಲ್ಲುತ್ತದೆಂದು ಪೂರ್ವ ಚಾಲುಕ್ಯರ ವಲಸೆಯನ್ನು ಡಾ॥ ಶಿವರಾಮ ಕಾರಂತರು ಗುರುತಿಸುತ್ತಾರೆ.[4] ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆಯನ್ನು ವಿವರಿಸುತ್ತಾ ಡಾ॥ ಚಿದಾನಂದಮೂರ್ತಿಯವರು, 'ಹೇರಿಲಾಳ ಕನ್ನಡ ಸಂಧಿವಿಗ್ರಹಿ' ಎಂಬ ಶಾಸನಪಾಠವು,ಲಾಟ ಅಥವಾ ಲಾಳ ಈಗಿನ ಗುಜರಾತನ್ನು ಸೂಚಿಸುವುದೆಂದೂ ಈ ಹೆಸರಿನ ಸಂಧಿವಿಗ್ರಹಿಗಳು ಲಾಟ ಹಾಗೂ ಕರ್ನಾಟಕ ದೇಶಗಳ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರೆಂದೂ ಅಭಿಪ್ರಾಯ ಪಡುತ್ತಾರೆ.[5] ಲಾಳ ಸಂಧಿವಿಗ್ರಹಿಯಶಾಗಿದ್ದ ರವಿದೇವನನ್ನು "ಇಂತೆನೆ ಮೂಱುಂ ರಾಜ್ಯದೊಳಂ ತಾನೆ ಚಾಳುಕ್ಯನೃಪರ್ಗೆ ಕೈಗನ್ನಡಿಯಶಾದಂ ತನ್ನ ಗುಣದಿನ್" ಎಂಬ ವಿವರವು ಕ್ರಿ.ಶ. ೯೭೩ ರಿಂದ ಕ್ರಿ. ಶ. ೧೨೦೦ರವರೆಗೆ ಆಳಿದ ಕಲ್ಯಾಣದ ಚಾಲುಕ್ಯರು, ಆಂಧ್ರದಲ್ಲಿದ್ದ ಮೂಡಣ

---

1 ತೀ. ನಂ. ಶ್ರೀಕಂಠಯ್ಯ (ಸಂ.) : ರನ್ನಕವಿ ಗದಾಯುದ್ಧ ಸಂಗ್ರಹಂ, ಮೈಸೂರು, ೧೯೭೨, ಪು. ೨-೩

2 ಅದೇ, ಅನುಬಂಧ : ಅಜಿತಪುರಾಣದ ಕೆಲವು ಪದ್ಯಗಳು, ಪು. ೨೦೯

3 ಅದೇ, ಪು. ೨

4 ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಬೆಂಗಳೂರು, ೧೯೬೯, ಪು.೧

5 ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೬೬, ಪು. ೩೩೩

ಚಾಲುಕ್ಯರು ಮತ್ತು ಕ್ರಿ.ಶ. ೯೪೧ ರಿಂದ ಕ್ರಿ.ಶ. ೧೩೦೦ ರವರೆಗೆ ಗುಜರಾತಿನಲ್ಲಿದ್ದ ಚಾಲುಕ್ಯರ ಪರಸ್ಪರ ಸಂಬಂಧ ವನ್ನು ಸೂಚಿಸುವುದೆಂದು ಡಾ॥ ಚಿದಾನಂದಮೂರ್ತಿ ಯವರು ಗುರುತಿಸುತ್ತಾರೆ.[6] ಈ ಬಗ್ಗೆ ಭಿನ್ನಾಭಿ ಪ್ರಾಯಗಳೂ ಉಂಟು.

ಕಲ್ಯಾಣದ ಚಾಲುಕ್ಯರಲ್ಲಿ ಕ್ರಿ. ಶ. ೧೨ನೇ ಶತ ಮಾನದ ಮೂರು ಮತ್ತು ನಾಲ್ಕನೇ ದಶಕಗಳಲ್ಲಿ ಆಳಿದ ಮೂರನೇ ಸೋಮೇಶ್ವರನು ವಿದ್ವಾಂಸನೂ ಹೌದು, ಗ್ರಂಥಕರ್ತನೂ ಹೌದು. ಇವನು ರಚಿಸಿದ ಮಾನಸೋ ಲ್ಲಾಸ ಅಥವಾ ಅಭಿಲಷಿತಾರ್ಥ ಚಿಂತಾಮಣಿ ಬರೋಡಾ ದಿಂದ ಮೂರು ಸಂಪುಟಗಳಲ್ಲಿ ಪ್ರಕಟಗೊಂಡಿದೆ.[7] ಮೈಸೂರಿನ ಓರಿಯಂಟಲ್ ಲೈಬ್ರರಿಯಿಂದ ಭಾಗಶಃ ಪ್ರಕಟವಾಗಿದೆ. ಸಮಕಾಲೀನ ರಾಜ್ಯಾಡಳಿತಕ್ಕೆ ಸಂಬಂಧಿಸಿದ ಕೆಲವು ವಿವರಗಳು ಈ ಗ್ರಂಥದಲ್ಲಿದ್ದು, ಈ ದಿಸೆಯಲ್ಲಿ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ. ಈ ಗ್ರಂಥದ ಪ್ರಕಟಣೆಯಲ್ಲಿ ನೆರವಾದ ಹಸ್ತಪ್ರತಿಗಳು ಪೂನಾ, ಬಿಕನೀರ್, ಬರೋಡಾ, ಮೈಸೂರು ಮುಂತಾ ದೆಡೆಯಲ್ಲಿ ದೊರೆತಿದ್ದು, ಇದು ಗ್ರಂಥದ ಜನಪ್ರಿಯತೆ ಹಾಗೂ ಸಾರ್ವತ್ರಿಕ ಮನ್ನಣೆಯ ದ್ಯೋತಕವೆನಿಸಿದೆ. ಗುಜರಾತಿನ ಹಾಗೂ ಕರ್ನಾಟಕದ ದೇವಾಲಯಗಳನ್ನು ಗುರುತಿಸಲು ಸಹಾಯಕವಾಗಿರುವ ಅಪರಾಜಿತಪೃಚ್ಛಾ ಹಾಗೂ ಸಮರಾಂಗಣ ಸೂತ್ರಧಾರ ಗ್ರಂಥಗಳು ಬರೋಡಾದಿಂದ ಪ್ರಕಟಗೊಂಡಿವೆ.[8] ಅಪರಾಜಿತ ಪೃಚ್ಛಾ ಗ್ರಂಥ ಸಂಪಾದನಕಾರರ ಪ್ರಕಾರ, ಈ ವಾಸ್ತು ಗ್ರಂಥವು ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಕ್ರೋಢೀ ಕರಿಸಲ್ಪಟ್ಟಿದ್ದು,[9] ಈ ಕಾಲದ ನಿಷ್ಕರ್ಶೆಯ ಬಗ್ಗೆ ಭಿನ್ನಾ ಭಿಪ್ರಾಯಗಳುಂಟು. ಈ ಗ್ರಂಥದಲ್ಲಿ ವಾಸ್ತು ವಿವರಣೆ ಗಳೇ ಅಲ್ಲದೆ ಕ್ವಚಿತ್ತಾಗಿ ಆಡಳಿತ ಹಾಗೂ ಅಧಿಕಾರದ ಪದನಾಮಗಳು ಗುರುತಿಸಲ್ಪಟ್ಟಿವೆ. ಈ ಗ್ರಂಥದ ಉಲ್ಲೇಖಗಳೊಂದಿಗೆ ಸಮಕಾಲೀನ ಕನ್ನಡ ಶಾಸನಗಳ ಲ್ಲಿಯೂ ಹಲವಾರು ಅಧಿಕಾರಸೂಚಕ ಪದನಾಮಗಳು ಪ್ರಾಪ್ತವಾಗಿವೆ. ಈ ರೀತಿ ಲಭ್ಯವಿರುವ ಶಾಸನ ಹಾಗೂ ಗ್ರಂಥ ವಿವರಗಳನ್ನು ಪರಸ್ಪರ ತಾಳೆ ನೋಡಲು ಸಾಧ್ಯವಿದೆ. ಒಬ್ಬನೇ ಅಧಿಕಾರಿ ಹಲವಾರು ಕಾರ್ಯ ಗಳನ್ನು ನಿರ್ವಹಿಸುತ್ತಿದ್ದ ಬಗ್ಗೆ ಶಾಸನಾಧಾರವಿದೆ. ಈಗ ದೊರೆತಿರುವ ವಿವರಗಳಿಂದ ಅಧಿಕಾರವ್ಯಾಪ್ತಿ ಯನ್ನು ಕರಾರುವಾಕ್ಕಾಗಿ ಗುರುತಿಸಲಾಗಿಲ್ಲವೆನ್ನುವುದು ನಿಜ. ಶಾಸನ ಹಾಗೂ ಗ್ರಾಂಥಿಕ ವಿವರಣೆಯಲ್ಲಿ ಕಂಡುಬರುವ ವ್ಯವಸ್ಥೆ ಗ್ರಂಥಪೂರ್ವ ಹಾಗೂ ಗ್ರಂಥೋ ತ್ತರ ಕಾಲದಲ್ಲಿ ಬಳಕೆಯಲ್ಲಿದ್ದು, ಕರ್ನಾಟಕ ಹಾಗೂ ಲಾಟ ಪ್ರದೇಶದಲ್ಲಿ ಪ್ರಚಲಿತದಲ್ಲಿತ್ತು ಎನ್ನಬಹುದು.

ಚಾಲುಕ್ಯರ ನಾಡಿನಲ್ಲಿದ್ದ ವ್ಯವಸ್ಥೆ ಹೊಯ್ಸಳರ ಕಾಲದಲ್ಲಿಯೂ ಮುಂದುವರೆದಿದ್ದು, ಪ್ರಸ್ತುತ ಲೇಖನ ದಲ್ಲಿ ಗ್ರಂಥ ಹಾಗೂ ಶಾಸನವಿವರಗಳನ್ನು ಬಳಸಿ ಹೊಯ್ಸಳರ ಕಾಲದ ಅಧಿಕಾರ ಹಾಗೂ ಪದನಾಮ ಗಳನ್ನು ವ್ಯವಸ್ಥಿತವಾಗಿ ಗುರುತಿಸಲು ಯತ್ನಿಸಲಾಗಿದೆ.

> ಸಭಾಮಧ್ಯೇ ಸಮಾಖ್ಯಾತಾಃ ಸ್ಥಿತಃ ಸಿಂಹಾಸನೇ
> ತಥಾ
> ಸರ್ವಾವಸರಕಂ ತತ್ರ ಪ್ರವೃತ್ತಂ ಜನಸಂಕುಲಂ
> ದ್ವಾದಶ ದಂಡನಾಯಕಾ ಪ್ರತೀಹಾರ ದ್ವಯೀ
> ತಥಾ
> ಅಮಾತ್ಯ ರಾಜಕರಣಾ ಶ್ರೀಕರಣಾ
> ಮಯಸ್ಕರಾಃ[10]

---

6 ಅದೇ

7 ಶ್ರೀಗೊಂಡೇಕರ್ (ಸಂ.) : ಮಾನಸೋಲ್ಲಾಸ, ಬರೋಡಾ, ಸಂಪುಟ ೧, ೧೯೨೫ ; ಸಂಪುಟ ೨, ೧೯೩೯ ; ಸಂಪುಟ ೩ (?)

8 ಪಿ. ಎ. ಮಂಕಡ್ (ಸಂ.) : ಅಪರಾಜಿತಪೃಚ್ಛಾ, ಬರೋಡಾ, ೧೯೫೦ ; ವಿ. ಎಸ್. ಅಗರ್‌ವಾಲಾ (ಸಂ.) : ಸಮ ರಾಂಗಣ ಸೂತ್ರಧಾರ, ಬರೋಡಾ, ೧೯೬೬

9 ಅಪರಾಜಿತಪೃಚ್ಛಾ, ಪು. ೧೨

10 ಅದೇ, ಅಧ್ಯಾಯ ೭೮, ಶ್ಲೋಕ ೩೧-೩೨, ಪು. ೧೯೬

ರಾಜನ ಆಸ್ಥಾನವನ್ನು ಗ್ರಂಥಕಾರನು ಗುರುತಿಸಿದ್ದು, ಸಭೆಯ ಮಧ್ಯೆ ವಿರಾಜಮಾನನಾದ ರಾಜನನ್ನೂ ಅವನೊಡನಿರುವ ಸಭಾಸದರನ್ನೂ ಗುರುತಿಸಿದ್ದಾನೆ. ರಾಜ್ಯದ ಆಡಳಿತ ಹಾಗೂ ರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತಿದ್ದ ದಂಡನಾಯಕರಿಗೆ ಆಸ್ಥಾನದಲ್ಲಿ ಅಗ್ರ ಮರ್ಯಾದೆಯು ಸಲ್ಲುತ್ತಿತ್ತು. ಅಪರಾಜಿತಪೃಚ್ಛಾ ಗ್ರಂಥಕಾರನ ಪ್ರಕಾರ ಹನ್ನೆರಡುಜನ ದಂಡನಾಯಕರಿಗೆ ಸ್ಥಾನಮಾನಗಳು ಪ್ರಾಪ್ತವಾಗಿದ್ದವು. ತದನಂತರ ಪ್ರತೀಹಾರರಿಗೆ, ಅಮಾತ್ಯರಿಗೆ ವೃತ್ತಿಗೌರವವು ಸಲ್ಲುತ್ತಿತ್ತು. ಪ್ರತೀಹಾರರು ಬಹುಶಃ ರಾಜನ ಅಂಗ ರಕ್ಷಣೆಯ ಕಾರ್ಯವನ್ನೂ ನಿರ್ವಹಿಸುತ್ತಿದ್ದರು. ಇವರು ರಾಜನ ಅತ್ಯಂತ ಸಮೀಪವರ್ತಿಗಳಾಗಿರಲು ಸಾಧ್ಯವಿದೆ. ಮಾನಸೋಲ್ಲಾಸ ಗ್ರಂಥದಲ್ಲಿ ಪ್ರತೀಹಾರರು ಸಭೆಯಲ್ಲಿ ನಿರ್ವಹಿಸುತ್ತಿದ್ದ ಕಾರ್ಯದ ಕ್ವಚಿತ್ ಸೂಚನೆಯಿದೆ :[11]

ನಾನಾದೇಶಾಧಿಪಾನ್ ಭೂಪಾನ್ ಸ್ವಾತ್ಮ
ರಕ್ಷಾರ್ಥಂ ಆಗತಾನ್
ಪ್ರವೇಶಯ ಪ್ರತಿಹಾರೇತ್ ಆದಿಶೇತ್
ಪೃಥವೀಪತಿಃ॥
ಪ್ರವೇಶಿತಾನ್‌ಪ್ರತೀಹಾರ್ಯೈಃ ಪ್ರಣತಾನ್ ದಂಡವ
ದ್ಭುವಿಃ
ಸಪ್ರಸಾದಮಿತಿ ಬ್ರೂಯಾದಾತಿಷ್ಠತ
ನಿವೇದತ॥

ಚಕ್ರವರ್ತಿಯ ಆದೇಶದ ಮೇರೆಗೆ, ಆಶ್ರಯವನ್ನರಸಿ ಬಂದ ರಾಜರು ಪ್ರತೀಹಾರರೊಂದಿಗೆ ಆಸ್ಥಾನವನ್ನು ಪ್ರವೇಶಿಸುತ್ತಿದ್ದರು. ರಾಜರುಗಳು ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸಿದನಂತರ ಚಕ್ರವರ್ತಿಯು, ಅವರಿಗೆ ಅಭಯಹಸ್ತ ನೀಡಿ ಉಚಿತಾಸನದೊಂದಿಗೆ ಸತ್ಕರಿಸುತ್ತಿದ್ದನು. ಬಹುಶಃ ಈ ಅಧೀನ ರಾಜರ ಪೂರ್ವಾಪರಗಳನ್ನು ತಿಳಿಯುವ, ವ್ಯವಹರಿಸುವ ಕಾರ್ಯಕ್ಕೆ ಪ್ರತೀಹಾರರು ನೇಮಿಸಲ್ಪಡುತ್ತಿದ್ದರು. ಇವರನ್ನು ಸಾಮಾನ್ಯವಾಗಿ ದ್ವಾರಪಾಲಕರೆಂದು ಗುರುತಿಸುವುದುಂಟು.

ಅಪರಾಜಿತಪೃಚ್ಛಾ ಗ್ರಂಥದ ಪ್ರಕಾರ[12] ಪ್ರಾಸಾದ ಗೃಹಗಳನ್ನು ನಿರ್ಮಿಸುವಲ್ಲಿ ಅಧಿಕಾರಕ್ಕೆ ತಕ್ಕಂತೆ ಅವುಗಳ ಮಾನವೂ ನಿಶ್ಚಯಿಸಲ್ಪಡುತ್ತಿತ್ತು. ಮಂತ್ರಿಯ ನಂತರ ದ್ವಾರಪಾಲಕನನ್ನು ಹೆಸರಿಸುವುದರಿಂದ ಇವನು ಕೇವಲ ದ್ವಾರಪಾಲಕನಾಗಿರದೆ ಗುರುತರಕಾರ್ಯವನ್ನೂ ನಿರ್ವಹಿಸುತ್ತಿದ್ದನೆಂದು ತಿಳಿಯಬಹುದು:

ರಾಜಾಲಯೇ ಚ ಯನ್ಮಾನಂ ತದರ್ಧಂ ದಂಡ
ನಾಯಕೇ
ತದರ್ಧಂ ಮಂತ್ರಿ ಸಂಸ್ಥಾನಂ ಮಂತ್ರ್ಯರ್ಧಂ
ದ್ವಾರಪಾಲಕೇ

ಈ ಶ್ಲೋಕದ ಪೂರ್ಣವಿವರವು ವಾಸ್ತುವಿಗೆ ಸಂಬಂಧಿಸಿದೆ. ದಂಡನಾಯಕ ಹಾಗೂ ಮಂತ್ರಿಪದವಿಗಳನ್ನು ಒಬ್ಬರೇ ನಿರ್ವಹಿಸಿದ ಉದಾಹರಣೆಗಳಿವೆ. "ಜಗತ್ಪ್ರಸುತ್ಯಾಕೃತಿ ಮಂತ್ರಿ ಮಂಡಳಿಕ ದಂಡಾದೀಶ"[13] ಎಂಬ ಶಾಸನದ ಒಕ್ಕಣೆ ಮಂತ್ರಿ, ಮಂಡಳಿಕ ಹಾಗೂ ದಂಡಾದೀಶನೆನಿಸಿದ ವ್ಯಕ್ತಿಯೊಬ್ಬನನ್ನು ಗುರುತಿಸುತ್ತದೆ.

ದಂಡನಾಯಕ– ದಂಡಾದೀಶ–ದಂಡಾಧಿಪ–ದಂಡನಾಥರೆಂದೂ ಆಡುಭಾಷೆಯಲ್ಲಿ ದಣ್ಣಾಯಕರೆಂದೂ ಈ ಎಲ್ಲಾ ಪ್ರಯೋಗಗಳು ಶಾಸನಗಳಲ್ಲಿ ಬಳಸಲ್ಪಟ್ಟಿವೆ. 'ದಂಡನಾಯಕಿತಿ ಸಾತವ್ವೆ'[14] ಎನ್ನುವಲ್ಲಿ ಕೇವಲ ದಂಡನಾಯಕನ ಹೆಂಡತಿಯೇ ? ಅಥವಾ ಹೆಣ್ಣೂ ಈ ಪದವಿಗೆ ಅರ್ಹಳೇ ? ಅಧಿಕಾರ ನಿರ್ವಹಿಸಿದ್ದಕ್ಕೆ ಮತ್ತಷ್ಟು ಪ್ರಮಾಣಗಳು ಅಗತ್ಯವಿದೆ.

ರಾಜಕಾರಣ ಹಾಗೂ ಶ್ರೀಕರಣ ಎರಡೂ ಅಮಾತ್ಯರು ನಿರ್ವಹಿಸುತ್ತಿದ್ದ ಅಧಿಕಾರಸೂಚಕ

11 ಸಂಪುಟ ೨, ಅಧ್ಯಾಯ ೧೧, ಶ್ಲೋಕ ೩೪-೩೫, ಪು. ೧೦೬
12 ಅಧ್ಯಾಯ ೮೧, ಶ್ಲೋಕ ೧೪, ಪು. ೨೦೩
13 ಎಪಿಗ್ರಾಫಿಯಾ ಕರ್ನಾಟಿಕ, ಹಾಸನ ಜಿಲ್ಲೆ, ಸಂಪುಟ ೫, ಭಾಗ ೨, ೧೯೦೨ : ಚನ್ನರಾಯಪಟ್ಟಣ ೧೭೯
14 ಅದೇ, ಚನ್ನರಾಯಪಟ್ಟಣ ೧೬೧

ಪದಗಳು. "ರಾಜ್ಯಕರಣಾಗ್ರಣಿಯಂ ವಿಭುಮಂತ್ರಿ ರಾಮನಂ"[15] ಎಂದು ಅರಕಲಗೂಡಿನ ಶಾಸನವೊಂದು ರಾಜ್ಯಕರಣಕ್ಕೆ ನೇಮಿಸಲ್ಪಟ್ಟ ಮಂತ್ರಿಯನ್ನು ಹೆಸರಿಸಿದೆ. 'ರಾಜಕಾರಣ' ಹಾಗೂ 'ರಾಜ್ಯಕರಣ' ಈ ಪದಗಳು ರಾಜಕಾರಣಿ ಪದಕ್ಕೆ ನಾಂದಿಯಾಯಿತೇ ? ಆದರೆ, ಅಂದಿನ ರಾಜಕಾರಣದಿಂದ ಉದಯಿಸಿದ 'ರಾಜಕಾರಣಿ' ಎನ್ನುವ ಪದ ಇಂದು ಅಪಮೌಲ್ಯಗೊಂಡು ಬಳಕೆಯಲ್ಲಿದೆ. ಶ್ರೀಕರಣದ ಅಧಿಕಾರದ ವ್ಯಾಪ್ತಿ ಎಲ್ಲಿಯೂ ಸ್ಪಷ್ಟವಾಗಿಲ್ಲ. ಬಹುಶಃ ಇಂದಿನ ಮುಖ್ಯಮಂತ್ರಿಗೆ ಸಮನಾದುದು. ಈ ಹುದ್ದೆಗೆ ಅಮಾತ್ಯರಲ್ಲಿ ಹಿರಿಯರೊಬ್ಬರು ನೇಮಿಸಲ್ಪಡುತ್ತಿದ್ದರು.

"ಶ್ರೀ ಮನ್ಮಹಾಪ್ರಧಾನಂ ಸರ್ವಾಧಿಕಾರಿ ಶ್ರೀ ಕರಣಾಗ್ರಗಣ್ಯಂ ಸರ್ವಾಧ್ಯಕ್ಷನೆನಿಸಿದ"[16] ಹಾಗೂ "ಶ್ರೀ ಮನ್‌ಮಹಾಪ್ರಧಾನಂ ಶ್ರೀಕರಣಾಧಿಪತಿ ಹಿರಿಯ ದಂಡನಾಯಕ ಮಾಚೈಯ"[17] ಈ ಶಾಸನೋಕ್ತಿಗಳು ಶ್ರೀಕರಣಾಧಿಕಾರಕ್ಕೆ ನೇಮಿಸಲ್ಪಟ್ಟ ಮಂತ್ರಿಗಳನ್ನು ಗುರುತಿಸಿವೆ. "ಶ್ರೀಕರಣದ ಹೆಗ್ಗಡೆ ಎರೆಯಣ್ಣ,"[18] "ಶ್ರೀಕರಣ ತಂತ್ರಾಧಿಕಾರಿ,"[19] "ತಂತ್ರಶ್ರೀಕರಣಾಧಿಕಾರನಿರತಂ"[20] ಎಂದೂ ಶಾಸನಗಳು ಬಳಸಿವೆ. "ತನ್ತ್ರ ಶ್ರೀಕರಣಾಧಿಸರ್ವ್ವಾಧಿಕಾರಿ ಸರ್ವ್ವಾಧ್ಯಕ್ಷತಾದಕ್ಷ" ಎಂಬ ಒಕ್ಕಣೆ ಹಲವು ವ್ಯವಸ್ಥೆಗಳ ಮೇಲೆ ಹಿಡಿತವುಳ್ಳ ಸರ್ವಾಧಿಕಾರವನ್ನು ಸೂಚಿಸಿದೆ. ಅಮಾತ್ಯರ ಸಂಖ್ಯೆಯನ್ನು ಸ್ಪಷ್ಟವಾಗಿ ಸೂಚಿಸಿಲ್ಲವಾದರೂ "ಚತುರ್ವಿಧ ಪ್ರಣೀತ ನೀತಿಚಾಣಾಕ್ಯ ತಂತ್ರಾಧಿಕಾರಿ"[21] ಎಂಬ ಉಲ್ಲೇಖವು ನಾಲ್ಕು ಜನರಿಗೆ ಅವಕಾಶವೆನಿಸುವಂತಿದೆ. ಈ ದಿಸೆಯಲ್ಲಿ ಮತ್ತಷ್ಟು ಸಾಕ್ಷ್ಯಾಧಾರಗಳು ಅಗತ್ಯ. ಬನವಸೆ ನಾಡನ್ನಾಳುತ್ತಿದ್ದ ಬಿಜ್ಜಳನ ಮಹಾಪ್ರಧಾನ ಕೇಶಿಮಯ್ಯನಿಗೆ ಮೂವರು ಪ್ರಧಾನರಿದ್ದು, ಒಟ್ಟು ನಾಲ್ಕು ಜನ ಪ್ರಧಾನರೆಂದು ಗುರುತಿಸಬಹುದು.[22]

ಸರ್ವಂ ಶ್ರೀಕರಣಾದ್ಯಂ ರಾಜಾಧಿಕರಣಂ ತಥಾ
ವ್ಯಯಾಧಿಕರಣಂ, ಚೈವ ಧರ್ಮಾಧಿಕರಣಂ ತಥಾ

ಅಪರಾಜಿತಪೃಚ್ಛಾ ಗ್ರಂಥೋಕ್ತಿಯ ಪ್ರಕಾರ ಶ್ರೀಕರಣ, ರಾಜಾಧಿಕರಣ, ವ್ಯಯಾಧಿಕರಣ, ಧರ್ಮಾಧಿಕರಣ ವ್ಯವಸ್ಥೆಯ ನಾಲ್ಕು ಅಂಗಗಳು.[23] ರಾಜಾಧಿಕರಣವು ರಾಜ್ಯವ್ಯವಸ್ಥೆಯನ್ನೂ ವ್ಯಯಾಧಿಕರಣವು ದೇಶದ ಆಯವ್ಯಯ ಮತ್ತು ಹಣಕಾಸು ವ್ಯವಸ್ಥೆಯನ್ನೂ ಧರ್ಮಾಧಿಕರಣವು ನ್ಯಾಯಾಂಗ ವ್ಯವಸ್ಥೆಯನ್ನೂ ಶ್ರೀಕರಣವು ಇನ್ನಿತರ ವ್ಯವಸ್ಥೆಗಳನ್ನೊಳಗೊಂಡಂತೆ ಸರ್ವಾಧಿಕಾರವನ್ನೂ ನಿರ್ವಹಿಸುತ್ತಿತ್ತು ಎಂದು ಗುರುತಿಸಬಹುದು. ಈ ವಿಭಾಗಗಳಿಗೆ ಪ್ರತ್ಯೇಕ ಮಂತ್ರಿಗಳು ನೇಮಿಸಲ್ಪಡುತ್ತಿದ್ದರು. ಈ 'ಕರಣ'ಗಳ ಅಥವಾ 'ಅಧಿಕರಣ'ಗಳ ಕಚೇರಿವ್ಯವಹಾರಗಳನ್ನು ನೋಡಿಕೊಳ್ಳುವವನನ್ನು 'ಕರಣಿಕ' ಎನ್ನಲು ಸಾಧ್ಯವಿದೆ. ಆಸ್ಥಾನದಲ್ಲಿ ಉಪಸ್ಥಿತರಾದ ಸಭಾಸದರನ್ನು ಗುರುತಿಸುವಾಗ ಮಾನಸೋಲ್ಲಾಸ ಗ್ರಂಥಕಾರನು, ಅಮಾತ್ಯ ಮಂತ್ರಿ ಸಚಿವರೆಂದು ಒಟ್ಟಿಗೆ ಉಲ್ಲೇಖಿಸುತ್ತಾನೆ. ಇವು ಪರ್ಯಾಯ ಪದಗಳೆಂದೇ ಬಳಕೆಯಲ್ಲಿವೆ. ಆದರೆ ಒಟ್ಟಿಗೆ ಬಳಸಿರುವ ಔಚಿತ್ಯವೇನೋ ತಿಳಿಯದು. ತದನಂತರ, ಮಂಡಲೇಶ್ವರರು, ಸಾಮಂತರು ಹಾಗೂ ಅಮಾತ್ಯರುಗಳಿಗೆ ಉಚಿತಾಸನಗಳನ್ನು ಕಲ್ಪಿಸಿದ್ದಾನೆ.

---

15 ಅದೇ, ಅರಕಲಗೂಡು ೫
16 ಅದೇ, ಬೇಲೂರು ೧೭೫
17 ಅದೇ, ಚನ್ನರಾಯಪಟ್ಟಣ ೧೬೧
18 ಅದೇ, ಅರಸೀಕೆರೆ ೧೩೮
19 ಅದೇ, ಹಾಸನ ೭೧
20 ಅದೇ, ಹಾಸನ ೭೬
21 ಅದೇ
22 ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೩೩೦
23 ಅಧ್ಯಾಯ ೮೪, ಶ್ಲೋಕ ೮, ಪು. ೨೦೦

ಅಮಾತ್ಯಮಂತ್ರಿಸಚಿವಾ ದ್ವಿತೀಯಾಂಗಾ
ನಿಯೋಜಿತಾಃ
ನಿವೇಶೇಯುರ್ಯಥಾ ಸ್ಥಾನಂ ನೃಪದಿಪ್ಸಾಸನೇ
ಕ್ರಮಾತ್
ಮಂಡಲಾಧೀಶ್ವರಾಃ ಶೂರಾಃ ಸಾಮಂತಾ
ಮಹಾತ್ಮಕಾಃ ಅಪಿ
ವಾಮದಕ್ಷಿಣಪಂಕ್ತಿಸ್ಥಃ ಪುರೋಭಾಗೇ ಮಹೀ
ಭುಜಃ

ಅಪರಾಜಿತಪೃಚ್ಛಾ ಗ್ರಂಥದಲ್ಲಿ ನಾಲ್ಕು ಅಧಿಕರಣಗಳನ್ನು ಮಾತ್ರ ಗುರುತಿಸಿದ್ದು, ಮಾನಸೋಲ್ಲಾಸ ಗ್ರಂಥದಲ್ಲಿ ಹಲವಾರು ವಿಭಾಗವ್ಯವಸ್ಥೆಗಳನ್ನೂ ನಿರ್ವಹಿಸುವ ಅಧಿಕಾರಿಗಳ ಸರಣಿಯಿದೆ. ಇವರೆಲ್ಲರೂ ಸಭಾಸದರೆಂದೇ ಉಲ್ಲೇಖಿಸಲ್ಪಟ್ಟಿದ್ದಾರೆ.[24]

ಸಂವಿಶೇಯುರ್ಯಥಾ ಸ್ಥಾನಮಾಸನೇಷು
ನೃಪಾಜ್ಞಯಾ
ದೇಶಾಧಿಕಾರಿಣಃ ಕೇಚಿತ್ಕೇ ಚಿದ್ಗ್ರಾಮಾಧಿಕಾರಿಣಃ
ಧರ್ಮಾಧಿಕಾರಿಣಃ ಕೇಚಿದರ್ಥಾಧಿಕಾರಿಣಃ
ಕಾಮಾಧಿಕಾರಿಣಃ ಕೇಚಿತ್ಕೋಶಾಧಿಕಾರಿಣಃ[25]

ಈ ಅಧಿಕಾರಿಗಳ ಯಾದಿಯಲ್ಲಿ ಕೆಲವು ಪುನರಾವರ್ತನೆಗೊಂಡಿವೆ. ಕೆಲವು ಅಧಿಕಾರಗಳು ಅಸ್ಪಷ್ಟವೆನಿಸುತ್ತವೆ. ಉದಾಹರಣೆಗಳು ಇಲ್ಲಿವೆ :

ಗ್ರಾಮಾಧಿಕಾರಿ, ಧರ್ಮಾಧಿಕಾರಿ, ಅರ್ಥಾಧಿಕಾರಿ
ಕೋಶಾಧಿಕಾರಿ, ನಿಷ್ಕಾಧಿಕಾರಿ, ತುಲಾಧಿಕಾರಿ
ಮುದ್ರಾಧಿಕಾರಿ, ಮೌಲ್ಯಾಧಿಕಾರಿ, ನಾವಾಧಿಕಾರಿ
ಮಾರ್ಗಾಧಿಕಾರಿ, ದ್ವಾರಾಧಿಕಾರಿ, ದ್ವೀಪಾಧಿಕಾರಿ
ಯೋಧಾಧಿಕಾರಿ, ಶಸ್ತ್ರಾಧಿಕಾರಿ, ದಾನಾಧಿಕಾರಿ
ದಂಡಾಧಿಕಾರಿ, ಗಜಾಧಿಕಾರಿ, ಅಶ್ವಾಧಿಕಾರಿ
ಶಸ್ತ್ರಾಧಿಕಾರಿ, ವಾದ್ಯಾಧಿಕಾರಿ, ಗೇಯಾಧಿಕಾರಿ
ನೃತ್ಯಾಧಿಕಾರಿ. ಚಿತ್ರಾಧಿಕಾರಿ ಇತ್ಯಾದಿ[26]

ಅಸ್ಪಷ್ಟವೆನಿಸುವ ಅಧಿಕಾರಿಗಳು :

ಕಾಮಾಧಿಕಾರಿ, ಭೂಷಾಧಿಕಾರಿ, ಸುಧಾಧಿಕಾರಿ
ಕಾಂತಾಧಿಕಾರಿ, ವರ್ಣಾಧಿಕಾರಿ ಇತ್ಯಾದಿ.

ಈ ಅಧಿಕಾರಗಳಿಗೆ ಸಂಬಂಧಿಸಿದಂತೆ ಹೆಗ್ಗಡೆಗಳು ಕಾರ್ಯನಿರ್ವಹಿಸಿದ್ದನ್ನು 'ಅರಸಿಕೆರೆಯ ರಾಜಾಧ್ಯಕ್ಷದ ಹೆಗ್ಗಡೆ'[27] ಎಂಬ ಶಾಸನೋಲ್ಲೇಖದಿಂದ ಗಮನಿಸಬಹುದು. ಮಂತ್ರಿಗಳ ನಂತರ ಪ್ರದೇಶವೊಂದರಲ್ಲಿ ಹೆಗ್ಗಡೆಗಳು ಬಹುಶಃ ಕಾರ್ಯನಿರ್ವಹಿಸುತ್ತಿದ್ದರು. 'ಶ್ರೀಕರಣದ ಹೆಗ್ಗಡೆ ಎರೆಯಣ್ಣ'[28] 'ಅಶ್ವಾಧ್ಯಕ್ಷದ ಹೆಗ್ಗಡೆ'[29] 'ಕೋಶಾಧ್ಯಕ್ಷ ಪದವಿ'[30] ಮುಂತಾದ ಶಾಸನೋಕ್ತಿಗಳಿಂದ ಅಧ್ಯಕ್ಷ ಹಾಗೂ ಹೆಗ್ಗಡೆ ಸಮಾನ ಪದವೀಸೂಚಕಗಳೆನ್ನಬಹುದು. ಹೆಗ್ಗಡೆ, ಪೆರ್ಗಡೆ ಸಂಸ್ಕೃತದ ಮಹತ್ತರ ಪದದ ಕನ್ನಡಾನುವಾದವಾಗಿರಲು ಸಾಧ್ಯವೆಂದು ಡಾ॥ ಚಿದಾನಂದಮೂರ್ತಿಯವರು ಊಹಿಸುತ್ತಾರೆ.[31] ಪಂಪನ ಆದಿಪುರಾಣದಲ್ಲಿ ಮಹತ್ತರರನ್ನು ಗುರುತಿಸಿದ್ದು, ಮಹತ್ತರರ ವಿಶೇಷಣಗಳನ್ನು ಗಮನಿಸಬಹುದು. ಹೆಗ್ಗಡೆಗಳ ಅಧಿಕಾರ ವ್ಯಾಪ್ತಿ ದೇಶದೊಳಗೇ ಹೊರತು ವಿದೇಶಗಳಿಗೆ ವಿಸ್ತರಿಸಿಲ್ಲ. ಆದಿಪುರಾಣವು ಮಹತ್ತರರನನ್ನು 'ಜಾನಪದನುಂ ಪ್ರತ್ಯುತ್ಪನ್ನ ಪ್ರತಿಭನುಂ ವಕ್ರೋಕ್ತಿನಿಪುಣನುಂ ಪರಿಚಿತಾಶೇಷ ಭಾಷನುಂ ವಯೋವೃದ್ಧನುಂ ಪ್ರಸಿದ್ಧನುಮಪ್ಪ ಮಹತ್ತರನಂ' ಎಂದು ಬಣ್ಣಿಸಿದೆ.

ಕೆ. ಪಿ. ಜಯಸ್ವಾಲ್‌ರವರು 'ಗ್ರಾಮ ಘೋಷ ಮಹತ್ತರಾಃ' ಎಂದು ಉಲ್ಲೇಖಿಸಿದ್ದು, Presidents of townships and villages ಎಂದು

24 ಸಂ. ೨, ಶ್ಲೋಕ ೫-೬, ಪು. ೧೦೪
25 ಅದೇ, ಶ್ಲೋಕ ೭-೮
26 ಅದೇ, ಶ್ಲೋಕ ೭-೧೩, ಪು. ೧೦೪-೧೦೫
27 ಎ.ಕ., ಅರಸೀಕೆರೆ ೬೯
28 ಅದೇ, ಅರಸೀಕೆರೆ ೧೩೮
29 ಅದೇ, ಚನ್ನರಾಯಪಟ್ಟಣ ೧೫೧
30 ಅದೇ, ಚನ್ನರಾಯಪಟ್ಟಣ ೨೦೩
31 ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೩೩೧

ಅರ್ಥೈಸುತ್ತಾರೆ.[32] ಗ್ರಾಮ, ಶ್ರೇಣಿ, ಕುಶಲಕರ್ಮಿಗಳ ಅಥವಾ ವರ್ತಕಸಂಘದ ಅಧ್ಯಕ್ಷ, ಹಿರಿಯ ಎಂದು ಗಮನಿಸಬೇಕು. ಸಮರಾಂಗಣ ಸೂತ್ರಧಾರ ಗ್ರಂಥವು "ಶ್ರೇಷ್ಠಿನೋ ದಕ್ಷಿಣಾಶಾಯಸಾಂ ತಥಾ ದೇಶಮಹತ್ತರಾನ್"[33] ಎಂದು ಗುರುತಿಸಿದೆ. ಈತ ನಾಡಿನ ಹಿರಿಯ ಮುತ್ಸದ್ದಿಯೂ ಹೌದು. ದೇಶದ ರಾಯಭಾರ ವಹಿಸಿ ದೇಶವಿದೇಶಗಳಿಗೆ ಹೋಗಿಬರುತ್ತಿದ್ದನು. ನಿಯೋಗಿಗಳನ್ನು ಮಹತ್ತರರೆಂದು ಕರೆದಿರುವುದನ್ನು ಡಾ॥ ಚಿದಾನಂದಮೂರ್ತಿಯವರೆ ಗುರುತಿಸುತ್ತಾರೆ.[34]

ದಂಡನಾಯಕ ಹಾಗೂ ಸೇನಾಪತಿ ಎರಡೂ ಪ್ರಯೋಗಗಳು ವ್ಯಕ್ತವಾಗಿದ್ದು, ಸಮಾನ ಹಾಗೂ ಪರ್ಯಾಯ ಪದಗಳೆನಿಸಿದರೂ ದಂಡನಾಯಕರಿಗೆ ಸೇನೆಯ ಆಡಳಿತದೊಂದಿಗೆ ಇತರ ಆಡಳಿತವೂ ಒಳಪಟ್ಟಿತ್ತು ಎಂದು ಗಮನಿಸಬಹುದು. ದಂಡನಾಯಕರ ನಂತರ ಮಹಾಪಸಾಯಿತರೂ ಪಸಾಯಿತರೂ ಕೆಳಗಿನ ಅಧಿಕಾರಿಗಳೆಂದು ತಿಳಿಯಬಹುದು. 'ಸಮಸ್ತ ದಳಪಸಾಯಿತ'[35] 'ಮಹಾಪಸಾಯ್ತ'[36] ಎಂಬ ಪ್ರಯೋಗಗಳು ಬಹುಶಃ ಸಮಾನ ವೃತ್ತಿಸೂಚಕ ಪದಗಳಿರಬಹುದು. ರಕ್ಷಣಾ ಕಾರ್ಯಕ್ಕೆ ಅಥವಾ ಸೇನೆಗೆ ನೇರವಾಗಿ ಸಂಬಂಧವಿರದ ವೃತ್ತಿಯಾಗಿ 'ಅಸ್ಥಾಧ್ಯಕ್ಷದ ಹೆಗ್ಗಡೆ' ಹಾಗೂ ಮೇಲೆ ಗುರುತಿಸಿದ ಅಶ್ವಾಧಿಕಾರಿ, ಗಜಾಧಿಕಾರಿಗಳನ್ನು ಹೆಸರಿಸಬಹುದು.

ಮಂಡಲೇಶ್ವರರು, ಮಂಡಳಿಕರು, ಮಹಾಸಾಮಂತರು, ಸಾಮಂತರು ರಾಜ ಅಥವಾ ಚಕ್ರವರ್ತಿಗಳ ಅಧೀನದಲ್ಲಿದ್ದು ಕಪ್ಪಕಾಣಿಕೆಗಳನ್ನು ನೀಡುತ್ತಾ ಆಶ್ರಯಿಸಿದವರು. ತಮ್ಮ ತಮ್ಮ ದೇಶಪ್ರಾಂತ್ಯಗಳಲ್ಲಿ ಇವರು ತಕ್ಕಮಟ್ಟಿಗೆ ಸ್ವತಂತ್ರರೂ ಹೌದು. ಕೆಲವರು ರಾಜ ಅಥವಾ ಚಕ್ರವರ್ತಿಯ ಸಮೀಪದಲ್ಲಿದ್ದು ಅಧಿಕಾರ ನಿರ್ವಹಣೆಯನ್ನು ಒಪ್ಪಿಕೊಂಡಿರುವುದುಂಟು.

ಚತ್ವಾರೋ ಮಂಡಲೇಶಾಶ್ಚ ಮಂಡಲಿಕಾ
ದ್ವಾದಶಾ
ಮಹಾಸಾಮಂತ ದ್ವಿರಷ್ಟ ಸಾಮಂತಾಶ್ಚ
ಯುಗಾಷ್ಟಕಾಃ
ಲಘವಃ ಷಷ್ಠ್ಯುತ್ತರಂ ಚತುಃಶತಂ ಚತು
ರಂಶಿಕಾಃ
ಶೇಷಾಸ್ತು ರಾಜಪುತ್ರಾಶ್ಚ ಅಸಂಖ್ಯಾತಾಸ್ತ
ಥೈವಚ[37]

ಅಪರಾಜಿತಪೃಚ್ಛಾ ಗ್ರಂಥದ ಕರ್ತೃವು, ಆಸ್ಥಾನದಲ್ಲಿ ನಾಲ್ಕುಜನ ಮಂಡಲೇಶ್ವರರು, ಹನ್ನೆರಡು ಮಂದಿ ಮಂಡಲಿಕರು, ಹದಿನಾರುಮಂದಿ ಮಹಾಸಾಮಂತರು, ಮೂವತ್ತೆರಡು ಮಂದಿ ಸಾಮಂತರುಗಳಿಗೆ ಅವಕಾಶ ಕಲ್ಪಿಸಿದ್ದಾನೆ. ಇವರೊಂದಿಗೆ ಲಘುಸಾಮಂತರು, ಚತುರಂಶಿಕರು ಮತ್ತು ರಾಜಕುಮಾರರು ಸಭಾಸದರೆಂದು ವರ್ಣಿಸಿದ್ದಾನೆ. ರಾಜ ಅಥವಾ ಚಕ್ರವರ್ತಿಯ ಅಧೀನದಲ್ಲಿರುವ ಮಂಡಲೇಶ್ವರ ಸಾಮಂತಾದಿಗಳ ಸಂಖ್ಯೆಯನ್ನು ನಿರ್ದಿಷ್ಟಗೊಳಿಸುವುದು ಅಸಂಗತವೆನಿಸುತ್ತದೆ.

ಕವಿರತ್ನೋಕ್ತಿಯಿಂದ ಸಾಮಂತ–ಮಂಡಳಿಕ–ಮಂಡಳೇಶ್ವರ – ಚಕ್ರವರ್ತಿಗಳ ಬಗ್ಗೆ ಖಚಿತ ಅರಿವಿತ್ತು. ಅಪರಾಜಿತಪೃಚ್ಛಾ ಗ್ರಂಥದ ಪ್ರಕಾರ, ಚತುರಂಶಿಕ – ಲಘುಸಾಮಂತ – ಸಾಮಂತ – ಮಹಾಸಾಮಂತ-ಮಂಡಳಿಕ-ಮಂಡಳೇಶ್ವರ-ಚಕ್ರವರ್ತಿ ಎಂದು ಖಚಿತವಾಗಿ ಆರೋಹಣ ಕ್ರಮವನ್ನು ಗುರುತಿಸಬಹುದು.

---

32 ಹಿಂದೂ ಪಾಲಿಟಿ, ಬೆಂಗಳೂರು, ೧೯೬೭, ಪು. ೨೬೬
33 ಅಧ್ಯಾಯ ೧೦, ಶ್ಲೋಕ ೧೭, ಪು. ೪೭
34 ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೨೫೩
35 ಎ.ಕ., ಬೇಲೂರು ೧೬೬
36 ಅದೇ, ಚನ್ನರಾಯಪಟ್ಟಣ ೨೬೫
37 ಅಧ್ಯಾಯ ೭೮, ಶ್ಲೋಕ ೩೩–೩೪, ಪು. ೧೯೬

ಗ್ರಂಥಸ್ಥ ವಿವರಣೆಯನ್ನನುಸರಿಸಿ ಸಭಾಸದರ ನ್ನೊಳಗೊಂಡಂತೆ ಮೂರು ವರ್ಗಗಳಾಗಿ ವಿಂಗಡಿಸ ಬಹುದು. ಚಕ್ರವರ್ತಿ, ಅರ್ಧಪತಿ, ಮಹೀಪತಿ ಇವರು ರಾಜವರ್ಗಕ್ಕೆ ಸೇರಿದವರು ; ಮಂಡಳೇಶ್ವರರಿಂದ ಚತುರಂಶಿಕರವರೆಗೆ ಸಾಮಂತವರ್ಗಕ್ಕೆ ಸೇರಿದವರು. ದಂಡನಾಯಕ, ಪ್ರತೀಹಾರ ಹಾಗೂ ಅಮಾತ್ಯರು ಅಧಿ ಕಾರಿವರ್ಗಕ್ಕೆ ಸೇರಿದವರು.

ಸಮಸ್ತ ಭೂಮಂಡಳವನ್ನಾಳುವವನು ಚಕ್ರವರ್ತಿ ; ಅರ್ಧಭಾಗವನ್ನು ಅಧಿಪತಿ, ಮೂರನೇಒಂದು ಭಾಗವನ್ನು ಆಳುವವನು ಮಹೀಪತಿ. ಇದು ಗ್ರಾಂಥಿಕ ವಿವರಣೆ. ಇವರನ್ನೇ ಮತ್ತೊಂದೆಡೆಯಲ್ಲಿ ಮಹೀಪತಿ, ರಾಜ, ನರಾಧಿಪ ಎಂದು ಕ್ರಮವಾಗಿ ಗುರುತಿಸಲ್ಪಟ್ಟಿದೆ.

ಏಕಚ್ಛತ್ರ ಪ್ರಭೋಕ್ತಾ ಯಃ ಸಭವೇಚ್ಚ ಮಹೀಪತಿಃ[38]

ಚಕ್ರವರ್ತಿಯ ನಂತರ ರಾಜ, ನಂತರ ಮಂಡಳೇಶ್ವರ, ಇದು ಸಾಮಾನ್ಯ ಅವರೋಹಣಕ್ರಮ. ಚಾಲುಕ್ಯ ಹಾಗೂ ಹೊಯ್ಸಳರ ಕಾಲದಲ್ಲಿ ಚಕ್ರವರ್ತಿಯ ನಂತರ ಮಂಡಳೇಶ್ವರರನ್ನು ಗುರುತಿಸುವುದೇ ಅಂದು ಜಾರಿಯಲ್ಲಿದ್ದ ವ್ಯವಸ್ಥೆ. ರಾಜರ ಪ್ರಸ್ತಾಪವು ಅಪ ರೂಪವೇ. 'ಮಹಾರಾಜಾಧಿರಾಜ' ಎಂದು ಬಿರುದು ಬಾವಲಿಗಳಲ್ಲಿ ಸೇರಿರುವುದೇ ಹೆಚ್ಚು. ಉದಾಹರಣೆಗೆ, "ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವ ರನುಮಪ್ಪ ಹೊಯ್ಸಳ ಶ್ರೀ ವೀರವಲ್ಲಾಳ ದೇವರು" ಎಂಬ ಒಕ್ಕಣೆಯುಂಟು.[39] ಹೊಯ್ಸಳ ಅರಸರು ಮೊದಲಿಗೆ ಮಹಾಮಂಡಳೇಶ್ವರರೆನಿಸಿದ್ದು ನಂತರ ಚಕ್ರ ವರ್ತಿಗಳೆನಿಸಿದರು. ಮಂಡಳೇಶ್ವರರಿಗೂ ಮಹಾಮಂಡ ಳೇಶ್ವರರಿಗೂ ಭೇದವಿಲ್ಲವೆನಿಸಿದೆ. ಶಾಸನಗಳು ಮಹಾ ಮಂಡಳೇಶ್ವರ ಎಂದು ಸಂಬೋಧಿಸಿವೆ. ಒಂದೇ ಶಾಸನ ದಲ್ಲಿ ರಾಜ್ಯವಾಳುತ್ತಿರುವ ಚಕ್ರವರ್ತಿಯನ್ನೂ ನಂತರ ಅಧೀನ ಮಹಾಮಂಡಳೇಶ್ವರನನ್ನೂ ಗುರುತಿಸುವುದು ಸಾಮಾನ್ಯವೆನಿಸಿದೆ. ಇಂತಹ ಹಲವು ಉದಾಹರಣೆ ಗಳಿವೆ.

ಗ್ರಾಂಥಿಕ ವಿವರಣೆಗಳ ಪ್ರಕಾರ ಒಂದು ಲಕ್ಷ ಹಳ್ಳಿ ಗಳನ್ನು ಆಳುತ್ತಿದ್ದವನು ಮಹಾಮಂಡಳೇಶ್ವರ ಮತ್ತು ಅರ್ಧಲಕ್ಷ ಗ್ರಾಮಗಳ ಅಧಿಪತಿ ಮಂಡಲಿಕ :

ಲಕ್ಷಗ್ರಾಮಾಧಿಪೋ ಯಸ್ತು ಸ ಮಹಾಮಂಡ
ಲೇಶ್ವರಃ
ಲಕ್ಷಾರ್ಧಂ ಯಸ್ತು ಭುಕ್ತ್ಯೋ ಸ ಮಂಡ
ಲಿಕೋऽಭಿದಾನತಃ[40]

ಈರೀತಿ ವಿವರಣೆಗಳು ಸಾಮಂತಾದಿಗಳಿಗೂ ಲಭ್ಯವಿದ್ದು ಅಧಿಕಾರ ಅಂತಸ್ತುಗಳ ಆರೋಹಣ, ಅವ ರೋಹಣ ಕ್ರಮ ಗುರುತಿಸಲು ನೆರವಾಗಿದೆಯೇ ಹೊರತೂ ಮತ್ತೇನೂ ಉಪಯೋಗವಾಗದು.

ಮಂಡಲೀಕರಿಂದ ಅಧಿಕಾರ ನಿರ್ವಹಣೆ ಹೊಯ್ಸ ಳರ ಕಾಲದಲ್ಲಿ ಕಡಿಮೆಯೆಂದೇ ಗಮನಿಸಬಹುದು. ಒಮ್ಮೊಮ್ಮೆ "ದಕ್ಷಿಣಚಕ್ರವಲ್ಲಭ ಸಭಾರತ್ನ ಪ್ರದೀಪ ಜಗತ್ಪ್ರಸುತ್ಯಾಕೃತಿ ಮಂತ್ರಿ ಮಂಡಳಿಕ ದಂಡಾದೀಶ"[41] ಇತ್ಯಾದಿಯಾಗಿ ಉಲ್ಲೇಖಿಸಿದ್ದನ್ನು ಗಮನಿಸಬಹುದು.

ಮಹಾಸಾಮಂತ ಮತ್ತು ಸಾಮಂತರನ್ನು ಶಾಸನ ವೊಂದು ಒಟ್ಟಿಗೆ ಗುರುತಿಸಿದೆ :

ಶ್ರೀಮನುಮಹಾಸಾಮಂತ ಕೆಚ್ಚನ ಮಾಚಿ
ಯನ ಮಗ
ಶ್ರೀಮಂತುಸಾಮಂತ ಘಸಣೆ ಮಹದೇವ
ನಾಯಕಂ[42]

ಮಹಾಸಾಮಂತ ಬಂಕೈಯನೆನ್ನುವನು ಸೆವನಗೆರೆ ಹನ್ನೆರಡನ್ನು ಆಳುತ್ತಿದ್ದುದನ್ನು ಶಾಸನವೊಂದು ಬಣ್ಣಿ ಸಿದೆ.[43]

---

38 ಅದೇ. ಅಧ್ಯಾಯ ೮೧, ಶ್ಲೋಕ ೨, ಪು. ೨೦೩

39 ಎ.ಕ., ಹಾಸನ ೫೧

40 ಅಪರಾಜಿತಪೃಚ್ಛಾ, ಅಧ್ಯಾಯ ೮೧, ಶ್ಲೋಕ ೫, ಪು. ೨೦೨

41 ಎ.ಕ., ಚನ್ನರಾಯಪಟ್ಟಣ ೧೭೯

42 ಅದೇ, ಅರಸೀಕೆರೆ ೪೨

43 ಅದೇ, ಅರಸೀಕೆರೆ ೩೧

'ಸಾಮಂತ ಗೋವಿದೇವ ಮಗರನಾಡು ಮೂನೂರ ಮೊದಲವಾಡ ಕಳಿಕಟ್ಟಿ"[44]ಯನ್ನೂ "ಕೆರೆಗೋಡು ನಾಡಾಳ್ವ ಮಹಾಪಸಾಯ್ತ ಸಾಮನ್ತ"[45]ನನ್ನೂ ಶಾಸನೋಕ್ತಿಗಳಿಂದ ಗುರುತಿಸಬಹುದು.

ಲಘುಸಾಮಂತ ಹಾಗೂ ಚತುರಂಶಿಕರು ಗ್ರಂಥಸ್ಥರಾಗಿದ್ದಾರೆಯೇ ಹೊರತು ಶಾಸನಗಳಲ್ಲಿ ಪ್ರವೇಶಿಸಿಲ್ಲ.

ಶುಕ್ರನೀತಿ ಗ್ರಂಥವು ಕರಸಂಗ್ರಹಣೆಯನ್ನು ಮೂಲಮಾನವಾಗಿ ಪರಿಗಣಿಸಿ ಅಧಿಕಾರಕ್ರಮವನ್ನು ಈ ರೀತಿ ಗುರುತಿಸಿದೆ:

ನಾಯಕ - ಸಾಮಂತ–ಮಂಡಲಿಕ-ರಾಜ –ಮಹಾರಾಜ-ಸ್ವರಾಟ-ಸಾಮ್ರಾಟ-ಸಾರ್ವಭೌಮ.

ಶತಗ್ರಾಮಾಧಿಪೋ ಯಸ್ತು ಸೋಪಿ ಸಾಮಂತ ಸಂಜ್ಞಕಃ
ಅಧಿಕೃತೋ ದಶಗ್ರಾಮೇ ನಾಯಕಃ ಸಚ ಕೀರ್ತಿತಃ[46]

ಈ ರೀತಿ ವಿವರಣೆಯೂ ಶುಕ್ರನೀತಿ ಗ್ರಂಥದಲ್ಲಿದೆ. ಈ ವಿವರಣೆಗಳಿಗೂ ಅಪರಾಜಿತಪೃಚ್ಛಾ ಗ್ರಂಥದ ವಿವರಣೆಗೂ ಸಾಕಷ್ಟು ವ್ಯತ್ಯಾಸವಿದೆ. ಇವನ್ನು ಕೇವಲ ತಿಳುವಳಿಕೆಗಾಗಿ ನೆನೆಯಬೇಕೇ ಹೊರತು ಮತ್ತೇನೂ ಉಪಯೋಗವೆನಿಸದು.

ಅಪರಾಜಿತಪೃಚ್ಛಾ ಗ್ರಂಥದ ಕೆಳಕಂಡ ಸಾಲುಗಳು ಹೊಯ್ಸಳ ಶಾಸನಗಳ ಪ್ರಶಸ್ತಿ ಪರಾಕುಗಳಂತೆಯೇ ಇವೆ ಎಂದು ಗಮನಿಸಬಹುದು :

ಮಹಾರಾಜಾಧಿರಾಜಶ್ಚ ಪರಮೇಶ್ವರ ಸಂಜ್ಞಿತಃ
ಭುವನೈಕನಾಥೋ ಮಹಾರಾಜ ಚಕ್ರಚೂಡಾಮಣಿಃ
ಭೂಪಾಲಃ ಸರ್ವಕಲಾಕುಶಲಃ ಉಮಾಪತಿ ವರಲಬ್ಧತೇಜಾಃ
ತಥ್ಯಾನ್ಯನೃಪಾದ್ಯ ಮುಖದರ್ಪಣೋ ಧರ್ಮಾಧಿಪ್ರಶಸ್ಯಾವತಾರಃ[47]

ಈ ಸಾಲುಗಳು ಹೊಯ್ಸಳ ವಿಷ್ಣುವರ್ಧನನನ್ನು 'ಏಕಾದಶಾವತಾರನ್'[48] ಎಂದು ಗುರುತಿಸಿದ್ದನ್ನು ನೆನಪಿಸದಿರವು.

---

44 ಅದೇ, ಅರಸೀಕೆರೆ ೫೫
45 ಅದೇ, ಚನ್ನರಾಯಪಟ್ಟಣ ೨೬೫
46 ಪಂಡಿತ ಬ್ರಹ್ಮಾನಂದ ಮಿಶ್ರಾ (ಸಂ.) : ಶುಕ್ರನೀತಿ, ವಾರಣಾಸಿ, ೧೯೬೮, ಅಧ್ಯಾಯ ೧, ಶ್ಲೋಕ ೧೯೦, ಪು.೨೮
47 ಅಧ್ಯಾಯ ೭೮, ಶ್ಲೋಕ ೩೯-೪೦, ಪು. ೧೯೬
48 ಎ. ಕ., ಬೇಲೂರು ೭೧

ಪಿ. ವಿ. ಕೃಷ್ಣಮೂರ್ತಿ

ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಆಡಳಿತ ವಿಭಾಗಗಳು

ದಕ್ಷಿಣಭಾರತದ ಇತಿಹಾಸದಲ್ಲಿ ವಿಜಯನಗರ ಅರಸರ ಆಳಿಕೆಯು ವಿಶಿಷ್ಟ ಸ್ಥಾನವನ್ನು ಪಡೆದಿದೆ. ದಕ್ಷಿಣದ ನಾಲ್ಕೂ ಭಾಷಾ ಪ್ರದೇಶಗಳ ಬಹುಭಾಗವನ್ನು ಒಳಗೊಂಡಿದ್ದ ಅವರ ಸಾಮ್ರಾಜ್ಯದಲ್ಲಿ ಆಡಳಿತದ ಅನುಕೂಲಕ್ಕಾಗಿ ಹಲವು ಹಂತಗಳ ಆಡಳಿತ ವಿಭಾಗಗಳನ್ನು ಅವರು ರೂಪಿಸಿಕೊಂಡಿದ್ದರು. ಕರ್ನಾಟಕ ಪ್ರದೇಶವನ್ನು ಆಳಿದ ಗಂಗ ಮತ್ತು ಚಾಲುಕ್ಯರಿಂದ ಪ್ರಾರಂಭಿಸಿ ಕಲ್ಯಾಣದ ಚಾಲುಕ್ಯರವರೆಗಿನ ಕಾಲಾವಧಿಯಲ್ಲಿ ಪ್ರಚಲಿತವಿದ್ದ ಬಹಳಷ್ಟು ಆಡಳಿತ ವಿಭಾಗಗಳು ಸಂಖ್ಯೆಗಳಿಂದ ಕೂಡಿದ್ದು, ಅದು ಕರ್ನಾಟಕ ಅರಸುಮನೆತನಗಳ ವಿಶೇಷತೆಯೂ ಕೂಡ ಆಗಿದ್ದಿತೆಂಬ ಅಂಶ ಸರಿಯಷ್ಟೆ. ಆದರೆ ಈ ಅವಧಿಯಲ್ಲೇ ಆಳಿದ ಹೊಯ್ಸಳರು ಮಾತ್ರ ಈ ವಿಷಯದಲ್ಲಿ ತುಸು ಭಿನ್ನವಾಗಿರುವುದನ್ನು ನಾವು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಹೊಯ್ಸಳರ ಸಾಮ್ರಾಜ್ಯದ ವಿಸ್ತಾರ. ಕಾವೇರಿಯಿಂದ ದಕ್ಷಿಣಕ್ಕೆ, ಅಂದರೆ ತಮಿಳು ಪ್ರಾಂತದ ಅನೇಕ ಪ್ರದೇಶಗಳನ್ನು ಒಳಗೊಂಡಿದ್ದು, ಆಯಾ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ ಆಡಳಿತ ವಿಭಾಗ ಕ್ರಮವನ್ನೇ ಅವರು ಹೆಚ್ಚಿನ ಬದಲಾವಣೆಯಿಲ್ಲದೆ ಉಳಿಸಿಕೊಂಡಿದ್ದುದೇ ಆಗಿದೆ. ಅಂದರೆ ಹೊಯ್ಸಳರ ಇಡೀ ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ವಾಸ್ತವವಾಗಿ ಏಕರೂಪತೆಯಿರಲಿಲ್ಲವೆನ್ನಬಹುದು. ಹೊಯ್ಸಳರ ನಂತರ ವಿಜಯನಗರದ ಅರಸರು ಈ ಪ್ರದೇಶಗಳನ್ನು ಆಳತೊಡಗಿದಾಗ, ಆ ಹಿಂದೆ ಆಯಾ ಪ್ರದೇಶಗಳಲ್ಲಿ ಪ್ರಚಲಿತವಿದ್ದ ಬೇರೆ ಬೇರೆ ತೆರನಾದ ಆಡಳಿತ ವಿಭಾಗ ಕ್ರಮಗಳನ್ನು ಕ್ರೋಢೀಕರಿಸಿ ಒಂದು ಸಾಮಾನ್ಯೀಕರಣಗೊಂಡ ಇಡೀ ಸಾಮ್ರಾಜ್ಯಕ್ಕೆ ಸೂಕ್ತವೆನಿಸಬಹುದಾದ ಪದ್ಧತಿಯೊಂದನ್ನು ಜಾರಿಗೆ ತರಬೇಕಾದ ಅಗತ್ಯವಿದ್ದಿತು. ಈ ಹಿನ್ನೆಲೆಯಲ್ಲಿ ಮೂಡಿ ಬಂದ ಅವರ ಕಾಲದ ಆಡಳಿತ ವಿಭಾಗಗಳೇ ರಾಜ್ಯ ; ವೇಂಠೆ/ವಳಿತ/ಚಾವಡಿ ; ನಾಡು/ಸೀಮೆ ; ಸ್ಥಳ ಮತ್ತು ಗ್ರಾಮ ಎಂಬುವು.

ಆಡಳಿತ ವಿಭಾಗಗಳಿಗೆ ಸಂಬಂಧಿಸಿದಂತೆ ಶಾಸನೋಕ್ತವಾಗಿರುವ ಅಂಶಗಳ ಹಿನ್ನೆಲೆಯಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳ ಅನುಶ್ರೇಣಿಯನ್ನು ಗುರುತಿಸ ಹೊರಟರೆ ಅನೇಕ ತೊಡಕುಗಳು ಎದಿರಾಗುತ್ತವೆ. ಅನೇಕ ಶಾಸನಗಳಲ್ಲಿ 'ರಾಜ್ಯ'ದ ಬದಲು ಸೀಮೆ, ಸ್ಥಳ, ವಳಿತ ಮತ್ತು ವೇಂಠೆ ಎಂಬ ಪದಗಳನ್ನು ಉಪಯೋಗಿಸಲಾಗಿದೆ. ಹಲವು ಸ್ಥಳಗಳಲ್ಲಿ ಅವುಗಳನ್ನು ರಾಜ್ಯದೊಳಗಿನ ಸಣ್ಣ ವಿಭಾಗಗಳನ್ನು ಸೂಚಿಸಲು ಉಪಯೋಗಿಸಲಾಗಿದೆ–ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಆದರೆ, ಅದು ಮೈಸೂರು ರಾಜ್ಯದ, ಮೈಸೂರುಜಿಲ್ಲೆಯ, ಮೈಸೂರು ತಾಲೂಕಿನ,ಮೈಸೂರು ಸ್ಥಳದ ಎಂಬ ರೀತಿಯಲ್ಲಿ ಉಕ್ತವಾಗಿದ್ದಿರಬೇಕೆಂದು ತೋರುತ್ತದೆ. ಆದರೂ ಈ ದಿಸೆಯಲ್ಲಿ ತುಸುಮಟ್ಟಿನ ಗೊಂದಲವಿರುವುದು ನಿಜ. ಇಂತಹ ಗೊಂದಲ ಕೇವಲ ವಿಜಯನಗರ ಆಳಿಕೆಗೆ ಮಾತ್ರ ಅನ್ವಯವಾಗುವುದಿಲ್ಲ. ಭಾರತದ ಇತರ ಪ್ರದೇಶಗಳ, ರಾಜವಂಶಗಳ, ಬೇರೆ ಬೇರೆ ಕಾಲಗಳ ಈ ಆಡಳಿತ ವಿಭಾಗಗಳ ಅನುಶ್ರೇಣಿಯ ಕ್ರಮವು ಇಂತಹ ಗೊಂದಲಗಳಿಂದ ಕೂಡಿರುವುದನ್ನು

ಡಾ॥ ಡಿ. ಸಿ. ಸರ್ಕಾರ್‌ರವರು ಸಾಧಾರವಾಗಿ ಗುರುತಿಸಿರುತ್ತಾರೆ. ಅಷ್ಟೇ ಅಲ್ಲದೆ ಕೆಲವೊಂದು ಪ್ರದೇಶಗಳಿಗೇ ಸೀಮಿತವಾದ ಕೆಲವು ವಿಶಿಷ್ಟ ಆಡಳಿತ ವಿಭಾಗ ಸೂಚಿ ಪದಗಳು ಕೂಡ ಗಮನ ಸೆಳೆಯುತ್ತವೆ. ಉದಾಹರಣೆಗೆ ಕೋಲಾರ ಮತ್ತು ಬೆಂಗಳೂರು ಜಿಲ್ಲಾ ಪ್ರದೇಶಗಳಲ್ಲಿ ಕಂಡುಬರುವ 'ಪಟ್ಟಡಿ' ಎಂಬ ಆಡಳಿತ ವಿಭಾಗದ ಉಲ್ಲೇಖಗಳು.ಹಾಗೆಯೇ ಬೆಂಗಳೂರು ಜಿಲ್ಲಾ ಪ್ರದೇಶದ ವಿಜಯನಗರದ ಆಳಿಕೆಯ ಕಾಲದಲ್ಲಿ ಅಂದರೆ ಕ್ರಿ. ಶ. ೧೫೦೭ರಷ್ಟು ಹಿಂದೆ, ಅಷ್ಟು ಪ್ರಚಲಿತವಲ್ಲದ 'ಚಾವಡಿ' ಪ್ರಯೋಗವು ಶಾಸನವೊಂದರಲ್ಲಿ ಪ್ರದೇಶವಾಚಕವಾಗಿ ಪ್ರಯುಕ್ತವಾಗಿರುವುದು ಪರಿಶೀಲನಾರ್ಹ.

ಒಟ್ಟಾರೆ, ವಿಜಯನಗರ ಕಾಲದ ಆಡಳಿತ ವಿಭಾಗಗಳ ಹಂತಗಳನ್ನು ಸ್ಥೂಲವಾಗಿ,

೧. ದೇಶ/ರಾಜ್ಯ
೨. ಚಾವಡಿ/ವಠಾಗಣೆ/ವಳಿತ/ವೇಂಠೆ
೩. ನಾಡು/ಸೀಮೆ
೪. ಸ್ಥಳ
೫. ಗ್ರಾಮ

ಎಂಬುದಾಗಿ ಗುರುತಿಸಬಹುದಾಗಿದೆ. ಇವಲ್ಲದೆ, ಪಟ್ಟಣ, ಅಗ್ರಹಾರ ಮತ್ತು ವೃತ್ತಿಯಾಗಿ ನೀಡಲಾಗಿದ್ದ ಸ್ಥಳಗಳು ಪ್ರತ್ಯೇಕ ಸ್ವಾಯತ್ತ ಆಡಳಿತ ಘಟಕಗಳಾಗಿದ್ದುವೆಂದು ತೋರುತ್ತದೆ.

ಬೆಂಗಳೂರು ಜಿಲ್ಲಾ ಪ್ರದೇಶದಲ್ಲಿ ದೊರೆತಿರುವ ವಿಜಯನಗರ ಕಾಲದ ಅಂದರೆ ಕ್ರಿ.ಶ. ಸು. ೧೩೪೦ ರಿಂದ ೧೬೪೦ರ ವರೆಗಿನ ಕಾಲಾವಧಿಯ ಶಾಸನಗಳಲ್ಲಿ ದಾಖಲಾಗಿರುವ ಆಡಳಿತ ವಿಭಾಗಗಳಿಗೆ ಸಂಬಂಧಿಸಿದ ಅಂಶಗಳನ್ನು ಅವಲೋಕಿಸಿದರೆ, ಹಲವಾರು ರಾಜ್ಯಗಳ ಚಾವಡಿ/ವಳಿತ/ಪಟ್ಟಡಿ/ವೇಂಠೆಗಳ, ನಾಡು/ಸೀಮೆಗಳ, ಸ್ಥಳ ಮತ್ತು ಗ್ರಾಮಗಳ ಉಲ್ಲೇಖಗಳಿದ್ದು ಗಮನ ಸೆಳೆಯುತ್ತವೆ.

ಇವುಗಳಲ್ಲಿ ಮೇಲಿನ ಸ್ತರದ ಆಡಳಿತ ವಿಭಾಗಗಳಾದ ರಾಜ್ಯ, ಚಾವಡಿ/ವಠಾಗಣೆ/ವಳಿತ/ವೇಂಠೆಗಳೆಂಬುವು ಕಾಲಾಂತರದಲ್ಲಿ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡು ಆ ಜಾಗಗಳಲ್ಲಿ ಹೊಸ ಆಡಳಿತ ವಿಭಾಗಗಳು ತಲೆಯೆತ್ತುತ್ತಿದ್ದುದು ಕೂಡ ಕಂಡುಬರುತ್ತದೆ. ಇದಕ್ಕೆ ಕಾರಣ ರಾಜವಂಶಕ್ಕೆ ಸೇರಿದ ವ್ಯಕ್ತಿಗಳನ್ನು ಇಂತಹ ರಾಜ್ಯಗಳ ಪ್ರಾಂತ್ಯಾಧಿಕಾರಿಗಳನ್ನಾಗಿ ನೇಮಿಸುತ್ತಿದ್ದುದೇ ಆಗಿದೆ. ವಿಜಯನಗರವನ್ನು ಆಳಿದ ಮೊದಲನೆಯ ವಂಶದ ರಾಜಕುಮಾರರು, ಈ ರೀತಿ ಪ್ರಾಂತ್ಯಾಧಿಕಾರಿಳಾಗಿ ನೇಮಿಸಲ್ಪಟ್ಟವರು, ಒಡೆಯ ಅಥವಾ ಒಡೆಯರ್ ಎಂಬ ಬಿರುದನ್ನು ಪಡೆದುಕೊಳ್ಳುತ್ತಿದ್ದರು. ಮೊದಲನೇ ಹರಿಹರನು ಸಾಮ್ರಾಟನಾಗಿದ್ದಾಗ, ಮಾರಪ್ಪ ಆರಗದ ಪ್ರಾಂತ್ಯಾಧಿಕಾರಿಯಾಗಿ ಚಂದ್ರಗುತ್ತಿಯನ್ನು ರಾಜಧಾನಿಯನ್ನಾಗಿ ಹೊಂದಿದ್ದನು. ಮೊದಲನೆಯ ಕಂಪಣನು ಉದಯಗಿರಿ ರಾಜ್ಯದಪ್ರಾಂತ್ಯಾಧಿಕಾರಿಯಾಗಿದ್ದನು.ಎರಡನೆಯ ಹರಿಹರನ ಮಗ ವಿರೂಪಾಕ್ಷನು ತುಂಡೀರ,ಚೋಳ ಮತ್ತು ಪಾಂಡ್ಯರಾಜ್ಯಗಳ ಅಧಿಕಾರವನ್ನು ಹೊಂದಿದ್ದು ಸಿಂಹಳವನ್ನು ಆಕ್ರಮಿಸಿಕೊಂಡನು. ಹೀಗೆ ಅನೇಕ ಉದಾಹರಣೆಗಳನ್ನು ನೀಡುತ್ತಾ ಹೋಗಬಹುದು.

ಈ ಹಿನ್ನೆಲೆಯಲ್ಲಿ, ಬೆಂಗಳೂರು ಜಿಲ್ಲೆಯ ಕನಕಪುರ ತಾಲೂಕಿನ ಪ್ರದೇಶದಲ್ಲಿ ಕ್ರಿ. ಶ. ೧೪೦೦ರ ಸುಮಾರಿನಲ್ಲಿ ಅಸ್ತಿತ್ವದಲ್ಲಿದ್ದ ಅರುಳಹಾಳ ರಾಜ್ಯ, ನಂತರದ ಕಾಲದಲ್ಲಿ ಪ್ರಸ್ತಾಪಿತವಾಗುವುದೇ ಇಲ್ಲ. ಮುಳಬಾಗಿಲು ರಾಜ್ಯ ಮತ್ತು ಹೊಯ್ಸಳ ರಾಜ್ಯಗಳು ವಿಜಯನಗರ ಸಾಮ್ರಾಜ್ಯದ ಪ್ರಾರಂಭ ಕಾಲದಿಂದ ತುಳುವ ವಂಶದ ಆಳಿಕೆಯ ಕಾಲದವರೆಗೂ ಹೆಚ್ಚು ಪ್ರಬಲ ಹಾಗೂ ಗಮನಾರ್ಹ ರಾಜ್ಯಗಳಾಗಿ ಈ ಪ್ರದೇಶದಲ್ಲಿನ ನಾಡು/ಸೀಮೆಗಳ ಮೇಲೆ ಅಧಿಕಾರವನ್ನು ಪಡೆದಿದ್ದವು. ಕ್ರಿ.ಶ. ೧೫೫೧ರ ಸುಮಾರಿನಲ್ಲಿ ಈ ಜಿಲ್ಲೆಯ ನೆಲಮಂಗಲ ತಾಲೂಕಿನ ಶಾಸನಗಳಲ್ಲಿ ಪೆನುಗೊಂಡೆ ರಾಜ್ಯದ ಪ್ರಸ್ತಾಪ ಕಂಡುಬರುತ್ತದೆ.

ಮುಳವಾಯಿ ಅಥವಾ ಮುಳುಬಾಗಿಲು ರಾಜ್ಯವು ಕೋಲಾರ ಜಿಲ್ಲೆಯ ಮುಳಬಾಗಿಲು, ಮಾಲೂರು, ಬೆಂಗಳೂರು ಜಿಲ್ಲೆಯ ಹೊಸಕೋಟೆ, ಬೆಂಗಳೂರು ದಕ್ಷಿಣ, ಆನೇಕಲ್ಲು ತಾಲೂಕುಗಳ ಪ್ರದೇಶಗಳ ಜೊತೆಗೆ ಇಂದಿನ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಅನೇಕ ಭಾಗಗಳು ಈ ರಾಜ್ಯದಲ್ಲಿ ಅಂತರಗತವಾಗಿದ್ದವು. ಬೆಂಗಳೂರು ಜಿಲ್ಲಾ ಪ್ರದೇಶದ ಮಟ್ಟಿಗೆ ಮುಳವಾಯಿ

ರಾಜ್ಯದಲ್ಲಿ ಬೇಹೂರುನಾಡು ಮತ್ತು ತುರ್ರೈವಳಿನಾಡು ಗಳು ಸೇರಿದ್ದುವೆಂಬ ಅಂಶ ಶಾಸನಗಳಲ್ಲಿ ಉಕ್ತವಾಗಿದೆ. ಬೆಂಗಳೂರು ಜಿಲ್ಲೆಯ ಸಾರಕ್ಕಿ, ಬೇಹೂರು (ಬೇಗೂರು), ಹುಸಕೂರು, ಬೇಲೂರು, ಬೆಟ್ಟದಹಳ್ಳಿ, ವೊಗಟ್ಟ(ವಾಗಟ) ಮುಂತಾದ ಗ್ರಾಮಗಳು ಶಾಸನೋಕ್ತ ವಾಗಿವೆ.


ಪೊಯಿಸಣನಾಡು ಅಥವಾ ಹೊಯಿಸಣ ನಾಡೆಂದು ಕರೆಯಲ್ಪಟ್ಟಿರುವ ಹೊಯ್ಸಳ ದೇಶದಲ್ಲಿ ಬೆಂಗಳೂರು ಜಿಲ್ಲೆಯ ಪಶ್ಚಿಮ ದಿಸೆಯ ಚನ್ನಪಟ್ಟಣ, ರಾಮನಗರ, ಮಾಗಡಿ ತಾಲೂಕಿನ ಭಾಗಗಳು ಸೇರಿದ್ದವು. ಚನ್ನಪಟ್ಟಣ ರಾಜ್ಯ ಹೊಯ್ಸಳ ದೇಶದ ಭಾಗವಾಗಿತ್ತು. ಒಟ್ಟಾರೆ, ವಿಜಯನಗರ ಕಾಲದ ಆಡಳಿತ ವಿಭಾಗಗಳಲ್ಲಿ ಹೊಯ್ಸಳ ರಾಜ್ಯವು ಬಹು ವಿಸ್ತಾರವಾಗಿದ್ದಿತು. ಅಂದರೆ ವಿಜಯನಗರದ ಸ್ಥಾಪನೆಗೆ ಮೊದಲು ಹೊಯ್ಸಳರ ಆಳ್ವಿಕೆಯಲ್ಲಿದ್ದ ಕರ್ನಾಟಕದ ಮತ್ತು ತಮಿಳುನಾಡಿನ ಹಲವು ಭಾಗಗಳು ಈ ದೇಶ/ರಾಜ್ಯದಲ್ಲಿ ಸಮಾವೇಶ ಗೊಂಡಿದ್ದವು.

ಇಂದಿನ ಬೆಂಗಳೂರು ಜಿಲ್ಲೆಯ ಕನಕಪುರ ತಾಲೂಕಿನ ಪ್ರದೇಶವು ಅರುಳಹಾಳ ರಾಜ್ಯದಲ್ಲಿ ಅಂತರಗತವಾಗಿದ್ದಿತು. ಈ ಭಾಗವನ್ನು ಕಾಚಣ ಒಡೆಯನೆಂಬುವನು ಆಳುತ್ತಿದ್ದ. ಅರುಳಹಾಳ ಪೂರಗೌಡನ ಮಗ ಅಲ್ಲ ಗವುಡನು ಸಿಗಲನಾಡ ಪ್ರಭುವಾಗಿದ್ದನು. ಸಿಗಲ ನಾಡನ್ನು ಶೀಗಲನಾಡು, ಸಿಂಗಲನಾಡು ಎಂದು ಶಾಸನ ಗಳಲ್ಲಿ ಕರೆಯಲಾಗಿದೆ. ಕನಕಪುರ ತಾಲೂಕಿನ ಗ್ರಾಮ ಗಳಾದ ಮಾರೇನಹಳ್ಳಿ(ಎಡಮಾರನಹಳ್ಳಿ), ಅರುಳಹಾಳ, ಮಾರಸಮುದ್ರ ಮುಂತಾದವು ಈ ರಾಜ್ಯದ ಗ್ರಾಮ ಗಳೆಂದು ಶಾಸನೋಕ್ತವಾಗಿವೆ.

ಚನ್ನಪಟ್ಟಣ ರಾಜ್ಯದಲ್ಲಿ ಕಿಳಲೆನಾಡು ಮತ್ತು ಹೊಂಮಳಿಗೆ ನಾಡುಗಳು ಅಂತರಗತವಾಗಿದ್ದವು. ಕೋಡಂಬಳ್ಳಿ, ನಿಟ್ಟೂರು, ಸರಗೂರು, ಹಲಸನಹಳ್ಳಿ, ಅಂಕನಹಳ್ಳಿ, ಯಲೆಯೂರು, ಕಟಿಗೆರೆ, ತಾರಾಂಕನ ಹಳ್ಳಿ, ಕೂಚಗೆರೆ, ಸಿಥಾಪುರ ಮುಂತಾದ ಊರುಗಳು ಈ ರಾಜ್ಯಕ್ಕೆ ಸೇರಿದ್ದವು.

ಪೆನುಗೊಂಡೆ ರಾಜ್ಯವನ್ನು ಉಲ್ಲೇಖಿಸುವ ಕ್ರಿ.ಶ. ೧೫೫೧ರ ಶಾಸನ ನೆಲಮಂಗಲ ತಾಲೂಕಿನ ಬೂದಿಹಾಳು ಗ್ರಾಮದಲ್ಲಿದ್ದು, ಮುರುಗುಳುನಾಡು ಮತ್ತು ಗೂಳೂರು ಸೀಮೆಗಳು ಈ ರಾಜ್ಯದ ಭಾಗಗಳೆಂದು ತಿಳಿದುಬರು ತ್ತದೆ. ಈ ರಾಜ್ಯವನ್ನು ವಿಜಯನಗರದ ಅರಸು ಇಮ್ಮಡಿ ದೇವರಾಯನು ತನ್ನ ಜ್ಯೇಷ್ಠ ಸೋದರನಿಗಾಗಿ ಸ್ಥಾಪಿಸಿದನೆಂಬ ಅಂಶ ಶ್ರೀಶೈಲಂ ತಾಮ್ರಶಾಸನದಲ್ಲಿ ಉಕ್ತವಾಗಿದೆಯೆಂದು ತಿಳಿದುಬರುತ್ತದೆ. ಇದೇ ನೆಲ ಮಂಗಲ ತಾಲೂಕಿನ ಬಿನ್ನಮಂಗಲ ಗ್ರಾಮದ ಶಾಸನ ದಲ್ಲೂ ಪೆನುಗೊಂಡೆ ರಾಜ್ಯದ ಪ್ರಸ್ತಾಪವಿದ್ದು, 'ಬಿಣ ಮಂಗಲ' ಗ್ರಾಮವು ಆ ರಾಜ್ಯದ ಗ್ರಾಮವೆಂದು ಗೊತ್ತಾಗುತ್ತದೆ. ಪೆನುಗೊಂಡೆ ರಾಜ್ಯದಲ್ಲಿ ತುಮಕೂರು ಜಿಲ್ಲೆಯ ತುಮಕೂರು, ಸಿರಾ ಮತ್ತು ಪಾವಗಡ ತಾಲೂಕುಗಳು, ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲೂಕು ಮತ್ತು ಆಂಧ್ರಪ್ರದೇಶದ ಪೆನುಗೊಂಡೆಯು ಸೇರಿದಂತೆ ಅನಂತಪುರ ಜಿಲ್ಲೆಯ ಭಾಗಗಳು ಅಂತರಗತ ವಾಗಿದ್ದವು. ತ್ಯಾಮಗೊಂಡ್ಲು, ಗಂಡನಹಳ್ಳಿ, ವಿಶ್ವ ನಾಥಪುರ, ಜಖನಹಳ್ಳಿ, ಹರಿವೇಸಂದ್ರ, ಕೋಡಿಹಳ್ಳಿ, ತಿಲ್ಲಗಟ್ಟ > ಶ್ರೀನಿವಾಸಪುರವೆಂಬ ನೃಸಿಂಹಪುರ ಗ್ರಾಮ, ಬಿಲನಕೋಟೆ, ಹೊಸಹಳ್ಳಿ (ದೇವರ ಹೊಸಹಳ್ಳಿ) ಮುಂತಾದ ಬೆಂಗಳೂರು ಜಿಲ್ಲೆಯ ಗ್ರಾಮಗಳು ಈ ರಾಜ್ಯದಲ್ಲಿ ಅಂತರಗತವಾಗಿದ್ದವು.

ಬೆಂಗಳೂರು ಜಿಲ್ಲೆಯ ಹೊಸಕೋಟೆ ಮತ್ತು ನೆಲಮಂಗಲ ತಾಲೂಕಿನ ಕೆಲವು ಶಾಸನಗಳಲ್ಲಿ ರಾಜ್ಯದ ನಂತರ, ಆದರೆ ನಾಡಿನ ಮೇಲಿನ ಸ್ತರದಲ್ಲಿ 'ಚಾವಡಿ' ಎಂಬ ಪದದ ಪ್ರಯೋಗ ಬಂದಿದೆ. ವಿಜಯನಗರ ಕಾಲದ ತಮಿಳು ಶಾಸನಗಳಲ್ಲಿ ಇದನ್ನು ನಾಡು ಅಥವಾ ಕುಟ್ರಂಗೆ ಸಮಾನಾರ್ಥದಲ್ಲಿ ಉಶಾವಡಿ/ಸಾವಡಿ(ಚಾವಡಿ) ಎಂದು ಬಳಸಿರುವ ಹಾಗೂ ಇದನ್ನು ಅನೇಕ ಪಟ್ರು ಗಳಾಗಿ ವಿಭಾಗಿಸಿದ್ದ ಬಗ್ಗೆ ಟಿ. ವಿ. ಮಹಾಲಿಂಗಂರವರು ತಮ್ಮ South Indian Polityಯಲ್ಲಿ ಹೇಳಿರುತ್ತಾರೆ. ವಿಜಯನಗರಪೂರ್ವದಲ್ಲಿ 'ನಾಡು' ಎಂಬುದು ಒಂದು ಪ್ರಾದೇಶಿಕ ವಿಭಾಗವಾಗಿರುವಂತೆಯೇ ಸ್ಥಳೀಯ ಮುಖಂಡರಿಂದ ಕೂಡಿದ ಒಂದು ಸಭೆ (ಗ್ರಾಮಕೂಟ) ಕೂಡ ಆಗಿದ್ದಿತು. ಆದರೆ ವಿಜಯನಗರ ಕಾಲದಲ್ಲಿ ನಾಡು ಎಂಬುದು ಸಭೆಯೆಂಬ ಅರ್ಥಕ್ಕಿಂತ ಒಂದು ಪ್ರಾದೇಶಿಕ ವಿಭಾಗ ಎಂಬ ಅರ್ಥದಲ್ಲಿ ಬಳಕೆಯಾಗತೊಡ ಗಿದಾಗ ಅದಕ್ಕೆ ಪರ್ಯಾಯವಾಗಿ ಸ್ಥಳೀಯ ಆಡಳಿತ



ವಿಜಯನಗರ ಸಾಮ್ರಾಜ್ಯದಲ್ಲಿದ್ದ ರಾಜ್ಯಗಳು

ಕೂಟ ಅಥವಾ ಸಭೆಯ ಸೂಚಕವಾಗಿ ಈ ಚಾವಡಿ ಎಂಬ ಪದವು ಬಳಕೆಗೆ ಬಂದಿತೆಂದು ಹೇಳಬಹುದು. ಮೈಸೂರು ಅರಸರ ಕಾಲದ ಶಾಸನಗಳಲ್ಲಿ ಚಾವಡಿ ಎಂಬುದು ಕೆಳಸ್ತರದಲ್ಲಿದ್ದ ಆಡಳಿತಕ್ಕೆ ಸಂಬಂಧಿಸಿದ ಪಂಚಾಯಿತಿ ಸಭೆ, ಕಟ್ಟೆ, ಕಛೇರಿ ಎಂದು ಪ್ರಯೋಗವಾಗಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ. (ಉದಾ. : ಶೂರಗಿರಿಚಾವಡಿ). ಕೋಳಾಲ ಚಾವಡಿಯು ಬೆಂಗಳೂರು ಜಿಲ್ಲೆಯ ವಿಜಯನಗರ ಕಾಲದ ಶಾಸನಗಳಲ್ಲೂ ಬೇಲೂರು ಚಾವಡಿಗಳು ಹೊಸಕೋಟೆ ತಾಲೂಕಿನ ಶಾಸನಗಳಲ್ಲೂ ಚೇಲೂರು (ಬೇಲೂರು ?) ಚಾವಡಿ ಎಂಬುದು ನೆಲಮಂಗಲ ತಾಲೂಕಿನ ಶಾಸನಗಳಲ್ಲೂ ರಾಜ್ಯದ ನಂತರ ಮತ್ತು ನಾಡಿನ ಮೇಲಿನ ಸ್ತರದಲ್ಲಿ ಪ್ರಯುಕ್ತವಾಗಿರುವ ಚಾವಡಿಗಳಾಗಿವೆ.

ವಿಜಯನಗರ ಕಾಲದ ಕರ್ನಾಟಕದ ಇತರ ಕಡೆಯ ಶಾಸನಗಳಲ್ಲಿ ಅಷ್ಟಾಗಿ ಕಂಡುಬರದ 'ಪಟ್ಟಡಿ' ಎಂಬ ಆಡಳಿತ ವಿಭಾಗಸೂಚಕ ಪದ ಬೆಂಗಳೂರು ಮತ್ತು ಕೋಲಾರ ಜಿಲ್ಲೆಯ ಶಾಸನಗಳಲ್ಲಿ ಪ್ರಯೋಗವಾಗಿರುವುದು ಗಮನಾರ್ಹ ಅಂಶವಾಗಿದೆ:

೧. "ಕೋಳಾಲ ಸೀಮೆಯೊಳಗಣ ಕೊತನೂರ ಪಟ್ಟಡೆ ಸ್ಥಳದ ಕೆಂದಟ್ಟು ಗ್ರಾಮ ೧" (ಎ.ಕ., ೧೭, ಕೋಲಾರ ೩೦೪, ಕೆಂದಟ್ಟಿ, ಕ್ರಿ. ಶ. ೧೫೬೫) ;

೨. "ಹೊಸಕೋಟೆ ಸೀಮೆಯ ಹುಲುರು ಪಟ್ಟಡಿಯ ಮುಗಬಾಳು ಎಂಬ ಗ್ರಾಮಕೆ ಪ್ರತಿನಾಮ ವೀರಭದ್ರಪುರ ಗ್ರಾಮ ೧" (ಎ. ಕ., ೯, ಹೊಸಕೋಟೆ ೯೪, ಮುಗುಬಾಳು, ಕ್ರಿ.ಶ. ೧೫೬೪) ;

೩. "ಹೊಳಲಿ ಪಟಿಡೆಯ ಹರಳಕುಂಟೆಗೆ ಪ್ರತಿನಿಧ್ಯವಾದಂಥ ಶಿವಕಾಂಚಿಪುರವೆಂಬ ಅಗ್ರಹಾರ" (ಎ.ಕ., ೧೦, ಕೋಲಾರ ೨೪೭, ಹರಳಕುಂಟೆ, ಕ್ರಿ.ಶ. ೧೬೩೭).

ಈ ಪ್ರಯೋಗಗಳನ್ನು ಗಮನಿಸಿದರೆ ಪಟ್ಟಡಿಯನ್ನು ಪಟ್ಟಡೆ, ಪಟ್ಟಿಡೆಯೆಂದು ಕರೆದಿರುವುದು ಕಂಡುಬರುತ್ತದೆ. ಇದು ನಾಡು ಅಥವಾ ಸೀಮೆಯ ಕೆಳಸ್ತರದಲ್ಲಿ ಅಂದರೆ ಸ್ಥಳದ ಸಮನಾಂತರದಲ್ಲಿ ಬಳಕೆಯಾಗಿದೆ.

'ಪಟ್ಟ' ಎಂಬ ಪದವು ಒಂದು ಸಣ್ಣ ಪ್ರಾದೇಶಿಕ ವಿಭಾಗ ಎಂಬ ಅರ್ಥದಲ್ಲಿ ಕೆಲವು ಪ್ರಾಚೀನ ಶಾಸನಗಳಲ್ಲಿ (ಎ. ಇಂ., ೩೩, ಪು. ೩೦೪) ಪ್ರಯೋಗವಾಗಿದೆ. ಪಟ್ಟಡಿ ಎಂಬುದು ಪಟ್ಟ+ವಾಡಿ ಎಂಬ ಪದಗಳಿಂದಾದ ಪಟ್ಟವಾಡಿ>ಪಟ್ಟಡಿ ಆಗಿರಬೇಕೆಂದು ತೋರುತ್ತದೆ. ವಾಡಿ ಎಂಬುದು 'ಬಾಡ'ದಿಂದ ನಿಷ್ಪನ್ನವಾದ ಗ್ರಾಮ ಸ್ಥಳ ಎಂಬ ಅರ್ಥವುಳ್ಳದ್ದೆಂಬುದು ತಿಳಿದ ವಿಷಯವೇ ಆಗಿದೆ.

ಕ್ರಿ.ಶ. ೧೧೪೮ರ ದೊಮ್ಮಲೂರಿನ ಶಾಸನದಲ್ಲಿ ಸೊಂಡೆಕೊಪ್ಪ ವೇಂಠೆಯ ಪ್ರಸ್ತಾಪ ಬಂದಿದೆ. ಇದು ರಾಜ್ಯದೊಳಗಣ ಅಂತರ್ಭಾಗ ; ಸೀಮೆ ಅಥವಾ ನಾಡುಗಳು ವೇಂಠೆಯದೊಳಗೆ ಅಂತರ್ಗತವಾಗಿರುತ್ತವೆ, 'ವೇಂಠೆ' ಮತ್ತು 'ವಳಿತ'ಗಳು ಅಭಿನ್ನವೆಂದು ಅಭಿಪ್ರಾಯ ವ್ಯಕ್ತಪಟ್ಟಿದೆ. ಆದರೆ ಬೆಂಗಳೂರು ಜಿಲ್ಲೆಯ ಶಾಸನಗಳಲ್ಲಿ ಪ್ರಯುಕ್ತವಾಗಿರುವ 'ವಳಿತ' ಪದವು ನಾಡು ಅಥವಾ ಸೀಮೆಯ ಕೆಳಸ್ತರದಲ್ಲಿ, ಅಂದರೆ ಸ್ಥಳಕ್ಕೆ ಸಮಾನ ಸ್ತರದಲ್ಲಿ ಪ್ರಯೋಗವಾಗಿದ್ದು, ಅವೆಲ್ಲವೂ ೧೬೮೬ರ ನಂತರ ಅವಧಿಗೆ ಸೇರಿದವಾಗಿವೆ.

ಇನ್ನು ಕೆಳಹಂತದ ಆಡಳಿತ ವಿಭಾಗಗಳಲ್ಲಿ ನಾಡು ಅಥವಾ ಸೀಮೆ, ಸ್ಥಳ ಮತ್ತು ಗ್ರಾಮಗಳು ಮುಖ್ಯವಾಗುತ್ತವೆ. ನಾಡು ಎಂಬುದು ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಬಳಕೆಯಲ್ಲಿದ್ದ ಪದವೆಂತಲೂ ಸೀಮೆ ಎಂಬುದು ತೆಲುಗು ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತವಿದ್ದ ಸಮಾನ ಸ್ತರದ ಪ್ರಾದೇಶಿಕ ವಿಭಾಗಗಳೆಂತಲೂ ವಿದ್ವಾಂಸರು ಅಭಿಪ್ರಾಯ ಪಟ್ಟಿರುತ್ತಾರೆ. ಆದರೂ ಕೆಲವು ಕಡೆ ಸೀಮೆ ಎಂಬುದು ನಾಡಿನ ಒಂದು ಉಪಭಾಗವಾಗಿ ಕ್ವಚಿತ್ತಾಗಿ ಪ್ರಯೋಗಗೊಂಡಿರುವುದುಂಟು.

ಬೆಂಗಳೂರು ಜಿಲ್ಲೆಯಲ್ಲಿನ ಕ್ರಿ. ಶ. ೧೪೦೦ಕ್ಕಿಂತಲೂ ಹಿಂದಿನ ಪ್ರಯೋಗಗಳೆಲ್ಲ 'ನಾಡು' ಎಂಬ ಪ್ರತ್ಯಯವನ್ನೇ ಪಡೆದಿರುವುದು ಕಂಡುಬರುತ್ತದೆ. ಅವುಗಳಲ್ಲಿ ಬಹಳಷ್ಟು ಗಂಗ, ಚೋಳ ಮತ್ತು ಹೊಯ್ಸಳರ ಕಾಲದಲ್ಲೇ ಪ್ರಚಲಿತವಿದ್ದ ನಾಡುಗಳಾಗಿರುತ್ತವೆ.

ಉದಾಹರಣೆಗೆ, ಎಲಹಂಕನಾಡು, ಕಿಳಲೈನಾಡು, ಕುಕ್ಕಲನಾಡು, ಕೈವಾರನಾಡು, ಪುಲ್ಲಿಯೂರುನಾಡು, ತುರೈವಳಿನಾಡು, ವೆಪ್ಪೂರುನಾಡು. ಮೊರಸುನಾಡು, ಸೀಗಲನಾಡು, ಹೊಂಮ್ಮಳಿಗೆನಾಡು, ಸಣ್ಣೆನಾಡು, ನಲ್ಲೂರುನಾಡು, ಹುಲುಕಡಿನಾಡು ಮುಂತಾದವು. ಆದರೆ ಕ್ರಿ.ಶ. ೧೪೦೦ರ ನಂತರದ ಶಾಸನಗಳಲ್ಲಿ ಬಹು ಮಟ್ಟಿಗೆ ವಿಜಯನಗರದ ಕಾಲದಲ್ಲೇ ಹೊಸದಾಗಿ ಸೇರ್ಪಡೆಯಾದ ಹೊಸ ನಾಡುಗಳೆಲ್ಲವೂ 'ಸೀಮೆ' ಎಂಬ ಪ್ರತ್ಯಯವನ್ನು ಮಾತ್ರ ಪಡೆದಿರುವುದು ಕಂಡು ಬರುತ್ತದೆ. ಉದಾಹರಣೆಗೆ, ಸೋಲೂರು ಸೀಮೆ, ಹಣಬೆಯ ಸೀಮೆ, ಕೋಡಂಬಳ್ಳಿ ಸೀಮೆ, ಚಂನಪಟ್ಟಣ ಸೀಮೆ, ನೆಲಮಂಗಲ ಸೀಮೆ, ಹೆಜಾಜಿ ಸೀಮೆ, ಹೊಸ ಕೋಟೆ ಸೀಮೆ, ತಿಪ್ಪೂರು ಸೀಮೆ, ಗೂಳೂರು ಸೀಮೆ, ಚುಳ್ಳಕನ ಸೀಮೆ, ನೆಲವಾಗಿಲ ಸೀಮೆ ಮುಂತಾದವು. ಆದ್ದರಿಂದ ಸೀಮೆ ಎಂಬುದು ತೆಲುಗು ಪ್ರದೇಶಗಳಲ್ಲಿ ಹೆಚ್ಚು ಪ್ರಚಲಿತವಿದ್ದ ಪ್ರಾದೇಶಿಕ ವಿಭಾಗ ಎಂಬ ವಿದ್ವಾಂಸರ ಅಭಿಪ್ರಾಯ ತಪ್ಪಾಗುತ್ತದೆ. ಆದರೆ ಅದು ವಿಜಯನಗರ ಆಳಿಕೆಯಲ್ಲಿ, ಒಂದು ಆಡಳಿತ ವಿಭಾಗ ಎಂಬ ಸ್ಪಷ್ಟ ಅರ್ಥದಲ್ಲಿ, ಸೇರ್ಪಡೆಯಾದ ಹೊಸ ಪದವಾಗಿದೆ.*

ಸೀಮೆ ಎಂಬುದು ಸಂಸ್ಕೃತದ 'ಸೀಮಾ' ಪದವೇ ಆಗಿದ್ದು ವಿಜಯನಗರ ಕಾಲದಲ್ಲಿ ಒಂದು ಆಡಳಿತ ವಿಭಾಗ ಎಂಬರ್ಥದಲ್ಲಿ ಪ್ರಯೋಗವಾಗಿದೆ. ಆದರೆ ಕ್ರಿ. ಶ. ೧೪೦೦ಕ್ಕಿಂತ ಹಿಂದಿನ ಕನ್ನಡ ಶಾಸನಗಳಲ್ಲಿ ಸೀಮೆ ಎಂಬುದು ಎಲ್ಲೆ (boundary) ಎಂಬ ಅರ್ಥ ದಲ್ಲೇ ಪ್ರಯೋಗವಾಗಿರುವುದು ಗಮನಾರ್ಹ ಸಂಗತಿ.

ನಾಡು ಅಥವಾ ಸೀಮೆಯ ಕೆಳಸ್ತರದಲ್ಲಿ ಸ್ಥಳ ಮತ್ತು ಗ್ರಾಮಗಳು ಬರುತ್ತವೆ. ಅನೇಕ ಗ್ರಾಮಗಳ ಸಮೂಹವೇ 'ಸ್ಥಳ'. 'ಅಷ್ಟಗ್ರಾಮ ಸೀಮೆ' ಎಂಬುದು ಸ್ಥಳದ ಪರಿಮಿತಿಗೆ ಸಂಬಂಧಪಟ್ಟಿರಬಹುದು. ಸ್ಥಳಕ್ಕೆ ಪರ್ಯಾಯವಾಗಿ 'ಸಂಮತು' ಎಂಬ ಪ್ರಯೋಗವು ಉಂಟು. ವಿಜಯನಗರ ಅರಸರ ಕಾಲದಲ್ಲಿ ವಿಶೇಷ ವಾಗಿ ಬಳಕೆಯಾಗಿರುವ ಈ ಪ್ರದೇಶವಾಚಕ ಪದವು ಬಹುಮಟ್ಟಿಗೆ ಇಂದಿನ 'Firka'ದೊಂದಿಗೆ ಹೊಂದು ತ್ತದೆ. ಬೆಂಗಳೂರು ಜಿಲ್ಲೆಯಲ್ಲಿನ ವಿಜಯನಗರ ಕಾಲ ದಲ್ಲಿ ಪ್ರಯುಕ್ತವಾಗಿರುವ ಸ್ಥಳಗಳಲ್ಲಿ ಅಂಣಿಗನಹಳ್ಳಿ ಸ್ಥಳ, ಅತ್ತಿಬೆಲೆ ಸ್ಥಳ, ಕಲೆಯದ ಸ್ಥಳ, ಕಾಕೋಳಲ ಸ್ಥಳ, ಕೂಡಲೂರ ಸ್ಥಳ, ಚಪಗಾಳಿ ಸ್ಥಳ, ಸಿವ ಮುಂದೂರ ಸ್ಥಳ, ನಿಜಗಲು ಸ್ಥಳ, ನಂಜಿಗುಳಿ ಸ್ಥಳ, ಬಾಣವಾಡಿ ಸ್ಥಳ, ಸುಣಬರೆಯ ಸ್ಥಳ, ಹಲಸೂರು ಸ್ಥಳ. ಹೊಂಗನೂರು ಸ್ಥಳ ಮುಂತಾದವು ಶಾಸನೋಕ್ತ ವಾಗಿವೆ. (ಈ ಸ್ಥಳಗಳಲ್ಲಿ ಅಂತರಗತವಾಗಿದ್ದ ಶಾಸ ನೋಕ್ತ ಗ್ರಾಮಗಳನ್ನು ಅನುಬಂಧದಲ್ಲಿ ಸೂಚಿಸ ಲಾಗಿದೆ).**

ಒಟ್ಟಾರೆ, ವಿಜಯನಗರ ಸಾಮ್ರಾಜ್ಯದ ಆಡಳಿತ ವಿಭಾಗಗಳಿಗೆ ಸಂಬಂಧಿಸಿದ ಈ ಪರಿಶೀಲನೆಯಿಂದ ತಿಳಿದುಬರುವ ಮುಖ್ಯವಾದ ಅಂಶಗಳನ್ನು ಈ ಕೆಳ ಕಂಡಂತೆ ಪಟ್ಟಿ ಮಾಡಬಹುದು :

೧. ವಿಜಯನಗರ ಅರಸರು ತಮ್ಮ ವಿಶಾಲ ವಾದ ಸಾಮ್ರಾಜ್ಯದಲ್ಲಿ ಏಕರೂಪವಾದ ಆಡಳಿತ ವಿಭಾಗಗಳನ್ನು ಜಾರಿಗೊಳಿಸಲು ಸತತ ಪ್ರಯತ್ನವನ್ನು ಮಾಡಿದ್ದರು.

---

* ಕ್ರಿ.ಶ. ೧೫೬೫ರ ನಂತರ ಅಂದರೆ ಅರವೀಡು ವಂಶದ ಆಡಳಿತದ ಅವಧಿಯಲ್ಲಿ ಉಲ್ಲೇಖಿಗೊಂಡಿರುವ ಈ ಸ್ತರದ ಆಡಳಿತ ವಿಭಾಗಗಳೆಂದರೆ ಆವತಿನಾಡು, ಬಳಾಲಪುರದ ಸೀಮೆ, ಬಿಲಗೊಂಡನಹಳ್ಳಿ ಸೀಮೆ ಮತ್ತು ಮಾಗಡಿ ಸೀಮೆಗಳು ಮಾತ್ರ. ಇವು ಈ ಅವಧಿಯಲ್ಲಿ ಹೆಚ್ಚು ಪ್ರಬಲರಾಗಿದ್ದ ಸ್ಥಳೀಯ ಪಾಳೆಯಗಾರರ ಮುಖ್ಯ (ಕೇಂದ್ರ) ಸ್ಥಳಗಳು ಕೂಡ ಆಗಿದ್ದ ವೆಂಬುದನ್ನು ಗಮನಿಸಬೇಕಾದ ಅಂಶವಾಗಿದೆ.

** ಕ್ರಿ. ಶ. ೧೬೮೦ರ ನಂತರದ ಅವಧಿಯ ಆಡಳಿತ ವಿಭಾಗಗಳ ಅಧ್ಯಯನ ಬಹಳ ವಿಶಿಷ್ಟವಾದುದು. ಏಕೆಂದರೆ ಮರಾಠ, ಮೊಗಲ್ ಮತ್ತು ಬ್ರಿಟಿಷರ ಆಳ್ವಿಕೆಯ ಸ್ಪಷ್ಟ ಹೆಜ್ಜೆಗಳನ್ನು ಅವು ಒತ್ತಿರುತ್ತವೆ. ಸರ್ಕಾರ, ಹೋಬಳಿ, ತರಫ್, ಕಸಬೆ, ತಾಲೂಕ್, ಸಮ್ಮತು ಮುಂತಾದವು ಈ ಅವಧಿಯಲ್ಲಿ ಬಳಕೆಗೆ ಬಂದ ಪದಗಳಾಗಿದ್ದು ಇವುಗಳಲ್ಲಿ ಬಹಳಷ್ಟನ್ನು ನಾವು ಇಂದಿಗೂ ಬಳಸುತ್ತಿರುವುದು ಸರಿಯಷ್ಟೆ.

೨. ಅವರ ಈ ಪ್ರಯತ್ನ ಮೇಲಿನ ಮತ್ತು ಕೆಳಗಿನ ಸ್ತರದ ಆಡಳಿತ ವಿಭಾಗಗಳ ವಿಷಯದಲ್ಲಿ ಮಾತ್ರ ಯಶಸ್ಸನ್ನು ತಂದಿದ್ದಿತು.

೩. ಮಧ್ಯಸ್ತರದ ಆಡಳಿತ ವಿಭಾಗಗಳು ಹಿಂದಿನಂತೆಯೇ ವೈವಿಧ್ಯಮಯವಾಗಿಯೇ ಉಳಿದುಕೊಂಡಿದ್ದವು.

೪. ಇವರು ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಭಾಗಗಳಲ್ಲಿ ಹಿಂದೆ ಇದ್ದ ನಾಡು ಎಂಬ ಪ್ರದೇಶವಾಚಕಕ್ಕೆ ಪರ್ಯಾಯವಾಗಿ ಮತ್ತು ಪೂರಕವಾಗಿ 'ಸೀಮೆ' ಎಂಬ ಪದವನ್ನು ಹೆಚ್ಚು ಬಳಕೆಗೆ ತಂದರು.

೫. ಕೆಳಸ್ತರದ 'ಸ್ಥಳ' ಎಂಬ ಆಡಳಿತ ಉಪವಿಭಾಗವನ್ನು ಇವರು ಹೆಚ್ಚು ವ್ಯಾಪಕವಾಗಿ ಮತ್ತು ನಿರ್ದಿಷ್ಟವಾಗಿ ಬಳಸಿದರು.

ಅನುಬಂಧ

	ಮೇಲ್‌ಸ್ತರದ ಆಡಳಿತ ವಿಭಾಗಗಳು ದೇಶ/ರಾಜ್ಯ/ನಾಡು/ಸೀಮೆ/ವಳಿತ, ವೇಂಠೆ ಇತ್ಯಾದಿ	ಕೆಳಸ್ತರದ ಆಡಳಿತ ವಿಭಾಗಗಳು ಸ್ಥಳ	ಅಂತರಗತ ಗ್ರಾಮಗಳು	ಆಕರ
	೧	೨	೩	೪
೧.		ಕಲೆಯದ ಸ್ಥಳ	ಕಲೆಯ (ಕಲ್ಕ)	ಎಪಿಗ್ರಾಫಿಯ ಕರ್ನಾಟಿಕ, ಸಂಪುಟ ೯ ಮಾಗಡಿ ೧೭ ಕಲ್ಕ (೧೩೬೨) ಮಾಗಡಿ ೨೭ ಕಲ್ಕ (೧೬೪೯?)
೨.	ಹೊಮ್ಮಳಿಗೆ ನಾಡು	ಸುಣಬರೆಯ ಸ್ಥಳ	ಸುಣಬರೆ (ಸಣವಾರ?)	ಅದೇ, ಆನೇಕಲ್ ೮೨ ಬನ್ನೇರುಘಟ್ಟ (೧೩೬೩)
೩.		ಹಲಸೂರು ಸ್ಥಳ	ಇಲಿತೊರೆ, ಮಾದಿಗೊಂಡನಹಳ್ಳಿ, ಸಾದುಹಳ್ಳಿ	ಅದೇ, ದೇವನಹಳ್ಳಿ ೮೧ ಜೋಡಿಸಾದರಹಳ್ಳಿ (೧೪೨೫)
೪.	ಹುಲುಕಡಿನಾಡು	ತಿಪ್ಪೂರಸ್ಥಳ	ಹೆಜ್ಜಾಜಿ, ವರದೋಹಳ್ಳಿ ಬಯಿರಾಪುರ	ಅದೇ, ದೊಡ್ಡಬಳ್ಳಾಪುರ ೪೨ ಪುಟ್ಟೈನ ಅಗ್ರಹಾರ (೧೪೯೩)
೫.	ಕುಕ್ಕಲನಾಡು	ಕನೆಲ್ಲಿಯ ಸ್ಥಳ	ಕೆಂಪಬಸವಯ್ಯನ ಹಳ್ಳಿ ಕಾಚುಹಳ್ಳಿ, ಹಾರೋಹಳ್ಳಿ ಬಸಹಳ್ಳಿ > ಗಂಗಾಧರಪುರ ಪ್ರಾಕುಗೊಂಗಡಿಹಳ್ಳಿ > ತಿಮ್ಮಣರಾಜಪುರ	ಅದೇ, ಬೆಂಗಳೂರು ೧೨೩ ಗೊಂಗಡಿಪುರ (೧೪೯೩)
೬.	ಪೊಯಿಸಣನಾಡು ಚೆನ್ನಪಟ್ಟಣ (ರಾಜ್ಯ) ಕೋಡಂಬಳ್ಳಿ ಸೀಮೆ	ನಿಟ್ಟೂರಭಟ್ಟವೃತ್ತಿಯ ಸ್ಥಳ	ಎಳಸಿಗೆ ಗ್ರಾಮ, ಕೋಡಂಬಳ್ಳಿ	ಅದೇ, ಚನ್ನಪಟ್ಟಣ ೫೨ ಕೋಡಂಬಳ್ಳಿ (೧೪೯೯)
೭.		ಶಿವಮುಂದೂರ ಸ್ಥಳ	(ಹನ್ನೆರಡುಹಳ್ಳಿ ವೊಳಗಾದ)	ಅದೇ, ಹೊಸಕೋಟೆ ೧೨೧ ಜೋತಿಪುರ (೧೫೦೭)
೮.		ಕೂಡಲೂರ ಸ್ಥಳ	ಹೊಸಹಳ್ಳಿ, ಮೊಗೆಹಳ್ಳಿ ಕೂಡಲೂರು	ಅದೇ, ಚೆನ್ನಪಟ್ಟಣ ೧೫೬ ಹೊಟ್ಟೇನ ಹೊಸಹಳ್ಳಿ (೧೫೧೩)

೧		೨	೩	೪
೯.	ಅರುಳಹಾಳರಾಜ್ಯ ಸಿಗಲನಾಡು ವಂಕೊಡಲಸೀಮೆ	ಅಣಿಗನಹಳ್ಳಿ ಸ್ಥಳ	ನಲ್ಲಹಳ್ಳಿ	ಅದೇ, ಕನಕಪುರ ೩೧ ನಲ್ಲಹಳ್ಳಿ (೧೫೩೦)
೧೦.	ಬೇಲೂರು ಚಾವಡಿ ಎಲಹಂಕ ನಾಡು ಶಿವನಸಮುದ್ರ ಸೀಮೆ	ಕಾಕೋಳಲ ಸ್ಥಳ	ಕಾಕೋಳಲ	ಅದೇ, ನೆಲಮಂಗಲ ೩೧ ಹೆಸರುಘಟ್ಟ (೧೫೩೫)
೧೧.	ಸೊಂಡೇಕೊಪ್ಪ ವೇಂಠೆ	ಸೊಂಡೆಕೊಪ್ಪ ಸ್ಥಳ	ಹಾರೋ ಕೇತನಹಳ್ಳಿ	ಅದೇ, ನೆಲಮಂಗಲ ೧೦ ಹಾರೋಕ್ಯಾತನಹಳ್ಳಿ (೧೫೩೩)
೧೨.		ಬಾಣವಾಡಿ ಸ್ಥಳ	ರಾಮಾಪುರ	ಅದೇ, ಮಾಗಡಿ ೭೪ ಬಾಣವಾಡಿ (೧೫೪೭)
೧೩.		ನಂಜಿಗುಂಳಿಯ ಸ್ಥಳ	....ಏಟ್ಟಸಂದ್ರ	ಅದೇ, ಹೊಸಕೋಟೆ ೨ ನಂದಗುಂಡಿ (೧೫೫೯)
೧೪.		ಚಪಗಾಳಿ ಸ್ಥಳ	ಚನ್ನಸಮುದ್ರ	ಅದೇ, ಕನಕಪುರ ೩೨ ಚಂನಸಂದ್ರದೊಡ್ಡಿ (೧೫೬೩)
೧೫.	ಬೇಲೂರು ಚಾವಡಿ ಎರ್ನನಾಡು ನೆಲವಾಗಿಲ ಸೀಮೆ	ನೆಲವಾಗಿಲ ಸ್ಥಳ	ಅನುಪುಹಳ್ಳಿ	ಅದೇ, ಹೊಸಕೋಟೆ ೭೩ ಅನುಪುಹಳ್ಳಿ (೧೬೨೦)
೧೬.	....ಕಾನಲೂರ ವಳಿತ?	ರಾಮುರಹಳ್ಳಿಯ ಸ್ಥಳ	ಖನಮಂಗಲ	ಅದೇ, ಆನೇಕಲ್ ೮೧ ಬನ್ನೇರುಘಟ್ಟ
೧೭.		ಕಬ್ಬಹಳ್ಳಿ ಸ್ಥಳ	(ಗುಂಮಳಾಪುರದ ಸಿಂಹಾಸನ)	ಅದೇ, ಕನಕಪುರ ೧೨೩ ದೊಡ್ಡ ಕಬ್ಬಹಳ್ಳಿ (೧೭೨೬)
೧೮.	ನೆಲವಂಗಲದ ಸೀಮೆ	ನೆಲಮಂಗಲ ಸ್ಥಳ	ಸೊಂಡೆಕೊಪ್ಪ, ದಾಬ ನಾಯಕನಹಳ್ಳಿ ಮಟ್ಟನ ಕುರುಂಚಿಹಳ್ಳಿ	ಅದೇ, ನೆಲಮಂಗಲ ೮ ಸೊಂಡೇಕೊಪ್ಪ (೧೭೬೩)
೧೯.		ಬೆಂಗಳೂರು ಸ್ಥಳ	ಬಿಂಗೀಪುರ (ಜಿಗಣಿ ಹೋಬಳಿ)	ಅದೇ, ಆನೇಕಲ್ ೯೦ ಬಿಂಗಿಪುರ (೧೭೬೦)

ಗ್ರಂಥಋಣ

1. *Epigraphia Carnatica*, Vol. IX
2. *Epigraphia Indica*, Vol. XXXIII
3. D.C. Sircar : *Indian Epigraphy*
4. T. V. Mahalingam : *South Indian Polity*
5. ಎ. ವಿ. ವೆಂಕಟರತ್ನಂ : ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ
6. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡನಿಘಂಟು

ಎಸ್. ಕೆ. ಕೊಪ್ಪಾ

ಅಗ್ರಹಾರ-ಭತ್ತಗ್ರಾಮ : ಒಂದು ಟಿಪ್ಪಣಿ

ಮಧ್ಯಕಾಲೀನ ಕರ್ನಾಟಕ ಇತಿಹಾಸದಲ್ಲಿ ಪ್ರತಿಷ್ಠಿತವಾದ ಅಗ್ರಹಾರಗಳು ಸಮಾಜ ವ್ಯವಸ್ಥೆ ಮತ್ತು ಅರ್ಥವ್ಯವಸ್ಥೆಗಳ ಮೇಲೆ ಗಮನಾರ್ಹವಾದ ಪರಿಣಾಮ ಬೀರಿವೆ. ಧರ್ಮ–ಕಲೆ–ಸಾಹಿತ್ಯಗಳಲ್ಲಿ ಪಾರಂಗತರಾದ ವಿದ್ವಾಂಸರಿಗೆ ಗ್ರಾಮವನ್ನು ದಾನವಾಗಿ ಕೊಡುವ ಒಂದು ಪರಂಪರೆ ನಮ್ಮಲ್ಲಿ ಬೆಳೆದಿದೆ. ಬ್ರಾಹ್ಮಣರಿಗೆ ಗ್ರಾಮವನ್ನು ದಾನಕೊಡುವ ಮೂಲಕ ಪುಣ್ಯಸಂಪಾದಿಸುವ ಒಂದು ಸ್ಥಳವನ್ನು ದಾಳಿ, ತೆರಿಗೆ ಇತ್ಯಾದಿ ಹಿಂಸೆಗಳಿಲ್ಲದೆ ನೆಲೆಗೊಳಿಸುವ ಇನ್ನೊಂದು ಪರಂಪರೆ ನಮ್ಮಲ್ಲಿ ಬೆಳೆದುಬಂದಿದೆ. ಈ ಇನ್ನೊಂದು ಪರಂಪರೆಯ ಗ್ರಾಮಗಳಿಗೆ ಅಗ್ರಹಾರ ಎನ್ನುತ್ತಿದ್ದರೆಂದು ಈವರೆಗೆ ಭಾವಿಸಲಾಗಿದೆ. ಇದೇ ರೀತಿ ಶಾಸನದಲ್ಲಿ ಬಳಕೆಯಾದ ಇನ್ನೊಂದು ಪದ ಭತ್ತಗ್ರಾಮ.

ಜೈನನಾದ ಕವಿ ಪಂಪನಿಗೆ ಬೋಧನ ಚಾಲುಕ್ಯ ಇಮ್ಮಡಿ ಅರಿಕೇಸರಿ ಅಗ್ರಹಾರ ಧರ್ಮಪುರವನ್ನು ಬಿಟ್ಟುಕೊಟ್ಟುದಾಗಿ ಪಂಪಭಾರತ[1] ಮತ್ತು ಕುರಿಕ್ಯಾಲ ಶಾಸನ[2] ಹೇಳುತ್ತವೆ. ಕವಿ ರನ್ನ ತನ್ನ ಅಜಿತತೀರ್ಥಂಕರಪುರಾಣದಲ್ಲಿ ಕಲ್ಯಾಣಚಾಲುಕ್ಯ ಚಕ್ರವರ್ತಿ ತೈಲಪನಿಂದ 'ಭತ್ತಗಾವೆ' ಪಡೆದುದಾಗಿ ಹೇಳಿಕೊಂಡಿದ್ದಾನೆ.[3] ಈ ಎರಡೂ ಸಂಗತಿಯನ್ನು ಕುರಿತು ಪ್ರಥಮ ಬಾರಿ ಚರ್ಚೆಗೆ ಎತ್ತಿಕೊಂಡ ಡಾ॥ ಎಂ. ಎಂ. ಕಲಬುರ್ಗಿಯವರು ಭತ್ತಗಾವೆ ಎನ್ನುವುದು ಅಗ್ರಹಾರದಂಥ ಪಾರಿಭಾಷಿಕ ಪದ ಎಂದಿದ್ದಾರೆ.[4] ಇನ್ನೂ ಮುಂದುವರೆದ ಅವರು, ಬ್ರಾಹ್ಮಣರ ಉಪಭೋಗಕ್ಕೆ ಕೊಟ್ಟ ಗ್ರಾಮ 'ಅಗ್ರಹಾರ', ಕುಲಭೇದವಿಲ್ಲದೆ ಯಾರೊಬ್ಬರ ಉಪಭೋಗಕ್ಕೆ ಕೊಟ್ಟ ಗ್ರಾಮ 'ಭತ್ತಗಾವೆ' ಎನ್ನುತ್ತಾರೆ.

ಶಾಸನಗಳಲ್ಲಿನ 'ಭತ್ತಗ್ರಾಮ' ಉಲ್ಲೇಖಗಳನ್ನು ಗಮನಿಸಿದ ಡಾ॥ ಪಿ.ಬಿ. ದೇಸಾಯಿ ಅವರು, ಸಂಸ್ಕೃತದ 'ಭಜ್'(to obtain as one's share enjoy, to allot) ಧಾತುವಿನ ಭೂತನ್ಯೂನ ರೂಪವಾದ 'ಭಕ್ತ' ಎಂಬುದು ಮುಂದೆ 'ಭತ್ತ' ಎಂದಾಗುತ್ತಿದ್ದು, ಭತ್ತಗ್ರಾಮವೆಂದರೆ ಸ್ವಂತ ಉಪಭೋಗಕ್ಕೆ ಪಡೆದ ಗ್ರಾಮ.

---

1 ಕೆ. ವಿ. ಪುಟ್ಟಪ್ಪ (ಪ್ರ. ಸಂ.) : ಪಂಪಭಾರತಂ, ಭಾಗ ೨, ಅ. ೧೪, ಪು. ೫೬-೫೭

2 ಆರ್. ಸಿ. ಹಿರೇಮಠ, ಎಂ. ಎಂ. ಕಲಬುರ್ಗಿ (ಸಂ.) : ಶಾಸನಸಂಪದ, ಪು. ೨೨

3 ಮದನಾವತಾರಮಂ ಕನ
ಕದಂಡ ಚಾಮರಮನುನ್ನದೇಭಮನುತ್ತುಂ
ಗದ ಭತ್ತಗಾವೆಯುಂ ಪಡೆ
ದುದಾತ್ತ ಕವಿತಿಲಕನೆನಿಸಿದಂ ಕವಿರತ್ನಂ ॥
-ಎಚ್. ದೇವೀರಪ್ಪ, ದೇ. ಜವರೇಗೌಡ (ಸಂ.) : ಅಜಿತತೀರ್ಥಂಕರಪುರಾಣತಿಲಕಂ, ಆ.೧೨, ಪು. ೫೧

4 'ಪಂಪನ ಅಗ್ರಹಾರ – ರನ್ನನ ಭತ್ತಗಾವೆ', ಶಾಸನವ್ಯಾಸಂಗ ೨, ಪು. ೪೪

ಅಂದರೆ ಈಗಿನ ಅರ್ಥದಲ್ಲಿ ಇನಾಮು ಅಥವಾ ಜಹಗೀರು ಗ್ರಾಮ ಎಂದಿದ್ದಾರೆ.[5] ಈ ಶಾಸನೋಕ್ತ ಭತ್ತಗ್ರಾಮ ಮತ್ತು ರನ್ನನ ಅಜಿತತೀರ್ಥಂಕರಪುರಾಣೋಕ್ತ ಭತ್ತ ಗಾವೆ ಸಮಾನಾರ್ಥಕ ಪದಗಳೆಂಬುದನ್ನು ಡಾ॥ ಕಲಬುರ್ಗಿಯವರು ಸರಿಯಾಗಿ ಗುರುತಿಸಿದ್ದಾರೆ.[6]

ಆದರೆ ಉತ್ತರಕರ್ನಾಟಕಕ್ಕೆ ಮಾತ್ರ ವಿಶಿಷ್ಟವೆನ್ನುವಂತೆ ಇಲ್ಲಿಯ ಶಾಸನಗಳಲ್ಲಿ ವಿಶೇಷವಾಗಿ ಬಳಕೆಗೊಂಡಿರುವ ಭತ್ತಗ್ರಾಮದ ಉಲ್ಲೇಖಗಳನ್ನು ಗಮನಿಸಿದರೆ, ಅದು ಅಗ್ರಹಾರದ ಪರ್ಯಾಯ ನಾಮವಾಗಿ ಕಾಣಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಕಲ್ಯಾಣಚಾಲುಕ್ಯ ಮೂರನೆಯ ಸೋಮೇಶ್ವರನ ಕಾಲದ ನರಗುಂದ ಶಾಸನವು ಬೆಳ್ವಲದ "ಭತ್ತಗಾವೆ ಪದಿನೆಂಟರೊಳಂ ಪರಿಪೂರ್ಣ್ಣ ಲಕ್ಷ್ಮಿಯಂ ಧರಿಸಿದಗ್ರಹಾರಮೆಸೆಗುಂ ನರಗುಂದ"[7] ಎಂದರೆ, ಕಲ್ಯಾಣಚಾಲುಕ್ಯ ಇಮ್ಮಡಿ ಜಗದೇಕಮಲ್ಲನ ಕಾಲದಲ್ಲಿ ಹುಟ್ಟಿದ ಇದೇ ಗ್ರಾಮದ ಮತ್ತೊಂದು ಶಾಸನವು "ಬಿತ್ತರದಿಂದ ಬೆಳ್ವಲ ನಾಡೊಳೊಪ್ಪಂಬಡೆದು ಪದಿನೆಂಟಗ್ರಹಾರಂ ತದಭ್ಯಂತರದೊಳ್ ಲಕ್ಷ್ಮೀವಿಹಾರಂ ನೆಗರ್ದ್ದುದು ನರುಗುನ್ದಾಭಿದಾನಾಗ್ರಹಾರಂ"[8] ಎಂದಿದೆ. ಇಲ್ಲಿ ಒಂದು ಶಾಸನವು ಹದಿನೆಂಟು ಭತ್ತಗ್ರಾಮಗಳೆಂದು ಕರೆದುದನ್ನೇ ಇನ್ನೊಂದು ಶಾಸನವು ಹದಿನೆಂಟು ಅಗ್ರಹಾರಗಳೆಂದು ಕರೆದಿದೆ. ಇದಕ್ಕೆ ಪೂರಕವಾಗಿ ತರ್ದವಾಡಿನಾಡಿನ ಕನ್ನೊಳ್ಳಿ ಗ್ರಾಮವನ್ನು ಅಲ್ಲಿನ ಶಾಸನಗಳು ಭತ್ತಗ್ರಾಮಂ ಕಂನ್ನವಳ್ಳಿ,[9] ಅಗ್ರಹಾರಂ ಕರ್ಣವಳ್ಳಿ[10] ಎಂದು ಕರೆದಿರುವುದನ್ನೂ ಅದೇ ನಾಡಿನ ಹೊನವಾಡ ಗ್ರಾಮವನ್ನು ಭತ್ತಗ್ರಾಮ ಹೊಂನವಾಡಿ[11] ಅಗ್ರಹಾರ, ಪೊನ್ನವಾಡ[12] ಎಂದಿರುವುದನ್ನೂ ಗಮನಿಸಬಹುದು. ಹಾಗಾದರೆ ಭತ್ತಗ್ರಾಮವನ್ನು ಕುರಿತು ಡಾ॥ ಕಲಬುರ್ಗಿಯವರು ಹೇಳುವ "ಕುಲಭೇದವಿಲ್ಲದೆ ಯಾರೊಬ್ಬರ ಉಪಭೋಗಕ್ಕೆ ಕೊಟ್ಟ ಗ್ರಾಮ" ಎಂಬ ಮಾತು ಮತ್ತು ಡಾ॥ದೇಸಾಯಿಯವರು ಹೇಳುವ "ವ್ಯಕ್ತಿಯೊಬ್ಬ ಸ್ವಂತ ಉಪಭೋಗಕ್ಕೆ ಪಡೆದ ಇನಾಮು : ಜಹಗೀರು ಗ್ರಾಮ" ಎನ್ನುವ ಅರ್ಥವನ್ನು ಕೈಬಿಟ್ಟು ಅದು ಬ್ರಾಹ್ಮಣರ ಉಪಭೋಗಕ್ಕೆ ಕೊಟ್ಟಿರುವ ಊರು, ಅಗ್ರಹಾರಕ್ಕಿರುವ ಇನ್ನೊಂದು ಹೆಸರೆಂದು ಹೇಳಬೇಕಾಗುತ್ತದೆ.

ಈಚೆಗೆ ಅಗ್ರಹಾರಗಳ ಉದ್ದೇಶ ಹಾಗೂ ಪಾತ್ರದ ಬಗ್ಗೆ ಬಹುವಿಧವಾದ ಚರ್ಚೆ ನಡೆಯುತ್ತಿದೆ. ಮಧ್ಯಕಾಲೀನ ಕೃಷಿಕ ಸಮಾಜದಲ್ಲಿ, ಆರ್ಥಿಕ ರಚನೆಯಲ್ಲಿ ಅಗ್ರಹಾರಗಳು ವಹಿಸಿದ ಪಾತ್ರವೇನು ? ಎಂಬ ಪ್ರಶ್ನೆ ಈಗ ಮುಖ್ಯವಾಗಬೇಕಾಗಿದೆ. ಈ ನಿಟ್ಟಿನಲ್ಲಿ ಶಾಸನೋಕ್ತ ವಿಷಯಗಳ ವಿವರವಾದ ಪರಿಶೀಲನೆ ಅಗತ್ಯವಾಗಿದೆ. ಹಾಗೆಯೇ ಅಗ್ರಹಾರಗಳ ಅರ್ಥವನ್ನು ಅವು ಶಿಕ್ಷಣ ಸಂಸ್ಥೆಗಳೆಂಬುದಕ್ಕಷ್ಟೇ ಸೀಮಿತಗೊಳಿಸದೆ ವ್ಯಾಪಕ ಅರ್ಥದಲ್ಲಿ ನಿರ್ವಚಿಸುವ ಹೊಸ ದೃಷ್ಟಿ ಕೂಡ ಅಗತ್ಯವಾಗಿದೆ.

---


5 'Epigraphical Discoveries', *QJMS*. Vol. XLIX, No. 2, 1959
6 ಶಾಸನ ವ್ಯಾಸಂಗ ೨, ಪು. ೪೪
7 ಸೌ.ಇ.ಇ., XVIII, ೧೪೧, ಕ್ರಿ.ಶ. ೧೧೩೮
8 ಅದೇ, ೧೫೦, ಕ್ರಿ. ಶ. ೧೧೪೭
9 ಅದೇ, XX, ೧೪೦ (ಸಿಂದಗಿ ತಾಲೂಕು), ಕ್ರಿ.ಶ. ೧೧೬೪
10 ಅದೇ, ೩೯ ಮತ್ತು ೬೧ ದೇವೂರ (ಸಿಂದಗಿ ತಾಲೂಕು), ಕ್ರಿ.ಶ. ೧೦೬೪ ಮತ್ತು ೧೧೯೪
11 ಅದೇ, XI-I, ೮೩ ಬಾಗೇವಾಡಿ, ಕ್ರಿ. ಶ. ೧೦೫೪
12 ಇಂ. ಆ್ಯಂ., XIX, ಪು. ೨೬೨ (ವಿಜಾಪೂರ ತಾಲೂಕು), ಕ್ರಿ.ಶ. ೧೦೫೪

ಎಂ. ಜಿ. ನಾಗರಾಜ್

ಕೊಡಗು ಶ್ರೀರಂಗಪಟ್ಟಣ : ಒಂದು ಶೋಧನೆ

ಕರ್ನಾಟಕದ ಮಂಡ್ಯಜಿಲ್ಲೆಯ ಶ್ರೀರಂಗಪಟ್ಟಣ, ಶಿವನಸಮುದ್ರ, ತಮಿಳುನಾಡಿನ ಶ್ರೀರಂಗಗಳಲ್ಲಿ ಶ್ರೀರಂಗನಾಥನ ಸಾನ್ನಿಧ್ಯವಿದೆ. ಕ್ರಮವಾಗಿ ಅವುಗಳು ಆದಿ, ಮಧ್ಯ ಹಾಗೂ ಅಂತ್ಯ ರಂಗನ ನೆಲೆಗಳೆನಿಸಿವೆ. ಗಮನಾರ್ಹ ಅಂಶವೆಂದರೆ, ಶ್ರೀರಂಗನ ಈ ಸನ್ನಿಧಿಗಳೆಲ್ಲ ಕಾವೇರಿ ಬಳಸಿದ ದ್ವೀಪವಾಗಿರುವುದು ಹಾಗೂ ಈ ಎತ್ತರದ ನೆಲೆಗಳು ಗೌತಮ ಕ್ಷೇತ್ರಗಳೆಂದು ಕರೆಸಿಕೊಂಡಿರುವುದೇ ಆಗಿದೆ. 'ಶ್ರೀರಂಗಪಟ್ಟಣವೆಸೆದಿಹುದುಭಯ ಕಾವೇರಿಯ ಮಧ್ಯದೊಳಾಗ' ಎಂಬ ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ದಲ್ಲಿನ ಉಲ್ಲೇಖ, ಹುಣಸೂರು ಶಾಸನದಲ್ಲಿನ 'ಕಾವೇರಿ ಮಧ್ಯವರ್ತಿಯರಾದ ಶ್ರೀರಂಗಪಟ್ಟಣವೆಂಬ ಗೌತಮಕ್ಷೇತ್ರದಲ್ಲಿ ರಂಗನಾಥಸ್ವಾಮಿಯವರ ಚರಣಾ' ಎಂಬ ಸಾಲು,[1] 'ಶ್ರೀರಂಗಪಟ್ಟಣ'ಗಳಿರುವ ಪರಿಸರವನ್ನು ಮತ್ತು ಪೌರಾಣಿಕ ಪರಂಪರೆಯನ್ನು ಉದ್ದೇಶಿಸಿ ಹೇಳಿರುವಂತಿವೆ.

ಕೊಡಗಿನಲ್ಲಿಯೂ 'ಶ್ರೀರಂಗಪಟ್ಟಣ'ವೊಂದಿದ್ದು, 'ಕೊಡಗು ಶ್ರೀರಂಗಪಟ್ಟಣ'ವೆಂಬ ಹೆಸರನ್ನು ಕ್ರಿ.ಶ. ೧೮೨೨ರ ಶಾಸನದಲ್ಲಿ ಕಂಡರೆ,[2] ಅದಕ್ಕೆ ಮೊದಲಿನ ಶಾಸನ ಹಾಗೂ ದಾಖಲೆಗಳಲ್ಲಿ 'ಕೊಡಗು' ಎಂಬ ವಿಶೇಷಣವಿಲ್ಲದೆ, ಆ ನೆಲೆಯನ್ನು 'ಶ್ರೀರಂಗಪಟ್ಟಣ'ವೆಂದೇ ಉಲ್ಲೇಖಿಸಲಾಗಿದೆ.[3] ಈ ಪಟ್ಟಣವು ಪ್ರಸ್ತುತ ಸಿದ್ದಾಪುರದ ದಕ್ಷಿಣಕ್ಕಿದ್ದು, 'ರಂಗಪಟ್ಟಣ' ಎಂಬ ಹೆಸರು ಪಡೆದಿತ್ತು. ಹೊಳೆಸಾಲು ಹಳ್ಳಿಗಳು ಇದರ ಸನಿಹದಲ್ಲಿದ್ದುವೆಂತಲೂ[4] ಇದು ಮಾಲ್ದಾರೆ ಬಳಿ ಇದ್ದಿತೆಂತಲೂ[5] ವ್ಯಕ್ತಪಡುತ್ತದೆ. ಕೊಡಗಿನ ಹಳೆಯ



1 ಎ.ಕ., ಸಂಪುಟ ೧, ಕೊಡಗುಜಿಲ್ಲೆ (ಪರಿಷ್ಕೃತ ಆವೃತ್ತಿ, ೧೯೭೨), ಮಡಿಕೇರಿ ೩ (೨೫), ಕ್ರಿ.ಶ. ೧೮೨೨

2 ಅದೇ, ಸಂಪುಟ ೮, ೧೯೮೪, ಅರಕಲಗೂಡು ೫೩, ಕ್ರಿ.ಶ. ೧೨೫೨

3 ಅದೇ, ಸಂಪುಟ ೪, ೧೯೭೫, ಹುಣಸೂರು ೩೨ (ತರೀಕಲ್ಲು), ಕ್ರಿ.ಶ. ೧೬೬೯

4 ನಡಿಕೇರಿಯಂಡ ಚಿಣ್ಣಪ್ಪ (ಸಂ.) : ಪಟ್ಟೋಲೆ ಪಳಮೆ, ಮೈಸೂರು, ೧೯೭೫, ಪು- ೨೨

5 ಅದೇ

ಭೂಪಟಗಳಲ್ಲಿಯೂ ಇದರ ನೆಲೆಯ ವಿಸ್ತಾರವಿದ್ದುದನ್ನು ಸೂಕ್ತವಾಗಿ ನಿರ್ದೇಶಿಸಿಲ್ಲ. ೧೮೩೪ರ ಹಾಲೇರಿ ಅರಸರ ಅಂಕಿತದಲ್ಲಿದ್ದ ಊರುಗಳ ಪಟ್ಟಿ ಹಾಗೂ ೧೯೩೦ರ ಕೊಡಗಿನ ಗ್ರಾಮಗಳ ವಿಸ್ತೀರ್ಣದ ದಾಖಲಾತಿ ಪಟ್ಟಿಗಳಲ್ಲಿ ಈ ಊರಿನ ಹೆಸರಿದ್ದರೂ ಮಾಲ್ದಾರೆಯ ಉಪಗ್ರಾಮವಾಗಿ ಸೂಚಿತವಾಗಿದೆ. ಇಂದು ಖಾಸಗಿ ಕಂಪನಿಯೊಂದರ ಹಾಗೂ ಹಿಡುವಳಿದಾರರ ಕಾಫಿ, ಮೆಣಸಿನ ತೋಟಗಳು ಈ ನೆಲೆಯ ಮೇಲೆ ಊರಿ ನಿಂತಿವೆ. ಹೀಗೆ ಹೆಸರು, ನೆಲೆಗಳ ಖಚಿತ ನಿರ್ದೇಶನವಿಲ್ಲದೆ ಈ ಪ್ರಾಚೀನ ಮಹತ್ವದ ನೆಲೆ ಪ್ರಸಿದ್ಧಿ ಕಳೆದು ಕೊಂಡಿದೆ.

ಈ ನೆಲೆ ಕುರಿತಂತೆ ಪರಿಸರದ ಸಾಕ್ಷ್ಯಗಳಾಗಿ ನಂಜರಾಯಪಟ್ಟಣದ ಕಾವೇರಿ ಹೊಳೆಸಾಲಿನಕ್ಕೆ ಹಳ್ಳಿಗಳು, ಹಳೆ ದಾಸವಾಳ ಗ್ರಾಮ, ಅವರೆಗುಂದ, ಕರಡಿಗೋಡು, ಗುತ್ತಿಮಠದ ಕಾಡು(ಹತ್ತು ಎಕರೆ),ಗಂತ್ತಿಗುಡಿ, ಈಗಿನ ದುಬಾರೆ ಕಾಡಿನಲ್ಲಿರುವ ಪಂಚಲಿಂಗೇಶ್ವರ ಗುಡಿ, ಅವಮ್ಮಾಳೆ ಕೆರೆಗಳು, ಅದರ ಸನಿಹದ ಗದ್ದುಗೆಗಳ ಅವಶೇಷ,ರುದ್ರಭೂಮಿಯ ಕುರುಹುಗಳು, ನಂಜುಂಡೇಶ್ವರ ಗುಡಿಯ ಬಲದ ಕಾವೇರಿದಂಡೆಯ ಪ್ರಾಚೀನ ಶಿಥಿಲ ಕರಿಶಿಲೆಗಳ ನಡುಹೊಳೆ ದೇಗುಲ, ಹಳೇ ದಾಸಿವಾಳ ಗ್ರಾಮದ ಬಳಿಯ ನಡುಹೊಳೆ ಪ್ರಾಚೀನ ವೃಷಭ, ಮಾಲ್ದಾರೆ ಕಾಡು, ಘಟ್ಟದಹಳ್ಳಿ, ಮಾಗೊರ್ಲ್ಲಿ, ಕೊಡಗು ಶ್ರೀರಂಗಪಟ್ಟಣದ ಅಳಿದುಳಿದ ನೆಲೆ, ಕೋಡಂಗಿಬೆಟ್ಟ, ದೊಡ್ಡಡ್ಲು, ಸಿದ್ದೇಶ್ವರ ಗದ್ದುಗೆ, ಜೊತೆಗೆ ಚನ್ನಯ್ಯನಕೋಟೆಯಿಂದ ಪಾಲ್ಪರೆವರೆಗಿನ ಹಾದಿ, ಮಾಲ್ದಾರೆ ದುಬಾರೆಕಾಡಿನ ಶಿಲ್ಪಶಾಸನ, ವೀರಗಲ್ಲುಗಳು ಇತರೆಡೆಯ ಪೋಷಕ ಶಾಸನೋಲ್ಲೇಖಗಳು ಇತ್ಯಾದಿಗಳನ್ನು ಗಮನಿಸಬಹುದು.

ಕ್ರಿ.ಶ. ೧೦೦೪ರಲ್ಲಿ ಗಂಗರ ರಾಜಧಾನಿ ತಲಕಾಡನ್ನು ವಶಪಡಿಸಿಕೊಂಡ ನಂತರ ರಾಜೇಂದ್ರ ಚೋಳನು ಕೊಡಗು (ಕೊಡಗು ಮಲೆನಾಡು) ಅವನ ಪಾಲಿಗೆ ಬರಲು,[6] ಕ್ರಿ.ಶ. ೧೦೦೪ರ ಪನಸೋಗೆಯ ಯುದ್ಧದಲ್ಲಿ ಅವನ ಪ್ರಸಿದ್ಧ ಸೇನಾಪತಿ ಪಂಚವ ಮಹಾರಾಯನು ಚಂಗಾಳ್ವರನ್ನು ಸೋಲಿಸಿದುದೇ[7] ಆಗಿದೆ. ಈ ಯುದ್ಧದಲ್ಲಿ ಜಯಕ್ಕೆ ಕಾರಣನಾದ 'ಮನಿಜ'ನ ಶೌರ್ಯವನ್ನು ಪಂಚವ ಮಹಾರಾಯನಿಂದ ತಿಳಿದು ಅವನಿಗೆ ಪಟ್ಟಕಟ್ಟಿ ನಾಡು ನೀಡಲು ರಾಜೇಂದ್ರಚೋಳ ಆದೇಶ ನೀಡಿದ. ಅದರಿಂದಾಗಿ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ' ಎಂಬ ಬಿರುದಿನೊಡನೆ 'ಮಾಲವ್ವಿ' ನಾಡನ್ನು ಪಡೆದು,[8] ಕೊಡಗಿನಲ್ಲಿ ಕೊಂಗಾಳ್ವ ಮನೆತನದ ಮೂಲಪುರುಷನಾಗಿ ೧೧ನೇ ಶತಮಾನದಲ್ಲಿ ಉದಿಸಿದ. ಅಂತಾಗಿ ಚಂಗಾಳ್ವರು ಮತ್ತು ಕೊಂಗಾಳ್ವರು ಚೋಳರ ಮಾಂಡಲಿಕರಾದರು.

ಚೋಳರು ಹೀಗೆ ಕೊಡಗಿನ ಮೇಲೆ ಹಿಡಿತ ಸಾಧಿಸಿದ ನಂತರ, ಕೊಡಗಿನ ಪೂರ್ವಗಡಿಯಲ್ಲಿ ಕಾವೇರಿ ದಂಡೆಯ ಬಳಿ ವೀರಭದ್ರದೇವರ ದೇಗುಲವನ್ನು ಕಟ್ಟಿ, 'ಚೋಳಪ್ರತಿಷ್ಠಾ ವೀರಭದ್ರ' ಎಂದೇ ಹೆಸರಾಗಿಸಿದರು.[9] ಚೋಳ ವೀರಭದ್ರನ ನೆಲೆಯ ಕಾರಣ, ಈಗಿನ ನಂಜರಾಯಪಟ್ಟಣ ಹಾಗೂ ದುಬಾರೆಕಾಡಿನ ಪ್ರದೇಶವೆಲ್ಲವೂ ಕೊಂಗಾಳ್ವರ ಅಧಿಕಾರ ವ್ಯಾಪ್ತಿಗೆ ಬಂದಿರಬೇಕು. ಆದರೆ 'ಕೊಡಗು ಶ್ರೀರಂಗಪಟ್ಟಣ' ಎಂಬ ಹೆಸರಿನ ನೆಲೆ ಇಲ್ಲಿ ಚೋಳರ ಕಾಲಕ್ಕೆ ಇತ್ತೆಂಬುದಕ್ಕೆ ಪುರಾವೆಗಳು ಕಾಣಬರುತ್ತಿಲ್ಲ.

ಚಂಗಾಳ್ವರು ಹತ್ತನೆಯ ಶತಮಾನದಲ್ಲಿ ಕೊಡಗಿನ ಪೂರ್ವಭಾಗದ ಹುಣಸೂರು ತಾಲ್ಲೂಕಿನಲ್ಲಿದ್ದು, ಕೊಡಗಿನ ಕೆಲವು ಭಾಗಗಳನ್ನು ಗಂಗರ ಮಾಂಡಲಿಕರಾಗಿ ಆಳಿರಬಹುದಾದರೂ ೧೧ನೆಯ ಶತಮಾನದಲ್ಲಿ ಚೋಳರ ಅಧೀನರಾದರು. ಆದರೆ ಆಗಲೂ ನಂಜರಾಯಪಟ್ಟಣ, ಕೊಡಗು ಶ್ರೀರಂಗಪಟ್ಟಣ ಪ್ರದೇಶಗಳು ಅವರ ವಶದಲ್ಲಿರಲಿಲ್ಲ. ಆದ್ದರಿಂದ ೧೨ನೆಯ ಶತಮಾನದಲ್ಲಿನ

---

6 *Coorg District Gazetteer*, Bangalore, 1965, p. 44

7 ಬಿ. ಎ. ಸಾಲತ್ತೊರೆ, ಪಾಂಡುರಂಗ ದೇಸಾಯಿ (ಸಂ.) : ಕನ್ನಡನಾಡಿನ ಚರಿತ್ರೆ (ಮೊದಲನೆಯ ಭಾಗ), ಬೆಂಗಳೂರು, ೧೯೭೩, ಪು. ೫೭

8 ಎ. ಕ., ಸಂಪುಟ ೧ (ಪರಿಷ್ಕೃತ ಆವೃತ್ತಿ), ಮಾಲಂಬಿ ೬೫ (೪೬), ಪು. ೪೪

9 *Coorg District Gazetteer*, pp. 44-45

ಕೊಂಗಾಳ್ವರ ಅಧೀನ ಕಾಲದಲ್ಲಿಯೂ ಕೊಡಗು ಶ್ರೀರಂಗಪಟ್ಟಣ ಇನ್ನೂ ರೂಪುಗೊಂಡಿರಲಿಲ್ಲವೆಂದು ತೋರುತ್ತದೆ.

ಕೊಡಗಿನಲ್ಲಿ ಕೊಂಗಾಳ್ವ ಮತ್ತು ಚಂಗಾಳ್ವರ ಮೂಲಕ ನಡೆದ ಚೋಳರಾಳ್ವಿಕೆಯನ್ನು ಹೊಯ್ಸಳರು ಕ್ರಿ.ಶ. ೧೧೦೭ರ ವೇಳೆಗೆ ಅಂತ್ಯಗೊಳಿಸಿದರು. ಇನ್ನು ಚಂಗಾಳ್ವರು ಸ್ವತಂತ್ರರಾಗುವ ಯತ್ನವನ್ನು ಕ್ರಿ.ಶ. ೧೧೩೦ರಲ್ಲಿ ಹೊಯ್ಸಳರಿಗೆ ಸೋತರೂ ಮತ್ತೆ ಕ್ರಿ.ಶ. ೧೧೫೫ರಲ್ಲಿ ಹೊಯ್ಸಳ ಸೇನಾಧಿಕಾರಿ ಚೋಕಿಮಯ್ಯ ಚಂಗನಾಡನ್ನು ಜಯಿಸಿದರೂ ಕ್ರಿ ಶ. ೧೧೭೧ರವರೆಗೂ ಅವರ ಪ್ರಯತ್ನ ನಿಂತಿರಲಿಲ್ಲ. ಅಲ್ಲದೆ ಕ್ರಿ.ಶ. ೧೧೫೦ ರಲ್ಲಿಯೇ ಕೊಂಗಾಳ್ವರೊಡನಾದ ಯುದ್ಧದಲ್ಲಿ ಚಂಗಾಳ್ವರಿಗೆ ಗೆಲವು ದೊರೆಯಲಿಲ್ಲ.[10] ಈ ಕಾರಣದಿಂದ ನಂಜರಾಯಪಟ್ಟಣದ ಸುತ್ತಮುತ್ತಲ ಪ್ರದೇಶವೆಲ್ಲವೂ ಕೊಂಗಾಳ್ವರ ಅಧೀನದಲ್ಲಿಯೇ ಇತ್ತೆಂದು ತೋರುತ್ತದೆ. ಇನ್ನು ಚಂಗಾಳ್ವ ಮಹಾದೇವನು ಹುಣಸೂರು ತಾಲೂಕಿನ ಬಯಲು ಪ್ರದೇಶದಲ್ಲಿದ್ದ ರಾಜಧಾನಿಯನ್ನು ಬಿಟ್ಟು ಹೆಚ್ಚಿನ ಭದ್ರತೆಗಾಗಿ ಕೊಡಗಿನ ಕಿಗ್ಗಟ್ಟುನಾಡಿನ ಪಾಲ್ಪರೆಯಲ್ಲಿ ಕೋಟೆಕಟ್ಟಿ ನಿಂತು ಸ್ವತಂತ್ರನಾಗ ಬಯಸಿದಾಗ ಕ್ರಿ.ಶ. ೧೧೭೧ರಲ್ಲಿ ಹೊಯ್ಸಳ ಬಲ್ಲಾಳನು ಕಳುಹಿಸಿದ ದಂಡನಾಯಕ ಬೆಟ್ಟರಸನು ಚಂಗಾಳ್ವ ಮಹಾದೇವನನ್ನು ಸೋಲಿಸಿ, ಕೊಂದು ಪಾಲ್ಪರೆಯಲ್ಲಿ ತನ್ನ ಆಡಳಿತ ಸ್ಥಾಪಿಸಿದ. ಆಗ ಪಾಲ್ಪರೆಯು ಒಂದು ಪಟ್ಟಣವಾಗಿತ್ತು. ಹೀಗಾಗಿ ಪಾಲ್ಪರೆ ಹಾಗೂ ಕೊಡಗು ಶ್ರೀರಂಗಪಟ್ಟಣಗಳಿಗೆ ಸಂಬಂಧ ಕೂಡಿಕೊಳ್ಳುವುದು ಗಮನಾರ್ಹ.

ಹೊಯ್ಸಳ ಒಂದನೆಯ ವೀರಬಲ್ಲಾಳನು (ಕ್ರಿ.ಶ. ೧೧೭೩–೧೨೨೦) ಚೋಳರಾಜ ಪುತ್ರಿ ಮಹಾದೇವಿಯನ್ನು ಮದುವೆ ಆಗಿದ್ದ. ಈ ಬಲ್ಲಾಳನ ಮೊಮ್ಮಗ ಹೊಯ್ಸಳ ಸೋಮೇಶ್ವರ ಚೋಳರಾಜ ಪುತ್ರಿಯನ್ನು ಮದುವೆ ಆಗಿದ್ದ. ಈಕೆ ಶ್ರೀರಂಗದವಳೆಂದು ತೋರುತ್ತದೆ. ಕ್ರಿ.ಶ. ೧೨೪೫ರಲ್ಲಿ ಹೊಯ್ಸಳ ಸೋಮೇಶ್ವರನು (೧೨೩೫–೧೨೫೪) ತಮಿಳುದೇಶದಲ್ಲಿ ವಾಸಿಸುತ್ತಿದ್ದು, ತನ್ನ ಚೋಳವಂಶದ ಪತ್ನಿಯು ಸತ್ತ ಮೇಲೆ ಅಲ್ಲಿಂದ ಹಾಸನ ಜಿಲ್ಲೆಯ ದ್ವಾರಸಮುದ್ರಕ್ಕೆ ಹೋಗುವಲ್ಲಿ ಅರಕಲಗೂಡು ರಾಮನಾಥಪುರಕ್ಕೆ ಬಂದ.[11] ಈ ಸಮಯದಲ್ಲಿ ಚಂಗಾಳ್ವ ರಾಜಕುಮಾರರಾದ ಸೋಮದೇವರಸ ಮತ್ತು ಬೊಪ್ಪದೇವರಸರು ಸೋಮೇಶ್ವರನನ್ನು ಎದುರ್ಗೊಂಡು ಗೌರವಾತಿಥ್ಯಗಳನ್ನು ಸಲ್ಲಿಸಿದರು. ಬಹುಶಃ ಆಗಲೇ ಹೊಯ್ಸಳ ಸೋಮೇಶ್ವರನು ಸುಪ್ರೀತನಾಗಿ ಶ್ರೀರಂಗಪಟ್ಟಣದ ಆಡಳಿತಕ್ಕೆ ಈ ಅರಸರನ್ನು ಬದ್ಧಗೊಳಿಸಿರಬೇಕು.[12] ಈ ಶ್ರೀರಂಗಪಟ್ಟಣವೇ ಕೊಡಗು ಶ್ರೀರಂಗಪಟ್ಟಣ. ಆದಾಗಿ ಕ್ರಿ.ಶ. ೧೨೪೫ರ ಸುಮಾರಿನಲ್ಲಿ ಚಂಗಾಳ್ವರು ಕಿಗ್ಗಟ್ಟುನಾಡಿನ ಪಾಲ್ಪರೆಯಿಂದ ಕಾವೇರಿ ದಕ್ಷಿಣದ ಈ ಕೊಡಗು ಶ್ರೀರಂಗಪಟ್ಟಣಕ್ಕೆ ತಮ್ಮ ರಾಜಧಾನಿಯನ್ನು ಬದಲಾಯಿಸಿದರು.[13] ಅಂದರೆ ಕೊಡಗು ಶ್ರೀರಂಗಪಟ್ಟಣದ ಅಸ್ತಿತ್ವ ಚಂಗಾಳ್ವರ ಆಳ್ವಿಕೆಯು ಅಲ್ಲಿ ಆರಂಭವಾಗುವ ಮುನ್ನವೆ ಇದ್ದ ಬಗ್ಗೆ ಸಮರ್ಥನೆ ದೊರಕುತ್ತದೆ ಹಾಗೂ ಪಾಲ್ಪರೆ, ಕೊಡಗು ಶ್ರೀರಂಗಪಟ್ಟಣದ ಸಂಪರ್ಕವು ಮುಂದುವರಿದು ಬಂದಿದ್ದು, ಚಂಗಾಳ್ವರ ಪರಂಪರೆಯಲ್ಲಿ ಬರುವ ಎರಡು ರಾಜಧಾನಿಗಳ ಪರಂಪರೆಯನ್ನು ಸೂಚಿಸುತ್ತದೆ. ಅಂತಾಗಿ ಕ್ರಿ.ಶ. ೧೨೨೦–೪೫ರ ನಡುವಣ ಅವಧಿಯಲ್ಲಿ ಕೊಡಗು ಶ್ರೀರಂಗಪಟ್ಟಣವು ರೂಪುಗೊಂಡು, ಪಾಲ್ಪರೆಯಲ್ಲಿದ್ದಂತೆ ಇಲ್ಲೊಂದು ಶ್ರೀರಂಗನಾಥನ ಗುಡಿಯೂ ನಿರ್ಮಿತವಾಗಿರುವಂತಿದೆ.

ಹೊಯ್ಸಳ–ಚೋಳ ವಂಶಗಳ ನಡುವೆ ಕ್ರಿ.ಶ. ೧೧೭೩ರಿಂದ ಆರಂಭವಾದ ವೈವಾಹಿಕ ಸಂಬಂಧಗಳು ಸುಮಾರು ಎಪ್ಪತ್ತೈದು ವರ್ಷಗಳ ಕಾಲ ಅಂದರೆ ಕ್ರಿ.ಶ. ೧೨೪೫ರವರೆಗೆ ಉಳಿದುಬಂದಿವೆ. ಸೋಮೇಶ್ವರನ

10 *Hassan District Gazetteer*, p. 55

11 ಡಿ. ಎನ್. ಕೃಷ್ಣಯ್ಯ : ಕೊಡಗಿನ ಇತಿಹಾಸ, ಮೈಸೂರು, ೧೯೭೪, ಪು. ೫೦; ಪುಸ್ತಕದಲ್ಲಿ ಕ್ರಿ.ಶ. ೧೨೪೫ ಎನ್ನುವ ಬದಲು ತಪ್ಪಾಗಿ ಕ್ರಿ.ಶ. ೧೨೫೨ ಎಂದಿದೆ.

12 ಎ.ಕ., ಸಂಪುಟ ೮, ಅರಕಲಗೂಡು ೫೩; *Hassan District Gazetteer*, p. 59

13 *Coorg District Gazetteer*, p. 48

ಚೋಳ ಪತ್ನಿ ಅಷ್ಟೇ ಅಲ್ಲ, ವೀರಬಲ್ಲಾಳನ ಚೋಳ ಸತಿ ಮಹಾದೇವಿಗೂ ತಮ್ಮ ಪೂರ್ವಿಕರು ವೀರಭದ್ರ ದೇವರ ಪ್ರತಿಷ್ಠಾಪನೆ ಮಾಡಿದ ಹಾಗೂ ಪಂಚಲಿಂಗೇಶ್ವರ ಗುಡಿಯ ನೆಲೆಯನ್ನು ನೋಡಲು ಕೊಡಗು ಶ್ರೀರಂಗಪಟ್ಟಣ ಪ್ರದೇಶಕ್ಕೆ ಬರುತ್ತಿದ್ದಿರಬೇಕು. ಅಲ್ಲಿಯ ಗುಡಿ ಹಾಗೂ ನೆಲೆ ಕ್ರಿ.ಶ. ೧೨೨೦-೪೫ರ ನಡುವಣ ಅವಧಿಯಲ್ಲಿ ರೂಪುಗೊಳ್ಳಲು ನಾಂದಿ ಆಗಿರಬೇಕು. ಅದರ ಹೊಣೆ ಹೊಯ್ಸಳರ ಪ್ರತಿನಿಧಿಯೊಬ್ಬನಿಗೆ ವಹಿಸಲ್ಪಟ್ಟಿದ್ದು, ನಂತರ ಬೊಪ್ಪದೇವನಿಗೆ ಈ ಹೊಣೆ ಬಂದಿರಬೇಕು. ಈ ದಿಸೆಯಲ್ಲಿ ಕೊಡಗು ಶ್ರೀರಂಗಪಟ್ಟಣದ ಜನಪದರು ಹೇಳುವ ಕಥೆಯೊಂದು ಮೇಲಿನ ಇತಿಹಾಸಕ್ಕೆ ಕೊಂಡಿಯಾಗಿರುವಂತಿದೆ.

ಕೊಡಗು ಶ್ರೀರಂಗಪಟ್ಟಣದ ನಂಜರಾಯಪಟ್ಟಣ ಪ್ರದೇಶದಲ್ಲಿ ಬೊಪ್ಪದೇವನ ಕಾಲದಲ್ಲಿ, ಹೊಳೆಯ ನಡುವಣ ಚೋಳಪ್ರತಿಷ್ಠಾ ವೀರಭದ್ರನ ಗುಡಿಯು ಪ್ರವಾಹದಿಂದ ಶಿಥಿಲವಾಗಿರಬಹುದಾದ್ದರಿಂದ, ಹೊಯ್ಸಳ ಶೈಲಿಯ ಸೊಗಸಾದ ಬೇರೊಂದು ವೀರಭದ್ರನ ಗುಡಿಯು ನಿರ್ಮಿತವಾಗಿದೆ.

ಪಾಲ್ಪರೆಯಲ್ಲಿ 'ಸೋಮೇಶ್ವರ'ನ ಗುಡಿಯ ಹಿಂದೆ ಸನಿಹದ ದೇಗುಲವು 'ಶ್ರೀರಂಗನಾಥ ದೇಗುಲ' ವಾಗಿದ್ದ ಕುರುಹುಗಳನ್ನು ಹೊಂದಿದೆ. ಪಾಲ್ಪರೆಯಲ್ಲಿಯೂ ಶ್ರೀರಂಗನಾಥ ದೇಗುಲವೊಂದಿದ್ದಿರಬೇಕು ಎಂಬುದನ್ನು ಸಮರ್ಥಿಸುವಂತಿವೆ. ಬೊಪ್ಪದೇವನ ಶ್ರೀರಂಗ ಭಕ್ತಿಯ ಪ್ರತೀಕವಾಗಿ ಈ ದೇಗುಲವು ಕೊಡಗು ಶ್ರೀರಂಗಪಟ್ಟಣಕ್ಕೆ ಅವನು ಬರುವ ಮುನ್ನವೇ ನಿರ್ಮಾಣವಾಗಿರಬೇಕು. ಈ ಕಾರಣ ಸೋಮೇಶ್ವರನ ಆದೇಶವೂ ದೊರೆತು ಕೊಡಗು ಶ್ರೀರಂಗಪಟ್ಟಣವನ್ನು ಚಂಗಾಳ್ವ ರಾಜಕುಮಾರರು ರಾಜಧಾನಿ ಮಾಡಿಕೊಂಡಿರಬೇಕು.

ಪಾಲ್ಪರೆ-ಕೊಡಗು ಶ್ರೀರಂಗಪಟ್ಟಣದ ದೇವ-ದೇವಿಯರ ದೇಗುಲ, ಶಿಲ್ಪಗಳನ್ನು ಗಮನಿಸಿದರೆ ಸೋಮದೇವ, ಬೊಪ್ಪದೇವರ 'ಹರಿ-ಹರ' ಸಮನ್ವಯ ದೃಷ್ಟಿ, ಕಲಾತ್ಮಕ ಅಭಿರುಚಿ ಹಾಗೂ ಧರ್ಮನಿಷ್ಠೆಗಳು ಗೋಚರವಾಗುತ್ತವೆ. ಅಲ್ಲದೆ, ಎರಡು ರಾಜಧಾನಿಗಳ ಅಸ್ತಿತ್ವ ಹಾಗೂ ಸಂಪರ್ಕಗಳ ಕಲ್ಪನೆಯನ್ನು ನೀಡುತ್ತವೆ. ಪಿರಿಯರಾಜದೇವನ ಹಿರಿಯ ಸೋದರನೆನ್ನಲಾದ ಕ್ರಿ.ಶ. ೧೫೫೫ರ ಚಂಗಾಳ್ವರಸ ವೀರ ವೀರದೇವನ ಅಪ್ರಕಟಿತ ಶಾಸನವು ಸ್ಥಳಾಂತರಗೊಂಡು, ಪಾಲ್ಪರೆ-ಹೆಬ್ಬಾಲೆಗೆ ಸಮೀಪ ನಲ್ಲೂರುಕೋಟೆಯಲ್ಲಿ ಕಂಡುಬಂದಿದೆ[14] ಇದು ಪಾಲ್ಪರೆ ಕೊಡಗು ಶ್ರೀರಂಗಪಟ್ಟಣಗಳ ನಡುವಣ ಮುಂದುವರಿದ ರಾಜಸಂಪರ್ಕದ ಬಗ್ಗೆ ಮತ್ತಷ್ಟು ಬೆಳಕು ಚೆಲ್ಲುವಂತಾಗಿದೆ.

ಇತ್ತೀಚೆಗೆ ನಂಜರಾಯಪಟ್ಟಣದಲ್ಲಿ ಲಭ್ಯವಾದ ಅಪ್ರಕಟಿತ ತುರುಗೋಳ ಶಾಸನ ರೀತ್ಯ ಶಕ ೧೨೨೦ನೇ ರುಧಿರೇ ರುಧಿರೋದ್ಗಾರಿ(?) ಸಂವತ್ಸರದಲ್ಲಿ ಮಹಾಮಂಡಳೇಶ್ವರ ವೀರಚೋಳದೇವರಸನ ಆಳ್ವಿಕೆ ಕಂಡುಬರುವ ಕಾರಣ, ಅದು ಹರಿಹರದೇವನಿಗೇ ಅನ್ವಯಿಸುತ್ತದೆ. ಅಂದರೆ ಕ್ರಿ.ಶ. ೧೨೯೮ರಲ್ಲಿಯೂ ಚಂಗಾಳ್ವರು ಹೊಯ್ಸಳರ ಮಾಂಡಲಿಕರಾಗಿ ಕೊಡಗು ಶ್ರೀರಂಗಪಟ್ಟಣವನ್ನು ಆಳಿದರೆಂದು ಅರಿವಾಗುತ್ತದೆ. ಹೀಗೆ ೧೩ನೇ ಶತಮಾನದ ಪೂರ್ಣ ಚಂಗಾಳ್ವರ ಕೊಡಗು ಶ್ರೀರಂಗಪಟ್ಟಣದ ಆಳ್ವಿಕೆ ಚಾರಿತ್ರಿಕವಾಗಿದೆ.

೧೪ನೆಯ ಶತಮಾನದಲ್ಲಿ ಮೂರನೆಯ ಬಲ್ಲಾಳನ ಕಾಲದಲ್ಲಿ ಮಲ್ಲಿಕಾಫರನು ದಕ್ಷಿಣಕ್ಕೆ ದಂಡೆತ್ತಿ ಬಂದು ದಕ್ಷಿಣದ ರಾಜರನ್ನೆಲ್ಲ ಸೋಲಿಸಿ, ಕ್ರಿ. ಶ. ೧೩೧೦ರಲ್ಲಿ ಹೊಯ್ಸಳ ಬಲ್ಲಾಳನನ್ನು ಸೋಲಿಸಿದ ಮೇಲೆ ಹೊಯ್ಸಳರ ಬಲವು ತಗ್ಗಿತು. ಅವರ ಮಾಂಡಲೇಶ್ವರರ ಬಲವು ಕುಗ್ಗಿತು. ಆದಾಗಿ ಹದಿನಾಲ್ಕನೆಯ ಶತಮಾನ

14 ೮-೪-೧೯೮೭ರ ಪ್ರಜಾವಾಣಿ ಸಂಚಿಕೆಯಲ್ಲಿ, ಕೊಡಗಿನ ಆತ್ಮೀಯ ಸಂಶೋಧನ ಕೇಂದ್ರದವರು ಈ ಶಾಸನವನ್ನು ಕಂಡುಹಿಡಿದ ವಿಷಯ ಪ್ರಕಟವಾಗಿದೆ. ಆದರೆ ಶಾಸನಪಾಠವು ಅದರಲ್ಲಿ ಪ್ರಕಟವಾಗಿರಲಿಲ್ಲ. ಅಲ್ಲದೆ ಕ್ರಿ. ಶ. ೧೫೫೯-೮೦ರವರೆಗೆ ಆಳಿದ ಚಂಗಾಳ್ವರಸ ವೀರರಾಜ ಒಡೆಯನನ್ನು ಉಳಿದು ಅವನಿಗೂ ಹಿರಿಯನಾಗಿ ವೀರ ವೀರದೇವನು ಆಳಿದನೆ ಎಂಬುದು ಸುದ್ದಿಯಿಂದ ಸ್ಪಷ್ಟವಾಗಿಲ್ಲ. ಹಾಗಿದ್ದರೆ ಪಿರಿಯರಾಜದೇವನಿಗೆ ಇಬ್ಬರು ಹಿರಿಯ ಸೋದರರಿಬೇಕು ಎಂದಾಗುತ್ತದೆ. ತಪ್ಪಿದರೆ ವೀರರಾಜ ಒಡೆಯನಿಗೆ ಈ ಶಾಸನ ಅನ್ವಯವಾದರೆ, ಅವನ ಕಾಲವನ್ನು ಕ್ರಿ. ಶ. ೧೫೫೯-೮೦ರ ಬದಲು ಕ್ರಿ. ಶ. ೧೫೫೫-೮೦ ಎಂದು ಹೇಳಬೇಕಾಗುತ್ತದೆ.

ದಿಂದ ಹದಿನೈದನೆಯ ಶತಮಾನದ ಮಧ್ಯಭಾಗದವರೆಗೆ ಚಂಗಾಳ್ವ ಅರಸರೂ ಬಲಗುಂದಿದವರಾಗಿ ಕೊಡಗಿನ ಶ್ರೀರಂಗಪಟ್ಟಣದ ಸುತ್ತಲಿನ ಹಳ್ಳಿಗಳನ್ನು ಆಳುತ್ತಿದ್ದರೆಂದು ತೋರುತ್ತದೆ.[15] ಆದರೆ ಕ್ರಿ. ಶ. ೧೩೦೦ರ ನಂತರ ರಾಜಕೀಯ ಜೀವನದಲ್ಲಿ ಕೊಡಗು ಶ್ರೀರಂಗಪಟ್ಟಣದ ಅರಸರು ಏಳುಬೀಳು ಕಂಡರೂ ಅದಕ್ಕೆ ಒಂದೆರಡು ವರ್ಷಗಳ ಹಿಂದೆಯೂ ಚೌಡ್ಲು, ಕುಂದೂರು ಗಳಲ್ಲಿ ಶಾಸನಗಳನ್ನೂ ಹೊಂದಿ, ಕ್ರಿ. ಶ. ೧೯೮೮ರ ಹೊಸ ಶಾಸನದಿಂದಲೂ ಕ್ರಿ.ಶ. ೧೩೦೦ರ ನಂತರ ಚಂಗಾಳ್ವರ ಅಸ್ತಿತ್ವ ಅಳಿಸಿಹೋಗಲಿಲ್ಲ ಎಂಬುದು ಸ್ಪಷ್ಟ. ಕ್ರಿ.ಶ. ೧೫೦೨ಕ್ಕೆ ಮುಂಚೆಯೂ ಚಂಗಾಳ್ವರಸನಾದ ನಾಗರಾಜ, ರಂಗರಾಜ, ಪೆರಿಯಣ್ಣರಾಜರು ಕೊಡಗಿನ ಶ್ರೀರಂಗಪಟ್ಟಣವನ್ನೂ ಆಳಿರುವುದರಿಂದ ಅದರ ಸುತ್ತಮುತ್ತಲಿನ ಹಳ್ಳಿಗಳ ಜೊತೆಗೆ ಉತ್ತರ ಕೊಡಗಿನ ಚೌಡ್ಲು, ಕುಂದೂರು, ಹಾಲೇರಿ ಮುಂತಾದ ಭಾಗಗಳನ್ನು ೧೪–೧೫ನೆಯ ಶತಮಾನಗಳಲ್ಲಿಯೂ ತಮ್ಮ ಅಂಕೆಯಲ್ಲಿರಿಸಿಕೊಂಡಿಬೇಕು ಹಾಗೂ ಅವುಗಳು ಅವರ ವಂಶದ ಅರಸು ಶಾಖೆಗಳಿಗೆ ತತ್ಕಾಲೀನ ಆಶ್ರಿತ ಸ್ಥಾನಗಳೂ ಆಗಿರುವಂತಿವೆ. ಈ ಕಾರಣಗಳಿಂದಲೇ ೧೫ನೆಯ ಶತಮಾನದ ಪೂರ್ವಭಾಗದಲ್ಲಿಯೆ ತಮ್ಮ ರಾಜಧಾನಿ ಕೊಡಗು ಶ್ರೀರಂಗಪಟ್ಟಣದಲ್ಲಿ, ವಿಜಯನಗರದರಸರ ಕೃಪೆಗೂ ಪಾತ್ರರಾಗಿ, ಮತ್ತೆ ಪ್ರಸಿದ್ಧರಾದರೆಂದು ಸ್ಪಷ್ಟವಾಗುತ್ತದೆ.[16] ನಾಗರಹೊಳೆಯ ಬಳಿಯ ಕುಂತೂರು ಪಾಳೇಗಾರ ನಾಗರಾಜ[17] ಚಂಗಾಳ್ವರ 'ನಾಗರಾಜ'ನೆಂದೇ ಆದರೆ, ಚಂಗಾಳ್ವರ ಅರಸು ಕುಮಾರರು ತಮ್ಮ ಬೀಳಿನ ಸಮಯದಲ್ಲಿ ಕೊಡಗಿನ ವಿವಿಧ ಕಡೆಗಳಲ್ಲಿ ಅಸ್ತಿತ್ವ ಉಳಿಸಿಕೊಂಡುದಕ್ಕೆ ಸಾಕ್ಷಿಯಾಗುತ್ತದೆ.

ಚಂಗಾಳ್ವ ವಂಶದ ಲಭ್ಯ ಇತಿಹಾಸ ಹಾಗೂ ಶಾಸನಗಳ ಹಿನ್ನೆಲೆಯಲ್ಲಿ ಚಂಗಾಳ್ವರ ಪುನರುತ್ಥಾನ ೧೫ನೆಯ ಶತಮಾನದಲ್ಲಿ, ಕೊಡಗು ಶ್ರೀರಂಗಪಟ್ಟಣದಲ್ಲಿ ಚಂಗಾಳ್ವ 'ನಾಗರಾಜ'ನಿಂದ ಆಗಿರುವಲ್ಲಿ ಅವನ ಕಾಲವನ್ನು ಕ್ರಿ.ಶ. ೧೪೨೫–೧೪೫೦ರ ಅವಧಿಯ ಸುಮಾರಿಗೆ ಸಲ್ಲಿಸಬಹುದು. ಅವನಿಗೆ ಹಿಂದೆ ಕೊಡಗು ಶ್ರೀರಂಗಪಟ್ಟಣದಲ್ಲಿ ಚಂಗಾಳ್ವರಸರು ಇದ್ದಿರಬೇಕೆಂಬುದು ಮಹಾಧವ ರಾಜೇಂದ್ರನ ಸಚಿವತ್ವದಿಂದ ವಿದಿತವಾಗುವಂತಿದೆ. 'ನಾಗರಾಜ'ನ ಹಿಂದಿನವರ ಹೆಸರುಗಳು(ಕ್ರಿ.ಶ. ೧೩೦೧-೧೪೨೫) ಚರಿತ್ರೆಯ ದಾಖಲೆಗಳಲ್ಲಿ ಅಲಭ್ಯವಿರುವ ಕಾರಣ, 'ನಾಗರಾಜ' ಬಹುಶಃ ಪಾಲ್ಪರೆಯ ಸೋಮದೇವನ ವಂಶಿಕನಾಗಿ ಕೊಡಗು ಶ್ರೀರಂಗಪಟ್ಟಣದ ಆಳ್ವಿಕೆಗೆ ಬಂದಿರಬೇಕು. ಕುಂತೂರು–ನಾಗರಹೊಳೆ ಬಳಿ–'ನಾಗರಾಜ' ಇವನೇ ಆಗಿರಬಹುದಾದ ಒಂದು ಸಾಧ್ಯತೆಯ ಹಿನ್ನೆಲೆಯಲ್ಲಿ ಈ ಸೂಚನೆ. ಹಾಗಿಲ್ಲದಿದ್ದರೆ ಬೊಪ್ಪದೇವನ ಸಂತತಿಯವನಾಗಿ 'ನಾಗರಾಜ' ಆಳತೊಡಗಿರಬೇಕು.

ನಾಗರಾಜನ ನಂತರ ರಂಗರಾಜ ಹಾಗೂ ಪೆರಿಯಣ್ಣರಾಜ ಕೊಡಗು ಶ್ರೀರಂಗಪಟ್ಟಣವನ್ನು ಆಳಿದ್ದಾರೆ.[18] ಚಂಗಾಳ್ವರ ಪುನರುತ್ಥಾನ ಕಾಲದಲ್ಲಿ ಇಲ್ಲಿದ್ದ ಅವರ ಶಾಖೆಗಳಲ್ಲಿ ಕೊಡಗು ಶ್ರೀರಂಗಪಟ್ಟಣದಲ್ಲಿ ನಿಂತು ಆಳ್ವಿಕೆ ನಡೆಸಿದ ಒಂದು ಶಾಖೆಯ ಪುತ್ರ (ಸೋದರ ?) ಪೌತ್ರ ಪರಂಪರೆಯನ್ನು ಪರಿಗಣಿಸಿ ಅವರ ಕಾಲವನ್ನು ಹೀಗೆ ಸೂಚಿಸಬಹುದು. ಅವರನ್ನು ನಂತರದ ಚಂಗಾಳ್ವರೆಂದೂ ಕರೆಯಬಹುದು : ನಾಗರಾಜ (ಕ್ರಿ.ಶ. ೧೪೨೫-೫೦), ರಂಗರಾಜ (ಕ್ರಿ.ಶ. ೧೪೫೦-೬೫), ಪೆರಿಯಣ್ಣರಾಜ (ಕ್ರಿ.ಶ. ೧೪೬೫–೧೫೦೨) ಮತ್ತು ನಂಜರಾಜ (ಕ್ರಿ.ಶ. ೧೫೦೨–೧೫೨೫).

ಚಂಗಾಳ್ವರು, ಕೆಳದಿ ಹಾಗೂ ಹಾಲೇರಿ ಅರಸರಲ್ಲಿ ಪರಸ್ಪರ ಬಂಧುತ್ವವಿದ್ದು, ಮೊದಲ ಚಂಗಾಳ್ವರಲ್ಲಿ ಉಳಿದುಕೊಂಡಿದ್ದ ಶಾಖೆಗಳಲ್ಲಿ ಒಂದು ಶಾಖೆ ಕೆಳದಿಯತ್ತ

---

15 ಕೊಡಗಿನ ಇತಿಹಾಸ, ಪು. ೫೩, ೬೨

16 ಎಂ. ಜಿ. ನಾಗರಾಜ್ : ಕೊಡುಗು ಜಿಲ್ಲೆಯ ಸುಗ್ಗಿಕಟ್ಟೆಗಳು, ಬೆಂಗಳೂರು, ೧೯೮೯, ಪು. ೪೨

17 ಎಂ. ಜಿ. ನಾಗರಾಜ್ : 'ಕೊಡಗಿನ ಕೊಲೆಕಲ್ಲುಗಳು', ಹರತಿ ಸಿರಿ (ಹೆಚ್. ವಿ. ವೀರನಾಯಕರ ನೆನಪಿನ ಸಂಪುಟ), ಹರ್ತಿಕೋಟೆ, ೧೯೮೬, ಪು. ೬೩೮

ಹೋಗಿರುವ ಸಾಧ್ಯತೆಯನ್ನು ಪರಿಗ್ರಹಿಸಬಹುದು ಎನ್ನುವುದಾದರೆ ಅದು ಕೆಳದಿಗೆ, ಕೊಡಗು ಶ್ರೀರಂಗ ಪಟ್ಟಣದ ಸಾರ್ಥಕ ಕೊಡುಗೆ ಎನ್ನಬಹುದು.

ನಂಜರಾಯಪಟ್ಟಣದ ನಂಜುಂಡರಾಜನ ಮಂತ್ರಿ ಆಗಿದ್ದ ೧೬ನೇ ಶತಮಾನದ ದೇವಪ್ಪಕವಿ ತನ್ನ 'ರಾಮ ವಿಜಯ ಕಾವ್ಯ'ದಲ್ಲಿ ವರ್ಣಿಸಿರುವ ದೇಶ ವಿಷಯವು, ಕೊಡಗು ಶ್ರೀರಂಗಪಟ್ಟಣ – ನಂಜರಾಯಪಟ್ಟಣ ಪ್ರದೇಶದ ವರ್ಣನೆ ಹಾಗೂ ಗಡಿಗಳನ್ನು ಒಳ ಗೊಂಡಿದೆ. ಕಾರಣ ಆ ವರ್ಣನೆಯ ನೆಲೆಗಳು ಇಂದಿಗೂ ಅಲ್ಲಿ ಕಾಣಬರುತ್ತವೆ.

ಕೊಡಗು ಶ್ರೀರಂಗಪಟ್ಟಣದ ಎಲ್ಲೆಗಳು ಮಳೆ ಗಾಲದ ಮೂರು ಕೊಲ್ಲಿಗಳಿಂದ (ಇಂದು ಮಾಗೆರ್ೊಲ್ಲಿ ಎಂಬ ನೆಲೆ ಆಗಿದೆ) ಕಾವೇರಿ ನದಿಯಿಂದ ಆವೃತವಾಗಿ ನಡುವೆ ಸುಮಾರು ೨೦ ಸಾವಿರ ಎಕರೆ ಪ್ರದೇಶದಲ್ಲಿ ಈಗಿನ ಮಾಲ್ದಾರೆ, ದುಬಾರೆ ಕಾಡು ಪ್ರದೇಶ, ಬೈರವ, ನಂದಿ, ಗಣಪತಿ, ಪಾರ್ವತಿ ವಿಗ್ರಹಗಳನ್ನೊಳಗೊಂಡ ವ್ಯಾಳಿಸೋಪಾನ, ವೃಷಭವನ್ನೊಳಗೊಂಡ ಪಂಚ ಲಿಂಗೇಶ್ವರ ಶಿಲಾದೇಗುಲ, ಅವಮ್ಮಾಳೆ ಕೆರೆಗಳು, ಗದ್ದೆ ಗಳು, ರುದ್ರಭೂಮಿ, ದೇವರಕೊಳ, ನೀರಿನಹೊಂಡ ಗಳು, ಗುಂತ್ತಿಯಲ್ಲಿನ ಶ್ರೀರಂಗನ ಗುಡಿ, ಹಳೆ ದಾಸವಾಳ ಮುಂತಾದ ಹೊಳೆಸಾಲ ಹಳ್ಳಿಗಳನ್ನು ಗಡಿಗ್ರಾಮಗಳ ನ್ನಾಗಿ ಹೊಂದಿರುವ ಪ್ರದೇಶವಾಗಿದೆ. (ದಾಸವಾಳ ಗ್ರಾಮ ಆಗಿನ ಹೂದೋಟವಾಗಿದ್ದಿರಬೇಕು).

ಜಿನೆಯ ಮಂಗರಸ ಕವಿ ತನ್ನ 'ಶ್ರೀಪಾಲಚರಿತೆ' ಯಲ್ಲಿ ಕೊಡಗಿನ ಬಲ್ಲಾಡುಗಳನ್ನೂ ವಿವರಿಸಿರುವುದು, ದೇವಪ್ಪ ಕವಿಯು ಇಲ್ಲಿನ ಕಾಡಿನಲ್ಲಿರುವ ಹಾಲೆಮರ, ಕಕ್ಕೆಮರ ಮುಂತಾದ ಮರಗಳನ್ನು ಪ್ರಾಣಿಗಳಾದ ಕಡವೆ, ಕಾಟಿಗಳ ಬಗ್ಗೆ ಹೇಳಿರುವುದು, ಅವರಿದ್ದ ಕೊಡಗು ಶ್ರೀರಂಗಪಟ್ಟಣದ ಪರಿಸರವನ್ನು ಪರಿಚಯಿಸುವಂತಿವೆ. ನಂಜುಂಡಕವಿ ಕೊಡಗಿನ ಭಟರ ಶೌರ್ಯವನ್ನು ವರ್ಣಿಸು ವಲ್ಲಿ ಚಂಗನಾಡಿನ ಈ ಪ್ರದೇಶದ ಜನತೆಯ (ನಂಜರಾಜ ನಿಗಾಗಿ ಕಾದ ವಿಜಯ) ಶೌರ್ಯವನ್ನು ಗಮನಿಸಿಯೇ ಹೇಳಿ ದಂತಿದೆ.[19]

ಮೈಸೂರು ದೇಶದ ಉಮ್ಮತ್ತೂರಿನ ಗಂಗರಾಜ ನೊಡನಾದ ಕ್ರಿ.ಶ. ೧೫೧೦ರ ಯುದ್ಧದಲ್ಲಿ ಕೃಷ್ಣದೇವ ರಾಯನು ಪೂರ್ಣ ವಿಜಯಿಯಾದ, ಹಾಗೂ ಶಿವನ ಸಮುದ್ರ ಮತ್ತು ಶ್ರೀರಂಗಪಟ್ಟಣದ ಕೋಟೆಗಳನ್ನು ವಶಪಡಿಸಿಕೊಂಡ :[20] ಕೃಷ್ಣದೇವರಾಯನಿಗಿದ್ದ ಮೂವರು ಮುಖ್ಯ ರಾಣಿಯರಲ್ಲಿ ಅವನ ಶ್ರೀರಂಗ ಪಟ್ಟಣದ ಸಾಮಂತನ ಮಗಳಾದ ತಿರುಮಲದೇವಿಯೂ ಒಬ್ಬಳು. ಅವನಿಗೆ ಹೆಣ್ಣು ಕೊಟ್ಟ ಮಾವಂದಿರಲ್ಲಿ ಶ್ರೀರಂಗಪಟ್ಟಣದ ಹಾಗೂ ಮಲಬಾರಿನ ಗಡಿಪ್ರದೇಶದ ದೊರೆಯಾದ ಕುಮಾರ ವೀರಯ್ಯ(Cumar Virya)ನೇ ಮುಖ್ಯನಾಗಿದ್ದ.[21] ಕ್ರಿ. ಶ. ೧೫೧೬ರ ಸುಮಾರಿನ ರಾಯಚೂರು ಯುದ್ಧದಲ್ಲಿ ಕೃಷ್ಣದೇವರಾಯನ ಮಾವ ನಾದ ಶ್ರೀರಂಗಪಟ್ಟಣದ ದೊರೆ ಕುಮಾರ ವೀರಯ್ಯ ತನ್ನ ಮೂವತ್ತು ಮಕ್ಕಳೊಡನೆ ಬಂದು, ಸೇನಾಧಿಪತ್ಯ ವನ್ನು ಬೇಡಿ ಪಡೆದು ನಿರ್ವಹಿಸಿದ.[22] ಕೃಷ್ಣದೇವ ರಾಯನ ಮುಖ್ಯ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲದೇವಿ ಕ್ರಿ.ಶ. ೧೫೧೫ರ ಕೊಂಡುವೀಡು ಕೋಟೆಯ ಮುತ್ತಿಗೆಯ ಸಮಯದಲ್ಲಿ ಅವನೊಡನಿ ದ್ದರು.[23] ಈ ತಿರುಮಲದೇವಿ ವಿಜಯನಗರದರಸರ ಕಾಲದಲ್ಲಿ ಒಂದು ಪಾಳೆಯಪಟ್ಟಿಗೆ ಒಳಪಟ್ಟ ಶ್ರೀರಂಗ ಪಟ್ಟಣದ (ಆದಿರಂಗನ ನೆಲೆ) ಪಾಳೇಗಾರ ಚಿಕ್ಕ ಒಡೆ

---

19 ಎಚ್. ದೇವೀರಪ್ಪ (ಸಂ.) : ನಂಜುಂಡಕವಿ ವಿರಚಿತ ರಾಮನಾಥ ಚರಿತ, ಪೂರ್ವಾರ್ಧ ಸಂಪುಟ ೨, ಮೈಸೂರು, ೧೯೫೯, ಪು. ೧೮೬ : ಸಂಧಿ ೧೧, ಪದ್ಯ ೩-೪

20 Robert Sewell : *A Forgotten Empire*. New Delhi, 1980, p. 130

21 *Ibid.*, p. 269. note 1

22 *Ibid.*, p. 336

23 T.V. Mahalingam : *Administration and Social Life under Vijayanagar*, Part II, Madras, 1975, p. 42

ಯನ ಮಗಳು, ತುಳುವ ಕೃಷ್ಣದೇವರಾಯನ ಪಟ್ಟದ ರಾಣಿ ಆಗಿದ್ದಳು.[24] ಬಹುಶಃ ಸಿವೆಲ್ ಹೇಳುವ 'ಕುಮಾರ ವೀರಯ್ಯ' ಮತ್ತು ಈ 'ಚಿಕ್ಕ ಒಡೆಯ' ಪದಗಳು ಸಮಾನಾರ್ಥಕವಾಗಿ ಬಳಕೆಯಾಗಿರುವಂತಿದೆ.

ನಂಜುಂಡ ಕವಿಯ 'ವಿಜಯ'ನಿಗೂ 'ಕುಮಾರ ವೀರಯ'ನಿಗೂ ಯಾವ ಸಂಬಂಧವೂ ಇಲ್ಲವೆಂದು ಸ್ಪಷ್ಟವಾಗುತ್ತದೆ. ಏಕೆಂದರೆ 'ವಿಜಯ' ಕೊಡಗು ಶ್ರೀರಂಗಪಟ್ಟಣದ ರಾಜ, ನಂಜರಾಜ(ನಂಜರಾಯ ಪಟ್ಟಣದ ರಾಜ)ನ ಪ್ರತಿನಿಧಿಯಾಗಿ ಉಮ್ಮತ್ತೂರಿನ ಕಾಳಗದಲ್ಲಿ ವಶಪಡಿಸಿಕೊಂಡ ಶ್ರೀರಂಗಪಟ್ಟಣದ ಕೋಟೆ, ಕೊಡಗು ಶ್ರೀರಂಗಪಟ್ಟಣದ್ದಾಗಲು ಸಾಧ್ಯವಿಲ್ಲ. ಕ್ರಿ.ಶ. ೧೫೧೬ರ ಸಮಯದಲ್ಲಿ ರಾಯಚೂರು ಯುದ್ಧದಲ್ಲಿ ಕುಮಾರ ವೀರಯ್ಯ ಭಾಗವಹಿಸಿರುವಲ್ಲಿ, ಕ್ರಿ.ಶ. ೧೫೧೦ರಲ್ಲಿ ವೀರ ಸ್ವರ್ಗವೇರಿದ 'ವಿಜಯ' ಒಬ್ಬನೇ ಆಗಿರಲು ಸಾಧ್ಯವಾಗದು. ಆದ್ದರಿಂದ ಕೃಷ್ಣದೇವರಾಯನ ಮಾವ ಆ ಕಾಲದ ಮೈಸೂರು ಶ್ರೀರಂಗಪಟ್ಟಣಕ್ಕೆ ಸಂಬಂಧಿಸಿದವನೇ ವಿನಹ, ಕೊಡಗು ಶ್ರೀರಂಗಪಟ್ಟಣಕ್ಕೆ ಸಂಬಂಧಿಸಿದವನಲ್ಲ. ಚಂಗಾಳ್ವ ಸಚಿವ ವಂಶದಲ್ಲಿ 'ಕುಮಾರ ವೀರಯ' ಎಂಬ ಹೆಸರೂ ದಾಖಲಾಗಿಲ್ಲ. 'ಜಯನೃಪಕಾವ್ಯ'ದ ಮಂಗರಸ ಹೇಳುವ 'ಯುವಕುಮಾರಕ ವಿಜಯ ರಾಜ'ನು, 'ಪಿರಿಯ ಪಟ್ಟಣವನಾಳಿದವ' ಹಾಗೂ ಮಂಗರಸನ ತಂದೆ. ಅಂತಾಗಿ ಆವನ ಕಾಲ ಕ್ರಿ.ಶ. ೧೫೦೦ಕ್ಕೂ ಮುನ್ನಿನದು, ಕೃಷ್ಣದೇವರಾಯನ ಕಾಲಕ್ಕೂ ಮುಂಚಿನದು.

ಕ್ರಿ.ಶ. ೧೫೦೨–೨೫ರ ಅವಧಿಯಲ್ಲಿ ಕೊಡಗು ಶ್ರೀರಂಗಪಣ್ಣದ ರಾಜಧಾನಿಸ್ಥಾನ ನಂಜರಾಯ ಪಟ್ಟಣಕ್ಕೆ ಸಂದಾಯವಾಗಿ, ಅದರ ಭಾಗವೆನಿಸಿದಂತೆ ಕಾಣುತ್ತದೆ. ಕ್ರಿ.ಶ. ೧೮೨೨ ಮಡಿಕೇರಿ ಶಾಸನವು, ನಂಜರಾಯಪಟ್ಟಣ ತಾಲೂಕಿನ ಭಾಗವಾಗಿದ್ದ ಸೂಚನೆಯನ್ನು ನೀಡುತ್ತದೆ. ಜೊತೆಗೆ ಪ್ರಥಮ ಬಾರಿಗೆ ಶಾಸನದಲ್ಲಿ ವಿಶೇಷಣ ಹೊತ್ತು 'ಕೊಡಗು ಶ್ರೀರಂಗ ಪಟ್ಟಣ'ವೆಂದು ದಾಖಲಾಗಿದೆ. ಆ ಕಾಲಕ್ಕೆ ವೀರರಾಜೇಂದ್ರನು ಇಲ್ಲಿ ಕೊಂದ ಹಾಗೂ ಕೈಸೆರೆ ಹಿಡಿದ ಆನೆಗಳ ಸಂಖ್ಯೆಯಿಂದ, ಇದು ದಟ್ಟವಾದ ಕಾಡು ಪ್ರದೇಶವನ್ನೊಳಗೊಂಡಿತ್ತು ಎಂದೂ ವಿದಿತವಾಗುತ್ತದೆ. ಕ್ರಿ.ಶ. ೧೮೨೨ರ ಶಾಸನದ ಮೊದಲಿಗೆ ಹಾಲೇರಿ ಅರಸರ ಆಡಳಿತ ದಾಖಲೆಗಳಲ್ಲಿ ಈ ಹೆಸರೇ ಇದ್ದಿರಬೇಕು. ಏಕೆಂದರೆ ಕ್ರಿ.ಶ. ೧೮೩೪ರಲ್ಲಿ ಹಾವೇರಿ ಅರಸರ ಸ್ವಾಧೀನದಲ್ಲಿದ್ದ ೫೨೦ ಗ್ರಾಮಗಳ ಪೈಕಿ, ಏಳುಸಾವಿರ ಸೀಮೆಯ ಶನಿವಾರಸಂತೆ ಸ್ಯಾಂಡಲ್ ಕೋಟೆ ಫಾರೆಸ್ಟ್ ಪರಿಸರದಲ್ಲಿ 'ಮೈಲಾತಪುರ'ವು ೧೭೯.೧೮ ಎಕರೆ ವಿಸ್ತೀರ್ಣ ಹೊಂದಿದ್ದರೆ, ಎಡೆನಾಲ್ಕುನಾಡು ತಾಲೂಕಿನ ಅಮ್ಮತ್ತಿ ನಾಡಿಗೆ ಸೇರಿದ ಮಾಲ್ದಾರೆ ಗ್ರಾಮ ೫೩೭೬.೪೫ ಎಕರೆ ವಿಸ್ತೀರ್ಣ ಹಾಗೂ ಕೊಡಗು ಶ್ರೀರಂಗಪಟ್ಟಣ ಗ್ರಾಮವು ೧೫೧೪.೭೫ ಎಕರೆ ವಿಸ್ತೀರ್ಣವನ್ನು ಹೊಂದಿದ್ದುವು.[25] ಇನ್ನು ೧೯೩೫ರ ಸರ್ಕಾರಿ ದಾಖಲೆಯೊಂದರಲ್ಲಿ[26] ಮೈಲಾತಪುರವು ೧೭೯.೧೮ ಎಕರೆ ವಿಸ್ತೀರ್ಣದ ಜೊತೆಗೆ ಮುಖ್ಯಗ್ರಾಮವಾಗಿ, ಒಡಬನಹಳ್ಳಿ, ನಾಗವಾರ, ಅಮ್ಮಳ್ಳಿ ಎಂಬ ಉಪಗ್ರಾಮಗಳನ್ನು ಸೇರಿಸಿಕೊಂಡು ೧೧೦೭.೪೮ ಎಕರೆ ವಿಸ್ತೀರ್ಣ ಪಡೆದಿದೆ. ಆದರೆ ಕೊಡಗು ಶ್ರೀರಂಗಪಟ್ಟಣವು ೧೫೧೪.೭೫ ಎಕರೆ ವಿಸ್ತೀರ್ಣವನ್ನು ಮಾಲ್ದಾರೆಯ ೫೩೭೬.೪೫ ಎಕರೆ ವಿಸ್ತೀರ್ಣದೊಡನೆ ಸೇರಿಸಿ ೬೮೯೧.೨೦ ಎಕರೆ ಒಟ್ಟಾರೆ ವಿಸ್ತೀರ್ಣವಾಗಿ, ಮಾಲ್ದಾರೆಯ ಉಪಗ್ರಾಮವಾಗಿ ದಾಖಲಾಗಿದೆ. ಸುಮಾರು ಎಂಟು ಕಿ.ಮೀ. ದೂರದಲ್ಲಿ ಕೊಲ್ಲಿಯಾಚೆ ಸಿದ್ದಾಪುರವು ಇದೆ. ಈ ಕಾರಣದಿಂದಲೇ ಸಂಕುಚಿತಗೊಂಡ ಕೊಡಗು ಶ್ರೀರಂಗಪಟ್ಟಣದ ನೆಲೆ, 'ಸಿದ್ದಾಪುರ

---

24 ಸೂರ್ಯನಾಥ ಕಾಮತ್ : 'ಪುಣ್ಯಕ್ಷೇತ್ರ ಐತಿಹಾಸಿಕ ಕೇಂದ್ರ ಶ್ರೀರಂಗಪಟ್ಟಣ', ತರಂಗ (ವಾರಪತ್ರಿಕೆ), ಮೇ ೨೧ ೧೯೮೯, ಪು. ೨೦

25 ಬಾಚರಣಿಯಂಡ ಕೆ.ಅಣ್ಣಯ್ಯ: '೧೮೩೪ನೇ ಇಸವಿಲ್ ಕೊಡಗ್‌ಲ್ ಹಾಲೇರಿ ರಾಜಂಗಡ ಆಳ್ವಿಕೆಲ್ ಆಯಿಂಡ ಸ್ವಾಧೀನತ್ ಇಂಜ ೫೨೦ ಗ್ರಾಮತ್‌ರ ಪೆದ ಒಂಞಿ ೨೩ ಫಾರೆಸ್ಟರ್ ಪೆದ ಇನ್ನನೆ ಉಂಡ', ಬ್ರಹ್ಮಗಿರಿ ಪುತ್ತರಿ ವಿಶೇಷ ಸಂಚಿಕೆ, ಮಡಿಕೇರಿ, ೧೯೮೯, ಪು. ೮೧, ೮೬

26 *Circle List of Coorg Province for the Year 1935*, pp. 3, 23

ಸಮೀಪ ಮಾಲ್ದಾರೆ ಬಳಿ ಕೊಡಗು ಶ್ರೀರಂಗಪಟ್ಟಣ ವಿದೆ' ಎಂಬ ರೂಢಿಯೆ ದಾಖಲಾತಿಗೆ ಬಂದಿರುವಂತಿದೆ.

ಕೊಲ್ಲಿಗಳು ಹಾಗೂ ಕಾವೇರಿ ನಡುವಣ ಪ್ರದೇಶ, ಕಾವೇರಿಯ ಪೂರ್ವ–ಪಶ್ಚಿಮ ದಂಡೆಯ ಹಳ್ಳಿಗಳು, ಪ್ರಾಚೀನ ದೇಗುಲಗಳು, ಗದ್ದೆ, ತೋಟ, ಕೆರೆ, ಕಾಡು ಹಾಗೂ ಮಾನವ ವಾಸ್ತವ್ಯಗಳ ಸುಮಾರು ೨೦ ಸಾವಿರ ಎಕರೆಗಳ ವಿಸ್ತೀರ್ಣದ ನೆಲೆಗೆ ತನ್ನ ಹೆಸರನ್ನು ನೀಡಿದ 'ಪ್ರಾಚೀನ ಕೊಡಗು ಶ್ರೀರಂಗಪಟ್ಟಣವು' ಏಳು ಶತಮಾನಗಳ ತನ್ನ ಬದುಕನ್ನು ಇಂದು ಒಂದು 'ಬಿಂದು' ವಿನಷ್ಟು ವಿಸ್ತಾರದಲ್ಲಿ ಐಕ್ಯ ಮಾಡಿಕೊಂಡದ್ದು ಕಾಲ ಗರ್ಭದಲ್ಲಿನ ಒಂದು ವಿಪರ್ಯಾಸ.

ಒಟ್ಟಾರೆ ಈ ವಿವೇಚನೆಯಿಂದ ಈ ಮುಂದಿನ ಅಂಶಗಳನ್ನು ಸೂಚಿಸಬಹುದು :

೧. ಕೊಡಗು ಶ್ರೀರಂಗಪಟ್ಟಣವು ಕ್ರಿ.ಶ. ಸುಮಾರು ೧೨೨೦–೪೫ರ ನಡುವಣ ಅವಧಿಯಲ್ಲಿ ಉಗಮವಾಗಿರಬೇಕು.

೨. ಚಂಗಾಳ್ವರಸ ಬೊಪ್ಪದೇವನು ಹೊಯ್ಸಳ ಸೋಮೇಶ್ವರನ ಉತ್ತೇಜನದಿಂದ ಅದನ್ನು ವಿಸ್ತರಿಸಿದ ಮತ್ತು ಶ್ರೀರಂಗ ಹಾಗೂ ವೀರಭದ್ರನ ಗುಡಿಗಳನ್ನು ರೂಪಿಸಿದ.

೩. ಕೊಡಗು ಶ್ರೀರಂಗಪಟ್ಟಣದ ಚಂಗಾಳ್ವರ ಒಂದು ಶಾಖೆ ವಲಸೆ ಹೋಗಿ ಕೆಳದಿ ರಾಜವಂಶ ರೂಪಿತವಾಗಿರುವಂತಿದೆ.

೪. ಕೊಡಗು ಶ್ರೀರಂಗಪಟ್ಟಣದರಸರೊಡನೆ ವಿಜಯನಗರದ ಕೃಷ್ಣದೇವರಾಯನಿಗೆ ವೈವಾಹಿಕ ಸಂಬಂಧವಿರಲಿಲ್ಲ, ಆದರೆ ನಂತರದ ಮಾಂಡಲಿಕರು ನಂಜರಾಯಪಟ್ಟಣದ ಚಂಗಾಳ್ವ ರಾಜಕುಮಾರಿಯನ್ನು ಮದುವೆ ಆಗಿದ್ದರು.

೫. ಕೊಡಗು ಶ್ರೀರಂಗಪಟ್ಟಣವು ಹಾಲೇರಿ ಅರಸರ ಕಾಲದಲ್ಲಿ ನಂಜರಾಯಪಟ್ಟಣ ತಾಲೂಕಿಗೆ ಸೇರಿದ ಭಾಗವಾಗಿ ಇಂದು ಕಾಲಗರ್ಭದಲ್ಲಿ ಮರೆಯಾದರೂ ಜಾನಪದ ಮಾತ್ರ ಸದ್ಯಕ್ಕೆ ಅದರ ಸಾಂಸ್ಕೃತಿಕ ಎಳೆಯೊಂದನ್ನು ಜೀವಂತವಿಟ್ಟಿದೆ.

ಲಕ್ಷ್ಮಣ್ ತೆಲಗಾವಿ

ಚಿತ್ರದುರ್ಗ ಬೆಟ್ಟದ ಪೆರುಮಾಳೆಪುರ : ಮರುಶೋಧನೆ

ಹೊಯ್ಸಳ ಚಕ್ರವರ್ತಿ ಮುಮ್ಮಡಿ ನರಸಿಂಹನು (ಕ್ರಿ.ಶ. ೧೨೬೩–೧೨೯೧) ಚಿತ್ರದುರ್ಗ ಜಿಲ್ಲೆಯಲ್ಲಿಯೂ ತನ್ನ ಆಳ್ವಿಕೆ ನಡೆಸುತ್ತಿದ್ದ ಅವಧಿಯಲ್ಲಿಯೇ ಚಿತ್ರದುರ್ಗ, ಅಂದರೆ ಅಂದಿನ ಬೆ(ಬಿ)ಮ್ಮತ್ತನೂರು ವೃತ್ತಿ ಅಥವಾ ಪಟ್ಟಣದಲ್ಲಿ ಆಗ ಪ್ರಾಂತಾಧಿಕಾರಿ ಅಥವಾ ಮಹಾ ಮಂಡಲೇಶ್ವರನಾಗಿದ್ದವನು ಆತನ. ಮಹಾ ಪ್ರಧಾನರಲ್ಲಿ ಒಬ್ಬನಾಗಿದ್ದ ಪೆರುಮಾಳೆದೇವ ದಣ್ಣಾಯಕ. ಈತನು ರಟ್ಟವಂಶ, ಐತ್ರೇಯ ಗೋತ್ರದ ಬ್ರಾಹ್ಮಣ. ಈತನ ತಂದೆ ವಿಷ್ಣುದೇವ. ಸ್ವಾಮಿ ವಂಚಕರಗಂಡ, ರಾವುತ್ತರಾಯ, ಜವನಿಕೆ ನಾರಾಯಣ ಇತ್ಯಾದಿ ಅಭಿಧಾನಗಳಿಂದ ಕೂಡಿ, ಶ್ರೀರಾಮಕೃಷ್ಣಪಾದ ಪದ್ಮಾರಾಧಕನೆನಿಸಿ ಈ ಪೆರುಮಾಳೆದೇವನು ಶೋಭಿಸಿದ್ದಾನೆ. ಶೂರನೂ ಧರ್ಮನಿಷ್ಠನೂ ವಿದ್ಯಾಪಕ್ಷಪಾತಿಯೂ ಪ್ರಜಾಹಿತಕಾರ್ಯಗಳಲ್ಲಿ ಆಸಕ್ತನೂ ಆಗಿದ್ದವನೆಂದು ಸಮಕಾಲೀನ ಶಾಸನಗಳು ಈತನನ್ನು ವರ್ಣಿಸುತ್ತವೆ. ಈತನು ಅರಸನಿಗೆ ಪ್ರಿಯನಾದ ವ್ಯಕ್ತಿಯಾಗಿದ್ದು, ಅರಸನಿಂದ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ಬೆಳ್ಳೂರು ಪಕ್ಕದಲ್ಲಿಯ ಮೂರು ಗ್ರಾಮಗಳನ್ನು ಜಹಗೀರಾಗಿ ಪಡೆದಿದ್ದನೆಂಬುದು ಸಹಾ ಶಾಸನೋಕ್ತ. ಮೈಸೂರು ಜಿಲ್ಲೆಯ ಮಾಲಂಗಿಯಲ್ಲಿ ಕ್ರಿ.ಶ. ೧೨೯೦ರಲ್ಲಿ ವಿದ್ಯಾಲಯವೊಂದನ್ನು ಸ್ಥಾಪಿಸುವುದರೊಡನೆ ಈತನು ತನ್ನ ವಿದ್ಯಾಪಕ್ಷಪಾತವನ್ನು ತೋರಿದ್ದಾನೆ.

ತನ್ನ ಅಧಿಕಾರದ ಅವಧಿಯಲ್ಲಿ ಅಂದಿನ ಚಿತ್ರದುರ್ಗ ಪರಿಸರದಲ್ಲಿಯೂ ಈ ಪೆರುಮಾಳೆದೇವನು ಕೆಲವು ದೇವಾಲಯಗಳಿಗೆ ದತ್ತಿಕೊಡುಗೆ, ಕೆರೆನಿರ್ಮಾಣ, ಬ್ರಹ್ಮಪುರಿ ಸ್ಥಾಪನೆ ಮೊದಲಾದ ಸೇವಾಕಾರ್ಯಗಳನ್ನು ಕೈಗೊಂಡುದೆಂದು, ಇಲ್ಲಿ ದೊರೆತ ಕೆಲವು ಶಿಲಾಶಾಸನ ಇನ್ನಿತರ ಕಲ್ಲುಬರಹಗಳಿಂದ ವ್ಯಕ್ತಪಡುತ್ತದೆ.

ಚಿತ್ರದುರ್ಗ ಬೆಟ್ಟದಲ್ಲಿ ಈತನು ತನ್ನ ಹೆಸರಲ್ಲಿ ಮಾಡಿದ ಪೆರುಮಾಳೆಪುರ ಮತ್ತು ಅಲ್ಲಿ ಸ್ಥಾಪಿಸಿದ ಬ್ರಹ್ಮಪುರಿ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಮರುಶೋಧನೆ ಕೈಗೊಂಡು,ಅಲ್ಲಿ ಗಮನಿಸಲಾದ ಕೆಲವು ಸಂಗತಿಗಳನ್ನು ಈ ಪ್ರಬಂಧದಲ್ಲಿ ಹೇಳಲು ಪ್ರಯತ್ನಿಸಿದೆ.

೧

ಪೆರುಮಾಳೆದೇವ ದಣ್ಣಾಯಕನು ಹಾಕಿಸಿರುವ ಹಾಗೂ ಆತನ ಅವಧಿಯ ಕೆಲವು ಶಾಸನ ಮತ್ತು ಕಲ್ಲು ಬರಹಗಳ ಸಾರ ಇಂತಿದೆ :

೧. ಲೂಯಿರೈಸ್ ಅವರು ಪ್ರಕಟಿಸಿದ ಶಾಸನಗಳಲ್ಲಿ ಕ್ರಿ. ಶ. ಸು. ೧೨೮೫ರ ಬರಹವು ಚಿತ್ರದುರ್ಗ ಬೆಟ್ಟದ ಗೋಪಾಲಸ್ವಾಮಿ ಹೊಂಡದ ಮೇಲುಭಾಗದ ಹುಟ್ಟು ಬಂಡೆಯ ಮೇಲಿದ್ದು, "ಮಹಾಪ್ರಧಾನ ಪೆರುಮಾಳೆದೇವ ದಣ್ಣಾಯಕರು ತಾವು ಪೆರುಮಾಳೆಪುರವಾಗಿ ಮಾಡಿದ ಬ್ರಹ್ಮಪುರಿಗಿರಿ" ಎಂದು ಅರಹುತ್ತದೆ.[1] ಇದೇ ಬೆಟ್ಟದ ಹಿಡಂಬೇಶ್ವರ ದೇವಾಲಯದ ಕ್ರಿ. ಶ. ೧೨೮೬ರ

1 *EC.*, XI, Chitradurga 7

ಶಾಸನವು.[2] ನಗರೇರಸೀಮೆಯೊಳಗಣ ಕುರುಬರ ಕಾಳೇಯನ ಕೆರೆಯ ಪ್ರಾಪ್ತಕ್ಕೆ ಉಳ್ಳ ಗದ್ದೆಯನ್ನು ಉಭಯ ದ್ವಾದಶನಾಮಂಗಳಿಂದ (೧೨+೧೨) ಅಂದರೆ ೨೪ ವೃತ್ತಿಯನ್ನಾಗಿ ಮಾಡಿ, ಬೆಮ್ಮತ್ತನೂರದುರ್ಗದ ಹೂಲಿಯಬಾವಿಯಲ್ಲಿ ತಾನು ಮಾಡಿದ ಪೆರುಮಾಳೆಪುರದ ಬ್ರಹ್ಮಪುರಿಯ ಬ್ರಾಹ್ಮಣರಿಗೆ ಹಾಗೂ ಹಿಡಿಂಬೇಶ್ವರ, ಚೋಳೇಶ್ವರ ದೇವರುಗಳು ಮತ್ತು ಕೆಲವು ವ್ಯಕ್ತಿಗಳಿಗೆ ಧಾರಾಪೂರ್ವಕವಾಗಿ ಕೊಟ್ಟುದನ್ನೂ, ಹಾಗೆಯೇ ಈ ಪೆರುಮಾಳೆದೇವನು ಕುರುಬನಕಾಳೆಯನ ಕೆರೆಯನ್ನು ಕ್ರಯವಾಗಿ ಕೊಂಡು ತನ್ನ ಹೆಸರಿನಲ್ಲಿ 'ಪೆರುಮಾಳೆಸಮುದ್ರ'ವೆಂದು ಅದನ್ನು ಹೊಸದಾಗಿ ಕಟ್ಟಿಸಿ, ಪೆರುಮಾಳೆಪುರದಲ್ಲಿ ನಡೆಸುವ ಪಂಚಕೇಶ್ವರದ ಯಿಂದ್ರಪರ್ವ್ವದ ಧರ್ಮಕ್ಕೆ ಅದನ್ನು ಸರ್ವಮಾನ್ಯವಾಗಿ ಬಿಟ್ಟುಕೊಟ್ಟುದನ್ನೂ ಹೇಳುತ್ತದೆ. ಇದೇ ಬೆಟ್ಟದ ಪಶ್ಚಿಮ ದಿಕ್ಕಿನಲ್ಲಿರುವ ಅಂಕಲಿಮಠದ ಪಂಚಲಿಂಗೇಶ್ವರ ದೇವಾಲಯದಲ್ಲಿರುವ ಅದೇ ಅವಧಿಯ (ಕ್ರಿ. ಶ. ೧೨೮೬) ಇನ್ನೊಂದು ಶಾಸನವು.[3] ಇಲ್ಲಿಯ ಪಂಚಲಿಂಗದೇವರೊಳಗಾದ ದೇವರುಗಳಿಗೆ ಪೂಜೆ, ಉತ್ಸವಾದಿಗಳಿಗೂ ಪೆರುಮಾಳೆದೇವನು ಎಸಗೂರು ಕ್ಷೇತ್ರವನ್ನು ದತ್ತಿಕೊಟ್ಟುದನ್ನು ತಿಳಿಸುತ್ತದೆ.

೨. ಚಿತ್ರದುರ್ಗ ಬೆಟ್ಟದ ಪೂರ್ವಕ್ಕೆ ರಾಮದೇವರ ಸುತ್ತಿನಕೋಟೆಯು ಆವರಿಸಿದ್ದು, ಅದರ ಪಕ್ಕದಲ್ಲಿರುವ ರಾಮದೇವರ ಒಡ್ಡಿಗೆ ಹೊಂದಿಕೊಂಡಂತೆ ಬೃಹತ್ ಬಂಡೆಯ ಅಡಿಯಲ್ಲಿ ಹುಟ್ಟುಬಂಡೆಯ ಮೇಲೆ ಕೆತ್ತಲಾದ ಪೆರುಮಾಳೆದೇವನ ಕ್ರಿ.ಶ. ೧೨೮೬ರ ಇನ್ನೊಂದು ಶಾಸನ ಪಾಠದ ಇಂಗ್ಲಿಷ್ ಸಾರಾಂಶವನ್ನು ಆರ್. ನರಸಿಂಹಾಚಾರ್ ಅವರು ಪ್ರಕಟಿಸಿರುವರು.[4]

೩. ಡಾ॥ ಎಂ. ಎಚ್. ಕೃಷ್ಣ ಅವರು, ಲೂಯಿ ರೈಸ್ ಅವರು ಪ್ರಕಟಿಸಿದ ಶಾಸನದಲ್ಲಿಯ (ಚಿ. ೧೨) ಅಂಶವನ್ನು ಸಮರ್ಥಿಸುವ, ಅಂದರೆ ಬೆಮ್ಮತ್ತನೂರ ಹೂಲಿಯಬಾವಿಯಲ್ಲಿ ಪೆರುಮಾಳೆದೇವನು ಮಾಡಿದ ಪೆರುಮಾಳೆಪುರದ ಬ್ರಹ್ಮಪುರಿಯ ಬ್ರಾಹ್ಮಣರಿಗೆ ಕೊಟ್ಟ ಗದ್ದೆಯ ವಿಚಾರವನ್ನು ಪುಷ್ಟೀಕರಿಸುವ ಬರಹವುಳ್ಳ ಕಲ್ಲೊಂದನ್ನು ಚಿತ್ರದುರ್ಗದ ಗೋಪಾಲಪುರ ಮತ್ತು ಮೆದೇಹಳ್ಳಿಗಳ ಗಡಿಯಲ್ಲಿ ಶೋಧಿಸಿ ಪ್ರಕಟಿಸಿರುವರು.[5]

೪. ಪೆರುಮಾಳೆದೇವನು ಚಿತ್ರದುರ್ಗ ಬೆಟ್ಟದ ಬಂಡೆಯ ಮೇಲೆ ಬರೆಯಿಸಿದ ಬ್ರಹ್ಮಪುರಿಗೇರಿಯ ಸೂಚನೆಯುಳ್ಳ ಬರಹದ ಇನ್ನೊಂದು ಪಾಠವನ್ನೂ ಅರಕೆರೆವೊಳಗಣ ಶ್ರೀರಾಮನಾಥದೇವರಿಗೆ ಕ್ಷೇತ್ರವನ್ನು ಕೊಟ್ಟ, ಪಂಚಕೇಶ್ವರಕ್ಕಾಗಿ ಭೂಮಿಯನ್ನು ದಾನ ಮಾಡಿದ ಹಾಗೂ ಇಂದಿನ ಬರಗೆರೆ ಎಂಬುದೇ ಹಿಂದಿನ ಪೆರುಮಾಳೆಸಮುದ್ರವೆಂದು ದಾಖಲಿಸಿದ ಇನ್ನಿತರ ಬರಹಗಳನ್ನೂ ಬಿ. ರಾಜಶೇಖರಪ್ಪ ಅವರು ಚಿತ್ರದುರ್ಗದ ಸುತ್ತಮುತ್ತಲಲ್ಲಿ ಈಚೆಗೆ ಶೋಧಿಸಿರುವರು.[6]

೫. ಪೆರುಮಾಳೆದೇವನ ಅವಧಿಯದೇ ಆದ, ಚಿತ್ರದುರ್ಗ ಬೆಟ್ಟದ ಸಿದ್ಧ (ಚಂಪಕ ಸಿದ್ಧೇಶ್ವರ) ದೇವರಿಗೆ ಸೀಮೆಯೊಂದನ್ನು ಧಾರಾಪೂರ್ವಕವಾಗಿ ಕೊಟ್ಟಿರುವ ಸಂಗತಿಯುಳ್ಳ, ಬಂಡೆಶಾಸನ ಪಾಠವನ್ನು ಈ ಲೇಖಕನೂ ಈಚೆಗೆ ಬೆಳಕಿಗೆ ತಂದಿರುವನು.

೨

ಚಿತ್ರದುರ್ಗ ಬೆಟ್ಟದ ಪೆರುಮಾಳೆಪುರವನ್ನು ಹಾಗೂ ಅಲ್ಲಿಯ ಬ್ರಹ್ಮಪುರಿಯನ್ನು ಗುರುತಿಸುವ ದಿಸೆಯಲ್ಲಿ ವಿದ್ವಾಂಸರು ವಿವಿಧ ಅಭಿಪ್ರಾಯಗಳನ್ನೂ ನಿರ್ಣಯಗಳನ್ನೂ ಮಂಡಿಸಿರುವರು. ಲೂಯಿ ರೈಸ್ ಅವರು ಪ್ರಕಟಿಸಿದ ಪೆರುಮಾಳೆದೇವನ ಶಾಸನಪಾಠಗಳನ್ನು ಆಧರಿಸಿ ಡಾ॥ ಕೃಷ್ಣ ಅವರು, ೧೩ನೆಯ ಶತ

---

2 *Ibid.*, Chitradurga 12
3 *Ibid.*, Chitradurga 32
4 *MAR.*
5 *Ibid.*, 1939, No. 8, pp. 107-108
6 ಪತ್ರಿಕಾ ವರದಿಗಳು

ಮಾನದಲ್ಲಿ, ಅಂದರೆ ಹೊಯ್ಸಳರ ಅವಧಿಯಲ್ಲಿ ಚಿತ್ರದುರ್ಗ ಬೆಟ್ಟವನ್ನು ಬೆಮ್ಮತ್ತನಕಲ್ಲು ಅಥವಾ ಬ್ರಹ್ಮಪುರಿಗಿರಿಯೆಂದು ಕರೆಯಲಾಗುತ್ತಿದ್ದಿತೆಂದೂ ಅನಂತರ ಸ್ವಲ್ಪಕಾಲದವರೆಗೆ ಹೊಯ್ಸಳ ಪ್ರಾಂತಾಧಿಕಾರಿಯಿಂದಾಗಿ ಪೆರುಮಾಳೆಪುರವೆಂದು ಬದಲಾವಣೆಗೊಂಡಿತೆಂದೂ ವ್ಯಕ್ತಪಡಿಸಿರುವರಲ್ಲದೆ,[7] ಗೋಪಾಲಕೃಷ್ಣದೇವರ ಆರಾಧನೆ ಮತ್ತು ದೇವಾಲಯಗಳಿಗೆ ಸಲ್ಲಿಸಬೇಕಾದ ವಿವಿಧ ಸೇವೆಗಳಿಗೆ ಸಂಬಂಧಿಸಿದಂತೆ ಈ ಬ್ರಹ್ಮಪುರಿ ಅಥವಾ ಬ್ರಾಹ್ಮಣರ ವಸತಿಯು ನೆಲೆಯೂ ಸ್ಥಾಪನೆಯಾಗಿರಬೇಕೆಂದೂ ಉಲ್ಲೇಖಿಸಿರುವರು.[8]

ಹುಲ್ಲೂರು ಶ್ರೀನಿವಾಸ ಜೋಯಿಸರು, ಪೆರುಮಾಳೆ ಮಂತ್ರಿಯ ಶಾಸನಗಳಲ್ಲಿ ಶಂಕ–ಚಕ್ರಗಳೂ ವಾಮನಮುದ್ರೆಯೂ ಇರುವುದರಿಂದ ಇವನು ವೈಷ್ಣವನೆಂತಲೂ ಕುರುಬನಕಾಳೆಯ ಕೆರೆಯನ್ನು ತನ್ನ ಹೆಸರಿನಲ್ಲಿ ಪೆರುಮಾಳೆಸಮುದ್ರವೆಂದು ಹೊಸದಾಗಿ ಕಟ್ಟಿಸಿ, 'ಪಂಚಲಿಂಗೇಶ್ವರ' ದೇವರ ಐಂದ್ರಪರ್ವ ಧರ್ಮಕ್ಕೆ ದಾನ ಮಾಡಿದನೆಂತಲೂ ಬೆಮ್ಮತ್ತನೂರಿನ ಮೇಲು ದುರ್ಗದ ಮೇಲೆ ಒಂದು ಬ್ರಹ್ಮಪುರಿಯನ್ನು ನಿರ್ಮಿಸಿ ಅದಕ್ಕೆ ತನ್ನ ಹೆಸರಿನಲ್ಲಿ ಪೆರಮಾಳೆಪುರವೆಂದು ಕರೆದನೆಂತಲೂ[9] ಮೊದಲಿಗೆ ಬರೆದಿದ್ದು, ಅನಂತರದ ತಮ್ಮ ಲೇಖನದಲ್ಲಿ ಈತನ (ಪೆರುಮಾಳೆದೇವನ) ಪೆರುಮಾಳೆಪುರದ ಒಂದು 'ಕೇರಿ'ಯು ಬ್ರಹ್ಮಪುರಿಯಾಯಿತೆಂತಲೂ ಬಹುಶಃ ಈ ಹೊಸ ಪೆರಮಾಳೆಪುರವು ಈಗ (ಸರ್ಕಾರಿ ವಿಜ್ಞಾನ) ಕಾಲೇಜು ಕಟ್ಟಡ ನಿರ್ಮಿತವಾಗಿರುವ ಸ್ಥಳದಲ್ಲಿತ್ತೆಂದು ಊಹಿಸಬಹುದೆಂತಲೂ ಈ ಗುಡ್ಡಕ್ಕೆ ಬುದ್ಧಿವಂತರ ಮರಡಿ ಎನ್ನುವರೆಂತಲೂ[10] ಬರೆದಿರುವರು. ವಿಲಿಯಂ ಕೊಇಲೊ ಅವರು ಸಹಾ, ಕ್ರಿ.ಶ. ೧೨೮೫ರಲ್ಲಿ ಪೆರುಮಾಳೆದೇವನು ಬ್ರಹ್ಮಪುರಿ ಬೆಟ್ಟವನ್ನು ಪೆರುಮಾಳೆಪುರವೆಂದು ಮಾರ್ಪಡಿಸಿ, ಅಲ್ಲಿ ಬ್ರಾಹ್ಮಣರ ಕೇರಿಯೊಂದನ್ನು ಸ್ಥಾಪಿಸಿದನು ಎಂದಿರುವರು.[11]

ಬಂಡೆ ಬರಹದಲ್ಲಿ (ಚಿ. ೭) ಪ್ರಸ್ತಾಪಗೊಂಡ 'ಬ್ರಹಪುರಿ ಬೆಟ್ಟ'ವು ಈಗಿನ ನೆಲ್ಲಿಕಾಯಿ ಸಿದ್ದಪ್ಪನ ಬೆಟ್ಟವಿರಬಹುದೆಂತಲೂ ಅಭಿಪ್ರಾಯ ಪಟ್ಟಿದ್ದುಂಟು.[12] ಇದೇ ಬರಹದಲ್ಲಿಯ ಕಡೆಯ ಪಂಕ್ತಿಯಲ್ಲಿ ಬರುವ 'ಬ್ರಹ್ಮಪುರಿಗಿರಿ' ಎಂಬುದನ್ನು 'ಬ್ರಹ್ಮಪುರಿಗೇರಿ' ಎಂಬುದಾಗಿ ರಾಜಶೇಖರಪ್ಪ ಅವರು ಈ ಬರಹದ ಮರುಪರಿಶೀಲನೆಯಲ್ಲಿ ಸರಿಪಡಿಸುವುದರ ಮೂಲಕ 'ಬ್ರಹ್ಮಪುರಿಕೇರಿ'ಯ ಅಸ್ತಿತ್ವವನ್ನು ಸಮರ್ಥಿಸಿರುವರು. ಅವರು ಚಿತ್ರದುರ್ಗದ ಹಿಂದಿನ ಅನೇಕ ಹೆಸರುಗಳಲ್ಲಿ ಪೆರುಮಾಳೆಪುರವೆಂಬುದೂ ಒಂದೆಂದು ಹೇಳಲ್ಪಟ್ಟಿರುವುದು ಸರಿಯಲ್ಲವೆಂದೂ ಪೆರುಮಾಳೆ ಮಂತ್ರಿ ಬೆಮ್ಮತ್ತನೂರಿನಲ್ಲಿ ಬ್ರಾಹ್ಮಣರು ವಾಸಿಸುತ್ತಿದ್ದ ಭಾಗಕ್ಕೆ ಅಂದರೆ ಬ್ರಹ್ಮಪುರಿಗೆ ಮಾತ್ರ ಆ ಹೆಸರಿಟ್ಟನೇ ಹೊರತು ಇಡೀ ಬೆಮ್ಮತ್ತನೂರಿಗಲ್ಲವೆಂದೂ ಹೇಳಿರುವರು.[13]

೩

ಚಿತ್ರದುರ್ಗ ಬೆಟ್ಟದ ಮೇಲಿರುವ ಗೋಪಾಲಸ್ವಾಮಿಯ (ಶ್ರೀ ರಾಮಕೃಷ್ಣ ಗೋಪಾಲದೇವರ)[14] ವಿಗ್ರಹವು ಹೊಯ್ಸಳ ಕಲಾಶೈಲಿಯನ್ನು ಹೋಲುತ್ತ

7 *MAR.*, 1929, p. 15

8 *Ibid.*, 1939, No. 8, p. 108

9 'ಚಿತ್ರದುರ್ಗದ ಮಾತನಾಡುವ ಕಲ್ಲುಗಳು', ಸುಬೋಧ (ಮಾಸಿಕ), ೧೯೪೦, ಪು. ೩೫೮

10 'ಚರಿತ್ರಪುರ ಚಿತ್ರದುರ್ಗ', ಕನ್ನಡ ಗುಡಿ (ಮಾಸಿಕ), ೧೯೫೪, ಪು. ೨೨

11 *The Hoysala Vamsha,* Bombay, 1950, p.207

12 ಲಕ್ಷ್ಮಣ್ ತೆಲಗಾವಿ, ಕೆ. ವೆಂಕಣ್ಣಾಚಾರ್ (ಸಂ.) : ಐತಿಹಾಸಿಕ ಚಿತ್ರದುರ್ಗ, ಚಿತ್ರದುರ್ಗ, ೧೯೭೯, ಪು. ೪೬-೪೭ : ಸಂಪಾದಕರ ಅಡಿಟಿಪ್ಪಣಿ

13 i. 'ಚಿತ್ರದುರ್ಗದ ಪ್ರಮುಖ ಶಾಸನಗಳು', ಐತಿಹಾಸಿಕ ಚಿತ್ರದುರ್ಗ, ಪು. ೪೬ ; ii. 'ಶಾಸನಗಳ ಪರಿಶೀಲನೆ : ಒಂದು ತೀವ್ರ ಅಗತ್ಯ', ಹರತಿ ಸಿರಿ (ಹೆಚ್. ವಿ. ವೀರನಾಯಕ ನೆನಪಿನ ಸಂಪುಟ), ಹರ್ತಿಕೋಟೆ, ೧೯೮೭, ಪು. ೬೪೭-೪೮

14 *EC.*, XI Chitradurga 6, 1338 A.D.

ದೆಂದು ಗುರುತಿಸಲಾಗಿದೆ.[15] ಈಗ ಈ ದೇವಾಲಯದ ಮುಂಭಾಗದಲ್ಲಿ ಇರಿಸಲಾಗಿರುವ ಕ್ರಿ. ಶ. ೧೩೩೮ರ ಶಾಸನವು[16] ಹೇಳುವಂತೆ, ಹೊಯ್ಸಳ ಮುಮ್ಮಡಿ ವೀರ ಬಲ್ಲಾಳನ ಮಂತ್ರಿಗಳಲ್ಲೊಬ್ಬನಾಗಿದ್ದ ಹಿರಿಯ ಬಲ್ಲಪ್ಪ ದಣ್ಣಾಯಕನು ಚಿತ್ರದುರ್ಗದಲ್ಲಿ ಪ್ರಾಂತ್ಯಾಧಿಕಾರಿಯಾಗಿದ್ದಾಗ, ನಗರೇರಿಯನ್ನು ಗೋಪಾಲಪುರವಾಗಿ ಮರು ನಾಮಕರಣ ಮಾಡುವುದರೊಂದಿಗೆ ಈ ದೇವಾಲಯಕ್ಕೆ ದಾನ ನೀಡಿದನು. ಆಗ ಈ ದೇವಾಲಯದ ಸ್ಥಾನಿಕನಾಗಿದ್ದವನು 'ನಂಬಿಯಾರು ಗಡಬದೆಯ'. ಈ ವೇಳೆಗಾಗಲೇ ಈ ದೇವಾಲಯದ ಕಟ್ಟಡವು ನಿರ್ಮಾಣಗೊಂಡಿದ್ದಿತೆನ್ನುವುದಕ್ಕೆ ಅನ್ಯತ್ರ ಸೂಚನೆ ದೊರಕುತ್ತದೆ. ಪಾಂಚರಾತ್ರ ಸಂಪ್ರದಾಯದ ಶ್ರೀ ವೈಷ್ಣವ ದೇವಾಲಯಗಳಲ್ಲಿ ಆಳ್ವಾರರ ಸನ್ನಿಧಿಯಿರುವುದು ನಿಯಮವಾದ್ದರಿಂದ ಆಳ್ವಾರರುಗಳ ಶಿಲಾವಿಗ್ರಹಗಳನ್ನು ಇಲ್ಲಿಯೂ ವಿಶಾಲ ನವರಂಗದಲ್ಲಿ ಸ್ಥಾಪಿಸಲಾಗಿದೆ.[17] ಆ ನಂತರ ಇಲ್ಲಿ ಆಳ್ವಿಕೆ ನಡೆಸಿದವರ, ಮುಖ್ಯವಾಗಿ ನಾಯಕ ಅರಸರ ಅವಧಿಯಲ್ಲಿ ಈ ದೇವಾಲಯವನ್ನು ಮರುನಿರ್ಮಾಣಗೊಂಡಿದ್ದಿರಬೇಕು. ಇಲ್ಲಿಯ ಲಕ್ಷಣಗಳಿಂದ ಅದು ಕಾಲಾಂತರದ ಕಟ್ಟಡ ಎನ್ನುವುದು ಖಚಿತಪಡುತ್ತದೆ.[18]

ಗೋಪಾಲಕೃಷ್ಣ ದೇವಾಲಯ ಪರಿಸರವು ಶ್ರೀ ವೈಷ್ಣವ–ವೈಷ್ಣವ ಕ್ಷೇತ್ರವಾಗಿದ್ದಿತೆಂಬುದು ಇಲ್ಲಿಯ ಕೆಲವು ಸ್ಮಾರಕಗಳಿಂದ ದೃಢಪಡುತ್ತದೆ. ಇವುಗಳಲ್ಲಿ ಮುಖ್ಯವಾದುವೆಂದರೆ, ಗರುಡಾಂಜನೇಯ ಬಾಗಿಲು, ಶೃಂಗಾರತೋಟದ ಬಯಲು, ಅರಮನೆ ಆವರಣ, ಸುಬ್ರಹ್ಮಣ್ಯೇಶ್ವರ ದೇವಾಲಯ, ಇತ್ಯಾದಿ. 'ಪೆರುಮಾಳೆಪುರ ವಿಸ್ತರಣ'ವನ್ನು ಗುರುತಿಸುವ ದಿಸೆಯಲ್ಲಿ ಇವು ಮುಖ್ಯಪಾತ್ರವಹಿಸುತ್ತವೆ ಎನ್ನಬಹುದು. ಹಾಗೆಯೇ, ಶಾಸನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಹೂಲಿಯ ಕೆರೆ–ಹೂಲಿಯ ಬಾವಿಗಳು ಸಹಾ[19] ಈ ಸಂಬಂಧದಲ್ಲಿ ಗಮನಾರ್ಹವಾದುವು.

ಹೊಯ್ಸಳರ ಅವಧಿಯ ಶಾಸನಗಳಲ್ಲಿ ಚಿತ್ರದುರ್ಗಕ್ಕೆ ಸಂಬಂಧಿಸಿದಂತೆ ಕಂಡುಬರುವ ಪ್ರದೇಶ ವಾಚಕಗಳೆಂದರೆ, ಬೆ(ಂ)ಮ್ಮತ್ತೂರಪಟ್ಟಣ (ಕ್ರಿ.ಶ.ಸು. ೧೨೧೪ : ೧೨೮೬), ಬೆಂಮತ್ತನೂರು (ಕ್ರಿ.ಶ. ೧೨೩೫; ೧೨೮೬) ಹಾಗೂ ಬೆಂಮತ್ತನೂರ ವಿತ್ತಿ, ಬೆಮ್ಮತ್ತನೂರ ದುರ್ಗ (ಕ್ರಿ.ಶ. ೧೨೮೬). ಪೆರುಮಾಳೆದೇವನ ಶಾಸನಗಳಲ್ಲಿ ಚಿತ್ರದುರ್ಗವನ್ನು ಆಯಾ ಸಂದರ್ಭವನ್ನನುಸರಿಸಿ ವ್ರಿತ್ತಿ, ಪಟ್ಟಣ ಹಾಗೂ ದುರ್ಗವೆಂದು ಸಂಬೋಧಿಸಲಾಗಿದೆ. ವ್ರಿತ್ತಿ ಮತ್ತು ಪಟ್ಟಣಗಳಂತೆ 'ದುರ್ಗ' (ಈಗಿನ ಕೋಟೆಯ ಪ್ರದೇಶ)ವೂ ಪ್ರತ್ಯೇಕ ಆಡಳಿತ ವಿಭಾಗವಾಗಿ ಪರಿಗಣಿಸಲ್ಪಟ್ಟಿದ್ದಿತೆಂದು ಇದರಿಂದ ಸ್ಪಷ್ಟ ಪಡುತ್ತದೆ.

ಹೂಲಿಯ ಕೆರೆ/ಬಾವಿ : ಕರ್ನಾಟಕದಲ್ಲಿ ಹೂಲಿ/ಹುಲಿ ಆದಿಪ್ರತ್ಯಯವುಳ್ಳ ಹಲವಾರು ಎಡೆಗಳಿವೆ ಉದಾ. : ಹೂಲಿ, ಹೂಲಿಗುಂಡಿ, ಹೂಲಿಯಕೆರೆ, ಹೂಲಿಯ ಕೊಳ, ಹೂಲಿಕಲ್ಲು, ಹೂಲಿಕಟ್ಟೆ, ಹೂಲಿಹಳ್ಳಿ, ಹೂಲಿಕೇರಿ, ಹೂಲಿಗೊಡ್ಡ, ಹೂಲಿಕೊತ್ತಳ ; ಹುಲಿಕಲ್ಲು, ಹುಲಿಕಲ್‌ಸ್ಥಳ, ಹುಲಿಯಕಟ್ಟೆ, ಹುಲಿಕಟ್ಟೆ ಗದ್ದೆ, ಹುಲಿ(ಲೆ)ಯ ಕೆರೆ, ಹುಲಿಗೆರೆ, ಹುಲಿಕೇರಿ, ಹುಲಿ ಕುಂಟೆ, ಹುಲಿಹೊಂಡ, ಹುಲಿಬೆಲೆ, ಹುಲಿಮಂಗಲ, ಹುಲಿಗುಂಡಿ, ಹುಲಿದೊರೆ, ಹುಲಿಕವಿ, ಹುಲಿಗೊಪ್ಪ, ಹುಲಿಕಾಡು, ಹುಲಿವನ, ಹುಲಿಗುಂಡ್ಲ, ಹುಲಿಹಳ್ಳಿ, ಹುಲಿಕುರ, ಹುಲಿಯಹಾಪುರ, ಹುಲಿಗೆರೆಪುರ, ಹುಲಿ

15 *MAR.*, 1929, p. 21

16 *EC*., XI, Chitradurga 6

17 ಇಲ್ಲಿರುವ ೧೧ ವಿಗ್ರಹಗಳು : ಪೆರಿಯಾಳ್ವರ್, ತಿರುಮಂಗೈಯಾಳ್ವಾರ್, ಪುದುತ್ತಾಳ್ವಾರ್, ಪೊಯ್‌ಹಯಾಳ್ವಾರ್, ಆಳವಂದಾರ್, ನಾಥಮುನಿ, ಕುಲಶೇಖರಾಳ್ವಾರ್, ತೊಂಡರಾಳ್ವಾರ್,ಭಾಷ್ಯಾಕಾರ, ಮಧುರಕವಿ ಮತ್ತು ನಮ್ಮಾಳ್ವಾರ್

18 ಈ ದೇವಾಲಯದ ನವರಂಗವನ್ನು ಪ್ರವೇಶಿಸಲು ಇರುವ ಕಿರಿದಾದ ಬಾಗಿಲಿನ ಮೇಲೆ ಒಳಮುಖದಲ್ಲಿ, ಗರ್ಭಗುಡಿಗಭಿಮುಖವಾಗಿ ರಾಜಪುರುಷನೋರ್ವನು ಸಾಲ್ವರು ಸ್ತ್ರೀಯರೊಡನೆ ಕೈಜೋಡಿಸಿ ನಿಂತಿರುವ ಶಿಲ್ಪವನ್ನು ಅಳವಡಿಸಲಾಗಿದೆ. ಬಹುಶಃ ಇದು ಈ ದೇವಾಲಯವನ್ನು ವಿಸ್ತರಿಸಿದ ನಾಯಕನೋರ್ವನ ಮತ್ತು ಅವನ ನಾಗತಿಯರ ಶಿಲ್ಪವಿರಬಹುದು.

19 *EC.*, XI, Chitradurga 36, 1199 A.D. ; 23, 1128 A.D. and 12, 1286 A.D. ; *MAR.*, 1939, 8 1286 A.D.

ಯಹಾಳ, ಇತ್ಯಾದಿ. ಇವುಗಳಲ್ಲಿ ಕೆಲವು ಶಾಸನೋಕ್ತ. ಇಲ್ಲಿ ಹೂಲಿ/ಹುಲಿಯೊಡನಿರುವ ಕೆಲವು ಅಂತ್ಯ ಪ್ರತ್ಯಯಗಳು ನಿಸರ್ಗ/ಕೃತಕ ಜಲಾಶಯ ಸೂಚಿಗಳಾಗಿಯೂ ಇನ್ನುಳಿದವುಗಳಲ್ಲಿ ಬಹುಪಾಲು ಊರು, ಸ್ಥಳ ಮೊದಲಾದ ಆಡಳಿತ ವಿಭಾಗ ಸೂಚಿಗಳಾಗಿಯೂ ಇವೆ. ಅಲ್ಲದೆ, ಇಲ್ಲಿಯ ಕೆಲವು ಸ್ಥಳನಾಮಗಳಲ್ಲಿ ಜನಪದರ ಸುಲಭೋಚ್ಚಾರಣೆಯ ಪರಿಣಾಮವಾಗಿ 'ಹೂಲಿ'ಯು 'ಹುಲಿ'ಯಾಗಿರುವ ಸಾಧ್ಯತೆಯೂ ಇಲ್ಲದಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡುಬರುವ ಇಂತಹ ಕೆಲವು ಸ್ಥಳವಾಚಕಗಳೆಂದರೆ ಹೂಲಿಕುಂಟೆ (ಚಳ್ಳಕೆರೆ), ಹುಲಿಕಟ್ಟೆ(ದಾವಣಗೆರೆ), ಹುಲಿತೊಟ್ಲು(ಹಿರಿಯೂರು), ಹುಲಿಕೆರೆ, ಹುಲೆಮಳಲಿ (ಹೊಳಲ್ಕೆರೆ), ಇತ್ಯಾದಿ. ಚಿತ್ರದುರ್ಗ ತಾಲ್ಲೂಕಿನ ಶಾಸನಗಳಲ್ಲಿ ಉಲ್ಲೇಖಗೊಂಡುವೆಂದರೆ ಹೂಲಿಯಕೆರೆ (ಚಿ. ೩೬, ಕ್ರಿ. ಶ. ೧೧೯೯), ಹೂಲಿಯಕೆರೆ ಮತ್ತು ಹುಲಿಯಗೊಂದಿ(ಚಿ. ೨೩, ಕ್ರಿ.ಶ. ೧೨೦೫), ಹುಲಿಯಗೊಂದಿ (ಚಿ.೩೨, ಕ್ರಿ.ಶ. ೧೨೮೬), ಹೂಲಿಯಬಾವಿ (ಚಿ. ೧೨ ಮತ್ತು ೮, ಕ್ರಿ.ಶ. ೧೨೮೬). ಇದೇ ತಾಲ್ಲೂಕಿನ 'ಹುಲಿಗೆರೆ' ಹೆಸರಿನ ಇನ್ನೊಂದು ಗ್ರಾಮವು ಈಗ ಬೇಚಿರಾಕ್ ಎಂದು ಗುರುತಿಸಲ್ಪಟ್ಟಿದೆ.

'ಹೂಲಿ' ಎಂಬುದಕ್ಕೆ ಹೂಲಿಬೆಣ್ಣು. ಎ(ಲ)ಲೆ ಹೂಲಿ, ಕರೇಹೂಲಿ ಇತ್ಯಾದಿಯಾಗಿ ಸಸ್ಯಮೂಲದ ಇತರ ಪದಗಳನ್ನು ಸೂಚಿಸಿದೆ.[20] ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಹೂಲಿಯ ಮೂಲರೂಪಗಳು– ಶಾಸನಗಳ ಪ್ರಕಾರ ಪೂವಲ್ಲಿ, ಪೂಲಿಗ್ರಾಮ, ಪೂಲಿಪುರ, ಪೂಲಿಅಗ್ರಹಾರ, ಮಹಾಗ್ರಹಾರ ಪೂಲಿ, ಚೂಡಾಮಣಿ ಪೂಲಿ, ಇತ್ಯಾದಿ.[21] 'ಪೂವಲ್ಲಿ' ಎಂಬುದಕ್ಕೆ ಹೂವಿನ ತೋಟ ಅಥವಾ ಊರು ಎಂಬ ಅರ್ಥವಿರಬಹುದೇ? ಈ ಶಬ್ದದ ಹತ್ತಿರದ ರೂಪವೆಂದು ತೋರುವ 'ಹೂವಲಿ' ಎಂಬುದಕ್ಕೆ ರಂಗವಲ್ಲಿ, ಬೈತಲಿನ ಮೇಲೆ ಹಾಕಿಕೊಳ್ಳುವ ಆಭರಣವೆಂತಲೂ ಹೇಳಿದೆ.[22] ಇಲ್ಲಿ ಶೃಂಗಾರ, ಅಲಂಕಾರಗಳಿಗೇ ಸಂಬಂಧಿಸಿದಂತೆ ಸೂಚನೆಯಿದೆ. ಹೂಲಿ(ಪೂವಲ್ಲಿ)ಯು ೧೧-೧೨ನೆಯ ಶತಮಾನದಲ್ಲಿ, ಚಾಲುಕ್ಯರ ಆಳ್ವಿಕೆಯಲ್ಲಿ ಪ್ರಸಿದ್ಧ ಕಾಳಮುಖ ಕ್ಷೇತ್ರವಾಗಿದ್ದಿತು. ಪಂಚಲಿಂಗೇಶ್ವರ ದೇವಾಲಯವೂ ಸೇರಿದಂತೆ ಪ್ರಮುಖ ೧೨ ದೇವಾಲಯಗಳು ಈಗಲೂ ಇಲ್ಲಿ ಕಂಡುಬರುತ್ತವೆ.[23]

---

20 F. Kittel : *A Kannada English Dictionary*, New Delhi, 1983, pp. 280, 376 and 1673

21 Suryanath U. Kamath (Ed.) : *Belgaum District Gazetteer*, Bangalore, 1987, p. 289

22 ಎನ್ಕೆ (ಸಂ.) : ಕುಮಾರವ್ಯಾಸ ನಿಘಂಟು, ಧಾರವಾಡ, ೧೯೭೧, ಪು. ೬೭

23 ಚಿತ್ರದುರ್ಗದ ಹುಲೇಗೊಂದಿಯ ಪಂಚಲಿಂಗದೇವರ ಗುಡಿ ಮತ್ತು ಅದಕ್ಕೆ ಹೊಂದಿಕೊಂಡಿರುವ ಅಂಕಲಿಮಠಗಳನ್ನು ಈ ಸಂಬಂಧದಲ್ಲಿ ಗಮನಿಸಬಹುದು. ಇಲ್ಲಿ ಆಳಿದ ಶಾತವಾಹನರ ಕಾಲದಿಂದ ಮೊದಲಾಗಿ ಈ ಪರಿಸರವು ಬೌದ್ಧ, ಜೈನ, ವೈಷ್ಣವ ಮತ್ತು ಶೈವ ತೀರ್ಥವಾಗಿ ಬೆಳೆದು ಬಂದಂತೆ ತೋರುತ್ತದೆ. ಆಯಾ ಪಂಥಗಳಿಗೆ ಸಂಬಂಧಿಸಿದ ಶಾಸನಗಳೂ ಸ್ಮಾರಕಗಳೂ ಉಳಿದು ಬಂದಿವೆ. ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಅಂಕಲಿಮಠವು ವಿದ್ಯಾಕೇಂದ್ರವಾಗಿ ಮಾರ್ಪಟ್ಟಿರಬಹುದು. ಕ್ರಿ.ಶ. ೬-೭ನೆಯ ಶತಮಾನಗಳಿಂದೀಚೆಗೆ ಕರ್ನಾಟಕದಲ್ಲಿ ಲಾಕುಳ ಶೈವವು ಪ್ರಚಾರವಾದ ಬಳಿಕ ದೇವಸ್ಥಾನದ ಅಂಗವಾಗಿ ಮಠಗಳು ಕಾಣಿಸಿಕೊಳ್ಳಲಾರಂಭಿಸಿದ್ದು, ಕ್ರಮೇಣ ಹುಲೇಗೊಂದಿಯ ಪಂಚಲಿಂಗದೇವರ ಗುಡಿಯ ಅಂಗವಾಗಿ ಅಂಕಲಿಮಠವು ಅಸ್ತಿತ್ವಕ್ಕೆ ಬಂದಿರಬಹುದು. ಬಳ್ಳಿಗಾವೆಯ ಪಂಚಲಿಂಗೇಶ್ವರ ದೇವಾಲಯದ ೧೧ನೆಯ ಶತಮಾನದ ಶಾಸನದಲ್ಲೂ ಅಂಕಲಿ ಮಠದ ಪೆರುಮಾಳಿದೇವನ ಶಾಸನದಲ್ಲಿರುವಂತೆಯೇ ("ಆ ಚಿಂಮತ್ತನೂರ ಹುಲಿಯಗೊಂದಿಯ ಹತ್ತಿರೆಯ ಪಾಂಡವ ಪ್ರತಿಷ್ಠೆಯ ತೀರ್ಥ") ಪಾಂಡವರ ಪ್ರಸ್ತಾಪವಿದ್ದು, ಪಂಚಲಿಂಗಗಳನ್ನು ಸ್ಥಾಪಿಸಿದ ವಿವರವಿದೆ. ನಂದೀಶ್ವರನ ಘಟನೆಯ ಹಿನ್ನೆಲೆಯಲ್ಲಿ ಆತನ ನೆಲೆಯೇ ಪಂಚಲಿಂಗೇಶ್ವರ ದೇವಾಲಯವಾಗಿದೆಯೆನ್ನುವುದು ಗಮನಾರ್ಹ. ಅಂಕಲಿ ಮಠದ ಹೊರಮಂಟಪದಲ್ಲಿ ಇರುವ ಹಾಗೂ ಈಗ ಬರಿದಾಗಿರುವ ಕೋಣೆ(ಪರದೇಸಪ್ಪನ ನೆಲಗವಿಮಠದೊಳಗೆ ಪ್ರವೇಶಿಸುವ ದ್ವಾರದ ಪಕ್ಕದ ಕೋಣೆ)ಯಲ್ಲಿ ನಂದಿ ವಿಗ್ರಹವನ್ನು ಇರಿಸಲಾಗಿದ್ದಿತೆಂಬ ಸಂಗತಿಯು ಇದನ್ನು ಸಮರ್ಥಿಸುವಂತೆ ತೋರುತ್ತದೆ. ಅಲ್ಲದೆ, ಬಳ್ಳಿಗಾವೆಯಲ್ಲಿ ಪಂಚಲಿಂಗೇಶ್ವರ ದೇವಾಲಯದ ಪಕ್ಕದಲ್ಲೇ ಇದ್ದ ಕಲ್ಲುಮಠದಲ್ಲಿ ವೀರಶೈವ

ಚಿತ್ರದುರ್ಗ ತಾಲ್ಲೂಕಿನ ಮೆದಕೆರೆಪುರ ಮತ್ತು ಗೋನೂರುಗಳ ಮಧ್ಯದಲ್ಲಿರುವ ಕಲ್ಲೇದೇವರ ಗುಡಿಯ ಮುಂದಿನ ಚಾಲುಕ್ಯ ತ್ರಿಭುವನಮಲ್ಲನ ಶಾಸನಕಲ್ಲಿನಲ್ಲಿ (ಈಗ ತುಂಡಾಗಿದೆ ; ಚಿ.೩೬), ಸೋಮೇಶ್ವರ ದೇವರಿಗೆ ಬಿಟ್ಟ ಭೂಮಿಯ ನಾಲ್ದೆಸೆಯ ಎಲ್ಲೆಗಳನ್ನು ಹೇಳು ವಾಗ ಪಶ್ಚಿಮಕ್ಕೆ ಕೆರೆಯನ್ನೂ (ಇದು ಗೋನೂರು ಕೆರೆಯೆಂಬುದು ಸ್ಪಷ್ಟ) ಪೂರ್ವಕ್ಕೆ ಮೊರಡಿಹಳ್ಳವನ್ನೂ ಇದರೊಡನೆ ಸುಮಾರು ದಕ್ಷಿಣದಿಂದ ನೈರುತ್ಯಕ್ಕೆ ಹೂಲಿಯಕೆರೆಯ ಹಿಂಬದಿಯನ್ನೂ ಗುರುತಿಸಿದೆ. ಇಲ್ಲಿ ಹೂಲಿಯಕೆರೆಯು ಚಿತ್ರದುರ್ಗ ಪರಿಸರದ ಕೆರೆಯಾಗಿದ್ದು, ಜಲಾಶಯ ಸೂಚಿಯೆನಿಸಿದೆ.

ಕಸಬಾ ಹೋಬಳಿ ಗಂಜಿಗಟ್ಟೆ ಗ್ರಾಮದ ಬಳಿ ಪಾಂಡುರಂಗ ಬೆಟ್ಟದ ಮೇಲೆ ಜನ್ನೇಶ್ವರ ದೇವಾಲಯದ ಮುಂದೆ ನಿಂತಿರುವ ಹೊಯ್ಸಳ ವೀರಬಲ್ಲಾಳನ ಕ್ರಿ.ಶ. ೧೨೦೫ರ ಶಾಸನದಲ್ಲಿ (ಚಿ. ೨೩), ಹೂಲಿಯಕೆರೆಯನ್ನು ಧರ್ಮೇಶ್ವರ ದೇವರಿಗೆ ಧಾರಾಪೂರ್ವಕ ಮಾಡಿ ಬಿಟ್ಟಂತೆ ಹೇಳಿದೆ. ಇಲ್ಲಿ ಹೂಲಿಕೆರೆಯ ನಾಲ್ಕೂ ದಿಕ್ಕಿನ ಸೀಮಾ ವಿವರಗಳಿವೆ. ಇವುಗಳನ್ನು ಗಮನಿಸಿದರೆ ಚಿತ್ರದುರ್ಗ ಪರಿಸರದ ಹೂಲಿಕೆರೆಗೂ ಇದಕ್ಕೂ ಸಂಬಂಧವಿಲ್ಲವೆನ್ನು ವುದು ವ್ಯಕ್ತಪಡುತ್ತದೆ. ಅದು ಹಿಂದಿನ ಹೊಳಲ್ಕೆರೆ ನಾಡಿಗೆ ಸೇರಿದ ಪ್ರದೇಶವಾಗಿದ್ದಿತು. ಆದರೆ ಈ ಶಾಸನ ದಲ್ಲಿ ಚಿತ್ರದುರ್ಗ ಬೆಟ್ಟದ ಪಶ್ಚಿಮ ದಿಕ್ಕಿನಲ್ಲಿರುವ 'ಹುಲಿಯಂಗೊಂದಿ'ಯ ಪ್ರಸ್ತಾಪವಿರುವುದು ಗಮ ನಾರ್ಹ.

ಮೇಲೆಯೇ ಹೇಳಿದಂತೆ, ಚಿತ್ರದುರ್ಗ ಬೆಟ್ಟದ ಹಿಡಂಬೇಶ್ವರ ದೇವಾಲಯದ ನವರಂಗದಲ್ಲಿ ನಿಲ್ಲಿಸಿರುವ ಕ್ರಿ.ಶ. ೧೨೮೬ರ ಶಾಸನವು (ಚಿ. ೧೨), ಪೆರುಮಾಳೆ ದೇವನು ತನ್ನ ಹೆಸರಿನಲ್ಲಿ ಬೆಮ್ಮತ್ತನೂರದುರ್ಗದ ಹೂಲಿಯಬಾವಿಯಲ್ಲಿ ಮಾಡಿದ ಪುರದ ಸಂಗತಿಯನ್ನು ಗೋಪಾಲಪುರ ಮತ್ತು ಮೆದೆಹಳ್ಳಿಯ ಗಡಿಯಲ್ಲಿರುವ ಕಲ್ಲೊಂದು ನಿರ್ದೇಶಿತವಾದ ಇದೇ ಅವಧಿಯ ಪೆರುಮಾಳೆಯ ಇನ್ನೊಂದು ಶಾಸನವು[24] ಸಮರ್ಥಿಸುತ್ತದೆ.

ಅಕ್ಷರಾಭ್ಯಾಸದ 'ಅಂಕಲಿಪಿಮಠ'ವಿದ್ದು, ಅಲ್ಲಿ ಮಠದ ಅಯ್ಯನವರು ಬಾಲಕರಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದರಂತೆ. ಚಿತ್ರದುರ್ಗದ ಅಂಕಲಿಮಠದ ವ್ಯವಸ್ಥೆಗೆ ಇದು ಸಂಪೂರ್ಣ ಹೊಂದುತ್ತದೆನ್ನಬಹುದು. ಅಂಕಲಿಮಠದ ಒಟ್ಟು ರಚನೆಯೇ ಇದನ್ನು ಪುಷ್ಟೀಕರಿಸುತ್ತದೆ.

ವೀರಶೈವದ ಉತ್ಕರ್ಷದ ಎದುರು ನಿಲ್ಲಲಾರದ ಕಾಳಾಮುಖಪಂಥವು ಕೊನೆಗೆ ಅದರಲ್ಲೇ ವಿಲೀನಗೊಂಡುದು ಹಾಗೂ ರಾಜಪೂಜಿತ ಶೈವಗುರುಗಳ ಹೆಸರಾಂತ ಕೇಂದ್ರವೆನಿಸಿದ್ದ ಪೂವಲ್ಲಿ(ಹೂಲಿ)ಯ ಮಠವು ಈಗ ಪ್ರಸಿದ್ಧ ವೀರಶೈವ ಮಠವಾಗಿರುವುದೇ ಅದಕ್ಕೆ ಉದಾಹರಣೆಯಾಗಿರುವುದು ಉಲ್ಲೇಖನೀಯ. ಇಂಥದೇ ಹಿನ್ನೆಲೆಯಲ್ಲಿ ಬೆಳೆದಿರಬಹುದಾದ ಅಂಕಲಿಮಠವು ಸಹಾ ಈಗ ಪ್ರಸಿದ್ಧ ವೀರಶೈವ ಪೀಠವೆನಿಸಿದ ಚಿತ್ರದುರ್ಗದ ಶ್ರೀ ಬೃಹನ್ಮಠದ ಅಧೀನಕ್ಕೊಳಪಟ್ಟಿದೆ. 'ಅಂಕಲಿಮಠದ ಊಟ, ಮುರಗೀಮಠದ ನೋಟ' ಎಂಬ ಜನಪ್ರಿಯ ಹೇಳಿಕೆಯು ಅಂಕಲಿಮಠವು ಅನ್ನದಾಸೋಹ ನಡೆಸುತ್ತಿದ್ದ ಕೇಂದ್ರವಾಗಿದ್ದಿತೆಂಬುದನ್ನು ಪುಷ್ಟೀಕರಿಸುತ್ತದೆ. 'ಚಿನ್ಮೂಲಾದ್ರಿ ಹುಲಿಗೊಂದಿಮಠದ ಅಡವಿಯೋಗೀಂದ್ರ ಮಹಾಸ್ವಾಮಿ'ಗಳವರು ಅಂಕಲಿಮಠದಲ್ಲಿ ನೆಲೆಸಿದ್ದಿರಬೇಕೆಂಬ ಅಭಿಪ್ರಾಯವೂ ಇದೆ. ಶ್ರೀ ಬೃಹನ್ಮಠದ ಶ್ರೀ ಜಯದೇವ ಸ್ವಾಮಿಗಳವರ ಕಾಲದಲ್ಲಿ ಮುಳುಗಾಯಿ ಸಿದ್ದಲಿಂಗೇಶ್ವರ ಸ್ವಾಮಿಗಳೆಂಬುವರು ಇಲ್ಲಿ ತಂಗಿದ್ದರು. ಬೆಳಗಾವಿ ಜಿಲ್ಲೆ ಅಂಕಲಗಿಯ ಸ್ವಾಮಿಗಳ ಮತ್ತು ಚಿತ್ರದುರ್ಗ ಅಂಕಲಿಮಠದ ಸಂಬಂಧವನ್ನು ಕುರಿತು ಸಂಶೋಧನೆ ಆಗಬೇಕಿದೆಯೆಂಬ ಆಶಯ ಹಾಗೂ ಅಂಕಲಿಸ್ವಾಮಿಗಳೆಂಬುವರು ಮೂಡಣದಿಕ್ಕಿನ ಹೇಮಾವತಿ–ಹೊದ್ದಿಗ್ಗೆರೆಯ ಸಮೀಪದಿಂದ ಬಂದವರು: ಅಂಕಲಿಮಠಕ್ಕೂ ಬೆಳಗಾವಿ ಜಿಲ್ಲೆಯ ಅಂಕಲಗಿ ಮಠದ ಸ್ವಾಮಿಗಳಿಗೂ ಸಂಬಂಧವಿಲ್ಲ, ಇತ್ಯಾದಿ ಹೇಳಿಕೆಗಳ ಹಿನ್ನೆಲೆಯಲ್ಲಿ ಈ ಮಠದ ಆಮೂಲಾಗ್ರ ಶೋಧನೆ ಆಗಬೇಕಿದೆ. ಇಲ್ಲಿ ಹೇಳಬೇಕಾದ ಇನ್ನೊಂದು ಸಂಗತಿಯೆಂದರೆ, ಅಂಕಲಿಮಠವು ಮೂಲದಲ್ಲಿ ವಿದ್ಯಾಕೇಂದ್ರವೆನಿಸಿ, ಬಳ್ಳಿಗಾವೆಯಲ್ಲಿರುವಂತೆ 'ಅಂಕಲಿಪಿ ಮಠ'ವೇ ಆಗಿರುವ ಸಾಧ್ಯತೆಯಿದ್ದು, ಆ ಹೆಸರೇ 'ಅಂಕಲಿಮಠ'ವಾಗಿದ್ದಿರಲೂಬಹುದು. ಈ ಎಲ್ಲ ಅಂಶಗಳ ಬಗೆಗೆ ಅಧ್ಯಯನ ಮುಂದುವರೆದಿದೆ. ಒಟ್ಟಿನಲ್ಲಿ, ಹೂಲಿ-ಹೂ(ಹು)ಲಿಗೊಂದಿ-ಪಂಚಲಿಂಗದೇವರ ನೆಲೆ ಇವುಗಳ ಪರಸ್ಪರ ಸಂಬಂಧವು ಕುತೂಹಲಕಾರಿಯಾದುದು.

24 ಚಿತ್ರದುರ್ಗದಿಂದ ಮಲ್ಲಾಪುರದ ಕೆರೆಗೆ ಹೋಗುವ ಬಂಡಿಜಾಡಿನ ಎಡಬದಿಯಲ್ಲಿ ಎನ್. ಬಿ. ಹನುಮಂತಪ್ಪ ಮತ್ತು ಎನ್. ಬಿ. ರಾಮಪ್ಪ ಅವರ ಹೊಲದ ಬದುವಿನಲ್ಲಿ ಈ ಕಲ್ಲು ನಿಂತಿದೆ ; ಈಗ ಇದರ ಬಲಭಾಗ ಮುಕ್ಕಾಗಿದ್ದು ಕೆಲವು ಅಕ್ಷರಗಳು ನಷ್ಟವಾಗಿವೆ.

ಆದರೆ ಈ ಎರಡು ಶಾಸನಗಳಲ್ಲಿಯೂ 'ಬೆಮ್ಮತ್ತನೂರ ದುರ್ಗ' ಮತ್ತು 'ಬೆಮ್ಮತ್ತನೂರು'ಎಂಬ ರೂಪಗಳನ್ನು ಗಮನಿಸಬೇಕು. ಈ ಸ್ಥಳವಾಚಕಗಳ ಹಿನ್ನೆಲೆಯಲ್ಲಿ ಹೂಲಿಯುಕೆರೆ/ಬಾವಿಗಳು ಜಲಾಶಯ ಸೂಚಿಯಶಾಗಿ ಕಂಡುಬರುತ್ತವೆ. ಅಲ್ಲದೆ, ಹೂಲಿಕೆರೆ/ಬಾವಿಗಳು ಚಿತ್ರದುರ್ಗ ಬೆಟ್ಟ ಪರಿಸರಕ್ಕೇ ಹೊಂದಿಕೊಂಡಿರುವು ವೆಂಬುದು ವ್ಯಕ್ತಪಡುತ್ತದೆ.

ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಹೂಲಿ ಸ್ಥಳದಿಂದ ೪–೫ ಕಿ. ಮೀ. ವ್ಯಾಪ್ತಿಯಲ್ಲಿಯೇ ಹೂಲಿ ಕಟ್ಟೆಯಿದ್ದು, ಹೂಲಿಯಿಂದಾಗಿಯೇ ಆ ಕಟ್ಟೆಗೆ ಆ ಹೆಸರು ಬಂದಿರುವುದು ಸಂಭವನೀಯ. ಅಲ್ಲದೆ, ಚಾರಿತ್ರಿಕ ಪ್ರಸಿದ್ಧಿ ಪಡೆದ ಹೂಲಿಯು ಹಿಂದೊಮ್ಮೆ ಹೊಂದಿದ್ದ ವಿಸ್ತಾರದ ಬಗೆಗೂ ಇದು ಸೂಚಿಸುತ್ತದೆನ್ನಬಹುದು. ಇಂತಹ ಇನ್ನೂ ಒಂದೆರಡು ಉದಾಹರಣೆಗಳುಂಟು. ಚಿತ್ರದುರ್ಗ ಪರಿಸರದಲ್ಲಿಯೂ ಹೂಲಿಯ ಕೆರೆಯ ಸಾಲಿಗೇ ಬರುವ ಹು(ಹೂ)ಲಿಯಗೊಂದಿ ಮತ್ತು ಹೂಲಿಯಬಾವಿಗಳಿಗೂ ಇದೇ ಹೆಸರನ್ನು ಆರೋಪಿಸಿ ಗುರುತಿಸಿರಬಹುದು.

ಪೆರುಮಾಳೆಪುರ : ದೇವಾಲಯದ ಪರಿಸರವನ್ನೂ ಬ್ರಹ್ಮಪುರಿಯಲ್ಲಿ ವಾಸಿಸುವಂತಹ ವಿಶೇಷ ವರ್ಗದವರು ನೆಲಸಿರುವ ಎಡೆಯನ್ನೂ 'ಪುರ'ವೆಂದು ಗುರುತಿಸುವುದುಂಟು. ದೇವರ ಪೂಜೆ–ಪುನಸ್ಕಾರಾದಿಗಳಿಗೆ ಅನುಕೂಲ ಒದಗಿಸುವ ಕೇಂದ್ರವೆಂತಲೂ ಕರೆಯುವುದುಂಟು.ಪೆರುಮಾಳೆದೇವನು ಬೆಮ್ಮತ್ತನೂರ ಹೂಲಿಯ ಬಾವಿಯಲ್ಲಿ ಚತುಸ್ಸೀಮೆಯಲ್ಲು ಕಲ್ಲುನೆಟ್ಟು ತನ್ನ ಹೆಸರಿನಲ್ಲಿ ಪುರವನ್ನು ಮಾಡಿದುದನ್ನು ಆತನ ಶಾಸನವೇ ಹೇಳುತ್ತದೆ (ಚಿ. ೧೨). ಸೀಮಾ ಸಂಬಂಧದ ಈ 'ನೆಟ್ಟಕಲ್ಲು'ಗಳ ಬಗೆಗೆ ಈಗ ಏನನ್ನೂ ತಿಳಿಯುವಂತಿಲ್ಲವೆನ್ನಬಹುದು.

ಬೆಟ್ಟದಲ್ಲಿ 'ಗೋಪಾಲಸ್ವಾಮಿಹೊಂಡ'ದ ಮೇಲು ಬದಿಯಲ್ಲಿರುವ ಗೋಪಾಲದೇವರ ಗುಡಿಯು ಪೆರುಮಾಳೆಪುರದ ಕೇಂದ್ರವಾಗಿದ್ದು, ಈ ದೇವಾಲಯ ಬಲಬದಿಯ ಆವರಣದಲ್ಲಿ ಈ ಪುರವು ನೆಲೆಗೊಂಡಿದ್ದಿರುವ ಸಾಧ್ಯತೆ ಹೆಚ್ಚು. ಈಗಲೂ ಅಲ್ಲಿ ಕಂಡುಬರುವ ನಿವೇಶನ, ಬೀದಿ ಇನ್ನಿತರ ಕುರುಹುಗಳು ಇದನ್ನು ಸಮರ್ಥಿಸುತ್ತವೆ. ಆದರೆ ಆನಂತರವೂ ಇಲ್ಲಿ ಗೃಹ ನಿರ್ಮಾಣದಂತಹ ಕಾಮಗಾರಿ ಮುಂದುವರೆದಿರುವುದರಿಂದ ಮೂಲರಚನೆಯಲ್ಲಿ ಮಾರ್ಪಾಟಾಗಿರಲೂ ಬಹುದು.

ಈ ಪುರವನ್ನು ಪ್ರವೇಶಿಸಲು ಇದ್ದ ಮಾರ್ಗಗಳಲ್ಲಿ ಈಗಿನ 'ಗರುಡಾಂಜನೇಯ ಬಾಗಿಲು' ಪ್ರಮುಖವಾಗಿದ್ದಿತೆಂದು ತೋರುತ್ತದೆ; ಪುರವು ಶ್ರೀವೈಷ್ಣವ–ವೈಷ್ಣವ ಕ್ಷೇತ್ರವಾಗಿದ್ದಿತೆಂಬುದರ ಬಗೆಗೆ ಗಮನೀಯ ಸಾಕ್ಷ್ಯವಾಗಿದೆ. ಭಾಗವತಶ್ರೇಷ್ಠರೆನಿಸಿದ ಹಾಗೂ ವಿಷ್ಣುವಿನ ಹಿರಿಯ-ಕಿರಿಯ ಭಕ್ತರೆನಿಸಿಕೊಂಡ ಗರುಡ–ಹನುಮರೀರ್ವರಿಗೂ ಶ್ರೀವೈಷ್ಣವ–ವೈಷ್ಣವ ನೆಲೆಯಲ್ಲಿ ದೊರೆತಿರುವ ಸ್ಥಾನ ಪೂಜ್ಯನೀಯವಾದುದು. ಪಂಚಮುಖಿ ಆಂಜನೇಯನ ಶಿಲ್ಪವೊಂದರಲ್ಲಿ, ಈತನ ತಲೆಯ ಹಿಂದಿನ ಮುಖವಾಗಿ ಗರುಡನದನ್ನು ಬಿಡಿಸಿದೆ ! ಗೋಪಾಲಕೃಷ್ಣ ದೇವರ ಗುಡಿ ಹಾಗೂ ಪೆರಮಾಳೆಪುರದ ಆವರಣವನ್ನು ತಲುಪುವ ಮೊದಲು, ಇಲ್ಲಿಯ ನಾಯಕ ಅರಸರ ಕಾಲದಲ್ಲಿ ನಿರ್ಮಾಣವಾದ ಕೋಟೆಸಾಲೊಂದು (ತುಪ್ಪದಕೊಳದ ಬತೇರಿ ಸುತ್ತು) ಅಡ್ಡ ಹಾಯ್ದಿದ್ದು, ಅದನ್ನು ದಾಟಲು ನಿರ್ಮಿಸಿರುವ ದ್ವಾರಕ್ಕೆ ಗರುಡಾಂಜನೇಯ ಬಾಗಿಲೆನ್ನುವರು. ಈ ಬಾಗಿಲ ಮಂಟಪದ ಹಿಂಬದಿಯಲ್ಲಿ ಎಡಬಲಗಳಲ್ಲಿಯೂ ಹುಟ್ಟುಬಂಡೆಯ ಮೇಲೆ ಗರುಡ–ಹನುಮರ ಉಬ್ಬುಗೆತ್ತನೆಗಳಿವೆ. ಹನುಮನ ಕೆತ್ತನೆಯು ಗರುಡನಿಗಿಂತ ದೊಡ್ಡದು. ಈ ಎರಡು ಕೆತ್ತನೆಗಳಿಗೂ ಪುಟ್ಟ ಗುಡಿಗಳನ್ನು ನಿರ್ಮಿಸಲಾಗಿದೆ. ಇಲ್ಲಿಯ ನಾಯಕ ಅರಸರೂ ಇವುಗಳ ಬಗೆಗೆ ಭಕ್ತಿಯಿಂದ ನಡೆದುಕೊಂಡುದು ಉಂಟೆಂಬುದಕ್ಕೆ ಈ ನಿರ್ಮಾಣ ಸಾಕ್ಷಿಯಾಗಿದೆ. ಈ ದ್ವಾರವು ನಿರ್ಮಾಣಗೊಳ್ಳುವ ಪೂರ್ವದಲ್ಲಿಯೇ ಈ ಉಬ್ಬುಗೆತ್ತನೆಗಳು ಇಲ್ಲಿಯ ಬಂಡೆಗಳ ಮೇಲೆ ಮೂಡಿದ್ದಿರಬೇಕೆಂಬ ಸಂಗತಿಯನ್ನು ಈಗಾಗಲೇ ಹೇಳಿದೆ.[25] ಈ ಕ್ಷೇತ್ರದ ಧಾರ್ಮಿಕಪಂಥದ ಕುರುಹಾಗಿ ಗೋಪಾಲಕೃಷ್ಣದೇವರ ಪ್ರತಿಷ್ಠಾಪನೆಯ

25 ನೋಡಿ : ಲಕ್ಷ್ಮಣ್‌ತೆಲಗಾವಿ : 'ಕಾಮಗೇತಿ ಅರಸರು–ಕೆಲವು ವಿಚಾರಗಳು : ಪ್ರತಿಕ್ರಿಯೆ', ಮಾಸಿಕ ಕರ್ನಾಟಕ,೧೭–೪, ಅಕ್ಟೋಬರ್ ೧೯೮೭, ಪು. ೭೭-೭೮

ಅವಧಿಯಲ್ಲಿ ಇಲ್ಲಿ ಮೂಡಿದ್ದಿರಬೇಕು. ಶ್ರೀವೈಷ್ಣವ ಕ್ಷೇತ್ರಗಳಲ್ಲಿ ಇದು ಸಾಮಾನ್ಯವೆಂಬುದಕ್ಕೆ ಹಲವಾರು ಉದಾಹರಣೆಗಳು ಕಂಡುಬರುತ್ತವೆ. ತುಮಕೂರು ಜಿಲ್ಲೆ, ದೇವರಾಯನದುರ್ಗದ ಬೆಟ್ಟದ ಮೇಲೆ ಇರುವ ಲಕ್ಷ್ಮೀನರಸಿಂಹದೇವರ ನೆಲೆಯ ಗವಿಯ ಪ್ರವೇಶದ ಇಕ್ಕೆಲಗಳಲ್ಲಿ ಕೈಮುಗಿದು ನಿಂತಿರುವ ಗರುಡ–ಹನುಮರ ಉಬ್ಬುಗೆತ್ತನೆಗಳ ಒಂದು ಉದಾಹರಣೆಯು[26] ಇಲ್ಲಿ ಸಮಂಜಸವೆನಿಸಬಹುದು.

ಪೆರುಮಾಳೆಪುರದ ಪರಿಸರವನ್ನೊಮ್ಮೆ ಅವಲೋಕಿಸಿದರೆ, ಗೋಪಾಲಕೃಷ್ಣ ದೇವಾಲಯವೂ ಪುರದ ಭಾಗವೂ ಕೋಟೆವೂ ಶೃಂಗಾರತೋಟದ ಅಂಗಳವೂ ಅದರಾಚೆಗಿನ ಅರಮನೆಯ ಆವರಣವೂ ಗೋಚರಿಸುತ್ತವೆ. ಸುತ್ತಲೂ ಬೆಟ್ಟ ಭಾಗದಿಂದ ಆವೃತವಾದ, ಜಲಸಮೃದ್ಧ ಹಾಗೂ ವಿಶಾಲವಾದ ಈ ಮಹಾಕಣಿವೆ (ಪಚ್ಚೆ/ಪಂಚಕಣಿವೆ ?)ಯನ್ನು ಅಲ್ಲಲ್ಲಿ ಸಮತಟ್ಟಾಗಿಸಿ, ಕೃತಕ ಕಟ್ಟೆ, ವೇದಿಕೆ ಮೊದಲಾದುವನ್ನು ನಿರ್ಮಿಸುವುದರೊಡನೆ ವಾಸಯೋಗ್ಯ ತಾಣವನ್ನಾಗಿಸಿಕೊಂಡಿರುವುದು ಕಂಡುಬರುತ್ತದೆ. (ನಾಯಕ ಅರಸರ ಕಾಲದಲ್ಲಿ ಈ ಪರಿಸರವು ಸಾಕಷ್ಟು ಅಭಿವೃದ್ಧಿಗೊಂಡುದಂತೂ ದಿಟ). ಇಲ್ಲಿ ಬ್ರಹ್ಮಪುರಿಗೇರಿಯು ಪ್ರತ್ಯೇಕವಾಗಿದ್ದುದರಿಂದ ಈ ಪುರದಲ್ಲಿ ಬಹುವಿಧದ (?) ಜನರು ವಾಸವಾಗಿದ್ದಿರಬೇಕೆಂದೂ 'ಪುರ'ದ ಎಲ್ಲ ಲಕ್ಷಣಗಳಿಂದ ಕೂಡಿದ್ದು, ಜನಜಂಗುಳಿಯಿಂದ ತುಂಬಿ ತುಳುಕುತ್ತಿದ್ದಿರಬೇಕೆಂದೂ ಭಾವಿಸಲಾಸ್ಪದವಿದೆ.

ಹದಿನೆಂಟನೆಯ ಶತಮಾನದಲ್ಲಿ ಇಲ್ಲಿಯ ಗೋಪಾಲಕೃಷ್ಣ ದೇವಾಲಯದ ಪಕ್ಕದಲ್ಲಿ ಶ್ರೀವೈಷ್ಣವ ಸಂಪ್ರದಾಯದ ಮಠವೊಂದಿದ್ದು, ಅದನ್ನು ಪಾಂಚರಾತ್ರ ಮಠ ಎಂದು ಕರೆಯಲಾಗುತ್ತಿದ್ದಿತೆಂದು ವ್ಯಕ್ತಪಡುತ್ತದೆ.[27] ಪೆರುಮಾಳೆಪುರವು ಮೂಲದಲ್ಲಿ ಶ್ರೀವೈಷ್ಣವ ಕ್ಷೇತ್ರವಾಗಿದ್ದು, ಆ ಪರಂಪರೆಯು ಮುಂದುವರೆದುಕೊಂಡು ಬಂದುದಕ್ಕೆ ಇದು ಆಧಾರವೆನಿಸುತ್ತದೆ. ಒಟ್ಟಿನಲ್ಲಿ, ಅನಂತರವೂ ಈ ಪರಿಸರವು ಪಾಂಚರಾತ್ರ ಶ್ರೀವೈಷ್ಣವ ಕೇಂದ್ರವೆನಿಸಿ, 'ಪಾಂಚರಾತ್ರ ರಕ್ಷೆ'ಯ ಪ್ರಯತ್ನವು ಮುಂದುವರೆಸಿದುದು ಗಮನಾರ್ಹ. (ಈ ಬಗೆಗೆ ಇನ್ನೂ ಶೋಧಿಸಬೇಕಿದೆ).

ಬ್ರಹ್ಮಪುರಿಗೇರಿ : ನಗರ/ಪುರದ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವನ್ನೆ ಬ್ರಹ್ಮಪುರಿ ಎಂದು ಕರೆದಿದೆ. ಶಾಸನಗಳು ಅನೇಕ ರಾಜರೂ ದಂಡನಾಯಕರೂ ಬ್ರಹ್ಮಪುರಿಗಳನ್ನು ಸ್ಥಾಪಿಸಿ ದತ್ತಿಬಿಟ್ಟುದನ್ನು ಹೇಳುತ್ತವೆ. ಪುಲಿಗೆರೆ(ಲಕ್ಷ್ಮೇಶ್ವರ)ಯ ಬದ್ದೆಗ ಬ್ರಹ್ಮಪುರಿ' (೧೦ನೆಯ ಶತಮಾನ), ಬಳ್ಳಿಗಾವೆಯಲ್ಲಿ ಕೇಶವದೇವನೆಂಬಾತನು ಮಾಡಿಸಿದ ಕೇಶವ ದೇವಾಲಯ, ವೀರಕೇಶವಪುರ ಹಾಗೂ ಬ್ರಹ್ಮಪುರಿಗಳು ಗಮನಾರ್ಹವಾದುವು. ಬ್ರಹ್ಮಪುರಿಯು ಒಂದು ಅಥವಾ ಕೆಲವು ಬೀದಿಗಳನ್ನು ಹೊಂದಿರುತ್ತಿದ್ದು, ಅದಕ್ಕೆ ನೀಡಲಾಗಿದ್ದ ಭೂಮಿಯಾಗಲೀ ಬೀದಿಯಾಗಲೀ ಇತರರಿಂದ ಅತಿಕ್ರಮಣಕ್ಕೆ ಒಳಗಾಗದಂತೆ ನೋಡಿಯ

---

26 *MAR.*, 1934, p. 18

27 ಈ ಮಠವನ್ನು ತಿರುನಾರಾಯಣಾಚಾರ್ಯರೆಂಬುವರು ಸ್ಥಾಪಿಸಿದರೆಂತಲೂ ಇದೇ ಮೂಲಮಠವೆಂತಲೂ ತಿಳಿದುಬರುತ್ತದೆ. ಈ ಮಠದ ಶಾಖೆಯು ತುಮಕೂರಿನ ಶ್ರೀ ಕೋದಂಡರಾಮಸ್ವಾಮಿ ದೇವಾಲಯದಲ್ಲಿ ಇದ್ದು, ಅದನ್ನು ಪಾಂಚರಾತ್ರ ಮಂಡಲಂ ಎಂದು ಈಗ ಕರೆಯಲಾಗುತ್ತದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ರಾಮಾನುಜ ಕೂಟವನ್ನೇರ್ಪಡಿಸುವ ಕುಟುಂಬಗಳಿರುವ ಸ್ಥಾನಗಳೆಂದರೆ ಚಿತ್ರದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆದೇವರಪುರ. ಹಂಪೆ-ಕಾಮಲಾಪುರದಲ್ಲಿರುವ ಶ್ರೀವೈಷ್ಣವ ಗುರುಗಳು ಈಗಲೂ ಚಿತ್ರದುರ್ಗಕ್ಕೆ ಯಾತ್ರೆ ಕೈಗೊಂಡು ಭಕ್ತರನ್ನು ಅನುಗ್ರಹಿಸುವರಲ್ಲದೆ, ಇಲ್ಲಿಯ ವೆಂಕಟರಮಣಸ್ವಾಮಿ ತೇರಿನ ಸಂದರ್ಭದಲ್ಲಿ ಇಲ್ಲಿಯೇ ವಾಸ್ತವ್ಯ ಮಾಡುವರೆಂತಲೂ ಇವರ ಉತ್ಸವದಲ್ಲಿ ಚಿತ್ರದುರ್ಗದ ನಿಶಾನಿ ಮನೆತನದವರು ತಮ್ಮ ನಿಶಾನಿ ಹಿಡಿದು ಗೌರವ ತೋರುವರೆಂತಲೂ ತಿಳಿಯುತ್ತದೆ. ಇದು ಪರಂಪರೆಯಿಂದ ಬಂದ ರಾಜಗೌರವದ ಸಂಕೇತವೆಂದು ತೋರುತ್ತದೆ.

ಇಲ್ಲಿಯ ಕೆಲವು ಸಂಗತಿಗಳನ್ನು ತಿಳಿಸಿ ಸಹಕರಿಸಿದವರು ಎಸ್. ತಿರುನಾರಾಯಣಭಟ್ (ಚಿತ್ರದುರ್ಗದ ಪ್ರಸನ್ನ ವೆಂಕಟೇಶ್ವರಸ್ವಾಮಿಯ ಅರ್ಚಕರು), ಅವರ ಸಹೋದರ ಲಕ್ಷ್ಮೀನರಸಿಂಹಭಟ್ ಹಾಗೂ ಹು.ಶ್ರೀ. ಪಾಂಡುರಂಗ ಜೋಯಿಸ್ ಅವರುಗಳು.

ಬ್ರಾಹ್ಮಣರು ನೋಡಿಕೊಳ್ಳುತ್ತಿದ್ದರೆಂಬ ಉದಾಹರಣೆಯೂ[28] ಗಮನ ಸೆಳೆಯುತ್ತದೆ.

ದೇವಸ್ಥಾನಗಳ ಪಕ್ಕ/ಸನಿಹದಲ್ಲಿ ಅವುಗಳಿಗೇ ಮೀಸಲಾದ ಹೂದೋಟವಿರುವುದೂ ತೋಟಗಳಿಗೆ ಬಾವಿಗಳಿರುವುದೂ ಏತಗಳಿಂದ ತೋಟಕ್ಕೆ ನೀರನ್ನು ಹಾಯಿಸುವುದೂ ಹಿಂದಿನಿಂದಲೂ ನಡೆದುಬಂದಿದೆ. ಸೇವುಣರ ಶಾಸನವೊಂದರಲ್ಲಿ ಬ್ರಹ್ಮಪುರಿಯನ್ನೂ ಮಾವಿನ ತೋಪು ಮತ್ತು ಹೂವಿನತೋಟಗಳನ್ನೂ ಒಟ್ಟಿಗೇ ಪ್ರಸ್ತಾಪಿಸಿರುವುದುಂಟು.[29] ನಿತ್ಯ ಪೂಜಾದಿಗಳಿಗೆ ದೇವಾಲಯ ಪರಿಸರದಲ್ಲಿ ಹೂದೋಟವಿರುವುದನ್ನು ಹಲವಾರು ದೇವಾಲಯಗಳನ್ನು ಅನುಲಕ್ಷಿಸಿ ಹೇಳಬಹುದು. ಅಗ್ರಹಾರ/ಬ್ರಹ್ಮಪುರಿಯ ಅಗತ್ಯ ಭಾಗಗಳಾಗಿ ದೇವಾಲಯ, ಕೆರೆ/ಕೊಳ, ತೋಟ/ಕಾಡು/ಗದ್ದೆ, ಕೋಟೆ ಇತ್ಯಾದಿಗಳೂ ಇರುತ್ತಿದ್ದವೆಂಬುದು ಗಮನೀಯ.

ಪೆರುಮಾಳೆಪುರದಲ್ಲಿ ಬ್ರಹ್ಮಪುರಿಕೇರಿಯು ಇದ್ದ ನಿರ್ದಿಷ್ಟ ಸ್ಥಾನದ ಬಗೆಗೆ ಇಲ್ಲಿಯ ಶಾಸನಗಳಲ್ಲಿ ಸೂಚನೆಯಿಲ್ಲ. 'ಗೋಪಾಲಸ್ವಾಮಿ ಹೊಂಡ'ದ ದಕ್ಷಿಣ ದಂಡೆಯಲ್ಲಿರುವ ಪೂರ್ವ ಮತ್ತು ಪಶ್ಚಿಮದ ಎರಡೂ ಬದಿ (ಮೂಲೆ)ಗಳಲ್ಲಿ ಬ್ರಹ್ಮಪುರಿಗೇರಿ ಸೂಚನೆಯ ಬರಹವುಳ್ಳ ಎರಡೂ ಹುಟ್ಟುಬಂಡೆಗಳ ಮಧ್ಯಸ್ಥಾನವು ಶೃಂಗಾರತೋಟದ ಬಯಲೆಂದು ಕರೆಯಲ್ಪಡುತ್ತಿದೆ. ಈ ಹೊಂಡದ ದಂಡೆಯಲ್ಲಿದ್ದು ಈಗ ನಾಶವಾಗಿ ಹೋಗಿರುವುದೆಂದು ತಿಳಿಯಲಾಗುವ ಯಾವುದೋ ಮಂಟಪದ (?) ಅವಶೇಷಗಳು ಈಗಲೂ ಕಂಡುಬರುತ್ತಿದ್ದು, ಇದರ ವಿನಾ 'ಕೇರಿ'ಯಂತಹ ವಿಶಾಲ ರಚನೆಯು ಈ ಬಯಲಿನಲ್ಲಿ ಇದ್ದ ಸಾಧ್ಯತೆ ಇಲ್ಲ. ಆದ್ದರಿಂದ ಬ್ರಹ್ಮಪುರಿಗೇರಿಯು ಈ ಪುರದಲ್ಲೆ, ಶೃಂಗಾರ ತೋಟದ ಮಗ್ಗುಲಲ್ಲೆ ಇದ್ದಿರಬೇಕಾದರೆ, ಅದರ ನೆಲೆಯು ಈಗಿನ ಅರಮನೆ ಬಯಲು[30] ಪ್ರದೇಶವೇ

---

28 G.R. Kuppuswamy : *Economic Conditions in Karnataka*, Dharwar, 1975, p. 17

29 Shrinivas Ritti, Anand Kumbhar (Ed.) : *Inscriptions from Solapur District*, Dharwad, 1988, p. 49 : No. 26, 1218 A.D.

30 ಅರಮನೆಗಳು: ಇಲ್ಲಿ ಆಳ್ವಿಕೆ ನಡೆಸಿದ ನಾಯಕ ಅರಸರ ಕಾಲದಲ್ಲಿ ಈ ಆವರಣದಲ್ಲಿ ಅರಮನೆಗಳ ನಿರ್ಮಾಣ/ದುರಸ್ತಿ ಕಾರ್ಯವು ಮೇಲಿಂದ ಮೇಲೆ ನಡೆಯಿತೆನ್ನುವುದಕ್ಕೆ ಪುರಾವೆಗಳು ದೊರಕುತ್ತವೆ. ಈ ಸಂಸ್ಥಾನದ ಮೊದಲನೆಯ ಕಾಮಗೇತಿ ಅರಸ ಮತ್ತಿ ತಿಮ್ಮಣ್ಣನಾಯಕನು ಕ್ರಿ.ಶ. ಸು. ೧೫೬೮ರಲ್ಲಿ ಮೇಲುದುರ್ಗದಲ್ಲಿ ಅರಮನೆಯನ್ನೂ ಇದರ ಸುತ್ತಿನ ಕೋಟೆಯನ್ನೂ ಕಟ್ಟಿಸಿದನು. ಇಲ್ಲಿ 'ಮೇಲುದುರ್ಗದ ಅರಮನೆ'ಯೇ ಮುಖ್ಯವಾದ ಅರಮನೆಯಾಗಿದ್ದಿತೆಂದು ತಿಳಿದುಬರುತ್ತದೆ. 'ನಾಗತೇರ ಹರವು' ಮೇಲೆ ಇರುವ ಎರಡು ಮದ್ದಿನ ಕಣಜಗಳ ಬಳಿಯೇ ಈ ಅರಮನೆ ಇದ್ದಿತೆಂತಲೂ ಸೂಚನೆ ಇದ್ದು, ಇದಕ್ಕೆ 'ದೊಡ್ಡ ಅರಮನೆ'ಯೆಂತಲೂ ಕರೆಯಲಾಗುತ್ತಿದ್ದಿತು. ಕ್ರಿ.ಶ. ೧೬೮೯ರಿಂದ ೧೭೨೧ರ ವರೆಗೆ ಅರಸನಾಗಿದ್ದ ಬಿಚ್ಚುಗತ್ತಿ ಭರಮಣ್ಣನಾಯಕನು ತನ್ನ ಕಾಲದಲ್ಲಿ ಈ 'ದೊಡ್ಡ ಅರಮನೆ'ಯನ್ನು ಬಿಚ್ಚಿಸಿ ಕಟ್ಟಿಸಿದನಲ್ಲದೆ ಚಿಕ್ಕ ಅರಮನೆ, ದೇಮವ್ವ(ದ್ಯಾಮವ್ವನಾಗತಿ)ನ ಅರಮನೆ, ತಂಗಿ ಭರಮವ್ವನ ಅರಮನೆಗಳನ್ನೂ ನಿರ್ಮಿಸಿದನು. ಈತನ ಮಗ ಹಿರೇ ಮದಕರಿನಾಯಕನು (ಕ್ರಿ.ಶ. ೧೭೨೧–೧೭೪೮) ಸಹಾ ಚಿಕ್ಕ ಅರಮನೆಯೊಂದನ್ನು ನಿರ್ಮಿಸಿದನೆಂದಿದೆ. ಈ ಸಂಸ್ಥಾನದ ಕಡೆಯ ಅರಸನಾಗಿ ಪ್ರಸಿದ್ಧನಾದ ರಾಜಾವೀರ ಮದಕರಿನಾಯಕನು (ಕ್ರಿ.ಶ. ೧೭೫೪-೧೭೭೯) ತನ್ನ ಕಾಲದಲ್ಲಿ ತಿಮ್ಮಣ್ಣನಾಯಕನ ಅರಮನೆಯಿದ್ದ ಜಾಗದಲ್ಲೆ, ಭರಮಣ್ಣನಾಯಕನಂತೆಯೇ, ಅದನ್ನು ನೂತನವಾಗಿ ಕಟ್ಟಿಸಿದನೆಂಬ ಸಂಗತಿಯು ಗಮನಾರ್ಹ. ಒಟ್ಟಿನಲ್ಲಿ, ಮೇಲುದುರ್ಗದ ಅರಮನೆಯೆಂದೇ ಪ್ರಸಿದ್ಧವಾಗಿದ್ದ ಪ್ರಧಾನ ಅರಮನೆಯು ಕಾಲಾಂತರದಲ್ಲಿ ಸಾಕಷ್ಟು ಮಾರ್ಪಾಟು ಹೊಂದಿ ಸುಧಾರಿಸಲ್ಪಟ್ಟಿತೆಂದು ವ್ಯಕ್ತಪಡುತ್ತದೆ. ಇಲ್ಲಿ ಪ್ರಸ್ತಾಪಿಸಿರುವ ಅರಮನೆಗಳಲ್ಲಿ ಒಂದೆರಡರ ವಿನಾ ಉಳಿದವು ಈಗಿನ ಅರಮನೆ ಆವರಣದಲ್ಲಿಯೇ ನೆಲೆಸಿದ್ದುವು.

ಇವಲ್ಲದೆ, ಕ್ರಿ.ಶ. ೧೫೬೮ರಲ್ಲಿಯೇ ಮತ್ತಿ ತಿಮ್ಮಣ್ಣನಾಯಕನು ಬೆಟ್ಟದಲ್ಲಿ ರಣಮಂಡಲವೆಂಬ ಸ್ಥಳದಲ್ಲಿ ಇನ್ನೊಂದು ಅರಮನೆಯನ್ನು ಕಟ್ಟಿಸಿದ್ದನೆಂಬುದನ್ನೂ ಗಮನಿಸಬೇಕು. (ಒಂದನೇ) ಕಸ್ತೂರಿ ರಂಗಪ್ಪನಾಯಕನ ಮಗ (ಇಮ್ಮಡಿ)ಮದಕರಿನಾಯಕನು (ಕ್ರಿ.ಶ. ೧೬೫೨-೧೬೭೪) 'ಕೆಳಗಣ ಅರಮನೆ'ಯೊಂದನ್ನು ಕಟ್ಟಿಸಿದನು. ಇವುಗಳೊಡನೆ ವೀರವ್ವನಾಗತಿ ಅರಮನೆ, ದಳವಾಯಿ ಅರಮನೆ ಮೊದಲಾದುವನ್ನೂ ಪ್ರಸ್ತಾಪಿಸಬಹುದು. ಇಲ್ಲಿಯ ಕೋಟೆಯ ಪ್ರತಿಯೊಂದು ಹೆಬ್ಬಾಗಿಲು ಬಳಿಯಲ್ಲೂ ಒಂದೊಂದು ಅರಮನೆ (ಅಧಿಕಾರಿ/ದಳವಾಯಿಗಳ ನಿವಾಸ ?) ಇದ್ದುವೆಂತಲೂ ಹೇಳಲಾಗುತ್ತದೆ.

ಆಗಿರಬೇಕೆಂಬುದನ್ನು ಸಾಧಾರವಾಗಿ ಸಮರ್ಥಿಸಬಹುದು.

ಈಗಿನ ಅರಮನೆಯ ಆವರಣವನ್ನೊಮ್ಮೆ ಪರಿಶೀಲಿಸಿದರೆ, ಇದು ಉತ್ತರ–ದಕ್ಷಿಣವಾಗಿರುವ ಒಂದು ವಿಶಾಲವಾದ ಮುಖ್ಯರಸ್ತೆಯಿಂದಲೂ ಸುವ್ಯವಸ್ಥೆಯಿಂದಲೂ ಕೂಡಿದ್ದು, ಈ ಭಾಗದ ನೆಲ್ಲಿಕಾಯಿ ಸಿದ್ದಪ್ಪನಗುಡ್ಡಕ್ಕೆ ಹೊಂದಿಕೊಂಡಂತೆ ಪಶ್ಚಿಮ ದಿಕ್ಕಿನ ಮೂಲೆಯಲ್ಲಿ ಬೃಹತ್ ಬಂಡೆಗಳ ಮೇಲಿನ ನೆಲಗಟ್ಟನ್ನಾಧರಿಸಿ ನಿಂತಿರುವ ಸುಬ್ರಹ್ಮಣ್ಯೇಶ್ವರ ದೇವಾಲಯದ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ.[31] ಈ ದೇವಾಲಯವು ದ್ರಾವಿಡ ಶೈಲಿಯ, ಚೌಕಾಕಾರದ ಸರಳ ವಾಸ್ತು ರಚನೆಯುಳ್ಳ ಕಲ್ಲು ಕಟ್ಟಡವಾಗಿದ್ದು, ಒಂದೇ ಕೋಣೆಯಿಂದ ಕೂಡಿದೆ ; ಪೂರ್ವಾಭಿಮುಖವಾಗಿದೆ. ಗುಡಿಯ ಮಧ್ಯದಲ್ಲಿ ಆಲಯಕ್ಕೆ ಆಧಾರವಾಗಿರುವ ನಾಲ್ಕು ಕಂಬಗಳ ಮಧ್ಯೆ ಕಂಬಗಳಿಗೆ ಹೊಂದಿದಂತೆ ೭೬ ಸೆಂ.ಮೀ. ಎತ್ತರದ ಕಟ್ಟೆಯನ್ನು ನಿರ್ಮಿಸಲಾಗಿದೆ. ದ್ವಾರಕ್ಕಭಿಮುಖವಾಗಿರುವ ಭಿತ್ತಿಯಲ್ಲಿ ಪುಷ್ಪದ ಕೆತ್ತನೆಯ ಕೆಳಗೆ ಏಳು ಹೆಡೆಯ ಹಾವಿನ ನೆಳಲಲ್ಲಿರುವ ಶಿವಲಿಂಗವೂ ಎಡಬಲಗಳಲ್ಲಿ ನಾಗರ ಉಬ್ಬುಶಿಲ್ಪಗಳೂ ಇದ್ದು, ಇವುಗಳ ವಿನಾ ಇಲ್ಲಿ ಈಗ ಯಾವ ಶಿಲ್ಪವೂ ಕಂಡುಬರುವುದಿಲ್ಲ.[32] ಸ್ತಂಭಗಳಲ್ಲಿ ವೇಣುಗೋಪಾಲ, ಕಾಳಿಂಗ ಮರ್ದನ, ಆಂಜನೇಯ, ಪುರುಷಾಮೃಗ, ನಂದಿ, ಲಿಂಗ ಮೊದಲಾದ ಉಬ್ಬುಶಿಲ್ಪಗಳಿದ್ದು, ಶೈವ–ವೈಷ್ಣವ–ಈ ಎರಡು ಸಂಪ್ರದಾಯಗಳ ಪ್ರತೀಕವೆನಿಸಿವೆ ; ಸುಬ್ರಹ್ಮಣ್ಯೇಶ್ವರನ ನೆಲೆಯನ್ನು ಪ್ರತಿನಿಧಿಸಿವೆ. ಸುಬ್ರಹ್ಮಣ್ಯೇಶ್ವರ ದೇವರಿಗೆ ನಾಗಾಭರಣ ಮಾಡಿಸಿಕೊಟ್ಟಿರುವ ಉಲ್ಲೇಖದ ವಿನಾ ಈ ದೇವಾಲಯವನ್ನು ನಾಯಕ ಅರಸರು ತಮ್ಮ ಅವಧಿಯಲ್ಲಿ ನಿರ್ಮಿಸಿದರೆಂಬುದಕ್ಕೆ ಆಧಾರ ದೊರೆಯುವುದಿಲ್ಲ. ಆದರೆ ಇದನ್ನು ಮರುನಿರ್ಮಿಸಿರುವ/ದುರಸ್ತಿಗೊಳಿಸಿರುವ ಕಾರ್ಯವು ನಡೆದಿರುವ ಸಾಧ್ಯತೆಯೂ ಇಲ್ಲದಿಲ್ಲ. ಈ ದೇವಾಲಯವು ಇಲ್ಲಿದ್ದ ಬ್ರಹ್ಮಪುರಿಕೇರಿಯ ಕೊನೆಯಲ್ಲಿ ನಿರ್ಮಾಣಗೊಂಡಿದ್ದು, ಇಲ್ಲಿಯ ಧಾರ್ಮಿಕ ಕ್ರಿಯೆ, ಉತ್ಸವ ಇತ್ಯಾದಿಗಳಿಗೆ ಅವಕಾಶ ಕಲ್ಪಿಸುವ ತಾಣವೂ ಆಗಿದ್ದಿರಬೇಕು.

ಹಾಗೆಯೇ, ಅರಮನೆ ಆವರಣದ ಪೂರ್ವದಿಕ್ಕಿನ ಮೂಲೆಯಲ್ಲಿ ಬೃಹತ್ ಬಂಡೆಯ ಮೇಲೆ ಕೊರೆಯಲಾಗಿರುವ, ವೈಷ್ಣವ ಸಂಪ್ರದಾಯದ, ಮನುಷ್ಯಪ್ರಮಾಣದ ಆಂಜನೇಯನ ಚಿತ್ರವು ಸಮಕಾಲೀನವೂ ಬ್ರಹ್ಮಪುರಿ ಆವರಣದ ಎಲ್ಲೆಯ ಸೂಚಕವೂ ಆಗಿದೆಯೆನ್ನಬಹುದು.

ಅರಮನೆ ಆವರಣದ ಸ್ಮಾರಕಗಳಲ್ಲಿ, ಕೆಲವು ನಾಯಕ ಅರಸರ ಪೂರ್ವಕಾಲದವೂ ಆಗಿರುವ ಲಕ್ಷಣ

ಚಂದ್ರಭೀಮನೆಂಬ ವಿದ್ವತ್ಕವೀಂದ್ರನು ತನ್ನ 'ಮದಕರಿರಾಜೇಂದ್ರ ದಂಡಕ'ದಲ್ಲಿ 'ಲಕ್ಷ್ಮೀ ವಿಲಾಸ' ಎಂಬುದನ್ನು ಪ್ರಸ್ತಾಪಿಸಿದ್ದು, ಇದು ಮೇಲ್ಮಹಡಿಯಲ್ಲಿದ್ದು ಕನ್ನಡಿಗಳಿಂದ ಅಲಂಕೃತವಾಗಿದ್ದಿತೆಂದು ಹೇಳಿರುವನು. ಇದನ್ನು 'ಸಜ್ಜಾಗೃಹ' ಎಂದು ಸಂಬೋಧಿಸಿರುವುದರಿಂದ ಇದು ಮುಖ್ಯ ಅರಮನೆಯ ಒಂದು ಭಾಗವಾಗಿದ್ದು, ಅರಸನಿಗೆ ಮೀಸಲಾಗಿದ್ದ ಶೃಂಗರಿಸಲ್ಪಟ್ಟ ಶಯ್ಯಾಗೃಹವಿರಬಹುದು. ಹಾಗೆಯೇ, ಅರಮನೆಯಲ್ಲಿ ದೇವರ ಮನೆಯಿದ್ದ ಪ್ರಸ್ತಾಪವೂ ಒಂದೆಡೆ ದೊರಕುತ್ತದೆ. ಚಂದ್ರಗಿರಿ ಭೀಮಾಜಿ ಪಂತನು ತನ್ನ 'ಚಿತ್ರದುರ್ಗದ ಬಖೈರ್'ನಲ್ಲಿ ಅರಮನೆಯನ್ನು 'ಮಹಲ್' ಎಂದು ಕರೆದಿದ್ದು, ಮಹಲುಗಳಿಗೆ ಸುಣ್ಣ ಹಚ್ಚಿಸಿದ ಸಂದರ್ಭವೊಂದನ್ನು ದಾಖಲಿಸಿದ್ದಾನೆ. ಇಮ್ಮಡಿ ಮದಕರಿನಾಯಕನು ಮೃತನಾದಾಗ ಆತನ ಸಮಾಧಿಯು ಆತನ ಅರಮನೆ(ಕೆಳಗಣ ಅರಮನೆ ?)ಯಲ್ಲೆ ಆಯಿತೆಂದಿದೆ. ಬೆಟ್ಟವನ್ನೇರಲು ಈಗ ಪ್ರಮುಖ ದ್ವಾರವೆನಿಸಿರುವ (ಕಾಮನಬಾವಿ ಪಕ್ಕದ) ಕೋಟೆಯ ಎದುರು ಟಿಪ್ಪುಸುಲ್ತಾನನ ಹೆಸರಿನಲ್ಲಿದ್ದ ಮಹಲ್ ಇದ್ದಿತಲ್ಲದೆ, ಈ ಮಹಲಿಗೆ ಹೊಂದಿದಂತೆ ತೋಟವೂ ಇದ್ದಿತು. ದುರ್ಗದ ಅರಮನೆಗಳನ್ನು ಕುರಿತು ಇಂತಹ ಹಲವಾರು ಸಂಗತಿಗಳನ್ನು ಸಂಗ್ರಹಿಸಬಹುದು. ಇವುಗಳ ಪ್ರತ್ಯೇಕ ಅಧ್ಯಯನ ಆಗಬೇಕಿದೆ.

31 ನಾಯಕ ಅರಸರ ಕಾಲದಲ್ಲಿ ಇಲ್ಲಿ ನಿರ್ಮಾಣಗೊಂಡ ಅರಮನೆಯ(ಒಡ್ಡೋಲಗ ಮಂದಿರ ?) ಕಾರಣದಿಂದಾಗಿ ಈ ದೇವಾಲಯದವರೆಗಿನ ಹಾದಿಯು ಅನಂತರ ಮುಚ್ಚಿಹೋದಂತೆ ಕಂಡುಬರುತ್ತದೆ.

32 ಸುಮಾರು ೧೯೨೮ರಲ್ಲಿ ಡಾ॥ ಕೃಷ್ಣ ಅವರು ಪರಿಶೀಲನಾರ್ಥ ಈ ದೇವಾಲಯಕ್ಕೆ ಭೇಟಿ ಕೊಟ್ಟದ್ದಾಗ, ಒಳಗಿನ ಕಟ್ಟೆಯ ಮೇಲೆ ಶಿವಲಿಂಗವೂ ಎರಡು ನಾಗರಕಲ್ಲುಗಳೂ ಇದ್ದವು – *MAR.*, 1929, p. 21.

ಗಳನ್ನು ಹೊಂದಿವೆ. ಇಲ್ಲಿರುವ ಕೊಳವನ್ನು 'ನಾಗತಿಯರ ಹರವು' ಎಂದೇ ಕರೆಯಲಾಗುತ್ತಿದ್ದು, 'ರಾಣಿಯರು ಸ್ನಾನ ಮಾಡಲು ಬಳಸುತ್ತಿದ್ದ ಹೊಂಡ'ವೆಂತಲೇ ಇದು ಪ್ರಸಿದ್ಧವಾಗಿದೆ. ಚಿತ್ರದುರ್ಗ ಬೆಟ್ಟದ ಹಿಡಿಂಬೇಶ್ವರ ದೇವಸ್ಥಾನದ ಸಮೀಪದಲ್ಲಿಯ ಕಲ್ಲೆಂದು ಸೂಚಿಸಲ್ಪಟ್ಟ, ಚಾಳುಕ್ಯ ಜಗದೇಕಮಲ್ಲನ ಕ್ರಿ.ಶ. ೧೧೮೪ರ ಶಾಸನದಲ್ಲಿ(ಚಿ. ೧೩) 'ದಕ್ಷಿಣ ಪರ್ವ್ವತ ನಾಗತೀರ್ತ್ಥ'ದ ಪ್ರಸ್ತಾಪವಿದೆ. ಡಾ॥ ಕೃಷ್ಣ ಅವರು ಚಿತ್ರದುರ್ಗ ಪರಿಸರದ ಜಲಾಶಯಗಳನ್ನು ಕುರಿತು ಹೇಳುವಾಗ, ನಾಗತೀರ್ಥವನ್ನು ಉಲ್ಲೇಖಿಸಿರುವರು. ಅವರು ಅಭಿಪ್ರಾಯಪಟ್ಟಿರುವಂತೆ, ದೊಡ್ಡಣ್ಣನ ಕೆರೆಯ ನೀರು ತಿಮ್ಮಣ್ಣನಾಯಕನ ಕೆರೆ ಮತ್ತು ಒಡ್ಡಿನ ಮೂಲಕ ಸಾಗಿ ಕೋಟೆಯ ಮೊದಲನೇ ಬಾಗಿಲ ಬಳಿಯ ನಾಗತೀರ್ಥವೆಂಬ ಕೊಳವನ್ನು ಸೇರುತ್ತಿದ್ದಿತು.[33] ನೀರನ್ನು ಹಾಯಿಸುವ ಈ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೂ ಹೀಗೇ ಇದ್ದುದು, ಈಗಲೂ ಇರುವುದು ದಿಟವಾದರೂ ಡಾ॥ ಕೃಷ್ಣ ಅವರು ಪ್ರಸ್ತಾಪಿಸಿರುವ 'ನಾಗತೀರ್ಥದ ಕೊಳ' ಇಲ್ಲಿ ಪರಿಶೀಲನಾರ್ಹ. ರಾಮದೇವರ ಒಡ್ಡನ್ನೇ ಅವರು ನಾಗತೀರ್ಥವೆಂದು ಭಾವಿಸಿರುವರೆಂಬುದು ಸ್ಪಷ್ಟಪಡುತ್ತದೆ. ಈ ಒಡ್ಡಿನ ಸಮೀಪದ ರಾಮನಾಥ ದೇವರಗುಡಿಯ ಹಿಂಬದಿಯಲ್ಲೆ ಅವರು ಸೂಚಿಸಿರುವ ಕೋಟೆಯ ದ್ವಾರವಿದ್ದು, ಅದು ಈ ಭಾಗದ ಮೊದಲನೆಯ ದ್ವಾರವೂ ಹೌದು.

ಆದರೆ ನಾವು ಭಾವಿಸುವಂತೆ, ಶಾಸನೋಕ್ತ 'ನಾಗತೀರ್ತ್ಥ'ವೇ ಅರಮನೆ ಆವರಣದ ಇಂದಿನ ನಾಗತೇ(ತಿಯ)ರ ಹರವು [ನಾಗತೀರ್ತ್ಥ<ನಾಗತ್ತೀರ <ನಾಗತೇರ<ನಾಗತೀಯರ+ಹರವು (=ವಿಸ್ತರಣೆ, ಪ್ರದೇಶ)] ಆಗಿರಬೇಕು. ವರ್ಣ ಸಮೀಕರಣದಿಂದ ಉಂಟಾದ ಧ್ವನಿ ಬದಲಾವಣೆಯಿಂದಾಗಿ ಈಗಿನ ರೂಪ ಬಂದಿದೆ ಎನ್ನಬಹುದು. ಜನಪದ ನಿರುಕ್ತಿಯಿಂದಲೂ ಈ ರೂಪ ಹುಟ್ಟಿರಬಹುದು. ಹೆಸರೇ ಸೂಚಿಸುವಂತೆ, ನಾಗತೀರ್ಥವು ನಾಗಸಂಬಂಧದ ಕ್ಷೇತ್ರವಾಗಿರುವುದಲ್ಲದೆ, ಸುಬ್ರಹ್ಮಣ್ಯೇಶ್ವರನಿಗೂ ನಾಗನಿಗೂ ಇರುವ ಸಂಬಂಧದ ಹಿನ್ನೆಲೆಯಲ್ಲಿ ಈ ಕ್ಷೇತ್ರದಲ್ಲಿ ಸುಬ್ರಹ್ಮಣ್ಯೇಶ್ವರ ದೇವರ ನೆಲೆಯೂ ಸ್ಥಾಪನೆಗೊಂಡಿರುವ ಸಾಧ್ಯತೆ ಹೆಚ್ಚು. 'ದಕ್ಷಿಣ ಪರ್ವ್ವತ'ವೆನ್ನುವುದು ಈ ದೇವಾಲಯದ ಹಿಂಬದಿಯಲ್ಲಿರುವ ಎತ್ತರದ ನೆಲ್ಲಿಕಾಯಿ ಸಿದ್ದಪ್ಪನಬೆಟ್ಟದ ಸಾಲು ಇರಬೇಕು. ಈ ಬಗೆಗೆ ಪರಿಶೀಲಿಸಬೇಕಿದೆ.

ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಅರಮನೆ ಆವರಣದ ಪೂರ್ವ ದಿಕ್ಕಿನ ಗುಡ್ಡಕ್ಕೆ ಹೊಂದಿದಂತಿರುವ ಕೋಟೆಸುತ್ತುಗಳಲ್ಲಿ 'ರಾಮದೇವರ ಒಡ್ಡಿನ ಸುತ್ತು' ಸಹಾ ಒಂದು. ಪೆರುಮಾಳೆದೇವನು ರಾಮದೇವರ ಒಡ್ಡಿಗೆ ಸನಿಹದ ಬೃಹತ್ ಬಂಡೆಯ ಅಡಿಯಲ್ಲಿ ಸ್ಥಾಪಿಸಲಾದ ರಾಮನಾಥದೇವರಿಗೆ ದತ್ತಿ ನೀಡಿದುದನ್ನು ಅಲ್ಲಿಯ ಬಂಡೆ ಶಾಸನ ಅರಹುತ್ತದೆ. ಮೇಲೆಯೇ ಪ್ರಸ್ತಾಪಿಸಿದಂತೆ, ಈ ದೇವನೆಲೆಯ ಹಿಂಭಾಗದಿಂದಲೇ ಕೋಟೆಯ ಒಳಪ್ರವೇಶಿಸಲು (ಹಾಗೂ ಹೊರಬರಲು) ಬಾಗಿಲಿದ್ದು, ಅಲ್ಲಿಂದ ಆರಂಭಗೊಳ್ಳುವ ಮಾರ್ಗವು ನೇರವಾಗಿ ಅರಮನೆ ಪರಿಸರವನ್ನು ತಲುಪುತ್ತದೆ. ಈ ಸಂಬಂಧದಲ್ಲಿ ಗಮನಾರ್ಹ ಅಂಶವೆಂದರೆ, ರಾಮದೇವರ ಒಡ್ಡಿಗೆ ಸಮೀಪದಲ್ಲಿಯೇ ವೈದಿಕವರ್ಗದವರ ರುದ್ರಭೂಮಿಯಿದ್ದು, ಅದು ಪ್ರಾಚೀನ ಕಾಲದಿಂದಲೂ ಚಾರಿತ್ರಿಕ ಮಹತ್ವದ ರುದ್ರಭೂಮಿ ಪರಿಸರವೆಂದು ಕಂಡುಬರುತ್ತದೆ. ಇಲ್ಲಿಯೇ ಹುಟ್ಟುಬಂಡೆಯೊಂದರ ಮೇಲಿರುವ ಚಕ್ರ-ಶಂಖ ಹಾಗೂ ತ್ರಿಪುಂಡ್ರ ಲಾಂಛನ ಸಹಿತವಿರುವ ೧೫೦ ಸೆಂ ಮೀ. ಎತ್ತರದ ಏಳು ಹೆಡೆಯ ಆದಿಶೇಷನ ಉಬ್ಬುಶಿಲ್ಪವು ಅತಿ ಮುಖ್ಯವಾದುದು. ಶ್ರೀವೈಷ್ಣವ ಪಂಥದ ಪ್ರಭಾವವು ಇಲ್ಲಿ ಉಂಟಾಗಿರುವುದು ಸ್ಪಷ್ಟ. ಈ ಶಿಲ್ಪದ ಮೂಲ ಆಶಯ ಏನಿರಬಹುದೆಂಬುದು ಸ್ಪಷ್ಟಪಡದಿದ್ದರೂ ಶೇಷಾಂಶರಾದ ರಾಮಾನುಜರು ಹಾವಿನ ರೂಪವನ್ನು ತಳೆದಿದ್ದರೆಂಬ ಐತಿಹ್ಯವನ್ನು[34] ವ್ಯಕ್ತಪಡಿಸುವುದರೊಡನೆ ಈ ಕ್ಷೇತ್ರಕ್ಕೆ 'ರಾಮಾನುಜ ರಕ್ಷೆ'ಯ ಸಂಕೇತವಾಗಿಯೂ

33 *Ibid*, p. 17

34 ಎಸ್. ಕೆ. ರಾಮಚಂದ್ರರಾವ್ : ತಿರುಪತಿ ತಿಮ್ಮಪ್ಪ, ಬೆಂಗಳೂರು, ೧೯೮೦, ಪು. ೫೩ ; ಇದಕ್ಕೆ ಶಿಲ್ಪಸಾಕ್ಷ್ಯವೂ ಇದೆ— ನೋಡಿ : *MAR.*, 1939. p. 28 : ತಮ್ಮ ಮತಲಾಂಛನ ಸಹಿತರಾದ ಹಾಗೂ ಪದ್ಮಾಸನ ಭಂಗಿಯಲ್ಲಿರುವ ರಾಮಾನುಜರ ಉಬ್ಬುಶಿಲ್ಪವೊಂದು ಮಂಡ್ಯ ಜಿಲ್ಲೆ, ತೊಣ್ಣೂರಿನ ಯೋಗಾನರಸಿಂಹ ದೇವಾಲಯದ ನವರಂಗದ ಈಶಾನ್ಯ ಮೂಲೆಯಲ್ಲಿದ್ದು, ಈ ಬಿಂಬದ ಶಿರೋಭಾಗದಲ್ಲಿ ಏಳುಹೆಡೆಯ ಆದಿಶೇಷನನ್ನು ಬಿಡಿಸಲಾಗಿದೆ.

ಈ ಶಿಲ್ಪ ಮೂಡಿದ್ದಿರಬಹುದು. ಅಲ್ಲದೆ, ಈ ಪರಿಸರದಲ್ಲಿ ಹೊಯ್ಸಳರ ಅವಧಿಯ ಹಲವಾರು ಜೈನ ನಿಸದಿಗೆ ಬರಹಗಳು ಬೆಳಕಿಗೆ ಬಂದಿವೆಯೆನ್ನುವುದೂ ಗಮನೀಯ. ಆದಿಶೇಷನ ಉಬ್ಬುಶಿಲ್ಪವುಳ್ಳ ಬಂಡೆಯ ಹಿಂಬದಿಯಲ್ಲೇ ಹುಟ್ಟುಬಂಡೆಯ ಮೇಲೆ ಇಂತಹ ನಿಸದಿಗೆ ಬರಹವೂ ಸನಿಹದಲ್ಲೆ ಮತ್ತೆ ಕೆಲವು ಬರಹಗಳೂ ಕಂಡು ಬಂದಿರುವುದು ಕುತೂಹಲಕಾರಿಯಾಗಿದೆ. ಇವುಗಳ ಹಿನ್ನೆಲೆಯಲ್ಲಿ, ಇಲ್ಲಿಯ ರಾಮದೇವರ ನೆಲೆ ಮತ್ತು ಸ್ಮಶಾನದ ನೆಲೆಗಳಿಗೂ ಬ್ರಹ್ಮಪುರಿಯ ವಿದ್ವಾಂಸವರ್ಗ ಹಾಗೂ ಅವರ ಪರಿವಾರಕ್ಕೂ ಇದ್ದ ಸಂಬಂಧ ಕುರಿತು ಆಲೋಚಿಸಬಹುದಾಗಿದೆ.

ಶೃಂಗಾರತೋಟ : ಶ್ರೀವೈಷ್ಣವ-ವೈಷ್ಣವ ಕ್ಷೇತ್ರಗಳಲ್ಲಿ ದೇವಾಲಯಕ್ಕೆ ಸಂಬಂಧಿಸಿದ ತೋಟ/ವನಗಳಿಗೆ ಇರುವ ಹೆಸರುಗಳಲ್ಲಿ ಶೃಂಗಾರತೋಟವೆಂತಲೂ ತುಳಸಿತೋಟವೆಂತಲೂ ಇರುವುದುಂಟು. ಶ್ರೀವಿಷ್ಣು ಮತ್ತು ತುಳಸಿಯರ ಆಧ್ಯಾತ್ಮಿಕ ಸಂಬಂಧದ ದ್ಯೋತಕವಾಗಿ ತುಳಸಿತೋಟವನ್ನು ಗುರುತಿಸಲಾಗುತ್ತದೆ.[35] ತುಳಸಿಯನ್ನು 'ಶೃಂಗಾರ ಪತ್ರ'ವೆಂತಲೂ ಕರೆಯಲಾಗಿದ್ದು, ಕೇಶವನಿಗೆ ಸಂಬಂಧಿಸಿದಂತೆ ಇದರ ಪ್ರಸ್ತಾಪ ಬರುತ್ತದೆ. 'ಶೃಂಗಾರಶೀಲ'ನಾದ ವೇಣುಗೋಪಾಲನಿಗೂ 'ಶೃಂಗಾರತೋಟ'ಕ್ಕೂ ಇರುವ ನಂಟು ಈ ಬಗೆಯದು. 'ಗಣಪತಿ ಹುಟ್ಟಿನ ಐತಿಹ್ಯ'ದ ಸಂಬಂಧದಲ್ಲಿ ಶಿವ-ಶಿವೆಯರು 'ಶೃಂಗಾರತೋಟ'ದಲ್ಲಿದ್ದ ಸಂದರ್ಭವನ್ನು ಶಾಂತಲಿಂಗ ದೇಶಿಕನು ತನ್ನ ಕಾವ್ಯದಲ್ಲಿ ಪ್ರಸ್ತಾಪಿಸಿರುವುದನ್ನು ಸಹಾ ಇಲ್ಲಿ ಗಮನಿಸಬಹುದು.[36]

'ಶೃಂಗಾರ' ಎಂಬುದರಿಂದ ರೂಪುಗೊಂಡಿರಬಹುದಾದ ಹಲವಾರು ಊರುಗಳು ಕರ್ನಾಟಕದಲ್ಲಿವೆ. ಅವುಗಳಲ್ಲಿ 'ಶೃಂಗಾರಪುರೀ' ಎಂಬುದು ಶಾಸನೋಕ್ತ (ಆಲೂರು–ಹಾಸನ, ೪೧). ಈಗ ಬಳಕೆಯಲ್ಲಿರುವ ಕೆಲವು ಸ್ಥಳನಾಮಗಳೆಂದರೆ ಶೃಂಗಾರಪುರ, ಶೃಂಗಾರಸಾಗರ (ಅಗ್ರಹಾರ), ಶೃಂಗಾರತೋಟ (ಶುಂಗರತೋಟ),[37] ಶೃಂಗಾರಬಾಗು, ಶೃಂಗಾರಕಟ್ಟೆ, ಶಿಂಗಾರಕೊಪ್ಪ, ಶಿಂಗರವಳ್ಳಿ, ಸಿಂಗರಹಳ್ಳಿ, ಸಿಂಗಾರಗಾಂವ ಇತ್ಯಾದಿ.

---

35 ಬೆಂಗಳೂರಿನ ಅಕ್ಕಿಪೇಟೆ ವ್ಯಾಪ್ತಿಗೆ ಬರುವ ತುಳಸಿತೋಟವು (ಚಿಕ್ಕ ಲಾಲ್‌ಬಾಗ್) ಹಿಂದಿನ ಧರ್ಮಾಂಬುಧಿ ಕೆರೆಯ ಏರಿಗೆ ಹೊಂದಿಕೊಂಡಿದ್ದು, ಪ್ರಸನ್ನ ಕೃಷ್ಣಸ್ವಾಮಿ (ನವನೀತ ಕೃಷ್ಣ), ಲಕ್ಷ್ಮೀನರಸಿಂಹ, ಶ್ರೀರಾಮ ಮೊದಲಾದ ದೇವರುಗಳನ್ನೊಳಗೊಂಡ ಶ್ರೀ ವೈಷ್ಣವ ನೆಲೆಯಾಗಿರುವುದನ್ನು ಗಮನಿಸಬಹುದು.

36 ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಭಾಗ ೧, ಪು. ೧೪

37 ಇದು ಬಳ್ಳಾರಿ ಜಿಲ್ಲೆ, ಹರಪನಹಳ್ಳಿಗೆ ೪ ಕಿ. ಮೀ. ದೂರದಲ್ಲಿದೆ. ಈ ಊರು ಇಂದಿಗೂ ದುಂಡು ಮಲ್ಲಿಗೆ, ಸೂಜಿ ಮಲ್ಲಿಗೆ, ಕನಕಾಂಬರ, ಸೇವಂತಿಗೆಯಂತಹ ಹೂ ಬೆಳೆಗೆ ಪ್ರಸಿದ್ಧಿ ಪಡೆದಿದೆ. ಇಲ್ಲಿ ಆಂಜನೇಯ, ಬಸವಣ್ಣ ಮತ್ತು ದುರ್ಗಮ್ಮರ ಗುಡಿಗಳು ಮಾತ್ರ ಇವೆ. ಹಿಂದೆ ಹರಪನಹಳ್ಳಿಯ ದೊರೆ ಸೋಮಶೇಖರನಾಯಕನ ಮಗಳು ಇಲ್ಲಿಯ ತೋಟಕ್ಕೆ ಬರುತ್ತಿದ್ದಳಂತೆ. ಇಲ್ಲಿಯ ಶಾನುಬೋಗ (ಹರಪನಹಳ್ಳಿಯ ಜೋಯಿಸರ ಓಣಿಯ ನಿವಾಸಿ)ಮೋಹನರಾವ್ ಅವರ ಪ್ರಕಾರ, ಈ ಗ್ರಾಮವು ವೈಷ್ಣವ ಕ್ಷೇತ್ರವಲ್ಲ ; ಹರಪನಹಳ್ಳಿ ಸಮೀಪದ ತಿಮ್ಮಲಾಪುರದ ವೆಂಕಟೇಶ್ವರ ದೇವರಿಗೂ ಈ ಊರಿಗೂ ಯಾವುದೇ ಸಂಬಂಧವಿಲ್ಲ.

ಹರಪನಹಳ್ಳಿಯು ಪೂರ್ವದಿಂದಲೂ ಮಾಧ್ವ ಸಂಪ್ರದಾಯದವರ ಕೇಂದ್ರವಾಗಿದೆಯೆನ್ನುವುದು, ಅವರ ಸಂಖ್ಯೆ ಹೆಚ್ಚಾಗಿರುವುದು ಗಮನಾರ್ಹ. ಇಲ್ಲಿ ವಾದಿರಾಜ, ಮಧ್ವಾಚಾರ್ಯ, ಶಂಕರಾಚಾರ್ಯ ಮತ್ತು ರಾಘವೇಂದ್ರಸ್ವಾಮಿ ಮಠಗಳಿವೆ. ಈ ಹಿನ್ನೆಲೆಯಲ್ಲಿ, ನಾವು ಭಾವಿಸುವಂತೆ, ತಿಮ್ಮಲಾಪುರದ ವೆಂಕಟೇಶ್ವರ ದೇವರಿಗೂ ಶೃಂಗಾರತೋಟ ಗ್ರಾಮಕ್ಕೂ ಸಂಬಂಧ ಇದ್ದಿರಬೇಕಲ್ಲದೆ, ಇದಕ್ಕೂ ಪೂರ್ವದಲ್ಲಿ ಶೃಂಗಾರತೋಟದ ಹೆಸರು ಬಳಕೆಯಲ್ಲಿದ್ದಿರಬೇಕು. ವೆಂಕಟೇಶ್ವರ ದೇವಾಲಯಕ್ಕೂ ಶೃಂಗಾರತೋಟಕ್ಕೂ ಅಡ್ಡರಸ್ತೆಯ ಮೂಲಕ ಕಂಡುಬರುವ ಅಂತರ ಸುಮಾರು ೪-೫ ಕಿ.ಮೀ. ಮಾತ್ರ. ಈ ಬಗೆಗೆ ಅಧಿಕ ಮಾಹಿತಿ ಸಂಗ್ರಹಿಸಬೇಕಿದೆ. ಇಲ್ಲಿಯ ಕೆಲವು ಸಂಗತಿಗಳನ್ನು ಚರ್ಚಿಸುವಲ್ಲಿ ಸಹಕರಿಸಿದವರೆಂದರೆ ಹರಪನಹಳ್ಳಿಯ ಕುಂ. ಬಾ. ಸದಾಶಿವಪ್ಪ ಅವರು.

ಚನ್ನಗಿರಿ ತಾಲ್ಲೂಕು 'ಶೃಂಗಾರಬಾಗು' ಎಡೆಯನ್ನು ಸಹಾ ಈ ದೃಷ್ಟಿಯಿಂದ ಗಮನಿಸಬೇಕಿದೆ.

ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಬಾಗೂರಿನಲ್ಲಿ ಕ್ರಿ.ಶ. ೧೫೧೫ರಲ್ಲಿ ಮಲ್ಲರಸಯ್ಯನೆಂಬುವನು 'ಸಿಂಗರತೋಪು'('ಮಲ್ಲರಸನ ತೋಪು') ಮಾಡಿಸಿದನೆಂದು ಶಾಸನದಲ್ಲಿ ಹೇಳಿದೆ.[38] ಇಲ್ಲಿ ಚನ್ನಕೇಶವ (ಚೆಂನಿಗರಾಯ)ನ ದೇವಾಲಯವಿದ್ದು, ಈ ದೇವರಿಗೆ 'ಪಂಚಪರ್ವ' ಮೊದಲಾದ ಉತ್ಸವಗಳು ನಡೆಯುತ್ತಿದ್ದವೆಂದು ಸಹಾ ಅಲ್ಲಿಯೇ ಪ್ರಸ್ತಾಪಿಸಿದೆ. ಹಾಗೆಯೇ ಹೈದರ್‌ಅಲಿ ಖಾನನು ಶ್ರೀರಂಗಪಟ್ಟಣದಲ್ಲಿ "ಉಭಯ ಕಾವೇರಿ ಮಧ್ಯ ಯರಡು ಶೃಂಗಾರ ತೋಟ ಹೊಸ್ತಾಗಿ ನಿರ್ಮಿಶಿ ಲಾಲಬಾಗ ದರಿಯಾದವಲತ್ತು ಬಾಗೂ ಯೆಂದು ಹೆಸರಿಟ್ಟು" ಈ ತೋಟಗಳನ್ನು ಅಭಿವೃದ್ಧಿ ಪಡಿಸಿದುದರ ಬಗೆಗೆ ನಲ್ಲಪ್ಪನು ತನ್ನ 'ಹೈದರ್‌ನಾಮಾ' ದಲ್ಲಿ ಹೇಳಿದ್ದಾನೆ.[39] ಶೃಂಗಾರತೋಟವೆಂಬುದು ಪೂರ್ವದಲ್ಲಿಯೇ ಇಲ್ಲಿಯ ಶ್ರೀರಂಗನಾಥ ಮತ್ತು ಲಕ್ಷ್ಮೀನರಸಿಂಹ ದೇವರುಗಳಿಗೆ ಮೀಸಲಾದ ಹೂದೋಟವಾಗಿದ್ದಿರಬಹುದು. ಹಂಪೆಯ ಪರಿಸರದಲ್ಲಿರುವ ಸಿಂಗಾರದ ಹೆಬ್ಬಾಗಿಲು (Monumental Gate)ಮತ್ತು ಸಿಂಗಾರ ಪುರಗ್ರಾಮ ಇವುಗಳನ್ನೂ ಗಮನಿಸಬೇಕು. ಈ ಎಲ್ಲವುಗಳ ಹಿನ್ನೆಲೆಯಲ್ಲಿ ಶ್ರೀವೈಷ್ಣವ-ವೈಷ್ಣವ ಧಾರ್ಮಿಕ ಪ್ರಭಾವ ಇರುವುದನ್ನು ಗುರುತಿಸಬಹುದು.

ತಮಿಳುನಾಡಿನಲ್ಲಿ ವೇಣುಗೋಪಾಲ ದೇವರಿಗೆ ಸಂಬಂಧಿಸಿದ ಹೂದೋಟವನ್ನು ಮಾತ್ರ ಶೃಂಗಾರ ತೋಟವೆಂದು ಕರೆಯುವುದಾಗಿ ವ್ಯಕ್ತಪಡುತ್ತದೆ.[40]

ಪೆರುಮಾಳೆದೇವನು ಚಿತ್ರದುರ್ಗ ಬೆಟ್ಟದಲ್ಲಿ ತಾನು ಮಾಡಿದ ಪುರದಲ್ಲಿ ಬ್ರಾಹ್ಮಣ ವಿದ್ವಾಂಸರ ಜೀವನಕ್ಕೆ ವ್ಯವಸ್ಥೆಗೊಳಿಸಿದಂತೆಯೇ ಗೋಪಾಲ ದೇವರಿಗೆ ಹೂದೋಟವನ್ನು ಮಾಡಿಸಿದನೆಂಬುದಕ್ಕೆ ಇಲ್ಲಿಯ ಶೃಂಗಾರತೋಟದ ಬಯಲೇ ಸಾಕ್ಷಿಯಾಗಿದೆ. ಈ ತೋಟಕ್ಕೆ ನೀರು ಹಾಯಿಸಲು ಗೋಪಾಲಸ್ವಾಮಿ ಹೊಂಡದ ದಕ್ಷಿಣದಂಡೆಯ ಪಶ್ಚಿಮದ ಮೂಲೆಯಲ್ಲಿ ಪ್ರಾಚೀನ ಪದ್ಧತಿಯ ನೀರಿನ ಕಾಲುವೆಗಳಿರುವುದನ್ನೂ ನೀರನ್ನು ಹೊಂಡದಿಂದ ಎತ್ತಿಹಾಯಿಸಲು ಇಲ್ಲಿಯ ಕಟ್ಟೆಯಲ್ಲಿಯೇ ಅಳವಡಿಸಿರುವ ಕಲ್ಲಿಂತೊಲೆಗಳಿಂದ ನಿರ್ಮಿಸಿರುವ ನೀರುಗುಂಡಿಗಳನ್ನೂ ಗಮನಿಸಬಹುದು.(ನಾಯಕ ಅರಸರ ಕಾಲದಲ್ಲಿ ಮತ್ತು ಇತ್ತೀಚೆಗೆ ನಿರ್ಮಿಸಲಾಗಿರುವ ಎರಡು ಏತದ ಕಟ್ಟೆಗಳು ಇದೇ ದಂಡೆಯ ಪೂರ್ವದಿಕ್ಕಿನ ಮೂಲೆಯಲ್ಲಿ ಉಳಿದುಬಂದಿವೆ).

ಶೃಂಗಾರತೋಟದ ಮೂಲಸ್ವರೂಪವು ಹೇಗಿದ್ದಿತೋ ತಿಳಿದುಬರುವುದಿಲ್ಲ. ಆದರೆ ಈಚಿನವರೆಗೂ ಇಲ್ಲಿಯ ತೋಟವು ಉಳಿದು ಬಂದಿದ್ದಿತೆನ್ನುವುದಕ್ಕೆ ಪುರಾವೆಗಳಿವೆ. ನಾಯಕ ಅರಸ ಬಿಚ್ಚುಗತ್ತಿ ಭರಮಣ್ಣ ನಾಯಕನು ತನ್ನ ಆಳ್ವಿಕೆಯಲ್ಲಿ ಮೇಲುದುರ್ಗ(ಬೆಟ್ಟ ಮತ್ತು ಕೋಟೆಯ ಪ್ರದೇಶ)ದಲ್ಲಿ ದೊಡ್ಡತೋಟ ಮತ್ತು ಶೃಂಗಾರತೋಟಗಳನ್ನು ಮಾಡಿಸಿದನೆಂದು ಚರಿತ್ರೆಯಲ್ಲಿ ಹೇಳಿದೆ. ಬೆಟ್ಟದ ಮೇಲೆ ಒಂದೆರಡು ತೋಟದ ಬಯಲುಗಳು ಕಂಡುಬಂದರೂ ಅವುಗಳ ಕ್ಷೇತ್ರ ಶೃಂಗಾರತೋಟದಷ್ಟು ವಿಸ್ತಾರವಾದುದಲ್ಲ. ಆದರೆ ಈ ಅರಸನ ಕಾಲದಲ್ಲೆ ಮೇಲುದುರ್ಗದಲ್ಲಿ 'ಕರೇಕಲ್ಲು ಹೊಂಡ'ವನ್ನು ಮಾಡಿಸಲಾಯಿತೆಂತಲೂ ಹೇಳಿದ್ದು, ಗೋಪಾಲಸ್ವಾಮಿ ಹೊಂಡವನ್ನು ಈ ಹೆಸರಿನಿಂದಲೂ ಕರೆಯುವುದು ವಾಡಿಕೆ. ಈ ಹೊಂಡದ ವಾಸ್ತುವನ್ನು ಗಮನಿಸಿದರೆ, ಇದರ ಉತ್ತರದ ದಂಡೆಯನ್ನು ವಿಸ್ತರಿಸಿ ಕಟ್ಟಿರುವ ಲಕ್ಷಣಗಳಿವೆ. (ಇದರ ರಚನೆಗೂ ದಕ್ಷಿಣ ದಂಡೆಯ ಕಟ್ಟೆಯ ರಚನೆಗೂ ಅಗಾಧ ವ್ಯತಾಸವಿದೆ).[41] ಇಲ್ಲಿ ನಿರ್ಮಿಸಲಾಗಿರುವ ಅಡ್ಡಗಟ್ಟೆ (ಕೋಡಿಕಟ್ಟೆ)ಯಲ್ಲಿ ಸುಂದರವಾದ ಏತಗಟ್ಟೆ ಮತ್ತು

38 *EC.*, XI, Holalkere, 119

39 ತಿ. ತಾ. ಶರ್ಮ (ಸಂ.) : ಚಾರಿತ್ರಿಕ ದಾಖಲೆಗಳು, ಬೆಂಗಳೂರು, ೧೯೭೧, ಪು. ೩೯-೪೦

40 ಈ ಸಂಗತಿಯನ್ನು ನನಗೆ ತಿಳಿಸಿದವರು ಅ. ಲ. ನರಸಿಂಹನ್ ಅವರು.

41 ಈ ಹೊಂಡ ಪರಿಸರದ ಬಂಡೆಗಳನ್ನು ಪರಿಶೀಲಿಸಿದರೆ, ಈಗಿನ ರಚನೆಗಿಂತ ಭಿನ್ನವಾಗಿದ್ದ ಮೂಲರಚನೆಯ ಯೋಜನೆಯು ಆಗಿನವರಿಗೆ ಇದ್ದಿತೆಂಬುದು ಮನದಟ್ಟಾಗುತ್ತದೆ. ಅದಕ್ಕೆ ಸಂಬಂಧಿಸಿದ ಕುರುಹುಗಳು ಈ ಬಂಡೆಗಳ ಮೇಲೆ ಸ್ಪಷ್ಟವಾಗಿ ಗೋಚರಿಸುತ್ತವೆ. ಹಿಂದಿನಿಂದಲೂ ಶೃಂಗಾರತೋಟ ಮೊದಲಾದವುಗಳಿಗೆ ನೀರೊದಗಿಸುತ್ತ ಬಂದ ಹಾಗೂ ಇಂದಿಗೂ ಉಪಯುಕ್ತವಾಗಿರುವ ಈ ಹೊಂಡವು ಯಾವ ಕಾಲಕ್ಕೂ ಬತ್ತಿಹೋಗದಿರುವುದು ನಿಸರ್ಗವು ಕರುಣಿಸಿದ ವರವೆನಿಸಿದೆ.

ಕೋಡಿಬಾಗಿಲುಗಳನ್ನು ಅಳವಡಿಸಲಾಗಿದ್ದು, ಈ ಕಟ್ಟೆಗೆ ಹೊಂದಿಕೊಂಡಿರುವ ಬಯಲಿನಲ್ಲಿ ಇದ್ದ ವನವನ್ನೇ 'ದೊಡ್ಡತೋಟ' ಎಂದಿರಬಹುದು. (ಇಲ್ಲಿಯೂ ಈಚಿನವರೆಗೆ ತೋಟ ಮಾಡಲಾಗುತ್ತಿದ್ದಿತು).

ಭರಮಣ್ಣನಾಯಕನು ಶೃಂಗಾರತೋಟವನ್ನು ಮಾಡಿಸಿದನೆಂಬ ಸಂಗತಿಯು, ಆತನು ಆ ತೋಟವನ್ನು ಅಭಿವೃದ್ಧಿ ಪಡಿಸಿದ ಬಗೆಗೆ ಸೂಚ್ಯವಾಗಿ ಹೇಳಿದಂತಿದೆ, ಅಷ್ಟೆ. ಶೃಂಗಾರತೋಟವನ್ನು 'ಮಹಲ್‌ತೋಟ'ವೆಂತಲೂ ಕರೆಯಲಾಗುತ್ತಿದ್ದಿತೆಂದು ತಿಳಿದಿರುವುದರಿಂದ ಅರಸರು ಈ ತೋಟದ ಸುಧಾರಣೆಗೆ ಗಮನಹರಿಸುತ್ತಿದ್ದುದು ಸಹಜ.[42] ಈ ತೋಟದ ಬಯಲು ಇತ್ತೀಚಿನವರೆಗೆ ಫಲ–ಪುಷ್ಪಭರಿತ ಮರ–ಗಿಡಗಳಿಂದ ತುಂಬಿದ್ದುದು ವಿಶೇಷವಾದುದು.[43]

ಪಂಚಕೇಶ್ವರದ ಯಿಂದ್ರಪರ್ವದ ಧರ್ಮ : ಪೆರುಮಾಳೆದೇವನು ತಾನು ಮಾಡಿದ ಪುರದಲ್ಲಿ ನಡೆಸುವ 'ಪಂಚಕೇಶ್ವರದ ಅಯಿಂದ್ರ ಪರ್ವದ ಧರ್ಮಕ್ಕೆ' ತಾನು ಮಾಡಿದ ಪೆರುಮಾಳೆಸಮುದ್ರದ ಕೆರೆಯ ಕೆಳಗೆ ಸ್ವಲ್ಪ ಭೂಮಿಯನ್ನು ದತ್ತಿಯಾಗಿ ಬಿಟ್ಟಿದ್ದು, ಆ ಬಗೆಗೆ ತಾನು ಹಾಕಿಸಿದ ಶಾಸನದಲ್ಲಿಯೂ (ಚಿ. ೧೨) ಕಾಣಿಸಿದ್ದಾನೆ. ಇಲ್ಲಿ 'ಪಂಚಕೇಶ್ವರ' ಎಂಬುದು ಒಂದು ಧಾರ್ಮಿಕ ವಿಧಿಯೆಂದೇ ಬಹುಪಾಲು ಶಾಸನಗಳಲ್ಲಿ ಉಕ್ತವಾಗಿದೆ.[44] ಮುಖ್ಯವಾಗಿ, ಇದು ಶ್ರೀವೈಷ್ಣವ–ವೈಷ್ಣವ ಧಾರ್ಮಿಕ ಉತ್ಸವವಾಗಿ ಕಂಡುಬರುತ್ತದೆ,

ಪೆರುಮಾಳೆದೇವನು ತನ್ನ ಜಹಗೀರಿಯಾದ 'ಉದ್ಭವ ನರಸಿಂಹಪುರವಾದ ಬೆಳ್ಳೂರಿನ' ಶ್ರೀಮಂದಗ್ರಹಾರದಲ್ಲಿ ಪಂಚಕೇಶ್ವರದ ಉತ್ಸವ ಮತ್ತು ಆರಣ

---

42 'ಚಿತ್ರದುರ್ಗದ ಬಖೈರ್'ನಲ್ಲಿ ಹೇಳಿರುವಂತೆ, ಕಿಲ್ಲೆಯ ಉಪವನ(ಉದ್ಯಾನ)ದಲ್ಲಿ ಬಹಳವಾಗಿ ಮಲ್ಲಿಕಾ, ಜಾಜಿ, ಪಂಚ ಗುಲಾಬ್, ಕಮಲ ವಗೈರೆ ಪುಷ್ಪಗಳಿದ್ದು, ಇವುಗಳ ಸುವಾಸನೆಯಿಂದ ಮನಸ್ಸು ಹರ್ಷಾಯಮಾನವಾಗುತ್ತಿದ್ದಿತು. ಇಲ್ಲಿ ನಾನಾ ಜಾತಿಯ ಪಕ್ಷಿಗಳಿದ್ದವು (ಪು. ೬೭). 'ಮದಕರಿರಾಜೇಂದ್ರ ದಂಡಕ'ದಲ್ಲಿ, ಈ ಗಿರಿಯಲ್ಲಿಯ 'ರಂಭಾ ಕದಂಬಾದಿ ನಾನಾ ಲತಾ ಪದ್ಮ ಕರೋದ್ಯಾನ ರೇಖಾ'ದ ವರ್ಣನೆಯಿದೆ.

43 ಸುಮಾರು ೮೦ ವರ್ಷಗಳ ಹಿಂದೆ ದುರ್ಗದ ಚಪ್ಪೆಚಾವಡಿ ದಳವಾಯಿಗಳ ಮನೆತನದ ದಿವಂಗತ ಸಿ. ಪರಶುರಾಮನಾಯಕ ಅವರ ತಂದೆಯವರು ಇಲ್ಲಿ ತೋಟಗಾರಿಕೆಯ ಗುತ್ತಿಗೆ ಹಿಡಿದಿದ್ದ ಸಂದರ್ಭದಲ್ಲಿ ಇದ್ದ ಈ ತೋಟದ ಸ್ಥಿತಿಯೆಂದರೆ, ಆಗ ಇಲ್ಲಿ ಕೊಬ್ಬರಿಮಾವು, ಅಡಿಕೆಮಾವು, ಕಸಿಮಾವು, ದೊರೆತಿನ್ನೋಮಾವು, ಮೂಲೆ(ಜೇನುತುಪ್ಪದ)ಮಾವು, ಜೀರಿಗೆ ಮಾವು, ಅಂಬಲಿಮಾವು, ಚಂದ್ರಮಾವು– ಈ ವಿವಿಧ ಬಗೆಯ ಮಾವಿನ ಜಾತಿಯ ಮರಗಳೂ ಜಾಜಿ, ಪಾರಿಜಾತ, ನನ್ನಿಬಟ್ಲು, ಸೇವಂತಿಗೆ, ಮರುಗ, ದಾಸವಾಳ(ಬಿಳಿ ಮತ್ತು ಕೆಂಪು), ಸುತ್ತು ಮಲ್ಲಿಗೆ, ಕಸ್ತೂರಿ ಜಾಲಿ, ಗುಲಾಬಿ, ಇತ್ಯಾದಿ ಹೂವಿನ ಗಿಡಗಳೂ ಬೆಳೆದಿದ್ದುವು. ಈ ಮಾವಿನ ವೃಕ್ಷಜಾತಿಯ ಸಸಿಗಳನ್ನು ಅನಂತರ ತಿಮ್ಮಣ್ಣನಾಯಕನ ಕೆರೆಯ ಅಂಗಳದಲ್ಲಿ ನೆಡಲಾಯಿತಂತೆ.

ಚಿತ್ರದುರ್ಗದ ಚೆಟ್ಟಿಗಳ ವಂಶಸ್ಥರಾದ ಸಿ. ಎಂ. ನರಸಿಂಹಚೆಟ್ಟಿ ಅವರು ಹೇಳುವಂತೆ, ಈಗ ಹೈದರಾಬಾದ್ ಕಡೆಗೆ ಬೆಳೆಯಲಾಗುತ್ತಿರುವ, ತುಂಬಾ ರುಚಿಕರವಾಗಿದ್ದು ಚಪ್ಪಟೆಯಾಕಾರದಲ್ಲಿರುವ 'ದೊಡ್ಡ/ಸಣ್ಣ ದಬ್ಬೆಗ' ಜಾತಿಯ ಮಾವಿನ ಹಣ್ಣಿನ ಮರಗಳನ್ನು ಇಲ್ಲಿ ಬೆಳೆಸಲಾಗಿದ್ದಿತು. ಅಲ್ಲದೆ, ಮೇಲುದುರ್ಗದ ತೋಟಗಳಲ್ಲಿ ವಿಪುಲವಾಗಿ ನೀಲಿ ಹೂ ಬಿಡುವ ಅಸಂಖ್ಯಾತ ಪಾದರಿ ವೃಕ್ಷಗಳಿದ್ದವು.

ಸುಮಾರು ೧೯೧೦ರಲ್ಲಿ ಈ ತೋಟ(ಶೃಂಗಾರವನ)ದ ಪರಿಸ್ಥಿತಿಯನ್ನು ಸ್ವತಃ ಕಂಡಿದ್ದ ಪಿ. ಕೃಷ್ಣರಾಯರು ದಾಖಲಿಸಿರುವುದು : "....ಇಲ್ಲಿ ಈಗ ಒಂದು ಮಾವಿನತೋಪು ಮಾತ್ರವಿದೆ. ಈ ಮರಗಳ ಗುಂಪಿನಲ್ಲಿ ಬಿಸಿಲುಕಾಲದಲ್ಲಿಯೂ ತಂಪಾದ ಆಶ್ರಯವು ದೊರೆಯುವುದು. ಬೆಟ್ಟವನ್ನು ನೋಡಲು ಬಂದ ಜನರೆಲ್ಲರೂ ಈ ಶೃಂಗಾರವನದಲ್ಲಿ ಬಿಡಾರವನ್ನು ಮಾಡಿಕೊಂಡು ಭೋಜನೋಪಹಾರಗಳಿಂದ ಕಾಲವನ್ನು ಕಳೆಯುವರು"–ಚಿತ್ರದುರ್ಗದ ಬೆಟ್ಟ ಮತ್ತು ನಾಯಕ ಸಾಮ್ರಾಜ್ಯ, ಬೆಂಗಳೂರು, ೧೯೫೭, ಪು. ೨೯-೩೦.

44 *MAR.*, 1927. Salur (Shimoga), 151, 870 A.D. ; *EC.*, VII (NS). Nagamangala 83, 1269 A.D. ; 74, 1271 A.D. ; 76, 1309 A.D.

ಪೂಜೆಗೆ ಏರ್ಪಾಟು ಮಾಡಿದುದು ಶಾಸನದಿಂದ ವ್ಯಕ್ತ ಪಡುತ್ತದೆ.[45] ಅಲ್ಲದೆ, ಈತನೇ ತಲಕಾಡಿನ ವೈದ್ಯ ನಾಥದೇವರ 'ಪಂಚಪರ್ವ್ವ'ಕ್ಕೆ ದತ್ತಿಬಿಟ್ಟದ್ದ ಬಗೆಗೆ ಕ್ರಿ.ಶ. ೧೪೪೦ರ ಶಾಸನವೊಂದು ಗುರುತಿಸುತ್ತದೆ.[46]

ಒಂದು ಪಡಿ (ಅರ್ಧಸೇರು) ಹೊನ್ನನ್ನು ಸಂಗ್ರಹಿಸಿ 'ಪಂಚಕೇಶ್ವರ'ವನ್ನು ಮೆರವಣಿಗೆ ಮಾಡಿಸಿ ನಂತರ ಮಂತ್ರಗಳನ್ನು ಹೇಳಿಸಿ ಆ ಹೊನ್ನನ್ನು ಪೂಜಿಸುವ ಒಂದು ಸಂಪ್ರದಾಯವೇ ಇದು.[47] ಸಂಗ್ರಹಿಸಿದ ಹೊನ್ನನ್ನು ದೇವಕಾರ್ಯ/ಉತ್ಸವಕ್ಕೆ ಉಪಯೋಗಿಸುತ್ತಿದ್ದರೆಂದು ತೋರುತ್ತದೆ. ಬೇಲೂರಿನ ಶಾಸನವೊಂದರಲ್ಲಿ ಬರುವ "ಹೊಯ್ಸಳೇಶ್ವರ ದೇವರ ಪಂಚಿಕೇಶ್ವರದ ವೋದಿದ ಬ್ರಾಹ್ಮಣರ ಪೂಜೆಗೋಸಂಗ" ಎಂಬ ಉಲ್ಲೇಖವನ್ನು[48] ಇಲ್ಲಿ ಗಮನಿಸಬಹುದು.

'ಯಿಂದ್ರಪರ್ವ'ದ ಪ್ರಸ್ತಾಪದಲ್ಲಿ, 'ಪರ್ವ' (ಕ. ಪರೇವು, ಪರವ್ವ, ಪರ) ಎಂಬುದು ಒಂದು ಸಾಮೂಹಿಕ ಹಬ್ಬವೆಂದು ವ್ಯಕ್ತಪಡುತ್ತದೆ. ಈ ಉತ್ಸವದ ಹಿಂದಿನ ದಿನ ಸಾವಿರಾರು ಕೊಡ ನೀರಿನಿಂದ ದೇವಸ್ಥಾನವನ್ನು ತೊಳೆದು ಶುಭ್ರಗೊಳಿಸಿ ಆದಿನ ಸಂಜೆ ಅಡುಗೆಗೆ ಪ್ರಾರಂಭಿಸುತ್ತಾರೆ. ಮಾರನೆಯ ದಿನ ದೇವರ ಉತ್ಸವಾದಿಗಳೆಲ್ಲ ಮುಗಿದ ಮೇಲೆ ಆ ಊರಿನ ಮತ್ತು ಬೇರೆ ಊರಿನ ಜನಗಳಿಗೆ ದೇವಸ್ಥಾನದ ಅಂಗಳದಲ್ಲಿ ಊಟಕ್ಕೆ ಹಾಕುತ್ತಾರೆ.[49] ಐಂದ್ರ(ಯಿಂದ್ರ)+ಪರ್ವ ವೆಂದರೆ ತೀರ್ಥಂಕರನ ಜನ್ಮಾಭಿಷೇಕವಾದ ಮೇಲೆ ದೇವೇಂದ್ರನು ಮಾಡುವ ಆನಂದ ನೃತ್ಯ+ಹಬ್ಬವೆಂತಲೂ ಹೇಳಿದೆ.[50] ಮಹಾಭಾರತದಲ್ಲಿ ಬರುವಂತೆ, ಇದು ಅರಣಿಪೂಜೆಯ ಸಂದರ್ಭದಲ್ಲಿ ನಡೆಯುವ ಹಬ್ಬ,

ಧರ್ಮಕಾರ್ಯಾಸಕ್ತನಾದ ಪೆರುಮಾಳೆದೇವನು ತಾನು ಮಾಡಿದ ಪುರದ ಗೋಪಾಲಕೃಷ್ಣ ದೇವರಿಗೆ ಇಲ್ಲಿಯ ಬ್ರಹ್ಮಪುರಿಯ ಬ್ರಾಹ್ಮಣರ ನೆರವಿನಿಂದ ಇಂತಹ ಉತ್ಸವವನ್ನು ಏರ್ಪಡಿಸಿದುದು ಇದರಿಂದ ಸ್ಪಷ್ಟಪಡುತ್ತದೆ. ಈ ಪಂಚಕೇಶ್ವರದ ಯಿಂದ್ರಪರ್ವ್ವದ ಧರ್ಮಕ್ಕಾಗಿ ಈತನು ದಾನವಾಗಿ ನೀಡಿದ ಭೂಮಿಯು ಪೆರುಮಾಳೆಪುರದ ಬ್ರಾಹ್ಮಣರಿಗೆ ಬಿಟ್ಟುಕೊಟ್ಟ ಕ್ಷೇತ್ರಕ್ಕೆ ಹೊಂದಿಕೊಂಡಂತೆಯೇ ಇದ್ದಿತೆಂಬುದು ತಿಳಿಯುತ್ತದೆ ; ಈಚೆಗೆ ಬೆಳಕಿಗೆ ಬಂದ ಕಲ್ಲುಬರಹವು ಅದನ್ನು ಸಮರ್ಥಿಸುತ್ತದೆ.

ಪೆರುಮಾಳೆಸಮುದ್ರ : ಪೆರುಮಾಳೆದೇವನು ತನ್ನ ಅಧಿಕಾರದ ಅವಧಿಯಲ್ಲಿ ಚಿತ್ರದುರ್ಗ ಪರಿಸರದಲ್ಲಿ ಕೈಗೊಂಡ ಜನೋಪಕಾರಿ ಕೆಲಸಗಳಲ್ಲಿ ಕೆರೆಯ ನಿರ್ಮಾಣ ಮುಖ್ಯವಾದುದು. ಪೂರ್ವದಲ್ಲೇ ಇದ್ದ ಕುರುಬರ ಕಾಳೆಯನ ಕೆರೆಯನ್ನು ಕ್ರಯಕ್ಕೆ ಕೊಂಡು ಪೆರುಮಾಳೆದೇವನು ತನ್ನ ಹೆಸರಿನಲ್ಲಿ 'ಪೆರುಮಾಳೆಸಮುದ್ರ'ವೆಂದು ಹೊಸದಾಗಿ ಕಟ್ಟಿಸಿ, ಆ ಕೆರೆಯ ವ್ಯಾಪ್ತಿಗೊಳಪಡುವ ಭೂಮಿಯನ್ನು ವಿಂಗಡಿಸಿ ಬ್ರಹ್ಮಪುರಿಯ ಬ್ರಾಹ್ಮಣರಿಗೆ ಕೊಟ್ಟ ಸಂಗತಿಯನ್ನು ಮೇಲೆಯೇ ಪ್ರಸ್ತಾಪಿಸಿದೆ.[51]

---

45 *EC*., VII (NS), Nagamangala 74

46 *Ibid*., Malavalli 102

47 *MAR*., 1927, pp. 133-134 ; ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೬೬, ಪು. ೧೯೪

48 *EC*., V, Belur 101, c 13th Century

49 ಕಶಾಸಾಂಅ., ಪು. ೧೯೪

50 ತ. ಸು. ಶಾಮರಾಯ, ಪ. ನಾಗರಾಜಯ್ಯ (ಸಂ.) : ಜೈನ ಪರಿಭಾಷಾ ರತ್ನಕೋಶ, ಬೆಂಗಳೂರು, ೧೯೮೧, ಪು. ೬೧, ೧೬೪

51 ಹಾಸನ ಜಿಲ್ಲೆಯ ಹಾನುಗಲ್ಲಿನ ಚೋಳೇಶ್ವರ ದೇವಾಲಯದ ಮುಂದಿರುವ ಕ್ರಿ.ಶ. ೧೨೮೦ರ ಶಾಸನವು, ಪೆರುಮಾಳೆದೇವನು ಚಿತ್ರದುರ್ಗದಲ್ಲಿ ತನ್ನ ಹೆಸರಿನಲ್ಲಿ ಕೆರೆಯನ್ನು ಮಾಡಿಸುವ ಮೊದಲೇ ಆತನು ಧರ್ಮಪೂರ್ವಕವಾಗಿ ಮಾಡಿಸಿದ ಹಾನುಗಲ್ಲಿನ ಕೆರೆಯನ್ನು ಸಹಾ 'ಪಿ(ಪೆ)ರುಮಾಳಸಮುದ್ರ'ವೆಂದೇ ಕರೆಯಲಾದ ಬಗೆಗೆ ತಿಳಿಸುತ್ತದೆ–*MAR*., 1924, pp. 24-26.

ಶಾಸನದಲ್ಲಿ (ಚಿ. ೧೨) 'ಚತುಸ್ಸೀಮೆಯಲು ನಾಡುನಟ್ಟು ಕೊಟ್ಟ ಕಲ್ಲುಗಳಿಂದೊಳಗಣ ಕ್ಷೇತ್ರವನೂ' ಗುರುತಿಸಿ ಈ ಕೆರೆಯ ನೆಲೆಯನ್ನು ನಿರ್ದೇಶಿಸಿದೆ. ಆದರೆ ಪ್ರಸ್ತುತ ಭೌಗೋಳಿಕ ಪರಿಸರವು ಬಹಳಷ್ಟು ಬದಲಾಗಿ ಹೋಗಿರುವ ಕಾರಣ ಈ ಎಲ್ಲೆಯನ್ನು ಮರುನಿರ್ಧರಿಸು ವುದು ತುಸು ಕಷ್ಟದಾಯಕವಾದರೂ ಈ ಪರಿಸರದ ಒಂದೆರಡು ಎಡೆಗಳನ್ನು ಗುರುತಿಸಬಹುದು. ಇವೆಲ್ಲವೂ ಸರಿಸುಮಾರಾಗಿ ಚಿತ್ರದುರ್ಗ ಪರಿಸರದ ಕೆಳಗೋಟೆ, ಗೋಪಾಲಪುರ, ಪಿಳ್ಳೇಕೆರೇನಹಳ್ಳಿ, ವೇದೇಹಳ್ಳಿ ಮೊದಲಾದ ಭಾಗಗಳ ವ್ಯಾಪ್ತಿಯಲ್ಲಿ ಬರುವಂತಹವು. ಮೇಲೆಯೇ ಪ್ರಸ್ತಾಪಿಸಿರುವ, ಪೆರುಮಾಳೆದೇವನು ಹಾಕಿಸಿದ 'ಹೂಲಿಯಬಾವಿ'ಯ ಉಲ್ಲೇಖವನ್ನೊಳಗೊಂಡ ಅಕ್ಷರಕಲ್ಲು ಗೋಪಾಲಪುರ ಮತ್ತು ವೇದೇಹಳ್ಳಿಗಳ ನಡುವಿನ ಗಡಿಯಲ್ಲಿ ಸ್ಥಾಪಿಸಲ್ಪಟ್ಟಿರುವುದರಿಂದ ಹಾಗೂ ಶಂಖ–ಚಕ್ರವುಳ್ಳ ವಾಮನಮುದ್ರೆಯ ಕಲ್ಲು ಸಹಾ ಇದೇ ಸಾಲಿನಲ್ಲಿ ನಿಂತಿರುವುದರಿಂದ, ಬ್ರಹ್ಮಪುರಿಯ ಬ್ರಾಹ್ಮಣರಿಗೆ ಕೊಟ್ಟ ಕ್ಷೇತ್ರವು ಇದೇ ಆಗಿದ್ದು, ಈ ಕಲ್ಲುಗಳು ಕ್ಷೇತ್ರದ ಎಲ್ಲೆಯನ್ನು ತೋರಿಸುವಂತಹವೆಂದು ತಿಳಿಯಬಹುದಾಗಿದೆ.

ಚಿತ್ರದುರ್ಗ ಬೆಟ್ಟದ ಉತ್ತರದಿಕ್ಕಿಗಿದ್ದು, ಈಗಾಗಲೇ ನಗರದ ವ್ಯಾಪ್ತಿಗೊಳಪಟ್ಟಿರುವ ಬರ(ರಿ)ಗೆರೆಯೇ ಪೆರುಮಾಳೆಸಮುದ್ರವೆಂದು ಈಚೆಗೆ ಬೆಳಕಿಗೆ ಬಂದ ಕಲ್ಲು ಬರಹವನ್ನಾಧರಿಸಿ ಹೇಳಿದೆ. ಈ ಸಂಬಂಧದಲ್ಲಿ ಕುರುಬರ ಕಾಳೆಯನ ಕೆರೆಯ ಮೂಲನೆಲೆಯನ್ನು ನಿರ್ಧರಿಸಬೇಕಾದುದು ಅಗತ್ಯ. ಪೆರುಮಾಳೆಸಮುದ್ರವನ್ನು ಮೂಲಜಲಾಶಯವೆಂದು ಭಾವಿಸುವುದಾದರೆ ಬ್ರಾಹ್ಮಣರಿಗೆ ಕೊಟ್ಟ ಗದ್ದೆಗಳ ಪ್ರದೇಶಕ್ಕೆ ಈ ಕೆರೆಯಿಂದ ನೀರನ್ನು ಹಾಯಿಸಿಕೊಳ್ಳುತ್ತಿದ್ದ ವ್ಯವಸ್ಥೆಯ ಬಗೆಗೂ ನಿಖರವಾಗಿ ಹೇಳಬೇಕಾಗುವುದು. ಅಲ್ಲದೆ, ಬ್ರಹ್ಮಪುರಿ ಬ್ರಾಹ್ಮಣರ ಗದ್ದೆಗಳ ಪರಿಸರಕ್ಕೂ ವೇದೇಹಳ್ಳಿ ರಸ್ತೆಯ ಆಂಜನೇಯ ದೇವಾಲಯದ ಬಳಿ ಇರುವ(ಈಗ ಮುಚ್ಚಿ ಹೋಗಿರುವ) 'ಕರೇಕಲ್ಲುಕಟ್ಟೆ/ಕೆರೆ' ಎಂದು ಕರೆಯಲ್ಪಡುವ ಜಲಾಶಯಕ್ಕೂ ಇದ್ದ ಸಂಬಂಧವನ್ನೂ ಈ ಜಲಾಶಯದ ಕಾಲಮಾನ, ಉದ್ದೇಶ, ಇತ್ಯಾದಿಗಳನ್ನೂ ಅರಿಯಬೇಕು. ಮೂಲ ಜಲಾಶಯದಿಂದ ಹಾಯಿಸಿದ ನೀರನ್ನು ಈ ಕೆರೆಯಲ್ಲಿ ಸಂಗ್ರಹಿಸಿ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದಿರಬಹುದೇ ಅಥವಾ ಇದೇ ಪ್ರತ್ಯೇಕವಾದ ಜಲಾಶಯವಾಗಿದ್ದಿರಬಹುದೇ ಎಂಬುದನ್ನೂ ಗಮನಿಸಬೇಕು.

ಹೊಯ್ಸಳ ವೀರಬಲ್ಲಾಳನ ಅವಧಿಯಲ್ಲಿ ಚಿತ್ರದುರ್ಗದ ರಾಜ ಪ್ರತಿನಿಧಿಯಾಗಿ ನೇಮಕಗೊಂಡಿದ್ದ ಹಿರಿಯ ಬಲ್ಲಪ್ಪದಣ್ಣಾಯಕನು ಹಾಕಿಸಿದ ಕ್ರಿ. ಶ. ೧೩೩೮ರ ಶಾಸನದಲ್ಲಿ (ಚಿ. ೬), ಸಿಂಗಪುರ ಮತ್ತು ಗೊನೂರು[52]ಗಳೊಡನೆ 'ಪೆರುಮಾಳೆಸಮುದ್ರದ ಮಹಾಜನಂಗಳು' ಎಂತಲೂ ಪ್ರಸ್ತಾಪಿಸಿದ್ದು, ಇಲ್ಲಿ ಅದು ಸ್ಥಳವಾಚಿಯಾಗಿದೆ. ಅದರ ಕಾಲಮಾನ ಮತ್ತು ನಿಶ್ಚಿತ ನೆಲೆಯನ್ನು ಖಚಿತಪಡಿಸಬೇಕಿದೆ.

* * *

ಪೆರುಮಾಳೆಪುರದ ಮರುಶೋಧನೆಯಲ್ಲಿ ಈ ಕೆಳಗಿನಂತೆ ಕೆಲವು ಮುಖ್ಯಾಂಶಗಳನ್ನು ಪ್ರಸ್ತಾಪಿಸಬಹುದು :

೧. ಪೆರುಮಾಳೆಪುರವು ಶ್ರೀವೈಷ್ಣವ–ವೈಷ್ಣವ ನೆಲೆಯಾಗಿದ್ದಿತು; ಗೋಪಾಲಕೃಷ್ಣ ದೇವಾಲಯವು ಈ ಪುರದ ಮುಖ್ಯ ಭಾಗವೆನಿಸಿದ್ದಿತು. ಗೋಪಾಲದೇವರು ಪೆರುಮಾಳೆದೇವನ ಅವಧಿಯಲ್ಲೇ ಸ್ಥಾಪಿಸಲ್ಪಟ್ಟಿರಬಹುದು.[53]

---

52 ಪ್ರಕಟಿತ ಪಾಠದಲ್ಲಿ 'ಗೊರೂರು' ಎಂದು ತಪ್ಪಾಗಿ ಉಲ್ಲೇಖಿಸಲ್ಪಟ್ಟಿದೆ.

53 ಪೆರುಮಾಳೆದೇವನ ಪುತ್ರನೂ ಶೂರನೂ ನಿಷ್ಠಾವಂತ ವೈಷ್ಣವನೂ ಆಗಿದ್ದ ಮಾಧವದಣ್ಣಾಯಕನು ಮುಮ್ಮಡಿ ಬಲ್ಲಾಳನ ರಾಜಪ್ರತಿನಿಧಿಯಾಗಿ ಮೈಸೂರು ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿ ರಾಜಧಾನಿಯಲ್ಲಿರುವಾಗ, ಗೋವರ್ಧನಗಿರಿ(ಈಗಿನ ಗೋಪಾಲಸ್ವಾಮಿಬೆಟ್ಟ)ಯಲ್ಲಿ ಗೋಪಿನಾಥ ದೇವರನ್ನು ಪ್ರತಿಷ್ಠಾಪಿಸಿದ ಸಂಗತಿ ಇಲ್ಲಿ ಉಲ್ಲೇಖನೀಯ— ನೋಡಿ : *MAR*., 1907. p. 25.

೨. ಈ ಪುರದ ವಿಸ್ತರಣವು ಉತ್ತರದಿಕ್ಕಿನ ಗರುಡಾಂಜನೇಯ ಬಾಗಿಲಿನಿಂದ ದೇವಾಲಯ ಪರಿಸರ, ಗೋಪಾಲಸ್ವಾಮಿ ಹೊಂಡ, ಶೃಂಗಾರತೋಟ ಹಾಗೂ ಅರಮನೆ ಆವರಣಗಳ ವಿಶಾಲವ್ಯಾಪ್ತಿಯನ್ನು (ಇಡೀ ಕಣಿವೆಯ ಭಾಗವನ್ನು) ಒಳಗೊಂಡಿದ್ದಿತು.

೩. ಪುರದ ಪ್ರತ್ಯೇಕ ಭಾಗವಾಗಿ ಬ್ರಹ್ಮಪುರಿ ಗೇರಿಯಿದ್ದು, ಆದರ ನೆಲೆಯು ಈಗಿನ ಅರಮನೆ ಆವರಣವಾಗಿದ್ದಿತು.

೪. ಪೆರುಮಾಳೆದೇವನು ಎಲ್ಲ ದತ್ತಿ–ದಾನ ಗಳನ್ನೂ ಬ್ರಹ್ಮಪುರಿಯ ಸ್ಥಾಪನೆಯನ್ನೂ ಒಂದೇ ವರುಷದಲ್ಲಿ, ಅಂದರೆ ಕ್ರಿ.ಶ. ೧೨೮೬ರಲ್ಲಿ ನೆರವೇರಿಸಿರು ವುದು ವ್ಯಕ್ತಪಡುತ್ತದೆ.

೫. ಪುರ ಮತ್ತು ಬ್ರಹ್ಮಪುರಿಗೇರಿಗಳ ಮಧ್ಯೆ ಗೋಪಾಲಸ್ವಾಮಿ ಹೊಂಡಕ್ಕೆ ಹೊಂದಿಕೊಂಡಂತೆ ಶೃಂಗಾರತೋಟವು ಇದ್ದು, ಅದು ಗೋಪಾಲದೇವರ ನಿತ್ಯ ಪೂಜೋತ್ಸವಾದಿಗಳಿಗೆ ಮೀಸಲಿಟ್ಟ ಹೂದೋಟ ವಾಗಿತ್ತು ; ನಾಯಕ ಅರಸರ ಅವಧಿಯಲ್ಲಿ ಅದು 'ಅರ ಮನೆ ತೋಟ'ವಾಗಿ ಪರಿವರ್ತಿತವಾಯಿತು.

೬. ಹುಲಿಯಕೆರೆ, ಹುಲಿಯಗೊಂದಿ ಗಳಂತೆಯೇ ಅದೇ ಹೆಸರಿನಿಂದ ಆರೋಪಿತವಾದುದೆಂದು ತಿಳಿಯಲ್ಪಡುವ ಹುಲಿಯಬಾವಿಯು ಇಂದಿನ ಗೋಪಾಲಸ್ವಾಮಿ ಹೊಂಡವೇ ಆಗಿರಬಹುದು ; ನಾಯಕ ಅರಸರ ಅವಧಿಯಲ್ಲಿ ಇದರ ಉತ್ತರದಿಕ್ಕಿನ ದಂಡೆ(ಕೋಡಿ ಕಟ್ಟೆ)ಯನ್ನು ವಿಸ್ತರಿಸಲಾಯಿತು.

೭. ಪೆರುಮಾಳೆಪುರದ ಬಗೆಗೆ ಇನ್ನೂ ಹೆಚ್ಚಿನ ಶೋಧಕ್ಕೆ ಅವಕಾಶವಿದ್ದು, ಗೋಪಾಲಕೃಷ್ಣ ದೇವಾ ಲಯ ಪರಿಸರ, ಅರಮನೆ ಆವರಣ ಮೊದಲಾದೆಡೆಗಳಲ್ಲಿ ಭೂಶೋಧನೆ ಕೈಗೊಳ್ಳುವುದಾದಲ್ಲಿ ಈ ದಿಸೆಯಲ್ಲಿ ಖಚಿತ ಬೆಳಕು ಹಾಯಿಸಬಹುದಾಗಿದೆ.*

* ಪೆರುಮಾಳೆಪುರದ ಮರುಶೋಧನೆಯ ಕ್ಷೇತ್ರಕಾರ್ಯದಲ್ಲಿ ನನ್ನೊಡನೆ ಉತ್ಸಾಹದಿಂದ ಸಂಚರಿಸಿ ತಮ್ಮ ಶ್ರಮಪೂರ್ಣ ಸಹಕಾರ ನೀಡಿದ ನಮ್ಮ ಸಂಶೋಧನ ತಂಡದ ಸದಸ್ಯರುಗಳಾದ ಲ. ನಾಗರಾಜ ಹೊಯ್ಸಳ, ಭೀ. ಉಮೇಶ್, ಹೆಚ್. ಮಂಜುನಾಥ್. ಹೆಚ್. ಎನ್. ಉಮೇಶ್, ಯು. ವೆಂಕಟಾಚಲಶಾಸ್ತ್ರಿ, ನಾ. ವೆಂಕಟೇಶಭಟ್, ನಾ. ಪ್ರಭಾಕರ್, ಎಂ. ಸಣ್ಣಹುಲಿಯಪ್ಪ, ಕೆ. ಎಂ. ರವಿಶಂಕರ್, ಗುಡಿಹಳ್ಳಿ ನಾಗರಾಜ್, ಮೀರಾಸಾಬಿಹಳ್ಳಿ ಶಿವಣ್ಣ, ಪಿ. ಆರ್. ವೀರಭದ್ರ ನಾಯಕ, ಸಿ. ವೀರನಾಯಕ, ಪಿ. ಮಂಜುನಾಥ ತೆಲಗಾವಿ ಹಾಗೂ ಬೆಂಗಳೂರಿನ ಕೆ. ಎಲ್. ರಾಜಶೇಖರ್ ಅವರುಗಳಿಗೆ ನಾನು ಋಣಿ.

ಕೆ. ಜಗನ್ನಾಥಶಾಸ್ತ್ರಿ

ಕಲಿಸೆನಾಡು : ಒಂದು ಟಿಪ್ಪಣಿ

ನಾಡಕಲಸಿ—ಈಗ ಒಂದು ಹಳ್ಳಿ. ಇದು ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕಿನಲ್ಲಿದೆ. ಇದು ಸುಮಾರು ೮೦೦ ವರ್ಷಗಳ ಹಿಂದೆ 'ಕಲಿಸೆ ನಾಡು' ಎಂಬ ಚಿಕ್ಕನಾಡಿನ ರಾಜಧಾನಿಯಾಗಿತ್ತು. ಈ ನಾಡನ್ನೂ ಈ ನಾಡಿನ ಅಧಿಪತಿಯಾಗಿದ್ದ ಮತ್ತು ಕಲಾಭಿಮಾನಿಯಾಗಿದ್ದ ಮಾಂಡಲಿಕನೊಬ್ಬನನ್ನು ಪರಿಚಯ ಮಾಡಿಕೊಡುವುದು ಈ ಪ್ರಬಂಧದ ಉದ್ದೇಶ.

ಕ್ರಿಸ್ತಶಕ ಏಳನೆಯ ಶತಮಾನದಿಂದ ಹನ್ನೆರಡನೆಯ ಶತಮಾನದವರೆಗೆ, ಸಾಂತಾರರು ಹೊಂಬುಚವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಪೊಂಬುರ್ಚನಾಡನ್ನು ಆಳಿದರು. ಈ ರಾಜ್ಯದ ಸ್ಥಾಪಕ ಜಿನದತ್ತರಾಯ.[1] ಜಿನದತ್ತರಾಯ ಉತ್ತರ ಭಾರತದವನು. ಅವನು ಈ ಪ್ರದೇಶಕ್ಕೆ ಬರುವ ಮುನ್ನ ಈ ಪ್ರದೇಶವನ್ನು ಬೇಡರ ನಾಯಕನು ಆಳುತ್ತಿದ್ದನು.[2] ಆಗ ಇಲ್ಲಿ ಕನಕಪುರ ಎಂಬ ಊರು ಇತ್ತು. ಆಗ ಆಳುತ್ತಿದ್ದ ರಾಜನ ಹೆಸರು ಕನಕನಾಯಕ. ಇವನು ಇಲ್ಲಿಯೇ ಇದ್ದ ಭಿಲ್ಲೇಶ್ವರ ದೇವರ ಭಕ್ತನಾಗಿದ್ದ.

ಜಿನದತ್ತರಾಯನಿಗೆ ಕನಕನಾಯಕ ರಾಜ್ಯವನ್ನು ಒಪ್ಪಿಸಿದ. ಪದ್ಮಾವತಿದೇವಿಯ ಅಪ್ಪಣೆಯಂತೆ ಜಿನದತ್ತರಾಯ ಇಲ್ಲಿ ಒಂದು ಪಟ್ಟಣವನ್ನು ಕಟ್ಟಿದ. ಅದನ್ನು ಪೊಂಬುರ್ಚ ಎಂದು ಹೆಸರಿಟ್ಟ. ಅಲ್ಲದೆ ಒಂದು ಪದ್ಮಾವತಿ ದೇವಿಗಾಗಿ ಒಂದು ದೇವಾಲಯವನ್ನೂ ಕಟ್ಟಿಸಿದ.[3] ಅನಂತರ ಕನಕನಾಯಕ ತನ್ನ ಪರಿವಾರದೊಂದಿಗೆ, ಆ ಪ್ರದೇಶವನ್ನು ಬಿಟ್ಟು, ಸಾಗರ ತಾಲ್ಲೂಕಿನ ಹೊಸಗುಂದಕ್ಕೆ ಬಂದು ನೆಲಸಿರಬಹುದು. ಕೆಲವು ದಿನ ಕಳೆದ ನಂತರ, ಕೆಲವರು ಹೊಸಗುಂದದಿಂದ ಸುಮಾರು ಹತ್ತು ಮೈಲಿಗಳಷ್ಟು ದೂರದಲ್ಲಿರುವ ಕಲಿಸೆ ಎಂಬ ಊರಿಗೂ ಬಂದು ನೆಲಸಿರಬಹುದು.

ಹನ್ನೆರಡನೆಯ ಶತಮಾನದಲ್ಲಿ ಪೊಂಬುರ್ಚದ ಸಾಂತಾರರು, ಹೊಯ್ಸಳರಿಗೆ ಸೋತು ಕಳಸಕ್ಕೆ ಹೋದ ನಂತರ, ಹೊಸಗುಂದ ಮತ್ತು ಕಲಿಸೆಗಳಲ್ಲಿದ್ದ ಕನಕನಾಯಕನ ವಂಶಸ್ಥರು ತಲೆ ಎತ್ತಿ ಹೊಸಗುಂದನಾಡು ಮತ್ತು ಕಲಿಸೆನಾಡು—ಇವನ್ನು ಆಳಿರಬಹುದು.

ಹನ್ನೆರಡನೆಯ ಶತಮಾನದಿಂದ ಹದಿಮೂರನೆಯ ಶತಮಾನದ ಉತ್ತರಾರ್ಧದವರೆಗೆ ಹೊಸಗುಂದದ ನಾಡು ಸ್ವತಂತ್ರವಾಗಿ ಅಸ್ತಿತ್ವದಲ್ಲಿದ್ದಂತೆ ಶಾಸನಗಳಿಂದ ತಿಳಿದುಬರುತ್ತದೆ.[4] ಕಲಿಸೆನಾಡು ಹನ್ನೆರಡನೆಯ ಶತಮಾನದ ಪೂರ್ವಾರ್ಧದಲ್ಲಿ ಅಸ್ತಿತ್ವದಲ್ಲಿದ್ದು, ಹೊಯ್ಸಳ

1 *EC*., VIII, Na. 35, 48
2 ಭಿಲ್ಲೇಶ್ವರ ಮಹಾತ್ಮೆ (ಅಪ್ರಕಟಿತ ಪದ್ಯಕಾವ್ಯ)
3 ಪದ್ಮಾವತಿ ಮಹಾತ್ಮೆ
4 *EC*., Sa. 67

ಚಕ್ರವರ್ತಿಗಳ ಅಧೀನದಲ್ಲಿ ಮಾಂಡಲಿಕರ ಒಡೆತನಕ್ಕೆ ಒಳಪಟ್ಟ ನಾಡಾಗಿ ಇದ್ದುದು ಶಾಸನಗಳಿಂದ ತಿಳಿದು ಬರುತ್ತದೆ.[5]

ಹೊಸಗುಂದನಾಡಿನ ಮೊದಲನೆಯ ಅರಸ ಬೊಮ್ಮರಸ; ಲಚ್ಚಿಯಬ್ಬೆ ಆತನ ಹೆಂಡತಿ. ಕಾಳರಸ, ತಮ್ಮರಸ ಎಂಬ ಇಬ್ಬರು ಗಂಡುಮಕ್ಕಳು ; ಕೆಳೆಯಬ್ಬರಸಿ ಮಗಳು. ಕೆಳೆಯಬ್ಬರಸಿಗೆ ಬೀಯಬ್ಬರಸಿ ಎಂಬ ಮಗಳಿದ್ದಳು. ಇವಳ ಗಂಡ ಪಡುವಳ ಗೊಂಗಣ. ಇವರಿಗೆ ಬಾಳೆಯಮ್ಮ ವೆಗ್ಗಡೆ ಎಂಬ ಮಗನಿದ್ದನು.[6]

ಇದೇ ಸಮಯದಲ್ಲಿ ಕಲಿಸೆನಾಡನ್ನು ಬಲ್ಲ ವೆಗ್ಗಡೆ ಎಂಬುವನು ಆಳುತ್ತಿದ್ದನು. ಪಡುವಳ ಗೊಂಗಣನ ಮಗನಾದ ಬಾಳೆಯಮ್ಮ ವೆಗ್ಗಡೆ ಬಲ್ಲ ವೆಗ್ಗಡೆಯ ಅಳಿಯನಾದನು. ಬಲ್ಲವೆಗ್ಗಡೆಯ ನಂತರ, ಬಾಳೆಯಮ್ಮ ವೆಗ್ಗಡೆಯೇ ಕಲಿಸೆನಾಡಿನ ಅರಸನಾದನು. ಬಲ್ಲ ವೆಗ್ಗಡೆಯ ಬಗ್ಗೆ ಹೆಚ್ಚಿಗೆ ಏನೂ ತಿಳಿಯುವುದಿಲ್ಲ. ಬಾಳೆಯಮ್ಮ ವೆಗ್ಗಡೆ ಮತ್ತು ಅನಂತರ ಕಲಿಸೆನಾಡನ್ನು ಆಳಿದ ಮಾಂಡಲಿಕರು, ತಾವು ಭಿಲ್ಲೇಶ್ವರದಲ್ಲಿರುವ ಭಿಲ್ಲೇಶ್ವರ ದೇವರ ಪಾದಪದ್ಮಾರಾಧಕರೆಂದು ಕರೆದುಕೊಂಡಿದ್ದಾರೆ.[7]

ಕ್ರಿಸ್ತಶಕ ೧೨೧೮ರ ಶಾಸನವು ಬಾಳೆಯಮ್ಮ ವೆಗ್ಗಡೆಯು ಹೊಯ್ಸಳ ಇಮ್ಮಡಿ ವೀರಬಲ್ಲಾಳನ ಮಾಂಡಲಿಕನಾಗಿದ್ದನೆಂದೂ ಕ್ರಿ.ಶ. ೧೨೧೮ರಲ್ಲಿ ಅಂದರೆ, ಶಕವರ್ಷ ೧೧೪೦ನೆಯ ಬಹುಧಾನ್ಯ ನಾಮ ಸಂವತ್ಸರದ ಆಶ್ವಯುಜ ಶುದ್ಧ ೫ರಂದು, ಕಲಿಸೆಯಲ್ಲಿ ಸೋಮನಾಥ ದೇವಾಲಯವನ್ನು ಕಟ್ಟಿಸಿದನೆಂದೂ ತಿಳಿಸುತ್ತದೆ.[8]

ಬಾಳೆಯಮ್ಮ ವೆಗ್ಗಡೆಯ ನಂತರ ಕಲಿಸೆನಾಡನ್ನು ಬೀರದೇವರಸ ಆಳಿದನು. ಆಗ ಬೊಮ್ಮರಸ ಎಂಬುವನು ಹೊಂಬುಚವನ್ನು ಆಳುತ್ತಿದ್ದನು. ಆಗ ಬೀರದೇವರಸನು ಹೊಂಬುಚಕ್ಕೆ ಧಾಳಿಯಿಟ್ಟು ಬೊಮ್ಮರಸನನ್ನು ಸೋಲಿಸಿದ್ದೇ ಅಲ್ಲದೆ, ಅಲ್ಲಿನ ಸಮಸ್ತ ವಸ್ತುಗಳನ್ನೂ ಕೊಳ್ಳೆ ಹೊಡೆದುಕೊಂಡು ಬಂದನೆಂದು ಕ್ರಿ.ಶ. ೧೨೪೮ರ ಶಾಸನ ತಿಳಿಸುತ್ತದೆ.[9]

ಬೀರದೇವರಸನ ನಂತರ ಈ ನಾಡು ಹೊಯ್ಸಳ ರಾಜ್ಯದಲ್ಲಿ ಐಕ್ಯವಾಗಿ, ತನ್ನ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡಿತು. ಕ್ರಿ.ಶ. ೧೪೯೯ರಲ್ಲಿ ವಿಜಯನಗರದ ಚಕ್ರವರ್ತಿಯಾದ ಕೃಷ್ಣದೇವರಾಯನು. ಕೆಳದಿ ಸ್ಥಾಪಕನಾದ ಚೌಡಪ್ಪನಾಯಕನಿಗೆ ಇತರ ನಾಡುಗಳೊಂದಿಗೆ, ಈ ಕಲಿಸೆನಾಡನ್ನೂ ಬಳುವಳಿಯಾಗಿ ಕೊಟ್ಟನು.[10]

ಈ ನಾಡಿನ ರಾಜಧಾನಿಯಾಗಿದ್ದ ಕಲಿಸೆ, ಈಗ ನಾಡಕಲಿಸೆ ಎಂಬ ಹೆಸರಿನ ಸಣ್ಣಗ್ರಾಮವಾಗಿದೆ. ಇಲ್ಲಿ ಎರಡು ದೇವಾಲಯಗಳಿವೆ.ಒಂದು ರಾಮೇಶ್ವರ ದೇವಾಲಯ ; ಮತ್ತೊಂದು ಮಲ್ಲಿಕಾರ್ಜುನ ದೇವಾಲಯ. ರಾಮೇಶ್ವರ ದೇವಾಲಯವೇ ಬಾಳೆಯಮ್ಮ ವೆಗ್ಗಡೆ ಕಟ್ಟಿಸಿದ ಸೋಮೇಶ್ವರ ದೇವಾಲಯ. ಮಲ್ಲಿಕಾರ್ಜುನ ದೇವಾಲಯದ ಬಗ್ಗೆ ಐತಿಹಾಸಿಕವಾಗಿ ಏನೂ ತಿಳಿದು ಬರುವುದಿಲ್ಲ, ಈ ಎರಡೂ ನಕ್ಷತ್ರಾಕಾರದ ವೇದಿಕೆಯ ಮೇಲೆ ಕಟ್ಟಲ್ಪಟ್ಟವೆ. ಎರಡರಲ್ಲಿಯೂ ಗರ್ಭಗೃಹ, ಸುಖನಾಸಿ, ನವರಂಗ ಇವೆ. ಮಲ್ಲಿಕಾರ್ಜುನ ದೇವಾಲಯ ಮಾತ್ರ ಕಲಾದೃಷ್ಟಿಯಿಂದ ವೈಶಿಷ್ಟ್ಯಪೂರ್ಣವಾಗಿದೆ. ಇಲ್ಲಿ ನವರಂಗದ ಸುತ್ತ ತೆರೆದ ಜಗಲಿ ಇದೆ. ಅಲ್ಲಲ್ಲಿ ಕಟಾಂಜನಗಳಿವೆ. ನವರಂಗದ ಮೇಲುಚಾವಣಿಗೆ ಹಾಕಿದ ಕಲ್ಲುಚಪ್ಪಡಿಗಳ ತಳಭಾಗದಲ್ಲಿ ಅನೇಕ ಚಿತ್ರಗಳಿವೆ, ಈ ದೇವಾಲಯದ ಕಂಬಗಳ ತಳಭಾಗದಲ್ಲಿ

5 *Ibid.*, Sa. 127
6 *Ibid.*
7 *Ibid.*, Sa. 15
8 *Ibid.*, Sa. 127
9 *Ibid.*
10 ಕೆಳದಿನೃಪವಿಜಯ

೮ ಮುಖ, ಮೇಲುಭಾಗದಲ್ಲಿ ೧೬ ಮುಖಗಳನ್ನು ಪಡೆದಿವೆ. ಇಲ್ಲಿರುವ ನಂದಿವಿಗ್ರಹವು ಸುಂದರ ಶಿಲ್ಪಕ್ಕೆ ಉತ್ತಮ ಮಾದರಿಯಾಗಿದೆ.

ಐತಿಹಾಸಿಕವಾಗಿ ಈ ದೇವಾಲಯದ ಬಗ್ಗೆ ಹೆಚ್ಚು ವಿವರಗಳು ದೊರೆಯದಿದ್ದರೂ ಜನರು ಮಾತ್ರ ಇವನ್ನು ತಂದೆ-ಮಕ್ಕಳ ದೇವಾಲಯಗಳೆಂದೇ ಕರೆಯುತ್ತಾರೆ.

ಸುಮಾರು ೮೦೦ ವರ್ಷಗಳ ಹಿಂದೆ ಕಟ್ಟಿರುವ ಪ್ರಾಚೀನ ಸ್ಮಾರಕಗಳನ್ನು ಉಳಿಸಿಕೊಳ್ಳಬೇಕಾದದ್ದು, ಬಾಳೆಯಮ್ಮ ವೆಗ್ಗಡೆಯಂತಹ ಶಿಲ್ಪಕಲಾಭಿಮಾನಿ ಮಾಂಡಲಿಕನನ್ನು ಇತಿಹಾಸದ ಪುಟಗಳಲ್ಲಿ ದಾಖಲಿಸಿಕೊಳ್ಳಬೇಕಾದದ್ದು ಜನತೆಯ ಹಾಗೂ ಇತಿಹಾಸಕಾರರ ಕರ್ತವ್ಯವೂ ಆಗಿದೆ.

ತುಂಕೂರು ಸುನಂದಾ

ಹೆಬ್ಬೂರು

'ಸುಂಜನಜನಪದ'ವೆಂದು ಖ್ಯಾತಿವೆತ್ತ ತುಮಕೂರು ಜಿಲ್ಲೆಗೆ ಸೇರಿದ ಮತ್ತು ನಗರದಿಂದ ೨೪ಕಿ.ಮೀ. ದೂರದಲ್ಲಿರುವ ಹೆಬ್ಬೂರು ಒಂದು ಹೋಬಳಿ. ಇದೊಂದು ಐತಿಹಾಸಿಕ ಮಹತ್ವದ. ವಾಸ್ತುಶಿಲ್ಪದ ವೈಶಿಷ್ಟ್ಯತೆ ಹೊಂದಿದೆ. ಇದೊಂದು ಪ್ರಾಚೀನ ದೇವಾಲಯಗಳ ಆಗರವೆಂದೇ ಹೇಳಬಹುದು.

ನೂರೊಂದು ದೇವಾಲಯ, ನೂರೊಂದು ಕೆರೆ–ಬಾವಿಗಳ ಬೀಡು ಎಂದು ಅಲ್ಲಿನ ಜನ ವರ್ಣಿಸುವುದುಂಟು. ಇದೊಂದು ಚಾರಿತ್ರಿಕ ನೆಲೆ. ಗಂಗರ ಚಾರಿತ್ರಿಕ ದಾಖಲೆಯಲ್ಲಿನ ಪ್ರಕಾರ, ನವಕಾಮ ಎಂಬ ವೀರನೊಬ್ಬನು ಹೆಬ್ಬೂರನ್ನು ದತ್ತಿಯಾಗಿ ಪಡೆದನೆಂದು ಉಲ್ಲೇಖಿತವಾಗಿದೆ ಹಾಗೂ ಇದರಲ್ಲಿ ದಿದಿಗ–ಮಾಧವ ಎಂಬ ಗಂಗ ಸಾಮ್ರಾಜ್ಯ ಸ್ಥಾಪಕರು ಹೆಸರು ಕಾಣಬರುವುದರಿಂದ, ಸುಮಾರು ಕ್ರಿ. ಶ. ೪ನೇ ಶತಮಾನದಲ್ಲೇ ಹೆಬ್ಬೂರು ತನ್ನ ಚಾರಿತ್ರಿಕ ಅಸ್ತಿತ್ವವನ್ನು ಪಡೆದಿರಬೇಕು. ಹೊಯ್ಸಳರು ಗಂಗರ ಸಾಮಂತರು ಆಗಿದ್ದರು. ಗಂಗರ ಕಾಲಾನಂತರ ಹೊಯ್ಸಳರ ಆಧಿಪತ್ಯಕ್ಕೆ ಸೇರಿಸಿಕೊಂಡು ತಮ್ಮ ಸಂಸ್ಕೃತಿ ಕಲೆ ಪ್ರಭಾವ ಬೀರಿದ್ದಾರೆ. ಅಲ್ಲಿರುವ ಕೆಲವು ದೇವಾಲಯಗಳ ಶೈಲಿ ಹೊಯ್ಸಳ ಕಲೆಯ ಪ್ರತಿಬಿಂಬವಾಗಿದೆ.ಹೊಯ್ಸಳ ಸೋಮೇಶ್ವರನು ತನ್ನ ಮಕ್ಕಳಿಬ್ಬರು ಎಂದರೆ ಮೂರನೇ ನರಸಿಂಹ ಬಲ್ಲಾಳ ಮತ್ತು ರಾಮನಾಥರಿಗೆ ರಾಜ್ಯವನ್ನು ಹಂಚುವಾಗ ತುಮಕೂರು ಪ್ರಾಂತ್ಯಕ್ಕೆ ಸೇರಿಕೊಂಡಂತೆ ಉರ್ಡಿಗೆರೆಯಿಂದ ಈಗಿನ ಹೆಬ್ಬೂರಿನವರೆಗೂ ನರಸಿಂಹನು ಪಡೆದುಕೊಂಡನು. ಆ ಕಾಲಕ್ಕೆ ಕೆಲವೇ ದೇವಾಲಯಗಳು ಅಸ್ತಿತ್ವಕ್ಕೆ ಬಂದಿರಬಹುದು.

ಹೊಯ್ಸಳರ ಅವನತಿಯನಂತರ ವಿಜಯನಗರದ ಆಧಿಪತ್ಯಕ್ಕೆ ಒಳಪಟ್ಟಿತು. ಕಟಿಕಾಮಣ್ಣ ಎಂಬುವನು ಈ ಪ್ರದೇಶದ ಪ್ರತಿನಿಧಿಯಾಗಿದ್ದನು. ಇದರ ಸಮೀಪದಲ್ಲಿರುವ ಕಲ್ಲೇಶಪುರ–ರಾಮೇನಹಳ್ಳಿ ಪಾಳ್ಯದ ಪಟೇಲಿಕೆ ತಿಮ್ಮೇಗೌಡ ಮತ್ತು ಹಾಲೇಗೌಡ ಎಂಬುವರು ವಹಿಸಿಕೊಂಡಿದ್ದರು. ಕೃಷ್ಣದೇವರಾಯನ ಕಾಲಕ್ಕೆ ತುಮಕೂರು ಜಿಲ್ಲಾ ಕೆಲವು ಪ್ರದೇಶಗಳನ್ನು ಜಾಗೀರು ಕೊಡುವಾಗ ಹಾಲೇಗೌಡನಿಗೆ ಬಿರುದು ಸಹಿತ ಹೆಬ್ಬೂರನ್ನು ನೀಡಲಾಯಿತು. ಇದರೊಂದಿಗೆ ಹಾಗಲವಾಡಿ ನಾಯಕತ್ವವನ್ನು ಪಡೆದಿದ್ದನು.

ಈ ಸಂಸ್ಥಾನಕ್ಕೆ ನಿಖರವಾದ ಹೆಸರು ಸಹಾ ಈ ಪಟೇಲರ ಪ್ರಭಾವದಿಂದಲೇ ಬಂದಿತು. ಸುತ್ತಮುತ್ತ ದಟ್ಟವಾದ ಕಾಡು, ವನ್ಯಮೃಗಗಳ ಬೀಡು ಆಗಿತ್ತು. ಹೆಬ್ಬುಲಿಯೊಂದು ಗ್ರಾಮದೊಳಗೆ ನುಗ್ಗಿದಾಗ ಬಲಿಷ್ಠವಾದ ಗೂಳಿಯೊಂದು ಆ ಹುಲಿಯನ್ನು ಅಟ್ಟಿಸಿಕೊಂಡು ಓಡಿದ್ದಲ್ಲದೆ ಅದು ಸಾಯುವವರೆಗೂ ಹಿಂಬಾಲಿಸಿತು. ಸತ್ತ ಹುಲಿಯನ್ನು ಭಸ್ಮಮಾಡಿ ಅದರ ಆ ಬೂದಿಯ ಗುರುತನ್ನು ಎಳೆದು ಎಲ್ಲಿಯವರೆಗೆ ಕಾಣಿಸಿಕೊಂಡಿತೋ ಆವರೆಗೂ ಈ ಪಟೇಲರು ಒಂದು ಕೋಟೆ ನಿರ್ಮಿಸಿದರು ಮತ್ತು ಹೆಬ್ಬುಲಿಯ ಊರು ಕ್ರಮೇಣ ಹೆಬ್ಬಲೂರು, ಹೆಬ್ಬೂರು ಎಂಬ ಹೆಸರನ್ನು ಪಡೆಯಿತೆಂಬ ಐತಿಹ್ಯವಿದೆ. ಈ ಗೌಡದ್ವಯರು ಅನೇಕ ಜನೋಪಕಾರ್ಯಗಳನ್ನು

ಮಾಡಿದಾಗ ಕೆರೆ–ಕಟ್ಟೆ–ಬಾವಿ–ದೇವಾಲಯಗಳನ್ನು ನಿರ್ಮಿಸಿದರು. ದೊರೆಗಳ ಅಪ್ಪಣೆಯಿಲ್ಲದೆ ಸ್ವೇಚ್ಛೆಯಿಂದ ಮಾಡಿದರೆಂಬ ಆಪಾದನೆ ಸಹ ಹೊರೆಸಿ ಕಣ್ಣು ಕೀಳಿಸಿದರೆಂಬ ಪ್ರತೀತಿಯುಂಟು.

ನಂತರ ಮಹಮ್ಮದೀಯರು, ಚಿಕ್ಕನಾಯಕನ ಹಳ್ಳಿ ಪಾಳೆಗಾರರು, ಮಾಗಡಿ ಕೆಂಪೇಗೌಡ, ಚಿಕ್ಕದೇವ ರಾಜ ಒಡೆಯರು ತಮ್ಮ ಪಾರುಪತ್ಯ ನಡೆಸಿದರು. ಇದಲ್ಲದೆ ಮಹಾಜನ, ಮೊಗಲರ ಹಿಡಿತಕ್ಕೂ ಸಿಕ್ಕಿತು. ಮತ್ತೆ ಮೈಸೂರು ದೊರೆಗಳು ತಮ್ಮ ಆಳ್ವಿಕೆಗೊಳಪಡಿಸಿಕೊಂಡರು.

ನೂರೊಂದು ದೇವಾಲಯಗಳ ಆಗರವೆನಿಸಿದರೂ ಅನೇಕ ದೇವಾಲಯಗಳು, ಶಿಲಾಮೂರ್ತಿಗಳು, ಕಂಭಗಳು ಶಿಥಿಲವಾಗಿಬಿಟ್ಟಿವೆ, ಕೆಲವು ಭೂಗತವಾಗಿವೆ, ಜಲಸಮಾಧಿಯಾಗಿವೆ. ಇದೀಗ ಜನರ ಅಸಡ್ಡೆಯಿಂದ ಸಾಕಷ್ಟು ದೇವಾಲಯಗಳು ಅವ್ಯವಸ್ಥ ಸ್ಥಿತಿಯಲ್ಲಿವೆ. ಶಿವ–ವಿಷ್ಣು, ಕೊಲ್ಲಾಪುರದಮ್ಮ, ವೀರಭದ್ರ, ಆಂಜನೇಯ, ಬಿಸಿಲು ಮಾರಮ್ಮ, ನೆರಳು ಮಾರಮ್ಮ, ಗಣಪತಿ, ವರದರಾಜಸ್ವಾಮಿ, ಚಿಕ್ಕವೀರಸ್ವಾಮಿ, ಬಸವ, ತೆರುಪ್ಪಾಳ, ಗೋಪಾಲಸ್ವಾಮಿ, ಬ್ಯಾಟರಾಯನ ದೇವಾಲಯಗಳು ಹೊಯ್ಸಳ, ವಿಜಯನಗರ ಕಲಾಶೈಲಿಯಲ್ಲಿ ಸರಳವಾಗಿ ಮೂಡಿಬಂದಿವೆ. ಶಾಸನಗಳು ಮಾತ್ರ ಸದ್ಯಕ್ಕೆ ಕಂಡುಬಂದಿಲ್ಲ. ಅತ್ಯಂತ ಸುಂದರವಾದ ವಾಸ್ತುಶಿಲ್ಪಶೈಲಿ ಕಾಣಬರುವುದೆಂದರೆ ವರದರಾಜಸ್ವಾಮಿ ದೇವಾಲಯದಲ್ಲಿ ಲೋವೆ, ಕಂಬಗಳು, ಮೆಟ್ಟಿಲುಗಳ ಅಕ್ಕಸಕ್ಕ ಆನೆಗಳು ಇತ್ಯಾದಿ ಸಾಕಷ್ಟು ವಿಜಯನಗರದ ಕಲಾಶೈಲಿಯನ್ನೇ ಹೋಲುತ್ತವೆ. ಆದರೂ ಹೆಬ್ಬೂರಿನ ಇತಿಹಾಸ ಸಂಶೋಧನೆ ಮಾಡುವುದು ಅಗತ್ಯವಾಗಿದೆ.

ಕೆ. ಅಭಿಶಂಕರ್

ಕಂಪಿಲಿ/ಕುಮ್ಮಟ : ಚಿಕ್ಕ ರಾಜ್ಯದ ದೊಡ್ಡ ಮಾರ್ಮಿಕ ಪಾತ್ರ

ಇದುವರೆಗೆ ತಿಳಿದಮಟ್ಟಿಗೆ, ಕೇವಲ ಸುಮಾರು ಅರ್ಧ ಶತಮಾನದಷ್ಟೇ ಕಾಲ ಬಾಳಿ, ಬೆಳಗಿದ ಕಂಪಿಲಿ ಅಥವಾ ಕುಮ್ಮಟ ರಾಜ್ಯದ ಘಟನಾವಳಿ ತುಂಬ ಕುತೂಹಲಕರವೂ ವಿಸ್ಮಯಕರವೂ ಆಗಿದೆ. ಈಗಿನ ರಾಯಚೂರು ಜಿಲ್ಲೆಯ ಗಂಗಾವತಿ ತಾಲ್ಲೂಕಿನಲ್ಲಿ ಅಭೇದ್ಯವಾದ ಬೆಟ್ಟಗುಡ್ಡಗಳ ಮಧ್ಯೆ, ತುಂಗಭದ್ರೆಯ ಉತ್ತರಕ್ಕೆ ಭದ್ರವಾದ ಕೋಟೆಯುಳ್ಳ ಕುಮ್ಮಟ ಇವರ ರಾಜಧಾನಿ. ತುಂಗಭದ್ರೆಯ ದಕ್ಷಿಣಕ್ಕೆ ಈಗಿನ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಕಂಪಿಲಿ ಅದರ ವಶದಲ್ಲಿದ್ದ ಒಂದು ಮುಖ್ಯ ಸ್ಥಳ. ಅದು ಎಂದೂ ಇದರ ರಾಜಧಾನಿಯಾಗಿರಲಿಲ್ಲ. ಆದರೆ, ಕರ್ನಾಟಕದ ದಕ್ಷಿಣೋತ್ತರ ಭಾಗಗಳನ್ನು ಕೂಡಿಸುವ ಹಂಪೆಯ ಪರಿಸರದ ಈ ಕಂಪಿಲಿಗೆ ಹಿರಿದಾದ ಹಿನ್ನೆಲೆ ಇದೆ. ೧೧ನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಒಂದು ಪ್ರಾಂತೀಯ ರಾಜಧಾನಿಯಾದ ಕಂಪಿಲಿ ಒಂದು ಪರಂಪರೆಯನ್ನು, ಪ್ರಸಿದ್ಧಿಯನ್ನು ಪಡೆಯಿತು. ಆದ್ದರಿಂದ, ಚಾಲುಕ್ಯರು ಆಳಿದ ಅನೇಕ ದಶಕಗಳ ಬಳಿಕ ತುಂಗಭದ್ರೆಯ ದಕ್ಷಿಣೋತ್ತರದ ಈ ಪ್ರದೇಶದ ಮೇಲೆ ಈ ಮನೆತನದವರ ಅಧಿಕಾರ ಸ್ಥಾಪಿತವಾದರೂ, ಇವರದು ಕಂಪಿಲಿಯ ರಾಜ್ಯವೆಂದು ಕರೆಯಲ್ಪಟ್ಟಿರುವುದು ಅಸಹಜವಲ್ಲ; ಇಂಥ ಬೇರೆ ಉದಾಹರಣೆಗಳೂ ಇವೆ. ಇವರ ಎರಡನೆಯ ನಾಯಕನಿಗೆ ಕಂಪಿಲರಾಯನೆಂಬ ಹೆಸರೂ ಇದ್ದಿತು.

ಸೇವುಣರು, ಕಾಕತೀಯರು ಹಾಗೂ ಹೊಯ್ಸಳರು –ಇವರ ಪೈಪೋಟಿಯ ತ್ರಿಕೋಣದ ಮಧ್ಯೆ ತಡೆ-ರಾಜ್ಯ (buffer state) ಆಗಿ ಇದ್ದು, ಇದು ತನ್ನದೇ ಸ್ವಂತಿಕೆಯನ್ನು, ಪ್ರತ್ಯೇಕತೆಯನ್ನು ಉಳಿಸಿ, ಬೆಳೆಸಿಕೊಳ್ಳಲು ಸಮರ್ಥವಾಗಿ ಹೋರಾಟ ನಡೆಸಿದ್ದು ಒಂದು ಅಸಾಮಾನ್ಯ ಸಂಗತಿ. ಈ ಸೆಣಸಾಟದಲ್ಲಿ, ಈ ನಾಯಕರು ಸ್ಥೈರ್ಯದಿಂದ ವ್ಯವಹರಿಸುತ್ತಿದ್ದರು. ಪರರ ಪಾದಪದ್ಮೋಪಜೀವಿಗಳಾಗಿರಲಿಲ್ಲ.

ಸೇವುಣ ಮತ್ತು ಹೊಯ್ಸಳರ ನಡುವೆ ೧೨೭೬ರಲ್ಲಿ ಹೊಯ್ಸಳರ ರಾಜಧಾನಿಯ ಬಳಿಯೇ ಬೆಳವಡಿಯಲ್ಲಿ ನಡೆದ ಘೋರ ಕದನದಲ್ಲಿ ಹೊಯ್ಸಳರ ಪರವಾಗಿ ಒಂದು ಮುಖ್ಯ ಪಾತ್ರವಹಿಸಿದ್ದರ ಮೂಲಕ ಮೊಟ್ಟಮೊದಲು ಇವರು ನಮ್ಮ ಗಮನಕ್ಕೆ ಬರುತ್ತಾರೆ. ಕುಮ್ಮಟ ದುರ್ಗದ ಮುಮ್ಮಡಿ ಸಿಂಗೇಯನಾಯಕನ ಮಗ ಖಂಡೇಯರಾಯ (ಅಂದರೆ ಕಂಪಿಲರಾಯ) ಹೊಯ್ಸಳರಿಗೆ ಬಂದೊದಗಿದ್ದ ಈ ದೊಡ್ಡ ವಿಪತ್ತಿನ ಸಮಯದಲ್ಲಿ ಅವರಿಗೆ ನೆರವಾಗಿ ಸೇವುಣರ ಸೇನೆಯನ್ನು ಬೆನ್ನಟ್ಟಿದ. ಹೊಯ್ಸಳರ ಪಕ್ಷಪಾತಿಯಾಗಿದ್ದು, ಸೇವುಣರ ವಿರೋಧಿಯಾಗಿದ್ದ ಮುಮ್ಮಡಿ ಸಿಂಗೇಯನಾಯಕನ ಮೇಲೆ ೧೨೮೦ರಲ್ಲಿ ಸೇವುಣರು ದಾಳಿಮಾಡಲಾಗಿ ಕುರಗೋಡಿನಲ್ಲಿ ನಡೆದ ಕದನದಲ್ಲಿ ಸೇವುಣರ ಸೇನಾಪತಿ ಚಾವುಂಡರಸ ಕೊಲ್ಲಲ್ಪಟ್ಟ. ಕುಮ್ಮಟರನ್ನು ಮುರಿಯಲು ಸೇವುಣರು ತದನಂತರವೂ ಎರಡು ಬಾರಿ ಪ್ರಯಾಸಮಾಡಿ ವಿಫಲರಾದರು. ಸುಮಾರು ೧೨೮೮ರಿಂದ ಈ ವಿರೋಧಿಗಳ ನಡುವೆ ಸ್ನೇಹ ಕುದುರಿತು. ೧೩೦೩ರಲ್ಲಿ ಹೊಳಲ್ಕೆರೆಯಲ್ಲಿ ಸೇವುಣರಿಗೂ, ಹೊಯ್ಸಳರಿಗೂ ನಡೆದ ಯುದ್ಧದಲ್ಲಿ ಕಂಪಿಲರಾಯ ಸೇವುಣರ ಪರವಾಗಿ ಸೇನಾಪತಿತ್ವ ವಹಿ

ಸಿದ್ದ. ಈ ಸಮರದಲ್ಲಿ ಮುಮ್ಮಡಿ ಬಲ್ಲಾಳನಿಗೆ ಸಂಬಂಧಿಯಾದ ಸೇನಾನಿ ಸೋಮೆಯ ದಂಡನಾಯಕ ಹತನಾದ. ಕುಮ್ಮಟರು ಮತ್ತು ಹೊಯ್ಸಳರ ನಡುವೆ ಹೀಗೆ ಉಂಟಾದ ವೈಷಮ್ಯ ಮುಂದುವರಿದು, ಮುಮ್ಮಡಿ ಬಲ್ಲಾಳ ೧೩೨೦ರಲ್ಲಿ ದೊರವಡಿಯಲ್ಲಿ ಕಂಪಿಲರಾಯನನ್ನು ದಂಡಿಸಲು ಯತ್ನಿಸಿದರೂ, ಈ ಕದನ ನಿರ್ಣಾಯಕವಾದಂತೆ ಕಂಡುಬರುವುದಿಲ್ಲ. ಕಾಕತೀಯ ಪ್ರತಾಪರುದ್ರನ ಆಕ್ರಮಣವನ್ನು ಕಂಪಿಲರು ಎದುರಿಸಿದರು. ಈ ಮಧ್ಯೆ ೧೩೧೫ರಲ್ಲಿ ಕುಮ್ಮಟ ದುರ್ಗಕ್ಕೆ ಮುತ್ತಿಗೆ ಹಾಕಿದ ಅಲ್ಲಾವುದ್ದೀನ್ ಖಿಲ್ಜಿಯ ಪ್ರಬಲ ಸೇನಾನಿ ಮಲಿಕ್‌ನಾಯಿಬ್ ಕಾಫೂರನೂ ಹತಾಶನಾಗಿ ಹಿಂತಿರುಗಬೇಕಾಯಿತು.

ಮೇಲ್ಕಂಡ ಮುಮ್ಮಡಿ ಸಿಂಗೇಯನಾಯಕನ ಪೂರ್ವಜರು ಯಾರು, ಇಮ್ಮಡಿ ಯಾರು, ಮೊದಲಿಗನು ಯಾರು ಎಂಬುದು ತಿಳಿದಿಲ್ಲ. ಸುಮಾರು ೨೫೦ ವರ್ಷಗಳ ಬಳಿಕ ನಂಜುಂಡ ಕವಿಯಿಂದ ರಚಿತವಾದ 'ರಾಮನಾಥಚರಿತ ಸಾಂಗತ್ಯ'ದಲ್ಲಿ ಅವರ ಮೂಲದ ಬಗ್ಗೆ ಒಂದು 'ಐತಿಹ್ಯ' ಬಂದಿದೆ. ಅದರ ಪ್ರಕಾರ ಸೇವುಣ ರಾಜಕುಮಾರನೊಬ್ಬ 'ಪುಳಿಂದ' ಯುವತಿಯನ್ನು ಮದುವೆಯಾಗಿದ್ದರಿಂದ ಬಹಿಷ್ಕರಿಸಲ್ಪಟ್ಟು 'ಚಿತ್ರಕೂಟದುರ್ಗ'ದ ದೊರೆಯನ್ನು ಆಶ್ರಯಿಸಿದ ಮತ್ತು ಈ(ಅರೆ ಸೇವುಣರ) ವಂಶದಲ್ಲಿ ಮುಮ್ಮಡಿ ಸಿಂಗೇಯನಾಯಕನ ಜನನವಾಯಿತು. ಇದಕ್ಕೆ ಐತಿಹಾಸಿಕ ಆಧಾರ ಕಂಡು ಬಂದಿಲ್ಲವಾದ್ದರಿಂದ ಈ ಹೇಳಿಕೆ ಕಾಲ್ಪನಿಕವಾಗಿರಬಹುದು.

ಕುಮ್ಮಟದುರ್ಗದಲ್ಲಿ ಇತ್ತೀಚೆಗೆ ತಮಗೆ ಕಂಡು ಬಂದ ಕ್ರಿ.ಶ. ೧೩೧೫ ಮೇ ೧೪ರ ವೀರಗಲ್ಲಿನ ಶಾಸನದ ಆಧಾರದ ಮೇಲೆ ಜಿ. ವರದರಾಜರಾವ್, ಬಿ. ಆರ್. ತುಬಾಕಿ ಮತ್ತು ಸೀತಾರಾಮ ಜಾಗೀರ್‌ದಾರ್ ಅವರು ಕಂಪಿಲದೇವನು ಹೊಯ್ಸಳ ವಂಶದ ಒಂದು ಶಾಖೆಗೆ ಸಂಬಂಧಪಟ್ಟವನೆಂದು ಅಭಿಪ್ರಾಯಪಟ್ಟಿದ್ದಾರೆ. "ಯಾದವ ನಾರಾಯಣ ಭುಜಬಳಪ(ರಾ)ಕ್ರಮ ಪ್ರತಾಪ ಚಕ್ರವರ್ತಿ ಶ್ರೀ ಮನು ಮಹಾ ಮಂ(ಡಲಿಕ) ಹೊಯ್ಸ(ಣ) ವೀರ ಕಂಪಿಲದೇವನು ಕುಮಟದಲ್ಲಿ ರಾಜ್ಯಂಗೆಯುತಿರೆ.."ಎಂಬ ಅದರ ಒಕ್ಕಣಿಕೆ ಗಮನಾರ್ಹವಾಗಿದೆ. ಮಹಾಮಂ(ಡಲಿಕ)ಎಂಬುದೂ ಅದರಲ್ಲಿದೆ ಎಂಬುದನ್ನು ಲಕ್ಷಿಸಬೇಕು. ಎಂಟು ವರ್ಷಗಳ ತರುವಾಯದ(ಅಂದರೆ ಕ್ರಿ.ಶ. ೧೩೨೩ರ) ಇನ್ನೊಂದು ವೀರಗಲ್ಲಿನ ಶಾಸನ ರಾಮಘಡದ ರಾಮ ದೇವಾಲಯದಲ್ಲಿ ಜಿ. ವರದರಾಜರಾವ್ ಅವರು ಶಾಸನತಜ್ಞ ಜಿ.ಎಸ್. ಗಾಯಿ ಅವರ ನೆರವಿನಿಂದ ಉಲ್ಲೇಖಿಸಿದ್ದನ್ನು ಸೀತಾರಾಮ ಜಾಗೀರ್‌ದಾರ್ ಅವರು ವಿದ್ವಾಂಸರ ಗಮನಕ್ಕೆ ತಂದಿದ್ದಾರೆ. ಇದರಲ್ಲಿ "ಶ್ರೀ ವೀರ ಕಂಪಿಲದೇವನ ಮೇಲೆ ಬಲ್ಲಾಳರಾಯನು (ದಂಡೆತ್ತಿ)ಬಂದಲಿ ಯಿಬ್ಬರು ದಾಯದ ದಂಡಿನೊಳಗೆ ದಂಡಿನ ಬಯಿಚಯ್ಯನು...." ಎಂಬ ಉಲ್ಲೇಖ ಬಂದಿದೆ. ಇವೆರಡನ್ನೂ ಒಟ್ಟಿಗೆ ಸೇರಿಸಿದರೆ, ಅವು ಪರಸ್ಪರ ಪೂರಕವಾಗಿ ಮುಮ್ಮಡಿ ಸಿಂಗೇಯನಾಯಕನ ಮೂಲವು ಹೊಯ್ಸಳ ವಂಶದ ಒಂದು ಶಾಖೆಯಲ್ಲಿ ಇದ್ದಿರಬಹುದೆಂದು ಕಾಣುತ್ತದೆ. ಆದರೆ ಇವರು ಯಾವಾಗ ಎಲ್ಲಿಂದ ಬಂದು ಇಲ್ಲಿ ನೆಲೆಸಿದರು ಎಂಬ ಬಗ್ಗೆ ಸುಳಿವಿಲ್ಲ.

ಸುಮಾರು ೧೨೩೫ರಲ್ಲಿ ಪಟ್ಟಕ್ಕೆ ಬಂದ ಹೊಯ್ಸಳ ವೀರಸೋಮೇಶ್ವರನು ಹೊಯ್ಸಳ ಚಕ್ರಾಧಿಪತ್ಯವನ್ನು ತನ್ನ ಇಬ್ಬರು ಮಕ್ಕಳಾದ ನರಸಿಂಹ ಮತ್ತು ರಾಮನಾಥ ಇವರಲ್ಲಿ ಇಬ್ಭಾಗ ಮಾಡಿ ಚಿಕ್ಕವನಾದ ರಾಮನಾಥನಿಗೆ ತಮಿಳುನಾಡಿನ ಭಾಗವನ್ನು ವಹಿಸಿ ಕೊಟ್ಟಿದ್ದನ್ನೂ ಮತ್ತು ಈ ಅಣ್ಣ–ತಮ್ಮಂದಿರಲ್ಲಿ ಘರ್ಷಣೆ ಆಗುತ್ತಿದ್ದುದನ್ನೂ ಕಂಪಿಲರಾಯನ ಮಗನ ಹೆಸರು ಕುಮಾರ ರಾಮನಾಥ ಎಂಬುದನ್ನೂ ಗಮನಿಸಿ, ಹೊಯ್ಸಳ ರಾಮನಾಥನ ಶಾಖೆಯ ಸಂತತಿ ಇದು ಎಂದು ಮೇಲ್ಕಂಡ ಮೂವರು ವಿದ್ವಾಂಸರು ತರ್ಕಿಸಿದ್ದಾರೆ. ಆದರೆ ಇದರಲ್ಲಿ ಒಂದು ಊನ ಇದೆಯೆಂದು ಅನಿಸುತ್ತದೆ. ರಾಮನಾಥನ ಉತ್ತರಾಧಿಕಾರಿ ಪುತ್ರ ವಿಶ್ವನಾಥನಿಗೆ ಮಕ್ಕಳಿರಲಿಲ್ಲವಾಗಿ ಮುಮ್ಮಡಿ ಬಲ್ಲಾಳನ ಮಹಾರಾಜ್ಯದ ಎರಡೂ ಭಾಗಗಳನ್ನು ೧೩೦೧ರ ಹೊತ್ತಿಗೆ ಒಟ್ಟುಗೂಡಿಸುತ್ತಾನೆ. ಆದ್ದರಿಂದ ಬೇರೆ ಪುರಾವೆ(ಆಧಾರ) ಇಲ್ಲದ ಈ ಸ್ಥಿತಿಯಲ್ಲಿ ಒಂದು ಹೊಯ್ಸಳ ಶಾಖೆಯ ಸೋದರಿಯ ಮೂಲಕ ಕಂಪಿಲರಾಯನ ವಂಶ ಉಂಟಾಗಿರಬಹುದೇನೊ ?

"ಕುತುಬಿ ಸುರತಣ ಖಾನಗಳು ನೇಮಿಸಹಿತ...."

ಎಂಬ ಪದಗಳೂ ಮೇಲ್ಕಂಡ ಮೊದಲನೆಯ ವೀರಗಲ್ಲಿನ ಶಾಸನದಲ್ಲಿ ಬಂದಿವೆ. ಈ 'ಕುತುಬಿ ಸುರತಣ' ಅಲ್ಲಾ-ಉದ್-ದೀನ್ ಖಿಲ್ಜಿಯ ಮಗ ಕುತುಬುದ್ದೀನ್ ಮುಬಾರಕ್ ಷಾ ಎಂದು ಅವರು ತಮ್ಮ ಲೇಖನದಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ಒಂದು ತೊಡಕಿದೆ. ಆರ್. ಸಿ. ಮುಜುಂದಾರ್ ಮತ್ತಿತರರ ಪ್ರಕಾರ ಅಲ್ಲಾ-ಉದ್-ದೀನ್ ಖಿಲ್ಜಿಯ ಮೂರನೆಯ ಮಗ ಮುಬಾರಕ್‌ನು ಕುತುಬ್-ಉದ್-ದೀನ್ (ಮುಬಾರಕ್) ಷಾ ಎಂದು ಬಿರುದು ಧರಿಸಿ ಪಟ್ಟಕ್ಕೆ ಬಂದದ್ದು ಏಪ್ರಿಲ್ ೧೩೧೬ರಲ್ಲಿ. ಅಂದರೆ, ಕುಮ್ಮಟದ ಮೇಲೆ ಆ ದಾಳಿ ೧೩೧೫ರಲ್ಲಿ ನಡೆದು ಸುಮಾರು ಒಂದು ವರ್ಷದ ತರು ವಾಯ ಮುಬಾರಕ್‌ನು ಕುತುಬ್-ಉದ್-ದೀನ್ ಷಾ ಆದದ್ದು. ಆದ್ದರಿಂದ, ಆ ವೀರಗಲ್ಲಿನ ಶಾಸನವನ್ನು ಬರೆಯಿಸಿ ನೆಟ್ಟದ್ದು ಆ ವೀರನು ಮಡಿದು ಕೆಲಕಾಲ ಸಂದ ಮೇಲೆ, ಅಂದರೆ ಮುಬಾರಕನು ಕುತುಬುದ್ದೀನ್ ಎಂಬ ಹೊಸ ಹೆಸರಿನಿಂದ ಸುಲ್ತಾನನಾದ ಬಳಿಕ ಎಂದು ಗ್ರಹಿಸಬಹುದೇನೊ? (ಈತನು ಸುಲ್ತಾನನಾದ ಬಳಿಕ ದೇವಗಿರಿಯವರೆಗೆ ಬಂದಿದ್ದ. ಅದರ ದಕ್ಷಿಣಕ್ಕೆ ಬಂದ ಬಗ್ಗೆ ದಾಖಲೆ ಇಲ್ಲ).

ಪ್ರಬಲರಾಜರಾಗಿದ್ದ ಸೇವುಣರು, ಕಾಕತೀಯರು, ಪಾಂಡ್ಯರು ನಾಶವಾಗಿ, ಮುಮ್ಮಡಿ ಬಲ್ಲಾಳನೂ ಬಗ್ಗಿದ್ದರೂ, ಕಂಪಿಲಿ ಸಣ್ಣ ರಾಜ್ಯವಾದರೂ ಇನ್ನೂ ತಲೆ ಎತ್ತಿ ನಿಂತಿತ್ತು. ಕಂಪಿಲರು ಸುಲ್ತಾನ್ ಮುಹಮ್ಮದ್ ಬಿನ್ ತಘಲಕ್‌ನ ಅಧಿಕಾರಿಗಳಿಗೆ ಕಪ್ಪಕಾಣಿಕೆಗಳನ್ನು ಕೊಡಲೂ ನಿರಾಕರಿಸಿದರಲ್ಲದೆ, ಅವನ ವಿರುದ್ಧ ಬಂಡೆದ್ದ ಅವನ ಸೋದರ ಸಂಬಂಧಿ ಬಹಾ-ಉದ್-ದೀನ್ ಗುರ್‌ಶಪ್ಪನಿಗೂ ಅವನ ಸಂಸಾರಕ್ಕೂ ಇವರು ಆಶ್ರಯ ಕೊಡುವ ಧೈರ್ಯ ಮಾಡಿದ್ದು ಶರಣಾಗತರಿಗೆ ರಕ್ಷಣೆ ಕೊಡುವ ಪುರಾತನ ಸತ್‌ಸಂಪ್ರದಾಯಕ್ಕೆ ಅನುಗುಣವಾಗಿತ್ತು. ಸುಲ್ತಾನನು ದೇವಗಿರಿಯಲ್ಲಿ ಠಾಣ್ಯ ಹಾಕಿ, ಕಳುಹಿಸಿದ ಪಡೆ ಎರಡು ಸಲ ದಾಳಿಮಾಡಿ ವಿಫಲವಾಗಿ ಸೇನಾನಿ ಮಲಿಕ್‌ಝಾದಾನ ಮುಂದಾಳತ್ವದಲ್ಲಿ ಮೂರನೆಯ ಬಾರಿ ಮತ್ತಷ್ಟು ಪ್ರಬಲವಾಗಿ ಮುತ್ತಿಗೆ ಹಾಕಿದಾಗ,ಕುಮ್ಮಟರ ಘೋರ ಪ್ರತಿಭಟನೆ,ಶೌರ್ಯ-ಸಾಹಸ, ಬಲಿದಾನ ದಂಗುಬಡಿಸುವಂಥದು, ಅಸಾಮಾನ್ಯವಾದದ್ದು, ಚಿರಸ್ಮರಣೀಯವಾದದ್ದು. ಕಂಪಿಲರಾಯ ಮಹಾವೀರ ರಾಜಕುಮಾರ ರಾಮನಾಥ ಅನೇಕ ಸೈನ್ಯಾಧಿಕಾರಿಗಳು, ಸೈನಿಕರು ಕೋಟೆಯಿಂದ ಹೊರಬಂದು ರಣರಂಗದಲ್ಲಿ ವೀರಾವೇಶದಿಂದ ಹೋರಾಡಿ ಮಡಿಯುತ್ತಾರೆ. ಅವರ ಮಡದಿಯರು ಮಾನಭಂಗಕ್ಕಿಂತ ಮರಣವೇ ಲೇಸೆಂದು ಸಾಮೂಹಿಕವಾಗಿ ಅಗ್ನಿಗೆ ಆಹುತಿಯಾಗುತ್ತಾರೆ. (ಇದು ರಜಪೂತರ ಜೋಹರನ್ನು ನೆನಪಿಗೆ ತರುತ್ತದೆ.) ಇನ್ನೊಂದು ಆಶ್ಚರ್ಯದ, ಚಕಿತಗೊಳಿಸುವ ಸಂಗತಿಯೆಂದರೆ ಇಂತಹ ದುರಂತದ ಸನ್ನಿವೇಶದಲ್ಲಿಯೂ ಪ್ರಜೆಗಳು ಎದೆಗುಂದದೆ ಬಲಿಷ್ಠ ವಿಜಯಿ ಸುಲ್ತಾನನಿಂದ ನೇಮಿಸಲ್ಪಟ್ಟ ರಾಜ್ಯಪಾಲ ಮಲಿಕ್ ನಾಯಿಬ್ ಮುಹಮ್ಮದನಿಗೆ ಸಹಕಾರ ನೀಡದೆ, ಸರಕುಗಳನ್ನು ಒದಗಿಸದೆ, ತೆರಿಗೆಗಳನ್ನು ಕೊಡದೆ, ಇಲ್ಲಿ ಅವನ ಆಳ್ವಿಕೆಯನ್ನು ಅಸಾಧ್ಯ ಮಾಡಿದರು. ಸುಲ್ತಾನನ ಪ್ರಾಂತಾಧಿಕಾರಿ ಪಲಾಯನ ಮಾಡಬೇಕಾಯಿತು. ಗೆದ್ದವರಿಗೆ ಸೋತವರಿಂದ ಇಂಥ ಅಸಹಕಾರ ಅತಿ ವಿರಳ. ಕಂಪಿಲರ ಮಹಾಬಲಿದಾನದಿಂದ ಜನರಲ್ಲಿ ಹೊಸ ಜಾಗೃತಿ, ಚೈತನ್ಯ, ಆತ್ಮವಿಶ್ವಾಸ, ಧೈರ್ಯ ಉಂಟಾಗಲು ಕಾರಣವಾಗಿ ಹೊಸ ಐತಿಹಾಸಿಕ ಅಧ್ಯಾಯಕ್ಕೇ ನಾಂದಿಯಾಯಿತು.

ಇಬ್ನ್ ಬಟುಟಾ, ಇಸಾಮಿ, ಫರ್ನಾವೊ ನುನಿಜ್ ಮುಂತಾದ ವಿದೇಶಿಯರು, ದೇಶೀಯ ಜಾನಪದರು, ಕಾವ್ಯಕಾರರು ಈ ಅತ್ಯಂತ ಅಸಾಧಾರಣ ಘಟನೆಗಳನ್ನು ಚಿತ್ರವತ್ತಾಗಿ ವಿವರಿಸಿದ್ದಾರೆ. ಪರದಾರ ಸೋದರ ಕುಮಾರ ರಾಮನ ಶುದ್ಧ ಚಾರಿತ್ರ್ಯ, ಶೀಲ, ಶೌರ್ಯ, ಸಾಹಸ, ವ್ಯಕ್ತಿತ್ವ, ವರ್ಚಸ್ಸು, ಕರ್ನಾಟಕದ ತುಂಬ ಜನಜನಿತವಾಗಿ ಕಾವ್ಯಗಳಿಗೆ, ಜಾನಪದ ಹಾಡುಗಳಿಗೆ, ಯಕ್ಷಗಾನಗಳಿಗೆ, ನಾಟಕಗಳಿಗೆ ಕಥಾವಸ್ತುಗಳನ್ನು ಒದಗಿಸಿವೆ. ನಿಸ್ಸೀಮ ಸದ್ಗುಣಿ, ಸುಶೀಲ, ಅಪ್ರತಿಮವೀರ ಕುಮಾರ ರಾಮ ಜನರ ದೃಷ್ಟಿಯಲ್ಲಿ ಮಹಿಮಾಪುರುಷನಾಗಿ ಪುರಾಣಪುರುಷನಾಗಿ ಕಂಗೊಳಿಸಿದ್ದಾನೆ.ಅವರ ಹೃದಯ ಸಿಂಹಾಸನದಲ್ಲಿ ಚಿರಸ್ಥಾಯಿಯಾಗಿ ಆಸೀನನಾಗಿದ್ದಾನೆ. ಅವನ ಹೆಸರಿನಲ್ಲಿ ಅವನಿಗೆ ಸ್ಮಾರಕವಾಗಿ ದೇವಾಲಯಗಳೂ ನಿರ್ಮಾಣವಾಗಿವೆ. ಕವಿಗಳಾದ ನಂಜುಂಡ, ಪಾಂಚಾಳಗಂಗ ಮತ್ತು ಮಹಲಿಂಗಸ್ವಾಮಿ ಅನುಕ್ರಮವಾಗಿ ಸುಮಾರು ೧೬, ೧೭ ಮತ್ತು ೧೮ನೆಯ ಶತಮಾನಗಳಲ್ಲಿ 'ಕುಮಾರರಾಮಚರಿತೆ', 'ಚೆನ್ನರಾಮ

ಸಾಂಗತ್ಯ' ಮತ್ತು 'ಬಾಲರಾಮಸಾಂಗತ್ಯ'ಗಳನ್ನು ರಚಿಸಿದರು. ೧೯೬೬ರಲ್ಲಿ ಪ್ರಕಟವಾದ ಜಿ. ವರದರಾಜ ರಾವ್ ಅವರ 'ಕುಮಾರರಾಮನಸಾಂಗತ್ಯ'ಗಳು ಎಂಬ ಸಂಶೋಧನೆಯ ಮಹಾ ಪ್ರಬಂಧ ಒಂದು ದೊಡ್ಡ ಕೊಡುಗೆ. ಬಿ.ಎಸ್. ಗದ್ದಗಿಮಠರವರು ಕುಮಾರರಾಮನ ಬಗೆಗಿನ ಜಾನಪದ ಹಾಡುಗಳನ್ನು ಸಂಕಲಿಸಿದ್ದಾರೆ. ಈ ಎಲ್ಲ ಕೃತಿಗಳಲ್ಲಿ ಕೆಲವು ಐತಿಹಾಸಿಕ ಅಂಶಗಳಿದ್ದರೂ ಇವು ರಂಜನೆಗಾಗಿ ಕಲ್ಪಿತವಾದ ಹೇರಳ ಅಸಂಭವ ಸನ್ನಿವೇಶ ಗಳಿಂದ ಅತಿಶಯೋಕ್ತಿಗಳಿಂದ ಕೂಡಿದ ಕಲಾತ್ಮಕ ಕೃತಿ ಗಳು. ಆ ಸಾಂಗತ್ಯಕಾರರು ತಾವು ಬರೆದದ್ದು ಬರಿ ನರಕೃತಿಗಳಲ್ಲ, ದೈವಾಂಶಸಂಭೂತ ಮಹಾಪುರುಷನ ಪುಣ್ಯಪ್ರದವಾದ ಕಥೆಯ ನಿರೂಪಣೆ ಎಂದು ಹೇಳಿ ಕೊಂಡಿದ್ದಾರೆ. ಮಹಾಮಹಿಮ ಕಥಾನಾಯಕ ಕುಮಾರ ರಾಮನಾಥ ಜನಿಸಿದ್ದು ಚತುರ್ಥಕುಲದಲ್ಲಿ (ಶೂದ್ರರಲ್ಲಿ) ಎಂದೂ ಅವರೇ ತಿಳಿಸಿದ್ದಾರೆ, ಇದು ಒಂದು ಸ್ವಾರಸ್ಯ ಕರವಾದ ಸಂಗತಿ. ಕರ್ನಾಟಕದ ಬೇಡ ಜನಾಂಗದವರು ಕುಮಾರರಾಮ ತಮ್ಮವ, ತಮ್ಮ ಆರಾಧ್ಯ ಪುರುಷ, ದೇವತೆಯೆಂದು ಗೌರವಿಸುತ್ತಾರೆ, ಪೂಜಿಸುತ್ತಾರೆಂಬು ದನ್ನು ಇಲ್ಲಿ ಗಮನಿಸಬೇಕು. ಈ ಮುಂಚೆ ಪ್ರಸ್ತಾಪಿಸಿ ದಂತೆ, ಕುಮಾರರಾಮನ ಪೂರ್ವಜರು ಹೊಯ್ಸಳ ವಂಶಕ್ಕೆ ಸಂಬಂಧಪಟ್ಟವರೆಂದು ಒಪ್ಪುವುದಾದರೆ, 'ಚತುರ್ಥಕುಲ' ಅವರಿಗೂ ಅನ್ವಯಿಸಬಲ್ಲದು.

ಆ ಮೂವರು ಸಾಂಗತ್ಯಕಾರರ ಕೃತಿಗಳಲ್ಲಿ ಇಲ್ಲದ, ಕುಮಾರರಾಮನ ಅಂತ್ಯಕಾಲಕ್ಕೆ ಸಂಬಂಧಪಟ್ಟ ಕೆಲವು ಅಂಶಗಳು ಸುಮಾರು ೧೬–೧೭ನೆಯ ಶತಮಾನದಲ್ಲಿ ಬಾಳಿದ ಬಸವಣಯ್ಯನು ಬರೆದ 'ನವರತ್ನಮಾಲಿಕೆ' ಯಲ್ಲಿವೆ ಎಂಬುದನ್ನು ಇತ್ತೀಚೆಗೆ (೧೯೮೭ರಲ್ಲಿ) ಎಸ್. ಶಿವಣ್ಣನವರು ಬೆಳಕಿಗೆ ತಂದಿದ್ದಾರೆ.

ಒಟ್ಟಾರೆ ಹೇಳಬೇಕಾದರೆ, ಕೇವಲ ಅರ್ಧಶತ ಮಾನ ಬಾಳಿದ, ಕಂಪಲಿ ಅಥವಾ ಕುಮ್ಮಟ ಈ ಸಣ್ಣ ರಾಜ್ಯದ ಪಾತ್ರ ದೊಡ್ಡದು ಮಾರ್ಮಿಕವಾದದ್ದು. ವಿಜಯನಗರದ ಉದಯಕ್ಕೆ ಹಲವು ಸ್ರೋತಗಳಿಂದ ಪ್ರೇರಣೆಗಳು ದೊರಕಿದವಲ್ಲದೆ, ಈ ಪ್ರದೇಶದಲ್ಲಿಯೇ ಈ ಅಪೂರ್ವ ಮಹಾರಾಜ್ಯ ಹುಟ್ಟಿದುದಕ್ಕೆ ಕೆಲವು ಕಾರಣ ಗಳಿವೆಯಷ್ಟೆ. ಈ ನಿರ್ಧಾರಕ ವಿಷಯದಲ್ಲಿ ಈ ಚಿಕ್ಕ ತಡೆರಾಜ್ಯ ತನ್ನ ಉಜ್ವಲ, ಧೀರೋದಾತ್ತ ನಿಲುವು, ಶೌರ್ಯ–ಸಾಹಸ, ಬಲಿದಾನ ಮತ್ತು ಶೀಲಗಳಿಂದ ಸ್ಫೂರ್ತಿಸೆಲೆಯಾಯಿತಲ್ಲದೆ, ಚಿರಕಾಲ ಬಾಳುವ ಕೆಲವು ಮೌಲ್ಯಗಳನ್ನು ನೀಡಿತು.

ಈ ಪ್ರಬಂಧವನ್ನು ಮಂಡಿಸಿಯಾದ ಮೇಲೆ ಕರ್ನಾಟಕ ರಾಜ್ಯ ಪ್ರಾಚ್ಯವಸ್ತು ಇಲಾಖೆಯವರು ಕುಮ್ಮಟದುರ್ಗದಲ್ಲಿ ಕಂಡುಬಂದ ವೀರಗಲ್ಲುಗಳ ಮೇಲಣ ಎರಡು ಶಾಸನಗಳನ್ನು ಬೆಳಕಿಗೆ ತಂದಿದ್ದಾರೆ. ಸುಲ್ತಾನನ ಎರಡು ದಾಳಿಗಳಲ್ಲಿ ರಾಮನಾಯಕ ಮತ್ತು ಸಿಂಗ ಎಂಬ ಇಬ್ಬರು ವೀರರು ಆ ಕದನಗಳಲ್ಲಿ ಹೋರಾಡುತ್ತ ಮಡಿದರೆಂದು ಅವುಗಳಿಂದ ತಿಳಿದಿದೆ.

ಬಿ.ಎಸ್. ಸುಭದ್ರಾ

ಕವಲೇದುರ್ಗ: ಒಂದು ಪರಿಚಯ

ವಿಜಯನಗರ ಸಾಮ್ರಾಜ್ಯದಲ್ಲಿ ಸಣ್ಣ ಪಾಳೆಯಗಾರರಾಗಿ ತಮ್ಮ ಆಳ್ವಿಕೆ ಆರಂಭಿಸಿದ ಕೆಳದಿ ಅರಸರು ಕೆಳದಿ ಮತ್ತು ಸುತ್ತ ಮುತ್ತಲಿನ ಪ್ರದೇಶಗಳನ್ನು (ಇಂದಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿ) ಆಳುತ್ತಿದ್ದು, ಕ್ರಿ.ಶ. ೧೫೬೫ರ ಯುದ್ಧದಲ್ಲಿ ವಿಜಯನಗರದ ಪತನವಾದ ಮೇಲೆ, ಸ್ವತಂತ್ರರಾಗಿ ರಾಜ್ಯವನ್ನು ವಿಸ್ತರಿಸಿದರು. ಕ್ರಿ.ಶ. ೧೫೦೦ರಿಂದ ೧೭೬೩ರ ವರೆಗೆ ರಾಜ್ಯವಾಳಿದ ಈ ಅರಸರ ರಾಜ್ಯ ಅದರ ಉಚ್ಛ್ರಾಯ ಸ್ಥಿತಿಯಲ್ಲಿ ಈಗಿನ ಶಿವಮೊಗ್ಗ ಜಿಲ್ಲೆ ದಕ್ಷಿಣಕನ್ನಡ ಉತ್ತರಕನ್ನಡ, ಚಿಕ್ಕಮಂಗಳೂರು, ಹಾಸನ, ಧಾರವಾಡ ಜಿಲ್ಲೆಗಳ ಕೆಲಭಾಗ ಮತ್ತು ಕೇರಳದ ಉತ್ತರ ಭಾಗಗಳನ್ನು ಒಳಗೊಂಡಿತ್ತು. ಇವರ ಮೊದಲ ರಾಜಧಾನಿ ಕೆಳದಿ. ನಂತರ ಇಕ್ಕೇರಿ ಹಾಗೂ ಕೊನೆಯಲ್ಲಿ ಬಿದನೂರು (ಇಂದಿನ ಹೊಸನಗರ ತಾಲೂಕಿನ 'ನಗರ'). ನಗರದ ಹತ್ತಿರವೇ ಇರುವ 'ಕವಲೇದುರ್ಗ' (ಅಂದಿನ ಭುವನಗಿರಿದುರ್ಗ) ಕೆಳದಿ ಅರಸರ ಆಪತ್ಕಾಲದ ಆಶ್ರಯ ತಾಣವಾಗಿಯೂ, ಕೆಲಕಾಲ ರಾಜಧಾನಿಯಾಗಿಯೂ ಇದ್ದಿತು. ಕೆಳದಿಅರಸರು ಕವಲೇದುರ್ಗವನ್ನು ತಮ್ಮ ಶಾಸನಗಳಲ್ಲಿ 'ಭುವನಗಿರಿದುರ್ಗ'ವೆಂದು ಉಲ್ಲೇಖಿಸಿದ್ದಾರೆ.

ಕೆಳದಿ ಅರಸರ ಚರಿತ್ರೆಯ ಪ್ರಮುಖ ಆಕರಗಳಲ್ಲಿ ಒಂದಾದ ಸಾಹಿತ್ಯಿಕ ಕೃತಿ ಲಿಂಗಣ್ಣಕವಿಯ 'ಕೆಳದಿನೃಪ ವಿಜಯ.' ಲಿಂಗಣ್ಣ ಕವಿಯ ಹೇಳಿಕೆಯಂತೆ ಕೆಳದಿ ಅರಸರಲ್ಲಿ ಪರಾಕ್ರಮಿಯೂ, ಬಲಾಢ್ಯನೂ ಆದ ಹಿರಿಯ ವೆಂಕಟಪ್ಪನಾಯಕನು ಕವಲೇದುರ್ಗವನ್ನಾಳುತ್ತಿದ್ದ ತೊಲೆ ತಿಮ್ಮ, ಮುಂಡಿಗೆ ತಿಮ್ಮರೆಂಬ ಸಹೋದರರನ್ನು ಸೋಲಿಸಿ ಕೋಟೆಯನ್ನು ವಶಪಡಿಸಿಕೊಂಡನು. ಆಕೋಟೆಯನ್ನು ಬಲಪಡಿಸಿ, ಅದರಲ್ಲಿ ಕಾಶಿವಿಶ್ವೇಶ್ವರ ದೇವಾಲಯವನ್ನು ಸ್ಥಾಪಿಸಿದನೆಂದೂ, ಭಂಡಾರ, ಪಣತ, ಆನೆಯ ಮಹಲು, ಉಗ್ರಾಣ, ಜ್ಞಾನಶಾಲೆ, ಕುದುರೆಯ ಲಾಯ, ಮೊದಲಾದವನ್ನು ಕಟ್ಟಿಸಿದನೆಂದೂ 'ಕೆಳದಿನೃಪವಿಜಯ' ಹೇಳುತ್ತದೆ.

ಕೆಳದಿ ಅರಸರ ರಾಜಕೀಯ ಚರಿತ್ರೆಯನ್ನು ಅವಲೋಕಿಸುವಾಗ ಕಂಡು ಬರುವ ಮುಖ್ಯ ಅಂಶವೆಂದರೆ, ತಮ್ಮ ನೆರೆಹೊರೆಯ ರಾಜರೊಡನೆ ಅಥವಾ ಬಿಜಾಪುರದ ಸುಲ್ತಾನರೊಡನೆ ಅಥವಾ ಮರಾಠರೊಡನೆ ಯುದ್ಧ. ಆತ್ಮರಕ್ಷಣೆಗಾಗಿ ಹಾಗೂ ತಮ್ಮ ರಾಜ್ಯದ ಗಡಿಗಳನ್ನು ಕಾಯ್ದುಕೊಳ್ಳಲು ಅವರು ಅಲ್ಲಲ್ಲಿ ಬಲವಾದ ಕೋಟೆಗಳನ್ನು ಕಟ್ಟಿ, ಕಾವಲು ಸೈನ್ಯವನ್ನಿಟ್ಟಿದ್ದರು. ಕರ್ನಾಟಕದ ಕರಾವಳಿಯ ಉದ್ದಕ್ಕೂ ಅಲ್ಲಲ್ಲಿ ಕೋಟೆಗಳನ್ನು ಕಟ್ಟಿದ್ದರೆಂದು 'ಕೆಳದಿನೃಪವಿಜಯ' ತಿಳಿಸುತ್ತದೆ. ಬೆಟ್ಟದ ಮೇಲಿನ ಕೋಟೆ, ಅದರೊಳಗಿನ ಮೂರು ದೇವಾಲಯಗಳು ಹಾಗೂ ಅರಮನೆಯ ಅವಶೇಷಗಳಿಗೆ ಈ ಲೇಖನ ಸೀಮಿತವಾಗಿದೆ.

'ಕವಲೇದುರ್ಗ'—ಇದು ತೀರ್ಥಹಳ್ಳಿಯಿಂದ ಪಶ್ಚಿಮಕ್ಕೆ ಸುಮಾರು ೨೧ ಕಿ.ಮೀ. ದೂರದಲ್ಲಿರುವ ಬೆಟ್ಟಪ್ರದೇಶ. ಕೆಳದಿ ಅರಸರ ಇತಿಹಾಸದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡದುಕೊಂಡಿರುವ ಕವಲೇದುರ್ಗ ಅತ್ಯಂತ ದುರ್ಗಮವಾದುದು. ಕಾಡಿನ ಬೆಟ್ಟಗಳ ಮಧ್ಯೆ ಇರುವ ಈ ದುರ್ಗ ಕಾವಲು ಸೈನ್ಯವನ್ನಿಡುವ ಕಾವಲು ದುರ್ಗವಾಗಿಯೂ, ಕೆಳದಿ ಅರಸರಿಗೆ ಆಪತ್ಕಾಲದಲ್ಲಿ

ರಕ್ಷಣೆ ನೀಡಿದ ತಾಣವಾಗಿಯೂ ಈ ಗಿರಿದುರ್ಗ ಪ್ರಸಿದ್ಧವಾಗಿದೆ. ಪಶ್ಚಿಮ ಘಟ್ಟದ ಬೆಟ್ಟ ಸಾಲುಗಳ ಜೊತೆಗೇ ಪ್ರಕೃತಿದತ್ತ ದಟ್ಟವಾದ ಕಾಡಿನ ರಕ್ಷಣೆಯಿದೆ. ಗಗನ ಚುಂಬಿ ವೃಕ್ಷಗಳಿಂದ ಕೂಡಿರುವ ಈ ದುರ್ಗ ಸಮುದ್ರ ಮಟ್ಟದಿಂದ ಸುಮಾರು ೩೦೫೮ ಅಡಿಗಳಷ್ಟು ಎತ್ತರದಲ್ಲಿದೆ.

ಬೆಟ್ಟದ ಕೆಳಗಿನ ಊರನ್ನೂ ಸೇರಿಸಿದಂತೆ, ಏಳು ಸುತ್ತುಗಳಿರುವ ಈ ಕೋಟೆಯಲ್ಲಿ ಈಗ ಒಳಗಿನ ಐದು ಸುತ್ತುಗಳು ಮಾತ್ರ ಉಳಿದಿವೆ. ಗ್ರಾಮರಕ್ಷಣೆಗಾಗಿ ಇದ್ದ ಎರಡು ಸುತ್ತು ಕೋಟೆ ಗೋಡೆಗಳು ಈಗ ನಾಶವಾಗಿ, ಅಲ್ಲಲ್ಲಿ ಅವುಗಳ ಕುರುಹುಗಳು ಕಂಡು ಬರುತ್ತವೆ.

ಆಯತಾಕಾರದ ಈ ಕೋಟೆಯ ಗೋಡೆಗಳು ಸುಮಾರು ೩೦ ಅಡಿಗಳಷ್ಟು ಎತ್ತರವಿದ್ದು, ೨ ಅಡಿಗಳಷ್ಟು ಅಗಲವಿದ್ದು, ಚೌಕಾಕಾರದ ಮತ್ತು ಆಯತಾಕಾರದ ಕಣಶಿಲೆಯಿಂದ ಕಟ್ಟಲ್ಪಟ್ಟಿವೆ.

ಈ ಕೋಟೆಯ ಐದು ಸುತ್ತು ಗೋಡೆಗಳಿಗೂ ಪ್ರತ್ಯೇಕವಾಗಿ ಕಲ್ಲು ಚೌಕಟ್ಟಿನ ಪ್ರವೇಶದ್ವಾರಗಳಿವೆ. ಗೋಡೆಗಳ ನಡುವೆ ಅಲ್ಲಲ್ಲಿ ಬುರುಜುಗಳನ್ನು ಕಟ್ಟಿ, ಫಿರಂಗಿಗಳನ್ನು ಇಡಲು ಅವಕಾಶ ಮಾಡಿದ್ದಾರೆ.

ಈ ಕೋಟೆಗೆ ಹಲವು ಬಾಗಿಲುಗಳಿದ್ದು: 'ಭದ್ರಾಪುರ'ದ ಬಾಗಿಲಿನ ಬಳಿ ಸಣ್ಣ ಅಡ್ಡಗೋಡೆ, ಉಂಡೆಕಲ್ಲಿನ ಗೋಡೆಗಳು, ಚಾವಡಿಯ ಅವಶೇಷಗಳಿವೆ. ಅಶ್ವಗಳು ನಡೆಯುವ ಮಾರ್ಗವಿದೆ. ಗುಡ್ಡದಲ್ಲೇ ಉಂಡೆಕಲ್ಲುಗಳಿಂದ ಸಮತಟ್ಟಾದ ಮಾರ್ಗವನ್ನು ಮಾಡಲಾಗಿದೆ. ಇಲ್ಲಿಂದ ಬೆಟ್ಟವನ್ನೇರುತ್ತಾ ಹೋದರೆ. ಕೋಟೆಯ ಮೊದಲನೆಯ ಮಹಾದ್ವಾರ ಸಿಗುತ್ತದೆ. ಆಚೀಚೆ ಬುರುಜುಗಳು. ಈ ಬುರುಜುಗಳು ಬಿದನೂರಿನ (ಇಂದಿನ 'ನಗರ'ದ) ಕೋಟೆಯ ಬುರುಜುಗಳನ್ನು ಹೋಲುತ್ತವೆ. ಪ್ರವೇಶದ್ವಾರದ ಪಕ್ಕದಲ್ಲೇ ಕಮಾನಿನಾಕಾರದ 'ಕಾವಲುಗಾರರ ಕೊಠಡಿ' ಇದೆ.

ಉಂಡೆಕಲ್ಲುಗಳ ಮಾರ್ಗದಲ್ಲೇ ಮುಂದೆ ಹೋದರೆ ಎರಡನೆಯ ಮಹಾದ್ವಾರ ಸಿಗುತ್ತದೆ. ಒಳಭಾಗದಲ್ಲಿ ಮುಖಮಂಟಪವಿದ್ದ ಕುರುಹುಗಳಿವೆ. ಮುಖಮಂಟಪದ ಕಂಬಗಳು ಅಲ್ಲಲ್ಲಿ ಬಿದ್ದಿವೆ. ದ್ವಾರದ ಗೋಡೆಗಳಲ್ಲಿ ಅನೇಕ ಉಬ್ಬುಶಿಲ್ಪಗಳಿವೆ—ಆನೆಯ ಮೇಲೆ ವ್ಯಕ್ತಿಯೊಬ್ಬನ ಸವಾರಿ, ಮಿಥುನಶಿಲ್ಪ, ಇತ್ಯಾದಿ. ಎಡಭಾಗದಲ್ಲಿ ಕಮಾನಿನಾಕಾರದ ಕಾವಲುಗಾರರ ಕೊಠಡಿ. ಇಲ್ಲಿಯೇ ಹತ್ತಿರದಲ್ಲಿ 'ನಾಗತೀರ್ಥ'ವೆಂಬ ಕೊಳ ಹಾಗೂ ಏಳು ಹೆಡೆಯ ನಾಗನ ಶಿಲ್ಪವಿರುವ ಕಲ್ಲಿದೆ. ಈ ಕಣಶಿಲೆ ಒಂದೂವರೆ ಅಡಿ ಅಗಲವೂ ೬ ಅಡಿ ಎತ್ತರವೂ ಇದ್ದು, ಮಣ್ಣಿನಲ್ಲಿ ಮುಚ್ಚಿಹೋಗಿರುವುದರಿಂದ ಕೇವಲ ೪ ಅಡಿ ಎತ್ತರ ಮಾತ್ರ ಕಾಣುತ್ತದೆ. ಬಳಿಯಲ್ಲೇ ಹಲವಾರು ನಾಗರ ಕಲ್ಲುಗಳಿವೆ. ಅವುಗಳಲ್ಲಿ ಒಂದು ಸುಮಾರು ೬ ಅಡಿ ಎತ್ತರ, ೧ ಅಡಿ ಅಗಲವಿದ್ದು, ಕಣಶಿಲೆ (granite) ಯಿಂದ ಕೆತ್ತಲಾಗಿದೆ.

ಮೂರನೆಯ ಮಹಾದ್ವಾರದಲ್ಲೂ ಕಲ್ಲು ಚೌಕಟ್ಟಿನ ಪ್ರವೇಶದ್ವಾರ, ಒಳಭಾಗದಲ್ಲಿ ಚಚ್ಚೌಕದ ಕಂಬಗಳು ಹಾಗೂ ಕಮಾನಿನಾಕೃತಿಯ ಕಾವಲುಗಾರರ ಕೊಠಡಿ. ಬಳಿಯಲ್ಲೇ ಎತ್ತರದ ಗೋಡೆಯ ಮೇಲೆ 'ನಗಾರಿಕಟ್ಟೆ' ಎಂಬ ಸ್ಥಳವಿದೆ. ಶತ್ರುಗಳು ಕೋಟೆಯನ್ನು ಮುತ್ತಿದಾಗ ಎಚ್ಚರಿಕೆ ನೀಡಲು ಇಲ್ಲಿ ನಗಾರಿ ಬಾರಿಸುತ್ತಿದ್ದರಂತೆ. ಹತ್ತಿರವೇ ಹದಿನಾಲ್ಕು ಕಿಂಡಿಗಳ ದೊಡ್ಡ ಬುರುಜು. ಬಳಿಯಲ್ಲೇ ಫಿರಂಗಿಯೊಂದು ತುಂಡಾಗಿ ಬಿದ್ದಿದೆ.

ನಾಲ್ಕನೆಯ ಮಹಾದ್ವಾರಕ್ಕೆ ಸ್ವಲ್ಪ ದೂರ ಮೆಟ್ಟಿಲುಗಳೂ ಇವೆ. ಆಚೀಚೆ ಬುರುಜುಗಳು, ಬಲಗಡೆ ಕಾವಲುಗಾರರ ಕೊಠಡಿ. ಇಲ್ಲಿಂದ ಮುಂದೆ ಹೋದರೆ, ಕಾಶಿವಿಶ್ವೇಶ್ವರ ದೇವಾಲಯವಿದೆ. ಸಾಮಾನ್ಯವಾಗಿ ದೇವಾಲಯಗಳ ಮುಂಭಾಗದಲ್ಲಿ ಒಂದು ದೀಪಸ್ತಂಭವಿದ್ದರೆ, ಈ ದೇವಾಲಯದ ಮುಂದೆ ಆಚೀಚೆ ಎರಡು ದೀಪಸ್ತಂಭಗಳಿವೆ. ಮೂರು ಅಂತಸ್ತುಗಳನ್ನು ಹೊಂದಿರುವ ಈ ಶಿಲಾ ದೀಪಸ್ತಂಭಗಳ ತಳಭಾಗದಲ್ಲಿ ೭ ಅಡಿ ಉದ್ದ, ೭ ಅಡಿ ಅಗಲದ ಚೌಕಾಕಾರದ ಶಿಲಾಪೀಠಗಳಿವೆ. ಸುಮಾರು ೧೩ ಅಡಿಗಳಷ್ಟು ಎತ್ತರದ ಕಂಬಗಳು ಒಂದೂವರೆ ಅಡಿದಪ್ಪ (thickness) ವಿವೆ. ಪೀಠದ ಸುತ್ತಲೂ ಕೆತ್ತನೆಯಿದ್ದು. ದೇವಾಲಯಕ್ಕೆ ಅಭಿಮುಖವಾಗಿ ಗಣಪತಿಯ

ಶಿಲ್ಪವಿದ್ದು, ಉಳಿದ ಕಡೆ ಸಿಂಹದ ಕೆತ್ತನೆ ಇದೆ. ನಾಲ್ಕು ಸಿಂಹಗಳು ಇಡಿಯ ದೀಪಸ್ತಂಭಗಳನ್ನು ನಾಲ್ಕು ದಿಕ್ಕಿನಲ್ಲಿ ಹೊತ್ತಿವೆ. ಮಾನಸ್ತಂಭವನ್ನು ಹೋಲುವ ದೀಪಸ್ತಂಭದ ಮೇಲ್ತುದಿ ಆಕರ್ಷಕವಾಗಿದೆ.

ದೇವಾಲಯದ ಮಹಾದ್ವಾರದ ಕಟ್ಟಡ ಹದಿಮೂರೂವರೆ ಅಡಿ ಉದ್ದವೂ ಹದಿಮೂರೂವರೆ ಅಡಿ ಎತ್ತರವೂ ಇದ್ದು, ೩೫ ಅಡಿ ಅಗಲವಿದೆ. ಗೋಪುರರಹಿತ ಮೇಲ್ಛಾವಣಿ ಆಯತಾಕಾರದಲ್ಲಿದೆ. ಇದರ ತುದಿಗಳಲ್ಲಿ ಮುಸ್ಲಿಂ ವಾಸ್ತುಶಿಲ್ಪ ಶೈಲಿಯ ಮಿನಾರ್‌ಗಳೂ ತೆನೆಗಳ ಪಟ್ಟಿಕೆಗಳೂ ಇದ್ದು, ಕೆಳದಿ ಅರಸರ ವಾಸ್ತುಶಿಲ್ಪದಲ್ಲಿ ಮುಸ್ಲಿಂ ಶೈಲಿಯ ಪ್ರಭಾವಕ್ಕೆ ಉತ್ತಮ ಉದಾಹರಣೆಯಾಗಿದೆ. ಒಟ್ಟು ೮ ಮಿನಾರ್‌ಗಳಿದ್ದು, ಈ ಮೇಲ್ಛಾವಣಿ ಶಿಲಾಕಂಬಗಳ ಆಧಾರದಿಂದ ನಿಂತಿದೆ. ಇದರ ಮೇಲ್ಛಾವಣಿ ಲಾಡ್‌ಖಾನ್ ದೇವಾಲಯದ ಮೇಲ್ಛಾವಣಿಯನ್ನು ಹೋಲುತ್ತಿದ್ದು, ಮಲೆನಾಡಿನ ಅಧಿಕ ಮಳೆ ಬೀಳುವ ಪ್ರದೇಶಕ್ಕೆ ಅನುಗುಣವಾಗಿ, ನೀರು ಹರಿದು ಹೋಗಲು ಕಲ್ಲಿನ ಲೋವೆ ಇದೆ. ಗೋಡೆಗಳನ್ನು ಮಣ್ಣುಗಾರೆ ಹಾಗೂ ಜಂಬಿಟ್ಟಿಗೆ (laterite) ಕಲ್ಲುಗಳಿಂದ ಕಟ್ಟಿದ್ದಾರೆ. ಈ ರೀತಿಯ ಮೇಲ್ಛಾವಣಿಯನ್ನು ಇಕ್ಕೇರಿಯ ಪಾರ್ವತಿ ದೇವಾಲಯದಲ್ಲೂ, ಕವಲೇದುರ್ಗದ ಸಂಜೀವಾಂಜನೇಯ ದೇವಾಲಯದಲ್ಲೂ ಕಾಣಬಹುದು.

ಅಂಗಳದ ನಂತರ ದೇವಾಲಯದ ಮುಖ್ಯ ಕಟ್ಟಡದಲ್ಲಿ ಗರ್ಭಗುಡಿ, ಸುಕನಾಸಿ, ಮುಖಮಂಟಪವಿದೆ. ಇದರ ಉದ್ದ ೩೭ ಅಡಿ, ಆಗಲ ೧೪ ಅಡಿ, ಎತ್ತರ ಹದಿನಾರೂವರೆ ಅಡಿ ಇದೆ. ಹಿರಿಯ ವೆಂಕಟಪ್ಪನಾಯಕನಿಂದ ಸ್ಥಾಪಿತವಾದ ಅಮೃತಶಿಲೆಯ ಕಾಶಿವಿಶ್ವೇಶ್ವರ ಲಿಂಗವಿದೆ. ಈ ಲಿಂಗವನ್ನು ದೊಡ್ಡ ಸಂಕಣ್ಣನಾಯಕನು ಕಾಶಿಯಿಂದ ತೀರ್ಥಯಾತ್ರೆಯ ಸಮಯದಲ್ಲಿ ತಂದನೆಂದು ಕೆಳದಿನೃಪವಿಜಯ ತಿಳಿಸುತ್ತದೆ.

ಶಿಲಾದೇಗುಲವಾದ ಈ ಗರ್ಭಗುಡಿಯ ಮೇಲೆ ಅಂತಸ್ತುಗಳುಳ್ಳ ಶಿಖರವಿದೆ. ಮುಂಭಾಗದ ದ್ವಾರಬಂಧ ಕಮಾನಿನಾಕೃತಿಯಲ್ಲಿದ್ದು, ಆಚೀಚೆ ಎರಡು ಗಿಳಿಗಳ ಶಿಲ್ಪವಿದೆ. ಅಕ್ಕ ಪಕ್ಕದ ದೇವಗೋಪುರದಲ್ಲಿ ಚಾಮರಧಾರಿಣಿಯರು. ಈ ಕೆತ್ತನೆ ಇಕ್ಕೇರಿಯ ಪಾರ್ವತಿ ದೇವಾಲಯದ ಕೆತ್ತನೆಯನ್ನು ಹೋಲುತ್ತದೆ. ಮೆಟ್ಟಿಲುಗಳ ಯಾಳಿಯಲ್ಲಿ ಶಾರ್ದೂಲವಿದೆ. ಮುಖಮಂಟಪದ ಆಚೀಚೆ ಇರುವ ೨ ಕಂಬಗಳಲ್ಲಿ ಆನೆಯ ಸೊಂಡಿಲ ಮೇಲೆ ಸಿಂಹ ತನ್ನ ಮುಂಗಾಲನ್ನೆತ್ತಿ ನಿಂತಿದೆ–ವಿಜಯನಗರದ ಹಂಪಿಯ ಶಿಲ್ಪದ ಪ್ರಭಾವ ಎದ್ದು ಕಾಣುತ್ತದೆ. ಕವಲೇದುರ್ಗದ 'ಕಲ್ಯಾಣ ಮಹಲ್'ನ ಅವಶೇಷಗಳಲ್ಲೂ, ಕೊಲ್ಲೂರಿನ ಮೂಕಾಂಬಿಕಾ ದೇವಾಲಯದ ಕಂಬಗಳಲ್ಲೂ, ನಗರ(ಬಿದನೂರು)ದ ಕಲ್ಮಠದಲ್ಲೂ ಈ ರೀತಿಯ ಕಂಬಗಳ ರಚನೆಯಿದ್ದು, ವಿಜಯನಗರದ ವಾಸ್ತುಶಿಲ್ಪ ಶೈಲಿ ಕೆಳದಿ ಅರಸರ ಕಾಲದಲ್ಲೂ ಮುಂದುವರಿದುದನ್ನು ಕಾಣಬಹುದು.

ಸುಕನಾಸಿಯ ದ್ವಾರಬಂಧದ ಆಚೀಚೆ ಶೈವ ದ್ವಾರಪಾಲಕ ಶಿಲ್ಪಗಳಿವೆ. ದುರ್ಗಿಯ ವಿಗ್ರಹ, ನಂದಿ ವಿಗ್ರಹಗಳೂ ಅಲ್ಲಿವೆ. ಸುಕನಾಸಿ ಮತ್ತು ಗರ್ಭಗುಡಿಯ ದ್ವಾರಬಂಧ ಆಯಾಕಾರವಿದೆ,

ದೇವಾಲಯದ ಪ್ರಾಕಾರದಲ್ಲಿ ಶಿಲಾಮಂಟಪವೊಂದಿದ್ದು, ಇದನ್ನು ಕಲ್ಯಾಣ ಮಂಟಪ/ಉತ್ಸವ ಮಂಟಪ ಎಂದೂ ಕರೆಯುತ್ತಾರೆ. ಇದು ೧೦ ಅಡಿ ಉದ್ದವಿದ್ದು, ಹನ್ನೊಂದೂವರೆ ಅಡಿ ಅಗಲ ಹಾಗೂ ಅದಿನಾಲ್ಕು ಅಡಿ ಎತ್ತರವಿದೆ.

ದೇವಾಲಯದ ಹೊರಗೋಡೆಯಲ್ಲಿ ಉಬ್ಬು ಶಿಲ್ಪಗಳಿವೆ–ವೀರರಿಬ್ಬರ ಹೋರಾಟ, ಯೋಧನೊಬ್ಬ ಅಶ್ವದ ಮೇಲೆ ಕುಳಿತು ಭಲ್ಲೆ ಎಸೆಯುತ್ತಿರುವುದು, ಆನೆಗಳೆರಡು ಎದುರು–ಬದುರಾಗಿ ನಡೆಯುತ್ತಿರುವುದು–ಕಾಲ್ಪನಿಕ ಶಿಲ್ಪಗಳು, ಇತ್ಯಾದಿ.

ಮಹಾದ್ವಾರದ ಮೇಲ್ಛಾವಣಿಯಲ್ಲಿ ನವಗ್ರಹಗಳು ಹಾಗೂ ಅರಳಿದ ಕಮಲದ ಕೆತ್ತನೆ ಇದೆ.

ಈ ದೇವಾಲಯದ ಸಮೀಪವೇ 'ಎಣ್ಣೆಬಾವಿ' 'ತುಪ್ಪದಬಾವಿ' ಎಂಬ ಹೆಸರುಳ್ಳ ಎರಡು ಬಾವಿಗಳಿವೆ. ಚಚ್ಚೌಕ ಸ್ಥಳ (ಸುಮಾರು ೨ ಅಡಿಗಳಷ್ಟು) ಬಿಟ್ಟು, ಕಲ್ಲು ಚಪ್ಪಡಿಗಳಿಂದ ಮುಚ್ಚಿದ್ದಾರೆ.

ಹತ್ತಿರದ ಬಂಡೆಗಲ್ಲಿನಲ್ಲಿ ಕೊರೆದ ಶಿಲಾಶಾಸನವೊಂದಿದೆ. ಬುಕ್ಕಣ್ಣವೊಡೆಯರ ಕುಮಾರ ಮಂದಗಿರಿಯ

ವಿರೂಪಣ್ಣವೊಡೆಯರು....ನಗರಿಯ ಕೋಟೆಯ ಮೈಲಾರ ದೇವರಿಗೆ ಅಮೃತ ಪಡಿಭೋಗಕ್ಕೆ ಬಿಟ್ಟ (ದೇ)ವದಾನ ಭೂಮಿಯ ವಿವರವಿದೆ. ಆದರೆ ಮೈಲಾರೇಶ್ವರ ದೇವಾಲಯದ ಕುರುಹುಗಳು ಎಲ್ಲೂ ಕಂಡುಬರುವುದಿಲ್ಲ.

ಹತ್ತಿರದ ಕೋಡುಬಂಡೆಯ ಮೇಲೆ ಲಕ್ಷ್ಮೀನಾರಾಯಣ ಗುಡಿ ಇದೆ. ಈ ಗುಡಿಯ ಉದ್ದ ೧೦ ಅಡಿ, ಅಗಲ ೧೦ ಅಡಿ, ಎತ್ತರ ಹದಿನೈದೂವರೆ ಅಡಿ ಇದೆ. ಬಂಡೆಯನ್ನು ಎಚ್ಚರಿಕೆಯಿಂದ ಹತ್ತಿಹೋಗಬೇಕು. ನಾರಾಯಣನ ಎಡ ತೊಡೆಯ ಮೇಲೆ ಲಕ್ಷ್ಮಿ ಕುಳಿತಿದ್ದು, ವಿಗ್ರಹ ಸುಮಾರು ಎರಡೂವರೆ ಅಡಿ ಎತ್ತರವಿದೆ. ಪೀಠ ಒಂದೂವರೆ ಅಡಿ ಎತ್ತರವಿದೆ. ಪ್ರಭಾವಳಿಯಲ್ಲಿ ಸುಂದರವಾದ ಕೆತ್ತನೆ ಇದೆ. ಕಟ್ಟಡದ ಮೇಲಿನ ಶಿಖರದ ಒಂದು ಭಾಗ ನಾಶವಾಗುತ್ತಿದೆ. ಯಾಳಿ ಹಾಳಾಗಿದೆ.

ಕೋಡುಬಂಡೆಯಿಂದ ಇಳಿದು, ಮುಂದೆ ನಡೆದಾಗ, ಕಲ್ಲಿನಲ್ಲಿ ಕಟ್ಟಿದ ಕೊಳ(ಚೌಕಾಕಾರ)ವಿದ್ದು, ಈಗ ಅಲ್ಲಿ ನೀರಿಲ್ಲ. 'ಪಣತ' ಇದ್ದ ಸ್ಥಳವನ್ನು ಮಾತ್ರ ಗುರುತಿಸಬಹುದು. ಮುಂದೆ ನಡೆದರೆ, ಕೊನೆಯ ಮಹಾದ್ವಾರ ಸಿಗುತ್ತದೆ. ಹತ್ತಿರವೇ ಕಲ್ಲಿನ ತೊಟ್ಟಿಯೊಂದಿದೆ.

ಇದನ್ನು ದಾಟಿ ಒಳಗೆ ಬಂದರೆ, ಅರಮನೆಯ ಹೊರ ಅಂಗಳ ಸಿಗುತ್ತದೆ. ಈ ಅಂಗಳ ಸುಮಾರು ೫೦ ಅಡಿ ವ್ಯಾಸವಿದ್ದು, ಎಡಕ್ಕೆ ಸುಮಾರು ೧೦ ಅಡಿ ಎತ್ತರ, ೪ ಅಡಿ ಅಗಲದ ಕಲ್ಲಿನ ದ್ವಾರಬಂಧ ಕಾಣುತ್ತದೆ. ಕಲ್ಲು ಕಂಬಗಳೂ, ತೊಲೆಗಳೂ ಅಸ್ತವ್ಯಸ್ತವಾಗಿ ಬಿದ್ದಿದ್ದು, ವೃಕ್ಷಗಳ ಸಮೂಹ ಬೆಳೆದಿದೆ. ಅರಮನೆಯ ಹಿಂಭಾಗದಲ್ಲಿ 'ಶಾಂತಗಂಗೆ' ಎಂಬ ಕೊಳವಿದ್ದು, ಇದರಿಂದ ಅರಮನೆಗೆ ನೀರು ಬರಲು ಕಾಲುವೆ ಇದ್ದಿತು. ಸುಮಾರು ೧೦ ಅಡಿ ಉದ್ದ, ೫ ಅಡಿ ಅಗಲದ ತೊಟ್ಟಿಗೆ ಈ ನೀರು ಸರಬರಾಜಾಗುತ್ತಿತ್ತು. ಹತ್ತಿರದಲ್ಲಿಯೇ ಕಲ್ಲು ಚಪ್ಪಡಿಯಲ್ಲಿ ಅಷ್ಟಕೋನಾಕೃತಿಯ ಬಾಯಿ ಇರುವ ಒಂದು ನೆಲಬಾವಿ ಇದೆ. ಅದರಲ್ಲಿ ನೀರಿಲ್ಲ.

ಇಲ್ಲಿಂದ ಮುಂದೆ ಹೋದರೆ, ಸ್ವಾಭಾವಿಕವಾದ ಗುಂಡ್ಡದ ಬದಿಗೆ ಕಲ್ಲುಗಳಿಂದ ಕಟ್ಟಿ, ಗೋಡೆ ನಿರ್ಮಿಸಿದ್ದಾರೆ. ಮೇಲೆ ಹೋಗಲು ಸುಮಾರು ಇಪ್ಪತ್ತು ಮೆಟ್ಟಿಲುಗಳಿವೆ. ಮೇಲೆ ಮತ್ತೊಂದು ಅಷ್ಟಕೋನಾಕೃತಿಯ ಬಾಯಿ ಇರುವ ಬಾವಿ ಇದ್ದು, ಅದರಲ್ಲಿ ನೀರಿಲ್ಲ.

ಅರಮನೆಗೆ ಹೊಂದಿಕೊಂಡಂತೆ, ಎಡಕ್ಕೆ, ಎತ್ತರವಾದ ಸುಮಾರು ೧೦೦ ಅಡಿ ಉದ್ದ, ೨೫ ಅಡ್ಡ ಅಗಲದ ಸಮತಟ್ಟಾದ ಪ್ರದೇಶವಿದೆ. ಇಲ್ಲಿ 'ಜೋಕಾಲಿ ಕಂಬ' ಎಂದು ಕರೆಯಲಾಗುವ ಕಲ್ಲಿನ ಚೌಕಟ್ಟು ಇದೆ. ಕಂಬದ ಎತ್ತರ ೮ ಅಡಿಗಳು. ಸುಮಾರು ೪ ಅಡಿಗಳಷ್ಟು ಮಣ್ಣಿನಲ್ಲಿ ಮುಚ್ಚಿಹೋಗಿದ್ದು, ಇಡಿಯ ಪ್ರದೇಶ ಉದ್ಯಾನವಾಗಿದ್ದಿರಬೇಕು.

ಕಾಲು ಹಾದಿಯಲ್ಲಿ ಮೇಲೆ ಹೋದರೆ 'ತೋಪುಖಾನೆ' ಸಿಗುತ್ತದೆ ಕಲ್ಲಿನಿಂದಲೇ ನಿರ್ಮಿತವಾದ ಕಟ್ಟಡ. ಛಾವಣಿ ಉಳಿದಿಲ್ಲ. ಇಲ್ಲಿಂದ ಬಲಭಾಗಕ್ಕೆ ಸ್ವಲ್ಪ ದೂರ ಹೋದರೆ 'ಶಿಖರೇಶ್ವರ' ಎಂದು ಕರೆಯಲಾಗುತ್ತಿರುವ ಗುಡಿ ಸಿಗುತ್ತದೆ.

ದುರ್ಗದಲ್ಲಿ ಅತ್ಯಂತ ಎತ್ತರದ ಪ್ರದೇಶದಲ್ಲಿ 'ಶಿಖರೇಶ್ವರಗುಡಿ' ಇದ್ದು, ಇದರ ಉದ್ದ ೧೦ ಅಡಿ, ಅಗಲ ೧೦ ಅಡಿ ಎತ್ತರ, ಹದಿನಾರೂವರೆ ಅಡಿಗಳು. ಒಳಗೆ ಪೀಠ ೧ ಅಡಿ ಎತ್ತರ, ಆ ಈಶ್ವಲಿಂಗ ಅರ್ಧ ಅಡಿ ಎತ್ತರವಿದೆ. ಗುಡಿಯಲ್ಲಿ ಕೆತ್ತನೆ ಇಲ್ಲ. ಮೆಟ್ಟಿಲುಗಳು ಮಾಯವಾಗಿವೆ. ಗುಡಿಯ ಬಾಗಿಲು ಪಶ್ಚಿಮಕ್ಕಿದೆ. ಇಲ್ಲಿಂದ ಸಂಜೆಯ ಆಗಸದ ಸೊಬಗು ಹಾಗೂ ಪಶ್ಚಿಮ ಸಮುದ್ರದ ದೃಶ್ಯ ಅತ್ಯಂತ ಮನೋಹರವಾಗಿ ಕಾಣುತ್ತದೆ.

'ಕವಲೇದುರ್ಗ' ಊರಿನಲ್ಲೂ ಕೆಳದಿ ಅರಸರು ಕಟ್ಟಿಸಿದ ಅನೇಕ ದೇವಾಲಯಗಳು ಇಂದಿಗೂ ಉಳಿದಿದ್ದು, ಕೆಳದಿ ಅರಸರ ಕಾಲದ ವಾಸ್ತುಶಿಲ್ಪದ ಪ್ರತಿನಿಧಿಗಳಾಗಿವೆ ಕೆರೆಕಟ್ಟೆ ಗಣಪತಿ ಎಂದು ಕರೆಯಲ್ಪಡುವ ಗಣಪತಿ ದೇವಾಲಯ (ಮೂಲ ವಿಗ್ರಹ ಮಾತ್ರ ಕೆಳದಿ ಅರಸರ ಕಾಲದ್ದು). ವಿರೂಪಾಕ್ಷ ದೇವಾಲಯ, ವಿಜಯವಿಠ್ಠಲ ದೇವಾಲಯ, ವೀರಭದ್ರ ದೇವಾಲಯ (ಸುಂದರ ಶಿಲ್ಪ ವೀರಭದ್ರನನ್ನುಳಿದು ದೇವಾಲಯ ಜೀರ್ಣಗೊಂಡಿದೆ), ನರಸಿಂಹ,

ಸಂಜೀವಾಂಜನೇಯ, ಕೋಟೆ ಆಂಜನೇಯ, ಮೊದಲಾದ ದೇವಾಲಯಗಳೂ, ಕಲ್ಯಾಣ ಮಂಟಪದ ಅವಶೇಷಗಳೂ, ತಿಮ್ಮಣ್ಣ ನಾಯಕನ ಕೆರೆಯ ದಂಡೆಯ ಮೇಲಿನ ಮಹಾನವಮಿ ಬಯಲಿನಲ್ಲಿ ಹಲವಾರು ಮಹಾಸತಿ ಕಲ್ಲುಗಳು. ಹಿರಿಯ ವೆಂಕಟಪ್ಪನಾಯಕ ಕಟ್ಟಿಸಿದ ಮಸೀದಿ (ಜೀರ್ಣಗೊಂಡಿದೆ). ಮಹಾ ಮಹತ್ತಿನ ಮಠ, ಎಲ್ಲವೂ ಕೆಳದಿ ಅರಸರ ಕಾಲದ ಶಿಲ್ಪಕಲಾ ವೈಭವದ ಮೂಕ ಸಾಕ್ಷಿಗಳಾಗಿವೆ.*

ಗ್ರಂಥಋಣ :

1. K.N. Chitnis : *Keladi Polity*
2. *Epigraphia Carnatic*, Vol, vii
3. ಕೆಳದಿನೃಪವಿಜಯಂ
4. ಬಿ.ಎಸ್. ಶಾಸ್ತ್ರಿ : ಕೆಳದಿ ಅರಸರು ಹಾಗೂ ಪೋರ್ಚುಗೀಜರು
5. ಕೆ. ಜಗನ್ನಾಥ ಶಾಸ್ತ್ರಿ : ಕೌಲೇದುರ್ಗ

---

* ಈ ಪ್ರವಾಸದಲ್ಲಿ ಸಹಕರಿಸಿದ ತೀರ್ಥಹಳ್ಳಿಯ ಶ್ರೀ ಗೋಪಾಲಕೃಷ್ಣ ಉಡುಪರಿಗೂ ನಿಲುವಾಸೆಯ ಶ್ರೀ ಎನ್.ಎಸ್. ವೆಂಕಟರಮಣ ಮತ್ತು ಸಹೋದರರಿಗೂ, ಕೌಲೇದುರ್ಗದ ಶ್ರೀ ಸುಬ್ರಹ್ಮಣ್ಯ ಜೋಯಿಸರಿಗೂ ಕೃತಜ್ಞತೆಗಳು

ಡಾ॥ ಎ. ಕೆ. ಶಾಸ್ತ್ರಿ

ಶೃಂಗೇರಿ ಮಠ ಮತ್ತು ಕೆಳದಿ ಇಮ್ಮಡಿ ಬಸವಪ್ಪನಾಯಕರ ಸಂಬಂಧ

ಸುಮಾರು ೧೨೦೦ ವರ್ಷಗಳ ಹಿಂದೆ ಆದಿಶಂಕರಾಚಾರ್ಯರು ದಕ್ಷಿಣದ ಶೃಂಗೇರಿ, ಪಶ್ಚಿಮದ ದ್ವಾರಕೆ, ಉತ್ತರದ ಬದರಿ ಮತ್ತು ಪೂರ್ವದ ಜಗನ್ನಾಥಪುರಿ ಈ ನಾಲ್ಕು ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿ ಧಾರ್ಮಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಛಿದ್ರಗೊಂಡ ಭಾರತದಲ್ಲಿ ಐಕ್ಯತೆಯನ್ನುಂಟು ಮಾಡಲು ಶ್ರಮಿಸಿದರು. ಹನ್ನೆರಡು ಶತಮಾನಗಳು ಉರುಳಿದರೂ ಶೃಂಗೇರಿ ಜಗದ್ಗುರು ಪರಂಪರೆಯು ಇಂದಿಗೂ ಅವಿಚ್ಛಿನ್ನವಾಗಿ ಸಾಗಿ ಬಂದಿರುವುದು ಐತಿಹಾಸಿಕ ಸತ್ಯ. ಐತಿಹಾಸಿಕ ಪುರಾವೆಗಳ ಅಭಾವದಿಂದಾಗಿ ವಿಜಯನಗರ ಸ್ಥಾಪನೆಯ ಕಾಲದವರೆಗಿನ ಶ್ರೀಮಠದ ಇತಿಹಾಸವು ಅಸ್ಪಷ್ಟವೆಂದೇ ಹೇಳಬೇಕು. ವಿಜಯನಗರದ ಅರಸುಗಳು ಶೃಂಗೇರಿ ಮಠಕ್ಕೆ ವಿಶೇಷ ದಾನ ಧರ್ಮಗಳನ್ನು ಮಾಡಿ ಗೌರವಿಸಿದ್ದರಿಂದ ಅದೊಂದು ಧರ್ಮಸಂಸ್ಥಾನವಾಗಿ ಪರಿವರ್ತನೆಗೊಂಡಿತು. ವಿಜಯನಗರದ ಪತನದ ನಂತರವೂ ಕೂಡ ಕರ್ನಾಟಕದ ಅರಸುಗಳು ಮತ್ತು ಭಾರತದ ಹಲವಾರು ಸ್ಥಳಗಳ ಅರಸುಗಳು ಶೃಂಗೇರಿ ಮಠಕ್ಕೆ ದಾನ ಧರ್ಮಗಳನ್ನು ಮಾಡಿ ಮತ್ತು ಬಿರುದು ಬಾವಲಿಗಳನ್ನು ನೀಡಿ ಜಗದ್ಗುರುಗಳನ್ನು ಗೌರವಿಸಿದರು.

ದಕ್ಷಿಣದಲ್ಲಿಯೇ ಅತ್ಯಂತ ಪ್ರಬಲವಾದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೫೬೫ರಲ್ಲಿ ಕುಸಿದ ನಂತರ ಸ್ವಾಭಾವಿಕವಾಗಿ, ಕರ್ನಾಟಕದಲ್ಲಿ ಕೆಲಕಾಲ ಅರಾಜಕತೆ ತಲೆದೋರಿತು. ದಕ್ಷಿಣದ ರಾಜ್ಯಗಳನ್ನೆಲ್ಲ ಒಂದುಗೂಡಿಸುವ ಸಾಮರ್ಥ್ಯ ಯಾವ ಸಾಮಂತರಿಗೂ ಇರಲಿಲ್ಲ. ರಾಜಕೀಯ ಅಸ್ಥಿರತೆಯಿಂದಾಗಿ ಶೃಂಗೇರಿ ಮಠದ ಘನತೆಯೂ ತಾತ್ಕಾಲಿಕವಾಗಿ ಕುಂಠಿತಗೊಂಡಿತು. ಇಂಥ ಸ್ಥಿತಿಯಲ್ಲಿ ಶೃಂಗೇರಿ ಮಠವು ತನ್ನ ಕೆಲವು ಚರಾಚರ ಆಸ್ತಿಗಳನ್ನೂ ಕಳೆದುಕೊಂಡಿತು. ಹೀಗಿರುವಾಗ, ಸಾಮಂತರಲ್ಲಿ ಪ್ರಬಲರೆನಿಸಿದ ಕೆಳದಿಯ ನಾಯಕರು ಕರ್ನಾಟಕದ ಇತಿಹಾಸದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಂಡರು. ಈಗ ಕೆಳದಿಯು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಒಂದು ಸಣ್ಣ ಊರು. ಆದರೆ ಅದು ಒಂದು ಕಾಲದಲ್ಲಿ ಕೆಳದಿನೃಪರ ರಾಜಧಾನಿಯಾಗಿತ್ತು. ಕೆಳದಿನೃಪರು ಸುಮಾರು ಎರಡೂವರೆ ಶತಮಾನಗಳ ಕಾಲ (ಕ್ರಿ. ಶ. ೧೪೯೯–೧೭೬೩) ಕರ್ನಾಟಕದ ಮಧ್ಯ–ಪಶ್ಚಿಮ ಭಾಗದ ಒಡೆಯರಾಗಿದ್ದರು. ಕೆಳದಿಯ ಅರಸರು ವೀರಶೈವ ಮತಾನುಯಾಯಿಗಳಾಗಿದ್ದರೂ ಅದ್ವೈತ ಪೀಠದ ಶೃಂಗೇರಿ ಜಗದ್ಗುರುಗಳನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರೆಂಬುದಕ್ಕೆ ಸಾಕಷ್ಟು ಐತಿಹಾಸಿಕ ಪುರಾವೆಗಳಿವೆ.[1]

ಕೆಳದಿ ಅರಸುಗಳು ಮುಸಲ್ಮಾನರ ದಾಳಿಗಳನ್ನು ಎದುರಿಸಲು ಹಾಗೂ ಕೆಲವೊಮ್ಮೆ ಅವುಗಳಿಂದ ತಪ್ಪಿಸಿಕೊಳ್ಳಲೆಂದು, ಕಾಲಕ್ಕನುಸರಿಸಿ, ಕ್ರಮವಾಗಿ, ಕೆಳದಿ, ಇಕ್ಕೇರಿ, ಬಿದನೂರು ಮತ್ತು ಭುವನಗಿರಿ ದುರ್ಗಗಳೆಂಬ

1 ಶಿಲಾ ಹಾಗೂ ತಾಮ್ರ ಶಾಸನಗಳು, ಶೃಂಗೇರಿ ಮಠದಲ್ಲಿರುವ ಕಾಗದಪತ್ರಗಳು ಮತ್ತು ಕಡತಗಳು ; ಗುರುವಂಶಕಾವ್ಯ. ಕೆಳದಿನೃಪವಿಜಯಂ, ಶಿವರತ್ನಾಕರ ಮೊದಲಾದ ಗ್ರಂಥಗಳು

ರಾಜಧಾನಿಗಳಿಂದ ರಾಜ್ಯವನ್ನಾಳಿದರು. ವಿಜಯನಗರದ ಚಕ್ರವರ್ತಿಗಳಂತೆ ಇವರೂ ಕೂಡ ಶೃಂಗೇರಿ ಮಠಕ್ಕೆ ಹಲವಾರು ಸಲ ಭೆಟ್ಟಿಕೊಟ್ಟು, ಭೂಮಿ ಹಾಗೂ ವಸ್ತು ಒಡವೆಗಳನ್ನು ದಾನಮಾಡಿ, ಜಗದ್ಗುರುಗಳ ಆಶೀರ್ವಾದ ಪಡೆದರು. ಅದೇ ರೀತಿ ಹಲವಾರು ಸಂದರ್ಭಗಳಲ್ಲಿ ಶ್ರೀಗಳವರನ್ನೂ ತಮ್ಮ ಆಸ್ಥಾನಕ್ಕೆ ಬರಮಾಡಿಕೊಂಡು ಸಂಭ್ರಮದ ಸ್ವಾಗತ ನೀಡಿದರು. ಶ್ರೀಮಠವು ಆಂತರಿಕ ಇಲ್ಲವೆ ಬಾಹ್ಯ ತೊಂದರೆಯಲ್ಲಿ ಸಿಲುಕಿದಾಗ, ನಾಯಕರು ಮಠಕ್ಕೆ ಸಕಲ ಸಹಾಯ ನೀಡಿ ಅದನ್ನು ರಕ್ಷಿಸಿದರು. ಜಗದ್ಗುರುಗಳ ವಿಜಯಯಾತ್ರೆ, ಇಲ್ಲವೆ ತೀರ್ಥಯಾತ್ರಾ ಸಮಯದಲ್ಲಿ ಅವರ ಪರಿವಾರಕ್ಕೆ ಬೇಕಾದ ಎಲ್ಲ ಅನುಕೂಲತೆಗಳನ್ನೂ ಒದಗಿಸಿಕೊಟ್ಟರು.

ಶೃಂಗೇರಿ ಮಠದೊಂದಿಗೆ ವಿಜಯನಗರದ ಸಮ್ರಾಟರು ಇರಿಸಿಕೊಂಡ ಸಂಬಂಧವನ್ನರಿಯಲು ಶಿಲಾ ಮತ್ತು ತಾಮ್ರ ಶಾಸನಗಳೆಷ್ಟು ಮಹತ್ವವೋ, ತುಲನಾತ್ಮಕವಾಗಿ, ಶೃಂಗೇರಿ ಮತ್ತು ಕೆಳದಿ ನಡುವಿನ ಸಂಬಂಧವನ್ನರಿಯಲು ಅವು ಅಷ್ಟೊಂದು ಮಹತ್ವವಲ್ಲ. ಹದಿನಾರನೆಯ ಶತಮಾನದ ಕೊನೆಯಲ್ಲಿ ಕಡತಗಳು[2] ಮತ್ತು ಕೈಯಿಂದ ಸಿದ್ಧಪಡಿಸಿದ ದಪ್ಪನೆಯ ಕಾಗದಗಳು[3] ಬಳಕೆಯಲ್ಲಿ ಬಂದವು. ಗುರುವಂಶಕಾವ್ಯ ; ಕೆಳದಿನೃಪ ವಿಜಯಂ ಮತ್ತು ಶಿವತತ್ವರತ್ನಾಕರ ; ಪೀಟ್ರೊಡೆಲ್ಲವಲ್ಲೆ ಮತ್ತು ಪೀಟರ್‌ಮುಂಡಿಯವರ ಕಥನಗಳು, ಈ ದಿಶೆಯಲ್ಲಿ ಉಪಯುಕ್ತ ಗ್ರಂಥಗಳು, ಪೇಶ್ವಾದಪ್ತರದ ಕಾಗದಪತ್ರಗಳ ಅಧ್ಯಯನ ಪ್ರಸ್ತುತ ವಿಷಯದ ಮೇಲೆ ವಿಶೇಷ ಬೆಳಕು ಬೀರುವುದರಲ್ಲಿ ಸಂಶಯವಿಲ್ಲ. ಪ್ರಸ್ತುತ ಲೇಖನವು ಶೃಂಗೇರಿ ಮಠದಲ್ಲಿ ದೊರೆತ ಕಡತಗಳಲ್ಲಿಯ ದಾಖಲೆಗಳ ಮೇಲೆ ಆಧಾರವಾಗಿರುವುದರಿಂದ ಆ ದಾಖಲೆಗಳ[4] ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

ಮೊದಲನೆಯ ಬಸವಪ್ಪನಾಯಕನ ಮೊಮ್ಮಗ ಮತ್ತು ವೀರಭದ್ರನ ಮಗನೇ ಇಮ್ಮಡಿ ಬಸವಪ್ಪನಾಯಕ (ಕ್ರಿ.ಶ. ೧೭೩೯–೧೭೫೪). ಶೃಂಗೇರಿ ಮಠದಲ್ಲಿ ಕ್ರಮವಾಗಿ ಪೀಠಾರೂಢರಾದ ದ್ವಿತೀಯ ಶ್ರೀ ಸಚ್ಚಿದಾನಂದ ಭಾರತೀ (ಕ್ರಿ.ಶ. ೧೭೦೫–೧೭೪೧) ಹಾಗೂ ಪ್ರಥಮ ಶ್ರೀ ಅಭಿನವ ಸಚ್ಚಿದಾನಂದ ಭಾರತೀಸ್ವಾಮಿಗಳು (ಕ್ರಿ.ಶ. ೧೭೪೧–೧೭೬೭) ಇಮ್ಮಡಿ ಬಸವಪ್ಪನಾಯಕರ ಸಮಕಾಲೀನರು. ಇಮ್ಮಡಿ ಬಸವಪ್ಪನಾಯಕರ ಕಾಲ ಶೃಂಗೇರಿ ಮತ್ತು ಕೆಳದಿಯ (ಬಿದನೂರು) ನಡುವಿನ ಸಂಪರ್ಕವನ್ನರಿಯಲು ಮಠದಲ್ಲಿಯ ಕಡತಗಳು ಬಹಳ ಉಪಯುಕ್ತವಾಗಿವೆ.

ದ್ವಿತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳಿಗೆ ದೇಹದ ಸೌಖ್ಯವಿಲ್ಲವೆಂದು ತಿಳಿದಾಗ, ನಾಯಕರು ಶ್ರೀಗಳಿಗೆ ಸಕ್ಕರೆ, ಕಲ್ಲುಸಕ್ಕರೆ, ದ್ರಾಕ್ಷಿ ಮುಂತಾದವುಗಳನ್ನು ಕಳುಹಿಸಿ, ಗುರುಗಳ ಆರೋಗ್ಯದ ಸಮಾಚಾರವನ್ನು ತಿಳಿಯಲು ಎಷ್ಟೊಂದು ಉತ್ಸುಕರಾಗಿದ್ದರೆಂಬುದು ಈ ಕೆಳಗಿನ ಬಿನ್ನವತ್ತಳೆಯಿಂದ ವಿಧಿತವಾಗುತ್ತದೆ.[5]

---

2 ಸಂಪುಟಗಳು : ೧೩, ೧೯. ೨೧, ೨೫, ೨೭, ೪೫, ೪೭, ೫೦, ೫೧, ೫೩, ೬೬, ೭೨, ೮೯, ೧೦೧, ೧೧೩, ೧೩೪, ೧೪೧, ೧೪೭, ೧೫೪, ೧೫೫, ೧೬೦, ೧೬೭, ೧೮೪, ೧೮೯, ೧೯೮.

ಶೃಂಗೇರಿ ಮಠದ ಕಡತಗಳ ವಿಷಯ ಸೂಚಿಯನ್ನು ೧೯೭೪ರಲ್ಲಿ ಪ್ರಸ್ತುತ ಲೇಖನದ ಲೇಖಕರು ಕರ್ನಾಟಕ ರಾಜ್ಯ ಪತ್ರಾಗಾರ ಶಾಖೆಗೆ ಸಾದರಪಡಿಸಿದ್ದಾರೆ. ನಿರೂಪ ಮತ್ತು ಬಿನ್ನವತ್ತಳೆಗಳನ್ನೊಳಗೊಂಡ ೨೦೫ ಕಡತ ಸಂಪುಟಗಳ ಸೂಕ್ಷ್ಮಚಿತ್ರೀಕರಣವೂ ಅದೇ ವರ್ಷದಲ್ಲಿ ಪೂರ್ತಿಯಾಗಿದೆ.

3 ಪ್ರಸ್ತುತ ಲೇಖನದ ಲೇಖಕರು ೧೯೮೮ರಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಶಾಖೆಗೆ ಶೃಂಗೇರಿ ಮಠದ ಕನ್ನಡದಲ್ಲಿಯ ದಾಖಲೆಗಳನ್ನು ಸಂಗ್ರಹಿಸಿ, ಪರಿಶೀಲಿಸಿ *Catalogue of the Kannada Records in the Archives of the Sringeri Matha, Vol. 1* ಎಂಬ ಹೊತ್ತಗೆಯನ್ನು ಸಾದರಪಡಿಸಿದ್ದಾರೆ.

4 ಕಡತ ಸಂಪುಟ ೨೦, ದಾಖಲೆ ೬೬, ೭೬, ೭೮ ; ಕ. ಸಂ. ೫೧, ದಾ. ೨೧, ೪೨, ೪೩ ; ಕೆಲವು ದಾಖಲೆಗಳು ಪುನರಾವರ್ತನೆಗೊಂಡಿದ್ದರಿಂದ ಒಟ್ಟು ದಾಖಲೆಗಳ ಸಂಖ್ಯೆ ೪.

5 ಕ. ಸಂ. ೨೦, ದಾ. ೬೬ ಮತ್ತು ಕ. ಸಂ. ೫೧, ದಾ. ೪೨ ; ರೌದ್ರಿ ಸಂವತ್ಸರದ ಈ ಬಿನ್ನವತ್ತಳೆಯು ಶ. ವ. ೧೬೬೨ (ಕ್ರಿ. ಶ. ೧೭೪೦)ಕ್ಕೆ ಸೇರಿದ್ದೆಂಬುದು ಇವೇ ಸಂಪುಟಗಳಲ್ಲಿಯ ಇನ್ನುಳಿದ ದಾಖಲೆಗಳಿಂದ ತಿಳಿದುಬರುತ್ತದೆ.

: ಅರಮನೆಯಿಂದ ಬಸವಪ್ಪನಾಯಕರ್ಯೆಯನವರು ಬರದ ಕಾಗದ ಬಿಂನವತ್ತಳೆ ।
೦ ಪ್ರತಿ ।
೦ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯರ್ಯವರ್ಯ ಪದವಾಕ್ಯಪ್ರಮಾಣ ಪಾರಾ ।
೦ ವಾರ ಪಾರಿಣ ಯಮನಿಯಮಾದ್ಯಷ್ಟಾಂಗ ಯೊಗ ನಿರುತರಾದ ಶೃಂಗೆರಿ ಶ್ರೀಸಚಿದಾ
೦ ನಂದ ಭಾರತಿ ಸ್ವಾಮಿಗಳವರ್ರಿಗೆ । ಕೆಳದಿ ಬಸವಪ್ಪನಾಯಕರೂ ಮಾಡುವ ಬಿಂನಹಾ ।
೦ ನಿಂಮ ಶರಿರಕ್ಕೆ ಸ್ವಲ್ಪ ಆಲಸ್ಯವಾಗಿ ಅದೆಯಂತ ಕೆಳಿದೆಉ । ಸಾಂಪ್ರತ ಸಖರೆ ।
೦ ಕಲುಸಖರೆ ದ್ರಾಕ್ಷೆ ಹಂಣು ಮುಂತ್ತಾದನು ಕಟ್ಟಿಸಿ ಆ ವಿವರಕ್ಕೆ ಉಳುವರಿ ಬರಸಿ ।
೦ ಕಳುಹಿಸಿ ಅದೆ ತೆಗೆದುಕೊಂಡು ದೆಹಸ್ತಿ ಹೆಗೆ ಅದೆ ಯಂಬುದಕೆ ಬರಸಿ ಕಳುಹಿಸು ।
೦ ವ ಹಾಗೆ । ಮಾಡಿಸುವುದು । ಮಹಾನುಭಾವರು ತಪೋನಿಷ್ಠರಾಗಿಹಲ್ಲಿ ವಿಶೆಷ ಬರಸಿ ಕಳು ।
೦ ಹಿಸುವಂಥಾದ್ದೆದೆಯಾಗಿ ಯಂದು ನಾಗರದಲು । ಬಿಂನಹಾ ಯಂದು ಬರದ ಬಿಂನ ।
೦ ತ್ತಳೆ ೧
೦ ರಉದ್ರಿ ಸಂವತ್ಸರದ ಮಾಘ ಬ ೧೧ಲ್ಲು ಬರದಲ್ಲಿ ಆರ್ರಿಕೆಯಾಗಿ ಬೊಕಸ

ಚಾತುರ್ವರ್ಾಸ್ಸದ ಸಂಬಂಧ ಶ್ರೀ ಸಚ್ಚಿದಾನಂದ ಭಾರತಿಗಳಿಗೆ ಸೂರಾಪಂಡಿತನ ಮುಖಾಂತರ ಬಸವಪ್ಪ ನಾಯಕರು ಉಡುಗೊರೆ ಕಳುಹಿಸಿದ ವೃತ್ತಾಂತವು ಇನ್ನೊಂದು ಬಿನ್ನವತ್ತಳೆಯಿಂದ ತಿಳಿದುಬರುತ್ತದೆ, ಬಿನ್ನವತ್ತಳೆಯ ಪಾಠವು ಇಂತಿದೆ :

: ಅರಮನೆಯಿಂದ । ಉಡುಗೊರೆ ಕಳುಹಿದಕ್ಕೆ ಹಾಬ್ಬಯ ಪಂಡಿತರ ಮಗನು ತಂದ ಕಾಗದ ಬಿಂನವತ್ತಳೆ।
೦ ಪ್ರತಿ ।
೦ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರಿಣ ।
೦ ಯಮನಿಯಮಾದ್ಯಷ್ಟಾಂಗ ಯೊಗನಿರುತರಾದ । ಶ್ರಿಂಗೆರಿ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿ ।
೦ ಗಳವರಿಗೆ । ಕೆಳದಿ ಬಸವಪ್ಪನಾಯಕರೂ ಮಾಡುವ ಬಿಂನಹಾ ಸಾಂಪ್ರತ್ತ । ಚಾತುರ್ವರ್ಾಸಿಯ ।
೦ ಸಂಬಂಧ । ಉಡುಗೊರೆಯನು ಕಟ್ಟಿಸಿ । ಸೂರಾಪಂಡಿತನ ಸಂಗಡ ಕಳುಹಿಸಿದೆವೆ । ತ್ತೆಗೆದುಕೊಂಬ ।
೦ ಹಾಗೆ ಮಾಡುವುದು । ನಿಉ ಮಹಾನುಭಾವರು ತಪೊನಿಷ್ಠರಾಗಿಹಲ್ಲಿ । ೦ । ಮುಖಾಂತ್ರ ವಿಶೆ ।
೦ ಷ ಬರಸುವಂಥಾದೆನದೆಯಾಗಿ । ಯಂದು । ನಾಗರದಲ್ಲು । ಬಿಂನಹವೆಂದು । ಬರದ ಬಿಂನ್ನವತ್ತಳೆ ।
೦ ಕಾಗದ ೧
: ಯಿದೆ ರಿತ್ತಿ ಉಡುಗೊರೆ ಕಳುಹಿದೆ ಯಂದು । ಬೆರೆ ಬರದ ಕಾಗದ ಬಿಂನವತ್ತಳೆ ೧ ಮದುವೆ ಸಂಬಂಧ
೦ ಉಭಯ। ಕಾಗದ ೨ ರಉದ್ರಿ ಸಂ । ಕಾರ್ತ್ತಿಕ। ಶು ೧೫ಲು । ಸೂರಾಪಂಡಿತ ತಂದಲ್ಲಿ। ಬೊಕಸ ।[6]

ಶ್ರೀ ಸಚ್ಚಿದಾನಂದಭಾರತಿಗಳು ಬಸವಪ್ಪನಾಯಕರಿಗೆ ಬರೆದ ಆಶೀರ್ವಾದ ಪತ್ರಿಕೆಯ ಪ್ರತಿಯು ಕಡತ ಗಳಲ್ಲಿ ದೊರೆತಿದೆ.[7] ಪಾಠ ಇಂತಿದೆ :

---

6 ಕ. ಸಂ. ೫೧, ದಾ. ೨೧ ; ರೌದ್ರಿ ಸಂವತ್ಸರದ ಈ ಬಿನ್ನವತ್ತಳೆಯೂ ಕ್ರಿ.ಶ. ೧೭೪೦ರದ್ದು.

7 ಕ. ಸಂ. ೨೨. ದಾ. ೭೬ ಮತ್ತು ಕ. ಸಂ. ೫೧. ದಾ. ೪೩

ಃ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿಂಗಳವರಿಗೆ । ಶರಿರಕೆ ।
೦ ಶ್ರಮಂವಾದಿರಿಂದ । ದುಂರ್ಮತಿ ಸಂವತ್ಸರದ ಜೆಷ್ಟ ಬ ೨ ಯಂ।
೦ ಶುಕ್ರವಾರ । ಮಂಊರು ತಾಸಿನಾಗ । ಅವಧಾನದ ತ್ರಿರುಂಮಂಲಭಟ್ಟ
೦ ರ ಮಂಗ । ತಿಪ್ಪಾಭಟ್ಟರಿಗೆ । ಆಶ್ರಮಂವ ಕೊಟ್ಟು । ಅಭಿನವ
೦ ಸಚ್ಚಿದಾನಂದ ಭಾರತಿಗಳೆಂಬ ನಾಮಾಂಕಿತವ ಮಾಡಿದರುಂ ।
ಃ ಯಿಊ ಬಗ್ಗೆ ಬಿದನೂರಿಗೆ । ಬರಸಿಕಳುಂಹಿಸ್ತ ಆಶೀರ್ವಾದ ಪ್ರತಿ ।
೦ ಶ್ರೀಮಂತ್ಪರಮಹಂಸ ಪರಿವ್ರಾಜಕಾಚಾರ್ಯ್ಯವರ್ಯ್ಯ ಪದವಾಕ್ಯ ।
೦ ಪ್ರಮಾಣ ಪಾರಾವಾರ ಪಾರಿಣ ಯಂಮನಿಯಂಮಾದ್ಯಷ್ಟಾಂಗ ಯೊ
೦ ಗ ನಿರತರಾದ । ಶೃಂಗೆರಿ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿಂಗಳುಂ ।
ಃ ಕೆಳದಿ ಬಸಪ್ಪನಾಯಂಕರಿಗೆ ಶ್ರೀ ನಾರಾಯಂಣ ಸ್ಮರಣೆ ಪೂರ್ವಕವಾಗಿ ।
ಃ ಮಾಡುವ ಆಶೀರ್ವಾದ । ನಾಉ ನಿಂಮ ವಿಚಾರದಿಂದ ಜಪದೆವ ಪೂ
೦ ಜಾ ಸಮಂಯದಲ್ಲೂ ನಿಂಮ ಅಭ್ಯುದಯಂವನ್ನು। ಆಕಾಂಕ್ಷಿಸಿಕೊಂ
೦ ಡು ವೆದಾಂತ ವ್ಯಾಖ್ಯಾನವ ಮಾಡಿಕೊಂಡೈಧೆವೆ । ಮಿಂತ್ತಲಾಗಿ ಶರಿರ
೦ ಸ್ಥಿತಿ ಸ್ವಸ್ಥವಿಲ್ಲದೆ ಶ್ರಮವಾಗಿ ಯಿರುಂತ್ತಿದಲ್ಲಿ ದೆಹಧರ್ಮವಿಷಯಂವಾ
೦ ದರಿಂದ ಶಿಷ್ಯ ಸಂಪಾದನವ ಮಾಡಿರಬೆಕೆಂದುಂ ಅಂತಃಕರಣಕೆ ।
೦ ಕಂಡುಂ । ದುಂರ್ಮತಿ ಸಂವತ್ಸರದ ಜೆಷ್ಟ ಬ ೨ ಯುಂ ಶುಕ್ರವಾರ ದಿವಸ ಅ
೦ ವಧಾನದ ತಿರುಂಮಲಭಟ್ಟರ ಮಂಗ ತಿಪ್ಪಾಭಟ್ಟರಿಗೆ ಆಶ್ರಮಂವ
೦ ಕೊಟ್ಟು ಅಭಿನವಸಚ್ಚಿದಾನಂದ ಭಾರತಿಗಳೆಂಬ ನಾಮಾಂಕಿ
೦ ತಮಂನುಂ ಮಾಡಿದೆವೆ । ಯಿಊ ಧರ್ಮ ಸಂಸ್ಥಾನಲು ಸಕಲ ದೆವ ಬ್ರಾಂ
೦ ಹ್ಮಣರಿಗುಂ ಉಪಯೊಗವಾಗಿ ನಡವಂಥಾದರಲ್ಲಿ ನಿಂಮ ಹಿರೆರಾ
೦ ರಭ್ಯವಾಗಿ ಪರಿರಕ್ಷಿಸಿ ಬಾಹಂಥಾದರಲ್ಲಿ ನಾಉ ವಿಶೆಷವಾಗಿ ।
೦ ಬರಸುಂವಂಥಾದೆನದೆ । ಶ್ರುತವಾಗಿರಬೆಕಾಗಿ । ಆಶಿರ್ವದಿಸಿ ।
೦ ಕಳುಂಹಿಸ್ತೆಉ ।

ಶ್ರೀ ಸಚ್ಚಿದಾನಂದ ಭಾರತಿಗಳುಂ ಜಪ ದೇವರ ಪೂಜೆ ಮಾಡಂತ್ತ ಬಸವಪ್ಪನಾಯಂಕರ ಅಭ್ಯುದಯುವನ್ನು ಆಕಾಂಕ್ಷಿಸಿಕೊಂಡಿರುಂವ ಸಂಗತಿ ಮತ್ತು ಜಗದ್ಗುರುಂಗಳಿಗೆ ಆರೋಗ್ಯ ಸರಿ ಇಲ್ಲದ್ದರಿಂದ ಶಿಷ್ಯ ಸಂಪಾದನಕ್ಕೋಸ್ಕರ ತಿರುಂಮಲಭಟ್ಟರ ಮಂಗ ತಿಪ್ಪಾಭಟ್ಟರಿಗೆ ಸನ್ಯಾಸಾಶ್ರಮ ಕೊಟ್ಟು ಅಭಿನವ ಸಚ್ಚಿದಾನಂದ ಭಾರತಿಗಳೆಂದು ಹೆಸರಿಟ್ಟ ವಿಷಯಂ, ಮುಂತಾಗಿ, ದುಂರ್ಮತಿ ಸಂವತ್ಸರ (ಕಿ.ಶ. ೧೭೪೧)ದ ಮೇಲಿನ ಆಶೀರ್ವಾದ ಪತ್ರಿಕೆಯಿಂದ ಸ್ಪಷ್ಟವಾಗುತ್ತದೆ.

ಶ್ರೀ ಸಚ್ಚಿದಾನಂದ ಭಾರತಿಗಳುಂ ಶಿಷ್ಯಸಂಪಾದನ ಮಾಡಿದ ಸಂಗತಿಯುಂ, ಶೃಂಗೇರಿ ವಿದ್ಯಾರಣ್ಯಪುರದ ವಿದ್ವನ್ಮಹಾಜನಂಗಳು ಇಮ್ಮಡಿ ಬಸವಪ್ಪನಾಯಂಕರಿಗೆ ಬರಸಿ ಕಳುಹಿದ ಆಶೀರ್ವಾದ ಪತ್ರಿಕೆಯಿಂದ ಖಚಿತವಾಗುತ್ತದೆ.[8] ಶಿಷ್ಯ ಸಂಪಾದನ ಮಾಡಿ, ದುಂರ್ಮತಿ

8 ಕ. ಸಂ. ೨೦, ದಾ. ೭೮

ಸಂವತ್ಸರದ ಜೇಷ್ಠ ಬ. ೧೦ ಗುರುವಾರ ಒಂಬತ್ತು ತಾಸಿಗೆ ಶ್ರೀ ಸಚ್ಚಿದಾನಂದ ಭಾರತಿಗಳು ಮುಕ್ತರಾದರೆಂದು ಮೇಲಿನ ಆಶೀರ್ವಾದ ಪತ್ರಿಕೆಯಲ್ಲಿ ನಮೂದಿಸಲಾಗಿದೆ.

ಮೇಲ್ಕಾಣಿಸಿದ ದಾಖಲೆಗಳ ಕೂಲಂಕಷ ಅಧ್ಯಯನ ಮಾಡಲಾಗಿ, ಇಮ್ಮಡಿ ಬಸವಪ್ಪನಾಯಕರು ಶೃಂಗೇರಿ ಜಗದ್ಗುರುಗಳು ಮತ್ತು ಅವರ ಮಠಕ್ಕೆ ಸಕಲ ಮರ್ಯಾದೆಗಳನ್ನು ಸಲ್ಲಿಸಿ ಅತ್ಯಂತ ಭಕ್ತಿನಿಷ್ಠೆಯನ್ನು ತೋರಿದ್ದರೆಂದು ತಿಳಿದುಬರುತ್ತದೆ. ಈ ದಿಶೆಯಲ್ಲಿ ಇಮ್ಮಡಿ ಬಸವಪ್ಪನಾಯಕರು ತಮ್ಮ ಪೂರ್ವಿಕರಾದ ಸದಾಶಿವನಾಯಕ, ಹಿರಿಯ ವೆಂಕಟಪ್ಪನಾಯಕ, ವೀರಭದ್ರನಾಯಕ. ಶಿವಪ್ಪನಾಯಕ, ಇಮ್ಮಡಿ ಭದ್ರಪ್ಪನಾಯಕ, ಮೊದಲನೆಯ ಸೋಮಶೇಖರ ನಾಯಕ ಮತ್ತು ಆತನ ಪತ್ನಿ ಚೆನ್ನಮ್ಮಾಜಿ, ಮೊದಲನೆಯ ಬಸವಪ್ಪನಾಯಕ ಮತ್ತು ಇಮ್ಮಡಿ ಸೋಮಶೇಖರ ನಾಯಕರು ಅನುಸರಿಸಿದ ಮಾರ್ಗದಲ್ಲೇ ಮುಂದೆ ಸಾಗಿದರೆಂದು ಖಚಿತವಾಗಿ ಹೇಳಬಹುದು. ಅಷ್ಟೇ ಅಲ್ಲದೆ, ಮುಂದಿನವರಾದ ವೀರಮ್ಮಾಜಿ, ಚೆನ್ನಬಸವಪ್ಪನಾಯಕ ಮತ್ತು ಮುಮ್ಮಡಿ ಸೋಮಶೇಖರ ನಾಯಕ, ಇವರೂ ಕೂಡ ಶೃಂಗೇರಿ ಮಠವನ್ನು ಗೌರವಿಸಿದರು.[9] ವಿಜಯನಗರ ಸಾಮ್ರಾಟರ ನಂತರ, ಶೃಂಗೇರಿ ಮಠವನ್ನು ರಕ್ಷಿಸುವ ನೈತಿಕ ಹೊಣೆ ಕೆಳದಿನೃಪರದ್ದಾಗಿತ್ತೆಂಬುದನ್ನು ಅಳಿದುಳಿದ ದಾಖಲೆಗಳು ಸ್ಪಷ್ಟೀಕರಿಸುತ್ತವೆ.[10] ಶೃಂಗೇರಿ ಮಠದಲ್ಲಿಯ ಆಗುಹೋಗುಗಳ ಬಗ್ಗೆ ಕೆಳದಿ ನೃಪರು ವಿಶೇಷ ಆಸಕ್ತಿ ಹೊಂದಿದವರಾಗಿದ್ದರು.

---

9 A. K. Shastry : *A History of Sringeri* Dharwad, 1982, pp. 27–34

10 ಎ. ಕೆ. ಶಾಸ್ತ್ರಿ : 'ಶೃಂಗೇರಿ ಧರ್ಮಸಂಸ್ಥಾನ, ಶೃಂಗೇರಿ ಮಠ, ೧೯೮೩, ಪು. ೩೬-೪೭

ಡಾ॥ ರಾಧಾ ಕೃಷ್ಣಮೂರ್ತಿ

ಶಿವತತ್ವರತ್ನಾಕರದಲ್ಲಿ ಚೆನ್ನಮ್ಮಳ ವರ್ಣನೆ

ಕೆಳದಿ ಬಸವರಾಜ (ಕ್ರಿ. ಶ. ೧೬೯೪–೧೭೧೪) ನಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟಿರುವ ಶಿವತತ್ವರತ್ನಾಕರ (ಶಿ. ತ. ರ.)ಒಂದು ಬೃಹತ್ ವಿಶ್ವಜ್ಞಾನಕೋಶವಾಗಿದೆ. ಕೆಳದಿಯ ಬಸವರಾಜ ಕರ್ನಾಟಕದ ವಿದ್ವಾಂಸ–ರಾಜನೆಂದು ಗುರುತಿಸಲ್ಪಟ್ಟಿದ್ದಾನೆ. ಅಪೂರ್ವವಾದ ವಿಶ್ವಜ್ಞಾನಕೋಶ ಶಿ ತ.ರ. ಅಲ್ಲದೆ ಸಂಸ್ಕೃತದ 'ಶುಭಾಷಿತ ಸುರದ್ರುಮ' ಹಾಗೂ ಭಾಗಶಃ ಕನ್ನಡ ಮತ್ತು ಭಾಗಶಃ ಸಂಸ್ಕೃತದಲ್ಲಿ ಇರುವ 'ಸೂಕ್ತಿಸುಧಾರಕ' ಎಂಬ ಎರಡು ಗ್ರಂಥಗಳ ಕರ್ತೃತ್ವವೂ ಇವರಿಗಿದೆ. ಶ್ರೀ ಸಿದ್ಧಾಂತ ಶಿಖಾಮಣಿಗೆ ಟೀಕೆಯನ್ನು ಬರೆದಿದ್ದಾರೆಂಬ ಪ್ರತೀತಿಯೂ ಇದೆ. ಅವನು ಆಶ್ರಯದಾತನಾಗಿ ವಿದ್ವಾಂಸರನ್ನು ಚೆನ್ನಾಗಿ ಗೌರವಿಸುತ್ತಿದ್ದುದರಿಂದ ಅವನಿಗೆ 'ಸೂರನಿಕರ ಕಲ್ಪದ್ರುಮ' (ವಿದ್ವಾಂಸರ, ಕಲ್ಪವೃಕ್ಷ) ಎಂದು ಬಿರುದಿತ್ತು.

ಅದ್ಭುತವಾದ ಶಿ ತ.ರ. ೧೩೦೦೦ಕ್ಕೂ ಹೆಚ್ಚಾಗಿ ಶ್ಲೋಕಗಳನ್ನು ಹೊಂದಿದೆ. ಮತ್ತು ದೈವನಿಷ್ಠೆ, ತತ್ವಜ್ಞಾನ, ಚರಿತ್ರೆ, ಸಾಹಿತ್ಯಸಂಪತ್ತು, ಕಲಾಕೌಶಲ್ಯ, ವಿಜ್ಞಾನ, ಯುದ್ಧಸ್ಥಿತಿ ಮುಂತಾದ ಪ್ರಾಚ್ಯ ಸಂಸ್ಕೃತಿಯ ಎಲ್ಲಾ ಭಾಗದ ಅನೇಕ ಬಗೆಯ ವಿಷಯಗಳನ್ನು ಪ್ರತಿಪಾದಿಸುತ್ತದೆ. ಇದು ಒಂಭತ್ತು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ. ಅವುಗಳನ್ನು 'ಕಲ್ಲೋಲ' ಎಂದು ಕರೆಯುತ್ತಾರೆ. ಕಲ್ಲೋಲಗಳಲ್ಲಿ, ತರಂಗಗಳೆಂಬ ಅನೇಕ ಅಧ್ಯಾಯಗಳಿರುತ್ತವೆ. ಈ ಸಂಪೂರ್ಣ ಗ್ರಂಥದಲ್ಲಿ ೧೦೮ ತರಂಗಗಳಿವೆ.

ಶಿ.ತ.ರ.ದ ಗ್ರಂಥಕರ್ತನು ರಾಜವಂಶದ ಚರಿತ್ರೆಯನ್ನು ಮುಖ್ಯ ಕಥೆಯನ್ನಾಗಿ ಆಯ್ದುಕೊಂಡಿದ್ದಾನೆ. ಇದರ ಸುತ್ತಲೂ ವಿವಿಧ ಪ್ರಕರಣಗಳಿಗೆ ಪ್ರಾಮುಖ್ಯ ಕೊಟ್ಟು, ಒಟ್ಟುಗೂಡಿಸಿ ಈ ಮಹಾಕಥೆಯನ್ನು ಹೆಣೆದಿದ್ದಾನೆ ಮತ್ತು ಶೃಂಗರಿಸಿದ್ದಾನೆ. ಕೆಳದಿಯ ಪ್ರಭುಗಳ ರಾಜಕೀಯ ಇತಿಹಾಸದ ಅಮೂಲ್ಯ ವೃತ್ತಾಂತಗಳಲ್ಲದೆ, ಸಂಸ್ಥಾಪಕ ಚೌಡಪ್ಪನಿಂದ ಶಿ.ತ.ರ.ದ ಗ್ರಂಥಕರ್ತರ ವರೆಗೆ, ವಿಜಯನಗರ ಸಾಮ್ರಾಜ್ಯದ ಸ್ಥಾಪನೆ, ಸುಪ್ರಸಿದ್ಧ ವಿದ್ಯಾರಣ್ಯರ ಜೀವನಕ್ಕೆ ಸಂಬಂಧಪಟ್ಟ ಕೆಲವು ಘಟನೆಗಳು, ಶ್ರೇಷ್ಠ ವೀರಶೈವ ಸಂತರ ಹಾಗೂ ಧರ್ಮ ಪ್ರವರ್ತಕ ಬಸವೇಶ್ವರರ ಜನನ ಮತ್ತು ಜೀವನ, ವೀರಶೈವ ತತ್ವಜ್ಞಾನದ ಸಿದ್ಧಾಂತಗಳು ಮುಂತಾದ ಇತಿಹಾಸಕ್ಕೆ ಸಂಬಂಧಪಟ್ಟ ಹಾಗೂ ಉಪಯೋಗವಾಗುವಂತಹ ಕೆಲವು ವಿಚಾರಗಳು ಈ ಗ್ರಂಥದಲ್ಲಿವೆ. ಶಿ.ತ.ರ.ದಲ್ಲಿ ಹೇಳಲಾಗಿರುವ ಹೆಚ್ಚು ಪ್ರಕರಣಗಳು ಒಂದಲ್ಲ ಒಂದು ರೀತಿ ಕೆಳದಿ ಪ್ರಭುಗಳ ಮಹತ್ಕಾರ್ಯವನ್ನು ತಿಳಿಸುತ್ತದೆ. ಆದ್ದರಿಂದ ಇದು ಕೆಳದಿ ಪ್ರಭುಗಳ ಕಥೆ, ಜ್ಞಾನದ ವಿವಿಧ ಶಾಖೆಗಳೊಂದಿಗೆ ಹಾಸು ಹೊಕ್ಕಾಗಿದೆ. ಆದ್ದರಿಂದ ಕೆಳದಿ ಪ್ರಭುಗಳ ವಿಚಾರಗಳನ್ನು ಎಚ್ಚರ ವಹಿಸಿ ಒಂಭತ್ತು ಕಲ್ಲೋಲಗಳಿಂದ ತಿಳಿಯಬೇಕಾಗುತ್ತದೆ. ಆದರೆ ಈ ರೀತಿ ಪ್ರಯಾಸಕರವಾದ ಕಾರ್ಯ ಕೆಳದಿ ಇತಿಹಾಸದ ವಿಚಾರವಾಗಿ ವಿಸ್ತೃತವಾದ ವಿಷಯಗಳನ್ನು ತಿಳಿಸುತ್ತದೆ.

ಒಂದನೇ ಸೋಮಶೇಖರ ನಾಯಕನ ಪತ್ನಿ ಚೆನ್ನಮ್ಮ ದಕ್ಷಿಣ ಭಾರತದ ಇತಿಹಾಸದಲ್ಲೇ ಚಿತ್ತಾಕರ್ಷಕ ವ್ಯಕ್ತಿತ್ವವನ್ನು ಹೊಂದಿದ ಸನ್ಮಾನ್ಯಳಾದ ಮಹಿಳೆ. ಒಂದನೇ ಬಸವರಾಜನ ಸಾಕುತಾಯಿ. ಇಂತಹ

ಧೈರ್ಯ ಸಾಹಸದ ರಾಣಿ ಚೆನ್ನಮ್ಮಳ ಐತಿಹಾಸಿಕ ವೃತ್ತಾಂತಗಳನ್ನು ಪರಿಚಯಿಸುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ. ಶಿ.ತ.ರ. ಗ್ರಂಥ ಕರ್ತರನು ಒಲೀಮೆಯಿಂದ ಚೆನ್ನಮ್ಮಳ ವ್ಯಕ್ತಿತ್ವವನ್ನು ಬೆಳೆಸಿರುವುದರಿಂದ, ಕೆಳದಿಯ ಇತಿಹಾಸ, ಅದರಲ್ಲೂ ಚೆನ್ನಮ್ಮಳಿಗೆ ಸಂಬಂಧಪಟ್ಟ ಇತಿಹಾಸ ಪ್ರಾಮಾಣಿಕ ಹಾಗೂ ಬಹುಮೂಲ್ಯವಾಗಿದೆ.

ಬಸವರಾಜನು ತನ್ನ ಶಿ.ತ.ರ.ದ ಎಂಟನೇ ಕಲ್ಲೋಲದ ಎರಡು ಅಧ್ಯಾಯಗಳಲ್ಲಿ ಚೆನ್ನಮ್ಮ ಹಾಗೂ ಆಕೆಯ ಪತಿ ಸೋಮಶೇಖರ ನಾಯಕ ಇವರೀರ್ವರ ಐತಿಹಾಸಿಕ ವಿಚಾರಗಳನ್ನು ತಿಳಿಸಲು ತತ್ಪರನಾಗಿದ್ದಾನೆ: ತನ್ನ ಅಣ್ಣ ಭದ್ರಪ್ಪನ ನಂತರ ಸೋಮಶೇಖರ ನಾಯಕನು ಸಿಂಹಾಸನಾರೂಢನಾದಾಗ ಎಲ್ಲೆಲ್ಲೂ ಅನ್ಯಾಯ ತಾಂಡವವಾಡುತ್ತಿತ್ತು. ಸೋಮಶೇಖರನ ಆಳ್ವಿಕೆಯಲ್ಲಿ ನ್ಯಾಯ ಪುನಃ ನೆಲೆಯೂರಿತು. ಭದ್ರಪ್ಪ ತನ್ನ ತಮ್ಮನಿಗೆ ಬಿಲ್ಲುವಿದ್ಯೆಯಲ್ಲಿ ವಿಶೇಷ ತರಬೇತಿ ಕೊಟ್ಟಿದ್ದನು. ಮತ್ತು ಸ್ವಲ್ಪ ಸಮಯದಲ್ಲೇ ಸೋಮಶೇಖರನು '(ಇ)ಎಕಧನ್ವೀ' ಎಂಬ ಬಿರುದು ಪಡೆದನು: ಅವನು ಸರಹದ್ದಿನ ಪ್ರದೇಶದಲ್ಲಿರುವ ಪ್ರಮುಖ ಪಟ್ಟಣಗಳನ್ನು ಮತ್ತು ಉಳಿದ ಗೌಣ ರಾಜರುಗಳನ್ನು ಗೆದ್ದುಕೊಂಡನು. ನಿರಾಶ್ರಿತರಾಗಿದ್ದ ರಾಜರುಗಳಿಗೆ ಅವರವರ ಕ್ಷೇತ್ರ(ರಾಜ್ಯ)ಗಳನ್ನು ದೊರಕಿಸಿಕೊಟ್ಟನು. ಪಟ್ಟಣದ ಹಿಂಭಾಗದ ತುದಿಯಲ್ಲಿ ಒಂದು ಸುಂದರವಾದ ಮಠವನ್ನು ಕಟ್ಟಿಸಿದನು. ಪಟ್ಟಣದ ಹತ್ತಿರದಲ್ಲೇ ವಿರಕ್ತರುಗಳಿಗಾಗಿ ಅವರಿಂದ ಆಶೀರ್ವಾದ ಪಡೆಯಲು ಮತ್ತೊಂದು ಮಠವನ್ನು ಕಟ್ಟಿಸಿಕೊಟ್ಟನು. ಸಿಹಿ ನೀರಿನ ಒಂದು ದೊಡ್ಡಕೆರೆಯನ್ನು ವೀರಶೈವರ ಉಪಯೋಗಕ್ಕಾಗಿ ತೋಡಿಸಿದನು. ಆ ಸರೋವರದ ಸುತ್ತಲೂ ಸುಂದರವಾದ ಮರಗಳನ್ನು ನೆಡೆಸಿದನು.

ತನಗೆ ಅನುರೂಪಳಾದ, ಯೋಗ್ಯಳಾದ, ಉದಾತ್ತ ಗುಣಗಳಿಂದ ಕೂಡಿದ ಕನ್ಯೆ ಸಿಗದಿದ್ದ ಕಾರಣ ಸೋಮಶೇಖರನಾಯಕನು ತನ್ನ ವಿವಾಹವನ್ನು ಮುಂದೂಡುತ್ತಿದ್ದನು. ಕೊನೆಗೆ ಅವರ ವಿವಾಹ ಚೆನ್ನಮ್ಮಳೊಂದಿಗೆ ನಡೆಯಿತು.

ಶಿ.ತ.ರ.ದಲ್ಲಿ ಚೆನ್ನಮ್ಮಾಜಿಯನ್ನು ಸೋಮಶೇಖರನ ಸುಂದರ–ಸದ್ಗುಣಿ ವಧು ಎಂದು ಬಣ್ಣಿಸಲಾಗಿದೆ. ಅವಳನ್ನು ಮೂಕಾಂಬಿಕೆ ದೇವಿಯ ಅವತಾರವೆಂದು ಪ್ರಶಂಸಿಸಲಾಗಿದೆ. ಅಭ್ಯುದಯದ ಎರಡನೇ ದೇವಿಯೆಂದು ಆಕೆಯನ್ನು ಹೊಗಳುತ್ತಿದ್ದರು ಮತ್ತು ಪ್ರತಿಯೊಬ್ಬರೂ ಆಕೆಯನ್ನು ಪ್ರೀತಿಸುತ್ತಿದ್ದರು. ಕೆಲವು ಕಾಲ ಸೋಮಶೇಖರ ಆಕೆಯೊಂದಿಗೆ ಸಂತೋಷದಿಂದ ಇದ್ದನು.

ಸೋಮಶೇಖರನಿಗೆ ಚೆನ್ನಮ್ಮಳಲ್ಲಿ ಆಕೆಯ ಸಾಮರ್ಥ್ಯ ಹಾಗೂ ಬುದ್ಧಿವಂತಿಕೆಯ ಮೇಲೆ ಅಪಾರ ನಂಬಿಕೆ ಇದ್ದುದರಿಂದ, ಕಲಿಯುಗದ ದೈತ್ಯರಂತಿದ್ದ ಮ್ಲೇಚ್ಛರುಗಳನ್ನು ಸೋಲಿಸಿ, ಮೂಕಾಂಬಿಕಾದೇವಿ ಜನರನ್ನು ರಕ್ಷಿಸುವಂತೆ ನೀನೂ ರಕ್ಷಿಸು ಎಂದು ಸೋಮಶೇಖರನು ಚೆನ್ನಮ್ಮಳಿಗೆ ತಿಳಿಸಿದನು. ಈ ಆಕ್ರಮಣಕಾರಿ ಮೊಘಲರಿಂದ ಎಷ್ಟೋ ಸಭ್ಯ ಜನಗಳು ಚಿತ್ರಹಿಂಸೆಯನ್ನು ಅನುಭವಿಸುತ್ತಿದ್ದಾರೆ ಮತ್ತು ಈ ಜನಗಳ ಮನೆಗಳನ್ನು ಆಕ್ರಮಿಸಿಬಿಟ್ಟಿದ್ದಾರೆ. ಆದ್ದರಿಂದ ಈ ನಮ್ಮ ಸಭ್ಯ ಜನಗಳು ನೆಮ್ಮದಿಯಿಂದ ವಾಸಿಸುವಂತಾಗಬೇಕೆಂದು ತಿಳಿಸಿದನು. ನಮ್ಮ ಸಂಸ್ಥಾನದಲ್ಲಿ ನೆಲೆಸಿರುವ ಶತ್ರುಗಳನ್ನು ಸೋಲಿಸಬೇಕೆಂದು ಮತ್ತೆ ತಿಳಿಸಿದನು. ಧರ್ಮನಿಷ್ಠ ಗ್ರಂಥಗಳಲ್ಲಿ ತಿಳಿಸಿರುವಂತೆ ಶಿವಪೂಜೆ ಮಾಡುವ ವಿಧಾನವನ್ನು ಬೋಧಿಸಿದನು. ನಂತರ ಶಿ.ತ.ರ.ದ ಗ್ರಂಥಕರ್ತೃ ಬಸವರಾಜನ ಪಟ್ಟಾಭಿಷೇಕವನ್ನು ನೆರವೇರಿಸಿದನು. ಚೆನ್ನಮ್ಮಾಜಿಯ ಪಾಲನೆಯಲ್ಲಿ ಬಸವರಾಜನನ್ನು ಬಿಟ್ಟಾಗ ಅವನು ಇನ್ನೂ ಚಿಕ್ಕವನಾಗಿದ್ದನು. ಅವನು ವಯಸ್ಕನಾಗುವವರೆಗೂ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ನೋಡಿಕೊಳ್ಳಲು ಚೆನ್ನಮ್ಮಳಿಗೇ ಒಪ್ಪಿಸಿಕೊಟ್ಟಿದ್ದನು. ನಂತರ ಸೋಮಶೇಖರ ಸ್ವರ್ಗವಾಸಿಯಾದನು.

ಶತ್ರುಗಳೊಂದಿಗೆ ಸೋಮಶೇಖರನ ವ್ಯವಹಾರ ಮತ್ತು ಅಂತಿಮ ದಿನಗಳಲ್ಲಿ ಕೆಟ್ಟ ಸಹವಾಸದಲ್ಲಿ ಬಿದ್ದು ಹುಚ್ಚನಾಗಿದ್ದುದರ ಬಗ್ಗೆ ಶಿ.ತ.ರ. ಸಂಪೂರ್ಣವಾಗಿ ಮೌನವಾಗಿದೆ. ಅವನು ಆಡಳಿತ ವಹಿಸಿಕೊಂಡಾಗ ಅಲ್ಲಿ ಕುಂದಿದ ನೈತಿಕತೆಯ ಸ್ಥಿತಿಗಳನ್ನು ಮಾತ್ರ

ಶಿ.ತ.ರ. ಸೂಚಿಸಿದೆ. ಈತ ತನ್ನ ಪತ್ನಿಗೆ ಶೈವತತ್ವದಲ್ಲಿ ಆಸಕ್ತಿಯನ್ನು ಹುಟ್ಟಿಸಿದ್ದನು ಮತ್ತು ಶತ್ರುಗಳನ್ನು ನಾಶಪಡಿಸುವ ಅತಿ ಪ್ರಯಾಸವಾದ ಕಾರ್ಯವನ್ನು ವಹಿಸಿಕೊಟ್ಟಿದ್ದನು. ರಾಜ್ಯದಲ್ಲಿ ಹಾಗೂ ರಾಜ್ಯದ ಹೊರಗಿದ್ದ ರಾಜ ಪ್ರತಿರೋಧಿಗಳನ್ನು ನಿಗ್ರಹಿಸಿ ಉಳಿದ ತನ್ನ ಪತಿಯ ಅಪೂರ್ಣ ಕಾರ್ಯವನ್ನು ಚೆನ್ನಮ್ಮಳೇ ಪೂರ್ಣಗೊಳಿಸಿದಳೆಂದು ಸ್ಪಷ್ಟವಾಗಿದೆ.

ಚೆನ್ನಮ್ಮ, ಸೋಮಶೇಖರ ನಾಯಕನ ಪತ್ನಿ ತನ್ನ ಪತಿಯ ಉತ್ತರಾಧಿಕಾರಿಣಿ, ಅನೇಕ ವರ್ಷಗಳ ಕಾಲ ತನ್ನ ಪತಿಯೊಂದಿಗೆ ಜಂಟಿಯಾಗಿ ಆಡಳಿತ ನಡೆಸಿದ್ದಳು. ಶಿ.ತ.ರ.ದಲ್ಲಿ ಚೆನ್ನಮ್ಮಳ ಅಸಾಧಾರಣ ಜೀವನ ಪ್ರತಿಯೊಬ್ಬರನ್ನೂ ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ ಎಂದು ಬಸವರಾಜನೇ ತಿಳಿಸಿದ್ದಾನೆ. ಧೀರ ರಾಣಿಯು ನಾಲ್ಕು ಉಪಾಯಗಳಿಂದ, ಆರು ಗುಣಗಳಿಂದ, ಮೂರು ಶಕ್ತಿಗಳಿಂದ ಮತ್ತು ಸಪ್ತಾಂಗಗಳಿಂದ ಪರಿಪೂರ್ಣಳಾಗಿ ರಾಜ್ಯಭಾರವನ್ನು ಮಾಡುತ್ತಿದ್ದಳು. ನಿಯಮದಂತೆ ಶಿವಧರ್ಮವನ್ನು ಸಹ ಆಚರಿಸುತ್ತಿದ್ದಳು. ತನ್ನ ಪುತ್ರ ಬಸವರಾಜನನ್ನು ಬೆಳೆಸಲು ಮತ್ತು ವಿದ್ಯಾವಂತನನ್ನಾಗಿ ಮಾಡಲು ಬಹಳ ಶ್ರಮ ವಹಿಸುತ್ತಿದ್ದಳು. ತನ್ನ ಮಗನ ವಿವಾಹವನ್ನು ನಡೆಸಿದಳು.

ಸರಹದ್ದು ಕ್ಷೇತ್ರದಲ್ಲಿನ ಸಾಮಂತ ಮುಖ್ಯರು ದಂಗೆ ಎದ್ದು ಆಕ್ರಮಣ ಮಾಡಲಾರಂಭಿಸಿದಾಗ ಧೀರ ರಾಣಿ ತನ್ನ ಬಲವಾದ ಸೇನೆಯನ್ನು ಕಳುಹಿಸಿದಳು ಮತ್ತು ಅವರೆಲ್ಲರನ್ನೂ ಸೋಲಿಸಿದಳು. ಶತ್ರುಗಳಿಂದ ಆನೆಗಳನ್ನು, ಕುದುರೆಗಳನ್ನು ಹಾಗೂ ಬೇರೆ ಬೇರೆ ಸಂಪತ್ತನ್ನು ವಶಪಡಿಸಿಕೊಂಡಳು.

ಮುಂದೆ ಶಿ.ತ.ರ. ಚೆನ್ನಮ್ಮನ ಆಳ್ವಿಕೆಯ, ಹೆಚ್ಚು ನೆನಪಿನಲ್ಲಿ ಉಳಿಯುವಂತಹ ಘಟನೆಗಳನ್ನು ವರ್ಣಿಸುತ್ತದೆ. ಶಿವಾಜಿಯ ಮಗ ರಾಜಾರಾಮನಿಗೆ ರಕ್ಷಣೆ ನೀಡಿದ್ದಳು. ಔರಂಗಜೇಬನು ಸಾಮ್ರಾಟನಾದಾಗ ರಾಜಾರಾಮನು ಅನೇಕ ರಾಜರುಗಳನ್ನು ಸೋಲಿಸಿ ಛತ್ರಪತಿ ಎನಿಸಿಕೊಂಡಿದ್ದನು. ಆದರಿಂದ ರಾಜಾರಾಮನು ಔರಂಗಜೇಬನ ಶತ್ರುವಾಗಿದ್ದನು. ಮುಸಲ್ಮಾನರ ಮುಖ್ಯಸ್ಥ ರಾಜಾರಾಮನನ್ನು ಬೆನ್ನಟ್ಟಿ ಬಂದಾಗ ಎಲ್ಲೂ ಅವನಿಗೆ ಆಶ್ರಯ ದೊರೆಯಲಿಲ್ಲ. ಅಲ್ಲಿ ಇಲ್ಲಿ ತಿರುಗಾಡುತ್ತಾ ಕೊನೆಗೆ ಕೆಳದಿ ರಾಜ್ಯದಲ್ಲಿ ಆಶ್ರಯ ಪಡೆದನು. ಚೆನ್ನಮ್ಮ ತನ್ನ ಮಂತ್ರಿಮಂಡಲದ ಜೊತೆ ಗುಪ್ತಾಲೋಚನೆ ನಡೆಸಿ, ತನ್ನ ಪರಿವಾರದೊಂದಿಗೆ ಬಂದಿದ್ದ ರಾಜಾರಾಮನಿಗೆ ಆಶ್ರಯ ಕೊಟ್ಟಳು, ಅವನಿಗೆ ಮನ್ನಣೆ ಮತ್ತು ಗೌರವವನ್ನು ಕೊಟ್ಟು ಆದರಿಸಿದಳು. ಮೊಘಲ್ ಸೈನಿಕರಿಗೆ ಬಲವಾದ ಪೆಟ್ಟು ಕೊಟ್ಟು ಅವರ ಮೇಲೆ ವಿಜಯವನ್ನು ಸಾಧಿಸಿದಳು. ಈ ಅಸಾಧಾರಣ ಧೈರ್ಯ ಅವಳಿಗೆ ಕೀರ್ತಿಯನ್ನು ತಂದುಕೊಟ್ಟಿತು, ಮತ್ತು ಎಲ್ಲರೂ ಅವಳನ್ನು ಪ್ರಶಂಸಿಸಿದರು.

ಚೆನ್ನಮ್ಮಳ ಈ ಅದ್ಭುತ ಸಾಹಸದ ಕಾರ್ಯವನ್ನು ಕೇಳಿ ಮೊಘಲ್ ಸಾಮ್ರಾಟನು ಅವಳನ್ನು ಅತಿಶಯವಾಗಿ ಹೊಗಳಿ, ಕುದುರೆಗಳನ್ನು, ಒಡವೆ ವಸ್ತ್ರಗಳನ್ನು ಕಾಣಿಕೆಯಾಗಿ ಕಳುಹಿಸಿಕೊಟ್ಟನು. ಅವಳ ಆಳ್ವಿಕೆಯಲ್ಲಿ ಅವಳ ಸಂಸ್ಥಾನ ಶತ್ರುಗಳಿಂದ ಮುಕ್ತವಾಗಿತ್ತು. ಅವಳ ಅಪ್ರಧಾನ ಪಾಳೆಯಗಾರರ ಮುಖ್ಯಸ್ಥರು ಶತ್ರುತ್ವವನ್ನು ತೋರಿಸಿದಾಗ ಅವರೆಲ್ಲರನ್ನು ದುರ್ಬಲಗೊಳಿಸಿ ತನ್ನ ಅಧೀನರನ್ನಾಗಿ ಮಾಡಿಕೊಂಡಳು.

ಈ ಪ್ರಕಾರ, ಬಸವರಾಜ ಬಹಳ ಹೆಮ್ಮೆಯಿಂದ ತನ್ನ ಒಲವಿನ ತಾಯಿ ಮೊಘಲರನ್ನು ಸೋಲಿಸಿ ಮರಾಠರ ಪ್ರಭು ರಾಜಾರಾಮನಿಗೆ ಆಶ್ರಯ ಕೊಟ್ಟಿದ್ದನ್ನು ವಿವರಿಸಿದ್ದಾನೆ. ಚೆನ್ನಮ್ಮ ಧರ್ಮೋದ್ಧಾರಕಳೂ ಆಶ್ರಯದಾತಳೂ ಆಗಿದ್ದಳೆಂದು ವಿವರಿಸಿದ್ದಾನೆ. ಆಕೆ ಮೂಕಾಂಬದೇವಿಗೆ ವಿಶಾಲವಾದ ಭೂಪ್ರದೇಶವನ್ನು ಬಿಟ್ಟುಕೊಟ್ಟಿದ್ದಳು ಮತ್ತು ಒಂದು ಅಗ್ರಹಾರವನ್ನು ಸ್ಥಾಪಿಸಿ ತನ್ನ ಜ್ಞಾಪಕಾರ್ಥವಾಗಿ ಚೆನ್ನಾಂಬಪುರ ಎಂದು ಅದಕ್ಕೆ ಹೆಸರಿಟ್ಟಳು. ಅನೇಕ ಮಠಗಳನ್ನು ಜಂಗಮರಿಗಾಗಿ ಕಟ್ಟಿಸಿದಳು ಮತ್ತು ಲಿಂಗ, ಜಂಗಮರ ಪೂಜೆಯನ್ನು ಪ್ರೋತ್ಸಾಹಿಸಿದಳು. ಪ್ರಾಚೀನ ಹಾಗೂ ನವೀನ ನಂಬಿಕೆಗಳೆರಡನ್ನೂ ಪೋಷಿಸುತ್ತಿದ್ದಳು. ಒಂದು ಲಕ್ಷ ತೊಂಭತ್ತಾರು ಸಾವಿರ ಜಂಗಮರುಗಳಿಗೆ ರಸಪೂರ್ಣವಾದ ಭೋಜನ ಮಾಡಿಸುತ್ತಿದ್ದಳು. ಈ ರೀತಿ ಜಂಗಮರ ಆಶೀರ್ವಾದವನ್ನೂ ಅವಳು ಪಡೆಯು

ತ್ತಿದ್ದಳು. ಅತಿಥಿಗಳಿಗೆ ಶ್ರದ್ಧೆಯಿಂದ ಭೋಜನ ನೀಡುವುದು ಅವಳ ಶ್ರೇಷ್ಠ ಧರ್ಮವಾಗಿತ್ತು.

ವೀರಶೈವ ಧರ್ಮದ ಶ್ರದ್ಧಾಳುವಾದ ಚೆನ್ನಮ್ಮ ಲಿಂಗ ಜಂಗಮರ ಪೂಜಾಲಕ್ಷಣಗಳನ್ನೂ ಹಾಗೂ ಪೂಜಾವಿಧಿಯನ್ನೂ ತಿಳಿದುಕೊಂಡಿದ್ದಳು ಮತ್ತು ಅದೇ ರೀತಿ ನಡೆದುಕೊಳ್ಳುತ್ತಿದ್ದಳು. ಕಾಲಕ್ರಮೇಣ ಈ ಎಲ್ಲ ಪದ್ಧತಿಗಳನ್ನು ತನ್ನ ಮಗನಿಗೆ ಅಭ್ಯಾಸ ಮಾಡಿಸಿದಳು ಮತ್ತು ಬಹಳ ಎಚ್ಚರಿಕೆಯಿಂದ ಹಾಗೂ ಶ್ರದ್ಧೆಯಿಂದ ಆಚರಿಸಲು ತಿಳಿಸಿದಳು. ಅವಳು ಬಸವರಾಜನಿಗೆ ಧರ್ಮವನ್ನು ಬೋಧಿಸಿದಳು ಮತ್ತು ಧಾರ್ಮಿಕ ಹಾಗೂ ಪ್ರಾಮಾಣಿಕ ಜೀವನವನ್ನು ನಡೆಸಲು ಉಪದೇಶಿಸಿದಳು. ಅವಳು ತನ್ನ ಮಗನಿಗೆ ಉಪದೇಶಿಸಿದ ಈ ಉಪದೇಶ ಎಲ್ಲರೂ ಅನುಕರಿಸಲು ಯೋಗ್ಯವಾಗಿದೆ. ಚೆನ್ನಮ್ಮ ಶಿವಪಾದ ಸೇರಿದಳೆಂದು ಶಿ.ತ.ರ. ತಿಳಿಸಿದೆ.

ಶಿ.ತ.ರ. ಕೆಳದಿ ರಾಜವಂಶದ ವಿವರಣೆಯಿಂದ ಪ್ರಾರಂಭವಾಗಿ ಚೆನ್ನಮ್ಮನ ಆಳ್ವಿಕೆಯ ವಿವರಣೆ ಯೊಂದಿಗೆ ಮುಕ್ತಾಯವಾಗಿದೆ. ಮೇಲೆ ಹೇಳಿದ, ಚೆನ್ನಮ್ಮಳಿಗೆ ಸಂಬಂಧಪಟ್ಟ ವಿವರಣೆ ಬಹಳ ಸಂಕ್ಷಿಪ್ತ ವಾಗಿದೆ. ಸಂಪೂರ್ಣ ಸಾಂಗೋಪಾಂಗವಾಗಿಲ್ಲ. ಆದರೆ ಚೆನ್ನಮ್ಮಳಿಗೆ ಸಂಬಂಧಪಟ್ಟ ಐತಿಹಾಸಿಕ ವಿಷಯಗಳು ಸಾಹಿತ್ಯಕ್ಕೆ ಮುಖ್ಯ ಉಗಮವಾಗಿದೆ ಎಂಬುದರಲ್ಲಿ ಸಂಶಯವೇ ಇಲ್ಲ.

ಶಿ.ತ.ರ. ಚೆನ್ನಮ್ಮಳ ಐತಿಹಾಸಿಕ ವಿವರಣೆಗಳ ಸಾಮಾನ್ಯ ನಿರೀಕ್ಷಣೆಯ ಆಧಾರದ ಮೇಲೆ ಕೆಳಗೆ ನಮೂದಿಸಿರುವ ವಿಷಯಗಳ ಸಾಕ್ಷಾತ್ಕಾರವಾಗುತ್ತದೆ. ಇವುಗಳಿಂದ ಶಿ.ತ.ರ. ಇತಿಹಾಸದ ಅಮೂಲ್ಯ ಉಗಮ ಪುಸ್ತಕ ಎನಿಸುತ್ತದೆ.

ಸೋಮಶೇಖರ ಹಾಗೂ ಚೆನ್ನಮ್ಮಳ ಆಳ್ವಿಕೆಯ ಸಮಯದಲ್ಲಿ ಅಕ್ಕಪಕ್ಕದ ರಾಜ್ಯಗಳಿಂದ ಸತತ ಘರ್ಷಣೆ ನಡೆಯುತ್ತಿತ್ತು. ಆಗಾಗ್ಗೆ ಪಾಳೆಯಗಾರರ ಮುಖ್ಯಸ್ಥರು ತಮ್ಮ ಗಡಿನಾಡು ಸ್ಥಳದಲ್ಲಿಯೇ ಇದ್ದು ಕೊಂಡು ತೊಂದರೆಯನ್ನು ಕೊಡುತ್ತಿದ್ದರು. ಆದರೆ ಕೆಳದಿಯ ರಾಜರುಗಳು ತಮ್ಮ ಶತ್ರುಗಳೊಂದಿಗೆ ಚಾಣಕ್ಷತೆ ಹಾಗೂ ಚತುರತೆಯಿಂದ ವ್ಯವಹರಿಸುತ್ತಿದ್ದರು.

ಈ ಸಂಸ್ಥಾನದಲ್ಲಿ ಸೈನ್ಯದ ವ್ಯೂಹರಚನೆ ಹಾಗೂ ಪರಂಪರಾಗತ ಧೀರೋದಾತ್ತ ಸಂಪ್ರದಾಯವನ್ನು ಉಳಿಸಿಕೊಂಡಿದ್ದರು. ಸೇನಾಬಲಗಳನ್ನು ಪರಿಣಾಮ ಕಾರಿಯಾಗಿ ಸಜ್ಜುಗೊಳಿಸುತ್ತಿದ್ದರು. ಶತ್ರುಗಳೊಂದಿಗೆ ಯಾವ ರೀತಿ ಒಪ್ಪಂದ ಮಾಡಿ ಕೊಳ್ಳಬೇಕು, ಯಾರಿಗೆ ಆಶ್ರಯ ಕೊಡಬೇಕು ಮತ್ತು ಶರಣಾಗತರಾದವರನ್ನು ಯಾವ ರೀತಿ ಗೌರವಿಸಬೇಕೆಂಬುದು ಅವರಿಗೆ ತಿಳಿದಿತ್ತು.

ಕೆಳದಿಯ ಪ್ರಭುಗಳು ಪ್ರಾಮಾಣಿಕರಾಗಿದ್ದರು ಮತ್ತು ಪ್ರಾಮಾಣಿಕತೆಯಿಂದ ಜನಗಳನ್ನು ಆಳು ತ್ತಿದ್ದರು. ಧರ್ಮರಕ್ಷಣೆ ಮಾಡುವುದು ರಾಜರ ಅತಿ ಮುಖ್ಯವಾದ ಕರ್ತವ್ಯವೆಂದು ಅವರು ನಂಬಿದ್ದರು. ತ್ಯಾಗ ಮಾಡುವುದು, ಶ್ರೇಷ್ಠ ಕಾಣಿಕೆಗಳನ್ನು ಕೊಡುವುದು, ದೇವಸ್ಥಾನಗಳನ್ನು ಕಟ್ಟಿಸುವುದು ಮತ್ತು ಅವುಗಳ ನೂತನ ವ್ಯವಸ್ಥೆ ಅಥವಾ ಜೀರ್ಣೋದ್ಧಾರ, ಹಳ್ಳಿ ಮತ್ತು ಭೂಮಿಗಳನ್ನು ಅನುಗ್ರಹಿಸುವುದು, ಯಾತ್ರಾಸ್ಥಳಗಳಿಗೆ ಭೇಟಿ ಕೊಡುವುದು, ವಿವಿಧ ನಂಬಿಕೆಗಳನ್ನು ಪ್ರೋತ್ಸಾಹಿಸುವುದು, ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಕಟ್ಟಿಸಿಕೊಡುವುದು, ಜಂಗಮರಿಗೆ ಭೂಮಿಗಳನ್ನು ಕೊಡುವುದು, ಬಾವಿಗಳನ್ನು ಹಾಗೂ ಸರೋವರಗಳನ್ನು ತೋಡಿಸುವುದು—ಇವೇ ಮುಂತಾದ ನಾನಾ ಬಗೆಯ ಕಾರ್ಯಕ್ರಮಗಳ ಮೂಲಕ ಧರ್ಮದ ರಕ್ಷಣಾಕಾರ್ಯ ಮಾಡುತ್ತಿದ್ದರು.

ಶಿ.ತ.ರ. ದಲ್ಲಿ ಮೇಲೆ ಹೇಳಿದ ಚೆನ್ನಮ್ಮಳ ಜೀವನಚರಿತ್ರೆ ಕೆಳದಿ ರಾಜ್ಯದಲ್ಲಿ ಉತ್ತರಾಧಿಕಾರಿಗಳನ್ನು ಆರಿಸುತ್ತಿದ್ದ ನಿಯಮಗಳನ್ನು ತಿಳಿಸುತ್ತದೆ. ತಂದೆಯ ನಂತರ ಮಗನೇ ರಾಜನಾಗಬೇಕೆಂಬ ಸಾಮಾನ್ಯ ನಿಯಮ ವಿದ್ದರೂ ಮಗ ಇಲ್ಲದಿದ್ದಲ್ಲಿ, ಸಗೋತ್ರದವರು ಉತ್ತರಾಧಿಕಾರಿಯಾಗಬಹುದಿತ್ತು. ಸೋಮಶೇಖರನ ದತ್ತುಪುತ್ರ ಗ್ರಂಥಕರ್ತೃ ಉತ್ತರಾಧಿಕಾರಿಯಾದಂತೆ ದತ್ತುಪುತ್ರ ಉತ್ತರಾಧಿಕಾರಿಯಾಗಬಹುದಿತ್ತು. ಕೆಲವೊಮ್ಮೆ ಚೆನ್ನಮ್ಮಳಂತೆ ಪತ್ನಿಯೂ ಸಹ ಉತ್ತರಾಧಿಕಾರಿಯಾಗುತ್ತಿದ್ದಳು. ಸೋಮಶೇಖರ ಚೆನ್ನಮ್ಮಳ ಸಹಕಾರದಿಂದ ರಾಜ್ಯವಾಳಿದಂತೆ ಜಂಟಿ ಪ್ರಭುಗಳ ಆಳ್ವಿಕೆಯೂ ಜಾರಿಯಲ್ಲಿತ್ತು.

ಶಿ.ತ.ರ. ದಲ್ಲಿ ಕೆಳದಿ ಇತಿಹಾಸವನ್ನು ಆಯ್ಕೆ ಮಾಡಿ ಬರೆಯುವಾಗ ಗ್ರಂಥದುದ್ದಕ್ಕೂ ಆಖ್ಯಾನಗಳಲ್ಲಿ ಆನಂದವನ್ನು ಉಂಟುಮಾಡುವಂತೆ ಘಟನೆಗಳನ್ನು ಅಳವಡಿಸುವಲ್ಲಿ ಗ್ರಂಥಕರ್ತರ ಜಾಣ್ಮೆ ಕಂಡುಬಂದಿದೆ. ಶಿ.ತ.ರ. ವಿಶಿಷ್ಟ ಭಾಗ, ಯಾವುದರಲ್ಲಿ ಚೆನ್ನಮ್ಮಳ ರಾಜಕೀಯ ಸಾಹಸ ಕಾರ್ಯಗಳಿವೆಯೋ ಅದು ಸಂಸ್ಕೃತದ ಆಖ್ಯಾನ ಕಾವ್ಯದ ಒಂದು ಸುಂದರ ನಮೂನೆ ಯಂತಿದೆ. ಈ ಆಖ್ಯಾನಗಳು ಸಂಸ್ಕೃತ ಸಾಹಿತ್ಯ ಸಂಪತ್ತಿಗೆ ಕೀರ್ತಿ ತರುತ್ತವೆ. ಅಲ್ಲದೆ ಈ ಭಾಗಗಳು ಆ ಸಮಯದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗಳ ಮೇಲೆ ಪ್ರಕಾಶ ಬೀರುತ್ತವೆ. ರಾಜಾರಾಮನಿಗೆ ಸಂಬಂಧಿಸಿದ ಐತಿಹಾಸಿಕ ಪ್ರಾಸಂಗಿಕ ಕಥೆಯನ್ನೂ ಸೇರಿಸಿರುವುದರಿಂದ ಮರಾಠ ಇತಿಹಾಸದ ಮುಖ್ಯ ಉಗಮವನ್ನೂ ಸಹ ಸೇರಿಸಿದಂತಾಗಿದೆ.

ಕೆಳದಿಯ ಬಸವರಾಜನ ಶಿ.ತ.ರ. ಗ್ರಂಥ ಕೇವಲ ಸಂಸ್ಕೃತ ಸಾಹಿತ್ಯಕ್ಕೇ ಮಾತ್ರವಲ್ಲದೇ ಕರ್ನಾಟಕದ ಇತಿಹಾಸಕ್ಕೂ ಸಹ ಅತ್ಯಮೂಲ್ಯ ಹಾಗೂ ಅದ್ವಿತೀಯ ಕೊಡುಗೆಯಾಗಿದೆ.

ಸಿ. ವ್ಹಿ. ಮಠದ

ಮುಂಡರಗಿ ಭೀಮರಾಯ

ದೇಶದ ಸ್ವಾತಂತ್ರ್ಯಕ್ಕಾಗಿ ಪರಕೀಯರ ಜೊತೆಗೆ ತನ್ನ ಜೀವನವನ್ನೇ ಪಣಕ್ಕಿಕ್ಕಿ ಹೋರಾಡಿದವರಲ್ಲಿ ಮುಂಡರಗಿ ಭೀಮರಾಯ ಅಗ್ರಗಣ್ಯ ವ್ಯಕ್ತಿ. ಸ್ವತಂತ್ರ ಮನೋವೃತ್ತಿಗೂ ಪ್ರಾಮಾಣಿಕತೆಗೂ ಪ್ರಸಿದ್ಧವಾಗಿದ್ದ ಮನೆತನಕ್ಕೆ ಸೇರಿದ ಶ್ರೀಸಾಮಾನ್ಯ ಮುಂಡರಗಿ ಭೀಮ ರಾಯ.

ಇದ್ದಕ್ಕಿದ್ದಂತೆ ಒಂದುದಿನ ಪಂತಪ್ರಧಾನ ಧೊಂಡೋಪಂತ ನಾನಾಪೇಶ್ವೆಯವರಿಂದ ದಕ್ಷಿಣದ ಎಲ್ಲ ಸರಂಜಾಮಿಗಳಿಗೆ, ಜಹಗೀರದಾರರುಗಳಿಗೆ, ದೇಶಮುಖ ರಿಗೆ, ದೇಶಪಾಂಡೆಗಳಿಗೆ ಹಾಗೂ ಉಳಿದ ಜಮೀನುದಾರ ರಿಗೆ, ಪಾಟೀಲರಿಗೆ, ಕುಲಕರ್ಣಿಯವರಿಗೆ ಹಾಗೂ ಸಮಸ್ತ ಜನತೆಗೆ ದೆಹಲಿಯ ಮಹಾರಾಜರ ಅಪ್ಪಣೆಯ ಮೇರೆಗೆ ಹೊರಡಿಸಲಾದ ಒಂದು ಮಹತ್ವಪೂರ್ಣ ಕಾಗದ ಕೈಸೇರಿತು. ಈ ಕಾಗದ ಭೀಮರಾಯರಿಗೂ ಸಿಕ್ಕಿತು. ಈ ಕಾಗದದಲ್ಲಿ ಮುಖ್ಯವಾಗಿ ಬ್ರಿಟಿಷರ ವಿರುದ್ಧ ಸಿಡಿದೆದ್ದು ಸ್ವಾತಂತ್ರ್ಯ ಕಹಳೆಯನ್ನು ಮೊಳ ಗಲು ಕೇಳಿಕೊಳ್ಳಲಾಗಿತ್ತು.

ಭೀಮರಾಯನು ಧೈರ್ಯಶೀಲನೂ ಸತತ ಪರಿ ಶ್ರಮಿಯೂ ಆಗಿದ್ದನು. ಭೀಮರಾಯನ ಅಜ್ಜನಾದ 'ಮೊಂಡುಗಿ' ಭೀಮರಾಯನು ಡಂಬಳ ದೇಸಾಯಿಯ ಮುಖ್ಯಮಂತ್ರಿಯಾಗಿ ದಕ್ಷಿಣದಲ್ಲಿ ಪೇಶ್ವೆಯ ಮಂಡಲಾ ಧಿಪತಿಯನ್ನು ಧಿಕ್ಕರಿಸಿ ಖ್ಯಾತಿ ಹೊಂದಿದ್ದನು. ಅಜ್ಜನ ಗುಣಗಳನ್ನು ಹೊಂದಿದ ಭೀಮರಾಯ, ವನ್ಯಮೃಗ ಬೇಟೆಯಲ್ಲಿ ಪರಿಪೂರ್ಣತೆ ಪಡೆದವನಾಗಿದ್ದನು. ಇವನ ತಂದೆ ಪೇಶ್ವೆ ಆಡಳಿತದಲ್ಲಿ ನ್ಯಾಯಾಧೀಶನಾಗಿದ್ದನು. ತನ್ನ ಶಿಕ್ಷಣ ಹಾಗೂ ಬುದ್ಧಿಯ ಬಲದಿಂದ ಭೀಮ ರಾಯನು ತಹಸೀಲ್ದಾರ ಪದವಿಗೇರಿದನು. ಹರಪನ ಹಳ್ಳಿ ಹಾಗೂ ಬಳ್ಳಾರಿಗಳಲ್ಲಿ ತಹಸೀಲ್ದಾರನಾಗಿ ಕೆಲ ಕಾಲ ಕೆಲಸಮಾಡಿದನು. ಆದರೆ ಪರಿಸ್ಥಿತಿಯ ಅರಿವಿ ನಿಂದಾಗಿ ಬ್ರಿಟಿಷರ ಕೈಕೆಳಗೆ ಸೇವೆಮಾಡುವ ಇಚ್ಛೆ ಇಲ್ಲದ ವನಾದನು. ಬ್ರಿಟಿಷರ ದಬ್ಬಾಳಿಕೆಯಿಂದಾಗಿ ದೇಶ ಬಡವಾಗಹತ್ತಿದೆ ಎಂಬ ವಿಚಾರ ಭೀಮರಾಯನ ಮನ ಸ್ಸನ್ನು ಕೊರೆಯಹತ್ತಿತ್ತು. ೧೮೫೭ನೆಯ ಮೇ, ಜೂನ, ಜುಲೈ ತಿಂಗಳುಗಳಲ್ಲಿ ಉತ್ತರ ಭಾರತದಲ್ಲಿ ನಡೆದ ಘಟನೆ ಗಳು ಭೀಮರಾಯನನ್ನು ಕಾರ್ಯಪ್ರವೃತ್ತನನ್ನಾಗಿ ಮಾಡಿದವು. ಮದ್ದುಗುಂಡು, ಶಸ್ತ್ರಾಸ್ತ್ರಗಳ ಸಂಗ್ರಹಕ್ಕೆ ಸನ್ನದ್ಧನಾದನು.

ಭೀಮರಾಯನ ಚಲನವಲನಗಳ ಬಗ್ಗೆ ಸಂಶಯ ಗೊಂಡ ಧಾರವಾಡದ ಪೋಲೀಸ್ ಸುಪರಿಂಟೆಂಡೆಂಟ್ ಥಾಮಸ್ ಅವರು ಮ್ಯಾಜಿಸ್ಟ್ರೇಟರಿಗೆ ೧೦ ಮೇ ೧೮೫೭ ಹಾಗೂ ಪುನಃ ಆಗಸ್ಟ್ ೧೮೫೭ರಲ್ಲಿ ಎರಡು ಪತ್ರಗಳನ್ನು ಬರೆದು, ಅವನ ವ್ಯಕ್ತಿತ್ವದ ಬಗ್ಗೆ ಸಂಶಯ ವ್ಯಕ್ತಪಡಿಸಿ, ಅವನೊಬ್ಬ ಅಪಾಯಕಾರಿ ವ್ಯಕ್ತಿ, ಬ್ರಿಟಿಷ್ ಸರಕಾರಕ್ಕೆ ಆತಂಕವನ್ನೊಡ್ಡಬಹುದೆಂಬ ವಿಚಾರಗಳನ್ನು ತಿಳಿಸಿದ್ದರು. ಧಾರವಾಡದ ಮ್ಯಾಜಿಸ್ಟ್ರೇಟರು ಭೀಮರಾಯನನ್ನು ಕರೆ ಯಿಸಿ ವಿಚಾರಿಸಲಾಗಿ, ಥಾಮಸ್ ಅವರ ಹೇಳಿಕೆಯಲ್ಲಿ ಸತ್ಯಾಂಶವಿಲ್ಲವೆಂದೂ ಆದರೆ ಅವನ ವಿರೋಧಿಗಳು ಹಬ್ಬಿ ಸಿದ ವದಂತಿಗಳಿಂದೂ ತಿಳಿಸಿ ಓಲೆ ಬರೆಯಲಾಯಿತು.

ಆದಾಗ್ಯೂ ಭೀಮರಾಯನಿಗೆ ಎಚ್ಚರಿಕೆ ನೀಡಿ, ಅವನ ಚಲನವಲನಗಳ ಮೇಲೆ ಕಣ್ಣಿಡಲಾಯಿತು.

ಹೈದರಾಬಾದಿನಲ್ಲಿ ಸ್ವಾತಂತ್ರ್ಯ ಸಂಗ್ರಾಮ ಕುರಿತ ಗ್ರಂಥದಲ್ಲಿ ಹೇಳಿದಂತೆ, ಸೋರಾಪುರ ದೇಸಾಯಿರು ಹಾಗೂ ಭೀಮರಾಯನೂ ಒಳ್ಳೆಯ ಗೆಳೆಯರಾಗಿದ್ದರು. ಅಲ್ಲದೆ ಹಮ್ಮಿಗೆ ಕೆಂಚನಗೌಡ, ಡಂಬಳ ದೇಸಾಯಿರೂ ಗೋವನಕೊಪ್ಪದ ಸರನಾಡಗೌಡರು, ಇವರೆಲ್ಲರ ಜೊತೆಗೆ ಸ್ನೇಹ ಸಂಪಾದಿಸಿದನು. ಮುಂಡರಗಿ ಭೀಮ ರಾಯ ಹಾಗೂ ನರಗುಂದದ ಬಾಬಾಸಾಹೇಬ ಇವರಿಬ್ಬರ ಪ್ರಭಾವದಿಂದಾಗಿ ಇಡೀ ಧಾರವಾಡ ಜಿಲ್ಲೆಯಲ್ಲಿ ಬ್ರಿಟಿಷರ ವಿರುದ್ಧ ಇವರದೊಂದು ಜಾಲವೇ ಪ್ರಾರಂಭ ವಾಯಿತು. ಕೆರೆ ಕಟ್ಟುವ ನೆಪದಲ್ಲಿ ಭೀಮರಾಯನು ೩೦೦ ರಿಂದ ೪೦೦ ಜನರನ್ನು ಕೂಡಿಸಿ, ಸೊರಟೂರ ದೇಸಾಯಿರ ಜೊತೆಗೂಡಿ ಬ್ರಿಟಿಷರ ವಿರುದ್ಧ ಬಂಡೇಳುವನೆಂಬ ಸುದ್ದಿ ಬಳ್ಳಾರಿ ಮ್ಯಾಜಿಸ್ಟ್ರೇಟರಿಂದ ಧಾರವಾಡ ಕಲೆಕ್ಟರನಿಗೆ ತಂತಿಯ ಮೂಲಕ ತಿಳಿಸಲಾಯಿತು. ತಕ್ಷಣ ಕಲೆಕ್ಟರ ಥಾಮಸ್ ಒಗಿಲ್ವಿ ಇವರಿಬ್ಬರನ್ನೂ ಕರೆ ಕಳುಹಿಸಿದನು. ಧೂರ್ತನಾದ ಭೀಮರಾಯನು ಸೊರಟೂರ ದೇಸಾಯಿಯ ಜೊತೆಗೂಡಿ ಕಲೆಕ್ಟರನನ್ನು ಕಾಣಲು ಬಂದನು. ತನ್ನ ಕಾರ್ಯಗಳ ಬಗ್ಗೆ ಬಂದ ಆರೋಪಗಳನ್ನು ಅಲ್ಲಗಳೆದನು ಹಾಗೂ ಅವುಗಳನ್ನು ಪುಷ್ಟೀಕರಿಸುವ ಯಾವುದೇ ಪುರಾವೆಗಳೂ ಇರಲಿಲ್ಲ. ಪುನಃ ತನ್ನ ಬಲವನ್ನು ಬೆಳಸಿಕೊಳ್ಳುವವರೆಗೆ ವಿಧೇಯತೆಯನ್ನು ವ್ಯಕ್ತಪಡಿಸಿದನು. ಮುಂದೆ ತನ್ನ ಚಟುವಟಿಕೆಗಳನ್ನು ಬಳ್ಳಾರಿ ಜಿಲ್ಲೆಗೆ ಬದಲಾಯಿಸಿದನು. ಇವರ ಚಟುವಟಿಕೆಗಳಿಂದಾಗಿ ಕಂದಾಯ ವಸೂಲಿ ಕೆಲಸಕ್ಕೆ ತಡೆಯುಂಟಾಯಿತು. ಹೂವಿನಹಡಗಲಿಯ ಪೋಲೀಸ್ ಅಧಿಕಾರಿಯ ಹೇಳಿಕೆಯಂತೆ, ಭೀಮರಾಯನು ಜಿಲ್ಲೆಯ ಶಾಂತತೆಯನ್ನು ಪಲ್ಲಟಿಸಲಿಕ್ಕಾಗಿ ಶಸ್ತ್ರಾಸ್ತ್ರಗಳ ಸಂಗ್ರಹ ನಡೆಸಿದನು. ೧೮೫೮ರ ಮೇ ಕೊನೆಯ ವಾರದಲ್ಲಿ ಕೆಲವು ಹಳ್ಳಿಗಳನ್ನು ದೋಚುವ ಮುಖಾಂತರ ತನ್ನ ಬ್ರಿಟಿಷ್ ವಿರೋಧಿ ಚಟುವಟಿಕೆಗಳನ್ನು ಪ್ರಾರಂಭಿಸಿದನು.

ಮೊದಲೇ ನಿಶ್ಚಯಿಸಿದಂತೆ, ಹಮ್ಮಿಗಿ ಕೆಂಚನಗೌಡನೂ ಸೊರಟೂರ ದೇಸಾಯಿರೂ ಭೀಮರಾಯನ ಜೊತೆಗೂಡಿ ದಂಗೆ ಏಳುವ ಸಂಗತಿ ಬ್ರಿಟಿಷರಿಗೆ ತಿಳಿದಿತ್ತು. ಇದರಿಂದಾಗಿ ಡಂಬಳ ಪೋಲೀಸನು ಹಮ್ಮಿಗೆಯಲ್ಲಿಯ ಕೆಂಚನಗೌಡರ ಮನೆಗೆ ತನ್ನ ಸಿಬ್ಬಂದಿಯೊಡನೆ ಮುತ್ತಿಗೆ ಹಾಕಿ ಅಲ್ಲಿದ್ದ ಮದ್ದುಗುಂಡು, ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು, ಆ ಮನೆಗೆ ಬೀಗಮುದ್ರೆ ಹಾಕಿ, ಕಾವಲಿರಿಸಿ ಈ ಸಂಗತಿಯನ್ನು ಮೇಲಾಧಿಕಾರಿಗಳಿಗೆ ತಿಳಿಸಿದನು.

ಇದನ್ನು ತಿಳಿದ ಭೀಮರಾಯನು ಇನ್ನು ಸುಮ್ಮನೆ ಕುಳಿತರೆ ಮೈಮೇಲೆ ಬರುವುದೆಂದು ತಿಳಿದು, ಕೆಲವು ಜನರನ್ನು ಕೂಡಿಕೊಂಡು ಆ ಮನೆಗೆ ಆಯುಧ ಸಮೇತ ಮುತ್ತಿಗೆ ಹಾಕಿ ಕಾವಲುಗಾರನನ್ನು ಕೊಂದು ಹಾಕಿ, ಅಲ್ಲಿದ್ದ ಎಲ್ಲ ಸಾಮಗ್ರಿಗಳನ್ನು ವಶಪಡಿಸಿಕೊಂಡು, ಕೆಂಚನಗೌಡನ ಜೊತೆಗೂಡಿ ಮುಂದೆ ಸಾಗಿ ಡಂಬಳದಲ್ಲಿಯ ಖಜಾನೆಯನ್ನು ಮುತ್ತಿ ವಶಪಡಿಸಿಕೊಂಡನು. ಮುಂದೆ ಮತ್ತೆ ಕೆಲವು ಜನರು ಇವರನ್ನು ಕೂಡಿಕೊಂಡು ಗದುಗಿನ ಕಡೆಗೆ ನಡೆದರು. ಇವರನ್ನು ಕಂಡ ಅಂಚೆ–ತಂತಿ ಕಾರ್ಯಾಲಯದ ಸಿಬ್ಬಂದಿವರ್ಗ ಜೀವದಾಸೆಗೆ ಅಲ್ಲಿಂದ ಕಾಲ್ಕಿತ್ತರು. ಅಲ್ಲಿದ್ದ ಎಲ್ಲ ಸೊತ್ತನ್ನು ದೋಚಿದರು. ಆದರೆ ಪೋಲೀಸರು ಇವರನ್ನು ಬೆನ್ನಟ್ಟಿದ್ದಾರೆಂಬ ಸುದ್ದಿ ತಿಳಿದು ಪೂರ್ವದಿಕ್ಕಿಗೆ ನಡೆದು ಕೊಪ್ಪಳ ತಲುಪಿದರು. ಈಗ ಇವರು ಬಂಡೆದ್ದರೆಂಬ ಸಂಗತಿ ಖಚಿತವಾದ ನಂತರ ಪೋಲೀಸರು ದೇಸಾಯಿಯ ಮನೆಗೆ ಬೆಂಕಿ ಇಟ್ಟು, ಭೀಮರಾಯನನ್ನು ಹಿಡಿಯಲು ಕೊಪ್ಪಳಕ್ಕೆ ಧಾವಿಸಿದರು.

ಕೊಪ್ಪಳದ ತಹಸೀಲ್ದಾರನು ರಾಯಚೂರ ದೋಬ ಡೆಪ್ಯುಟಿ ಕಮೀಷನರನಿಗೆ ಈ ರೀತಿ ತಿಳಿಸಿದನು : "ಭೀಮರಾಯ ೨೦೦–೩೦೦ ಜನರೊಡನೆ ಕೊಪ್ಪಳ ಕಿಲ್ಲೆಯನ್ನು ವಶಪಡಿಸಿಕೊಳ್ಳಲು ಹೊರಟಿದ್ದಾನೆ. ನಾನು ಭೀಮರಾಯನ ಇಬ್ಬರು ಹೆಂಡಿರು, ೧೨ ವರ್ಷದ ಒಬ್ಬ ಮಗ ಹಾಗೂ ಒಂದು ಚಿಕ್ಕ ಮಗು ಅಲ್ಲದೆ ಅವರ ಸೇವಕರನ್ನು ಸೆರೆಹಿಡಿದಿದ್ದೇನೆ."

ಇದನ್ನು ತಿಳಿದು ಭೀಮರಾಯನು ರೊಚ್ಚಿಗೆದ್ದು ತನ್ನ ಕುಟುಂಬದ ಬಿಡುಗಡೆಯನ್ನೇ ಆದ್ಯ ಕರ್ತವ್ಯವಾಗಿ ಇಟ್ಟುಕೊಂಡನು. ತನ್ನ ಅನುಯಾಯಿಗಳೊಂದಿಗೆ

ಕೆಂಚನಗೌಡನನ್ನು ಕೂಡಿಕೊಂಡು ಕೊಪ್ಪಳದ ಕಡೆಗೆ ನಡೆದನು. ಮುಂದೆ ಏನು ನಡೆಯಿತೆಂಬ ಬಗ್ಗೆ ಪೋಲೀಸ್ ಸೂಪರಿಂಟೆಂಡೆಂಟ್ ಥಾಮಸ್ ಅವರ ಮಾತಿನಲ್ಲಿ ಹೇಳಬೇಕಾದರೆ, "ದೇಸಾಯಿಯು ಭೀಮ ರಾಯನ ಊರಾದ ಬೆಣ್ಣೆಹಳ್ಳಿಗೆ ಹೋದನು. ನಂತರ ಭೀಮರಾಯನು ೭೦ ಜನ ಆಯುಧಧಾರಿಗಳೊಡನೆ ಹೆಮ್ಮಿಗೆಗೆ ಹೋಗಿ ಅಲ್ಲಿ ಫೋಜುದಾರನನ್ನು ತೊಂದರೆ ಗೊಳಪಡಿಸಿ, ದೇಸಾಯಿಯ ಮನೆಗೆ ಹೋಗಿ, ಅಲ್ಲಿ ಬೀಗಮುದ್ರೆಯನ್ನು ಮುರಿದು ಪೋಲೀಸರನ್ನು ಹೆದರಿಸಿ ಈ ಘಟನೆಗೆ ಕಾರಣನಾದ ಮನುಷ್ಯನನ್ನು ಕೊಂದು, ಮುಂದೆ ಸಿರಹಟ್ಟಿ ತಾಲ್ಲೂಕ ಪ್ರವೇಶಿಸಿ, ಅಲ್ಲಿ ಬಾಗೇವಾಡಿ, ಜರವಡ ಹಳ್ಳಿಗಳನ್ನು ಮುತ್ತಿ ಕೆಲೂರಲ್ಲಿ ಮಲಗಿ ಕೊಂಡನು. ಮರುದಿನ ಬೆಳಗ್ಗೆ ಡಂಬಳಕ್ಕೆ ಹೋಗಿ ಖಜಾನೆಯನ್ನು ಮುತ್ತಿದನು. ಆದರೆ ಮೊದಲೇ ಅಲ್ಲಿದ್ದ ಹಣವನ್ನೆಲ್ಲ ಬ್ರಿಟಿಷರು ಖಾಲಿ ಮಾಡಿದ್ದರಿಂದ ಅದನ್ನು ಮುತ್ತಿ ಇದ್ದ ಕೆಲವು ಆಯುಧಗಳನ್ನು ದೋಚಿ ಕೊಂಡು ಹೋದನು. ಇವರ ಕಾರ್ಯಕ್ರಮಗಳ ಬಗ್ಗೆ ಪೂರ್ಣ ಮಾಹಿತಿ ತಿಳಿದುಕೊಂಡು ಅವರ ಬೆನ್ನ ಹಿಂದೆಯೇ ಸಾಗಿದೆನು" ಎಂದು ಹೇಳುತ್ತಾನೆ.

ಭೀಮರಾಯನೇ ಈ ಹೋರಾಟದ ಧುರೀಣತ್ವ ವಹಿಸಿದ್ದರೂ ಅವನ ಹಿಂದೆ ಸೊರಟೂರ ದೇಸಾಯರ ಬೆಂಗಾವಲಿದ್ದಿತು. ಯಾಕೆಂದರೆ ಭೀಮರಾಯನು ಸೊರಟೂರ ದೇಸಾಯರ ಮುತಾಲಿಕನಾಗಿದ್ದನು. ಅವರ ಕಾರ್ಯಕ್ರಮದಂತೆ ನರಗುಂದ ಹಾಗೂ ರಾಮ ದುರ್ಗದ ಮುಖ್ಯಸ್ಥರು ಆ ಭಾಗವನ್ನು ಮುತ್ತುವುದು ಭೀಮರಾಯ ಹಾಗೂ ದೇಸಾಯರು ಈ ಭಾಗ ಹಾಗೂ ತುಂಗಭದ್ರೆಯ ಮದ್ರಾಸು ಭಾಗಗಳನ್ನು ಮುತ್ತ ಬೇಕೆಂದು ವಿಚಾರಿಸಿದ್ದರು.

ಕೊಪ್ಪಳದ ಕಡೆ ಹೊರಭಾಗ, ಭೂತನಹಳ್ಳಿಯ ಭರಮಪ್ಪನಾಯಕನು ಕೊಪ್ಪಳ ಕಿಲ್ಲೆಯನ್ನು ಯಾವುದೇ ಅಡೆತಡೆಯಿಲ್ಲದೇ ತೆಗೆದುಕೊಳ್ಳಬಹುದೆಂದು ತಿಳಿಸಿದನು. ಕೊಪ್ಪಳದ ತಹಸೀಲ್ದಾರನಾದ ಮಹಮ್ಮದ್ ಹಸೀಫನು ಅವರ ರಕ್ಷಣೆಯ ಎಲ್ಲ ವ್ಯವಸ್ಥೆ ಮಾಡಿ ಭೀಮರಾಯ ಹಾಗೂ ಕೆಂಚನಗೌಡರನ್ನು ಹುಡುಕಿ ಕೊಂಡು ನಡೆದನು. ಆದರೆ ಇತ್ತ ಭೀಮರಾಯ ಹಾಗೂ ಅವನ ಅನುಯಾಯಿಗಳು ಇವನು ಕೊಪ್ಪಳ ಬಿಟ್ಟ ಸಂಗತಿ ತಿಳಿದು, ಹಠಾತ್ತಾಗಿ ಕೊಪ್ಪಳವನ್ನು ಮೇ ೩೦ ರವಿವಾರ ಮುತ್ತಿದರು.

ಈಗ ಇದನ್ನು ತಿಳಿದ ಬ್ರಿಟಿಷರು ತೀವ್ರವಾಗಿ ಕಾರ್ಯಪ್ರವೃತ್ತರಾದರು. ಬಳ್ಳಾರಿ, ರಾಯಚೂರ, ಹೈದರಾಬಾದ್ ಹಾಗೂ ಧಾರವಾಡದಿಂದ ಹೊಸ ಸೈನಿಕ ತುಕಡಿಗಳು ಕೊಪ್ಪಳದತ್ತ ಧಾವಿಸಿದವು. ಮೇ ೩೧ಕ್ಕೆ ಇವೆಲ್ಲ ಕೊಪ್ಪಳ ತಲುಪಿದವು. ಭೀಮರಾಯ ನಿಗೆ ಮೊದಲು ಎಚ್ಚರಿಕೆ ಇತ್ತು, ನಂತರ ಯುದ್ಧ ಪ್ರಾರಂಭಿಸಿದರು. ಆದರೆ ನಮ್ಮ ಜನರಲ್ಲಿಯೇ ಕೆಲ ದೇಶದ್ರೋಹಿಗಳು ಕೋಟೆಬಾಗಿಲು ತೆಗೆದುಬಿಟ್ಟರು. ಭೀಮರಾಯ ಹಾಗೂ ಕೆಂಚನಗೌಡರು ಈ ಸಂಗತಿ ತಿಳಿದು ತಮಗೆ ಮೋಸವೆಸಗಿದ ದ್ವಾರಪಾಲಕರನ್ನು ತುಂಡರಿಸಿ ಬ್ರಿಟಿಷರೊಡನೆ ಯುದ್ಧ ಘೋಷಿಸಿದರು; ಕೆಲವು ತಾಸುಗಳವರೆಗೆ ಯುದ್ಧ ನಡೆಯಿತು. ಎರಡೂ ಕಡೆ ಎಷ್ಟೋ ಜನ ಮಡಿದರು. ಅಪಾರ ಹಾನಿ ಯುಂಟಾಯಿತು. ಆದರೆ ಕೋಟೆಯೊಳಗಿನ ಮದ್ದು ಗುಂಡುಗಳ ಸಂಗ್ರಹ ಮುಗಿಯುತ್ತಾ ಬಂದಿತು. ಅಂತೆಯೇ ಇವರು ತಮ್ಮ ನಿಲುವನ್ನು ಗಟ್ಟಿಯಾಗಿಸಲು ಅಸಹಾಯಕರಾದರು. ಈ ಸಮಯಕ್ಕೆ ಕೆಂಚನಗೌಡನು ಭೀಮರಾಯನ ಬಳಿ ಬಂದು ಈ ಸಮಯದಲ್ಲಿ ನಮಗುಳಿದಿರುವ ಒಂದೇ ಮಾರ್ಗವೆಂದರೆ ಪಲಾಯನ, ಇಲ್ಲವೆ ಶರಣಾಗತಿ ಎಂದನಂತೆ. ಇದನ್ನು ಕೇಳಿದ ಭೀಮರಾಯನ ಸಿಟ್ಟು ನೆತ್ತಿಗೇರಿತು. ತತ್‌ಕ್ಷಣ ಭೀಮರಾಯನು ಕೆಂಚನಗೌಡನನ್ನು ಗುಂಡಿಕ್ಕಿ ಕೊಂದು ತಾನೂ ಗುಂಡಿಟ್ಟುಕೊಂಡು ಸತ್ತನೆಂಬ ಸುದ್ದಿ ಆಗಿನ ಮೂಲಗಳಿಂದ ತಿಳಿದುಬರುತ್ತದೆ. ಯಾವ ರೀತಿ ಸೈನಿಕರು, ಸೈನ್ಯಾಧಿಕಾರಿ ಹಗ್ಸ್ ಅವರ ನೇತೃತ್ವದಲ್ಲಿ ಕಾರ್ಯಗನ್ನೆಸಗಿಹರೆಂಬುದು ಅವರ ಕಾಗದ ಪತ್ರಗಳಿಂದ ತಿಳಿಯುತ್ತದೆ.

ಭೀಮರಾಯನು ತನ್ನ ಸರ್ವಸ್ವವನ್ನೇ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಬಲಿ ಕೊಟ್ಟ ಮಹಾಧೀರ. ಒಂದು ವೇಳೆ ಸ್ವಜನ ದ್ರೋಹಿಗಳಿಂದ ವಂಚಿತನಾಗದೇ ಇದ್ದಿದ್ದರೆ, ಇಲ್ಲವೆ ರಣರಂಗದಲ್ಲಿ ಹೋರಾಡಿದ್ದರೆ ಅವನ ಶೌರ್ಯದ ಹಾಗೂ ಪರಿಶ್ರಮದ ಕಥೆ ಇನ್ನೂ ನಿಚ್ಚಳವಾಗಿ ತಿಳಿಯಬಹುದಾಗಿತ್ತು.

ಕೆ.ವೆಂ. ರಾಜಗೋಪಾಲ್

ಪಂಚವರ್ಣದ ಇತಿಹಾಸ: ಕೆಲವು ಟಿಪ್ಪಣಿಗಳು

ಟಿಪ್ಪಣಿ ೧: ಭಾರತೀಯ ಆಚರಣೆಗಳು ಮತ್ತು ಕಲೆಗಳ ವಿಚಾರದಲ್ಲಿ ಕೆಂಪು, ಬಿಳಿ, ಹಳದಿ, ಹಸಿರು ಮತ್ತು ಕಪ್ಪು (ಅಥವಾ ನೀಲಿ), ಅಂದರೆ ಇವು ಐದೂ ಪ್ರಮುಖವಾಗಿವೆ. ಮುತ್ತೈದೆ–ಎಂಬ ಆಚರಣಾ–ಕಲ್ಪನೆಯಲ್ಲಿ ಕೂಡ ಈ ಐದು ಬಣ್ಣಗಳು ಆಧಾರಭೂತವಾಗಿವೆ ಎಂದರೆ ಆಶ್ಚರ್ಯವಾಗಬಹುದು. ಇದು ಐತಿಹಾಸಿಕವಾಗಿ ತುಂಬ ಹಳೆಯದು ಎನ್ನುವುದಕ್ಕೆ ಜೈನಾಚರಣೆಗಳಲ್ಲಿ ಆಧಾರಗಳಿವೆ. ಅದರ ಬಹುಮುಖ್ಯವಾದ ತೀರ್ಥಂಕರ(೨೪)ರ ಕಲ್ಪನೆಗಳಲ್ಲಿ ಪ್ರತಿಮೆಗಳನ್ನು ಈ ಐದು ವರ್ಣಗಳಲ್ಲಿ ರಚಿಸಲಾಗಿದೆ. ಇದರ ರಚನೆಗಿಂತಲೂ ಈ ವಿಚಾರವು ಧಾರ್ಮಿಕವೂ ಹಳೆಯದೂ ಆಗಿದೆಯಷ್ಟೆ.

ಇಲ್ಲಿಯು ೨೪ ಪ್ರತಿಮೆಗಳಲ್ಲಿ ಹದಿನಾರು, ಹಳದಿ (ಯಾ ಬಂಗಾರ)ಯಾಗಿದ್ದು ಉಳಿದ ೮ರಲ್ಲಿ ಎರಡೆರಡು ಕೆಂಪು, ಹಸಿರು, ಬಿಳಿ ಮತ್ತು ಕಪ್ಪು (ಇಂದ್ರನೀಲ= ಕಡುನೀಲಿ) ಎಂದು ಹಂಚಿ ಹೋಗಿದೆ. ಇವುಗಳಿಗೆ ಶಾಸ್ತ್ರಾಧಾರವು ಸ್ಪಷ್ಟವಾಗಿಯೂ ಇರುವಂತಿದೆ.

ದಕ್ಷಿಣಕನ್ನಡ ಜಿಲ್ಲೆಯ ಸುಪ್ರಸಿದ್ಧ ಜೈನಕೇಂದ್ರವಾದ ಮೂಡಬಿದರೆಯ ಬಸದಿಗಳಲ್ಲಿ ಐತಿಹಾಸಿಕವಾಗಿ ಹಳೆಯದೆನ್ನಿಸಿಕೊಂಡಿರುವ ಬಸದಿಯನ್ನು 'ಲೆಪ್ಪದ ಬಸದಿ' ಎಂದು ಕರೆಯುತ್ತಾರೆ. ಇದರಲ್ಲಿನ ಸುಮಾರು ಎರಡೂಕಾಲು ಅಡಿ ಎತ್ತರದ ೨೪ ತೀರ್ಥಂಕರ ಪ್ರತಿಮೆಗಳಿವೆ. ಇವೆಲ್ಲಾ ಗೋಡೆಗೆ ಅಂಟಿಕೊಂಡಂತೆಯೂ ನಿಂತಿವೆ. ಇವುಗಳಲ್ಲಿ ಐದು ವರ್ಣಗಳ ಬಳಕೆಯಿದೆ. ಇದರ ಶಾಸ್ತ್ರೋಕ್ತಿಯನ್ನು ಶಾಸ್ತ್ರಸಾರ ಸಮುಚ್ಚಯದಲ್ಲೂ ಜೈನಶಿಲ್ಪಶಾಸ್ತ್ರದಲ್ಲೂ ಕಾಣಬಹುದು. ಅದರ ಸಿಂಹೇಂದ್ರ–ಎಂಬ ಅರ್ಚಕರು ಹೇಳುವಂತೆಯೂ ಇದೆ.

ಶ್ಯಾಮೌ ಪಾರ್ಶ್ವ ಸುಪಾರ್ಶ್ವ ದ್ವೌ ನೀಲಾಂಭೌ
ನೇಮಿಸುವ್ರತೌ ॥
ಚಂದ್ರ ದಸ್ತ್ರಾಸಿತೌ ಸೋಣೌ ಪದ್ಮಪೂಜ್ಯೌ
ಪರೇಪರೇ ॥೧॥
ಶೇಷಾಷೋಡಶ ಹೇಮಾಭಾಃ ಕುಮಾರಾಃ
ಪಂಚದೀಕ್ಷಕಾಃ ॥
ವಾಸುಪೂಜ್ಯಜಿನೋ ಮಲ್ಲಿನೇಮಿಃ ಪಾರ್ಶ್ವೋಥ
ಸನ್ಮತಿಃ ॥೨॥ (ಶಾ.ಸಾ.ಸ.)

ಮೂಡಬಿದರೆಯ ಹಳೆಯ ಬಸದಿಯು ಐತಿಹಾಸಿಕವಾಗಿ ಹಳೆಯದು–ಸುಮಾರು ಹತ್ತನೇ ಶತಮಾನದ್ದಿರಬಹುದು. (ಕೆಲವರು, ಜೈನರು ಇದನ್ನು ೭-೮ನೇ ಶತಮಾನದ್ದಿರಬಹುದೆನ್ನುತ್ತಾರೆ). ಈ ದಿವ್ಯದೇಹಗಳ ಪ್ರಭೆಯನ್ನು ಪಂಚವರ್ಣಗಳಲ್ಲಿ ಗುರುತಿಸಿರುವ ಶಿಲ್ಪಿಗಳು ಎಂದಿನಿಂದಲೂ ವಿಶ್ವಕರ್ಮರು. ಈ ಲೆಪ್ಪದ ಕಲೆಯನ್ನು ಇಂದಿಗೂ ಕಾಪಾಡಿಕೊಂಡು ಬಂದಿರುವವರೂ ಅವರೆ. ವಿಷ್ಣುಧರ್ಮೋತ್ತರಪುರಾಣದಲ್ಲಿ ಈ ಕಲೆಯ ವಿವರವೂ ದೊರೆಯುತ್ತದೆ. ಇದು ಭಿತ್ತಿಚಿತ್ರಗಳ ರಚನೆಗೂ ಆಧಾರವಾಗಿರುತ್ತದೆಯಷ್ಟೆ.

ಇಷ್ಟು ಹಳೆಯ ವಿಚಾರದಲ್ಲಿ, ಶಾಸ್ತ್ರದಲ್ಲಿಯೂ ಪಂಚವರ್ಣಗಳು 'ದಿವ್ಯ'ವೆಂಬ ಮುದ್ರೆಯನ್ನು ಪಡೆದಂತಿದೆ. ಇವನ್ನೇ ಭಾರತೀಯ 'ಮಿಸ್ಟಿಕ್' ವರ್ಣ

ಗಳೆಂದು ಹೇಳಬಹುದು. ಇದರ ಪರಿಣಾಮವಾಗಿ ದಕ್ಷಿಣಕನ್ನಡದ ಆಚರಣೆಗಳಲ್ಲಿ ಈ ಐದು ವರ್ಣಗಳು ಪ್ರಭಾವಯುತವಾಗಿ ಕಂಡುಬರುತ್ತಿವೆ.

ಮೊದಲಿಗೆ ನಾಗಮಂಡಲವನ್ನು ಹೇಳಬಹುದು– ಅದರ ಹಳದಿ ಪ್ರಧಾನವಾದ ದೇಹದಲ್ಲಿ ಕೆಂಪು-ಎಳೆ ಮತ್ತು ಅಂಚುಗಳಿಗೆ ಕಪ್ಪು ಕಂಡರೆ ಹಸಿರು ಮತ್ತು ಬಿಳಿ ವರ್ಣಗಳೂ ಇವೆ. ವಾಸ್ತವವಾಗಿ ಶಿಲ್ಪ–ಚಿತ್ರಗಳ ವಿಷಯದಲ್ಲಿ ಶಾಸ್ತ್ರಗಳು (ಜೈನೇತರ) ವಾಸ್ತವತೆಯನ್ನು ಗಮನಿಸಬೇಕೆಂದೇ ಹೇಳುತ್ತವೆ. ಅಗ್ನಿಪುರಾಣವು ಅಷ್ಟನಾಗಗಳನ್ನು, ಅವುಗಳ ಸಂತತಿ ಮೊದಲಾದುವನ್ನು ಹೇಳಿದರೂ ಬಣ್ಣಗಳನ್ನು ಹೇಳುವುದಿಲ್ಲ. ಸಾಮಾನ್ಯವಾಗಿ ತಿಳಿದಂತೆ ನಾಗವರ್ಣವು ರಂಗೋಲಿಯದು, ಕಾಳಿಂಗ ಮಾತ್ರ ಕಪ್ಪು ಪ್ರಕಾಶವನ್ನುಳ್ಳದು. ಹಳದಿ ಕೆಂಪು, ಬಿಳಿ–ಹಾವುಗಳಿರಲಾರವು. (ಮಣ್ಣಿನ ಬಣ್ಣಕ್ಕೆ ಬರುವ ಹಾವೂ ಇದೆಯಷ್ಟೆ). ಆದರೆ, ನಾಗಮಂಡಲದ ಆಚರಣೆಯಲ್ಲಿ ಪಂಚವರ್ಣದ ಬಳಕೆಯಿದೆ. ಆದರೆ ಶಿಲ್ಪಿ (ವೈದ್ಯರು)ಯು ಐದು ಬಗೆಯ ವರ್ಣಗಳಿಂದ ಚಿತ್ರ–ಶಿಲ್ಪವನ್ನು ರಚಿಸುತ್ತಾನೆ. ಅಲ್ಲದೆ, ಈ ಐದು ವರ್ಣಗಳೂ ಸೇರಿ ಮಂಗಳಕರವೆಂಬ ನಂಬಿಕೆ ದೃಢವಾಗಿದೆ.

ಹೀಗೆ ಪಂಚವರ್ಣದ ಆಧ್ಯಾತ್ಮಿಕ (ಮಿಸ್ಟಿಕ್) ಎನ್ನಬಹುದಾದ ನಂಬಿಕೆಯೂ ಭೂತಾರಾಧನೆಯಲ್ಲಿ ಕೂಡ ಕಂಡುಬರುತ್ತದೆ. ಯಕ್ಷಗಾನ ಬಯಲಾಟದ ಅಲಂಕರಣದಲ್ಲಿಯೂ (ದಕ್ಷಿಣಕನ್ನಡದಲ್ಲಿ) ಇಂಥ ಪ್ರಭಾವವಿರುತ್ತದೆ. ದ.ಕ.ದ. ಆಚರಣೆಗಳಲ್ಲಿ ಜೈನ ಪ್ರಭಾವವು ಸುಮಾರು ೧೦ನೇ ಶತಮಾನದಿಂದಲಾದರೂ ಇದ್ದೀತೆಂಬುದಕ್ಕೆ ಈ ಪಂಚವರ್ಣದ ವೈಖರಿಯಂತೂ ಆಧಾರವಾಗಿರುತ್ತದೆ.

ವಿಶೇಷ : ನಮ್ಮ ಕಲಾವಿದರು ಇಂದಿಗೂ ತಮ್ಮ ಪ್ರತಿಭೆಯನ್ನು 'ಸೂರೆಹೊಯ್ಯಲು' ಈ ಐದು ಬಣ್ಣಗಳು ಸಾಕಾಗುತ್ತವೆ. ನಮ್ಮ ದೇಶದ ಚಿತ್ರಕಲೆಯಲ್ಲಿ ಸುಮಾರು ೧೬೦೦ ಕ್ರಿ.ಶ.ದ ವೇಳೆಗೆ ರಚಿತವಾದುದೆಂದು ಸಕಾರಣವಾಗಿ ಗುರುತಿಸಲಾಗಿರುವ 'ಚೌರಪಂಚಾಶಿಕಾ' ಎಂಬ ೧೮ ವರ್ಣಚಿತ್ರಗಳು (ಚಿಕಣಿ ಚಿತ್ರಗಳು-ಗುಜರಾತ್) ಕಲ್ಹಣನ ರಾಜತರಂಗಿಣಿಯನ್ನು ನೆನಪಿಸುವ ಆಶಯ–ಕಥನವನ್ನು ಪರಿಶೀಲಿಸಬಹುದು. ಇವು ಭಾರತೀಯ ಸಂಪ್ರದಾಯ ಮತ್ತು ಶ್ರೇಷ್ಠ ಕಲಾಭಿವ್ಯಕ್ತಿತ್ವಕ್ಕೆ ಆಧಾರವಾಗುತ್ತವೆ. ಇಲ್ಲಿ ಸಂಕೇತಗಳೂ ಬಳಕೆಯಾಗಿವೆ. ಭಾವನೆಯ ಸ್ವಚ್ಛತೆ ಹಾಗೂ ವರ್ಣವೈಭವ–ಎರಡೂ ಮಿಳಿತವಾಗಿವೆ. ಇದರ ಪ್ರಭಾವವನ್ನು ಜೆಮಿನಿರಾಯ್‌ರ ಚಿತ್ರಗಳಲ್ಲೂ ಕಾಣಬಹುದಾಗಿದೆ. ಇಲ್ಲಿ ಜಾನಪದ ಮತ್ತು ಕ್ಲಾಸಿಕಲ್ ಅಂಶಗಳು ಪ್ರಕಾಶಿಸುತ್ತವೆ. ಇದೊಂದು ಶೃಂಗಾರಪೂರಿತ ಸಂದರ್ಭವೆಂದರೆ ಸಾಹಿತ್ಯದ ಪಂಡಿತರಿಗೂ ಆಸಕ್ತಿಯುಂಟಾಗಬಹುದು. ಇದರ ಶೈಲಿಯಲ್ಲಿ ಬಳಕೆಯಾಗಿರುವ ಬಣ್ಣಬಣ್ಣದ ಚೌಕಗಳು–ಚೌಕಟ್ಟುಗಳೂ ಸಹಜ-ಸರಳ ಸ್ವರೂಪಗಳನ್ನು ಮೀರಿದ ಆಕರ್ಷಿಸುವ ರೇಖೆಗಳೂ ಗಮನಾರ್ಹವಾಗಿವೆ.

ಈಗಂತೂ ಪಂಚವರ್ಣಗಳ ಇತಿಹಾಸವನ್ನೂ ವೈಭವವನ್ನೂ ನಾವು ಕಳೆದುಕೊಂಡಂತಾಗಿದೆ. ಅಲ್ಲದೆ ಇವು ಸಂಕೇತ-ಭಾವಗಳ ಆಶಯಗಳಾಗಿ ಉಳಿದ ಸಂಕೇತಗಳನ್ನು ಜೀವಂತಗೊಳಿಸಬಲ್ಲುವೆಂಬುದಕ್ಕೆ 'ಚೌರಪಂಚಾಶಿಕಾ'ದ ೧೮ ಚಿತ್ರಗಳು ಉದಾಹರಣೆಗಳಾಗುತ್ತವೆ. ಈ ಬಣ್ಣಗಳು ಮಂಗಳಕರವೆಂದು ಹೇಳುವುದರಲ್ಲಿಯೂ ಜೈನ ಧರ್ಮದ ನೆನಪಾಗಬಹುದಾಗಿದೆ.

ಟಿಪ್ಪಣಿ : The Devil Worship of the Tuluvas (೧೮೮೨)–ತುಳುವರ ಭೂತಾರಾಧನೆ ಎಂಬ ಈ ಕೃತಿಯು, ಹಸ್ತಪ್ರತಿಯಾಗಿ ಬಾ(ಸೆ)ಲ್ ಮಿಷನ್ ಮ್ಯೂಸಿಯಂ, ಮಂಗಳೂರು. ಇಲ್ಲಿ ಉಳಿದು ಬಂದಿದೆ. (ಇದರ ಒಂದೆರಡು ಉಪಪ್ರತಿಗಳೂ ದೊರಕುತ್ತಿವೆ. ಇಂಥದೊಂದನ್ನು ನಾನು ಉಡುಪಿಯಲ್ಲಿ ಕಾಣಲು ಸಾಧ್ಯವಾಯಿತಷ್ಟೆ.) ಇದನ್ನು ರಚಿಸಿದ A.C. ಬರ್ನೆಲ್ ಅವರು ೧೮೮೨ರಲ್ಲಿ ತೀರಿಕೊಂಡರು. ಆ ವೇಳೆಗೆ ಕೃತಿಯನ್ನು ಬಾ(ಸೆ)ಲ್ ಮಿಷನ್-ಅವರಿಗೆ ಅಚ್ಚು ಮಾಡಲು ಕಳಿಸಿದ್ದಂತೆ ತಿಳಿದುಬರುತ್ತದೆ. ಇದರಲ್ಲಿ ೩೨೫ ಹಾಳೆಗಳಿದ್ದು (ಕ್ವಾರ್ಟೋ ಬರಹದ ಹಾಳೆಗಳು) ಎರಡೂ ಕಡೆಗೂ ಬರೆದಂಥವು. ಆದುದರಿಂದ ಒಟ್ಟು ೬೫೦ ಪುಟಗಳ ವ್ಯಾಪ್ತಿಯಿದೆ. ಇದರಲ್ಲಿ ೧೦ ಬಣ್ಣದ ಹಿತ್ತಾಳೆಯ ತಗಡಿನಲ್ಲಿ ರಚಿಸಿದ ಬಣ್ಣದ ಚಿತ್ರಗಳಿದ್ದು ಅವೆಲ್ಲಾ ಭೂತದ ಚಿತ್ರಗಳಾಗಿರುವುದೇ ವಿಶೇಷ. ಅಷ್ಟನ್ನೂ ಬರ್ನೆಲ್–ರು ದೇಶಿಯ ಕಲಾವಿದರಿಂದ

ಮಾಡಿಸಿದ್ದಾರೆಯಾದರೂ ಅವರ ಹೆಸರುಗಳು ಮಾತ್ರ ದೊರಕುವಂತಿಲ್ಲ. ಇವುಗಳ ವಿವರಗಳನ್ನು (ಪುಟ ಮತ್ತು ಹೆಸರು) ಇಂಡಿಯನ್ ಆಂಟಿಕ್ವೆರಿಯ ಸಂಪಾದಕ ರಾಗಿದ್ದ ಮೇಜರ್ ಆರ್.ಸಿ. ಟೆಂಪಲ್ ಅವರು ಆ ಪತ್ರಿಕೆಯ ಇಂಡಿಯ ೨೩-೧೮೯೪ರ ವಾಲ್ಯೂಂನಲ್ಲಿ ಸೇರಿಸಿದ್ದಾರೆ. ಆಗ್ಗೆ ಈ ಭೂತಗಳ ಚಿತ್ರದ ತಗಡು ಗಳನ್ನು ಬಳಸಲು ಗ್ರಿಗ್ಸ್ ಎಂಬವರಿಂದ ಬಣ್ಣದ ಪ್ರತಿಗಳನ್ನಾಗಿ ಮಾಡಿಸಿದಾಗ ಆರು ಮಾತ್ರ ದೊರಕು ವಂತಾಗಿದೆ. ಅವುಗಳನ್ನೇ ಈಚಿನ ಇಂ.ಆನ್.ಯ ಪುನರ್ಮುದ್ರಣದಲ್ಲಿ ಕಾಣುತ್ತೇವಷ್ಟೆ.

ಈ ಗ್ರಂಥದಲ್ಲಿ ೧೮೭೨ರಷ್ಟು ಹಿಂದಿನ ಚಿತ್ರಗಳೂ ಪಾಡ್ದನಗಳೂ ಇತರ ವಿವರಗಳೂ (ಪ್ರತ್ಯಕ್ಷ ರೂಪದಲ್ಲಿ) ದೊರಕುತ್ತವೆ. ಬಬ್ಬಾತ ಕುರುಡನಾದ ಕಾಂತಾ ಎಂಬ ಪಂಬವನಿಂದ ಸಂಗ್ರಹಿಸಿದ ಪಾಡ್ದನಗಳೂ ಜೊತೆಗೆ ಸಂಗ್ರಹಿಸಿದ ೨೮ ಭೂತಗಳ ಹೆಸರುಗಳೂ (ಟಿಪ್ಪಣಿ ಸಮೇತ) ದೊರಕುತ್ತವೆ. ಇಂಥ ಸಂಗ್ರಹದಿಂದ ಆರು-೧ ತೊಡಕಿನಾರ್, ೨ ಮಂಡದೇರ್ ಕಾಲಭೈರವ, ೩ ಕೋಟಿ, ೪ ಚನ್ನಯ, ೫ ಜುಮಾದಿ ಮತ್ತು ೬ ಪಂಜುರ್ಲಿ ಫೋಟೊಪ್ರತಿ ತೆಗೆದು ನಮ್ಮ ಕಲಾವಿದರ ಗಮನಕ್ಕೆ ತರಲು ಇಲ್ಲಿ ಪ್ರಯತ್ನಿಸಲಾಗಿದೆ. ಇವುಗಳನ್ನು ಅಚ್ಚುಮಾಡಲು ಅನುಕೂಲ ಮಾಡಿಕೊಟ್ಟ ಮಹನೀಯ ಗ್ರಿಗ್ಸ್ ಯಾರೆಂಬುದು ಮಾತ್ರ ಸ್ಪಷ್ಟವಾಗಿ ದೊರಕುತ್ತಿಲ್ಲ. ಇವರೂ ಬಾ(ಸೆ)ಲ್ ಮಿಷನ್‌ಗೆ ಸೇರಿದವರಿದ್ದು ಭಾರತದಲ್ಲಿದ್ದವರೆಂದು ಊಹಿಸಲು ಸಾಧ್ಯವಿದೆ.

ಈ ಚಿತ್ರಗಳು ಪಂಚವರ್ಣಗಳಲ್ಲಿದ್ದು ಒಂದು ಶತಮಾನದ ಹಿಂದಿನವು ಎಂಬುದು ತುಂಬ ಮಹತ್ವದ ವಿಷಯವೇ ಆಗಿದೆ. ಏಕೆಂದರೆ ಈ 'ಪಂಚವರ್ಣ'ಗಳನ್ನು ತುಳುವರ ಆಚರಣೆಗಳಲ್ಲಿಯೂ ಯಕ್ಷಗಾನ ವೇಷ ಹಾಗೂ ನಾಗಮಂಡಲದ ರಚನೆಯಲ್ಲಿಯೂ ಅಲ್ಲದೆ ಭಿತ್ತಿ ಚಿತ್ರಗಳಲ್ಲಿ ಮತ್ತು ಲೆಪ್ಪದ (ಸ್ಟಕ್ಕೋ) ಪ್ರತಿಮೆ ಗಳಲ್ಲಿಯೂ ಕಾಣುತ್ತೇವೆ.

ಟಿಪ್ಪಣಿ-೩ : ಪಂಚವರ್ಣಗಳು :

೧. ಬಿಳಿ, ಕೆಂಪು, ಕಪ್ಪು, ಹಳದಿ ಮತ್ತು ಹಸಿರು (ಪಚ್ಚೆ)-ಎಂದು ೧೮೮೫ರ ನಾನಾರ್ಥ ಶಬ್ದಾವಳಿ ಮತ್ತು ಸಂಜ್ಞಾರ್ಥಗಳು ಬಾ(ಸೆ)ಲ್ ಮಿಷನ್ ಪ್ರೆಸ್ಸಿನಲ್ಲಿ ಅಚ್ಚಾಗಿದೆ. ಬಿ.ಆರ್. ಎಂಬ ಗ್ರಂಥದಲ್ಲಿ ವಿವರವಿದೆ.

೨. ಸಹಸ್ರಾರ್ಥ ವೃಕ್ಷಾದಿಗಳ ವರ್ಣನೆ-ಇದರ ಮೊದಲ ಸಂಗ್ರಹ ಪ್ರಕಟಣೆಯನ್ನು ಸಿ. ಸ್ಟೊಲ್ಜ್ ಮತ್ತು ಜಿ. ಪ್ಲೆಸ್ಟ್. ಬಾ (ಸೆ)ಲ್ ಮಿಷನ್ ಸಂಸ್ಥೆ-ಇವರು ಸಂಗ್ರಹಿಸಿ ಪ್ರಕಟಿಸಿದ್ದಾರೆ-(ಕ್ರಿ.ಶ. ೧೮೮೧). ಇದರಲ್ಲಿನ ಅನುಬಂಧ ೧೨ರಲ್ಲಿ ವರ್ಣಕ್ಕೆ ಉಪಯೋಗಿಸುವ ವೃಕ್ಷಾದಿಗಳು Dyes-ಎಂಬುದು ತುಂಬ ಉಪಯುಕ್ತವಾದುದಾಗಿದೆ :

ಅ. ಕೆಂಪುವರ್ಣ-ಪತಂಗದ ಮರ, ರಕ್ತ ಚಂದನದ ಮರ, ಮದರಂಗಿಯ ಎಲೆ, ದಾಸಾಲದ ಹೂವು, ಮಂಜಿಷ್ಠದ ಬೇರು, ಸಪ್ಪಂಗದ ಚೆಕ್ಕೆ ಮತ್ತು ಬೇರು, ಅಡಿಕೆ, ಕಚೋರಗಿಡದ ಗಡ್ಡೆ, ಚಾಯ ಬೇರು, ತಗಚೆಗಿಡದ ಬೀಜ, ಮಂಜೆಟ್ಟಿ ಮರ, ಮುತ್ತುಗದ ಬೇರು, ಹಳದಿ ಪಾವಟೆಯ ಬೇರು, ಪುನ್ನಾಗದ ಕಾಯಿ.

ಆ. ಹಳದಿ ವರ್ಣ-ಆವರಿಕೆಯ ಚೆಕ್ಕೆ, ಕೊಂದೆ ಮರದ ಚೆಕ್ಕೆ, ಮುತ್ತುಗದ ಹೂ, ಬೊಗರಿ ಮರದ ಚೆಕ್ಕೆ, ಬಂಗಾರ ಕಾಯಿ, ದೊಡ್ಡಮರದರಸಿನ, ಪಾರಿ ಜಾತದ ಹೂವು, ಸಪ್ಪಂಗದ ಬೇರು, ಅರಸಿನದ ಗಡ್ಡೆ, ಜೋಗಿಯರಳೆಯ ಕಾಯಿ, ಕರಿಜಾಲಿಯ ಚೆಕ್ಕೆ, ಕುಂಕುಮದ ಹೂವು, ಕುಸುಂಬೆ ಗಿಡದ ಹೂವು, ಜಾರಿಗೆ ಹುಳಿ, ಬಿಕ್ಕೆಗಿಡದ ಚಿಗುರು, ದೇವಗರಿಗೆಯ ಕಾಯಿ, ಹೇಣಸೆಯ ಎಲೆ.

ಇ. ನೀಲಿವರ್ಣ-ನೀಲಿಯ ಸೊಪ್ಪು, ಹಲ್ಲು ನೋವು ಮರದ ಎಲೆ (ಹಾಲೆ ಮರ-Ivory wood)

ಈ. ಹಸಿರು ವರ್ಣ-ಕೊಟ್ಲ ಗಿಡದ ಎಲೆ (ದೀಪದ ಎಣ್ಣೆಗೂ, ವಸ್ತ್ರಕ್ಕೆ ಹಸುರು ಬಣ್ಣ ಹಾಕುವುದಕ್ಕೂ ಆಗುತ್ತದೆ.)

ಉ. ಕಪ್ಪು ವರ್ಣ-ಕಾಚಿನ ಮರ, ನಸುಗುನ್ನಿ ಬಳ್ಳಿಯ ಸೊಪ್ಪು, ಅಣಲೆಕಾಯಿ, ಗೇರುಬೀಜ-ಚೆಕ್ಕೆ ಕೊಡ, ಕೊಟ್ಟಗಿಡ, ಗೇರ್ಕಾಯಿ, ಚುಬುಕು ಮರದ ಚೆಕ್ಕೆ, ನೆಲ್ಲಿ ಚೆಕ್ಕೆ, ಬಸುರಿ ಮರದ ಬೇರು, ಬಿಲಪತ್ರೆ, ಮುತ್ತುಗದ ಮರ, ಮೊಂಡುಗಳ್ಳಿ, ರತ್ನಗಂಧಿ ಮರ,

ಲೋಳಿ ಸರ(ರಸ), ವಳಾಗ್ರದ ಚೆಕ್ಕೆ–ಎಲೆಯೂ (ಕಾಡು ಬಾದಾಮಿ)

ಇವುಗಳನ್ನು ನಮ್ಮ ದೇಶಿಯ ಕಸಬುದಾರರು ಬಳಸುತ್ತಿದ್ದರೆಂಬುದಕ್ಕೆ ಅನುಮಾನವಿಲ್ಲ.

ಟಿಪ್ಪಣಿ ೪ : ಮಂಗಳದ್ರವ್ಯ ಮತ್ತು ಮಾಂಗಲ್ಯದ ವಿಷಯದಲ್ಲಿ ಒಂದು ಮುಖ್ಯಾಂಶವೆಂದರೆ, ತಾಳಿಯು ಸಹಿತ ಅರಿಶಿನ, ಕುಂಕುಮ, ಬಳೆ, ಬಿಚೋಲೆ, ತೌರುಬಣ್ಣ,=ಹಸಿರುಸೀರೆ, ಕಾಲುಂಗುರ, ಕರಿಮಣಿ ಮುಂತಾದುವು. ಬಣ್ಣವನ್ನು ಬಟ್ಟರೆ ವಸ್ತುವೇ ಬೇರೆಯಾಗಿ ಬದಲಾಗಬಹುದು. ಉದಾ : ತಾಳಿಯು ಬಂಗಾರದ್ದಾಗಿರಬೇಕು–ಎಂದರೆ ಬಂಗಾರವಿಲ್ಲದಿದ್ದರೆ ಅರಿಶಿನದ ಕೊನೆಯನ್ನು ತಾಳಿಯಾಗಿ ಪ್ರತಿನಿಧಿಸಬಹುದು. ಇಂಥ ಪದ್ಧತಿ ತುಂಬ ಹಳೆಯದೂ ಅಲ್ಲದೆ ಬಂಗಾರ ವಿಲ್ಲದವರಲ್ಲಿ ಬಳಕೆಯಿದೆ.

ಕರಿಮಣಿ–ಎಂಬುದು ಗಾಜು. ತುಂಬ ಹಳೆಯ ಪದ್ಧತಿಯ ತಯಾರಿಕೆ, ಬಳೆಯ ಹಾಗೆ. ಇದು ಬಹುಶಃ ಕಲಾಮಣಿಯ ಸರವಿದ್ದಿರಬಹುದಾಗಿದೆ. ಬುಡಕಟ್ಟು ಜನಾಂಗಗಳಲ್ಲಿ ಆಭರಣವಾಗಿ ಬಳಕೆಯಲ್ಲಿದೆ. ಕುಂಕುಮ-ಎಂಬುದು ಮೊದಲಿಗೆ ಮಣ್ಣು ! ಬಣ್ಣ ಕಟ್ಟಿದ್ದೂ ಆದೀತು. ಆಧುನಿಕರಲ್ಲಂತೂ ಇದು ಕೇವಲ ಕೆಂಪುಬಣ್ಣದ ವಸ್ತುವಾಗಿದೆ. ಆದರೂ ಮಂಗಳಕರವೆ ಹೋಗಿಲ್ಲ.

ಬಿಚ್ಚೋಲೆಯು ಈಗ ಬಂಗಾರದ ಆಭರಣ ನವರತ್ನಗಳ ಕೆತ್ತನೆಯೂ ಸೇರುತ್ತದೆ. ಸೀರೆಯು ಮೂಲತಹ ರೇಶ್ಮೆಗೂ ಮುಂಚೆ ಹಸಿರು ಗರಿಯ ಉಡಿಗೆ ಯಾಗಿದ್ದಿರಬಹುದಾದುದು. ನಾರು, ನೂಲು, ಕೃತಕ ನೂಲು-ಇತ್ಯಾದಿಗಳ ಬಳಕೆಯಲ್ಲಿ 'ಹಸಿರು' ಬಣ್ಣಕ್ಕೆ ಮಂಗಳತೆಯಿದೆ. ಆದುದರಿಂದ ಪಂಚವರ್ಣವೇ ಇವುಗಳಲ್ಲೆಲ್ಲ ಮೂಲ ಮತ್ತು ಮಂಗಳ ದ್ರವ್ಯಗಳಿಗೆ ಆಧಾರ.

ಟಿಪ್ಪಣಿ ೫: ಜೈನಧರ್ಮದಲ್ಲಿ ಪಂಚವರ್ಣಕ್ಕೆ ಪ್ರಥಮ ಸ್ಥಾನವಿದೆ. ೨೪ ತೀರ್ಥಂಕರರ ಆತ್ಮಗಳು ಸಿದ್ಧಶಿಲೆಯೇರಿಸಿದಲ್ಲಿ ಅವುಗಳನ್ನು ಪಂಚವರ್ಣಗಳಲ್ಲಿ ಗುರುತಿಸುತ್ತಾರೆ. ಮಹಾಕವಿ ಪಂಪನು ಕೂಡ ತನ್ನ ಆದಿಪುರಾಣದಲ್ಲಿ ತಿಳಿಯಪಡಿಸಿದ್ದಾನೆ.

೨. ಉಜ್ಜೈನಿಯ ಪುರಾತತ್ತ್ವ ಸಂಗ್ರಹಾಲಯ ದಲ್ಲಿ ೨೪ ತೀರ್ಥಕರರ ಚಿತ್ರಗಳನ್ನು–ಪ್ರತಿಯೊಂದು ಸಾಮಾನ್ಯ ಹೆಬ್ಬೆರಳಿನ ಅಳತೆಯಲ್ಲಿ–ಚಿತ್ರಿಸಿರುವ ಒಂದು ರಚನೆಯನ್ನು ಇರಿಸಿದ್ದಾರೆ. ಇವುಗಳಲ್ಲಿ ತೀರ್ಥಂಕರ ಹೆಸರನ್ನು ಬರೆಯಲಾಗಿದೆ. ಈ ಕಾಗದವು ತುಂಬ ಹಳೆಯದಾಗಿದ್ದು ಒರಿಸ್ಸಾದ ಚಿತ್ರಪಟಗಳ ಮಾದರಿಯದೆಂದು ಗುರುತಿಸಬಹುದಾಗಿದೆ. ಆದುದರಿಂದ ಸುಮಾರು ೧೨–೧೬ರ ಶತಮಾನಗಳ ಅಂತರದ ರಚನೆಯೆಂದು ಗುರುತಿಸಬಹುದು.

೩. ವಿವರಗಳಿಗೆ ನನ್ನ 'ಪಂಪಕವಿ (ಒಂದು ಟಿಪ್ಪಣಿ-೧೯೮೯)' ಎಂಬ ಲೇಖನವನ್ನು ನೋಡ ಬಹುದು. (ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೧.೭೪. ಜೂನ್–ಡಿಸೆಂಬರ್ ೧೯೮೯. ಆದುದರಿಂದ ಪಂಚವರ್ಣ ಗಳು ನಮ್ಮ ದೇಶದ ಧಾರ್ಮಿಕ ಹಿನ್ನೆಲೆಯಲ್ಲಿ ಅಧ್ಯಾತ್ಮಿಕ ವರ್ಣಗಳು ಅಥವಾ Mystic colour ಎಂದೂ ಇದರಿಂದಾಗಿ ನಮ್ಮ ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಕೂಡ 'ಪಂಚವರ್ಣ'ಕ್ಕೆ ಪ್ರಾಧಾನ್ಯತೆ ಬಂದಿದೆ ಎಂಬುದನ್ನೂ ಗುರುತಿಸಬಹುದು.

೪. 'ಪಂಚವರ್ಣ'ಗಳಿಗೆ ಧಾರ್ಮಿಕವಾದ ಆಧಾರವಿರುವುದರಿಂದ ಅದರ ಬಳಕೆಯು ಮಾತ್ರ ದೇವತೆಯ ಆರಾಧನೆಯಲ್ಲಿಯೂ ಬಂದಿದೆ. ಈ ವಿಷಯವನ್ನು ವಿಷದೀಕರಿಸಿದಲ್ಲಿ ಮಾತ್ರ ಮಂಗಳ ಸೂತ್ರ ಮತ್ತು ಮಂಗಳ ದ್ರವ್ಯಗಳು ಹಾಗೂ ಮುಂತ್ರೈದೆ ತನದ ಸಂಕೇತ–ಆಭರಣಗಳಲ್ಲಿ ಇದರ ಸೂತ್ರಬದ್ಧತೆ ಅಥವಾ ಪರಿಣಾಮಿಕ ಬಳಕೆಯಿದೆ.

ಟಿಪ್ಪಣಿ : ಸಾಂಖ್ಯಿಕ ಶಬ್ದಮಂಜರೀ–ಪ್ರಕಾರ ಪಂಚವರ್ಣಗಳನ್ನು ವೈದಿಕರೂ ಸ್ವೀಕರಿಸಿದ್ದಾರೆ. ಅದು 'ಪಂಚಕ'ಗಳಲ್ಲಿ ಒಂದಾಗಿದೆ. 'ಪಂಚಶೀಲದಂತೆ ಪಂಚವರ್ಣಗಳು ಐದು: ಬಿಳಿ, ಕೆಂಪು, ಅರಿಶಿನ, ಕಪ್ಪು, ಪಚ್ಚೆ ಇವು ಐದು ಬಣ್ಣಗಳು.

ಡಾ॥ ಪರಡ್ಡಿ ಮಲ್ಲಿಕಾರ್ಜುನ

ಸಂಸ್ಕೃತದಲ್ಲಿ ಕರ್ನಾಟಕೇತಿಹಾಸ ಕುರಿತ ಮಹಾಕಾವ್ಯಗಳ ಸಮೀಕ್ಷೆ

ಎ. ಬಿ. ಕೀಥ್ ಅವರು ಪ್ರಾಚೀನ ಭಾರತೀಯರಲ್ಲಿ ಇತಿಹಾಸ ಪ್ರಜ್ಞೆಯೇ ಇರಲಿಲ್ಲವೆಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಕಾರಣವನ್ನೂ ಊಹಿಸಬಹುದು. ಪ್ರಾಚೀನ ಭಾರತದಲ್ಲಿ ಇತಿಹಾಸದ ಜೊತೆ ಪೌರಾಣಿಕ ಘಟನೆಗಳು ಎಷ್ಟೊಂದು ಹಾಸುಹೊಕ್ಕಾಗಿ ಬೆರತಿವೆಯೆಂದರೆ ಅದರಲ್ಲಿ ಐತಿಹಾಸಿಕ ಸಂಗತಿಯನ್ನು ಹುಡುಕುವುದು ಇಡೀ ಬೆಟ್ಟವನ್ನು ಅಗೆದು ಒಂದು ಇಲಿಮರಿಯನ್ನು ಹುಡುಕಿ ತೆಗೆಯುವುದಕ್ಕೆ ಸಮಾನವೆನ್ನಬಹುದು. ಆದರೆ ಐತಿಹಾಸಿಕ ಕಾವ್ಯಗಳಲ್ಲಿ ಐತಿಹಾಸಿಕ ಸಂಗತಿಯನ್ನರಿಯಲು ಹೆಚ್ಚಿನ ಶ್ರಮವಾಗುತ್ತಿದ್ದು, ಸಂಸ್ಕೃತ ಕವಿಚರಿತೆಯೂ ಇದಕ್ಕೆ ಹೊರತಲ್ಲ.

ಈ ಅವಸ್ಥೆಗೆ ಅನೇಕ ಕಾರಣಗಳಿದ್ದರೂ, ಭಾರತೀಯರ ಆಧ್ಯಾತ್ಮಿಕ ದೃಷ್ಟಿಕೋಣ (ಕರ್ಮ ಸಿದ್ಧಾಂತ) ಅವುಗಳಲ್ಲೆಲ್ಲಾ ಪ್ರಮುಖ ಕಾರಣವೆನ್ನಲಡ್ಡಿಯಿಲ್ಲ. ಆದರೂ ಐತಿಹಾಸಿಕ ಪ್ರಜ್ಞೆಯೇ ಅವರಲ್ಲಿರಲಿಲ್ಲವೆಂದು ಹೇಳುವುದು ಅಷ್ಟು ಸಮಂಜಸವಾಗಲಾರದು.

ಮಹಾಭಾರತದ ಉಕ್ತಿಯೊಂದು ವೇದ ಪುರಾಣಗಳಲ್ಲಿಯೂ ಐತಿಹಾಸಿಕ ಘಟನಾವಳಿಯ ಉಲ್ಲೇಖವಿರುವುದು ಸೂಚಿಸುತ್ತದೆ. ಪುರಾಣಗಳಂತೂ ಪ್ರಾಚೀನ (ಪ್ರಾಗೈತಿಹಾಸಿಕ) ಭಾರತದ ಐತಿಹ್ಯಗಳ ಖಜಾನೆಯಾಗಿರುವುದನ್ನು ಕಾಣಬಹುದು. ಕಾಳಿದಾಸನ ಮಾಲವಿಕಾಗ್ನಿಮಿತ್ರ, ಬಾಣನ ಹರ್ಷಚರಿತ, ಹರ್ಷನ ರತ್ನಾವಳೀ, ಭಾಸನ ಪ್ರತಿಜ್ಞಾಯೌಗಂಧರಾಯಣ ಮತ್ತು ಸ್ವಪ್ನವಾಸವದತ್ತ ಮುಂತಾದ ಕೃತಿರತ್ನಗಳು ಐತಿಹಾಸಿಕ ಹಿನ್ನೆಲೆಯಲ್ಲಿ ರಚಿತವಾಗಿರುವುದನ್ನು ಮಹಾ ವಿದ್ವಾಂಸರೇ ಒಪ್ಪುತ್ತಾರೆ.

ಉಪಲಬ್ಧವಿರುವ ಐತಿಹಾಸಿಕ ಮಹಾಕಾವ್ಯಗಳ ವಿಷಯಕ್ಕೆ ಬಂದರೆ, ಮತ್ತೊಂದು ಸಮಸ್ಯೆ ಎದುರಾಗುತ್ತದೆ. ಈ ಮಹಾಕಾವ್ಯಗಳ ಕರ್ತೃಗಳು ಸ್ವಭಾವತಃ ಕವಿ ಹೃದಯದವರಾಗಿರುತ್ತಾರೆ ಅಥವಾ ಕವಿಗಳೆಂದು ಗಣಿಸಲ್ಪಡಲು ಉತ್ಸುಕರಾಗಿರುತ್ತಾರೆ. ಸಾಮಾನ್ಯವಾಗಿ ಈ ಕವಿಗಳು ರಾಜರ ಉದಾರಶ್ರಯದಲ್ಲಿದ್ದೂ ತಮ್ಮ ಕೃತಿಗಳಲ್ಲಿ ಅವರ ಅತಿರಂಜಿತ, ಅತಿಮಾನುಷ ವರ್ಣನೆಯನ್ನು ಮಾಡುವುದು ಸಹಜ. ಹಾಗಾಗಿ ಇಲ್ಲಿ ಉಕ್ತವಾದ ಘಟನೆಗಳೆಲ್ಲವೂ ಐತಿಹಾಸಿಕ ಸತ್ಯದಿಂದ ಕೂಡಿರಲೇ ಬೇಕೆಂಬ ನಿಯಮವಿಲ್ಲ.

ವಸ್ತುಸ್ಥಿತಿ ಹೀಗಿರುವಾಗ, ಮಹಾಕಾವ್ಯದ ಕರ್ತೃ ನಾಯಕನ ಸಮೀಪದ ಬಂಧುವಾಗಿದ್ದರಂತೂ ಕೇಳುವುದೇ ಬೇಡ. ಗಂಗಾದೇವಿಯ ಮಧುರಾವಿಜಯವನ್ನು ಇದಕ್ಕೊಂದು ನಿದರ್ಶನವಾಗಿ ಕೊಡಬಹುದು.

ಸಂಸ್ಕೃತವಾಙ್ಮಯದಲ್ಲಿ ಸುಮಾರು ಹನ್ನೊಂದು ಐತಿಹಾಸಿಕ ಮಹಾಕಾವ್ಯಗಳಿದ್ದು, ಅವುಗಳ ಸಂಕ್ಷಿಪ್ತ ಪರಿಚಯವಿಂತಿದೆ :

೧. ಪರಿಮಳ ಪದ್ಮಗುಪ್ತನ ನವಸಾಹಸಾಂಕ ಚರಿತವು ೧೮ ಸರ್ಗಗಳಲ್ಲಿ ಸಿಂಧುರಾಜ (ವಾಕ್ಪತಿರಾಜನ ತಮ್ಮ)ನವಸಾಹಸಾಂಕನು ನಾಗರಾಜಕನ್ಯೆ ಶಶಿಪ್ರಭೆಯನ್ನು ವರಿಸುವ ಪೌರಾಣಿಕ ಹಿನ್ನೆಲೆಯಲ್ಲಿ ಗುಜರಾತದ ಪರಮಾರ ರಾಜವಂಶದ ಇತಿಹಾಸವನ್ನು

ನಿರೂಪಿಸುತ್ತಿದ್ದು, ಕೆಲ ಐತಿಹಾಸಿಕ ಸಂಗತಿಗಳು ಉದಯಸಾಪುರ ಪ್ರಶಸ್ತಿಯಿಂದ ಪ್ರಮಾಣೀಕರಿಸಲ್ಪಟ್ಟಿವೆ. ಹತ್ತನೆಯ ಶತಮಾನದ ಕೊನೆಯ ಭಾಗ ಮತ್ತು ಹನ್ನೊಂದನೆಯ ಶತಮಾನದ ಪ್ರಾರಂಭದ ಭಾಗದಲ್ಲಿ ಅಂದರೆ ೧೦೦೫ರ ಸುಮಾರಿಗೆ ಈ ಗ್ರಂಥದ ರಚನೆಯಾಗಿರಬಹುದೆಂದು ತಿಳಿದುಬರುತ್ತದೆ.

೨. ಕಲ್ಹಣನ ರಾಜತರಂಗಿಣೀ ಗ್ರಂಥವು ೮ ತರಂಗಗಳಲ್ಲಿ ಕಾಶ್ಮೀರ ದೇಶದ ಪ್ರಾರಂಭದಿಂದ ಹಿಡಿದು ಕವಿಯ ಜೀವಿತ ಕಾಲದವರೆಗಿನ ಇತಿಹಾಸವನ್ನು ನಿರೂಪಿಸುತ್ತದೆ. ೧೨ನೆಯ ಶತಮಾನದ ಪ್ರಾರಂಭದಲ್ಲಿ ಕೃತಿ ರಚನೆಯಾಗಿರಬಹುದು.

೩. ಜಯಾನಕನ ಪೃಥ್ವೀರಾಜವಿಜಯ ಮಹಾಕಾವ್ಯವು ೧೨ ಸರ್ಗಗಳಲ್ಲಿ ೮ ಶತಮಾನದಿಂದ ೧೨ನೆಯ ಶತಮಾನದವರೆಗಿನ ಅಜಮೇರದ ಚೌಹಾನ ದೊರೆಗಳ ಇತಿಹಾಸವನ್ನು ಸಾಮಾನ್ಯವಾಗಿ, ಪೃಥ್ವೀರಾಜ ಚೌಹಾನನ ಇತಿಹಾಸವನ್ನೂ ವಿಶೇಷವಾಗಿ ನಿರೂಪಿಸುತ್ತದೆ. ರಚನಾಕಾಲ ೧೧೯೧–೧೧೯೩.

೪. ಹೇಮಚಂದ್ರಸೂರಿಯ ದ್ವ್ಯಾಶ್ರಯ ಮಹಾಕಾವ್ಯವು ಮೊದಲಿನ ೨೦ ಸರ್ಗಗಳಲ್ಲಿ ಸಂಸ್ಕೃತದಲ್ಲೂ ಉಳಿದ ೮ ಸರ್ಗಗಳಲ್ಲಿ ಪ್ರಾಕೃತದಲ್ಲೂ ರಚಿತವಾಗಿದ್ದು, ಸಂಸ್ಕೃತ ಮತ್ತು ಪ್ರಾಕೃತ ವ್ಯಾಕರಣಗಳ ನಿರೂಪಣೆಯ ಜೊತೆಗೇ ಗುಜರಾತದ ಚಾಲುಕ್ಯ ವಂಶದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ರಚನಾಕಾಲ ೧೨ನೆಯ ಶತಮಾನದ ಉತ್ತರಾರ್ಧ.

೫. ಸೋಮೇಶ್ವರ ದೇವನ ಕೀರ್ತಿಕೌಮುದಿಯು ೯ ಸರ್ಗಗಳಲ್ಲಿ ಗುಜರಾತ ಚಾಲುಕ್ಯವಂಶದ ದೊರೆಗಳ ಮಂತ್ರಿಯಾದ ವಸ್ತುಪಾಲನ ಸ್ತುತಿಯನ್ನು ಮಾಡುತ್ತಿದ್ದು, ರಚನಾ ಕಾಲ ೧೩ನೆಯ ಶತಮಾನದ ಮಧ್ಯಭಾಗವಾಗಿದೆ.

೬. ಅರಿಸಿಂಹನ ಸುಕೃತ ಸಂಕೀರ್ತನವು ೧೦ ಸರ್ಗಗಳಲ್ಲಿ ವೀರಧವಲನ ಹಾಗೂ ಅವನ ಮಗ ವೀಸಲದೇವನ ಮಂತ್ರಿಯಾದ ವಸ್ತುಪಾಲನ ಸ್ತುತಿಪರವಾಗಿದ್ದು, ಕ್ರಿ.ಶ. ೧೨೨೯ರ ಸುಮಾರಿಗೆ ಇದರ ರಚನೆಯಾಗಿದೆ.

೭. ಬಾಲಚಂದ್ರಸೂರಿಯ ವಸಂತವಿಲಾಸ ೧೪ ಸರ್ಗಗಳಲ್ಲಿ ಅದೇ ವಸ್ತುಪಾಲನ ಸ್ತುತಿಪರವಾಗಿದ್ದು, ೧೩ನೆಯ ಶತಮಾನದ ಅಂತ್ಯ ಹಾಗೂ ೧೪ನೆಯ ಶತಮಾನದ ಪ್ರಾರಂಭದಲ್ಲಿ ರಚನೆಯಾಗಿರಬೇಕು.

೮. ನಯಚಂದ್ರಸೂರಿಯ ಹಮ್ಮೀರಕಾವ್ಯವು ೧೪ ಸರ್ಗಗಳಲ್ಲಿ ಚೌಹಾನ ಅರಸರ, ವಿಶೇಷವಾಗಿ ಹಮ್ಮೀರ ದೊರೆಯ ಇತಿಹಾಸವನ್ನು ನಿರೂಪಿಸುತ್ತಿದ್ದು, ರಚನಾ ಕಾಲ ೧೪೯೪.

೯. ಬಿಲ್ಹಣನ ವಿಕ್ರಮಾಂಕದೇವಚರಿತವು ೧೮ ಸರ್ಗಗಳಲ್ಲಿ ಚಾಲುಕ್ಯ ವಂಶದ ದೊರೆಗಳ, ವಿಶೇಷವಾಗಿ ೬ನೇ ವಿಕ್ರಮಾದಿತ್ಯ ಇತಿಹಾಸವನ್ನು ನಿರೂಪಿಸುತ್ತದೆ. ೧೧ನೆಯ ಶತಮಾನದ ಉತ್ತರಾರ್ಧದಲ್ಲಿ ಇದರ ರಚನೆ.

೧೦. ಗಂಗಾದೇವಿಯ ಮಧುರಾವಿಜಯ ೮ (ಸುಬ್ರಮಣ್ಯ ಶಾಸ್ತ್ರಿಗಳ ಸಂಪಾದನೆಯಲ್ಲಿ ೯) ಸರ್ಗಗಳಲ್ಲಿ ವಿಜಯನಗರ ಇತಿಹಾಸವನ್ನು ನಿರೂಪಿಸುತ್ತದೆ. ೧೪ನೆಯ ಶತಮಾನ.

೧೧. ರಾಜನಾಥ ಡಿಂಡಿಮನ ಸಾಳುವಾಭ್ಯುದಯವು ೧೩ ಸರ್ಗಗಳಲ್ಲಿ ವಿಜಯನಗರ ರಾಜ್ಯದ ಮಹಾಂಡಲೀಕ ದೊರೆ ಸಾಳುವ ನರಸಿಂಹನ ಐತಿಹ್ಯವನ್ನು ನಿರೂಪಿಸುತ್ತದೆ. ರಚನೆ ಕ್ರಿ. ಶ. ೧೪೮೬ ಪೂರ್ವ.

ಕರ್ನಾಟಕೇತಿಹಾಸವನ್ನು ನಿರೂಪಿಸುವ ಮೂರು ಮಹಾಕಾವ್ಯಗಳೆಂದರೆ :

೧. ವಿಕ್ರಮಾಂಕದೇವ ಚರಿತಂ : ಬಾಣನಂತೆ ಬಿಲ್ಹಣನು ತನ್ನ ವಿಷಯವಾಗಿ ಸವಿಸ್ತಾರ ಮಾಹಿತಿಯನ್ನೊದಗಿಸಿದ್ದಾನೆ. ಚಾಲುಕ್ಯ ವಂಶದ ದೊರೆಗಳ ಇತಿ

ಹಾಸವಿಲ್ಲಿ ಲಿಪಿಬದ್ಧವಾಗಿರುವುದನ್ನು ಕಾಣುತ್ತೇವೆಂದರೆ ತಪ್ಪಾಗದು. ಈ ಕೃತಿಯು ಎಲ್ಲಾ ವಿವರಗಳಿಂದ ಆರನೇ ವಿಕ್ರಮಾದಿತ್ಯನು ತನ್ನ ಇಡೀ ಜೀವನವನ್ನು ಯುದ್ಧದಲ್ಲಿಯೇ ಕಳೆದು ರಾಜ್ಯದ ಸೀಮೆಯನ್ನು ವಿಸ್ತರಿಸಿ ಸ್ಥಿರಗೊಳಿಸಿದನೆಂದು ವೇದ್ಯವಾಗುತ್ತದೆ.

೨. ಮಧುರಾವಿಜಯಂ ಅಥವಾ ವೀರ ಕಂಪರಾಯಚರಿತಂ : ಕ್ರಿ.ಶ. ೧೩೬೨-೧೩೭೪ರ ಅವಧಿಯಲ್ಲಿ ರಾಜ್ಯವಾಳಿದ ವಿಜಯನಗರ ರಾಜ ಕಂಪಣನ ಮಡದಿ ಗಂಗಾದೇವಿಯು ತನ್ನ ಪತಿಯ ವಿಜಯ ಪರಂಪರೆಯನ್ನಿಲ್ಲಿ ಅತಿರಂಜಿತವಾಗಿ ವರ್ಣಿಸಿದ್ದಾಳೆ.

೩. ಸಾಳುವಾಭ್ಯುದಯ : ಅಪ್ರಕಟಿತ ಮಹಾಕಾವ್ಯದ ಕರ್ತೃ ರಾಜನಾಥ ಡಿಂಡಿಮ (ಶ್ರೀ ಅರುಣಗಿರೀಶನ ಪುತ್ರ). ಸಾಳುವ ನರಸಿಂಹನು ಸಂಗಮ ವಂಶದ ದೊರೆಗಳಾದ ಮಲ್ಲಿಕಾರ್ಜುನ, ವಿರೂಪಾಕ್ಷ ಮತ್ತು ಪ್ರೌಢದೇವರಾಯನ ಸಾಮಂತನಾಗಿದ್ದು, ಅಂತಿಮರಾಜನ ದುರ್ಬಲತೆಯಿಂದಾಗಿ ತಾನೇ ರಾಜನಾಗಿರಬಹುದೆಂದು ಊಹಿಸಬಹುದು. ಕ್ರಿ.ಶ. ೧೪೮೦ರ ಸುಮಾರಿಗೆ ಅಥವಾ ಮೊದಲು ಈ ಕೃತಿಯ ರಚನೆಯ ಸಾಧ್ಯತೆಯಿದೆ. ಏಕೆಂದರೆ ಕ್ರಿ.ಶ. ೧೪೮೬ರಲ್ಲಿ ಬರೆಯಲಾಗಿರುವ ನರಸಿಂಹ ಶಿಲಾಲೇಖನದಲ್ಲಿ ರಾಜಾಧಿರಾಜ, ರಾಜಪರಮೇಶ್ವರನೆಂದು ಕರೆಯಲ್ಪಡುವ ನರಸಿಂಹನು ಮೊದಲು ಮಹಾಮಂಡಲೇಶ್ವರ ಎಂಬ ಉಲ್ಲೇಖವನ್ನು ಕಾಣುತ್ತೇವೆ. ನರಸಿಂಹನು ವಿಜಯನಗರವನ್ನು ಆಳಿದ ಉಲ್ಲೇಖ ಕಾವ್ಯದಲ್ಲಿರುವುದಿಲ್ಲ. ಆದುದರಿಂದ ಅವನು ಚಂದ್ರಗಿರಿ (ಬೆಳಗೊಳ)ದಲ್ಲಿ ಮಾಂಡಲೀಕನಾಗಿ ಆಳುತ್ತಿರುವಾಗ ಈ ಮಹಾಕಾವ್ಯದ ರಚನೆಯಾಗಿರಬೇಕು. ದೇವುಲಪಲ್ಲಿ ಎಂಬ ಉಲ್ಲೇಖವನ್ನು ಕಾಣುತ್ತೇವೆ. ಈ ಕಾವ್ಯದಲ್ಲಿ ಸಾಳುವ ನರಸಿಂಹನು ಅನೇಕ ಅಲೌಕಿಕ ಸದ್ಗುಣಗಳ ತವರುಮನೆಯಾಗಿದ್ದನೆಂದು ವರ್ಣಿಸಲಾಗಿದೆ.

ಐತಿಹಾಸಿಕ ಘಟನೆಗಳ ನಿರೂಪಣೆಯ ಜೊತೆ ಜೊತೆಯೇ ಈ ಮಹಾಕಾವ್ಯಗಳಲ್ಲಿ ಆಗಿನ ಕಾಲದ ಸಾಮಾಜಿಕ, ಸಾಂಸ್ಕೃತಿಕ, ರಾಜನೈತಿಕ ಮುಂತಾದ ವಿಷಯಗಳ ಬಗ್ಗೆ ಅಪಾರ ಮಾಹಿತಿಯನ್ನು ಕಾಣಬಹುದು.

ಬೆಂ. ಶಾ. ಶ್ಯಾಮಲಾ ರತ್ನಕುಮಾರಿ

ರಾಷ್ಟ್ರಕೂಟರ ಕಾಲದ ಸಾಂಸ್ಕೃತಿಕ ಅಧ್ಯಯನಕ್ಕೆ ತ್ರಿವಿಕ್ರಮಭಟ್ಟನ 'ನಳಚಂಪೂ'

'ನಳಚಂಪೂ' ಅಥವಾ 'ದಮಯಂತಿ ಕಥಾ' ಸಂಸ್ಕೃತ ಭಾಷೆಯಲ್ಲಿ ರಚಿತವಾದ ಪ್ರಥಮ ಚಂಪೂ ಕಾವ್ಯ. ಇದರ ಕರ್ತೃ ಕ್ರಿ. ಶ. ೧೦ನೇ ಶತಮಾನದ ಪೂರ್ವಾರ್ಧದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಇಂದ್ರನ ಆಸ್ಥಾನಕವಿಯಾಗಿದ್ದ ತ್ರಿವಿಕ್ರಮಭಟ್ಟ. ಈತನು ಶಾಸನಕವಿಯೂ ಹೌದು. ಮೂರನೇ ಇಂದ್ರನ ಬೆಗುಮ್ರಾ ಮತ್ತು ಜಂಬಗಾಂವ್ ತಾಮ್ರಪಟಗಳ ಪಾಠವನ್ನು ತ್ರಿವಿಕ್ರಮಭಟ್ಟನೇ ರಚಿಸಿದ್ದಾನೆ. ನಾಸಿಕದ ಬಳಿ ದೊರೆತಿರುವ ತಾಮ್ರಪಟವೊಂದರಲ್ಲಿ ತ್ರಿವಿಕ್ರಮಭಟ್ಟನನ್ನು 'ಕವಿ ಚಕ್ರವರ್ತಿ' ಎಂದು ಹೇಳಲಾಗಿದೆ. ಈತನು ಶಾಂಡಿಲ್ಯಗೋತ್ರೋದ್ಭವನೂ ವೇದವಿದ್ಯಾ ವಿಶೇಷಜ್ಞ, ಆಸ್ಥಾನಕವಿ ದೇವಾದಿತ್ಯನ ಮಗನೂ ಆಗಿದ್ದನು. ತನ್ನ ತಂದೆಯ ಅನುಪಸ್ಥಿತಿಯಲ್ಲಿ ರಾಜನಿಂದ ಪರದೇಶದಿಂದಾಗಮಿಸಿದ ಪಂಡಿತನೊಡನೆ ಶಾಸ್ತ್ರಾರ್ಥಕ್ಕಾಗಿ ರಾಜನಿಂದ ಆದೇಶ ಪಡೆದನೆಂತಲೂ ಆ ಸಂದರ್ಭದಲ್ಲಿ ದೇವಿಯನ್ನಾರಾಧಿಸಿ ನಳಚಂಪೂ ರಚಿಸಿದನೆಂತಲೂ ತಂದೆಯ ಆಗಮನದೊಂದಿಗೆ ಕೃತಿರಚನೆ ಅಲ್ಲಿಗೇ ಅಪೂರ್ಣವಾಗಿ ನಿಂತಿತೆಂದೂ ತಿಳಿದುಬರುತ್ತದೆ.

'ನಳಚಂಪೂ' ಒಂದು ಪ್ರಣಯಕಾವ್ಯ, ಅಪೂರ್ಣ ಕೃತಿ. ಆದರೂ ಈ ತನ್ನ ಕಾವ್ಯದಲ್ಲಿ ರಾಷ್ಟ್ರಕೂಟರ ಕಾಲದ ಹಿಂದೂ ಸಮಾಜ ಮತ್ತು ಸಂಸ್ಕೃತಿಯ ನೈಜ ಮತ್ತು ವಿಶದವಾದ ಪ್ರತಿಬಿಂಬವನ್ನೇ ಮಂಡಿಸಿದ್ದಾನೆ ತ್ರಿವಿಕ್ರಮಭಟ್ಟ. ಇದರಲ್ಲಿ ಅತ್ಯಂತ ಪ್ರಧಾನವಾಗಿರುವ ರಾಜನ, ಮಂತ್ರಿಯ, ಪರಿವಾರದ, ಸೇನೆಯ, ವಿಹಾರದ ಸ್ವಯಂವರ ನಿಯೋಜನೆ ಹಾಗೂ ಸಾಮಾನ್ಯ ಜನಜೀವನ ಚಿತ್ರಣಗಳ ಸಂಕ್ಷಿಪ್ತ ಪರಿಚಯ ಇಂತಿದೆ :

ರಾಜ : ಪ್ರಥಮೋಚ್ಛ್ವಾಸದಲ್ಲಿಯೇ ಕಾವ್ಯ ನಾಯಕ ನಳನ ವರ್ಣನೆಯನ್ನು ಅಮೋಘವಾಗಿ ಮಾಡಿದ್ದಾನೆ ಕವಿ. ರಾಜನನ್ನು ವಿಷ್ಣುವಿಗಿಂತ ಮಿಗಿಲಾದ ಪುರುಷೋತ್ತಮನೆಂದೂ ನವಾವತಾರಿಯೆಂದೂ ವರ್ಣಿಸಲಾಗಿದೆ. ರಾಜ ನಳನ ಪಾರ್ಥಿವ ಪುಂಗವ, ಸಮಸ್ತ ಗುಣಗಳ ನಿಧಿ, ಶ್ರೇಷ್ಠರಲ್ಲಿ ಶ್ರೇಷ್ಠ. ನಳನ ಈ ವರ್ಣನೆಯಲ್ಲಿ ತನ್ನ ಪೋಷಕ ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಇಂದ್ರನ ರೂಪಗುಣಶೌರ್ಯಾದಿಗಳೂ ಅವನ ದಿಗ್ವಿಜಯ ಪ್ರವೃತ್ತಿಯೂ ದಾನಶೀಲಾದಿಗಳೂ ಧ್ವನಿತವಾಗಿವೆ.

ರಾಜ್ಯದ ಉತ್ತರಾಧಿಕಾರ, ರಾಜ್ಯಾಭಿಷೇಕ ಮುಂತಾದ ವಿಷಯಗಳ ಬಗ್ಗೆಯೂ ಮಾಹಿತಿ ಈ ಗ್ರಂಥದಲ್ಲಿ ನಮಗೆ ದೊರಕುತ್ತದೆ. ನಳನ ರಾಜ್ಯಾಭಿಷೇಕ ವರ್ಣನೆಯು ರಾಷ್ಟ್ರಕೂಟ ಮೂರನೇ ಇಂದ್ರನು ಕುರುಂದಕದಲ್ಲಿ ರಾಜ್ಯಾಭಿಷಿಕ್ತನಾದಾಗ ಆ ಮಹೋತ್ಸವದಲ್ಲಿ ತ್ರಿವಿಕ್ರಮಭಟ್ಟನು ಉಪಸ್ಥಿತನಾಗಿ ತಾನು ಕಣ್ಣಾರೆ ಕಂಡ ವಿಧಿಗಳ ನೈಜ ನಿರೂಪಣೆಯೇ ಆಗಿದೆ.

ಮಂತ್ರಿ : ರಾಜ್ಯದಲ್ಲಿ ಮಂತ್ರಿಯ ಸ್ಥಾನವು ಮಹತ್ವಪೂರ್ಣದ್ದಾಗಿತ್ತು. ಬಹುಮಟ್ಟಿಗೆ ಬ್ರಾಹ್ಮಣ

ವರ್ಣದವರನ್ನೇ ಈ ಪದವಿಗೆ ನೇಮಕ ಮಾಡಲಾಗುತ್ತಿತ್ತು. ಹುದ್ದೆ ವಂಶಪಾರಂಪರ್ಯವಾಗಿರುತ್ತಿತ್ತು. ವ್ಯಕ್ತಿಯ ಯೋಗ್ಯತೆಯೊಂದಿಗೆ ಅವನ ವರ್ಣ ಮತ್ತು ಕುಲ ಶ್ರೇಷ್ಠತೆಯನ್ನೂ ಮಂತ್ರಿ ಹುದ್ದೆಗೆ ಸಾಪೇಕ್ಷ ಅರ್ಹತೆಗಳೆಂದು ಭಾವಿಸಲಾಗಿತ್ತು. ಪ್ರಜಾಪಾಲನೆಯ ಕಾರ್ಯದಲ್ಲಿ ರಾಜನ ಸರ್ವಾಧಿಕ ಸಹಾಯಕನಾಗಿರುತ್ತಿದ್ದ. ರಾಜನ ಚಿತ್ತವೃತ್ತಿಯನ್ನು ಮಂತ್ರಿಯು ಸದಾ ಅನುಸರಿಸಬೇಕಾಗುತ್ತಿತ್ತು. ರಾಜನ ಪ್ರವೃತ್ತಿಯನ್ನು ದುಷ್ಟ ಮಾರ್ಗದಿಂದ ನಿರ್ವಹಿಸಲು ಅವನ ಮನಸ್ಸಿಗೆ ಒಪ್ಪತಕ್ಕಂತಹ ಮಾರ್ಗವನ್ನು ಅನ್ವೇಷಿಸಿ ಅವಲಂಬಿಸಬೇಕಾಗುತ್ತಿತ್ತು. ಇವೆರಡು ಕಾರ್ಯಗಳೂ ಮಂತ್ರಿಯ ಅತಿ ಗುರುತರ ಹಾಗೂ ಕಠಿಣ ಕಾರ್ಯಗಳಾಗಿರುತ್ತಿದ್ದವು.

ರಾಜ್ಯಾಭಿಷೇಕದ ಪೂರ್ವದಲ್ಲಿ ಯುವರಾಜನಿಗೆ ರಾಜಯೋಗ್ಯವಾದ ವಿವಿಧ ರೀತಿಯ ಶಿಕ್ಷಣ ನೀಡುವ ಕಾರ್ಯಭಾರವೂ ಮಂತ್ರಿಯೇ ನಿರ್ವಹಿಸುತ್ತಿದ್ದ. ರಾಜನನ್ನು ಅವನ ಎಲ್ಲ ಕಾರ್ಯಗಳಲ್ಲೂ ಎಡಬಿಡದೆ ಅನುಸರಿಸುವ ಆತ್ಮೀಯನಾದ ಅಮಾತ್ಯನಾಗಿದ್ದ. ಹೀಗೆ ತನ್ನೆಲ್ಲ ಗುಣ ಹಾಗೂ ಕಾರ್ಯಗಳಿಂದ ರಾಜನಿಗೆ ಪ್ರಾಣ ಸಮನೂ ಶರೀರಮಾತ್ರದಿಂದ ಭಿನ್ನನಾದ ಏಕಾತ್ಮನಂತೆಯೂ ಇರುತ್ತಿದ್ದ ಮಂತ್ರಿ.

ಸೇನೆ : ಸೇನೆ ರಾಜ್ಯದ ಸಪ್ತಾಂಗಗಳಲ್ಲೊಂದು. ಈ ಕಾವ್ಯದಲ್ಲಿ ಕೇವಲ ಸ್ಥಳಸೇನೆಯ ವರ್ಣನೆ ಇದೆ; ಇದರಲ್ಲಿ ವ್ಯಾಧಸೇನೆ ಹಾಗೂ ಪರಿವಾರ ಸೇನಾಪಡೆ ಪ್ರಧಾನವಾಗಿ ವರ್ಣಿತವಾಗಿದೆ. ರಾಜನ ಬಳಿ ಚತುರಂಗ ಸೇನೆಯಿದ್ದು ಅದರಲ್ಲಿ ಗಜ,ಅಶ್ವ,ರಥ ಮತ್ತು ಪದಾತಿಗಳ ಪ್ರತ್ಯೇಕ ಪಡೆಗಳು ಇದ್ದವೆಂದು ಹೇಳಲ್ಪಟ್ಟಿದೆ. ರಾಜನೇ ಸೇನೆಯ ಮುಖ್ಯಸ್ಥನಾಗಿರುತ್ತಿದ್ದ. ರಾಜನ ಆಜ್ಞೆಯಿಂದ ಸೇನಾಪತಿ ಸೈನ್ಯ ಸಂಚಾಲನೆ ಮಾಡುತ್ತಿತ್ತು. ಸೈನಿಕರ ಮುಖ್ಯ ಅಸ್ತ್ರವು ಧನುಃಷ್ಬಾಣವಾಗಿತ್ತು. ಸೇನೆ ಹೊರಡುವಾಗ ಗಜ ಮತ್ತು ಅಶ್ವಗಳನ್ನು ವಿಶೇಷವಾಗಿ ಸಿಂಗರಿಸಲಾಗುತ್ತಿತ್ತು. ಸೇನೆ ಚಲಿಸುವಾಗ ಮಾರ್ಗದಲ್ಲಿನ ಜನಗಳಿಗೆ ಆತಂಕವುಂಟಾಗುತ್ತಿತ್ತು.ಕಾರಣ ಪದಾತಿ ಸೇನೆ ಮಾರ್ಗದುದ್ದಕ್ಕೂ ಶತ್ರುಗಳಿಗೆ ಸೇರಿದ ನಗರಗಳನ್ನು ಲೂಟಿಮಾಡುತ್ತಾ ಮುಂದುವರಿಯುತ್ತಿತ್ತು. ಅಶ್ವಗಳಿಗೆ ಹುಲ್ಲು ಮತ್ತು ಗಜಗಳಿಗೆ ಸುಲಭವಾಗಿ ಕೀಳಲು ಸಾಧ್ಯವಾಗುವಂಥ ವೃಕ್ಷಗಳಿರುವೆಡೆ ಸೇನಾ ಶಿಬಿರಗಳನ್ನೇರ್ಪಡಿಸಲಾಗುತ್ತಿತ್ತು. ಶಿಬಿರದ ಸಮೀಪದ ಸರೋವರಗಳನ್ನು ಪಾಚಿ ಮುಂತಾದವುಗಳಿಂದ ದೂರೀಕರಿಸಿ ಸ್ವಚ್ಛಗೊಳಿಸಲಾಗುತ್ತಿತ್ತು. ಹಳ್ಳತಿಟ್ಟು ಭೂಮಿಯನ್ನು ಸಮಗೊಳಿಸಲಾಗುತ್ತಿತ್ತು ಹಾಗೂ ಮುಳ್ಳುಕಂಟಿಗಳನ್ನು ಸವರಿಸಲಾಗುತ್ತಿತ್ತು. ಸೇನಾಸಾಮಗ್ರಿಗಳನ್ನು ಹೊತ್ತು ಸಾಗಿಸಲು ಸೈನ್ಯದೊಂದಿಗೆ ಎತ್ತು, ಎಮ್ಮೆ, ಒಂಟೆ ಮುಂತಾದವುಗಳನ್ನೂ ಕರೆದೊಯ್ಯುತ್ತಿದ್ದರು. ಸೈನ್ಯವು ಬೀಡುಬಿಟ್ಟೆಡೆಯಲ್ಲಿ ಒಂದು ನಗರವೇ ಕಾಣುತ್ತಿತ್ತು. ಶಿಬಿರವು ಧ್ವಜಪತಾಕೆಗಳಿಂದ ಶೋಭಿಸುತ್ತಿತ್ತು. ಚರ ಚಿತ್ರಶಾಲಾ ಗೃಹಗಳೂ ಕೆಲವು ವೇಳೆ ನಿರ್ಮಿತಗೊಳ್ಳುತ್ತಿದ್ದವು. ಶಿಬಿರಗಳನ್ನು ಕೆಂಪುಬಟ್ಟೆಗಳಿಂದಲೂ ಮಂಟಪಗಳನ್ನು ಶ್ವೇತವಸ್ತ್ರಗಳಿಂದಲೂ ನಿರ್ಮಿಸಲಾಗುತ್ತಿತ್ತು.

ಸೈನಿಕರು ಕೆಲವೊಮ್ಮೆ ಪ್ರಮತ್ತತೆಯಿಂದ ವರ್ತಿಸಿ, ತಮ್ಮ ತಮ್ಮಲ್ಲೇ ಜಗಳವಾಡುವ ಸಂದರ್ಭಗಳೂ ಇರುತ್ತಿದ್ದವು. ಇಂತಹ ವೇಳೆ ತೀರ್ಥಸ್ಥಳ, ಯಜ್ಞಸ್ತಂಭ, ಉದ್ಯಾನ, ಅರಣ್ಯಗಳು, ದೇವಮಂದಿರ, ಮುನಿಕುಟೀರಗಳನ್ನು ನಾಶಗೊಳಿಸಲೂ ಹೇಸುತ್ತಿರಲಿಲ್ಲ. ಆ ಸಂದರ್ಭದಲ್ಲಿ ರಾಜನು ಅವರ ವಿನಾಶಕರ ಕೃತ್ಯಗಳನ್ನು ತಡೆಗಟ್ಟಲು ಕಟ್ಟಾಜ್ಞೆಯನ್ನೂ ಹೊರಡಿಸಬೇಕಾಗುತ್ತಿದ್ದಿತು.

ರಾಜ್ಯದಲ್ಲಿ ಬೇಟೆಗಾಗಿಯೇ ಸೈನ್ಯದ ಒಂದು ವಿಭಾಗವನ್ನು ವ್ಯವಸ್ಥೆಗೊಳಿಸಲಾಗಿತ್ತು. ಈ ವಿಭಾಗದ ಸೇನೆಯೊಂದಿಗೆ ಶ್ವಾನ(ನಾಯಿ)ಪಡೆಯೂ ಇರುತ್ತಿತ್ತು. ಧನುರ್ಬಾಣಗಳನ್ನೂ ಪಾಶಗಳನ್ನೂ ಬಲೆಗಳನ್ನೂ ಒಯ್ಯಲಾಗುತ್ತಿತ್ತು. ಸೇನೆಯನ್ನು ಗಣವೆಂಬ ತುಕಡಿಗಳಾಗಿ ವಿಭಜಿಸಲಾಗಿತ್ತು. ತುಕಡಿಯ ಮುಖ್ಯಸ್ಥನನ್ನು ಗಣಪತಿಯೆಂದು ಕರೆಯಲ್ಪಡುತ್ತಿತ್ತು.

ಈ ಸೇನಾವ್ಯವಸ್ಥೆ, ಸೇನಾಸಂಚಲನೆ ಮತ್ತು ಯುದ್ಧ ಕಟಕ(ಶಿಬಿರ)ಗಳ ನಿರ್ಮಾಣದ ವಿವರಗಳು ರಾಷ್ಟ್ರಕೂಟ ಸೇನೆಯು ದಿಗ್ವಿಜಯ ನಡೆಸಲು ಹೊರಟ ಸಂದರ್ಭದ ಚಿತ್ರಣವೇ ಆಗಿದೆ. ವ್ಯಾಧಸೇನೆ ಕರ್ನಾಟಕದ ನಿಷಧಸೇನೆಯನ್ನು ಪ್ರತಿನಿಧಿಸುತ್ತದೆ.

ಸ್ವಯಂವರ ವರ್ಣನೆ : ರಾಜವಂಶೀಯರಲ್ಲಿ ಕನ್ಯೆಯರ ಸ್ವಯಂವರ ವಿವಾಹ ಪದ್ಧತಿ ಪ್ರಚಲಿತವಿತ್ತು. ಕನ್ಯೆಯು ತನ್ನ ಮನಸ್ಸಿಗೊಪ್ಪಿದವನನ್ನು ಮಾಲೆ ಹಾಕಿ ವರಿಸುತ್ತಿದ್ದಳು. ಕೆಲವು ವೇಳೆ ಕೇವಲ ಪರಂಪರೆಯ ನಿರ್ವಾಹಕ್ಕಾಗಿ ಸ್ವಯಂವರವನ್ನೇರ್ಪಡಿಸಲಾಗುತ್ತಿತ್ತು. ಸ್ವಯಂವರಕ್ಕಾಗಿ ಕನ್ಯಾಪಿತರಾಜನು ತನ್ನ ಚತುರ ದೂತರನ್ನು ಉಡುಗೊರೆಗಳೊಂದಿಗೆ ಬೇರೆ ರಾಜರುಗಳ ಬಳಿಗೆ ಕಳುಹಿಸಿಕೊಡುತ್ತಿದ್ದನು. ರಾಜರುಗಳು ಸ್ವಯಂವರದಲ್ಲಿ ಭಾಗಿಗಳಾಗಲು ತಮ್ಮ ಮಂತ್ರಿಜನ, ಸೇನಾಪರಿವಾರ, ಸಾಮಗ್ರಿಗಳೊಂದಿಗೆ ಆಗಮಿಸುತ್ತಿದ್ದರು. ಈ ಎಲ್ಲರಿಗೂ ಕನ್ಯಾಪಿತನು ಭೋಜನ ನಿವಾಸಾದಿಗಳನ್ನು ವಿಧಿವತ್ತಾಗಿ ಏರ್ಪಡಿಸಬೇಕಿತ್ತು. ನಗರವಧುಗಳು ಅತಿಥಿಗಳ ಚಿತ್ರಗಳನ್ನು ಬರೆದುಕೊಡುತ್ತಿದ್ದರು. ಅದಕ್ಕಾಗಿ ಅವರಿಗೆ ಅತಿಥಿಗಳನ್ನು ಯಥಾವತ್ತಾಗಿ ವೀಕ್ಷಿಸಲು ಉನ್ನತ ಸ್ಥಳಗಳಲ್ಲಿ ಸೇರಲು ಏರ್ಪಡಿಸಲಾಗುತ್ತಿದ್ದು ನಗರದ ಪ್ರತಿಮನೆಯ ಮುಂದೂ ಪೂರ್ಣಕಲಶವನ್ನಿಟ್ಟು ಸ್ವಸ್ತಿಕದ ಚಿಹ್ನೆಯನ್ನು ಬರೆಯಲಾಗುತ್ತಿತ್ತು. ನಗರದ ಅಂಗನೆಯರು ವಿವಿಧ ಭೂಷಣಗಳಿಂದ ಸಜ್ಜುಗೊಂಡು ಮಂಗಳದ್ರವ್ಯ, ದೂರ್ವದಳ, ಮೊಸರು, ಹೂವುಗಳನ್ನು ಹಿಡಿದು ಮಂಗಳಗೀತೆಗಳನ್ನು ಹಾಡುತ್ತಿದ್ದರು.

ಈ ಸ್ವಯಂವರಗಳು ಹಲವು ವೇಳೆ ರಾಜರುಗಳ ನಡುವೆ ಪೈಪೋಟಿಗೂ, ವೈಮನಸ್ಯಕ್ಕೂ, ಘರ್ಷಣೆಗೂ ಎಡೆಮಾಡಿಕೊಡುತ್ತಿದ್ದವು. ಆದ್ದರಿಂದಲೇ ಕಾಲಕ್ರಮದಲ್ಲಿ ಈ ಸ್ವಯಂವರ ಪದ್ಧತಿಯು ಆಚರಣೆಯಲ್ಲಿ ತರುವುದು ವಿರಳಗೊಂಡಿತು.

ರಾಜನ ದೈನಂದಿನ ಚಟುವಟಿಕೆಗಳ ಬಗ್ಗೆಯೂ ಈ ಗ್ರಂಥದಲ್ಲಿ ಪ್ರಸ್ತಾಪವಿದೆ. ರಾಜ್ಯದ ಕೆಲವು ಅಧಿಕಾರಿಗಳನ್ನು ಉಲ್ಲೇಖ ಮಾಡಿದ್ದಾನೆ ತ್ರಿವಿಕ್ರಮಭಟ್ಟ. ಮೃಗಯಾವನ, ಕ್ರೀಡಾವನದ ಪ್ರಸ್ತಾಪವಿದ್ದು ಅದರ ಪಾಲಕರಾಗಿ ಸ್ತ್ರೀಯರನ್ನು ನೇಮಿಸಲಾಗುತ್ತಿತ್ತು. ಅವರನ್ನು ವನಪಾಲಿಕೆ ಎಂದು ಕರೆಯಲಾಗುತ್ತಿತ್ತು. ಮೃಗಯಾವನವನ್ನು ನೋಡಿಕೊಳ್ಳುವುದಕ್ಕಾಗಿ ವನಪಾಲಕರಿರುತ್ತಿದ್ದರು. ಸರಸ್ಸುಗಳನ್ನು ಸಂರಕ್ಷಿಸಲು ಸರೋವರ ಪಾಲಿಕೆಯರಿರುತ್ತಿದ್ದರು. ವೈತಾಳಿಕರು ರಾಜನ ಸ್ತುತಿಪಾಠಕರಾಗಿದ್ದರು. ಪ್ರಹರಿಗಳು, ಕುಬ್ಜಕರು, ವಾಮನಿಕರು, ದಮಯಂತಿಯ (ರಾಜಕುಮಾರಿಯ) ದೂತಿಯರು ಇವರುಗಳನ್ನೂ ಪ್ರಸ್ತಾಪಿಸಲಾಗಿದೆ.

ಜನಪದಗಳು : ತ್ರಿವಿಕ್ರಮಭಟ್ಟನು ತತ್ಕಾಲೀನವಾದ ಕೆಲವು ಪ್ರಸಿದ್ಧ ನಗರ, ಜನಪದ, ನದಿ ಮುಂತಾದುವುಗಳ ವರ್ಣನೆಯನ್ನು ಮಾಡಿದ್ದಾನೆ. ದಕ್ಷಿಣ ಭಾರತಕ್ಕೆ ಸೇರಿದ ಈ ಕವಿ ಆ ಪ್ರದೇಶದ ವಿದರ್ಭ, ಕುಂಡಿನಪುರ, ಕಂಚಿ, ಕುಂತಲ, ನಾಸಿಕ್ಯ, ನಿಷಧ ಅಲ್ಲದೆ ಪ್ರಭಾಸತೀರ್ಥ, ಕಳಿಂಗ, ಅಂಗ, ಕಾಮರೂಪ, ಗೂರ್ಜರ, ಪಾರಸಿಕ, ಮಹಾರಾಷ್ಟ್ರ, ಮಗಧ, ಮಧ್ಯದೇಶ, ಲಂಕಾ, ವಂಗ, ಮುಂತಾದ ಇತರ ರಾಜ್ಯಗಳನ್ನೂ ತಪತೀ, ನರ್ಮದಾ, ಕಾವೇರಿ, ಗೋದಾವರಿ, ಪಯೋಷ್ಣೀ (ಪೂರ್ಣಾ) ವರದಾ, ಮಂದಾಕಿನೀ ನದಿಗಳನ್ನೂ, ಗಂಧಮಾದನ, ಮಲಯ, ಮೇರು, ವಿಂಧ್ಯಾಚಲ,ಹಿಮವಾನ್ ಮುಂತಾದ ಪರ್ವತಗಳನ್ನೂ ಉಲ್ಲೇಖಿಸಿದ್ದಾನೆ.

ಅಂದಿನ ಧಾರ್ಮಿಕ ಸ್ಥಿತಿಯನ್ನು ಕುರಿತ ಮಾಹಿತಿಯೂ ಸ್ವಲ್ಪಮಟ್ಟಿಗೆ ಈ ಗ್ರಂಥದಲ್ಲಿ ಸಿಕ್ಕುತ್ತದೆ. ನಳಚಂಪೂ ಕಾವ್ಯದ ಎಲ್ಲ ಪಾತ್ರಗಳೂ ಶಿವಭಕ್ತರು. ಶಿವನ ಆರಾಧನೆಯ ನಂತರ ವಿಷ್ಣುವನ್ನು ಪೂಜಿಸಲಾಗುತ್ತಿತ್ತು. ಶಿವನ ದರ್ಶನವನ್ನು ವಿನಾಯಕ ಕಾರ್ತಿಕೇಯರ ಜೊತೆಜೊತೆಗೆ ಮಾಡುವುದನ್ನು ಅಧಿಕ ಪ್ರಶಸ್ತವೆಂದು ತಿಳಿಯಲಾಗುತ್ತಿತ್ತು. ನಳಚಂಪೂವಿನ ಪ್ರತಿಯೊಂದು ಉಚ್ಛ್ವಾಸವೂ 'ಹರಚರಣಸರೋಜದ್ವಂದ್ವ ಮುದ್ರಾಙ್ಕಮೌಲೇಃ' ಎಂದು ಕೊನೆಗೊಳ್ಳುತ್ತದೆ. ರಾಷ್ಟ್ರಕೂಟರು ಕೈಲಾಸನಾಥನಿಗೆ ದೇವಾಲಯವನ್ನು ನಿರ್ಮಿಸುವುದರ ಮೂಲಕ ಶೈವಮತವನ್ನು ಪ್ರೋತ್ಸಾಹಿಸಿದರು ಎಂಬ ಅಂಶವನ್ನೂ ಕವಿಯು ವ್ಯಕ್ತಗೊಳಿಸಿದ್ದಾನೆ.

ಬ್ರಾಹ್ಮಣರು ಷಟ್ಕರ್ಮನಿರತರಾಗಿದ್ದರು. ಅನ್ಯ

ದಾನಕ್ಕಾಗಿ ಛತ್ರಗಳನ್ನು ತೆರೆಯಲಾಗಿದ್ದಿತು. ಬ್ರಾಹ್ಮಣರಿಗೆ ತಮ್ಮ ಪಂಚಯಜ್ಞಗಳಿಗಾಗಿ(ಹೋಮ, ತರ್ಪಣ, ಬಲಿಹರಣ, ಸ್ವಾಧ್ಯಾಯ,ವೈಶ್ವದೇವ)ಅಗ್ರಹಾರಗಳನ್ನು ನೀಡಲಾಗಿದ್ದಿತು. ಕಪಿಲೆ ಗೋವುಗಳಿಗೆ ಗೋಗ್ರಾಸವನ್ನು ನೀಡುವ ಪದ್ಧತಿಯೂ ಇದ್ದಿತು. ಕಾಗೆಗಳಿಗೆ ಬಲಿಹರಣ ನೀಡಲು ಎತ್ತರವಾದ ಕಂಬಗಳನ್ನು ನೆಡಲಾಗಿದ್ದಿತು. ರಾಜರಿಂದಲೂ ವೈಶ್ವದೇವನಿಗೆ ಆಹುತಿ ಸಲ್ಲುತ್ತಿತ್ತು. ಯಜ್ಞವಿಧಿಗಳನ್ನು ನಡೆಸಲು ವೇದಾಧ್ಯಯನ ಸಂಪನ್ನರಾದ ಬ್ರಾಹ್ಮಣರನ್ನು ನೇಮಿಸಲಾಗುತ್ತಿತ್ತು ಎಂದು ಸಮಕಾಲೀನ ಧಾರ್ಮಿಕ ಸ್ಥಿತಿಯನ್ನು ವಿವರಿಸಿದ್ದಾನೆ ತ್ರಿವಿಕ್ರಮಭಟ್ಟ.

ವೇಷಭೂಷಣಗಳು : ಜನರು ಯೋಗ್ಯತೆ ಮತ್ತು ಸ್ಥಿತಿಗನುಸಾರವಾಗಿ ವೇಷಭೂಷಣಗಳನ್ನು ಧರಿಸುತ್ತಿದ್ದರು. ಬಿಳಿವಸ್ತ್ರಗಳನ್ನು ನಾಗರಿಕರು ವಿಶೇಷವಾಗಿ ಧರಿಸುತ್ತಿದ್ದರು. ರಾಜನನ್ನು ಹಿಂಬಾಲಿಸುವ ಬೇಟೆಗಾರರು ತಮ್ಮ ಕೇಶಗಳನ್ನು ಕಸರಿನ ಬಣ್ಣದ ಬಟ್ಟೆಗಳಿಂದ ಕಟ್ಟುತ್ತಿದ್ದರು. ಅಶ್ವಾರೋಹಿಗಳು ಕೆಂಪು ವಸ್ತ್ರಗಳನ್ನು ತೊಡುತ್ತಿದ್ದರು. ಸಾಮಾನ್ಯ ಜನರೂ ತಮ್ಮ ಯೋಗ್ಯತೆಗನುಸಾರವಾಗಿ ಶಿರೋಭೂಷಣ ಧರಿಸುತ್ತಿದ್ದರು. ಶ್ರೀಮಂತರ ಪರಿಚಾರಕರೂ ತಮ್ಮ ವೇಷಭೂಷಣಗಳಿಂದ ಆಕರ್ಷಣೀಯರಾಗಿದ್ದರು. ದರಿದ್ರ ಪಥಿಕರೂ ಲಂಗೋಟಿಮಾತ್ರಧಾರಿಗಳಾಗಿದ್ದರೂ ಮಣ್ಣಿನ ಮಣಿಗಳ ಮಾಲೆಗಳಿಂದ ಭೂಷಿತರಾಗಿ ಲತೆಯ ಬಳ್ಳಿಯಿಂದ ತಮ್ಮ ಕೇಶಗಳನ್ನು ಕಟ್ಟುತ್ತಿದ್ದರು. ಶ್ರೀಮಂತರೂ ಹಾಗೂ ರಾಜಪರಿವಾರದವರೂ ಚೀನಾಂಶುಕ, ಪಟ್ಟಾಂಶುಕ ಮುಂತಾದ ಪಾರದರ್ಶಕ ವಸ್ತ್ರಗಳನ್ನುಡುತ್ತಿದ್ದರು. ದಮಯಂತಿಯ ತಾಯಿ ಪ್ರಿಯಂಗುಮಂಜರಿಯು ದಮನಕ ಋಷಿಗೆ ಚೀನಾಂಶುಕ ವಸ್ತ್ರಗಳನ್ನಿತ್ತು ಗೌರವಿಸಿದಳೆಂದು ಹೇಳಿದೆ. ಈ ಚೀನಾಂಶುಕ ಮತ್ತು ಪಟ್ಟಾಂಶುಕಗಳು ಶ್ವೇತವಸನಗಳಾಗಿದ್ದವು. ಆಭರಣಗಳ, ಅಲಂಕರಣಗಳ ವಿವರಣೆಯೂ ಇದೆ.

ಭೋಜನ, ತರಕಾರಿಗಳು : ತ್ರಿವಿಕ್ರಮಭಟ್ಟನು ಪೇಯ, ಆಸ್ವಾದ್ಯ, ಆಲೇಹ್ಯ ಮತ್ತು ಕವಲ್ಯ ಎಂಬ ನಾಲ್ಕು ಬಗೆಯ ಭೋಜ್ಯಗಳನ್ನು ಹೇಳಿದ್ದಾನೆ (ಸಪ್ತಮೋಚ್ಛ್ವಾಸ, ಶ್ಲೋಕ ೧೧). ಶಾಲಿ ಮತ್ತು ಕುಸುಂಬ ಲಕ್ಕಿಗಳನ್ನು ಹೇಳಿದೆ. ಕಬ್ಬಿನ ರಸವನ್ನು ಮೆಣಸು ಏಲಕ್ಕಿಗಳೊಂದಿಗೆ ಸೇರಿಸಿ ಕುಡಿಯುತ್ತಿದ್ದರೆಂದೂ ಶಿಖರಣೀ (ಹಾಲು, ಬಾಳೆಹಣ್ಣು, ಮೊಸರು, ಏಲಕ್ಕಿ ಲವಂಗ ಪಚ್ಚಕರ್ಪೂರ ಬೆರಕೆಯ ಪಾನೀಯ) ಪೇಯವೂ ಹೇಳಲ್ಪಟ್ಟಿದೆ ದಾಕ್ಷಿಣಾತ್ಯ ಜನರು ಮಾಂಸಾಹಾರದಲ್ಲಿ ಹೆಚ್ಚು ಅಭಿರುಚಿ ಹೊಂದಿರಲಿಲ್ಲ. ಊಟವಾದ ಮೇಲೆ ತಾಂಬೂಲವನ್ನು ನೀಡಲಾಗುತ್ತಿತ್ತು. ತುಪ್ಪದ ಜಿಡ್ಡನ್ನು ತೆಗೆಯಲು ಊಟವಾದ ಬಳಿಕ ಕೈಯನ್ನು ಚಂದನದ ಧೂಳಿನಿಂದ ಉಜ್ಜಿ ತೊಳೆದುಕೊಳ್ಳಲಾಗುತ್ತಿತ್ತು. ಸ್ವಯಂವರ ಸಂದರ್ಭದಲ್ಲಿ ವರನ ಕಡೆಯ ಜನರಿಗೆ ಊಟವಾದ ಮೇಲೆ ಅತ್ಯಂತ ಭವ್ಯವಾದ ಧೋತಿ ಮತ್ತು ಶಲ್ಲೆಗಳನ್ನು ನೀಡಲಾಗುತ್ತಿತ್ತು. ಪಾಕವಿಜ್ಞಾನವು ಉನ್ನತ ದೆಸೆಯಲ್ಲಿತ್ತು. ದಮಯಂತಿ ನಳನಿಗಾಗಿ ಸ್ವಯಂ ಅಡಿಗೆ ಮಾಡಿ ಭೋಜನವನ್ನು ಕಳುಹಿಸುತ್ತಿದ್ದಳು. ಅಲ್ಲದೆ ಸೂಪಕಾರರು ಮತ್ತು ವಾಚಕವೃಂದದವರು ಬಹಳ ಮಂದಿ ಇದ್ದುದನ್ನು ಹೇಳಿದ್ದಾನೆ ತ್ರಿವಿಕ್ರಮಭಟ್ಟ.

ಲಲಿತಕಲೆ : ಲಲಿತಕಲೆಗಳಾದ ಚಿತ್ರ ಮತ್ತು ಸಂಗೀತ ಇವುಗಳ ಬಗ್ಗೆ ವಿವರಗಳಿವೆ. ಚಿತ್ರಕಲೆ ಪ್ರಗತಿ ಹೊಂದಿತ್ತು. ರಾಜಪರಿವಾರದವರೂ ಚಿತ್ರಕಲೆಯಲ್ಲಿ ಪರಿಶ್ರಮ ಹೊಂದಿದ್ದರು. ಗೋಡೆಗಳ ಮೇಲೆ ಚಿತ್ರ ಬಿಡಿಸುವುದು ವಾಡಿಕೆಯಲ್ಲಿತ್ತು. ಚಿತ್ರಕಲೆಯ ಸೂಕ್ಷ್ಮಾಂಶಗಳಾದ–ಶಿಶು, ಸಕಲ, ಸ್ವಸ್ತಿಕ, ಪ್ರವರ್ಧಮಾನ ಮತ್ತು ಸರ್ವತೋಭದ್ರಗಳನ್ನು ವಿದರ್ಭದ ರಾಜಧಾನಿ ಕುಂಡಿನಪುರದ ವರ್ಣನೆಯಲ್ಲಿ ತಿಳಿಸಿದ್ದಾನೆ. ಗ್ರಾಮ್ಯ ಸ್ತ್ರೀಯರು ಕೂಡ ಸ್ವಯಂವರಕ್ಕಾಗಿ ಆಗಮಿಸಿದ ನಳನ ಚಿತ್ರವನ್ನು ಬರೆಯಲುತ್ಸುಕರಾಗಿ ಇವನನ್ನು ತದೇಕಚಿತ್ತರಾಗಿ ನೋಡುತ್ತಿದ್ದರಂತೆ. ಮರದ ಪಟ್ಟಿಕೆಗಳ ಮೇಲೂ ಚಿತ್ರಗಳನ್ನು ಬಿಡಿಸುತ್ತಿದ್ದರು. ಇಂತಹ ಪಟ್ಟಿಕೆಗಳಿಂದಲೇ ಗೃಹವನ್ನೂ ನಿರ್ಮಿಸುತ್ತಿದ್ದರು. ಇವುಗಳನ್ನು ವಿಶೇಷವಾಗಿ ರಾಜರು ತಮ್ಮ ಶಿಬಿರ ನಿರ್ಮಾಣಕ್ಕಾಗಿ ಬಳಸುತ್ತಿದ್ದರೆಂದೂ ನಳನ ಶಿಬಿರವೂ ಇಂಥದೇ ಚಿತ್ರಗೃಹವಾಗಿತ್ತೆಂದೂ ಅದರಲ್ಲಿ ಎರಡು ಸಿಂಹಾಸನಗಳಿದ್ದು ಅವುಗಳ ಮೇಲೆ ಕರ್ನಾಟಕ ರಮ

ಣೀಯರ ಚಿತ್ರಗಳೂ, ಸಿಂಹಾಸನದ ಕೈಚಾಚುಗಳ ಮೇಲೆ ಸುಂದರ ಸರ್ಪಸಮೂಹವನ್ನೂ ಕೆತ್ತಲಾಗಿತ್ತು, ಮಣಿಗಳನ್ನೂ ಜೋಡಿಸಲಾಗಿತ್ತು.

ಎಲ್ಲ ವರ್ಗದ ಜನರೂ ಸಂಗೀತದಲ್ಲಿ ಅಭಿರುಚಿಯನ್ನು ಹೊಂದಿದ್ದರು. ಷಡ್ಜ, ಮಧ್ಯಮ ಮತ್ತು ಗಾಂಧಾರ ರಾಗಗಳಿಗೆ ಸಮಾಜದಲ್ಲಿ ಅಪಾರ ಮನ್ನಣೆಯಿತ್ತು. ವೀಣೆ, ಮೃದಂಗ, ನಗಾರಿ, ಝೂಲ ಮತ್ತು ವಂಶಿ (ಕೊಳಲು) ಈ ಕಾಲದ ಮುಖ್ಯವಾದ್ಯಗಳಾಗಿದ್ದವು.

ಡಾ॥ ಎಂ. ಎಂ. ಕಲಬುರ್ಗಿ

ದಂಡಿನ ದಾರಿ

ಶಿವಶರಣರು ಕಲ್ಯಾಣದಿಂದ ಉಳಿವೆಗೆ ಬಂದ ದಾರಿಯ ಸಮಗ್ರ ಶೋಧ ಇನ್ನೂ ನಡೆಯಬೇಕಾಗಿದೆ. ೮೦೦ ವರ್ಷ ಕಳೆದರೂ ಈ ದಾರಿಯನ್ನು ಅಕ್ಕ ಪಕ್ಕದ ಹಳ್ಳಿಯ ಜನ 'ದಂಡಿನ ದಾರಿ' ಎಂದು ನೆನಪಿಟ್ಟು ಕರೆಯುತ್ತಿರುವುದು ಅದರ ಐತಿಹಾಸಿಕ ಮಹತ್ವಕ್ಕೆ ನಿದರ್ಶನವೆನಿಸಿದೆ.

ಜನಪರ ಮೌಲ್ಯ ಸ್ಥಾಪನೆಗಾಗಿ ದನಿಯೆತ್ತಿದ ಶರಣರು, ರಾಜನ ಸೈನ್ಯದಿಂದ ಅಟ್ಟಿಸಿಕೊಂಡು ಉಳಿವೆಯವರೆಗೆ ನೆತ್ತರು ಸುರಿಸುತ್ತ ಸಾಗಿ ಬಂದ ಈ 'ಹುತಾತ್ಮರ ಹಾದಿ' ನಮ್ಮ ರಾಷ್ಟ್ರದ ಇತಿಹಾಸದಲ್ಲಿಯೇ ಒಂದು ಐತಿಹಾಸಿಕ ಮಾರ್ಗವೆನಿಸಿದೆ. ಈ ಮಾರ್ಗ ಸಂಶೋಧನೆಗೆ ಜನವದಂತಿ, ಐತಿಹಾಸಿಕ ಕುರುಹುಗಳನ್ನು ಬಿಟ್ಟರೆ ನಮಗೆ ನೆರವಾಗುವ ಸಾಹಿತ್ಯ ಕೃತಿಗಳು ನಾಲ್ಕು: ಚನ್ನಬಸವ ಪುರಾಣ, ಕಾಲಜ್ಞಾನ ವಚನ, ಶರಣಲೀಲಾಮೃತ, ರೇಚಣ್ಣನ ವಚನ.

ಇವುಗಳಲ್ಲಿ ಕಾಲಜ್ಞಾನ ವಚನವು ಕಲ್ಯಾಣ, ಗೊಡಚಿ, ಕೊಡಕೋಳ, ಮೊದಲೂರು, ತವಲೂರು, ಮುರಗೋಡ, ಮೂಗಬಸವ, ಕಾದರವಳ್ಳಿ, ಸಾಂಬ್ರಾಣಿ, ಮೇಲುಗ್ಗೆಯ ಯಲ್ಲಾಪುರ, ಉಳಿವೆ ಎಂದೂ, ಚನ್ನಬಸವಪುರಾಣವು ಕಲ್ಯಾಣ, ತೊರಗಲ್ಲು, ತಡಕೋಡ, ಕಾದರವಳ್ಳಿ, ಮುರಗೋಡ, ಉಳಿವೆಯೆಂದೂ, ಶರಣಲೀಲಾಮೃತವು ಕಲ್ಯಾಣ, ತಡಕೋಡ, ಮುರಗೋಡ, ಮೂಗಬಸವ, ಗೊಡಚಿ, ಉಳಿವೆಯೆಂದೂ, ರೇಚಣ್ಣನ ವಚನವು ಕಲ್ಯಾಣ, ಕಾದರವಳ್ಳಿ, ಮುರಗೋಡ, ಉಳಿವೆಯೆಂದೂ ಈ ದಾರಿಯ ಮೇಲಿನ ಊರುಗಳನ್ನು ಸೂಚಿಸುತ್ತವೆ. ನೋಡಲಿಕ್ಕೆ ನಾಲ್ಕು ಕೃತಿಗಳಾದರೂ ಇವು ಒದಗಿಸುವ ವಿವರ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಬಗೆಯದಾಗಿದೆ. ಇವುಗಳಲ್ಲಿ ಕಾಲಜ್ಞಾನ ವಚನವು ಕಲ್ಯಾಣದ ತರುವಾಯ ಒಮ್ಮೆಲೇ ರಾಮದುರ್ಗ ತಾಲೂಕಿನ ಗೊಡಚಿಯನ್ನೂ, ಶರಣಲೀಲಾಮೃತವು ಬೈಲಹೊಂಗಲ ತಾಲೂಕಿನ ಕಾದರವಳ್ಳಿಯನ್ನೂ, ರೇಚಣ್ಣನ ವಚನವು ಧಾರವಾಡ ತಾಲೂಕಿನ ತಡಕೋಡನ್ನೂ, ಚೆನ್ನಬಸವಪುರಾಣವು ರಾಮದುರ್ಗ ತಾಲೂಕಿನ ತೊರಗಲ್ಲನ್ನೂ ಸೂಚಿಸುತ್ತವೆ. ಹೀಗಾಗಿ ಕಲ್ಯಾಣದಿಂದ ಈ ಊರುಗಳವರೆಗೆ ಶರಣರು ಯಾವ ಯಾವ ಗ್ರಾಮಗಳ ಮೂಲಕ ಹೊರಟುಬಂದರೆಂಬ ಸೂಚನೆ ಈ ವರೆಗೂ ಲಭ್ಯವಾಗಿರಲಿಲ್ಲ. ಅಂದರೆ ಈ ದಂಡಿನದಾರಿಯ ಪೂರ್ವಾರ್ಧ ಪತ್ತೆಯಾಗಿರಲಿಲ್ಲ. ಈ ಪೂರ್ವಾರ್ಧ ದಾರಿಯನ್ನು ಸೂಚಿಸುತ್ತ ಉತ್ತರಾರ್ಧ ದಾರಿಯನ್ನು ಸ್ವಲ್ಪ ಭಿನ್ನವಾಗಿ ಹೇಳುವ 'ಉಳಿವೆಯ ಮಹಾತ್ಮೆ' ಹೆಸರಿನ ಕೃತಿಯೊಂದು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಲ್ಲಿದೆ. (ಈ ಕೃತಿಯತ್ತ ನನ್ನ ಗಮನ ಸೆಳೆದ ಡಾ. ಬಿ.ಆರ್. ಹಿರೇಮಠ ಅವರಿಗೆ ಕೃತಜ್ಞ). ಇದರ ಕರ್ತೃ ಸೋದೆಯ ಅರಸು ಸದಾಶಿವರಾಯ (೧೬೭೪-೯೭). ಬೆಳವಡಿ ಮಲ್ಲಮ್ಮನ ಸೋದರನಾದ ಇವನು ಮಹಾಶಿವಭಕ್ತನಾಗಿದ್ದನು. ತನ್ನ ಗ್ರಂಥಗಳಲ್ಲಿ "ಶ್ರೀ ಮನ್ಮಹಾವೀರಮಾಹೇಶ್ವರಾಚಾರ್ಯ ಮಳೆಯಗುರು ನಂದೀಶನ ಕರುಣ ಸಂಜಾತ" ಎಂದು ಕರೆದುಕೊಂಡಿರುವ ಈತನು, ಬನವಾಸಿಯ ಮಧುಕೇಶ್ವರ ದೇವಾಲಯಕ್ಕೆ ತ್ರಿಲೋಕ ಮಂಟಪವನ್ನು ಕಾಣಿಕೆಯಾಗಿ

ನೀಡಿದ್ದು, ಇದರ ಸುತ್ತಲೂ ಶರಣರ ವಿಗ್ರಹಗಳನ್ನು ಕಂಡರಿಸಲಾಗಿದೆ.

ಹೀಗೆ ಶರಣರ ಬಗ್ಗೆ ಅಪಾರ ಭಕ್ತಿಯುಳ್ಳ ಈತನ 'ಉಳಿವೆ ಮಾಹಾತ್ಮೆ' ಶರಣರು ಕಲ್ಯಾಣದಿಂದ ಉಳಿವೆಗೆ ಬಂದ ದಾರಿಯ ಮೇಲಿನ ಊರುಗಳನ್ನು ಹೀಗೆ ಹೇಳುತ್ತದೆ : ಕಲ್ಯಾಣ–ಪರವತಾಬಾದ (ಗುಲಬರ್ಗಾ ತಾಲೂಕು)–ಪೇರಜಾಬಾದ (=ಫಿರೋಜಾಬಾದ ಗುಲಬರ್ಗಾ ತಾ.)–ಕೋಳಕೂರ (ಜೇವರಗಿ ತಾ.)–ಬಡದಳ (ತಾಲೂಕು ?), ಸತ್ತಿಗ್ಗೆರೆ (ಸವದತ್ತಿ ತಾ.)–ಮುರಗೋಡ (ಸವದತ್ತಿ ತಾ.) ಹುಬ್ಬಳ್ಳಿ–ಬಂಕಾಪುರ–ಹಾನಗಲ್ಲ–ಮುಳುಗೆ (=ಮಳಗಿ, ಮುಂಡಗೋಡ ತಾ.)–ಜಾಂಗಲಿಕ್ಷೇತ್ರ (=ಜಗಳಬೆಟ್ಟ ? ಸೂಪಾ ತಾ.)–ಸೋದೆ (=ಸೊಂದಾ, ಸಿರ್ಸಿ ತಾ.)–ತುಂಬೆಬೀಡು (ಯಲ್ಲಾಪೂರ ತಾ.) ಯಲ್ಲಾಪೂರ–ಬೆನಕನ ಘಟ್ಟ (ಯಲ್ಲಾಪೂರ ತಾ.) ಅಂಜನಾನದಿ (=ಕಾಳಿನದಿ)–ಮಲ್ಲಾಪೂರ (ತಾ?), ಜನಿಪರ್ವತ (ತಾ?)–ಬಿದುರೆಪುರ (=ಬಿದರಹಳ್ಳಿ ಯಲ್ಲಾಪೂರ ತಾ.)–ಹೆಬ್ಬಾಳ ಪಳ್ಳಿ (=ಹೆಬ್ಬಳ್ಳಿ, ಸಿರ್ಸಿ ತಾ.)–ಉಳಿವೆ (ಸೂಪಾ ತಾ.) ಹೀಗೆ ವಿವರಗಳನ್ನು ನೀಡುವ ಈ ಕೃತಿಯ ಮೂಲಕ ದಂಡಿನದಾರಿಯ ಪೂರ್ವಾರ್ಧದ ಕೆಲವು ಗ್ರಾಮಗಳು ಪ್ರಥಮ ಸಲ ತಿಳಿದುಬರುತ್ತವೆ. ಗುಲಬರ್ಗಾ ಜಿಲ್ಲೆಗೆ ಸಂಬಂಧಿಸಿದ ಪರ್ವತಾಬಾದ, ಫಿರೋಜಾಬಾದ, ಕೋಳಕೂರ, ಬಡದಳ ಈ ಗ್ರಾಮಗಳಲ್ಲಿ, ಅದೇರೀತಿ ಮುಂದಿನ ಗ್ರಾಮಗಳಲ್ಲಿ ಶೋಧ ನಡೆಯಬೇಕಾಗಿದೆ.

ಸೋದೆಯ ಅರಸರು ಉಳಿವೆಯ ಪರಮ ಭಕ್ತರು. 'ಉಳಿವೆ ಚೆನ್ನಬಸವೇಶ್ವರನ ವಾರ್ಧಕ' ಹೆಸರಿನ ಅಪ್ರಕಟಿತ ಕೃತಿಯಲ್ಲಿ ಇವರು ಚೆನ್ನಬಸವೇಶ್ವರನ ಜಾತ್ರೆ ನಡೆಸುತ್ತಿದ್ದುದನ್ನು 'ಸುಧಾಪುರದರಸು ಮಾಳ್ಪ ಬಂಧುರ ಬಸವೇಶ್ವರನುತ್ಸವ' ಎಂಬ ಮಾತಿನ ಮೂಲಕ ಸೂಚಿಸಲಾಗಿದೆ. ಹೀಗೆ ಶರಣರ ಬಗ್ಗೆ, ಉಳಿವೆ ಬಗ್ಗೆ ವಿಶೇಷ ಭಕ್ತಿಯುಳ್ಳ ಈ ರಾಜಮನೆತನದ ಸದಾಶಿವರಾಯ ಹೇಳುವ ಈ ಗ್ರಾಮಗಳನ್ನು ನಾವು ನಂಬಬಹುದಾಗಿದೆ. ಈಗ ಈ ಎಲ್ಲ ಕೃತಿಗಳಲ್ಲಿ ಸೂಚಿತವಾದ ಗ್ರಾಮಗಳಲ್ಲಿ ಶೋಧ ನಡೆಸಿ, ದಂಡಿನದಾರಿಯನ್ನು ಇನ್ನೂ ಸ್ಪಷ್ಟವಾಗಿ, ಸಮಗ್ರವಾಗಿ ಗುರುತಿಸಬೇಕಾಗಿದೆ.

ಸಿ. ನಾಗಭೂಷಣ

ಇತಿಹಾಸದ ಅಧ್ಯಯನಕ್ಕೆ ಶಾಸನ-ಕಾವ್ಯ-ಸ್ಥಳಪುರಾಣಗಳ ಸಮನ್ವಯ

ಶಾಸನ-ಕಾವ್ಯ-ಪುರಾಣಗಳಲ್ಲಿ ವ್ಯತ್ಯಾಸವಿದ್ದರೂ, ಇತಿಹಾಸದ ಅಧ್ಯಯನಕ್ಕೆ ಒಂದಕ್ಕೊಂದು ಪರಸ್ಪರ ಪೂರಕಗಳಾಗಿವೆಯೇ ಹೊರತು ವಿರುದ್ಧಗಳಾಗಿಲ್ಲ ಎಂಬುದನ್ನು ಏಕಾಂತ ರಾಮಯ್ಯ ಮತ್ತು ಆದಯ್ಯರನ್ನು ನಿದರ್ಶನವಾಗಿಟ್ಟುಕೊಂಡು ಇಲ್ಲಿ ವಿವೇಚಿಸಲಾಗಿದೆ. ಒಂದರಲ್ಲಿನ ಕೊರತೆಯನ್ನು ನಾವು ಮತ್ತೊಂದರಿಂದ ತುಂಬಿಕೊಳ್ಳಬಹುದು ಎಂಬುದನ್ನು ಇಲ್ಲಿ ಸೂಚಿಸಲಾಗಿದೆ.

ಏಕಾಂತರಾಮಯ್ಯನನ್ನು ಕುರಿತು ಅಬ್ಬಲೂರು ಶಾಸನ, ಹರಿಹರನ ಏಕಾಂತ ರಾಮಿತಂದೆಗಳ ರಗಳೆ, ಶಾಂತ ನಿರಂಜನನ ಅಬ್ಬಲೂರು ಚರಿತೆ ಪುರಾಣಗಳು ಆತನ ಸಮಗ್ರ ಚಿತ್ರಣಕ್ಕೆ ಪರಸ್ಪರ ನೆರವಾಗಿವೆ. ಏಕಾಂತ ರಾಮಯ್ಯನಿಗೆ ಜೈನರ ವಿರುದ್ಧ ಪ್ರಾಣವನ್ನಾದರೂ ಒಡ್ಡಿ ಶೈವಧರ್ಮವನ್ನು ಉದ್ಧರಿಸು ಎಂಬ ಶಾಸನದಲ್ಲಿ ಬಂದಿರುವ ಹೇಳಿಕೆಗಿಂತ ಅಬ್ಬಲೂರು ಚರಿತೆ(ಪುರಾಣ)ದಲ್ಲಿ ಬಂದಿರುವ ಹೇಳಿಕೆಯು ಇತಿಹಾಸಕ್ಕೆ ಸಮೀಪವಾಗಿದೆ ಎಂದೆನಿಸುತ್ತದೆ.

ಶಾಸನ ಮತ್ತು ಪುರಾಣಗಳಲ್ಲಿ ವ್ಯಕ್ತವಾಗಿರುವ ಹೇಳಿಕೆಗಳಲ್ಲಿ, ಶಾಸನದಲ್ಲಿನ ಹೇಳಿಕೆ ದಂತಕಥೆಯಂತೆ ಕಂಡುಬಂದರೆ, ಪುರಾಣದಲ್ಲಿ ಬಂದಿರುವ ಹೇಳಿಕೆ ಇತಿಹಾಸದ ಸನ್ನಿಹದಲ್ಲಿದೆ ಎಂದೆನಿಸುತ್ತದೆ,

ಏಕಾಂತ ರಾಮಯ್ಯನು ಬ್ರಹ್ಮೇಶ್ವರದೇವಾಲಯದಲ್ಲಿ ಜೈನರ ವಿರುದ್ಧ ಪಣ ತೊಡಲು ಪ್ರೇರಕವಾದ ಕಾರಣಗಳನ್ನು ಶಾಸನ–ಕಾವ್ಯ ಸ್ಥಳಪುರಾಣಗಳು ಬೇರೆ ಬೇರೆ ರೀತಿಯಲ್ಲಿ ಪ್ರತಿಪಾದಿಸಿದ್ದರೂ ಅವುಗಳ ಮೂಲ ಉದ್ದೇಶ್ಯ ಒಂದೇ ಎಂಬುದನ್ನು ನಾವು ಮರೆಯುವಂತಿಲ್ಲ.

ಏಕಾಂತದ ರಾಮಯ್ಯನು ಜೈನರ ವಿರುದ್ಧ ಪಣತೊಟ್ಟಾಗ, ಜೈನ ಪ್ರಮುಖರು ಖುದ್ದಾಗಿ ಬಂದು ಪಣದ ವ್ರತವನ್ನು ಒಪ್ಪಿ ಅದರಂತೆ ನಡೆಯುವುದಾಗಿ ಹಠತೊಟ್ಟರು. ಆ ಜೈನ ಪ್ರಮುಖರ ಹೆಸರುಗಳು ಶಾಸನ ಕಾವ್ಯಗಳಲ್ಲಿ ಕಂಡುಬಾರದೆ, ಅಬ್ಬಲೂರು ಚರಿತೆಯಲ್ಲಿ ಮಾತ್ರ ಕಂಡುಬರುತ್ತವೆ. ಅವರುಗಳ ಹೆಸರುಗಳು ಕ್ರಮವಾಗಿ ಪರಮಹಂಸ, ಪಾಯಣ್ಣ, ಪದ್ಮಣ್ಣ, ಹೂವಣ್ಣ, ತೀರ್ಥಣ್ಣ ಇತ್ಯಾದಿ. ಅಗ್ಘವಣೆಯ ಹೊನ್ನಿತಂದೆ ರಾಮಯ್ಯನ ರುಂಡವನ್ನು ಹೊತ್ತುಕೊಂಡು ಶೈವಕ್ಷೇತ್ರಗಳನ್ನು ಸಂದರ್ಶಿಸಿ ನಂತರ ಅಬ್ಬಲೂರಿಗೆ ಬಂದ ಹೆಚ್ಚಿನ ವಿವರ ಶಾಸನಕ್ಕಿಂತ ಹೆಚ್ಚಾಗಿ ಕಾವ್ಯ ಮತ್ತು ಪುರಾಣಗಳಲ್ಲಿ ಕಂಡುಬರುತ್ತದೆ. ಆ ಎರಡು ಕೃತಿಗಳು ಆ ಶೈವಕ್ಷೇತ್ರಗಳ ಹೆಸರನ್ನು ಉಲ್ಲೇಖಿಸಿದೆ. ಅವುಗಳೆಂದರೆ "ಅಣ್ಣಿಗೆರೆಯ ಅಮೃತ ನಾಥ, ಕೆಂಭಾವಿಭೋಗನಾಥ, ಕಪ್ಪಡಿಯ ಸಂಗಮೇಶ್ವರ, ಸೊನ್ನಲಿಗೆ ಸಿದ್ಧರಾಮ(?), ಆವುಂಡದ ನಾಗನಾಥ, ಹಂಪೆಯ ವಿರೂಪಾಕ್ಷ, ಹುಲಿಗೆರೆ ಸೋಮನಾಥ. ಅಂದಿಗೆ ಆ ಏಳು ಸ್ಥಳಗಳು ಶೈವಕ್ಷೇತ್ರಗಳಾಗಿದ್ದವು ಎಂಬುದಕ್ಕೆ ಶಾಸನಕ್ಕಿಂತ ಕಾವ್ಯ ಪುರಾಣಗಳಲ್ಲಿ ಹೆಚ್ಚಿನ ಆಧಾರ ದೊರೆಯುತ್ತದೆ.

ಏಕಾಂತ ರಾಮಯ್ಯನು ತನ್ನ ರುಂಡವನ್ನು ಖಡ್ಗ

ದಿಂದ ಹುಲ್ಲಕಟ್ಟನರಿದಂತೆ ಅತಿ ಸುಲಭದಿಂದ ಇರಿದು ಕೊಂಡನೆಂದು ಶಾಸನದಲ್ಲಿ ಹೇಳಿದರೆ, ಅಬ್ಬಲೂರು ಚರಿತೆಯಲ್ಲಿ ರಾಮಯ್ಯನು 'ಗಂಡಗತ್ತರಿ'ಯನ್ನು ಕಟ್ಟಿಸಿ ಕೊಂಡು ಕಾಲು ಚಾಚಿದ ರುಂಡ ಕತ್ತರಿಸಿ ಬಿದ್ದಿತೆಂದು ಹೇಳಲಾಗಿದೆ. ಪುರಾಣದಲ್ಲಿ ವ್ಯಕ್ತವಾಗಿರುವ ವಿಶೇಷ ಆಯುಧ ಪ್ರಕಾರವಾದ ಗಂಡಗತ್ತರಿಯು (ವೀರ) ಶರಣರು ಬಲಿ ಹೋಗಲು ಬಳಸುತ್ತಿದ್ದರು ಎಂಬುದರ ಕುರುಹು ಆಗಿದೆ.

ಚಿಕ್ಕೇಶ ಗುರುವಿನ ಪ್ರಸ್ತಾಪ ಅಬ್ಬಲೂರು ಚರಿತೆ, ವೀರಶೈವಾಮೃತ ಮಹಾಪುರಾಣ, ಸಿದ್ದೇಶ್ವರ ಪುರಾಣದಲ್ಲಿ ವ್ಯಕ್ತವಾಗಿದೆ. ಅಂತರವಳ್ಳಿಯಲ್ಲಿ ಈತನ ವಿಗ್ರಹವಿದೆ. ಅಬ್ಬಲೂರು ಚರಿತದಲ್ಲಿ ಏಕಾಂತ ರಾಮಯ್ಯನು ತನ್ನ ಘನಕಾರ್ಯದಲ್ಲಿ ಯಶಸ್ವಿಯಾಗಲು ರಾಮಯ್ಯನ ಶಿರವನ್ನು ಶೈವಕ್ಷೇತ್ರಗಳಲ್ಲಿ ಹೊತ್ತುತಂದ ಹೊನ್ನಿತಂದೆಗಳು ಅಂತರವಳ್ಳಿಯಲ್ಲಿದ್ದ ಪಂಚಬ್ರಹ್ಮ ಮಠದ ಚಿಕ್ಕೇಶಯತಿಯನ್ನು ಕಾಣುತ್ತಾರೆ. ರಾಮಯ್ಯನ ಪಣದ ವಿವರವನ್ನು ತಿಳಿಸಿ, ಈದಿನ ಕೊನೆಯ ದಿನ, ಅಸ್ತಂಗತನಾಗುವ ಸೂರ್ಯನನ್ನು ತಡೆಹಿಡಿದು ಈ ಕಾರ್ಯದಲ್ಲಿ ರಾಮಯ್ಯನು ಜಯಶೀಲನಾಗುವಂತೆ ಮಾಡಬೇಕೆಂದು ಬೇಡಿಕೊಂಡರು. ಚಿಕ್ಕೇಶ ಗುರುವು ಸೂರ್ಯನನ್ನು ಕರೆದು ಮೂಜು ಜಾವ ತಡ ಮಾಡಿ ಮುಳುಗಲು ಆಜ್ಞೆ ನೀಡಿದ. ರಾಮಯ್ಯ ತನ್ನ ಕಾರ್ಯದಲ್ಲಿ ಜಯಶೀಲನಾದ. ಜನತೆ ಚಿಕ್ಕೇಶನನ್ನು ಮೂಜುಜಾವಿದೇವ ಎಂದು ಕೀರ್ತಿಸಿದರು ಎಂಬ ವಿವರ ಬರುತ್ತದೆ. ಬಿಜ್ಜಳಿನಿಂದ ಏಕಾಂತರಾಮಯ್ಯನು ದೂಪದಹಳ್ಳಿ, ಅಬ್ಬಲೂರು, ಭೋಗಾವಿ, ದೀಪದಹಳ್ಳಿ, ನೂಲ್ಗೇರಿಗಳನ್ನು ದತ್ತಿ ಪಡೆದಂತೆ ಚಿಕ್ಕೇಶಗುರುವು ಬಿಜ್ಜಳ ಭೂಪನಿಂದ ಅಂತರವಳ್ಳಿ, ಆಲದಕಟ್ಟೆ, ಹಲಿಗೇರಿ, ಸುಂಕಾಪುರ, ಮಾಗೋಡು, ನಿಟ್ಟೂರು ಪಡೆದನೆಂದು ಈ ಪುರಾಣದ ವಿವರದಲ್ಲಿ ಇದೆ. ಈ ಚಿಕ್ಕೇಶ ಅಥವಾ ಮೂಜುಜಾವಿದೇವನ ಉಲ್ಲೇಖ ಹಿರೇಮಂಗಲಗೇರಿ ಶಾಸನ (ಕ್ರಿ.ಶ. ೧೦೫೯) ರಟ್ಟಹಳ್ಳಿಯ ಶಾಸನ (ಕ್ರಿ.ಶ. ೧೧೭೪) ರಟ್ಟಹಳ್ಳಿಯ ಮತ್ತೊಂದು ಶಾಸನ (ಕ್ರಿ.ಶ. ೧೨೩೮)ಗಳಲ್ಲಿದೆ. ಈ ಮೂರರಲ್ಲಿಯೂ ಉಲ್ಲೇಖಿಗೊಂಡಿರುವ 'ಮೂರು ಜಾವುದಯ್ಯನು' ಒಬ್ಬನಾಗಿರದೆ ಅದೇ ಹೆಸರುಳ್ಳ ಮೂರು ಜನರಿದ್ದಿರ ಬೇಕು. ಏಕಾಂತ ರಾಮಯ್ಯನ ಕಾಲದಲ್ಲಿ ಬಂದಿರುವ ಮೊಜುಜಾವುದ ದೇವನು ರಟ್ಟಹಳ್ಳಿಯ ಕ್ರಿ.ಶ ೧೧೭೪ರ ಶಾಸನೋಕ್ತನಿರಬಹುದೆಂದು ತೋರುತ್ತದೆ. ಪುರಾಣದಲ್ಲಿ ವ್ಯಕ್ತವಾಗಿರುವ ಚಿಕ್ಕೇಶ ಅಥವಾ ಮೊಜುಜಾವುದ ದೇವನು ಐತಿಹಾಸಿಕ ವ್ಯಕ್ತಿ ಎಂಬುದನ್ನು ಪೂರಕ ಶಾಸನಗಳಿಂದ ಸಮರ್ಥಿಸಬಹುದಾಗಿದೆ.

ಏಕಾಂತ ರಾಮಯ್ಯನ ಸಮಕಾಲೀನನೇ ಆದ ಆದಯ್ಯನನ್ನು ಕುರಿತು ಶಾಸನ ಕಾವ್ಯ ಸ್ಥಳಪುರಾಣಗಳ ಸಮನ್ವಯವು ಪರಿಪೂರ್ಣವಾದ ಅಧ್ಯಯನಕ್ಕೆ ನೆರವಾಗಿರುವುದನ್ನು ಇಲ್ಲಿ ಗುರುತಿಸಲಾಗಿದೆ.

ಪುಲಿಗೆರೆಯಲ್ಲಿ ಸೌರಾಷ್ಟ್ರದ ಸೋಮೇಶ್ವರನನ್ನು ಆದಯ್ಯನು ತಂದು ಪ್ರತಿಷ್ಠಾಪಿಸಿದ ವಿವರಗಳಿಗೆ ಹರಿಹರನ ಆದಯ್ಯನ ರಗಳೆ ಕೃತಿಯನ್ನನ್ನುಸರಿಸಿ ರಚಿತವಾದ ಕಾವ್ಯಗಳನ್ನು ಹಾಗೂ ಪಾಲ್ಕುರಿಕೆ ಸೋಮನಾಥನ (ತೆಲುಗು) ಬಸವಪುರಾಣದ ಪರಂಪರೆಯಲ್ಲಿ ಕನ್ನಡದಲ್ಲಿ ರಚಿತವಾದ ವೀರಶೈವ ಪುರಾಣಗಳನ್ನು ಅವಲಂಬಿಸಬೇಕಾಗಿದೆ. ಶಾಸನಗಳು ಆದಯ್ಯನನ್ನು ಕುರಿತು ಅಷ್ಟಾಗಿ ಕಂಡುಬರುತ್ತಿಲ್ಲವಾದ್ದರಿಂದ ಆನುಷಂಗಿಕ ಸಾಮಾಗ್ರಿಗಳಿಂದ ಕಾವ್ಯ ಪುರಾಣಗಳಲ್ಲಿನ ವಿವರಗಳಲ್ಲಿ ಆದಯ್ಯನ ಚರಿತ್ರೆಗೆ ಸಂಬಂಧಿಸಿದ ಎಳೆಗಳನ್ನು ಬಿಡಿಸಬೇಕಾಗಿದೆ. ಪುಲಿಗೆರೆಯಲ್ಲಿ ದೊರೆಯುವ ಶಾಸನಗಳಲ್ಲಿ ಆದಯ್ಯನು ತಂದು ಪ್ರತಿಷ್ಠಾಪಿಸಿದ ಸೋಮನಾಥನ ವಿವರದ ಬಗೆಗೆ ಉಲ್ಲೇಖವಿರದೆ ಕೇವಲ ಸೋಮೇಶ್ವರ ದೇವಾಲಯದ ಹೆಸರು ಮತ್ತು ಸ್ಥಾನಾಚಾರ್ಯರ ಬಗೆಗೆ ಮಾತ್ರ ಉಲ್ಲೇಖವಿದೆ.[1] ಬಳ್ಳಿಗಾವೆಯ ಕ್ರಿ.ಶ. ೧೦೯೬ರ ಶಾಸನದಲ್ಲಿ ಪುಲಿಗೆರೆ ಸೋಮೇಶ್ವರ ದೇವಾಲಯದ ಉಲ್ಲೇಖವಿದೆ.[2] ಈ ಶಾಸನದಲ್ಲಿನ

---

1 Three Inscriptions of Puligere : *E.I.*, XVI, p. 23

2 *EC.*, VII, Sk 114

ಉಲ್ಲೇಖದ ಪ್ರಕಾರ ಆದಯ್ಯನು ಕ್ರಿ.ಶ. ೧೦೯೬ಕ್ಕಿಂತ ಪೂರ್ವದಲ್ಲಿಯೇ ಸೋಮೇಶ್ವರನನ್ನು ತಂದು ಪ್ರತಿಷ್ಠಾಪಿಸಿದ್ದಾನೆಂದು ಊಹಿಸಬಹುದಾಗಿದೆ. ಅಂದರೆ ಪುಲಿಗೆಱೆಯಲ್ಲಿ ಸೋಮನಾಥನ ಪ್ರತಿಷ್ಠಾಪನೆಯ ಕಾಲ ಹನ್ನೊಂದನೇ ಶತಮಾನದ ಅಂತ್ಯಭಾಗ ಎಂದು ನಿರ್ಧರಿಸಬಹುದಾಗಿದೆ.

ಆದಯ್ಯನನ್ನು ಕುರಿತ ಕಾವ್ಯ ಮತ್ತು ಪುರಾಣಗಳಲ್ಲಿ ಸೋಮೇಶ್ವರನ ಪ್ರತಿಷ್ಠಾಪನೆಯ ಪೂರ್ಣವಿವರ ಮಾತ್ರ ಇದ್ದು, ಪ್ರತಿಷ್ಠಾಪನೆಯ ಕಾಲದ ಬಗೆಗೆ ಶಾಸನಗಳಲ್ಲಿ ದೊರೆಯುವ ಪೂರಕ ಸಂಗತಿಗಳಿಂದ ತಿಳಿಯಬಹುದಾಗಿದೆ.

ಸೌರಾಷ್ಟ್ರದಿಂದ ವ್ಯಾಪಾರ ನಿಮಿತ್ತ ಬಂದ ಆದಯ್ಯನು ಪುಲಿಗೆರೆಯ ಹೋಜೇಶ್ವರ ದೇವಾಲಯದಲ್ಲಿ ಇಳಿದುಕೊಂಡಿದ್ದನೆಂದು ಹರಿಹರನ ಆದಯ್ಯನ ರಗಳೆ ರಾಘವಾಂಕ ಮತ್ತು ಸಿದ್ಧನಂಜೇಶಾದಿ ಕವಿಗಳ ಕಾವ್ಯಗಳಲ್ಲಿ ಉಲ್ಲೇಖವಿದೆ. ಆದಯ್ಯನು ಪುಲಿಗೆರೆಯ ಜೈನ ಪಾರಿಸಸೆಟ್ಟಿಯ ಮಗಳು ಪದ್ಮಾವತಿಯನ್ನು ವರಿಸುವ ಮುನ್ನ ಆಕೆಗೆ ಹೋಜೇಶ್ವರ ದೇವಾಲಯದ ಸ್ಥಾನಾಚಾರ್ಯರಿಂದ ಶೈವದೀಕ್ಷೆಯನ್ನು ಕೊಡಿಸಿದ ಎಂದೂ ಹೇಳುತ್ತವೆ. ಆ ಕಾಲಕ್ಕೆ ಹೋಜೇಶ್ವರ ದೇವಾಲಯವು ಶೈವದೇವಾಲಯವಾಗಿತ್ತು ಎಂಬುದು ಈ ಕಾವ್ಯಗಳಿಂದ ತಿಳಿದು ಬರುತ್ತದೆ. ಈ ದೇವಾಲಯವು ಇಂದಿಗೂ ಪುಲಿಗೆರೆಯಲ್ಲಿದ್ದು ಜನರು ಅದನ್ನು ಇಂದು ವಾಚೇಶ್ವರ ದೇವಾಲಯ ಎಂದು ಕರೆಯುತ್ತಾರೆ. ಈ ದೇವಾಲಯವನ್ನು ಕುರಿತು ಶಾಸನಗಳಲ್ಲಿ ಹೆಚ್ಚಿನ ಉಲ್ಲೇಖ ದೊರೆಯದೆ ಇದ್ದರೂ ಕ್ರಿ.ಶ. ೬೦೦ರಲ್ಲಿನ ಶಾಸನದಲ್ಲಿ 'ವಾಯುವ್ಯ ಹೋಜೇಶ್ವರ ಕ್ಷೇತ್ರಂ' ಎಂದೂ ಕ್ರಿ.ಶ. ೧೧೬೬ರ ಶಾಸನದಲ್ಲಿ 'ತೆಂಕಲ್ ಹೋಜೇಶ್ವರ ಭೂಮಿ' ಎಂಬ ಉಲ್ಲೇಖಗಳಿವೆ.[3] ಶಾಸನಗಳಲ್ಲಿ ಹೋಜೇಶ್ವರ ಎಂಬ ಹೆಸರಿನಲ್ಲಿ ಉಲ್ಲೇಖವಾಗಿದ್ದು ಹರಿಹರ ರಾಘವಾಂಕರ ಕಾವ್ಯಗಳಲ್ಲಿ ಹೋಜೇಶ್ವರ ದೇವಾಲಯ ಎಂಬುದು ಜನಸಾಮಾನ್ಯರ ಬಾಯಲ್ಲಿ ವಾಚೇಶ್ವರ ದೇವಾಲಯ ಎಂಬ ಹೆಸರಾಗಿದೆ.

ಕಾವ್ಯ ಪುರಾಣಗಳಲ್ಲಿ ವ್ಯಕ್ತವಾಗಿರುವ ಆದಯ್ಯನು ಸೌರಾಷ್ಟ್ರದ ಸೋಮೇಶ್ವರನನ್ನು ತಂದು ಸ್ಥಾಪಿಸುವ ಮೊದಲು ಆ ದೇವಾಲಯವು ಸುರಹೊನ್ನೆ ಎಂಬ ಹೆಸರಿನ ಜೈನ ಬಸದಿಯಾಗಿತ್ತು ಎಂಬ ಹೇಳಿಕೆಯನ್ನು ಖಚಿತವಾಗಿ ಬೆಂಬಲಿಸುವ ಆಧಾರಗಳು ಶಾಸನಗಳಲ್ಲಿ ದೊರೆಯದೆ ಇದ್ದರೂ ಪೂರಕ ಅಂಶಗಳು ದೊರೆತಿವೆ.

ಆದಯ್ಯನು ಸುರಹೊನ್ನೆ ಬಸದಿಯಲ್ಲಿ ಶಿವನನ್ನು ಪ್ರತಿಷ್ಠಾಪಿಸಿ ಅದನ್ನು ಶಿವಾಲಯವನ್ನಾಗಿ ಪರಿವರ್ತಿಸಿದ ನಂತರದ ಕಾಲದಲ್ಲಿ ಈ ಶಿವಾಲಯದ ಅರ್ಚಕರಿಗೂ ಪುಲಿಗೆರೆಯಲ್ಲಿದ್ದ ಇತರೆ ಜೈನ ಬಸದಿಯ ಆಚಾರ್ಯರಿಗೂ ಹಲವು ಕಾರಣಕ್ಕಾಗಿ ಒಳ ಜಗಳಗಳಾಗಿದ್ದನ್ನು ಶಾಸನಗಳು ಶ್ರುತ ಪಡಿಸುತ್ತವೆ. ಶೈವ ಮತ್ತು ಜೈನ ಆಲಯಗಳ ಅರ್ಚಕರ ನಡುವಿನ ಆಂತರಿಕ ಜಗಳಕ್ಕೆ ಹಿನ್ನಲೆ ಬಹುಶಃ (ಕಾವ್ಯಪುರಾಣಗಳಲ್ಲಿ ಉಲ್ಲೇಖವಾಗಿರುವ) ಪೂರ್ವದ ಆದಯ್ಯ ಮತ್ತು ಜೈನರ ನಡುವಿನ ವಾದ–ಪ್ರತಿವಾದ ಹೋರಾಟವೇ ಕಾರಣವಿರಬೇಕು ಎಂದು ಊಹಿಸಲು ಕ್ರಿ.ಶ. ೧೪೧೨ರ.[4] ಮತ್ತು ಇನ್ನೊಂದು ಶಾಸನವು[5] ನೆರವಾಗುತ್ತವೆ.

ಪುಲಿಗೆರೆಯ ಸೋಮೇಶನ ಪ್ರತಿಷ್ಠಾಪನೆ, ಪ್ರತಿಷ್ಠಾಪಿಸಿದ ಆದಯ್ಯನ ಚರಿತ್ರೆ, ಅದರ ಸ್ಥಾನಾಚಾರ್ಯರ ವಿವರ ಮೊದಲಾದವುಗಳನ್ನು ಶಾಸನಗಳಿಂದಾಗಲಿ ಆ ಕಾಲದಲ್ಲಿ ಅಥವಾ ಆ ಕಾಲದ ನಂತರ ದೊರೆಯುವ ಕೇವಲ ಕೃತಿಗಳಿಂದಾಗಲಿ ಪೂರ್ಣ ಪ್ರಮಾಣದಲ್ಲಿ ಅರಿಯಲು ಸಾಧ್ಯವಾಗುವುದಿಲ್ಲ. ಇವೆರಡರ ಜೊತೆಗೆ ದೊರೆಯುವ ಪುಲಿಗೆರೆಯ ಸ್ಥಳ ಪುರಾಣ ಈ ಮೂರರಲ್ಲಿಯೂ ದೊರೆಯು ಮಾಹಿತಿಗಳನ್ನು ಪೂರಕವಾಗಿ ಬಳಸಿಕೊಂಡಾಗ ಮೇಲೆ ತಿಳಿಸಿದ ವಿಷಯದ ಬಗೆಗೆ ಸಮಗ್ರ ಚಿತ್ರಣವನ್ನು ರೂಪಿಸಬಹುದು.

---

3 ಎಂ.ಬಿ. ಭೋಯಿ : 'ಲಕ್ಷ್ಮೇಶ್ವರದ ಶಾಸನಗಳು,' ಪುಲಿಗೆರೆ, ಪು. ೧೫

4 *S.I.I.*, XX, pp. 282-284, 383

5 *Ibid.*

ಬಿ. ಆರ್. ನರಸಿಂಹಮೂರ್ತಿ

ಕನ್ನಡ ಸಾಹಿತ್ಯ ಚರಿತ್ರೆ ಹಿನ್ನೆಲೆಯಲ್ಲಿ ಇತಿಹಾಸ ಮತ್ತು ಮತ-ಧರ್ಮಗಳ ನೆಲೆಗಳು

'ಇತಿಹಾಸ'ವೆಂಬುದು ಒಂದು ನಾಡಿನ, ದೇಶದ ಆಗು-ಹೋಗುಗಳನ್ನು ಹೇಗಿದ್ದವೆಂದು ತಿಳಿಸುವ ದಾಖಲೆ. ಒಂದು ನಿರ್ದಿಷ್ಟ ಭೂವಲಯುವನ್ನು ಸಂರಕ್ಷಿಸುವ ರಾಜಮನೆತನಗಳ ಸಾಧನೆಯ ಪ್ರತ್ಯೇಕ ನೋಟ. ಹಾಗೆಯೇ ಇದು ಸಮಗ್ರ ಜನತೆಯ ಜೀವನ ಆಲೋಚನಾ ವಿಧಾನದ ಮೇಲೆ ನಿಂತ ಸಂಸ್ಕೃತಿಯ ಅಭ್ಯಾಸವಾಗಿದೆ. ಹೀಗಾಗಿ ನಮ್ಮ ಸಾಂಸ್ಕೃತಿಕ ಪರಂಪರೆಯ ಯಾವುದೇ ಅಂಶವನ್ನು ನಾವು ಒರೆಗಲ್ಲಿಗೆ ಹಾಕಿದರೂ ಸಹ ಅಲ್ಲಿ ಇತಿಹಾಸದ (ರಾಜರ ಹೆಸರು, ಅವರ ಸಾಧನೆ, ಅವರ ಆಚರಣೆ ಇತ್ಯಾದಿ) ದಾಖಲೆ ಕಂಡುಬರುತ್ತದೆ. ಈ ಸಂಸ್ಕೃತಿಯ ಚಾರಿತ್ರಿಕ ಅಂಶಗಳು ಸಾಹಿತ್ಯಚರಿತ್ರೆಯಲ್ಲಿ ವಿವಿಧ ಆಕಾರಗಳನ್ನು ಪಡೆದುಕೊಂಡು ಪ್ರತಿಬಿಂಬಿತವಾಗಿವೆ. ಉದಾ: ಶಾಸನ, ಸಾಹಿತ್ಯ, ಶಾಸ್ತ್ರಸಾಹಿತ್ಯ, ವೈದಿಕಸಾಹಿತ್ಯ, ಜೈನ ಸಾಹಿತ್ಯ, ವೀರಶೈವಸಾಹಿತ್ಯ, ಬ್ರಾಹ್ಮಣಸಾಹಿತ್ಯ ಇತ್ಯಾದಿ.

ಸಾಹಿತ್ಯವೆಂಬುದು ಸಮಾಜದ ಪ್ರತಿಬಿಂಬದಂತೆ ಗತಿಬಿಂಬವಾಗಿದೆ ಎಂಬುದನ್ನು ನೋಡಿದರೆ, ಸಾಹಿತ್ಯವನ್ನು ಸೃಷ್ಟಿಸುವ ಕವಿ ತಾನು ಇದ್ದ ಕಾಲದ ಮತ್ತು ಸಮಾಜದ ಒಂದು ಮುಖ್ಯ ಅಂಗವಾಗಿರುತ್ತಾನೆ. ಹೀಗಾಗಿ ತನ್ನ ಸುತ್ತಣಪರಿಸರದ ಆಗು-ಹೋಗುಗಳನ್ನು ತನ್ನ ಕೃತಿಯಲ್ಲಿ ಸೆರೆ ಹಿಡಿಯುತ್ತಾನೆ. ಅಂದು ನಡೆದು ಹೋದ ಆಚಣೆಗಳಿರಬಹುದು, ವೀರಜೀವನವಿರಬಹುದು, ಅಂದು ನಡೆದ ಯುದ್ಧಗಳಿರಬಹುದು-ಇವುಗಳನ್ನು ತನ್ನ ಭಾಷಿಕ ವೈಲಕ್ಷಣದಿಂದ ವರ್ಣಿಸುತ್ತಾನೆ. ಹೀಗಾಗುವುದರಿಂದ ಆ ಕೃತಿ ಒಂದು ನಿರ್ದಿಷ್ಟ ಕಾಲದ ಸಾಮಾಜಿಕ ದಾಖಲೆಯಾಗಿ ಅಂದಿನ ಕಾಲದ ಸಮಾಜದ ಇತಿಹಾಸ ರಚನೆ ಮಾಡುವ ಇತಿಹಾಸಜ್ಞರಿಗೆ ಪ್ರತ್ಯಕ್ಷ ದಾಖಲೆಯಾಗುತ್ತದೆ. ಇದರಿಂದಲೇ ಸಾಹಿತ್ಯಚರಿತ್ರೆಯಲ್ಲಿ ಮಹತ್ವದ ಕೃತಿಯೊಂದು ಪಡೆದುಕೊಂಡ ಸ್ಥಾನ, ಅಷ್ಟೇ ಮಹತ್ವದ ಐತಿಹಾಸಿಕ ದಾಖಲೆಯಾಗಿ ಆ ಕೃತಿ ಇತಿಹಾಸ ಶೋಧಕರಿಗೆ ಮೂಲ ಸಾಮಗ್ರಿಯಾಗುತ್ತದೆ. ಆದ್ದರಿಂದಲೇ ಸಾಹಿತ್ಯದ ಅಭ್ಯಾಸಿಗರು ಮತ್ತು ಇತಿಹಾಸದ ಅಭ್ಯಾಸಿಗರು ಸಾಹಿತ್ಯಕೃತಿಯನ್ನು ಕೆಲಸಕ್ಕೆ ಬಾರದೆಂದು ಅಲಕ್ಷಿಸುವಂತಿಲ್ಲ.

ಇತಿಹಾಸವನ್ನು ಪುನರ್ ಪರಿಶೋಧಿಸ ಹೊರಡುವವರು ಸಾಹಿತ್ಯಚರಿತ್ರೆಯನ್ನು ಅಭ್ಯಾಸ ಮಾಡಿದರೆ ನಿರ್ದಿಷ್ಟ ಆಕಾರಗಳು, ಸಾಮಗ್ರಿಗಳು ದೊರೆಯುವುದರಲ್ಲಿ ಸಂಶಯವಿಲ್ಲ. ಉದಾ : ಮೈಸೂರಿನ ಒಡೆಯರ ಇತಿಹಾಸ ರಚನೆ ಮಾಡುವವರು 'ಕಂಠೀರವ ನರಸರಾಜ ವಿಜಯ', 'ಚಿಕ್ಕದೇವರಾಜ ಬಿನ್ನಪ', 'ಚಿಕ್ಕದೇವರಾಜ ವಂಶಾವಳಿ', 'ಅಪ್ರತಿಮ ವೀರಚರಿತ್ರೆ', 'ಚಿಕ್ಕದೇವರಾಜ ವಿಜಯ'—ಈ ಮುಂತಾದ ಸಾಹಿತ್ಯಕೃತಿಗಳನ್ನು ಅಭ್ಯಾಸ ಮಾಡುವುದರ ಮೂಲಕ ಇತಿಹಾಸವನ್ನು ನಿರೂಪಿಸುವುದಷ್ಟೇ ಅಲ್ಲದೇ ಸಾಹಿತ್ಯ ಸುಗ್ಗಿಯನ್ನೂ ಸವಿಯಬಹುದಾಗಿದೆ.

ಬನವಾಸಿಯ ಕದಂಬರು, ತಲಕಾಡಿನ ಗಂಗರು, ಬಾದಾಮಿಯ ಚಾಲುಕ್ಯರು, ಮಾನ್ಯಖೇಟದ ರಾಷ್ಟ್ರಕೂಟರು, ವೇಮಲವಾಡದ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ಕಲ್ಯಾಣದ ಕಳಚೂರ್ಯರು, ದ್ವಾರಸಮುದ್ರದ ಹೊಯ್ಸಳರು, ವಿಜಯನಗರದ ಅರಸರು, ಕೆಳದಿ ನಾಯಕರು, ಮೈಸೂರಿನ ಒಡೆಯರು—ಈ ಮುಂತಾದ ಅರಸುಮನೆತನಗಳ ಇತಿಹಾಸ ರಚನೆಗೆ ಸಾಹಿತ್ಯಚರಿತ್ರೆಯಲ್ಲಿ ವಿಶಿಷ್ಟ ಸ್ಥಾನ ಗಳಿಸಿರುವ ಕೃತಿಗಳು ಸಹಾಯಕ್ಕೆ ಬರುವುದಷ್ಟೇ ಅಲ್ಲದೆ, ಪ್ರತ್ಯೇಕವಾದ ದಾಖಲೆಯಾಗುತ್ತವೆ.

ಕರ್ನಾಟಕ ರಾಜಮನೆತನಗಳನ್ನು ಇತಿಹಾಸ ಪುಟಗಳಲ್ಲಿ ಪ್ರತಿಬಿಂಬಿಸಲು ಹಿಂದಿನ ಆಚರಣೆಗಳು, ಸಂಪ್ರದಾಯವೇ ಮುಂತಾದ ಸಾಂಸ್ಕೃತಿಕ ನೆಲೆಗಳನ್ನು ಅರಿಯಲು ಇತಿಹಾಸಜ್ಞರು ಕನ್ನಡ ಸಾಹಿತ್ಯಚರಿತ್ರೆಯ ಸಹಾಯಹಸ್ತವನ್ನು ಪಡೆಯಬೇಕಾಗುತ್ತದೆ. ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಇತಿಹಾಸಜ್ಞರು ಸಾಹಿತ್ಯ ವಿದ್ಯಾರ್ಥಿಯಾಗಿ ಕಾವ್ಯ ವ್ಯಾಸಂಗ ಮಾಡಬೇಕಿಲ್ಲ. ಅವರಿಗೆ ಸರಿತೋರಿದ ರೀತಿಯಲ್ಲಿ ರಾಜಕೀಯ ಇತಿಹಾಸದ ಜ್ಞಾನಕ್ಕೆ ಜೀವಂತಿಕೆಯನ್ನು ತಂದುಕೊಟ್ಟರೆ ಸಾಕು. ಇದೇ ರೀತಿ ಸಾಹಿತ್ಯಜ್ಞರು ಐತಿಹಾಸಿಕ ದೃಷ್ಟಿಯನ್ನು ಬೆಳೆಸಿಕೊಳ್ಳುವುದು ಅವರ ಸಾಹಿತ್ಯದ ಪ್ರಕ್ರಿಯೆಗಳನ್ನು ಹರಿತಗೊಳಿಸುತ್ತದೆ.

ಕರ್ನಾಟಕ ಇತಿಹಾಸದಲ್ಲಿ ಕಂಡುಬರುವ ಒಂದು ಮುಖ್ಯ ವಿಷಯವೆಂದರೆ, ಕನ್ನಡ ಸಾಮ್ರಾಜ್ಯವು ಸದಾ ಧರ್ಮರಾಜ್ಯವಾಗಿತ್ತೆ ಹೊರತು ಎಂದೂ ಧರ್ಮಾಂಧ ರಾಜ್ಯವಾಗಿರಲಿಲ್ಲ. ಪ್ರಸಿದ್ಧ ವಿದ್ವಾಂಸರಾದ ಜಯಸ್ವಾಲರು ಹೇಳಿದಂತೆ, "ಹಿಂದೂ ಜನಾಂಗವು ಪುರೋಹಿತ ವರ್ಗಕ್ಕೆ ರಾಜಾಧಿಕಾರವನ್ನು ಎಂದೂ ಅನುಗ್ರಹಿಸಿರಲಿಲ್ಲವಾಗಿ, ರಾಜನು ದೇವಾಂಶ ಸಂಭೂತನೆಂದು ನಟಿಸಿಕೊಂಡು ಸ್ವೇಚ್ಛಾವೃತ್ತಿಗಿಳಿಯಲು ಸಾಧ್ಯವಿರಲಿಲ್ಲ." ಈ ಮಾತು ಕರ್ನಾಟಕಕ್ಕೂ ಅನ್ವಯವಾಗುವಂತಹುದು. 'ಮತಧರ್ಮ'ವೆಂಬುದು ಇತಿಹಾಸ ರಚನೆಯ ಒಂದು ಅವಿಭಾಜ್ಯ ಅಂಗ. ಅರಸುಮನೆತನಗಳು ನೀಡಿದ ಉದಾರ ಪ್ರೋತ್ಸಾಹದಿಂದ ನಾಡಿನ ಉದ್ದಗಲಕ್ಕೂ ಎಲ್ಲಾ ಧರ್ಮಗಳು ಹರಡಿಕೊಂಡವು.ಹೀಗಾಗಿ ಕನ್ನಡನಾಡಿನಲ್ಲಿ ಪ್ರಚಾರಗೊಂಡ ಪ್ರತಿಯೊಂದು ಧರ್ಮವು ತನ್ನ ಹಿರಿಮೆಯನ್ನು ಜನರಿಗೆ ತಿಳಿಯಹೇಳಲು ಸಾಹಿತ್ಯ ಸುಗ್ಗಿಯನ್ನು ಮಾಡಿದವು ಎಂಬುದನ್ನು ಸಾಹಿತ್ಯಚರಿತ್ರೆ ಮತ್ತು ಇತಿಹಾಸ ಒತ್ತಿ ಹೇಳುತ್ತವೆ.

ಕನ್ನಡ ಸಾಹಿತ್ಯ ಚರಿತ್ರೆಯ ಹಿನ್ನೆಲೆಯಲ್ಲಿ 'ಮತಧರ್ಮ'ದ ನೆಲೆಗಳು ಎಂಬುದು ಇತಿಹಾಸವೆಂಬ ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬವಾಗಿದೆ. ಹೀಗಾಗಿ ಕನ್ನಡನಾಡಿನ ಇತಿಹಾಸ ತಿಳಿಯ ಹೊರಟ ಪ್ರತಿಯೊಬ್ಬನೂ ಕನ್ನಡನಾಡಿನಲ್ಲಿದ್ದ ಧಾರ್ಮಿಕ ಪರಂಪರೆಯನ್ನು ಅರಿಯ ಹೊರಡುತ್ತಾನೆ. ಈ ಧಾರ್ಮಿಕ ಪರಂಪರೆಯನ್ನು ಅರಿಯುವ ಆತನಿಗೆ ಸಿಗುವ ಆಧಾರಗಳು ಎರಡು ರೀತಿಯವು :

೧. ಲಿಖಿತ ದಾಖಲೆಗಳು —ಶಾಸನಗಳು
—ಸಾಹಿತ್ಯ ಕೃತಿಗಳು

೨. ಅಲಿಖಿತ ದಾಖಲೆಗಳು—ಸ್ಮಾರಕಗಳು
—ಶಿಲ್ಪ

ಈ ಮೇಲಿನ ಎರಡು ರೀತಿಯ ಆಧಾರಗಳ ಮೂಲಕ ಕರ್ನಾಟಕದ ಧಾರ್ಮಿಕ ನೆಲೆಗಟ್ಟನ್ನು ವಿವೇಚಿಸಬೇಕಾಗಿದೆ. ಲಿಖಿತ ದಾಖಲೆಗಳ ರೂಪದಲ್ಲಿ ಕಾಣಿಸಿಕೊಳ್ಳುವ ಕನ್ನಡ ಸಾಹಿತ್ಯ ಚರಿತ್ರೆಯು, ಮತಧರ್ಮದ ನೆಲೆಗಟ್ಟಿನಲ್ಲಿ ಬೆಳೆದುಬಂದ ರೀತಿಯನ್ನು ಒಪ್ಪಿಕೊಳ್ಳುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ನರಸಿಂಹಾಚಾರ್ಯರು, ಬಿ. ಎಂ. ಶ್ರೀಯವರೇ ಮುಂತಾದವರು ವಿಭಾಗಿಸಿರುವ ರೀತಿಯನ್ನು ಕಂಡರೆ ಮತಧರ್ಮ ಬೀರಿದ ಪ್ರಭಾವವನ್ನು ಅರಿಯಬಹುದಾಗಿದೆ. ಜೈನ, ಸಾಹಿತ್ಯ, ವೀರಶೈವ ಸಾಹಿತ್ಯ, ಬ್ರಾಹ್ಮಣ ಸಾಹಿತ್ಯ—ಈ ರೀತಿಯ ವಿಭಾಗ ಕ್ರಮವು ನಮ್ಮ ಸಾಹಿತ್ಯ ಚರಿತ್ರೆಯ ಮೊದಲ ಭಾಗವನ್ನು ಆಕ್ರಮಿಸಿಕೊಂಡಿದೆ. ಅಂದರೆ ಕನ್ನಡ ಸಾಹಿತ್ಯ ಚರಿತ್ರೆಯನ್ನು ಮೊದಲು ಬೆಳೆಸಿದ ಕವಿಗಳು ಧರ್ಮಕ್ಕೆ ಕಟ್ಟುಬಿದ್ದವರೇ ಆಗಿದ್ದಾರೆ. ಪಂಪನಿಂದ ಹಿಡಿದು ಮುದ್ದಣನವರೆಗೆ ಮತಧರ್ಮವೆಂಬುದು ಕವಿಗಳಿಗೆ ಒಂದು 'ದರ್ಶನ'ವಾಗಿತ್ತು. ಇದರಿಂದ ಚೇತನಗೊಂಡು ಧರ್ಮವನ್ನು ರಕ್ಷಿಸಲು, ಬೆಳೆಸಲು ಸಾಹಿತ್ಯವನ್ನು ಬೆಳೆಸಿದರೆಂದು ಅನೇಕರು ಒಪ್ಪುವ ಮಾತಾಗಿದೆ,

ಪರಿಪೂರ್ಣವಾಗಿ ಬೆಳೆದುನಿಂತಿರುವ ನಮ್ಮ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದರೆ ಧರ್ಮವೆಂಬ ಚೌಕಟ್ಟಿನಲ್ಲಿ ವಿವಿಧ ಹೆಸರುಗಳ ಪಟ್ಟಿ ಕಟ್ಟಿಕೊಂಡು ಸಾಹಿತ್ಯ ಬಳಸಿರುವುದನ್ನು ವಿವಿಧ ಘಟ್ಟಗಳಲ್ಲಿ ಕಾಣುತ್ತೇವೆ. ಈ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಬೌದ್ಧ ಸಾಹಿತ್ಯವು ಬೆಳೆದಂತೆ ತೋರುವುದಿಲ್ಲ. ಆದರೆ ಜೈನ, ವೀರಶೈವ, ಬ್ರಾಹ್ಮಣ ಸಾಹಿತ್ಯವು ವಿಪುಲವಾಗಿದೆ.

ಧಾರ್ಮಿಕ ಪರಂಪರೆಯನ್ನು ಬಿಡದೆ ಸಮಾಜದ ಅವಿಭಾಜ್ಯ ಅಂಗವಾಗಿ ನಿಂತು, ಧರ್ಮ ರಕ್ಷಣೆಯನ್ನು ಮತ್ತು ಸಾಹಿತ್ಯವನ್ನು ಬೆಳೆಸಿದ ಕೀರ್ತಿ ವೈಷ್ಣವರಿಗೆ ಸಲ್ಲುತ್ತದೆ. ಹೀಗೆ ಒಂದು ಕಡೆ ಜನರಿಗೆ ಅರ್ಥವಾಗುವ ರೀತಿಯಲ್ಲಿ ಧಾರ್ಮಿಕ ತತ್ವಗಳನ್ನು ತಿಳಿಯ ಹೇಳಿದ್ದಲ್ಲದೆ ನಾಡಿನ ಸಾಹಿತ್ಯ ಶ್ರೇಷ್ಠತೆಯನ್ನು ಬೆಳೆಸಿದ ಕೀರ್ತಿ ಪ್ರತಿಯೊಂದು ಧರ್ಮದ ಪರೋಕ್ಷ ನೆಲೆಯಾಗಿದ್ದಿರಬಹುದು ಎಂದು ಇತಿಹಾಸ ಮತ್ತು ಕನ್ನಡ ಸಾಹಿತ್ಯ ಚರಿತ್ರೆಯನ್ನು ಅಭ್ಯಾಸ ಮಾಡುವವರಿಗೆ ಕಂಡುಬರುವ ಒಂದು ವಿಶಿಷ್ಟವಾದ ನೆಲೆಗಟ್ಟಾಗಿದೆ.

ಈ ಹಿನ್ನೆಲೆಯಲ್ಲಿ ಇತಿಹಾಸ ಮತ್ತು ಮತ ಧರ್ಮಗಳೆಂಬ ಎರಡು ನೆಲೆಗಳು ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಮುಖ್ಯವಾದ ಸಂಬಂಧಗಳನ್ನು ಒಳಗೊಂಡಿದ್ದು, ಚರಿತ್ರೆಯನ್ನು ಅಭ್ಯಾಸ ಮಾಡುವ ಹಾಗೂ ಧಾರ್ಮಿಕ ನೆಲೆಗಟ್ಟುಗಳನ್ನು ತಿಳಿಯಬಯಸುವವರಿಗೆ ಸಾಹಿತ್ಯ ಚರಿತ್ರೆ ಪ್ರತ್ಯಕ್ಷ ಪರಿಕರಗಳನ್ನು ಒದಗಿಸುವ ಮೂಲ ಭೂತ ಆಧಾರಸ್ತಂಭವಾಗಿದೆ.

ಡಾ॥ ಜಿ.ಎಸ್. ದೀಕ್ಷಿತ್

ಪ್ರವಾಸಿ ಸಾಹಿತ್ಯದ ಅಧ್ಯಯನದಲ್ಲಿ ಮುಂದಿನ ಹೆಜ್ಜೆಗಳು

ಕೆ.ಎ. ನೀಲಕಂಠಶಾಸ್ತ್ರಿಗಳು ೪೦ ವರ್ಷದ ಕೆಳಗೆ ದಕ್ಷಿಣ ಭಾರತದ ಬಗ್ಗೆ ಬರೆದ ವಿದೇಶಿ ಪ್ರವಾಸಿಗಳ ಲೇಖನಗಳನ್ನು Foreign Notices of South India ಎನ್ನುವ ಗ್ರಂಥದಲ್ಲಿ ಕಲೆಹಾಕಿದ್ದಾರೆ. ಕನ್ನಡದಲ್ಲಿ ಹೆಚ್.ಎಲ್. ನಾಗೇಗೌಡರು ಪ್ರಾಚೀನ ಮತ್ತು ಮಧ್ಯ ಯುಗಗಳಲ್ಲಿ ಭಾರತಕ್ಕೆ ಬಂದ ಅನೇಕ ವಿದೇಶಿಯರ ಬರಹಗಳನ್ನು ಆ ಸಂಪುಟಗಳಲ್ಲಿ ಸಂಗ್ರಹಿಸಿದ್ದಾರೆ. ಹೀಗಿರುವಾಗ ಇನ್ನು ಈ ವಿಷಯದಲ್ಲಿ ಹೊಸದೇನು ಹೇಳಲು ಸಾಧ್ಯವಿದೆ ಎಂಬ ಪ್ರಶ್ನೆಗೆ ಉತ್ತರ ಸಾಧ್ಯವಿದೆ.

೧. ಭಾರತಕ್ಕೆ ಪ್ರವಾಸಿಗಳು ಯುರೋಪು, ಪಶ್ಚಿಮ ಏಷಿಯಾ ಮತ್ತು ಪೂರ್ವ ಏಷಿಯಾಗಳಿಂದ ಬಂದರು. ಅನೇಕ ಪ್ರವಾಸಿಗಳು ಭಾರತದ ಬಗ್ಗೆ ಏನು ಬರೆದಿದ್ದಾರೊ ಅಷ್ಟನ್ನು ಮಾತ್ರ ನಮ್ಮ ಭಾಷಾಂತರ ಕಾರರು ಭಾಷಾಂತರಿಸಿದ್ದಾರೆ. ಉದಾಹರಣೆಗೆ, ಟ್ಯಾವರ್ನಿಯರ್ ಎನ್ನುವ ವಜ್ರ ವ್ಯಾಪಾರಿಯು ಫ್ರಾನ್ಸಿನಿಂದ ಭಾರತಕ್ಕೆ ೭ ಸಲ ಬಂದು ವ್ಯಾಪಾರ ಮಾಡಿಕೊಂಡು ಹೋದನು. ವಜ್ರವ್ಯಾಪಾರದಲ್ಲಿ ಇವನು ಬಹಳ ಚತುರನಾಗಿದ್ದನು. ಇವನ ಪ್ರವಾಸದ ವರದಿಯನ್ನು ಇಂಗ್ಲೀಷಿಗೆ ಭಾಷಾಂತರಿಸಿದವರು ಬಾಲ್ ಎನ್ನುವ ಭೂಗರ್ಭ ಶಾಸ್ತ್ರಜ್ಞ. ಇವರ ಇಂಗ್ಲೀಷ್ ಭಾಷಾಂತರದ ಹೆಸರು Tavernier's Travels in India. ಅವನು ತನ್ನ ಪ್ರವಾಸದಲ್ಲಿ ಭಾರತವಲ್ಲದೆ ಇನ್ನು ಅನೇಕ ದೇಶಗಳಲ್ಲಿಯ ತನ್ನ ಅನುಭವಗಳನ್ನು ಬರೆದಿದ್ದಾನೆ. ಬಾಲ್ ಅವರು ಭಾರತದ ಬಗ್ಗೆ ಹೇಳಿದ್ದನ್ನು ಮಾತ್ರ ಭಾಷಾಂತರಿಸಿದ್ದಾರೆ. ಯಾಕೆಂದರೆ ಅವರ ಆಸ್ಥೆ ಭಾರತೀಯ ಇತಿಹಾಸಕ್ಕೆ ಸೀಮಿತವಾಗಿತ್ತು. ಈಗ ನಮಗೆ ತಿಳಿದ ಹಾಗೆ ಟ್ಯಾವರ್ನಿಯರ್ ಪರ್ಷಿಯಾದ ಮಾರ್ಗವಾಗಿ ಭಾರತಕ್ಕೆ ಬಂದ. ಪರ್ಷಿಯಾದಲ್ಲಿ ಮತ್ತು ರಷ್ಯಾದಲ್ಲಿ ಭಾರತೀಯ ವ್ಯಾಪಾರಿಗಳು ಬಹುಸಂಖ್ಯೆಯಲ್ಲಿದ್ದು ಒಳ್ಳೆಯ ಹೆಸರನ್ನು ಗಳಿಸಿದ್ದರು. ಕ್ಯಾಸ್ಪಿಯನ್ ಸಮುದ್ರದಲ್ಲಿ ಈ ವ್ಯಾಪಾರಿಗಳು ತಮ್ಮ ಸ್ವಂತ ಹಡಗುಗಳಲ್ಲಿ ಸಾಮಾನುಗಳನ್ನು ಸಾಗಿಸುತ್ತಿದ್ದರು. ಪರ್ಷಿಯಾ ಮತ್ತು ರಷ್ಯಾದ ರಾಜರು ಅವರ ಸ್ನೇಹವನ್ನು ಬಯಸುತ್ತಿದ್ದರು.[1] ಇಂಥ ವರ್ತಕರನ್ನು ಟ್ಯಾವರ್ನಿಯರ್ ಸಹಜವಾಗಿ ಭೇಟಿಯಾಗಿದ್ದನು.[2] ಅವರ ಬಗೆಗಿನ ಟ್ಯಾವರ್ನಿಯರಿನ ಬರಹವನ್ನು ನಾವು ತಿಳಿದುಕೊಳ್ಳುವುದು ಅವಶ್ಯ.

ಅದೇ ರೀತಿ ಬರ್ನಿಯರ್ ಎನ್ನುವ ಇನ್ನೊಬ್ಬ ಫ್ರೆಂಚ್ ಪ್ರವಾಸಿಯ ಬರೆಹವನ್ನು ವಿ.ಎ. ಸ್ಮಿತ್ ಮತ್ತು ಕಾನ್‌ಸ್ಟೆಬಲ್ ಎನ್ನುವವರು ಇಂಗ್ಲೀಷಿಗೆ ಭಾಷಾಂತರಿಸಿದ್ದಾರೆ. ಅವರ ಭಾಷಾಂತರದ ಹೆಸರು Bernier's Travels in the Moghul Empire

---

1. P.M. Kemp: *Bharat-Rus*, Delhi, 1958, p. 80
2. *Ibid.*, p. 72. ಭಾರತೀಯ ವರ್ತಕರು ಪರ್ಷಿಯನ್ ಶ್ರೀಮಂತರ ಹಣವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡಿದ್ದರು.

ಬರ್ನಿಯರನು ಪಶ್ಚಿಮ ಏಷ್ಯಾದಲ್ಲಿಯ ಭಾರತೀಯರ ಬಗೆಗೆ ಏನಾದರೂ ಬರೆದಿದ್ದರೆ, ನಾವು ತಿಳಿದುಕೊಳ್ಳುವುದು ಅವಶ್ಯ. ಇದೇ ರೀತಿ ಪಿತ್ರೊ ಡೆಲ್ಲಾವಲ್ಲೆ ಎನ್ನುವ ಇಟಾಲಿಯನ್ ಪ್ರವಾಸಿಯು ಪಶ್ಚಿಮ ಏಷಿಯಾ ಮಾರ್ಗದಿಂದ ಭಾರತಕ್ಕೆ ಬಂದನು. ಅವನ ಪುಸ್ತಕದ ಭಾಷಾಂತರದ ಹೆಸರು Pietro Della Valle's Travels in India. ಇವನು ಪಶ್ಚಿಮ ಏಷ್ಯಾದಲ್ಲಿಯ ಭಾರತೀಯರ ಬಗೆಗೆ ಬರೆದಿದ್ದನ್ನು ನಾವು ನೋಡಲೇಬೇಕು. ಯಾಕೆಂದರೆ ೧೭ನೇ ಶತಮಾನದಲ್ಲಿ ಬಂದ ಈ ಪ್ರವಾಸಿಯು ಬಹು ಮೇಧಾವಿ ಮತ್ತು ಅವನ ಬರೆಹ ತಪ್ಪಿಲ್ಲದ್ದೆಂದೆ ಹೆಸರುವಾಸಿಯಾಗಿದೆ.[3]

೨. ಪ್ರವಾಸಿಗಳ ಸಂಪೂರ್ಣ ವರದಿ ಇಂಗ್ಲೀಷಿನಲ್ಲಿರಬಹುದು. ಆದರೆ ನಮ್ಮ ಲಕ್ಷ್ಯ ಆ ವರದಿಯಲ್ಲಿ ಭಾರತಕ್ಕೆ ಮಾತ್ರ ಕೇಂದ್ರೀಕೃತವಾಗಿರಬಹುದು. ಗ್ರೀಕ್ ಭಾಷೆಯಲ್ಲಿ Periplus of the Erythraen Sea ಎನ್ನುವ ಗ್ರಂಥವಿದೆ. Erythraen Sea ಎಂದರೆ ಅರಬ್ಬೀ ಸಮುದ್ರ. ಇದರ ತೀರ ಪ್ರದೇಶದಲ್ಲಿ ಸಂಚರಿಸಿದ ಪ್ರವಾಸಿಯ ಕಥನವಿದು. ಪ್ರವಾಸಿಯ ಹೆಸರು ಕೊಟ್ಟಿಲ್ಲ. ಈ ವರದಿಯನ್ನು ಬರೆದದ್ದು ಕ್ರಿ.ಶ. ೭೫ರಲ್ಲಿ. ಲೇಖಕನು ಸ್ವತಃ ಎಲ್ಲಾ ಅರಬ್ಬೀ ತೀರದ ಮೇಲಿರುವ ದೇಶಗಳಿಗೆ ಹೋಗಿ, ಅಲ್ಲಿಯ ವ್ಯಾಪಾರಿಗಳು, ವ್ಯಾಪಾರದ ಸರಕುಗಳ ಬಗೆಗೆ ಬರೆದಿದ್ದಾನೆ. ದಕ್ಷಿಣ ಭಾರತದ ಬಂದರುಗಳನ್ನು, ವ್ಯಾಪಾರೀ ಕೇಂದ್ರಗಳನ್ನು ವರ್ಣಿಸಿದ್ದಾನೆ. ಇವುಗಳನ್ನು ನಮ್ಮ ಇತಿಹಾಸಕಾರರು ತಿಳಿದುಕೊಂಡಿದ್ದಾರೆ. ಆದರೆ ಅದೇ ಲೇಖಕನು ಪ್ರಸ್ತುತ ಗ್ರಂಥದಲ್ಲಿ ಪೂರ್ವ ಆಫ್ರಿಕಾ ತೀರದ ಬಗೆಗೂ ಬರೆದಿದ್ದಾನೆ. ಅದನ್ನು ನಾವು ನಿರ್ಲಕ್ಷಿಸಿದ್ದೇವೆ. ನಮಗೂ ಅದಕ್ಕೂ ಏನು ಸಂಬಂಧವೆಂದು ತಾತ್ಸಾರ ಮಾಡಿದ್ದೇವೆ. ಈಚೆಗೆ ಒಬ್ಬ ಡಚ್ ವಿದ್ವಾಂಸರು ಆ ಭಾಗವನ್ನು ಓದಿ ಪೂರ್ವ ಆಫ್ರಿಕಾದ ಪ್ರತಿಯೊಂದು ಬಂದರಿನಲ್ಲಿಯೂ ಭಾರತೀಯ ವ್ಯಾಪಾರಿಗಳು ಇದ್ದುದನ್ನೂ ಮತ್ತು ಅಲ್ಲಿಯ ವ್ಯಾಪಾರದಲ್ಲಿ ಗಣನೀಯ ಪಾತ್ರವನ್ನು ವಹಿಸಿದ್ದಲ್ಲದೆ ಅವರು ಅಲ್ಲಿಂದ ಆಗ್ನೇಯ ಏಷ್ಯಾಕ್ಕೆ ವ್ಯಾಪಾರಕ್ಕೆ ಹೋಗುತ್ತಿದ್ದರೆಂದೂ ಹೇಳಿದ್ದಾರೆ. ಹೀಗೆ ಪ್ರವಾಸಿಗಳ ಸಂಪೂರ್ಣವರದಿಯನ್ನು ಓದುವುದು ಅವಶ್ಯ.

೩. ಇನ್ನು ಚೀನಿ ಪ್ರವಾಸಿಗಳ ಬರೆಹಗಳನ್ನು ನೋಡೋಣ. ಹ್ಯೂಯನತ್ಸಾಂಗನ ವಿಷಯ ನಾವು ಎಲ್ಲಾ ತಿಳಿದುಕೊಂಡಿದ್ದೇವೆಯೆ ? ನಾವು ತಿಳಿದುಕೊಂಡಿರುವುದು ಅವನ ಭಾರತದಲ್ಲಿಯ ಅನುಭವಗಳನ್ನು ಮಾತ್ರ. ಹ್ವಿಲಿ ಎನ್ನುವವನು ಬರೆದಿರುವ ಹ್ಯೂಯನತ್ಸಾಂಗನ ಜೀವನ ಚರಿತ್ರೆಯನ್ನು ನಾವು ಉತ್ಪ್ರೇಕ್ಷೆ ಮಾಡಿದ್ದೇವೆ.[4] ಅದರಲ್ಲಿ ಹ್ಯೂಯನತ್ಸಾಂಗನ ವ್ಯಕ್ತಿತ್ವ ಹೆಚ್ಚು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಅವನು ಸಂಸ್ಕೃತದಲ್ಲಿ ಒಳ್ಳೆಯ ಪಂಡಿತ. ಬೌದ್ಧ ಮತದ ತತ್ವಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದ. ಅವನ ಭಾರತೀಯ ಗುರುಗಳ ಬಗ್ಗೆ ಅಸಾಧಾರಣ ಭಕ್ತಿ ಗೌರವಗಳನ್ನು ಇಟ್ಟುಕೊಂಡಿದ್ದ. ಅವನಿಗೆ ತನ್ನ ಮಾತೃಭೂಮಿ ಚೀನಾ ದೇಶದ ಬಗ್ಗೆ ಅಪಾರ ಪ್ರೀತಿ, ಹಿಡಿದ ಕೆಲಸ ಬಿಡದಿರುವ ಛಲ ಅವನದು. ಭಾರತಕ್ಕೆ ಹೋಗಿ ಸಂಸ್ಕೃತ ಮತ್ತು ಬೌದ್ಧ ಮತಗಳ ಹೆಚ್ಚಿನ ಅಧ್ಯಯನ ಮಾಡಿ ಚೀನಿಯರಿಗೆ ಬುದ್ಧನ ತತ್ವಗಳನ್ನು ಚೆನ್ನಾಗಿ ತಿಳಿಸಿಕೊಡಬೇಕೆಂಬ ಹಂಬಲ ಅವನದಾಗಿತ್ತು. ಇವೆಲ್ಲಾ ಮೇಲೆ ಹೇಳಿದ ಅವನ ಜೀವನ ಚರಿತ್ರೆಯಿಂದ ನಾವು ತಿಳಿದುಕೊಳ್ಳಬಹುದು.

ಇತ್ಸಿಂಗನ ಭಾರತದ ಬಗೆಗಿನ ಬರೆಹವನ್ನು ತಕಾಕಸು ಎನ್ನುವ ಜಪಾನೀ ವಿದ್ವಾಂಸರು ಭಾಷಾಂತರಿಸಿದ್ದಾರೆ.[5] ಇತ್ಸಿಂಗನ ಇನ್ನೊಂದು ಬರೆಹವನ್ನು ಇತ್ತೀಚಿಗೆ

---

3 K.A. Nilakanta Shastry : A *History of South India*, p. 33

4 Samuel Beal (Ed.) : *The Life of Hieun-Tsang by Hwili,* Dew Delhi, 1973; ಇದರ ಪೀಠಿಕೆಯಲ್ಲಿ ಇತ್ಸಿಂಗನ ಬಗೆಗೂ ಮಾಹಿತಿ ಇದೆ.

5 J. Takakasu (Ed.) : *Record of the Buddhist Religion as Practised in India and Malaya, Itsing,* New Delhi, 1966

ಬೇರೆಯವರು ಭಾಷಾಂತರಿಸಿದ್ದಾರೆ.[6] ಅದರಲ್ಲಿ ಇತ್ಸಿಂಗನು ತನ್ನ ಕಾಲದಲ್ಲಿ ಮತ್ತು ಅದಕ್ಕೆ ಮುಂಚೆ ಬಂದ ಚೀನ ಮತ್ತು ಕೊರಿಯಾದ ಪ್ರವಾಸಿಗಳ ಭಾರತದ ಪ್ರವಾಸದ ಬಗ್ಗೆ ಬರೆದಿದ್ದಾನೆ. ಇವನ ಬರೆಹಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಕೆಲವು ವಿಷಯಗಳಿವೆ. ಚೀನಿ ಭಾಷೆಯಲ್ಲಿ ಭಾರತದ ವಿದ್ವಾಂಸರ ಬಗ್ಗೆ ಇರುವ ಮಾಹಿತಿ ಅಪಾರ. ನಮ್ಮ ವಿದ್ವಾಂಸರು ಈ ಭಾಷೆಯನ್ನು ಕಲಿಯದ ವಿನಃ ಪ್ರಾಚೀನ ಭಾರತದ ಬಗ್ಗೆ ಆ ಭಾಷೆಯಲ್ಲಿರುವ ಮಾಹಿತಿ ನಮಗೆ ದೊರಕುವುದಿಲ್ಲ.

೪. ಕೆಲವು ಪ್ರವಾಸಿಗಳ ಬರೆಹವನ್ನು ಮೊದಲು ಒಂದು ತರಹ ಅರ್ಥಮಾಡಿದರು. ಈಗ ಬೇರೆ ಅರ್ಥ ಮಾಡಿದ್ದಾರೆ. ಇದಕ್ಕೆ ಒಳ್ಳೆಯ ನಿದರ್ಶನ ರಷಿಯಾದ ನಿಕಿಟಿನ್ ಇವನ ವರದಿಯ ಮೊದಲನೆಯ ಇಂಗ್ಲೀಷ್ ಭಾಷಾಂತರವು ಅಷ್ಟು ಸಮರ್ಪಕವಾಗಿರಲಿಲ್ಲ. ಈಗ ನಾವು ಭಾರತದಲ್ಲಿ ಉಪಯೋಗಿಸುತ್ತಿರುವುದು ಇದೇ ಭಾಷಾಂತರವನ್ನೆ. ಇದು ಅಸಮರ್ಪಕವಾಗಿರುವುದಕ್ಕೆ ಕಾರಣ, ರಷ್ಯನ್ ಮೂಲವೇ ಅಸಮರ್ಪಕವಾಗಿತ್ತು. ಈಚೆಗೆ ನಿಕಿಟಿನ್ ಬಗ್ಗೆ ರಷ್ಯಾದಲ್ಲಿ ಉತ್ಸುಕತೆ ಹೆಚ್ಚಾಗಿದೆ. ಅವನ ಬಗ್ಗೆ ಅಧ್ಯಯನ ಹೆಚ್ಚಾಗಿದೆ. ಅವನಿಗೆ ರಷ್ಯನ್ ಸಾಹಿತ್ಯದಲ್ಲಿ ಮೇಲ್ಮಟ್ಟದ ಸ್ಥಾನ ದೊರಕಿದೆ. ಈ ಹೊಸ ಟೀಕಾಕಾರರ ಪ್ರಕಾರ ನಿಕಿಟಿನ್ ಅತ್ಯಂತ ಸಾಮಾನ್ಯ ಮನುಷ್ಯನ ಹಾಗೆ ಭಾರತಕ್ಕೆ ಭೇಟಿಕೊಟ್ಟನು. ಯೂರೋಪಿನಿಂದ ಹೋದ ಇತರ ಪ್ರವಾಸಿಗಳು ರಾಜ–ಮಹಾರಾಜರ ಹಾಗೆ ತಿರುಗಾಡಿದರು. ನಿಕಿಟಿನ್ನನು ಇವರಿಗೆ ವಿರುದ್ಧ ಸಾಮಾನ್ಯ ಪ್ರಜೆಯ ಹಾಗೆ ಹೋಗಿ ಸಾಮಾನ್ಯ ಪ್ರಜೆಗಳ ಜತೆಗೆ ಸೇರಿ ಅವರ ನೋವು ನಲಿವುಗಳನ್ನು ಅರ್ಥಮಾಡಿಕೊಂಡು ಮನಮುಟ್ಟುವ ಹಾಗೆ ಬರೆದಿದ್ದಾನಂತೆ.[7]

೫. ಯಾವುದೊ ಕಾರಣದಿಂದ ನಮ್ಮ ಲಕ್ಷ್ಯ ಕೆಲವು ಪ್ರವಾಸಿಗಳ ಕಡೆ ಹರಿದೆ ಇಲ್ಲ, ಹರಿಯುವುದು ಅವಶ್ಯ. ಇದಕ್ಕೆ ಒಂದು ಉದಾಹರಣೆ, ಟಾಮ್ ಪರೇಸನ 'ಸಮಾ ಓರಿಯಂಟಲ್.' ಪರೇಸನು ವಿಜಯನಗರದ ಬಗ್ಗೆ ಸಂಕ್ಷಿಪ್ತವಾಗಿ ಆದರೆ ಹೊಸ ವಿಷಯಗಳನ್ನು ಒಳಗೊಂಡು ಬರೆದಿದ್ದಾನೆ. ಅದರ ಬಂದರುಗಳಾದ ಹೊನ್ನಾವರ, ಭಟಕಳ್, ಮಂಗಳೂರುಗಳ ಬಗೆಗೆ ಬರೆದಿದ್ದಾನೆ. ಕೃಷ್ಣದೇವರಾಯನು ಕನ್ನಡದವನೆಂದು ಬರೆದಿದ್ದಾನೆ.[8] ವಿಜಯನಗರದ ಬಗ್ಗೆ ಬರೆಯುವವರು ಅದರಲ್ಲಿಯೂ ಕೃಷ್ಣದೇವರಾಯನ ಬಗ್ಗೆ ಬರೆಯುವವರು ಇವನ ವರದಿಯನ್ನು ಓದಲೇಬೇಕು.

ಕೊನೆಯದಾಗಿ, ಪ್ರವಾಸಿ ಸಾಹಿತ್ಯದ ಅಧ್ಯಯನದಲ್ಲಿ ಈ ಹೊಸ ಹೆಜ್ಜೆಗಳು ಏಕೆ ಅನಿವಾರ್ಯವೆಂದು ಈಗ ನೋಡೋಣ. ಹತ್ತೊಂಬತ್ತನೆಯ ಶತಮಾನದಲ್ಲಿ ಮತ್ತು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ಭಾರತೀಯ ಇತಿಹಾಸಕ್ಕೆ ಸಾಮಗ್ರಿಗಳನ್ನು ಹುಡುಕುವುದರಲ್ಲಿ ಇತಿಹಾಸಕಾರರು ನಿರತರಾಗಿದ್ದರು. ವಿದೇಶದಲ್ಲಿದ್ದ ಭಾರತೀಯರ ಚಟುವಟಿಕೆಗಳ ಕಡೆ ಅವರ ದೃಷ್ಟಿ ಹಾಯಲಿಲ್ಲ. ಈಗ ಆ ಭಾರತೀಯರ ಬಗೆಗೆ ತಿಳಿದುಕೊಳ್ಳುವ ಉತ್ಸುಕತೆ ಹೆಚ್ಚಾಗಿದೆ. ಪ್ರಾಚೀನ ಯುಗದಲ್ಲಿ ಕ್ರಿಸ್ತಶಕದ ಮೊದಲ ಸಾವಿರ ವರ್ಷಗಳಲ್ಲಿ ಚೀನಾಕ್ಕೂ ಭಾರತಕ್ಕೂ ನಿಕಟ ಸಂಪರ್ಕವಿತ್ತು. ನೂರಾರು ಭಾರತೀಯ ವಿದ್ವಾಂಸರು, ವ್ಯಾಪಾರಿಗಳು, ಕಲೆಗಾರರು ಅಲ್ಲಿಗೆ ಹೋಗಿ ನೆಲಸಿ ನಮ್ಮ ಸಂಸ್ಕೃತಿಯನ್ನೂ ಬೌದ್ಧಮತವನ್ನೂ ಹರಡಿದರು. ಆದರೆ ಅವರು ತಾವು ಮಾಡಿದ ಕೆಲಸದ ಬಗ್ಗೆ ಒಂದು ಚಕಾರವನ್ನೂ ಬರೆದಿಡಲಿಲ್ಲ. ಚೀನಿ ಪ್ರವಾಸಿಗಳು ತಮ್ಮ ಭಾರತದ ಪ್ರವಾಸದ ಬಗ್ಗೆ ಬರೆಯುವುದನ್ನು ನಮ್ಮ ಇತಿಹಾಸಕಾರರು ತಿಳಿದುಕೊಂಡಿದ್ದಾರೆ. ಚೀನಾದಲ್ಲಿಯ ಭಾರತೀಯರ ಚಟುವಟಿಕೆಗಳನ್ನು ನಾವು ಸಂಪೂರ್ಣವಾಗಿ ಅಲಕ್ಷಿಸಿದ್ದೇವೆ. ಈ ಚಟುವಟಿಕೆಗಳು ಚೀನಿಯ ಇತಿಹಾಸದಲ್ಲಿ ಹಾಸು ಹೊಕ್ಕಾಗಿವೆ. ಇದುವರೆಗೂ ಯೂರೋಪಿಯನ್ನರು

---

6 S. Dutt : *Buddhist Monks and Monasteries of India :* ಈ ಪುಸ್ತಕದ ಅನುಬಂಧದಲ್ಲಿ, ಇತ್ಸಿಂಗನ ಎರಡನೇ ಪುಟದ ಭಾಷಾಂತರವಿದೆ.

7 *Bharat-Rus* : The Chapter on A.Nikitin

8 *The Suma Oriental of Tome Pires*, London, 1944

ಚೀನಿ ಇತಿಹಾಸದ ಬಗೆಗೆ ತಮ್ಮ ಭಾಷೆಯಲ್ಲಿ ಬರೆದಿದ್ದಾರೆ. ಈ ಗ್ರಂಥಗಳು ಭಾರತೀಯ ಇತಿಹಾಸಕಾರರಿಗೆ ಪರಿಚಯವಾಗಿವೆ. ಈಚೆಗೆ ಜಪಾನಿಯರು ಈ ಅಧ್ಯಯನದಲ್ಲಿ ಯುರೋಪಿನವರನ್ನು ಮತ್ತು ಚೀನಿಯರನ್ನು ಹಿಂದೆ ಹಾಕಿದ್ದಾರೆ. ನಮ್ಮವರು ಜಪಾನಿ ಮತ್ತು ಚೀನಿ ಭಾಷೆಗಳನ್ನು ಅಭ್ಯಾಸ ಮಾಡಿದರೆ ಪ್ರಾಚೀನ ಭಾರತೀಯ ಇತಿಹಾಸಕ್ಕೆ ವಿಪುಲಸಾಮಗ್ರಿಯನ್ನೂ ಅದರ ಅಧ್ಯಯನಕ್ಕೆ ಒಂದು ಹೊಸ ಆಯಾಮವನ್ನೂ ತಂದುಕೊಡಬಹುದು.

ಮಧ್ಯಯುಗದಲ್ಲಿ ಭಾರತೀಯರು ಪರ್ಷಿಯವನ್ನು ತಮ್ಮ ಕೇಂದ್ರವನ್ನಾಗಿ ಕೂಡಿಕೊಂಡು ಪಶ್ಚಿಮ ಏಷ್ಯಾ ಮತ್ತು ರಷ್ಯಾಗಳೊಡನೆ ತಮ್ಮ ವ್ಯಾಪಾರವನ್ನು ಬೆಳೆಸಿಕೊಂಡಿದ್ದರು. ಇವರ ಚಟುವಟಿಕೆಗಳು ಯುರೋಪಿನಿಂದ ಭಾರತಕ್ಕೆ ಬಂದ ಪ್ರವಾಸಿಗಳ ಬರೆಹಗಳಲ್ಲಿ ನಾವು ನೋಡಬಹುದು. ಇದುವರೆಗೂ ಈ ಯುರೋಪಿಯನ್ ಭಾಷೆಗಳಲ್ಲಿರುವ ಪ್ರವಾಸಿಗಳ ವರದಿಗಳ ಇಂಗ್ಲೀಷ್ ಭಾಷಾಂತರಗಳನ್ನು ನಾವು ಓದುತ್ತಿದ್ದೆವು. ಈಚೆಗೆ ಭಾರತೀಯರು ಫ್ರಾನ್ಸ್, ಜರ್ಮನಿ ಮತ್ತು ರಷ್ಯಾಗಳಿಗೆ ಹೋಗಿ ಆ ಭಾಷೆಗಳಲ್ಲಿ ನಮ್ಮಲ್ಲಿಗೆ ಬಂದ ಆದರೆ ಇದುವರೆಗೂ ನಮಗೆ ತಿಳಿಯದ ಪ್ರವಾಸಿಗಳ ಲೇಖನಗಳನ್ನು ಪತ್ತೆ ಹಚ್ಚಿದ್ದಾರೆ. ಹೀಗೆ ಪ್ರವಾಸಿ ಸಾಹಿತ್ಯ ವಿಪುಲವಾಗಿರುವುದನ್ನು ಮತ್ತು ಅವುಗಳ ಅಧ್ಯಯನದಿಂದ ನಮ್ಮ ಇತಿಹಾಸಕ್ಕೆ ಹೊಸ ಸಾಮಗ್ರಿ ದೊರಕುವುದನ್ನು ಕಂಡುಹಿಡಿದಿದ್ದಾರೆ.

ಡಿ. ಕೆ. ಕುಲಕರ್ಣಿ

ಶಿವಮೊಗ್ಗ ಜಿಲ್ಲೆಯಲ್ಲಿ ರೈತರ ಸಂಘಟನೆ ಮತ್ತು ಚಳವಳಿಗಳು (೧೯೩೦–೧೯೮೦)

ಕರ್ನಾಟಕ ರೈತ ಚಳುವಳಿಯ ಇತಿಹಾಸದಲ್ಲಿ ಶಿವಮೊಗ್ಗ ಜಿಲ್ಲೆಗೆ ವಿಶೇಷ ಸ್ಥಾನವಿದೆ. ೧೯೩೦ ರಿಂದ ೧೯೮೦ರ ವರೆಗಿನ ಇತಿಹಾಸವನ್ನು ಪರಿಶೀಲಿಸಿದಾಗ ಶಿವಮೊಗ್ಗ ಜಿಲ್ಲೆ ಅನೇಕ ರೈತ ಸಂಘಟನೆಗಳನ್ನು ಸ್ಥಾಪಿಸಿ ರೈತ ಚಳವಳಿಗಳನ್ನು ಕರ್ನಾಟಕದಾದ್ಯಂತ ವಿಸ್ತರಿಸಲು ಕಾರಣವಾಗಿದೆ.

ರೈತ ಚಳವಳಿಗಳು : ಬ್ರಿಟಿಷರು ಭಾರತವನ್ನು ಆಕ್ರಮಿಸಿಕೊಳ್ಳುವಾಗ ಇತರ ಭಾಗಗಳಲ್ಲಿ ಆದಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಕೂಡ ಕೆಲವೊಂದು ದಂಗೆಗಳಾದವು. ಈ ದಂಗೆಗಳು ಕೂಡ ಕಳೆದುಹೋದ ಅರಸರ ಅಧಿಕಾರವನ್ನು ತಿರುಗಿ ಪಡೆಯಲು ನಡೆದ ಮತ್ತು ವಿಪರೀತ ಕಂದಾಯವೇರಿ ಅಧಿಕಾರಿಗಳ ಕಿರುಕುಳತನಕ್ಕೆ ಆದವು.[1] ಆದರೆ ಇವುಗಳು ರೈತರ ಸಮೂಹಕ್ಕೆ ಯಾವುದೇ ಲಾಭ ತರಲಿಲ್ಲ.

ಕಾನೂನು ಭಂಗ ಮತ್ತು ಚಲೇಜಾವ್ ಚಳವಳಿ: ೨೦ನೆಯ ಶತಮಾನದ ಆರಂಭದ ದಶಕದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ರೈತರನ್ನು ತನ್ನ ಚಳವಳಿಗಳಲ್ಲಿ ಸೇರಿಸಿಕೊಳ್ಳತೊಡಗಿತು. ೧೯೩೦_೩೧ರಲ್ಲಿ ನಡೆದ ಕಾನೂನು ಭಂಗ ಚಳವಳಿ ಶಿವಮೊಗ್ಗ ಜಿಲ್ಲೆಯಲ್ಲಿ ಕೂಡ ಪ್ರಾರಂಭವಾಯಿತು. ಉತ್ತರಕನ್ನಡ ಮತ್ತು ಧಾರವಾಡ ಜಿಲ್ಲೆಗಳ ಚಳವಳಿಯಲ್ಲಿ ಆದ ಆಸ್ತಿಪಾಸ್ತಿ ಮುಟ್ಟುಗೋಲು ಮತ್ತು ಹರಾಜನ್ನು ಪ್ರತಿಭಟಿಸಿ, ಶಿವಮೊಗ್ಗ ಜಿಲ್ಲೆಯ ರೈತರು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಸೊರಬ ತಾಲೂಕಿನ ಹೆಚ್ಚೆ ಗ್ರಾಮದ ರೈತ ಮಹಿಳೆಯರು ಚಳವಳಿಯಲ್ಲಿ ಭಾಗ ವಹಿಸಿ, ಉತ್ತರಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ವಶಪಡಿಸಿಕೊಂಡ ರೈತರ ಆಸ್ತಿಪಾಸ್ತಿಗಳನ್ನು ಹಿಂದಿರುಗಿಸ ಬೇಕೆಂದು ಒತ್ತಾಯಿಸಿದರು.[2] ಉತ್ತರಕನ್ನಡ ಮತ್ತು ಧಾರವಾಡ ಜಿಲ್ಲೆಗಳಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಚಳವಳಿ ಅಷ್ಟೊಂದು ಉಗ್ರ ರೀತಿಯಲ್ಲಿ ಆಗದಿದ್ದರೂ ರೈತರಿಗೆ ಕಾಂಗ್ರೆಸ್ ಮತ್ತು ರಾಜಕೀಯದ ಬಗ್ಗೆ ಮಾಹಿತಿ ಮೂಡಿಸಿದಂತಾಯಿತು. ಅಲ್ಲದೆ ಶಿವಮೊಗ್ಗವು ರಾಜಕೀಯವಾಗಿ, ಮೈಸೂರು ಒಡೆಯರ ಸಂಸ್ಥಾನ ದಲ್ಲಿ ಇದ್ದುದರಿಂದ ಬ್ರಿಟಿಷರ ವಿರುದ್ಧ ಹೋರಾಡಲು ಅವರಿಗೆ ನೇರವಾದ ಕಾರಣವು ಇರಲಿಲ್ಲ.

೧೯೪೨ರ ಚಲೇಜಾವ್ ಚಳವಳಿಯಲ್ಲಿ ಶಿವಮೊಗ್ಗ ಜಿಲ್ಲೆಯ ಕೊಡುಗೆ ಅವಿಸ್ಮರಣೀಯವಾದುದು. ಉಳಿದ ಕಡೆಗಳಂತೆ ಇಲ್ಲಿಯೂ ಕೂಡ ನಾಯಕರೆಲ್ಲರೂ ಬಂಧಿಸಲ್ಪಟ್ಟಿದ್ದರಿಂದ ಅಥವಾ ಭೂಗತರಾಗಿದ್ದರಿಂದ ಚಳವಳಿ ಹಿಂಸಾತ್ಮಕ ರೂಪು ತಾಳಿತು. ಮೊದ

---

1 ಟಿಪ್ಪುಸುಲ್ತಾನನ ಪತನದ ನಂತರ (೧೭೯೯) ಕೆಲವೊಂದು ಅಸಂತುಷ್ಟ ನಾಯಕರು (ದೊಂಡಿಯಾ ವಾಘ್, ಸ್ವಾಮಿ ಅಪರಾಂಪರ ಮತ್ತು ಇತರರು) ಮತ್ತೆ ಅಧಿಕಾರ ಕಳೆದುಕೊಂಡು ಅರಸರನ್ನು ತರಲು ಪ್ರಯತ್ನಿಸಿದರು. ೧೮೩೦ರಲ್ಲಿ ನಡೆದ ನಗರ (ಬಿದನೂರು) ದಂಗೆ, ರೈತರು ಅಧಿಕಾರಿಶಾಹಿಗಳ ವಿರುದ್ಧ ನಡೆಸಿದ ಒಂದು ಹೋರಾಟವಾಗಿದೆ.

2 ಕರ್ನಾಟಕ ಗೆಝೆಟಿಯರ್-ಶಿವಮೊಗ್ಗ ಜಿಲ್ಲೆ, ೧೯೭೫, ಪು. ೭೫

ಮೊದಲು ಚಳವಳಿ ನಗರ ಪ್ರದೇಶಗಳಿಗೆ ಸೀಮಿತ ವಾಗಿದ್ದು, ನಂತರ ಹಳ್ಳಿಗಳಿಗೂ ಹಬ್ಬಿತು. ಶಿಕಾರಿಪುರ ತಾಲೂಕಿನ ಇಸೂರ ಗ್ರಾಮದಲ್ಲಿ ಕೆಲವೊಂದು ಹಿಂಸಾತ್ಮಕ ಘಟನೆಗಳು ನಡೆದು, ರೊಚ್ಚಿಗೆದ್ದ ಗ್ರಾಮಸ್ಥರಿಂದ ಕೆಲವೊಂದು ಸರಕಾರಿಅಧಿಕಾರಿಗಳು ಕೊಲ್ಲಲ್ಪಟ್ಟರು. ಅತ್ಯಂತ ಉತ್ಸಾಹದಿಂದ ಚಳವಳಿಯಲ್ಲಿ ಭಾಗವಹಿಸಿದ ಇಸೂರಿನ ಯುವಕರು, ಗಾಂಧೀಜಿಯವರ ಕರೆಗಿಂತ ಸ್ವಲ್ಪ ಮುಂದೆ ಹೋಗಿ ಇಸೂರು 'ಸ್ವತಂತ್ರ ಹಳ್ಳಿ' ಯೆಂದು ಘೋಷಿಸಿದರು. ಆಗಸ್ಟ್, ೧೯೪೨ರಲ್ಲಿ ಊರಿನ ಪಟೇಲ, ಶ್ಯಾನಭೋಗರನ್ನು ಬಂಧಿಸಿ, ಅವರ ಕಾಗದ ಪತ್ರ ದಫ್ತರಗಳನ್ನು ವಶಪಡಿಸಿಕೊಂಡರು.

ಪರಿಸ್ಥಿತಿಯನ್ನು ಹತೋಟಿಗೆ ತರಲು ಕೆಲವೊಂದು ಅಧಿಕಾರಿಗಳು ಇಸೂರಿಗೆ ಭೇಟಿಕೊಟ್ಟು ಶಾಂತಿ ಸುವ್ಯವಸ್ಥೆ ಜಾರಿಗೆ ತರಲು ಪ್ರಯತ್ನ ನಡೆಸಿದರು. ಆದರೆ, ಇದಾವುದಕ್ಕೂ ಒಪ್ಪದ ಜನ ಗದ್ದಲವೆಬ್ಬಿಸಿದರು. ಅನಂತರ ನಡೆದ ಗೊಂದಲದಲ್ಲಿ ರೊಚ್ಚಿಗೆದ್ದ ಜನ ಅಮಲ್ದಾರ ಮತ್ತು ಪೊಲೀಸ್ ಸಬ್–ಇನ್ಸ್‌ಪೆಕ್ಟರನ್ನು ಕೊಂದರು. ಇದಕ್ಕೆ ಉತ್ತರವಾಗಿ ಸರಕಾರವು ದೊಡ್ಡ ಸಂಖ್ಯೆಯಲ್ಲಿ ಸೈನ್ಯವನ್ನು ಇಸೂರಿಗೆ ಕಳುಹಿಸಿ, ಮುಖಂಡರನ್ನು ಬಂಧಿಸಿ ಚಳವಳಿಯನ್ನು ಅಮಾನುಷವಾಗಿ ಹತ್ತಿಕ್ಕಿತು.

ಸೈನಿಕರು ಅನೇಕ ಜನರನ್ನು (ಮಹಿಳೆಯರನ್ನೂ ಕೂಡ) ಬಂಧಿಸಿ, ಸಾಗರ ಕೋರ್ಟಿಗೆ ಹಾಜರಪಡಿಸಲಾಯಿತು. ಸುಮಾರು ೪೧ ಜನರ ಮೇಲೆ ಖಟ್ಲೆ ನಡೆದು ೫ ಜನರಿಗೆ ಗಲ್ಲಿನ ಶಿಕ್ಷೆಯಾಗಿ, ಮಾರ್ಚ್ ೧೯೪೩ ರಲ್ಲಿ ಗಲ್ಲಿಗೇರಿಸಲಾಯಿತು. ಉಳಿದವರಿಗೆ ಹಲವು ಮಹಿಳೆಯರು ಸೇರಿದಂತೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಯಿತು. ಒಟ್ಟಿನಲ್ಲಿ, ೧೯೪೨ರ ಚಳವಳಿಯಲ್ಲಿ ಎಲ್ಲಾ ಕಡೆ ಹಿಂಸೆಯಾದಂತೆ ಶಿವಮೊಗ್ಗ ಜಿಲ್ಲೆಯಲ್ಲಿ ಕೂಡ ಆಯಿತು. ಹಳ್ಳಿಯ ರೈತರು ಒಗ್ಗಟ್ಟಾಗಿ, ಸರಕಾರದ ವಿರುದ್ಧ ಮಾಡಿದ ಈ ಇಸೂರಿನ ಘಟನೆ ಒಂದು ಸ್ವತಂತ್ರ ಸಂಗ್ರಾಮದಲ್ಲಿ ಚೌರಿಚೌರಾದಂತೆ ಅವಿಸ್ಮರಣೀಯವಾದದ್ದು. ಇಸೂರಿನಲ್ಲಿ ನಡೆದ ಘಟನೆ ಉತ್ಸಾಹಿ ಯುವಕರು ಮಾಡಿದ ಆವೇಶದ ಘಟನೆಯಾಗಿದ್ದು, ಗಾಂಧೀಜಿಯವರ ಅಹಿಂಸೆ ತತ್ವವು ವಿಫಲವಾದುದೆಂದು ಹೇಳಲು ಬರುವಂತಿಲ್ಲ. ಅದು ಏನೇ ಇದ್ದರೂ, ಶಿವಮೊಗ್ಗ ಜಿಲ್ಲೆಯ ಜನತೆ ಈ ಘಟನೆಗಳಿಂದಾಗಿ, ರಾಜಕೀಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮುಂದೆ ಬರುವ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಪ್ರಬುದ್ಧರಾದರು.

ಕಾಗೋಡ ಗೇಣಿದಾರರ ಚಳವಳಿ (೧೯೫೧): ಸ್ವಾತಂತ್ರ್ಯ ದೊರೆತ ನಂತರದ ಭೂಸುಧಾರಣೆಗೆ ಸಂಬಂಧಿಸಿದ ಚಳವಳಿಗಳಲ್ಲಿ ಕಾಗೋಡಿನಲ್ಲಿ ನಡೆದ ಭೂಮಾಲೀಕರ ವಿರುದ್ಧ ನಡೆದ ಗೇಣಿದಾರರ ಚಳವಳಿ ಕರ್ನಾಟಕದಲ್ಲಿ ಮುಂದೆ ಬರುವ ಭೂಸುಧಾರಣೆ ಮೇಲೆ ಮಹತ್ವದ ಪಾತ್ರ ಬೀರಿತು. ಕಾಂಗ್ರೆಸ್ ತನ್ನ ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ವಿರುದ್ಧ ಬಡರೈತರನ್ನು ಸೇರಿಸಿಕೊಳ್ಳಲು ಅನೇಕ ಭೂಸುಧಾರಣಾ ವಚನಗಳನ್ನು ಕೊಟ್ಟಿತ್ತು. ಆದರೆ ಸ್ವಾತಂತ್ರ್ಯದ ನಂತರದಲ್ಲಿ ವಚನ ಕೊಟ್ಟಂತೆ ಭೂಸುಧಾರಣೆ ತೀವ್ರಗತಿಯಲ್ಲಿ ಸಾಗಲಿಲ್ಲ. ಇದರಿಂದಾಗಿ, ಆಗತಾನೇ ಕಾಂಗ್ರೆಸ್ಸಿನಿಂದ ಸಿಡಿದು ಬಂದ ಸಮಾಜವಾದಿಗಳು, 'ಉಳುವವನಿಗೆ ಭೂಮಿ' ಎಂಬ ಪ್ರಣಾಳಿಕೆಯೊಂದಿಗೆ ರೈತರ ಚಳವಳಿಗಳನ್ನು ಬೆಂಬಲಿಸತೊಡಗಿದರು.

ಸಾಗರ ತಾಲೂಕಿನ ಕಾಗೋಡ ಗ್ರಾಮದಲ್ಲಿ ಗೌಡರ ಮನೆಯೊಂದೇ ಭೂ ಒಡೆತನ ಹೊಂದಿದ್ದು, ಉಳಿದ ಸುಮಾರು ೭೦ ಕುಟುಂಬಗಳು ಅವರ ಗೇಣಿದಾರಗರಾಗಿದ್ದರು. ತಲೆ ತಲಾಂತರದಿಂದ ಬಂದ ಈ ಪದ್ಧತಿಯನ್ನು, ಸ್ವತಂತ್ರವಾದ ನಂತರ ಕೆಲವೊಂದು ವಿದ್ಯಾವಂತ ಗೇಣಿದಾರ ಯುವಕರು ಪ್ರಶ್ನಿಸಿದ್ದರೂ ಯಾವುದೇ ಫಲ ದೊರೆತಿರಲಿಲ್ಲ. ಗೌಡರಿಗೂ ಗೇಣಿದಾರರಿಗೂ ಜಗಳ ಆರಂಭವಾದದ್ದು ಕೊಳಗ ಅಳತೆಯಲ್ಲಿ ಗೇಣಿದಾರರಿಗೆ ಆಗುತ್ತಿದ್ದ ಅನ್ಯಾಯದಲ್ಲಿ. ಗೇಣಿದಾರರೂ ಈ ಅನ್ಯಾಯವನ್ನು ಸರಿಪಡಿಸಿ ಎಂದು ಕೇಳಿದಾಗ ಗೌಡರ ಇದನ್ನು ತಮ್ಮ ಪ್ರತಿಷ್ಠೆಯ ವಿಷಯವಾಗಿ ತೆಗೆದುಕೊಂಡು ಗೇಣಿದಾರರನ್ನು ಸಂಪೂರ್ಣ ಒಕ್ಕಲೆಬ್ಬಿಸಲು ನೋಡಿದರು. ಆದರೆ ಈಗಾಗಲೇ ಕೆಲವೊಂದು ಬಾರಿ ಗೌಡರೊಂದಿಗೆ ವಿರಸಕ್ಕೆ ಇಳಿದು, ದೀವರ ಸಂಘಟನೆ ಮಾಡಿಕೊಂಡಿದ್ದ ಗಣಪತಿಯಪ್ಪ, ಒಕ್ಕಲೆಬ್ಬಿಸುವುದನ್ನು ವಿರೋಧಿಸಿ ಈ ಘಟನೆಯನ್ನು ಎಲ್ಲಾ ಕಡೆ

ಹರಡುವಂತೆ ಮಾಡಿದರು.[3] ಗೌಡರು ಅಷ್ಟಕ್ಕೆ ಬಿಡದೇ ಗೇಣಿದಾರರು ಎಲ್ಲಾ ಸಾಗುವಳಿಯನ್ನು ಬಿಡಬೇಕೆಂದು ಹಟ ಹಿಡಿದರು. ಮುಂದೆ ಈ ಜಗಳ ವಿಕೋಪಕ್ಕೆ ಹೋಗಿ, ಸಮಾಜವಾದಿಗಳ ಮತ್ತು ಕಾಂಗ್ರೆಸ್ಸಿಗರ ನಡುವೆ ನಡೆದ ಯುದ್ಧವಾಯಿತು.

ಸಮಾಜವಾದಿಗಳ ಮುಖಂಡರಾದ ರಾಮ ಮನೋಹರ ಲೋಹಿಯಾ, ಜಯಪ್ರಕಾಶ ನಾರಾಯಣ, ಶಾಂತವೇರಿ ಗೋಪಾಲಗೌಡ ಮುಂತಾದವರು ಕಾಗೋಡಿಗೆ ಭೇಟಿಕೊಟ್ಟು ಚಳವಳಿಯನ್ನು ಮುಂದು ವರೆಸಲು ಉತ್ತೇಜನ ಕೊಟ್ಟರು. ಆದರೆ ಚಳವಳಿ ಬಹಳ ದೀರ್ಘ ಕಾಲದವರೆಗೆ ಹೋಗತೊಡಗಿದ್ದರಿಂದ ಕಾಗೋಡಿನ ಒಕ್ಕಲುಗಳು ಅದರಲ್ಲಿ ಉತ್ಸಾಹ ಕಳೆದು ಕೊಂಡರು. ಕೋರ್ಟು, ಕಛೇರಿ, ಜಫ್ತಿಗಳಿಂದ ಅವರ ಬಲವೆಲ್ಲ ಉಡುಗಿಹೋಗಿ, ಸಾಗರ ಕೋರ್ಟಿಗೆ ತಿರು ಗಾಡುವಲ್ಲಿ ಎಲ್ಲವನ್ನೂ ಕಳೆದುಕೊಂಡರು. ಸಮಾಜ ವಾದಿ ಮುಖಂಡರು ಚಳವಳಿ ಮುಂದುವರೆಸಲು ಇಚ್ಛೆ ಯುಳ್ಳವರಾಗಿದ್ದರೆ ವಿನಾ ಯಾರಿಗೂ ನಡೆಸಿಕೊಂಡು ಹೋಗುವ ಸಾಮರ್ಥ್ಯವಿರಲಿಲ್ಲ.[4]

ಕಾಗೋಡ ಚಳವಳಿ ಗೇಣುದಾರರಿಗೆ ಯಾವುದೇ ಲಾಭ ತರದೇ ವಿಫಲವಾದರೂ ಮುಂದಿನ ಭೂ ಸುಧಾರಣೆ ಕಾನೂನುಗಳ ಮೇಲೆ ತನ್ನ ಪ್ರಭಾವವನ್ನು ಬೀರಿತು. ಮುಂದೆ ಬಂದ ೧೯೫೪, ೧೯೬೧ ಮತ್ತು ೧೯೭೪ರ ಭೂಸುಧಾರಣಾ ಕಾನೂನುಗಳು ಗೇಣಿದಾರ ರನ್ನು ಲಕ್ಷ್ಯದಲ್ಲಿಟ್ಟುಕೊಂಡು ಜಾರಿಗೆ ತರಲಾಯಿತು. ಅನಂತರ ಕರ್ನಾಟಕದಲ್ಲಿ ಗೇಣಿ ಪದ್ಧತಿ ಸಂಪೂರ್ಣವಾಗಿ ತೊಡೆದು ಹಾಕಿ ಉಳುವವನೇ ನೆಲದೊಡೆಯನಾದನು.

ಭೂದಾನ ಚಳವಳಿ (೧೯೫೭–೫೮) : ತೆಲಂಗಣ ಮತ್ತು ಇತರ ಹಿಂಸಾತ್ಮಕ ಚಳವಳಿಗಳು ಆಗದಂತೆ ತಡೆ ಯಲು, ೧೯೫೦ರ ದಶಕದಲ್ಲಿ ಆಚಾರ್ಯ ವಿನೋಬಾ ಭಾವೆಯವರು ಭೂ ಮತ್ತು ಗ್ರಾಮದಾನ ಚಳವಳಿ ಗಳನ್ನು ಆರಂಭಿಸಿದರು. ಶ್ರೀಮಂತ ರೈತರಲ್ಲಿ ಇದ್ದ ಭೂಮಿಯನ್ನು ಕಾಣಿಕೆಯ ರೂಪದಲ್ಲಿ ಪಡೆದು ಬಡರೈತ ರಲ್ಲಿ ಅದನ್ನು ಹಂಚುವುದೇ ಭೂದಾನ ಚಳವಳಿಯ ಧ್ಯೇಯ ವಾಗಿತ್ತು. ೧೯೫೭–೫೮ರಲ್ಲಿ ಕರ್ನಾಟಕಕ್ಕೆ ಭೇಟಿಯಿತ್ತ ಭಾವೆಯವರು ಶಿವಮೊಗ್ಗ ಜಿಲ್ಲೆಯಲ್ಲಿ ಹಲವು ಹಳ್ಳಿಗಳಲ್ಲಿ ಸಂಚರಿಸಿ, ಅನೇಕ ಎಕರೆ ಭೂಮಿಯನ್ನು ದಾನವಾಗಿ ಪಡೆದರು. ಸರ್ವೋದಯ ಮತ್ತು ಗಾಂಧಿಸ್ಮಾರಕ ನಿಧಿ ಸೇವಕರು ಇದರಲ್ಲಿ ಪಾಲ್ಗೊಂಡು ಪಾದಯಾತ್ರೆ ನಡೆಸಿ ದರು. ಶಿವಮೊಗ್ಗ ಜಿಲ್ಲೆಯ ಮಲ್ಲಿಕಾರ್ಜುನಪ್ಪ ಗೌಡರು ಅನೇಕ ಕಡೆ ಪಾದಯಾತ್ರೆ ಮಾಡಿ ಭೂದಾನ ಮತ್ತು ಗ್ರಾಮದಾನಗಳ ತತ್ವ ಪ್ರಚಾರ ಮಾಡಿದರು. ಶಿವಮೊಗ್ಗ ಜಿಲ್ಲೆಯ ಭೂದಾನದಲ್ಲಿ ಪಡೆದುಕೊಂಡ ಭೂಮಿಯ ಖಚಿತ ಅಂಕಿ–ಸಂಖ್ಯೆಗಳು ದೊರಕುತ್ತವೆ.[5]

ಯಶಸ್ಸಿನ ದೃಷ್ಟಿಯಿಂದ ಭೂದಾನ ಚಳವಳಿ ಅಷ್ಟೇನೂ ಸಫಲವಾಗಲಿಲ್ಲ. ಈ ದಾನಗಳಲ್ಲಿ ಬಹಳಷ್ಟು ಭಾವೆಯವರಿಗೆ ಕೊಟ್ಟ ಕೇವಲ ಬಾಯಿ ಮಾತಿನ ವಚನಗಳೆನಿಸಿದ್ದವು. ದಾನ ತೆಗೆದುಕೊಂಡ ಭೂಮಿ ಗಳನ್ನು ಯಾವುದೆಂದು ಗುರುತಿಸಿದಲ್ಲಿ ಕೆಲವೇ ಎಕರೆ ಭೂಮಿಯ ಸರ್ವೆ ನಂಬರುಗಳನ್ನು ಮಾತ್ರ ದಾಖಲಿಸ ಲಾಗಿತ್ತು. ಅನಂತರ ಬಂದ ಮುಂದಿನ ಪೀಳಿಗೆ ಯವರು ತಮ್ಮ ತಂದೆ, ಮುತ್ತಜ್ಜರು ಕೊಟ್ಟ ದಾನ ವನ್ನು ಕೊಡಲು ನಿರಾಕರಿಸಿದರು. ಇದರ ವಿಫಲತೆಗೆ ಸರಕಾರ ತೋರಿದ ನಿರ್ಲಕ್ಷ್ಯವೂ ಇನ್ನೊಂದು ಕಾರಣ ವಾಯಿತು.

ಕಬ್ಬು ಬೆಳೆಗಾರರ ಸಂಘಟನೆ ಮತ್ತು ರೈತ ಸಂಘದ ಚಳವಳಿಗಳು : ೧೯೬೦ರ ದಶಕದಲ್ಲಿ ಬಂದ

---

3 ವಿವರಗಳಿಗೆ: 'ಟೇನಸ್ಸಿ ರಿಲೇಶನ್ಸ್ ಇನ್ ಕರ್ನಾಟಕ, ಎ ಸ್ಟಡಿ ಆಫ್ ಕಾಗೋಡ್ ಟೆನಂಟ್ಸ್ ಎಜಿಟೇಶನ್, ಶಿವಮೊಗ್ಗ ಜಿಲ್ಲೆ, ೧೯೫೧', ಶಿವಮೊಗ್ಗದಲ್ಲಿ ೧೯೪೯ರಲ್ಲಿ ಕರ್ನಾಟಕ ಹಿಸ್ಟ್ರಿ ಕಾಂಗ್ರೆಸ್‌ನ ೮ನೆಯ ಸಮ್ಮೇಳನದಲ್ಲಿ ಮಂಡಿಸಿದ ನನ್ನ ಲೇಖನ– (ಅಪ್ರಕಟಿತ); ಜಿ. ರಾಜಶೇಖರ : ಕಾಗೋಡ ಸತ್ಯಾಗ್ರಹ, ೧೯೮೦, ಸಾಗರ ; ಗೋವಿಂದರಾವ್ : 'ದಿ ಕಾಗೋಡ ಸತ್ಯಾಗ್ರಹ' ಡೆಕ್ಕನ್ ಹೆರಾಲ್ಡ್, ೨೯–೧-೧೯೮೪

4 ಕಾಗೋಡ ಸತ್ಯಾಗ್ರಹ

5 ನೋಡಿ : ಕರ್ನಾಟಕ ಗೆಝೆಟಿಯರ್ – ಶಿವಮೊಗ್ಗ ಜಿಲ್ಲೆ, ಪು. ೩೯೫

'ಹಸಿರು ಕ್ರಾಂತಿ' ಭಾರತದ ರೈತರಲ್ಲಿ ಹೊಸದೊಂದು ವರ್ಗವನ್ನು ನಿರ್ಮಿಸಿತು. ನೀರಾವರಿ, ಉತ್ತಮ ಇಳುವರಿ, ಕ್ರಿಮಿನಾಶಕ ಔಷಧಗಳು ಮತ್ತು ವಾಣಿಜ್ಯ ಬೆಳೆಗಳು ಬೇಸಾಯದಲ್ಲಿ ಉಪಯೋಗಿಸಿ, ಆರ್ಥಿಕವಾಗಿ ಬಲಿಷ್ಠವಾದ ಒಂದು ರೈತರ ಲಾಬಿ ಹುಟ್ಟಿತು. ಇದರಿಂದ ಆಹಾರದ ಉತ್ಪಾದನೆ ಹೆಚ್ಚಾಗಿ, ದೇಶವು ಆಹಾರ ಪದಾರ್ಥಗಳ ಆಮದು ನಿಲ್ಲಿಸಿತು. ಆದರೆ ಇದರಿಂದ ರೈತರಿಗೆ ಆದ ಲಾಭ ಅಷ್ಟಕಷ್ಟೆ. ಇವರು ಬೆಳೆದ ಬೆಳೆಗಳಿಗೆ ಮಾರುಕಟ್ಟೆಯಲ್ಲಿ ನಿಶ್ಚಿತ ಬೆಲೆ ಇಲ್ಲದೇ, ಕೆಲವೊಂದು ಬಾರಿ ಹಾನಿ ಆಗತೊಡಗಿತು. ಇದರಿಂದ ಹೆಚ್ಚು ಬಂಡವಾಳ ತೊಡಗಿಸಿ, ಆಧುನಿಕ ಸೌಲಭ್ಯಗಳೊಂದಿಗೆ ವ್ಯವಸಾಯದಲ್ಲಿ ತೊಡಗಿದ ಮಧ್ಯಮ ಮತ್ತು ಶ್ರೀಮಂತ ರೈತರಿಗೆ ಅತ್ಯಂತ ನಿರಾಶೆ ಕಾದಿತ್ತು.

ರಾಜಕೀಯ ಮತ್ತು ಆರ್ಥಿಕವಾಗಿ ಪ್ರಜ್ಞೆಯುಳ್ಳ ಈ ರೈತ ಸಮುದಾಯಕ್ಕೆ ಸಂಘಟನೆ ರೂಪ ಕೊಡುವುದಕ್ಕೆ ಬಹಳ ಕಾಲ ಬೇಕಾಗಲಿಲ್ಲ. ಭಾರತದ ಅನೇಕ ರಾಜ್ಯಗಳಲ್ಲಿ ಈ ಮಧ್ಯಮ ಮತ್ತು ಶ್ರೀಮಂತ ವರ್ಗದ ರೈತರ ಹಿತವನ್ನು ಕಾಪಾಡಲು ಭಾರತದ ಅನೇಕ ರಾಜ್ಯಗಳಲ್ಲಿ ಅನೇಕ ರೈತ ಸಂಘಟನೆಗಳು ಹುಟ್ಟಿಕೊಂಡವು. ಕರ್ನಾಟಕದಲ್ಲಿ ಕೂಡ ಈ ದೃಷ್ಟಿಯಿಂದ ಅನೇಕ ಸಂಘಟನೆಗಳು ಹುಟ್ಟಿಕೊಂಡವು. ಅವುಗಳಲ್ಲಿ ಶಿವಮೊಗ್ಗ ಜಿಲ್ಲೆ ಕಬ್ಬು ಬೆಳೆಗಾರರ ಸಂಘ ಮುಂದೆ ಕರ್ನಾಟಕ ರಾಜ್ಯ ರೈತ ಸಂಘವಾಗಿ, ಕರ್ನಾಟಕ ರಾಜಕೀಯದಲ್ಲಿ ಒಂದು ಶಕ್ತಿಯಾಗಿ ಪರಿಣಮಿಸಿತು.

೧೯೭೦ರ ಕೊನೆಯಲ್ಲಿ ಶಿವಮೊಗ್ಗ ಕಬ್ಬು ಬೆಳೆಗಾರರ ಸಂಘವನ್ನು ಮಾಜಿ ಮಂತ್ರಿಗಳಾದ ಎಚ್.ಎಸ್. ರುದ್ರಪ್ಪನವರು ಸ್ಥಾಪಿಸಿದರು.[6] ರಾಜಕೀಯ ಪಕ್ಷಗಳಿಂದ ದೂರವಾದ ಈ ಸಂಘವು ಬಹು ಬೇಗನೆ ರೈತರನ್ನು ಆಕರ್ಷಿಸಿತು. ಅನಂತರ ಈ ಸಂಘಕ್ಕೆ ಪ್ರೊ|| ಎಂ. ಡಿ. ನಂಜುಂಡಸ್ವಾಮಿ ಮತ್ತು ಸುಂದರೇಶ್ ಸೇರಿಕೊಂಡು ಬಲಪಡಿಸಿದರು.

ಈ ಸಂಘಕ್ಕೆ ಒಳ್ಳೆಯ ಅವಕಾಶ ಸಿಕ್ಕಿದ್ದು ಜುಲೈ ೧೯೮೦ರಲ್ಲಿ ನಡೆದ ಮಲಪ್ರಭಾ ರೈತ ದಂಗೆ. ದಂಗೆಗೂ ಈ ಸಂಘಕ್ಕೂ ಯಾವುದೇ ಸಂಬಂಧವಿರದೇ ಇದ್ದರೂ ಮಲಪ್ರಭಾ ದಂಗೆಯಲ್ಲಿ ಆದ ಹಿಂಸೆಯಿಂದ ರಾಜ್ಯದ ತುಂಬ ರೈತರ ಸಮಸ್ಯೆಗೆ ಹೊಸ ಆಯಾಮ ಸಿಕ್ಕಿ, ಸಣ್ಣ ಪುಟ್ಟ ರೈತ ಸಂಘಗಳು ರೈತರ ಪರ ವಾದಿಸಲು ಮುಂದೆ ಬಂದವು. ಈ ಸಂದರ್ಭವನ್ನು ಉಪಯೋಗಿಸಿಕೊಂಡು, ಶಿವಮೊಗ್ಗ ಕಬ್ಬು ಬೆಳೆಗಾರರ ಸಂಘ, ಕರ್ನಾಟಕ ರಾಜ್ಯ ರೈತ ಸಂಘವೆಂದು ಪುನರ್ ನಾಮಕರಣ ಮಾಡಿ, ರಾಜಾದ್ಯಂತ ರಾಸ್ತಾ-ರೋಕೊ ಚಳವಳಿಯನ್ನು ನಡೆಸಿತು. ಕೆಲವೇ ದಿನಗಳಲ್ಲಿ ರಾಜ್ಯದ ಎಲ್ಲಾ ಕಡೆ ಹಬ್ಬಿ, ಕರ್ನಾಟಕ ರಾಜ್ಯ ರೈತ ಸಂಘ ಮನೆ ಮಾತಾಯಿತು.

ಆರ್ಥಿಕವಾಗಿ ರೈತರ ಬೆಳೆಗಳಿಗೆ ತಕ್ಕ ಬೆಲೆ ಎಂಬ ಧ್ಯೇಯ ಮತ್ತು ರಾಜಕೀಯವಾಗಿ ರಾಜಕೀಯೇತರ ಶಕ್ತಿಯೆಂದು ಪ್ರಸಿದ್ಧಿಗೆ ಬಂದಿತು. ಆರ್ಥಿಕವಾಗಿ ತನ್ನ ಮೊದಲಿನ ತತ್ವಕ್ಕೆ ಗಂಟು ಬಿದ್ದರೂ ರಾಜಕೀಯವಾಗಿ ಪಕ್ಷೇತರವಾಗಿ ಉಳಿಯಲಿಲ್ಲ.[7] ಎಲ್ಲಾ ರೈತರು ಒಂದು ವರ್ಗ, ಸರಕಾರದ ನಗರ ಪಕ್ಷಪಾತತನವೇ ಹಳ್ಳಿಗಳ ಬಡತನಕ್ಕೆ ಕಾರಣ, ರೈತರ ಬೆಳೆಗಳಿಗೆ ಔದ್ಯಮಿಕ ವಸ್ತುಗಳ ರೀತಿ ಬೆಲೆ ಕೊಡುವವರೆಗೆ ಹೋರಾಟ-ಇವು ಇವರ ಬಲವಾದ ನಂಬುಗೆಗಳು.

---

6 ರುದ್ರಪ್ಪನವರು ೧೯೬೦ರ ದಶಕದಲ್ಲಿ ಎಸ್. ನಿಜಲಿಂಗಪ್ಪನವರ (೧೯೫೬-೫೮ ಮತ್ತು ೧೯೬೨-೬೮) ಮಂತ್ರಿಮಂಡಲದಲ್ಲಿ ಮಂತ್ರಿಯಾಗಿದ್ದರು. ಕೆಲಕಾಲದ ನಂತರ ಪಕ್ಷದ ರಾಜಕೀಯದಿಂದ ನಿವೃತ್ತರಾಗಿ, ಸಕ್ಕರೆ ಕಾರ್ಖಾನೆಗಳಲ್ಲಿ ರೈತರಿಗೆ ಆಗುತ್ತಿದ್ದ ಮೋಸ-ಅನ್ಯಾಯಗಳನ್ನು ಪ್ರತಿಭಟಿಸಿ, ಹೊಸ ಸಕ್ಕರೆ ಕಾರ್ಖಾನೆ ಸ್ಥಾಪಿಸಲು ಪ್ರಯತ್ನಿಸಿದರು. ಆದರೆ ಸರಕಾರದಲ್ಲಿ ಭಾರಿ ಪ್ರಭಾವವಿದ್ದ ಸಕ್ಕರೆ ಕಾರ್ಖಾನೆ ಮಾಲಿಕರು, ಇವರು ಸಕ್ಕರೆ ಕಾರ್ಖಾನೆ ಸ್ಥಾಪಿಸದಂತೆ ಮಾಡಿದರು. ನಿರುಪಾಯವಾಗಿ ಅವರಿಗೆ ಪಾಠ ಕಲಿಸಲು ಈ ಸಂಘವನ್ನು ಸ್ಥಾಪಿಸಿದರು. ಹೆಚ್ಚಿನ ವಿವರಗಳಿಗೆ : ಎಂ.ಎ. ನಾಡಕರ್ಣಿ: ಫಾರ್ಮರ್ಸ್ ಮೂವಮೆಂಟ್ಸ್ ಇನ್ ಇಂಡಿಯಾ, ೧೯೮೭, ಅಹಮದಬಾದ್, ಪು. ೯೮.

7 ಉಳಿದ ರಾಜ್ಯಗಳಲ್ಲಿ ಕೂಡ ಅನೇಕ ಈ ತರಹದ ರೈತ-ಸಂಘಗಳು ರಾಜಕೀಯೇತರವಾಗಿ, ನಂತರ ಚುನಾವಣೆಗಳಲ್ಲಿ ಇಳಿದಿವೆ. ಉದಾ.: ತಮಿಳುನಾಡಿನಲ್ಲಿ ನಾರಾಯಣಸ್ವಾಮಿ ನಾಯ್ಡು, ಮಹಾರಾಷ್ಟ್ರದಲ್ಲಿ ಶರದ ಜೋಶಿ.

೧೯೮೩ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ, ಕಾಂಗ್ರೆಸ್ ವಿರುದ್ಧ ಕೆಲಸ ಮಾಡಿ, ಪ್ರಪ್ರಥಮ ಬಾರಿಗೆ ಕಾಂಗ್ರೆಸ್ ಪಕ್ಷ ಸೋಲಲು ಒಂದು ಬಲವಾದ ಕಾರಣವಾಯಿತು. ಆದರೆ ಮುಂದೆ ೧೯೮೫ರಲ್ಲಿ ಹೊಸ ಸರ್ಕಾರ ಇದು ಒಂದೇ ರೈತರ ಸಂಘವೆಂದು ಮಾನ್ಯತೆ ಮಾಡದಿದ್ದಾಗ ಮತ್ತೆ ಚಳವಳಿಯ ಹಾದಿ ಹಿಡಿಯಿತು. ಆದರೆ, ಚಳವಳಿ ಅಷ್ಟು ಯಶಸ್ವಿಯಾಗದೇ ಯಾವುದೇ ಲಾಭ ಪಡೆಯದೇ ಬಿಟ್ಟುಕೊಟ್ಟಿತು. ಮತ್ತೆ ಅನೇಕ ಚಳವಳಿಗಳನ್ನು ಮಾಡಿ, ಕೊನೆಗೆ ರಾಜಕೀಯ ಪ್ರವೇಶಿಸಿ, ತನ್ನದೇ ಆದ 'ಕನ್ನಡ ದೇಶ' ಎಂಬ ಪಕ್ಷವನ್ನು ೧೯೮೭ರ ಡಿಸೆಂಬರ್‌ನಲ್ಲಿ ಸ್ಥಾಪಿಸಲಾಯಿತು.

ಉಪಸಂಹಾರ: ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ರೈತ ಚಳವಳಿಗಳು ಕರ್ನಾಟಕದಲ್ಲಿ ರೈತರಿಗಿದ್ದ ರಾಜಕೀಯ ಮತ್ತು ಆರ್ಥಿಕ ಪ್ರಜ್ಞೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ. ಈ ೫೦ ವರ್ಷಗಳ ಇತಿಹಾಸದಲ್ಲಿ ಕರ್ನಾಟಕದ ರೈತನು ಪ್ರೌಢನಾಗಿ ಬೆಳೆದ ಬಗ್ಗೆ ಕಾಲದಿಂದ ಕಾಲಕ್ಕೆ ಆದ ಈ ಚಳವಳಿಗಳು ತೋರಿಸುತ್ತವೆ. ಕೆಲವೊಂದು ಪ್ರದೇಶಗಳಲ್ಲಿ ಹಿಂಸಾತ್ಮಕ ಘಟನೆಗಳು ಜರುಗಿದರೂ ಆದರ ಪರಿಣಾಮಗಳಲ್ಲಿ ಮಾತ್ರ ಅಹಿಂಸಾತ್ಮಕದಲ್ಲಿ ಮುಕ್ತಾಯಗೊಂಡಿವೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೈತರಿಗೆ, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಮಾಹಿತಿ ಸಿಕ್ಕಿತು. ಕಾಗೋಡ ಸತ್ಯಾಗ್ರಹ ಭೂಸುಧಾರಣೆ ದಾರಿದೀಪವಾಯಿತು. ಕರ್ನಾಟಕ ರಾಜ್ಯ ರೈತ ಸಂಘದಿಂದ ರೈತರು ರಾಜಕೀಯವಾಗಿ ಬಲಿಷ್ಠವಾದ ಒಂದು ಲಾಬಿಯಾಗಿ ರೈತರ ಹಿತ ಕಡೆಗಣಿಸದಂತೆ ಸರ್ಕಾರಕ್ಕೆ ಅಂಕುಶವಾಯಿತು.*

---

* ಈ ಲೇಖನವನ್ನು ಬರೆಯುವಲ್ಲಿ ಸಹಾಯ ಮಾಡಿದ ನನ್ನ ಮಾರ್ಗದರ್ಶಕರಾದ ಡಾ॥ ಸಿ.ವಿ. ರಂಗಸ್ವಾಮಿಯವರಿಗೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಮಹತ್ವದ ಮಾಹಿತಿಗಳನ್ನು ಒದಗಿಸಿದ ಡಾ॥ ಎಂ.ವಿ. ನಾಡಕರ್ಣಿ, ಇನ್ಸ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಆ್ಯಂಡ್ ಇಕಾನಮಿಕ್ ಚೇಂಜ್, ಬೆಂಗಳೂರು ಇವರಿಗೆ ಮತ್ತು ಇದರ ಡ್ರಾಫ್ಟನ್ನು ಓದಿ, ತಿದ್ದಿದ ಶ್ರೀ ಎಂ. ಜಿ. ಹೆಗಡೆ, ಇಂಗ್ಲೀಷ್ ಪ್ರಾಧ್ಯಾಪಕ, ಬಾಳಿಗಾ ಕಾಲೇಜು, ಕುಮಟಾ ಇವರಿಗೆ ನನ್ನ ಕೃತಜ್ಞತೆಗಳು.

ಡಾ॥ ಸೂರ್ಯನಾಥ ಕಾಮತ್

ಬೆಂಗಳೂರಿನ ನವೀಕರಣಕ್ಕೆ ಕಾರಣವಾದ ಪ್ಲೇಗ್ ಪಿಡುಗು

ದುರಂತಗಳೂ ವಿನಾಶಕಾರೀ ಘಟನೆಗಳೂ ಹೊಸ ಹುಟ್ಟಿಗೆ ಕಾರಣವಾಗುತ್ತವೆ. ಲಂಡನ್‌ನ ಮಹಾ ಅಗ್ನಿ ಪ್ರಕರಣ ಲಂಡನ್ ನಗರದ ನವೀಕರಣ, ಸೌಂದರ್ಯ ವರ್ಧನೆಗೆ ಕಾರಣವಾದಂತೆ ೧೮೯೮ರಲ್ಲಿ ಬೆಂಗಳೂರಿನಲ್ಲಿ ಕಾಣಿಸಿಕೊಂಡ ಭಾರೀ ಪ್ಲೇಗ್ ಪಿಡುಗು ಅಪಾರ ಸಾವು ನೋವು ಹಾಗೂ ಸಂಕಷ್ಟ ಪರಂಪರೆಗಳಿಗೆ ಜನರು ಒಳಗಾಗುವಂತೆ ಮಾಡಿದರೂ ಬೆಂಗಳೂರು ಒಂದು ಯೋಜಿತ ನವೀಕೃತ ವಿಶಾಲ ನಗರವಾಗುವುದಕ್ಕೆ ಕಾರಣಭೂತವಾಯಿತು.

ಭಾರತದಲ್ಲೆಲ್ಲ ಮಹಾ ತಲ್ಲಣವನ್ನು ಉಂಟು ಮಾಡಿದ ಪ್ಲೇಗ್ ಪೀಡೆಯು ಬಾರದಂತೆ ತಡೆಯಲು ಹಾಗೂ ಬಂದಲ್ಲಿ ಅದನ್ನು ಎದುರಿಸಲು ಮೈಸೂರು ಸರಕಾರವು ಸಾಕಷ್ಟು ಮುಂಜಾಗ್ರತೆಯ ಕ್ರಮಗಳನ್ನು ೧೮೯೭ರ ಫೆಬ್ರುವರಿಯಿಂದಲೇ ಕೈಗೊಂಡಿತ್ತು. ಪ್ಲೇಗ್ ರೋಗಿಗಳನ್ನು ಗುರುತಿಸಲು, ಅವರನ್ನು ಬೇರ್ಪಡಿಸಲು (ಸೆಗ್ರಿಗೇಶನ್) ಹಾಗೂ ಔಷಧೋಪಚಾರ ನಡೆಸಲು ಸೂಕ್ತ ಸೂಚನೆಗಳನ್ನು ಪೋಲೀಸ್ ಅಧಿಕಾರಿಗಳು, ರೈಲ್ವೇ ಸ್ಟೇಶನ್ ಮಾಸ್ತರರು ಹಾಗೂ ಇತರರಿಗೆ ನೀಡಲಾಗಿತ್ತು. ಅದೇ ತಿಂಗಳಲ್ಲಿ ಸಾಂಕ್ರಾಮಿಕ ರೋಗಗಳ ನಿಯಂತ್ರಣ ನಿಯಮ (೨) ೧೮೯೭ನ್ನೂ ಮಂಜೂರು ಮಾಡಲಾಗಿತ್ತು. ೧೮೯೮ರ ಜನವರಿ ತಿಂಗಳಲ್ಲೇ ಆಗಿನ ಐಜಿಪಿಯಾದ ವಿ. ಪಿ. ಮಾಧವರಾಯರನ್ನು ಪ್ಲೇಗ್ ಕಮೀಶನರ್ ಆಗಿ ನೇಮಿಸಲಾಗಿತ್ತು ಮತ್ತು ಈ ರೀತಿ ಕೈಗೊಂಡ ಮುಂಜಾಗ್ರತಾ ಕ್ರಮಗಳ ಪಟ್ಟಿ ದೊಡ್ಡದು.[1]

ಹೀಗಾದರೂ ೧೮೯೮ರ ಆಗಸ್ಟ್ ೧೫ರಂದು ಹುಬ್ಬಳ್ಳಿಯಿಂದ ಬಂದ ರೈಲ್ವೇ ಅಧಿಕಾರಿಯೊಬ್ಬರ ಅಡಿಗೆಯವನೊಬ್ಬ ಬೆಂಗಳೂರಿನಲ್ಲಿ ಪ್ಲೇಗ್‌ನಿಂದ ತೀರಿಕೊಂಡ. ಗೂಡ್‌ಶೆಡ್ ಪರಿಸರದಲ್ಲಿ ಹಲವು ಮರಣಗಳಾಗಿ, ಆಗಸ್ಟ್ ೨೪ರ ಹೊತ್ತಿಗೆ ೧೭ ಸಾವುಗಳಾಗಿ ನಗರದ ವಿವಿಧ ಬಡಾವಣೆಗಳಿಗೆ ಈ ಸಾಂಕ್ರಾಮಿಕ ಪಿಡಗು ಹರಡಿ ೧೮೯೯ರ ಜೂನ್ ವರೆಗೆ ೨,೬೬೫ ಮರಣಗಳು ಹಳೆಯ ಬೆಂಗಳೂರು ಪೇಟೆಯಲ್ಲಿ ದಾಖಲಾದವು. ಜೊತೆಗೆ ೩.೩೯೩ ಪ್ಲೇಗ್‌ನಿಂದಾದ ಮರಣಗಳು ದಾಖಲಾಗದೇ ಹೋದವೆಂದು ಸರಕಾರೀ ವರದಿ ಲೆಕ್ಕ ಹಾಕಿದೆ.[2] ನಗರವನ್ನು ತ್ಯಜಿಸಿ ಬೇರ್ಪಡೆ ಶಿಬಿರ(ಸೆಗ್ರಿಗೇಶನ್ ಕ್ಯಾಂಪ್)ಗಳಲ್ಲಿ ಊರ ಹೊರಗೆ ಹೋಗಿ ಇರಲು ಸರಕಾರವು ಜನರನ್ನು ಒತ್ತಾಯಿಸಿದ್ದರಿಂದ ಸಾವಿರಾರು ಜನ ಊರು ಬಿಟ್ಟು ಗ್ರಾಮಾಂತರ ಪ್ರದೇಶಗಳಿಗೆ ಓಡಿ ಹೋದರು. ಹೀಗಾಗಿ ೧೮೯೧ರ ಖಾನೇಶುಮಾರಿಯಂತೆ ೮೦,೨೮೫ ಇದ್ದು, ೧೮೯೮ರ ಹೊತ್ತಿಗೆ ಸುಮಾರು ೯೦,೦೦೦ ಆಗಿರಬಹುದಾದ ಬೆಂಗಳೂರಿನ ಸಂಖ್ಯೆಯು ೧೮೯೮ರ ಡಿಸೆಂಬರ್‌ನಲ್ಲಿ ನಡೆಸಿದ ಎಣಿಕೆಯಂತೆ ೪೮,೨೩೬ಕ್ಕೆ ಇಳಿದಿತ್ತು.[3] ಎಂದರೆ ೧೫,೦೦೦ ಜನರಾದರೂ ಊರು ಬಿಟ್ಟಿರಬೇಕೆಂದೂ ಅಧಿಕಾರಿಗಳು ಅಂದಾಜು ಮಾಡಿದ್ದರು.

1 ರಿಪೋರ್ಟ್ ಆನ್ ಪ್ಲೇಗ್ ಆಪರೇಶನ್ಸ್ ಇನ್ ದಿ ಮೈಸೂರ್ ಸ್ಟೇಟ್, ಬೆಂಗಳೂರು, ೧೮೯೯, ಪು.೧

2 ಅದೇ

3 ಅದೇ

ಚೀಫ್ ಪ್ಲೇಗ್ ಆಫೀಸರ್ ಕೊಟ್ಟ ವರದಿಯಂತೆ "ಜನರು ತೀವ್ರಭೀತಿಯ ಆಘಾತಕ್ಕೆ ಒಳಗಾಗಿದ್ದರು. ನಗರದ ಬಹಳಷ್ಟು ಭಾಗಗಳು ಬರಿದಾಗಿದ್ದವು. ಜೀವನಾವಶ್ಯಕ ವಸ್ತುಗಳು ಕ್ಷಾಮಕಾಲದ (ಏರಿದ) ಬೆಲೆಗೆ ಮಾರಾಟವಾಗುತ್ತಿದ್ದವು. ರೋಗಿಗಳನ್ನು ಮನೆಯಲ್ಲೇ ಬಿಟ್ಟು ಮನೆಮಂದಿಯೆಲ್ಲ ಓಡಿಹೋಗಿದ್ದರು. ಕೆಲವೊಮ್ಮೆ ರೋಗಿಗಳನ್ನು ಮನೆಯಲ್ಲೇ ಅವರ ಸಂಬಂಧಿಗಳು ಬೀಗ ಹಾಕಿಟ್ಟು ತಮ್ಮ ಸುರಕ್ಷಿತತೆಗಾಗಿ ಪಲಾಯನ ಮಾಡಿದ್ದರು. ಮೃತದೇಹಗಳನ್ನು ಬೀದಿಗಳಲ್ಲಿ ಅಥವಾ ಬೀಗಹಾಕಿದ ಮನೆಗಳ ಅಂಗಳಗಳಲ್ಲಿ, ಕೆಲವೊಮ್ಮೆ ಮುನಿಸಿಪಲ್ ಪಾಯಿಖಾನೆ ಅಥವಾ ಕಸದ ತೊಟ್ಟಿಗಳಲ್ಲಿ ಒಗೆಯುತ್ತಿದ್ದರು."[4]

ಬೆಂಗಳೂರಿನ ಜಿಲ್ಲಾಧಿಕಾರಿ ಹೇಳಿರುವಂತೆ, "ಗುರುತು ಹಿಡಿಯಲಾಗದಂತೆ ಮುಖವನ್ನು ವಿರೂಪಗೊಳಿಸಿ ಚಾಪೆ ಇಲ್ಲವೆ ಕಂಬಳಿಯಲ್ಲಿ ಗಂಟುಕಟ್ಟಿ ಎಸೆಯಲ್ಪಟ್ಟ ಮೃತದೇಹಗಳು ಚರಂಡಿಯಲ್ಲಿ ಸಿಗುವುದು ಸಾಮಾನ್ಯವಾಗಿತ್ತು....ಒಂದು ಮನೆಯಲ್ಲಿ ಮರಣ ಸಂಭವಿಸಿದರೆ ತೀರ ಹತ್ತಿರದ ಸಂಬಂಧಿಗಳೂ ಹೆಣದ ಹತ್ತಿರ ಸುಳಿಯದಾದರು. ಹೊರಕ್ಕೆಸೆದಿದ್ದ ಅಥವಾ ಎಸೆಯದೇ ಇದ್ದ ಪ್ರತಿಯೊಂದು ಮೃತದೇಹವನ್ನು ಸಾಗಿಸುವ ಕೆಲಸವನ್ನು ಸರಕಾರವೇ ಮಾಡಬೇಕಾಯಿತು."[5]

ಉಪವಾಸದ ಅಂಚಿನಲ್ಲಿ

ಬೆಂಗಳೂರು ನಗರದ ಸ್ಥಿತಿಗತಿಯ ವರ್ಣನೆಯಂತೂ ಇನ್ನೂ ಭೀಕರ. "ಪ್ಲೇಗ್ ಪಿಡುಗಿನಿಂದಾಗಿ ವ್ಯಾಪಾರವು ಪೂರ್ತಿ ಸ್ಥಗಿತವಾಗಿತ್ತು. ಉದ್ಯೋಗವನ್ನು ಕಳೆದುಕೊಂಡುದರಿಂದಲೂ ಮಿತಿಮೀರಿದ ಬೆಲೆ ಏರಿಕೆಯಿಂದಲೂ ಜನರು ಉಪವಾಸ ನರಳುವ ಸ್ಥಿತಿಯ ಅಂಚಿನಲ್ಲಿದ್ದರು. ನಗರದಲ್ಲಿರುವ ಎರಡೂ ಉಗಿಚಾಲಿತ ಕಾರ್ಖಾನೆಗಳು (ಬಟ್ಟೆ ಗಿರಣಿ) ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಲಾಗದೆ ನಷ್ಟಕ್ಕೊಳಗಾಗಿ ಷೇರುದಾರರಿಗೆ ಆ ವರ್ಷ ಡಿವಿಡೆಂಡ್ ನೀಡಲಾರದಾದವು. ನೇಕಾರರು ಮಗ್ಗವನ್ನು ತ್ಯಜಿಸಿ ಕೂಲಿ ಸಂಪಾದಿಸಲು ಮಣ್ಣು ಹೊರುವ ಕೆಲಸಕ್ಕೆ ಇಲ್ಲವೆ ಕೂಲಿನಾಲಿಗೆ ಹೋಗಬೇಕಾಗಿ ಬಂತು. ಸ್ಥಳೀಯ ಮುನಿಸಿಪಾಲಿಟಿಗಾದ ಕಂದಾಯದ ನಷ್ಟವೇ ೪೦,೦೦೦ ರೂ.ಗಳಷ್ಟು. ಮನೆಯಲ್ಲಿನ ದುಡಿಯುವವನ ಮರಣದಿಂದ ದುಃಖ ದಾರಿದ್ರ್ಯಗಳಿಗೆ ಕಾಯಂ ಆಗಿ ಒಳಪಟ್ಟ ಕುಟುಂಬಗಳ ಸಂಖ್ಯೆ ಸಣ್ಣದಲ್ಲ.[6]

ಪ್ಲೇಗ್ ಪಿಡುಗು ಹಳೆಯ ಬೆಂಗಳೂರಲ್ಲಲ್ಲದೆ ಕಂಟೋನ್ಮೆಂಟ್ ಪ್ರದೇಶದಲ್ಲೂ ಹರಡಿತ್ತು. ಬೆಂಗಳೂರು, ತುಮಕೂರು, ಕೋಲಾರ, ಮೈಸೂರು ಜಿಲ್ಲೆಗಳಿಗೂ ವ್ಯಾಪಿಸಿತ್ತು. "ಜನರನ್ನು ಒತ್ತಾಯದಿಂದ ಬೇರ್ಪಡಿಸುವ (ಸೆಗ್ರೆಗೇಶನ್) ಕ್ರಮ ಬೆಂಗಳೂರಿನ ಮಟ್ಟಿಗೆ ಘಾತುಕವಾಗಿ ಪರಿಣಮಿಸಿತು" ಸಾಕಷ್ಟು ಸಂಖ್ಯೆಯಲ್ಲಿ ಜನ ನಗರದಿಂದ ಓಡಿಹೋಗುವಂತೆ ಮಾಡಿ ಈ ಸಾಂಕ್ರಾಮಿಕ ಪಿಡುಗು ಜಿಲ್ಲೆಯಲ್ಲೆಲ್ಲ ಹರಡುವಂತಾಗಲು ಈ ಕ್ರಮ ನೀಡಿದ ಒತ್ತಾಸೆ ಸಣ್ಣದೇನೂ ಅಲ್ಲ. ಬೇರ್ಪಡೆಯ ಕ್ರಮ ಅದನ್ನು ಕೈಕೊಂಡ ಉದ್ದೇಶಕ್ಕೆ ಘಾತಕವಾಗಿ ಪರಿಣಮಿಸಿತು" ಎಂದು ಸರಕಾರೀ ವರದಿ ಒಪ್ಪಿಕೊಂಡಿದೆ.[7] ಏಕೆಂದರೆ ರೋಗವು ಬೆಂಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲೂ ತೀವ್ರವಾಗಿ ಹರಡಿತು. ರೋಗಗ್ರಸ್ತ ಇಲ್ಲವೇ ಸೋಂಕು ತಗಲಿ ವಸ್ತುಗಳನ್ನು ಹೊಂದಿದ ಜನರು ಬೆಂಗಳೂರಿನಿಂದ ಅಲ್ಲಿಗೆ ಓಡಿಹೋದುದೇ ಇದಕ್ಕೆ ಕಾರಣ. ಇದರಿಂದ ನಗರದ ಹೊರತಾಗಿ ಬೆಂಗಳೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲೇ ೪,೪೭೨ ಜನ ಸಾವಿಗೀಡಾಗಿದ್ದು, ಈ ಪೈಕಿ ಚನ್ನಪಟ್ಣ ಊರಲ್ಲೆ ೭೧೦ ಜನರೂ ಹಾಗೂ ಆನೇಕಲ್ ಊರಲ್ಲಿ ೫೦೦ಕ್ಕೂ ಮೇಲ್ಪಟ್ಟು ಜನರೂ ಸಾವನ್ನಪ್ಪಿದರು.[8]

---

4 ಅದೇ, ಪು. ೩

5 ಅದೇ, ಪು. ೪

6 ಅದೇ, ಪು. ೬

7 ಅದೇ, ಪು. ೭

8 ಅದೇ, ಪು. ೧೫

ನಗರದ ಆಧುನೀಕರಣ

ಇಂಥ ಭೀಕರ ದುರಂತ ನಡುವಿನಿಂದ ಆಧುನೀಕೃತವಾದ (ಮಾಡರ್ನೈಸ್ಡ್) ವಿಸ್ತೃತವಾದ ಬೆಂಗಳೂರು ನಗರ ಉದಿಸಿತು. ಮೂಲತಃ ೫೦೦ ಎಕ್ರೆಗಳ ಪ್ರದೇಶವಾಗಿದ್ದ ಬೆಂಗಳೂರಿನಲ್ಲಿ ೪೪೦ ಎಕ್ರೆ ವಿಸ್ತೀರ್ಣದ ಬಸವನಗುಡಿ ಹಾಗೂ ೨೯೧ ಎಕ್ರೆ ವಿಸ್ತೀರ್ಣದ ಮಲ್ಲೇಶ್ವರಂ ಬಡಾವಣೆಗಳನ್ನು ಆಗಲೇ ರೂಪಿಸಲಾಯಿತು.[9] ವಿಶಾಲವಾದ ಬೀದಿಗಳು, ಸೂಕ್ತ ಚರಂಡಿ ಹಾಗೂ ಅವಶ್ಯ ಕನ್ಸರ್ವೆನ್ಸಿ ರಸ್ತೆಗಳುಳ್ಳ ಈ ಯೋಜಿತ ಬಡಾವಣೆಗಳಲ್ಲಿ ಸಾಕಷ್ಟು ಗಾಳಿ ಬೆಳಕಿನ ಅನುಕೂಲವುಳ್ಳ ನಿವೇಶನಗಳನ್ನು ಮಾಡಲಾಯಿತು.[10]

ನಗರದ ನೈರ್ಮಲ್ಯ ವ್ಯವಸ್ಥೆ ಸುಧಾರಿಸಲು ತೀವ್ರ ಕ್ರಮ ಕೈಗೊಳ್ಳಲಾಯಿತು. ವಾಸಕ್ಕೆ ಯೋಗ್ಯವಲ್ಲವೆಂದು ತೀರ ಹಳೆಯ ಕಾಲದ ೬೫೧ ಮನೆಗಳನ್ನು ಬೆಂಗಳೂರು ನಗರದಲ್ಲಿ ಕೆಡವಲಾಯಿತಲ್ಲದೆ ರಸ್ತೆ ಹಾಗೂ ಗಲ್ಲಿಗಳನ್ನು ಅಗಲಿಸಿ ಮನೆಗಳ ದಟ್ಟಣೆ ಕಡಿಮೆ ಮಾಡಲೆಂದು ೭೦೫, ಹೀಗೆ ಹಳೇ ಬೆಂಗಳೂರಲ್ಲಿ ಒಟ್ಟು ೧೩೫೬ ಮನೆಗಳನ್ನು ಕೆಡವಲಾಯಿತು.[11] (ಆಗ ಬೆಂಗಳೂರಲ್ಲಿ ಇದ್ದ ಒಟ್ಟು ಮನೆಗಳು ೧೭,೨೭೫). ಹಳೇ ತರಗುಪೇಟೆಯನ್ನು ಅರ್ಧದಷ್ಟು ಕೆಡವಿ ಹಾಕಲಾಯಿತು.[12] ನಗರದ ಚರಂಡಿ ವ್ಯವಸ್ಥೆಯನ್ನು ಸುಧಾರಿಸಲೆಂದೇ ಒಂದು ಲಕ್ಷ ರೂ. ವೆಚ್ಚಮಾಡಲಾಯಿತು. ಇದಲ್ಲದೆ ನಗರದ ೮,೪೧೩ ಮನೆಗಳ್ನು ಸೋಂಕು ಪ್ರತಿರೋಧ(ಡಿಸ್‌ಇನ್‌ಫೆಕ್ಶನ್)ಗೆ ಒಳಪಡಿಸಲಾಯಿತಲ್ಲದೆ ಗಾಳಿ ಬೆಳಕಿಲ್ಲದ ಅನೇಕ ಮನೆಗಳ ಛಾವಣಿಯನ್ನು ಹಾರಿಸಿ ಇಲ್ಲವೇ ಗೋಡೆಗಳಲ್ಲಿ ತೂತುಕೊರೆದು ಸುಧಾರಿಸಲು ಕ್ರಮ ಕೈಕೊಳ್ಳಲಾಯಿತು. ಮತ್ತು ಮನೆಗಳನ್ನು ಆರೋಗ್ಯದ ನಿಯಮಗಳಂತೆ ಕಟ್ಟಲು ಮುಂದೆ ಕಟ್ಟುನಿಟ್ಟಾದ ನಿಯಮಗಳನ್ನು ಜಾರಿಗೊಳಿಸಲಾಯಿತು.[13]

ಆರೋಗ್ಯ ಇಲಾಖೆಯಲ್ಲಿ, ಎಂದರೆ ಚಿಕಿತ್ಸಾ ವ್ಯವಸ್ಥೆಯಲ್ಲಿ, ತೀವ್ರ ಬದಲಾವಣೆಯಾಯಿತು. ಮೊದಲಬಾರಿ ನಗರಕ್ಕೆ ಒಬ್ಬ ಆರೋಗ್ಯಾಧಿಕಾರಿಯನ್ನು ೧೮೯೮ರಲ್ಲಿ ನೇಮಿಸಲಾಯಿತು.[14] ಇದಲ್ಲದೆ ಹಿಂದಿನ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯನ್ನು ಸರಕಾರೀ ಪ್ಲೇಗ್ ಆಸ್ಪತ್ರೆಯಾಗಿ ಖ್ಯಾತ ವೈದ್ಯ ಪಲ್ಪು ಅವರ ನೇತೃತ್ವದಲ್ಲಿ ಪರಿವರ್ತಿಸಲಾಯಿತು.[15] ಇದೇ ಹಿನ್ನೆಲೆಯಲ್ಲಿ ಬೆಂಗಳೂರು ನಗರದಲ್ಲಿ ಮುಂದೆ ಸುಸಜ್ಜಿತವಾದ ವಿಕ್ಟೋರಿಯಾ ಆಸ್ಪತ್ರೆಯನ್ನು ೧೯೦೦ರಲ್ಲಿ ತೆರೆಯಲಾಗಿ ಲಾರ್ಡ್ ಕರ್ಜನ್ ಅದನ್ನು ಉದ್ಘಾಟಿಸಿದರು.[16]

ದೂರವಾಣಿ ಸಂಪರ್ಕ

ಪ್ಲೇಗ್ ನಿರೋಧ ಉಪಕ್ರಮಗಳ ಏಕಸೂತ್ರೀಕರಣಕ್ಕೆ ನೆರವಾಗಲು ಮೊದಲಬಾರಿ ನಗರದಲ್ಲಿ ದೂರವಾಣಿ ವ್ಯವಸ್ಥೆಯನ್ನು ಅತೀ ವ್ಯಾಪಕವಾಗಿ ಬಳಸಲಾಯಿತು.[17] ಮೊದಲು ಹೆಸರುಘಟ್ಟದಿಂದ ನೀರು ಪೂರೈಸುವ ಕೇಂದ್ರದೊಡನೆ ಸಂಪರ್ಕವಿರಿಸಲೆಂದು ಹೊಂದಿಸಲಾಗಿದ್ದ ದೂರವಾಣಿ ವ್ಯವಸ್ಥೆಯ ಹೊಸ ಜಾಲವನ್ನು ನಗರದಲ್ಲಿ ಪ್ಲೇಗ್ ನಿರೋಧದ ಉದ್ದೇಶಕ್ಕಾಗಿ ಹರಡಿ ಮುಂದೆ ಮರುವರುಷವೇ ಇದೇ ಜಾಲವನ್ನು ನಗರದ ೫೦ ಸರಕಾರೀ ಕಚೇರಿಗಳ ಸಂಪರ್ಕಕ್ಕೆ

---

9 ಅದೇ, ಪು. ೧೬
10 ಅದೇ, ಪು. ೧೫
11 ಅದೇ, ಪು. ೧೭
12 ಅದೇ, ಪು. ೨೦
13 ಅದೇ, ಪು. ೧೪
14 ಅದೇ, ಸ್ಟೇಟ್‌ಮೆಂಟ್, ಎಫ್
15 ಅದೇ
16 ಅದೇ, ಪು. ೧೨-೧೩
17 ಅದೇ, ಪು. ೬

ಕಾಯಂ ಆಗಿ ಬಳಸಿದ್ದು ನಗರದ ಆಧುನೀಕರಣದಲ್ಲಿ ಆದ ಒಂದು ತೀವ್ರ ಕ್ರಮ.[18] ದಿನವೊಂದಕ್ಕೆ ಸರಾಸರಿ ೧೨೨ ಕರೆಗಳು ಬಳಕೆಯಾಗುತ್ತವೆ ಎಂದು ಈ ಸಂಪರ್ಕದ ಬಗ್ಗೆ ೧೮೯೯–೧೯೦೦ರಲ್ಲಿ ಹೇಳಿದೆ.[19]

ಪ್ಲೇಗ್ ಪಿಡುಗಿನ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಆದ ಇನ್ನೊಂದು ಮುಖ್ಯ ಸುಧಾರಣೆಯೆಂದರೆ ಹೋಟೆಲ್‌ಗಳ ಆರಂಭ. ಸರಕಾರೀ ನೌಕರರು ತಮ್ಮ ಕುಟುಂಬೀಯರನ್ನು ತಮ್ಮ ಊರುಗಳಿಗೋ ಹಳ್ಳಿಗಳಿಗೋ ಕಳುಹಿಸಿ ತಾವು ಮಾತ್ರ ಅನಿವಾರ್ಯವಾಗಿ ನಗರದಲ್ಲೇ ಉಳಿದಿರಲು ಅವರ ಊಟತಿಂಡಿಯ ವ್ಯವಸ್ಥೆಗಾಗಿ ಹೋಟೆಲ್‌ಗಳು ಆರಂಭವಾದುವೆಂದೂ ಹಾಗೆ ಆರಂಭ ಆದ ಹೋಟೆಲ್‌ಗಳಲ್ಲಿ ಮಾಡರ್ನ್ ಹಿಂದೂ ಹೋಟೆಲ್ ಒಂದೆಂದೂ ಡಾ. ಡಿವಿಜಿ ಹೇಳಿದ್ದಾರೆ. ಹೀಗೆ ಆರಂಭವಾದ ಅಲ್ಪ ಸಂಖ್ಯೆಯ ಈ ಹೋಟೆಲ್‌ಗಳು ಅವುಗಳ ಬೆಳೆ ವ್ಯಾಪಕವಾಗಿ ಬೆಳೆಯಲು ಹಾದಿಮಾಡಿಕೊಟ್ಟು ಬೆಂಗಳೂರಿನಲ್ಲಿ ಬರುವ ಪ್ರಯಾಣಿಕರಿಗೂ ಪ್ರವಾಸಿಗಳಿಗೂ ಅನುಕೂಲವಾದುವು.[20]

ತನ್ನ ವೈಶಾಲ್ಯವನ್ನು ಎರಡು ಪಟ್ಟಿಗೂ ಮಿಗಿಲಾಗಿ ಹೆಚ್ಚಿಸಿಕೊಂಡು, ಆಧುನಿಕ-ವ್ಯವಸ್ಥೆಗಳ ನವ ಬಡಾವಣೆಗಳನ್ನು ಹೊಂದಿ, ನಗರದ ಒಳಗಣ ರಸ್ತೆಗಳ ಹಾಗೂ ಚರಂಡಿಗಳ ಜಾಲದ ವ್ಯವಸ್ಥೆ, ನೈರ್ಮಲ್ಯದ ಪ್ರಜ್ಞೆ ಹಾಗೂ ಸವಲತ್ತುಗಳಲ್ಲಿ ಸುಧಾರಣೆಯನ್ನೂ ಪಡೆದು ಆಧುನಿಕ ಚಿಕಿತ್ಸಾ ಸೌಲಭ್ಯ, ಸಂಪರ್ಕ ಸಾಧನಗಳನ್ನು ಅಳವಡಿಸಿಕೊಂಡು ಬೆಂಗಳೂರು ಸುಧಾರಿತ ನವನಗರವಾಗಿ ಬೆಳೆಯಲು ಭಯಾವಹವಾದ ಪ್ಲೇಗ್ ಪಿಡುಗು ಹಾದಿಮಾಡಿ ಕೊಟ್ಟಿತು. ಪ್ಲೇಗ್ ಒಂದು ರೀತಿಯಲ್ಲಿ ಛದ್ಮ ವೇಶದಲ್ಲಿ ಬಂದ ಉಪಕಾರಿಯಾಯಿತು. ಬೆಂಗಳೂರಿನ ಮರುಹುಟ್ಟಿಗೂ ಹೊಸಹುಟ್ಟಿಗೂ ಕಾರಣವಾಯಿತು.

ಈ ಪ್ರಬಂಧವನ್ನು ಬರೆದ ನಂತರ ಕಂಟೋನ್ಮೆಂಟ್ ಪ್ರದೇಶದ ಬಗ್ಗೆ ಕೆಲವು ವಿವರ ಅದೇ ವರ್ಷಕ್ಕೆ ಸಂಬಂಧಿಸಿ ದೊರೆತಿವೆ: ಅಲ್ಲಿ ೧೮೯೮ ಸೆಪ್ಟೆಂಬರ್ ೧ರಿಂದ ಆರಂಭಿಸಿ ೧೮೯೯ ಮಾರ್ಚ್‌ವರೆಗೆ ೩,೩೨೧ ಜನ ಸತ್ತರು. ಅಲ್ಲಿನ ಆಸ್ಪತ್ರೆಯ ನೌಕರರೆಲ್ಲ ಕೆಲಸಬಿಟ್ಟು ಓಡಿ ಹೋದರು. ಕಸಗುಡಿಸುವವರೂ ತಲೆಮರೆಸಿಕೊಂಡರು, ಎಂದು ಬೆಂಗಳೂರು ಕಂಟೋನ್ಮೆಂಟ್‌ನ ವಾರ್ಷಿಕ ವರದಿ ೧೮೯೮–೯೯, ಪುಟ ೯೯ರಲ್ಲಿ ಹೇಳಿದೆ. ಮರುವರ್ಷವೂ ಪ್ಲೇಗ್‌ನಿಂದ ೩೪೮ ಸಾವುಗಳಾದುವೆಂದು ಮರುವರ್ಷದ ಅದೇ ವರದಿಯ ಪುಟ ೨೭ ಹೇಳುತ್ತದೆ.

---

18 ಅದೇ, ಪು. ೮

19 ಎಡ್ಮಿನಿಸ್ಟ್ರೇಶನ್ ರಿಪೋರ್ಟ್ ಆಫ್ ದಿ ಮೈಸೂರ್ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್, ೧೮೯೯-೧೯೦೦, ಪ್ಯಾರಾ ೧೯

20 ಜ್ಞಾಪಕ ಚಿತ್ರಶಾಲೆ

ಎಂ. ಬಿ. ಪಾಟೀಲ

ಧಾರವಾಡ ಜಿಲ್ಲೆಯಲ್ಲಿ ಆಧುನಿಕ ಬ್ಯಾಂಕಿಂಗ್ ಉದ್ಯಮದ ಮೊದಲನೆಯ ಹಂತ (೧೮೬೩-೧೯೪೯)

ಕರ್ನಾಟಕವನ್ನೊಳಗೊಂಡಂತೆ ಭಾರತದಲ್ಲಿನ ಬ್ರಿಟಿಷ ಮಾದರಿಯ ಬ್ಯಾಂಕಿಂಗ್ ಉದ್ಯಮಕ್ಕೆ ಸುಮಾರು ೧೨೫ ವರ್ಷಗಳ ಸುದೀರ್ಘ, ರಮ್ಯ ಚರಿತ್ರೆ ಇದೆ. ಬ್ರಿಟಿಷ ಮಾದರಿಯ ಬ್ಯಾಂಕಿಂಗ್ ವ್ಯವಸ್ಥೆ ೧೮೦೬ ರಿಂದ ೧೮೪೩ರ ಅವಧಿಯಲ್ಲಿ ಕಲಕತ್ತ, ಬೊಂಬಾಯಿ, ಮದ್ರಾಸ ನಗರಗಳಲ್ಲಿ ಅನುಕ್ರಮವಾಗಿ ೧೮೦೬, ೧೮೪೦, ೧೮೪೩ ರಲ್ಲಿ ಪ್ರೆಸಿಡೆನ್ಸಿ (presidency) ಬ್ಯಾಂಕುಗಳನ್ನು ಪ್ರಾರಂಭಿಸುವುದರೊಂದಿಗೆ ಬೀಜಾಂಕುರವಾಯಿತು.

ಉತ್ತರ ಭಾರತದಲ್ಲಿ ೧೮೬೫ರ ಸುಮಾರಿಗೆ ಖಾಸಗಿ ವಲಯದ ಬ್ಯಾಂಕುಗಳು ಪ್ರಾರಂಭವಾದರೆ, ಕರ್ನಾಟಕದಲ್ಲಿ ಖಾಸಗಿ ವಲಯದ ಪ್ರಪ್ರಥಮ ಎರಡು ಬ್ಯಾಂಕುಗಳು ೧೮೬೮ ರಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾದವು : ಬೆಂಗಳೂರು ಬ್ಯಾಂಕ್ (ಲಿ.) ಮತ್ತು ಮೈಸೂರು ಬ್ಯಾಂಕ್ ಕಾರ್ಪೊರೇಷನ್ (ಲಿ.). ಲಭ್ಯ ಇರುವ ದಾಖಲೆಗಳ ಪ್ರಕಾರ, ಇವು ಕರ್ನಾಟಕದಲ್ಲಿ ಪ್ರಾರಂಭಿಸಲ್ಪಟ್ಟ ಪ್ರಪ್ರಥಮ ಖಾಸಗಿ ವಲಯದ ವಾಣಿಜ್ಯ ಬ್ಯಾಂಕುಗಳು ಎಂದು ಹೇಳಬಹುದು. ಅಂದಿನ ಅವುಗಳ ಷೇರು ಬಂಡವಾಳ ಅನುಕ್ರಮವಾಗಿ ರೂ. ೭ ಲಕ್ಷ ಮತ್ತು ರೂ. ೨ ಲಕ್ಷ ಆಗಿತ್ತು. ಅಂದಿನ ಕಾಲದಲ್ಲಿ ಅದು ಬಹು ದೊಡ್ಡ ಷೇರು ಬಂಡವಾಳ ಆಗಿತ್ತು ಎಂದು ಹೇಳಬಹುದು.

ಕರ್ನಾಟಕದ ಮಟ್ಟಿಗೆ ವಾಣಿಜ್ಯ ಬ್ಯಾಂಕಿಂಗ್ ಉದ್ಯಮದ ಹುಟ್ಟು ಮತ್ತು ಬೆಳವಣಿಗೆಯನ್ನು ಹೇಳುವುದಾದರೆ, ಧಾರವಾಡದಲ್ಲಿ ೧೮೬೩ರಲ್ಲಿ ಪ್ರಾರಂಭಿಸಲಾದ ಬೊಂಬಾಯಿ ಪ್ರೆಸಿಡೆನ್ಸಿ ಬ್ಯಾಂಕಿನ ಶಾಖೆಯೇ ಕರ್ನಾಟಕದ ಪ್ರಥಮ ವಾಣಿಜ್ಯ ಬ್ಯಾಂಕಿನ ಶಾಖೆ ಎಂದು ಖಚಿತವಾಗಿ ಹೇಳಬಹುದು. ತದನಂತರದ ವರ್ಷಗಳಲ್ಲಿ ಬೆಂಗಳೂರಿನಲ್ಲಿ (೧೮೬೫), ಮಂಗಳೂರಿನಲ್ಲಿ (೧೮೬೮) ರಲ್ಲಿ, ಮದ್ರಾಸ್ ಬ್ಯಾಂಕಿನ ಶಾಖೆಗಳು ಪ್ರಾರಂಭವಾದವು. ಇದಕ್ಕೂ ಪೂರ್ವದಲ್ಲಿ ಬೆಳಗಾವಿಯಲ್ಲಿ (೧೮೬೭), ನಂತರ ಹುಬ್ಬಳ್ಳಿಯಲ್ಲಿ (೧೮೭೦) ಬೊಂಬಾಯಿ ಬ್ಯಾಂಕಿನ ಶಾಖೆಗಳು ತೆರೆಯಲ್ಪಟ್ಟವು. ಆದರೆ ಧಾರವಾಡದ ಶಾಖೆಯು ಬಹಳ ಕಾಲದವರೆಗೆ ವ್ಯವಹಾರವನ್ನು ಮುಂದುವರೆಸಲಿಲ್ಲ. ೧೫ ವರ್ಷಗಳ ಸೇವೆಯ ನಂತರ ೧೮೭೮ ರಲ್ಲಿ ಅದನ್ನು ಮುಚ್ಚಿ ಅದರ ವ್ಯವಹಾರವನ್ನು ಜಿಲ್ಲೆಯ ಪ್ರಮುಖ ವ್ಯಾಪಾರಿ ಕೇಂದ್ರವಾದ ಹುಬ್ಬಳ್ಳಿಗೆ ವರ್ಗಾಯಿಸಲಾಯಿತು.

ಹತ್ತಿಯ ವ್ಯಾಪಾರ ಮತ್ತು ಬ್ಯಾಂಕಿಂಗ್ : ಬೊಂಬಾಯಿ ಕರ್ನಾಟಕದಲ್ಲಿ ಬ್ಯಾಂಕಿಂಗ್ ಉದ್ಯಮ ಕರ್ನಾಟಕದ ಇತರೇ ಭಾಗಗಳಿಗಿಂತ ಮೊದಲೇ ರೂಪಗೊಳ್ಳಲು ಈ ಭಾಗದ ಪ್ರಮುಖ ವಾಣಿಜ್ಯ ಬೆಳೆಯಾದ ಹತ್ತಿಯೇ ಮೂಲಕಾರಣ. ೧೮೨೮ ರಿಂದಲೇ ಅಂದಿನ ಬ್ರಿಟಿಷ ಸರಕಾರ ಈ ಭಾಗದ ಹತ್ತಿಯ ವ್ಯಾಪಾರವನ್ನು ಉತ್ತೇಜಿಸಲು ಅನೇಕ ಕ್ರಮಗಳನ್ನು ಕೈಗೊಂಡಿತ್ತು. ೧೮೪೨ ರಿಂದ ಈ ಭಾಗದಲ್ಲೂ ಅಮೇರಿಕೆಯ ಹತ್ತಿಯನ್ನು ಬೆಳೆಯುವ ಪ್ರಯೋಗಗಳನ್ನು ಮಾಡಿ ಅದರಲ್ಲಿ ಯಶಸ್ಸು ಸಾಧಿಸಲಾಯಿತು. ಹತ್ತಿಯ ಉದ್ಯಮದ ಬಹುಮುಖ ಅಧ್ಯಯನವನ್ನು ಕುರಿತಂತೆ ೧೮೬೭ರಲ್ಲಿ ಕಾಟನ್ ಕಮೀಶನ್ ನಿಯಮಿಸಲಾಯಿತು. ೧೮೭೩_೧೮೮೩ರ ದಶಕದಲ್ಲಿ ಧಾರವಾಡ ಜಿಲ್ಲೆಯಿಂದ ವಾರ್ಷಿಕ ಸರಾಸರಿ ೯೫೦೦ ಟನ್ (ಬೆಲೆಯಲ್ಲಿ ರೂ. ೪೫ ಲಕ್ಷ) ಹತ್ತಿ ಇಲ್ಲಿಂದ ಬೊಂಬಾಯಿಗೆ ರಫ್ತಾಗುತ್ತಿತ್ತು. ಬೊಂಬಾಯಿ ಮಾರುಕಟ್ಟೆಗೆ ಧಾರವಾಡ ಜಿಲ್ಲೆಯಿಂದ ಶೇ. ೬೮ ಪ್ರಮಾಣದಷ್ಟು ಅಮೇರಿಕನ್ ಹತ್ತಿ ರಫ್ತಾಗುತ್ತಿತ್ತು. ಹುಬ್ಬಳ್ಳಿ

ಧಾರವಾಡಗಳಲ್ಲಿ ಬೊಂಬಾಯಿ ಬ್ಯಾಂಕಿನ ಶಾಖೆಗಳನ್ನು ಪ್ರಾರಂಭಿಸಿದ ಮುಖ್ಯ ಉದ್ದೇಶ ಈ ಭಾಗದ ಹತ್ತಿಯ ವ್ಯಾಪಾರದ ವರ್ತಕರಿಗೆ ಸುಲಭ ದರದಲ್ಲಿ ಹಣಕಾಸಿನ ನೆರವು ಒದಗಿಸುವದಾಗಿತ್ತು. ಅದರಲ್ಲೂ ವಿಶೇಷವಾಗಿ ಮುಂಬಯಿ ವರ್ತಕರ ಹುಂಡಿಯ ವ್ಯಾಪಾರಕ್ಕೆ ಹೆಚ್ಚು ಚಾಲನೆ ಕೊಡುವದೇ ಈ ಬ್ಯಾಂಕಿನ ಉದ್ದೇಶವಾಗಿತ್ತು. ಯುರೋಪದಲ್ಲೂ ವಿಶೇಷ ಬೇಡಿಕೆ ಇದ್ದ ಈ ಹತ್ತಿಗೆ 'ಕುಮಟಾ ಕಾಟನ್' ಎಂತಲೂ ಕರೆಯುತ್ತಿದ್ದರು.

ಠೇವಣಿದಾರರು : ಹತ್ತಿಯ ವ್ಯಾಪಾರದಲ್ಲಿ ತೊಡಗಿದ್ದ ಯುರೋಪಿನ ಕಂಪನಿಗಳು ಪ್ರಮುಖ ಠೇವಣಿದಾರರಾಗಿದ್ದರು. ಈ ಕಂಪನಿಗಳ ವಾರ್ಷಿಕ ವ್ಯವಹಾರ ೩೦ ರಿಂದ ೪೦ ಲಕ್ಷ ರೂ. ಆಗಿದ್ದರೆ, ಸ್ಥಳೀಯ ಹತ್ತಿಯ ವ್ಯಾಪಾರಿಗಳಾದ ಲಿಂಗಾಯಿತರು, ಜೈನರು, ಬ್ರಾಹ್ಮಣರು, ಕೋಮಟಿಗಳ ವಾರ್ಷಿಕ ವ್ಯವಹಾರ ೧೫–೨೦ ಲಕ್ಷ ರೂ.'ಗೆ ಹೆಚ್ಚುತ್ತಿರಲಿಲ್ಲ. ಬೊಂಬಾಯಿಯ ಸುಮಾರು ೮–೧೦ ಕಂಪನಿಗಳು ಹುಬ್ಬಳ್ಳಿಯಲ್ಲೂ ಇದ್ದವು. ೧೮೭೬–೭೭ರ ಭೀಕರ ಬರಗಾಲದಲ್ಲಿ ಹುಬ್ಬಳ್ಳಿಯ ಬ್ಯಾಂಕಿನ ವ್ಯವಹಾರ ತುಂಬಾ ತೊಂದರೆಗೆ ಒಳಗಾಯಿತು.

ಹತ್ತಿಯಿಂದ ಹಣದ ಹೊಳೆ : ದೇಶದ ಇತರೆಡೆ ಯಂತೆ ೧೮೬೩–೬೫ರ ಅಮೇರಿಕೆಯ ಸಿವಿಲ್ ಯುದ್ಧವು ಈ ಜಿಲ್ಲೆಯ ಬ್ಯಾಂಕಿಂಗ್ ಉದ್ಯಮವೂ ಸೇರಿದಂತೆ ಆರ್ಥಿಕ ಮತ್ತು ಸಾಮಾಜಿಕ ಜೀವನದ ಮೇಲೆ ಬಹು ಆಳವಾದ ಪರಿಣಾಮ ಬೀರಿತು ಎಂದು ಹೇಳಬಹುದು. ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಹಣದ ಹೊಳೆ ಹರಿ ಯಿತು. ಶ್ರೀಮಂತ ರೈತರು (ಒಕ್ಕಲಿಗರು) ಎತ್ತಿನ ಕೊಂಬುಗಳಿಗೆ ಚಿನ್ನದ ಬಳೆಗಳನ್ನು ತೊಡಿಸುವಷ್ಟು ಹಣದ ಹೊಳೆ ಹರಿಯಿತು ಎಂದು ಹೇಳುವರು. ಕಾರಣ ಹತ್ತಿಗೆ ವಿಪುಲವಾದ ಬೇಡಿಕೆ ಮತ್ತು ಅತ್ಯುತ್ತಮ ಬೆಲೆ ಇತ್ತು. ಈ ಪರಿಸ್ಥಿತಿಯು ಜಿಲ್ಲೆಯಲ್ಲಿ ತಕ್ಕಮಟ್ಟಿಗೆ ಹಣದ ಉಬ್ಬರವನ್ನು (ಇನ್‌ಫ್ಲೇಷನ್) ಉಂಟು ಮಾಡಿತ್ತು. ಇದೇ ಕಾಲಕ್ಕೆ 'ಹತ್ತಿ ಬಿತ್ತಿ ಹಾಳಾದರು' ಎಂಬ ನಾಣ್ನುಡಿ ಪ್ರಚಾರಕ್ಕೆ ಬಂದಿರಬೇಕು. ಈ ಕಾಲ ದಲ್ಲಿ ವಕೀಲರು ಹೆಚ್ಚು ಶ್ರೀಮಂತರಾದರು. ವಕೀಲರ ಸಂಖ್ಯೆ ಜಿಲ್ಲೆಯಲ್ಲಿ ಹೆಚ್ಚಾಯಿತು. ಇದಕ್ಕೆ ಕಾರಣ ಏರುತ್ತಿರುವ ಬೆಲೆಗಳಲ್ಲಿ ಜಮೀನು, ಮನೆ ಮುಂತಾದ ಸ್ಥಿರಾಸ್ತಿಗಳ ಬೆಲೆ ಹೆಚ್ಚಾಗಿ ಅವುಗಳ ವ್ಯವಹಾರ ಹೆಚ್ಚಾಗಿ, ತಂಟೆ ತಕರಾರುಗಳು ಹೆಚ್ಚಾದವು. ಹಣದುಬ್ಬರದ ಪರಿಸ್ಥಿತಿಯು ಅಂದು ಬೇಡಿಕೆಗೆ ಅನುಗುಣವಾಗಿ ಕಡಿಮೆ ಪ್ರಮಾಣದಲ್ಲಿದ್ದ ವಕೀಲರಿಗೆ ಹೆಚ್ಚಿನ ಬೇಡಿಕೆಯನ್ನು ಮತ್ತು ಆದಾಯವನ್ನು ತಂದಿತು.

ಈ ಮೇಲಿನ ಅವಧಿಯಲ್ಲಿ ಜನರ ಉಳಿತಾಯವೂ ಹೆಚ್ಚಾಯಿತು. ಆದರೆ ಉಳಿತಾಯ ಮಾಡಿದವರಲ್ಲಿ ಕೆಳವರ್ಗದ ಜನ ತಮ್ಮ ಹೆಚ್ಚಿನ ಗಳಿಕೆ ಯನ್ನು ವಾಡಿಕೆಯಂತೆ ಭೂಮಿಯಲ್ಲಿ ಹೂಳಿ ಇಡುವ ಪ್ರವೃತ್ತಿಯಿಂದ ಕಳೆದುಕೊಂಡರೆ, ಬ್ರಾಹ್ಮಣರ ಉಳಿ ತಾಯದ ಹೆಚ್ಚಿನ ಭಾಗವು ಅದೇ ತಾನೇ ಬೆಳೆಯುತ್ತಿದ್ದ ವರದಕ್ಷಿಣೆಗೆ ಖರ್ಚಾಗುತ್ತಿತ್ತು. ವರದಕ್ಷಿಣೆಯ ಪದ್ಧತಿ ಬಲವಾಗಿ ಬೆಳೆಯುತ್ತ ನಡೆದಂತೆ ಮದುವೆಯ ವೆಚ್ಚ ವನ್ನು ತಗ್ಗಿಸಲಾಯಿತು. ಮೊದಲಿಗೆ ಒಂದು ಶ್ರೀಮಂತ ಬ್ರಾಹ್ಮಣ ಕುಟುಂಬದ ಮದುವೆಯ ವೆಚ್ಚ ರೂ. ೧೦೦೦–೨೦೦೦ ಆಗುತ್ತಿದ್ದರೆ ವರದಕ್ಷಿಣೆಯು ಪ್ರಾರಂಭ ವಾದ ನಂತರ ರೂ. ೨೦೦ ರಿಂದ ೫೦೦ರ ವರೆಗೆ ಇಳಿಯಿತು. ಆದರೆ ಲಿಂಗಾಯತರಲ್ಲಿ ವರದಕ್ಷಿಣೆಯ ಪದ್ಧತಿ ಇನ್ನೂ ಆಗ ಪ್ರಾರಂಭವಾಗದ್ದರಿಂದ ಅವರು ಇತರೆಯವರಿಗಿಂತ ಹೆಚ್ಚು ಉಳಿತಾಯ ಮಾಡಲು ಸಹಾಯವಾಯಿತು. ಆದರೆ ಅವರ ಉಳಿತಾಯದ ಹೆಚ್ಚಿನ ಭಾಗ ತಂಟೆ ತಕರಾರು ಮುಂತಾದವುಗಳಿಗೆ ಹೆಚ್ಚು ವಿನಿಯೋಗವಾಗುತ್ತಿತ್ತು.

ಬಂಡವಾಳ ಹೂಡಿಕೆ : ೧೮೬೦ರ ನಂತರದ ದಶಕಗಳಲ್ಲಿ ಇಂಗ್ಲಿಷ್ ಕಂಪನಿ ಕಾನೂನಿನ ಅನ್ವಯ ವಾಗಿ ಪರಿಮಿತ (ಲಿಮಿಟೆಡ್) ಹೊಣೆಗಾರಿಕೆ ಆಧಾರದ ಮೇಲೆ ಅನೇಕ ಕಂಪನಿಗಳು ವ್ಯಾಪಾರ ದಂಧೆಗಳನ್ನು ಪ್ರಾರಂಭಿಸಿದವು. ಈ ಕೂಡು ಬಂಡವಾಳ ಸಂಸ್ಥೆಗಳು ಅನೇಕ ಜನರ ಉಳಿತಾಯವನ್ನು ಇಂದಿನಂತೆ ಅಂದೂ ಆಕರ್ಷಿಸಿದವು. ಕಾರಣ ಇವುಗಳು ನೀಡುವ ಲಾಭಾಂಶ ಬ್ಯಾಂಕುಗಳು ಮತ್ತು ಸರ್ಕಾರದ ಸೆಕ್ಯೂರಿಟಿಗಳಲ್ಲಿ ತೊಡಗಿಸಿದ ಹಣಕ್ಕೆ ಬರುವ ಆದಾಯಕ್ಕಿಂತ ಬಹು ಪಾಲು ಹೆಚ್ಚಾಗಿದ್ದರಿಂದ, ಉಳಿತಾಯ ಬ್ಯಾಂಕುಗಳಲ್ಲಿ

ಹಣ ತೊಡಗಿಸುವವರು ಬಹುಪಾಲು ಸರ್ಕಾರದ ನೌಕರರು ಆಗಿದ್ದರು. ೧೮೬೭ರಲ್ಲಿ ಏಪ್ರೇಲದಲ್ಲಿ 'ಧಾರವಾಡ ಕಂಪನಿ' ಎಂಬ ಹೆಸರಿನ ಬಟ್ಟೆಯು ಆಮದು-ರಫ್ತು ಕಂಪನಿ ಪ್ರಾರಂಭವಾಯಿತು.

ಇದು ಈ ಭಾಗದ ಬಹುದೊಡ್ಡ ಕಂಪನಿ ಆಗಿತ್ತು. ೧೮೮೩ ರಲ್ಲಿ ಅದರ ಷೇರು ಬಂಡವಾಳ ರೂ. ೪೦,೦೦೦ ಮತ್ತು ೧೪೩ ಜನ ಷೇರುದಾರರು ಇದ್ದರು. ಅವರಲ್ಲಿ ೧೩೨ ಜನ ಬ್ರಾಹ್ಮಣರು, ಅವರಲ್ಲಿ ಸುಮಾರು ೮೫ ಜನ ಸರ್ಕಾರಿ ನೌಕರರು ಆಗಿದ್ದರು. ೧೮೭೫ ರಿಂದ ೧೮೮೩ರ ಅವಧಿಯಲ್ಲಿ ಈ ಕಂಪನಿ ನೀಡಿದ ಡಿವಿಡೆಂಡ್ ೮ ರಿಂದ ೧೫%ಆಗಿತ್ತು. ಈ ಕಂಪನಿಯ ಒಂದು ಶಾಖೆಯು ೧೮೭೭ ರಲ್ಲಿ ಹುಬ್ಬಳ್ಳಿಯಲ್ಲಿ ಪ್ರಾರಂಭವಾಯಿತು. ಮುಂದಿನ ವರ್ಷ (೧೮೭೮) ಹುಬ್ಬಳ್ಳಿಯಲ್ಲಿ 'ಹುಬ್ಬಳ್ಳಿ ಕ್ಲಾಥ ಕಂಪನಿ' ಎಂಬ ಸ್ವತಂತ್ರ ಕಂಪನಿಯು ರೂ. ೨೨,೦೦೦ ಬಂಡವಾಳದೊಂದಿಗೆ ಪ್ರಾರಂಭವಾಯಿತು. ಈ ಕಂಪನಿಯು ಯುರೋಪದಿಂದ ಮತ್ತು ಮುಂಬಯಿ ಯಿಂದ ಯಾಂತ್ರೀಕೃತ ನೂಲನ್ನು ಮತ್ತು ಬೆಂಗಳೂರಿ ನಿಂದ ಸಕ್ಕರೆಯನ್ನು ಆಮದು ಮಾಡಿಕೊಳ್ಳುತ್ತಿತ್ತು. ಇದೂ ಸಹ ಷೇರುದಾರರಿಗೆ ಶೇ. ೧೨ ಡಿವಿಡೆಂಡ್ ನೀಡುತ್ತಿತ್ತು. ಮುಂದೆ ೧೮೮೧ ರಲ್ಲಿ ಹುಬ್ಬಳ್ಳಿಯಲ್ಲಿ 'ಸದರ್ನ ಮರಾಠಾ ಸ್ಪಿನ್ನಿಂಗ್ ಮತ್ತು ವೀವ್ಹಿಂಗ್' ಎಂಬ ಹೆಸರಿನ ಕಂಪನಿಯು ಅಂದು ಆರು ಲಕ್ಷ ರೂ. ಬಂಡವಾಳದೊಂದಿಗೆ ಪ್ರಾರಂಭವಾಯಿತು. ಬಹಳ ದಿನಗಳವರೆಗೆ ಈ ನೂಲಿನ ಗಿರಣಿ ಭಾರತ್‌ಮಿಲ್ ಎಂದು ಪ್ರಸಿದ್ಧವಾಗಿತ್ತು. ೧೮೮೨-೮೩ ರಲ್ಲಿ ಹುಬ್ಬಳ್ಳಿ ಮತ್ತು ಗದಗನಲ್ಲೂ ಅನುಕ್ರಮವಾಗಿ 'ರಾಬರ್ಟ್‌ಸನ್ ಬ್ರದರ್ಸ್' ಮತ್ತು ಕಂ. ಮತ್ತು ಕ್ರಿಸ್ಪೆಲ್ ಮತ್ತು ಕಂ. ಬಹುದೊಡ್ಡ ವ್ಯಾಪಾರಿ ಕಂಪನಿಗಳಾಗಿದ್ದವು.

ವ್ಯಾಪಾರಿ ಕಂಪನಿಗಳಲ್ಲಿ ಹಣದ ವಿನಿಯೋಗ ಹೆಚ್ಚಾಗಿದ್ದರಿಂದ, ಸ್ಥಳೀಯ ಜನರ ಪ್ರೋತ್ಸಾಹದ ಕೊರತೆಯಿಂದ, ಮತ್ತು ಬಹುಮುಖ್ಯವಾಗಿ ಹತ್ತಿಯ ವ್ಯಾಪಾರದಲ್ಲಿ ಉಂಟಾದ ಹಿಂಜರಿತದಿಂದ ೧೮೭೦ ರಲ್ಲಿ ಪ್ರಾರಂಭವಾದ ಬೊಂಬಾಯಿ ಬ್ಯಾಂಕಿನ ಹುಬ್ಬಳ್ಳಿ ಶಾಖೆಯನ್ನು ೧೧ ವರ್ಷದ ನಂತರ ಮುಚ್ಚಲಾಯಿತು. ಪುನ್ಹ ೧೮೮೨ ರಲ್ಲಿ ಪ್ರಾರಂಭ ಮಾಡಿ ಎರಡು ವರ್ಷದ ನಂತರ ಅಂತಿಮವಾಗಿ ೧೮೮೪ ರಲ್ಲಿ ಮುಚ್ಚಲಾಯಿತು.

ಮುಂದೆ ೧೯೨೧ ಡಿಸೆಂಬರ್ ೧ ರಂದು ಹುಬ್ಬಳ್ಳಿ ಯಲ್ಲಿ 'ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ'ದ ಶಾಖೆ ಪ್ರಾರಂಭ ಆಗುವವರೆಗೆ ಈ ಜಿಲ್ಲೆಯಲ್ಲಿ ಸರ್ಕಾರಿ ವಲಯದ ಯಾವುದೇ ವಾಣಿಜ್ಯ ಬ್ಯಾಂಕುಗಳು ಪ್ರಾರಂಭವಾಗಲಿಲ್ಲ ಎಂದು ಹೇಳಬಹುದು. ನಂತರದ ದಶಕಗಳಲ್ಲೂ ಈ ಜಿಲ್ಲೆಯ ಬ್ಯಾಂಕಿಂಗ್ ಬೇಡಿಕೆಯನ್ನು ಸಹಕಾರಿ ವಲಯದ ಸ್ಥಳೀಯ ಬ್ಯಾಂಕುಗಳು ಮತ್ತು ದಕ್ಷಿಣಕನ್ನಡ ಜಿಲ್ಲೆಯ ಬ್ಯಾಂಕುಗಳು ಪೂರೈಸಿದವು.

ಖಾಸಗಿ ಲೇವಾದೇವಿಗಾರರು : ಅಂದಿನ ಬ್ಯಾಂಕಿಂಗ್ ವ್ಯವಹಾರದ ಬಹುದೊಡ್ಡ ಭಾಗಿದಾರರು ಖಾಸಗಿ ಲೇವಾದೇವಿಗಾರರು, ಸಾವುಕಾರರು ಜನಪ್ರಿಯ ಬ್ಯಾಂಕರುಗಳಾಗಿದ್ದರು. ಲೇವಾದೇವಿ ಯಾವುದೇ ಒಂದು ಜನಾಂಗದ/ಕೋಮಿನವರಿಗೆ ಸೀಮಿತವಾಗಿರಲಿಲ್ಲ. ಆದಾಗ್ಯೂ ಈ ವ್ಯವಹಾರ ವಿಶೇಷವಾಗಿ ಬ್ರಾಹ್ಮಣರು, ಲಿಂಗಾಯಿತರು, ಕೋಮಟಿಗಳು ಮತ್ತು ಕೆಲವೇ ಮುಸ್ಲಿಮರಿಗೆ ಸೀಮಿತವಾಗಿತ್ತು. ಬ್ರಾಹ್ಮಣರು ಕೇವಲ ಲೇವಾದೇವಿ ಮಾಡಿದರೆ, ಲಿಂಗಾಯತರು ಚರ್ಮ, ಕೊಬ್ಬು, ವಿದೇಶಿ ಮದ್ಯ ವ್ಯಾಪಾರಗಳನ್ನು ಹೊರತುಪಡಿಸಿ ಇತರೇ ವ್ಯಾಪಾರದೊಂದಿಗೆ, ಕೋಮಟಿ ಗಳು ಚಿಲ್ಲರೇ ವ್ಯಾಪಾರದೊಂದಿಗೆ ಬಡ್ಡಿ ವ್ಯವಹಾರ ಮಾಡುತ್ತಿದ್ದರು.

ಕಂಪನಿಯ ರೂಪಾಯಿ ಮೂಲಕ ಲೇವಾದೇವಿ ವ್ಯವಹಾರ ನಡೆಯುತ್ತಿತ್ತು. ವಾರ್ಷಿಕ ವೈವಾಟಿನ ಆಧಾರದ ಮೇಲೆ ಲೇವಾದೇವಿಯವರನ್ನು ಮೊದಲ ನೆಯ ದರ್ಜೆ: (ರೂ. ಒಂದು ಲಕ್ಷದಿಂದ ಎರಡು ಲಕ್ಷ), ಎರಡನೇ ದರ್ಜೆ (೫,೦೦೦ ರಿಂದ ಒಂದು ಲಕ್ಷ ರೂ), ಮೂರನೇ ದರ್ಜೆ (ರೂ ೫,೦೦೦ ದಿಂದ ನೂರರವರೆಗೆ) ಎಂದು ವಿಂಗಡಿಸಲಾಗಿತ್ತು. ಅಂದು ಜಿಲ್ಲೆಯ ಧಾರ ವಾಡ-ಹುಬ್ಬಳ್ಳಿ, ಗದಗ, ಸವಣೂರುಗಳಲ್ಲಿ ವಿಶೇಷವಾಗಿ ಲೇವಾದೇವಿಗಾರರು ಇದ್ದರು. ೧೮೨೨ರಲ್ಲಿ ಬೆಳಗಾವಿಯ ಶಹಾಪುರದ ಬ್ಯಾಂಕರುಗಳು ಮತ್ತು ಮಿರಜ ಬ್ಯಾಂಕರು ಗಳು ಹುಬ್ಬಳ್ಳಿ ಬ್ಯಾಂಕುಗಳ ಏಜೆಂಟರಾಗಿ ಕೆಲಸ ಮಾಡುತ್ತಿದ್ದರು. ಶಹಾಪುರದ (ಬೆಳಗಾವಿ) ಬ್ಯಾಂಕರು

ಗಳನ್ನು ಉಚ್ಚಮಟ್ಟದ ವಿಶ್ವಾಸಾರ್ಹ ಬ್ಯಾಂಕರುಗಳು ಎಂದು ಪರಿಗಣಿಸಲಾಗುತ್ತಿತ್ತು. ಅವರು ತಮ್ಮಲ್ಲಿಯ ಠೇವಣಿದಾರರಿಗೆ ಶೇ. ೧೧/೨ ರಿಂದ ೨ರ ವರೆಗೆ ಬಡ್ಡಿಯನ್ನು ಕೊಡುತ್ತಿದ್ದರು.

೧೮೮೩ ರಲ್ಲಿ ಹುಬ್ಬಳ್ಳಿಯಲ್ಲಿ ಸುಮಾರು ೭೦೦ ವ್ಯಾಪಾರಸ್ಥರಿದ್ದರು. ಇವರು ವಿಶೇಷವಾಗಿ ಲಿಂಗಾಯಿತರು, ಜೈನರು, ಕೋಮಟಿ, ಬ್ರಾಹ್ಮಣರು, ಗುಜರಾತಿಗಳಾಗಿದ್ದರು. ಇವರಲ್ಲಿ ಸುಮಾರು ೩೦೦ ಜನರ ವ್ಯಾಪಾರಿ ಬಂಡವಾಳ ರೂ. ೧೦,೦೦೦ ದಿಂದ ಒಂದು ಲಕ್ಷದವರೆಗೆ ಇತ್ತು. ಗದಗದಲ್ಲಿ ವೆಂಕಟದಾಸ ಎಂಬ ಗುಜರಾತಿ ವ್ಯಾಪಾರಿಯು ೧೦,೦೦೦ ರೂ. ವರೆಗೆ ಹುಂಡಿಯ ವ್ಯಾಪಾರ ಮಾಡುತ್ತಿದ್ದನು. ಗದಗ ಇಂದಿನಂತೆ ಅಂದೂ ಜಿಲ್ಲೆಯ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು.

ಬಡ್ಡಿಯ ದರ : ೧೮೭೯–೮೦ ರಲ್ಲಿ ಉಳಿತಾಯ ಖಾತೆಯ ಠೇವಣಿಗಳ ಮೇಲೆ ಸರ್ಕಾರ ನಿಗದಿಪಡಿಸಿದ್ದ ಬಡ್ಡಿ ದರವನ್ನು ೩ ೩/೪% ನಿಂದ ೪ ೧/೮ %ಗೆ ಏರಿಸಲಾಗಿತ್ತು ಮತ್ತು ಪ್ರತಿಯೊಂದು ಖಾತೆಯಲ್ಲಿನ ಗರಿಷ್ಠ ಠೇವಣಿ ಮೊತ್ತವನ್ನು ವರ್ಷಕ್ಕೆ ರೂ. ೩,೦೦೦ ದಿಂದ ೫,೦೦೦ ವರೆಗೆ ಏರಿಸಲಾಗಿತ್ತು. ಸಾವುಕಾರರು ವೈಯಕ್ತಿಕ ಜಾಮೀನು ಮತ್ತು ನಂಬಿಕೆಯ ಮೇಲೆ ನೀಡುವ ಸಾಲದ ಮೇಲೆ ಶೇ. ೧೨ ರಿಂದ ೨೪ರ ವರೆಗೆ ಬಡ್ಡಿ ವಿಧಿಸುತ್ತಿದ್ದರು. ವಸ್ತುಗಳು ಮತ್ತು ಆಭರಣದ ಮೇಲೆ ಶೇ. ೯ ರಿಂದ ೨೪%, ಬೆಳೆಯ ಆಧಾರದ ಮೇಲೆ ಶೇ. ೨೪–೩೬ ಬಡ್ಡಿಯನ್ನು ವಿಧಿಸಲಾಗುತ್ತಿತ್ತು. ವೃತ್ತಿ ನಿರತರಲ್ಲದ ಸಾವುಕಾರರು ಸಣ್ಣಸಾಲದ ಮೇಲೆ ಶೇ. ೧೮ ರಿಂದ ೩೬ ಬಡ್ಡಿಯನ್ನು ವಿಧಿಸುತ್ತಿದ್ದರು. ಇಂದಿನ ಬಡ್ಡಿಯ ದರಕ್ಕೆ ಹೋಲಿಸಿದರೆ ಅಂದಿನ ಬಡ್ಡಿಯ ದರ ಹೆಚ್ಚಾಗಿತ್ತು. ಮತ್ತು ಲೇವಾದೇವಿಗಾರರು ಸಾಲಗಾರರನ್ನು ವಿಶೇಷವಾಗಿ ಶೋಷಣೆ ಮಾಡುತ್ತಿದ್ದರು.

ಸಾಲಪಡೆದವರು ಮತ್ತು ಜೀತ ಪದ್ಧತಿ : ಸಾಮಾನ್ಯವಾಗಿ ಕೈಮಗ್ಗದ ನೇಕಾರರು, ಸ್ವತಃ ಜಮೀನು ಸಾಗುವಳಿ ಮಾಡುವವರು, ಬ್ರಾಹ್ಮಣರು, ಕ್ಷತ್ರಿಯರು, ಕೋಮಟಿಗಳು ಜಮೀನುದಾರರು ಸಾಲ ಮಾಡುತ್ತಿರಲಿಲ್ಲ. ವಸ್ತುರೂಪದಲ್ಲಿ ಪಡೆದ ಧಾನ್ಯದ ಸಾಲವನ್ನು ಹಿಂದಕ್ಕೆ ನೀಡುವಾಗ ತಾವು ಪಡೆದ ಪ್ರಮಾಣದ ಮೇಲೆ ಅರ್ಧದಿಂದ ಕಾಲುಭಾಗ ಹೆಚ್ಚಿಗೆ ಕೊಡಬೇಕಾಗುತ್ತಿತ್ತು. ಸಾಲಕ್ಕೆ ಆಧಾರವಾಗಿ ಜೀತ ಪದ್ಧತಿಯು ರೂಢಿಯಲ್ಲಿ ಇತ್ತು. ಅನೇಕ ಸಂದರ್ಭಗಳಲ್ಲಿ ಜೀತವನ್ನು ಕರಾರು ಸಹಿತ ನೋಂದಾಯಿಸಲಾಗುತ್ತಿತ್ತು. (ಸಿರಸಿ, ಸಿದ್ದಾಪುರ (೧೮೬೨) ಬೆಳಗಾವಿ ಜಿಲ್ಲೆಯ ಕೆಲವು ಭಾಗ) ಶ್ರಮಜೀವಿಗಳಲ್ಲದ ಇತರರೂ ಅಂದರೆ ಕಾರಕೂನರು, ಲೆಖ್ಖ ಬರೆಯುವವರೂ ಸಹ ಸಾವುಕಾರರಲ್ಲಿ ಜೀತ ಮಾಡುತ್ತಿದ್ದರು.

